ಶ್ರೀ

ಪಂಪ ಮಹಾಕವಿ ವಿರಚಿತಂ

ಆದಿಪುರಾಣಂ

ಪ್ರಥಮಾಶ್ವಾಸಂ

(ಮಹಾಬಳ ಕುಮಾರೋದಯ ವರ್ಣನಂ)

(ಮೂಲ ಪಾಠ, ಪದವಿಭಾಗ, ಅನ್ವಯಾರ್ಥ, ವಿಶೇಷ ವಿವರಣೆ, ಭಾವಾರ್ಥ ಮತ್ತು ಸಂಖ್ಯಾವಿಶಿಷ್ಟ ಪದಗಳ ಪಟ್ಟಿ ಸಹಿತ)

[ಆಶ್ವಾಸ-೧]

ಸಂಗ್ರಹ ಮತ್ತು ಅರ್ಥವಿವರಣೆ:

ಎಸ್.ಎನ್. ಬ್ರಹ್ಮರಾಜು

ಬೆಂಗಳೂರು.

ದೂ.ವಾ. 8050526346



ಆಕರ ಗ್ರಂಥ:

ಮ॥ರಾ॥ಶ್ರೀ ಎಸ್.ಜಿ. ನರಸಿಂಹಾಚಾರ್

ಗ್ರಂಥಪಾಲಕರು, ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು,

ಇವರಿಂದ ಸಂಪಾದಿಸಲ್ಪಟ್ಟು,

ಶ್ರೀಮನ್ಮಹಾರಾಜರು, ಮೈಸೂರು ಸಂಸ್ಥಾನ

ಮೈಸೂರು ಸರ್ಕಾರ ಇವರ ವತಿಯಿಂದ ಕ್ರಿ.ಶ. ೧೯೦೦ ರಲ್ಲಿ ಪ್ರಕಾಶಿತವಾದದ್ದು.

[೧೩ ನೆಯ ಕರಡು ಪ್ರತಿ]

೧೦-೦೧-೨೦೨೬

ಪರಿವಿಡಿ

<u>ಅರಿಕೆ</u>

ಸನ್ಮಾನ್ಯ ವಿದ್ವಜ್ಜನರೇ,

ಈಗ ತಮ್ಮ ಕೈಯಲ್ಲಿರುವ **ಪಂಪ ಮಹಾಕವಿಯ ಆದಿಪುರಾಣಂ** ಮಹಾಕಾವ್ಯದ **ಪ್ರಥಮಾಶ್ವಾಸ**ವಾದ **ಮಹಾಬಳ ಕುಮಾರೋದಯ ವರ್ಣನಂ** ಭಾಗದ ಮೂಲಪಾಠ, ಪದವಿಭಾಗ, ಪದಗಳ ಹೊಸಗನ್ನಡ ಅರ್ಥ, ಭಾವಾರ್ಥ ಮತ್ತು ವಿಶೇಷ ವಿವರಣೆ ಹಾಗೂ ಕಾವ್ಯದಲ್ಲಿ ಕವಿಯು ಬಳಸಿರುವ ಜೈನ ಪಾರಿಭಾಷಿಕಶಬ್ದಗಳ ಅರ್ಥವಿವರಣೆ (ಅಂತ್ಯದಲ್ಲಿ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯ ರೂಪದಲ್ಲಿ ನೀಡಲಾಗಿದೆ) ಇವುಗಳನ್ನು ಹೊಂದಿರುವ **ದೀಪಿಕೆ**ಯನ್ನು ರಚಿಸಿದ್ದೇನೆ. ಇದನ್ನು ತಮ್ಮಗಳ ಪರಾಮರ್ಶೆಗಾಗಿ ಸಲ್ಲಿಸಿರುತ್ತೇನೆ.

ಈ **ದೀಪಿಕೆ**ಯಲ್ಲಿ, ಮೊದಲಿಗೆ ಪಂಪನ ಆದಿಪುರಾಣ ಕಾವ್ಯದ ಪ್ರಥಮಾಶ್ವಾಸದಲ್ಲಿರುವ ಮೂಲ ಪದ್ಯಗಳನ್ನೂ/ವಚನಗಳನ್ನೂ ಯಥಾವತ್ತಾಗಿ ಕೊಡಲಾಗಿದೆ. ಆನಂತರ, ಅವುಗಳನ್ನು ಸರಳವಾಗಿ ವಾಚಿಸಲು ಅನುಕೂಲಿಸುವಂತೆ, ಆ ಪ್ರತಿಯೊಂದು ಪದ್ಯದ ಕೆಳಗೆ, **ಪದವಿಭಾಗ**ವನ್ನು ಮಾಡಲಾಗಿದೆ. ಮುಂದಿನ ಭಾಗದಲ್ಲಿ ಆ ಪದವಿಭಾಗ ಮಾಡಿದ ಪದಗಳಿಗೆ ಹೊಸಗನ್ನಡದಲ್ಲಿ **ಅನ್ವಯಾರ್ಥ**ವನ್ನೂ, ನಂತರ ಅದಕ್ಕೆ ಸಂಕ್ಷಿಪ್ತವಾದ **ಭಾವಾರ್ಥ**ವನ್ನು ನೀಡಲಾಗಿದೆ. ಅವಶ್ಯಕವೆನಿಸಿದ ಕಡೆ ಪದ್ಯ/ವಚನಗಳಿಗೆ ಆಗಮೋಕ್ತರೀತಿಯಲ್ಲಿ **ವಿಶೇಷ ವಿವರಣೆ**ಯನ್ನೂ ಸಹ ನೀಡಲಾಗಿದೆ. ಕೆಲವು ಕಡೆ ಸ್ವಲ್ಪ ದೀರ್ಘವಾಗಿಯೂ ಮತ್ತೆ ಕೆಲವು ಕಡೆ ಸಂಕ್ಷಿಪ್ತವಾಗಿಯೂ ಈ ವಿವರಣೆಗಳಿರುತ್ತವೆ. ಆಶ್ವಾಸದ ಕೊನೆಯಲ್ಲಿ ವಿಶೇಷ ಸಂದರ್ಭಗಳಲ್ಲಿ, **ವ್ಯಾಕರಣ ವಿಚಾರ, ಕಾವ್ಯದ ಪದ್ಯ/ವಚನಗಳ (ವಾಕ್ಯಗಳ) ಪದಚ್ಛೇದ ಕ್ರಮ, ಅಲಂಕಾರ ವಿಚಾರ (ಕವಿಸಮಯ), ಛಂದಸ್ಸಿನ ವಿಚಾರ, ಪಾಠಭೇದ ವಿಚಾರ, ಕಾವ್ಯಧರ್ಮ (ಕಾವ್ಯಗುಣ), ಇತರೆ ಕಾವ್ಯ/ಶಾಸ್ತ್ರಗ್ರಂಥ/ಶಾಸನಗಳ ಉಲ್ಲೇಖಗಳು** ಇವುಗಳಿಗೆ ಸಂಬಂಧಿಸಿದ ವಿವರಣೆಗಳನ್ನು ನೀಡಲಾಗಿದೆ. ಅಂತ್ಯದಲ್ಲಿ ಪ್ರಥಮಾಶ್ವಾಸದಲ್ಲಿರುವ ಪದ್ಯಗಳ ಅನುಕ್ರಮಣಿಕೆಯನ್ನೂ ಹಾಗೂ ಪ್ರಥಮಾಶ್ವಾಸ ದಲ್ಲಿರುವ ಪದಗಳ ಅಕಾರಾದಿ ಪದಸೂಚಿಯನ್ನೂ ನೀಡಲಾಗಿದೆ **ವಿಶೇಷ ವಿವರಣೆ**ಗಳಲ್ಲಿರುವ ವಿಷಯಗಳನ್ನು **ಗ್ರಂಥಋಣ**ದಲ್ಲಿ ಪಟ್ಟಿಮಾಡಿರುವ ಅನೇಕ ಜೈನಾಗಮ ಹಾಗೂ ಇತರೆ ಶಾಸ್ತ್ರಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ. ಈ **ದೀಪಿಕೆ**ಗೆ, **ಮಾ॥ರಾ॥ ಶ್ರೀ ಎಸ್.ಜಿ. ನರಸಿಂಹಾಚಾರ್** ಅವರಿಂದ ಕ್ರಿ.ಶ. ೧೯೦೦ ರಲ್ಲಿ ಸಂಪಾದಿಸಲ್ಪಟ್ಟಿರುವ **ಪಂಪಕವಿ ವಿರಚಿತಂ ಆದಿಪುರಾಣಂ** ಗ್ರಂಥವನ್ನು ಆಕರ ಗ್ರಂಥವನ್ನಾಗಿರಿಸಿ ಕೊಳ್ಳಲಾಗಿದೆ. ಹಾಗೆಯೇ, ಆಕರ ಗ್ರಂಥದಲ್ಲಿ ಪಾಠಭೇದಗಳಿರುವೆಡೆಗಳಲ್ಲಿ ಪಾಠ ನಿಷ್ಕರ್ಷೆಗಾಗಿ **ಮಾ॥ರಾ॥ ಶ್ರೀ ಕೆ.ಜಿ. ಕುಂದಣಗಾರ ಮತ್ತು ಮಾ॥ರಾ॥ ಶ್ರೀ ಎ.ಪಿ. ಚೌಗಲೆ**ಯವರಿಂದ ಕ್ರಿ.ಶ. ೧೯೫೩ ರಲ್ಲಿ ಸಂಪಾದಿಸಲ್ಪಟ್ಟ **ಪಂಪಕವಿ ವಿರಚಿತಂ ಆದಿಪುರಾಣಂ** ಕೃತಿಯನ್ನು ಸಹಾಯಕ ಗ್ರಂಥವಾಗಿ ಇಟ್ಟುಕೊಳ್ಳಲಾಗಿದೆ. ಅಲ್ಲದೆ, ಕನ್ನಡದ ಪ್ರಾಚೀನ ಗ್ರಂಥಗಳಾದ ೨ನೆಯ ನಾಗವರ್ಮನ **'ಕಾವ್ಯಾವಲೋಕನಂ'**, ಮಲ್ಲಿಕಾರ್ಜುನನ **'ಸೂಕ್ತಿಸುಧಾರ್ಣವಂ'**, ಕೇಶಿರಾಜನ **'ಶಬ್ದಮಣಿದರ್ಪಣಂ'**, ಭಟ್ಟ ಅಕಳಂಕ ದೇವರ **'ಕರ್ಣಾಟಕ ಶಬ್ದಾನುಶಾಸನಂ'** ಇತ್ಯಾದಿ ಗ್ರಂಥಗಳಲ್ಲಿಯೂ, ಅರ್ವಾಚೀನ ಗ್ರಂಥಗಳಾದ ಮೈಸೂರು ವಿಶ್ವವಿದ್ಯಾನಿಲಯದ **'ಕನ್ನಡ ಕೈಪಿಡಿ'**, ಡಾ. ಡಿ.ಎಲ್. ನರಸಿಂಹಾಚಾರ್ಯರ **'ಕನ್ನಡ ಗ್ರಂಥಸಂಪಾದನೆ'**, ಪ್ರೊ. ತೀ.ನಂ. ಶ್ರೀಕಂಠಯ್ಯನವರ **'ಪಂಪ'**, ಕನ್ನಡ ಸಾಹಿತ್ಯ ಪರಿಷತ್ತಿನ **'ಕನ್ನಡ ನಿಘಂಟು'** ಇತ್ಯಾದಿ ಗ್ರಂಥಗಳಲ್ಲಿಯೂ ಉದ್ಧೃತವಾಗಿರುವ ಪಂಪನ ಪದ್ಯಗಳನ್ನು ಪಾಠ ನಿಷ್ಕರ್ಷೆಗಾಗಿ ಉಪಯೋಗಿಸಿಕೊಳ್ಳಲಾಗಿದೆ.

ತಮ್ಮಂತಹ ಪ್ರಾಜ್ಞರ ಅಭಿಪ್ರಾಯ ಸಂಗ್ರಹಣೆಗಾಗಿ ಮಾತ್ರ ಇದನ್ನು ತಮಗೆ ಕಳುಹಿಸಿರುತ್ತದೆ. ಆನಂತರ ತಮ್ಮ ಅಭಿಪ್ರಾಯಗಳೊಂದಿಗೆ ಪೂರ್ಣಪ್ರಮಾಣದಲ್ಲಿ ಗ್ರಂಥವನ್ನು ಪ್ರಕಟಿಸಲಾಗುವುದು. ಇದರಲ್ಲಿನ ವ್ಯಾಕರಣ, ಛಂದಸ್ಸು, ಪದವಿಭಾಗ, ಅನ್ವಯಾರ್ಥ, ವಿಶೇಷ ವಿವರಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ, ಟೀಕೆ, ಟಿಪ್ಪಣಿ, ಸಲಹೆಗಳಿಗೆ ಸ್ವಾಗತವಿರುತ್ತದೆ. ತಾವುಗಳು ನೀಡಬಯಸುವ ಮೌಲ್ಯಯುತ ಅಭಿಪ್ರಾಯ, ಟೀಕೆ, ಟಿಪ್ಪಣಿ, ಸಲಹೆ, ಸೂಚನೆ ಇತ್ಯಾದಿಗಳನ್ನು ಈ ಕೆಳಗಿನ ವಾಟ್ಸಪ್ ಸಂಖ್ಯೆಗೆ ಅಥವಾ ಇ–ಮೇಲಿಗೆ ಕಳುಹಿಸಲು ಕೋರಿದೆ.

ವಂದನೆಗಳು,

ತಮ್ಮ ವಿಧೇಯ,

ಬೆಂಗಳೂರು

ದಿನಾಂಕ: ೧೦–೦೧–೨೦೨೬

ಎಸ್.ಎನ್. ಬ್ರಹ್ಮರಾಜು
WhatsApp No.: 8050526346
e-Mail ID: brahmarajusn@gmail.com

ಶ್ರೀ

ಪಂಪ ಮಹಾಕವಿ ವಿರಚಿತಂ

ಆದಿಪುರಾಣಂ

ಪ್ರಥಮಾಶ್ವಾಸಂ

(ಮಹಾಬಳ ಕುಮಾರೋದಯ ವರ್ಣನಂ)

ಶಾರ್ದೂಲ ವಿಕ್ರೀಡಿತ

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರ[1]ಸಂಸಾರ ವಿ
ಚ್ಛೇದೋಪಾಯನಿಯುಕ್ತಸೂಕ್ತಿ ವೃಷ[2]ಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧–೧

ಪದ ವಿಭಾಗ: ಶ್ರೀ–ದೇವೇಂದ್ರ–ಮುನೀಂದ್ರ–ವಂದಿತ–ಗುಣ–ವ್ರಾತಂ, ಜಗತ್ಸ್ವಾಮಿ–ಸಂದಾದಿಬ್ರಹ್ಮನ್, ಅಗಾಧ–ಬೋಧ–ನಿಳಯಂ, ದುರ್ವಾರ–ಸಂಸಾರ–ವಿಚ್ಛೇದೋಪಾಯ–ನಿಯುಕ್ತ–ಸೂಕ್ತಿ–ವೃಷಮಾರ್ಗಾಗ್ರೇಸರಂ, ಪಾಪಹೃತ್ಪಾದಾಬ್ಜಂ, ದಯೆಗೆಯ್ವನ್, ಅಕ್ಕೆ, ಎಮಗೆ, ಮುಕ್ತಿಶ್ರೀ–ಸುಖಾವಾಪ್ತಿಯಂ ॥ ೧–೧

ಅನ್ವಯಾರ್ಥ: (ಶ್ರೀ ದೇವೇಂದ್ರ ಮುನೀಂದ್ರ ವಂದಿತ ಗುಣ ವ್ರಾತಂ>ವ್ರಾತನ್) ಶ್ರೇಷ್ಠರಾದ ದೇವೇಂದ್ರರಿಂದಲೂ ಮುನಿಗಣಕ್ಕೆ ಇಂದ್ರರಾದ ಗಣಧರರಿಂದಲೂ ಕೊಂಡಾಡಲ್ಪಡುವ ಗುಣಗಳ ರಾಶಿಯುಳ್ಳವನು, **(ಅಗಾಧ ಬೋಧ ನಿಳಯಂ> ನಿಳಯನ್)** ಗಂಭೀರವಾದ ಜ್ಞಾನಕ್ಕೆ ಅಂದರೆ ಕೇವಲಜ್ಞಾನಕ್ಕೆ ಆವಾಸಸ್ಥಾನನು, **(ದುರ್ವಾರ)** ದಾಟಲು ಕಷ್ಟಸಾಧ್ಯವಾದ **(ಸಂಸಾರ)** ಸಂಸಾರ ಅಂದರೆ ಹುಟ್ಟು ಸಾವುಗಳೆಂಬ ಸರಪಳಿಯನ್ನು **(ವಿಚ್ಛೇದೋಪಾಯ=ವಿಚ್ಛೇದ+ಉಪಾಯ)** ಕತ್ತರಿಸುವ

---

[1] ಮೂಲಪಾಠ–'ದುರ್ವಾರ', ಕೆಜಿ ಯವರ ಪಾಠ–'ದುರ್ವ್ವಾರ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. (ಇಲ್ಲಿ **'ಮೂಲಪಾಠ'**ವೆಂದರೆ, **ಪಂಪ ಮಹಾಕವಿವಿರಚಿತಂ ಆದಿಪುರಾಣಂ** ಕಾವ್ಯವು, ಶ್ರೀ ಎಸ್.ಜಿ. ನರಸಿಂಹಾಚಾರ್, ಗ್ರಂಥಪಾಲಕರು, ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು ಇವರಿಂದ ಸಂಪಾದಿಸಲ್ಪಟ್ಟು, ಶ್ರೀಮನ್ಮಹಾರಾಜರು, ಮೈಸೂರು ಸಂಸ್ಥಾನ, ಮೈಸೂರು ಸರ್ಕಾರ, ಇವರ ವತಿಯಿಂದ ಕ್ರಿ.ಶ. ೧೯೦೦ ರಲ್ಲಿ ಪ್ರಕಾಶಿತವಾದ ಗ್ರಂಥದಲ್ಲಿರುವ ಪಾಠಗಳು. ಇನ್ನು ಮುಂದೆ ಈ ಗ್ರಂಥದಲ್ಲಿರುವ ಪಾಠವನ್ನು **ಮೂಲಪಾಠ**ವೆಂದು ಸಂಕೇತಿಸಲಾಗುವುದು. ಹಾಗೆಯೇ **'ಕೆಜಿ ಯವರ ಪಾಠ'**ವೆಂದರೆ, **ಪಂಪಮಹಾಕವಿವಿರಚಿತಂ ಆದಿಪುರಾಣಂ** ಕಾವ್ಯವು, ಶ್ರೀ ಕೆ.ಜಿ. ಕುಂದಣಗಾರ ಮತ್ತು ಶ್ರೀ ಎ.ಪಿ. ಚೌಗಲೆ ಇವರುಗಳಿಂದ ಸಂಪಾದಿಸಲ್ಪಟ್ಟು, ಶ್ರೀ ಅಣ್ಣಾರಾವ ಚೌಗಲೆ, ಶ್ರೀ ಚಂದ್ರಪ್ರಭ ಪ್ರಿಂಟಿಂಗ ಪ್ರೆಸ್, ಬೆಳಗಾವಿ, ಇವರಿಂದ ಕ್ರಿ.ಶ. ೧೯೫೩ ರಲ್ಲಿ ಪ್ರಕಾಶಿತವಾದ ಗ್ರಂಥದಲ್ಲಿರುವ ಪಾಠಗಳು. ಇನ್ನು ಮುಂದೆ ಈ ಗ್ರಂಥದಲ್ಲಿರುವ ಪಾಠವನ್ನು **ಕೆಜಿ ಯವರ ಪಾಠ**ವೆಂದು ಸಂಕೇತಿಸಲಾಗುವುದು.)

ಕೆಜಿ ಯವರ ಪಾಠದಲ್ಲಿರುವ 'ದುರ್ವ್ವಾರ' ಶಬ್ದವು ರೇಫಯುಕ್ತವಾಗಿದ್ದು, 'ರ್ವಾ' ಅಕ್ಷರವು ದ್ವಿತ್ವವಾಗಿ 'ರ್ವ್ವಾ' ಎಂಬ ರೂಪವನ್ನು ಪಡೆದಿರುತ್ತದೆ. ಹಾಗೆಯೇ ವೃತ್ತದ ಮೂರನೆಯ ಪಾದದಲ್ಲಿರುವ 'ಮಾರ್ಗಾಗ್ರೇಸರಂ' ಪದದಲ್ಲಿರುವ 'ರ್ಗಾ' ರೇಫಯುಕ್ತಾಕ್ಷರವು ಕೆಜಿ ಯವರ ಪಾಠದಲ್ಲಿ 'ರ್ಗ್ಗಾ' ಎಂದು ದ್ವಿತ್ವವಾಗಿ 'ಮಾರ್ಗ್ಗಾಗ್ರೇಸರಂ' ಎಂದಾಗಿರುತ್ತದೆ. ಕೆಜಿ ಯವರಿಂದ ಸಂಪಾದಿಸಲ್ಪಟ್ಟಿರುವ 'ಪಂಪಮಹಾಕವಿವಿರಚಿತಂ ಆದಿಪುರಾಣಂ'ನ ಇಡೀ ಕಾವ್ಯದಲ್ಲಿ ರೇಫಯುಕ್ತ ಶಬ್ದಗಳೆಲ್ಲವೂ ದ್ವಿತ್ವದಿಂದಲೇ ಬರೆಯಲ್ಪಟ್ಟಿವೆ. ಆದರೆ ಇಲ್ಲಿ ಮೂಲಪಾಠದಲ್ಲಿರುವ ರೂಪವನ್ನು ಸ್ವೀಕರಿಸಿದೆ. (ಹೆಚ್ಚಿನ ವಿವರವನ್ನು **'ಛಂದಸ್ಸಿನ ವಿಷಯ'** ವಿಭಾಗದಲ್ಲಿ ನೋಡಬಹುದು)

[2] 'ಧರ್ಮಃ, ಪುಣ್ಯಂ, ವೃಷಃ, ಶ್ರೇಯಃ, ಸುಕೃತಂ_ಈ ೫ ಪುಣ್ಯದ ಪೆಸರ್' (ಭಟ್ಟ ಹಲಾಯುಧ ವಿರಚಿತ ಅಭಿಧಾನ ರತ್ನಮಾಲಾ, ೨ನೆಯ ನಾಗವರ್ಮ ವಿರಚಿತ ಕರ್ನಾಟಕ ಟೀಕೆ, ಸ್ವರ್ಗ ಕಾಂಡ, ೧–೧೨೫, ಪುಟ ೨೧.)

ಉಪಾಯಗಳಿಂದ [1][ಸಾಧನಗಳಿಂದ] **(ನಿಯುಕ್ತ)** ಕೂಡಿರುವ **(ಸೂಕ್ತಿ)** [ರತ್ನತ್ರಯಗಳೆಂಬ] ಉಪದೇಶಗಳನ್ನುಳ್ಳ **(ವೃಷ ಮಾರ್ಗಾಗ್ರೇಸರಂ=ವೃಷಮಾರ್ಗ+ಅಗ್ರೇಸರಂ[=ಅಗ್ರೇ=ಮುಂಭಾಗದಲ್ಲಿ+ಸರಂ>ಸರನ್=ನಡೆಯುವವನು])** ಧರ್ಮ ಮಾರ್ಗದ ಅಂದರೆ ಮೋಕ್ಷ ಮಾರ್ಗದ ಮುಂದಾಳುವು ಅಂದರೆ ಪ್ರವರ್ತಕನು, **(ಪಾಪಹೃತ್ಪಾದಾಬ್ಜಂ=ಪಾಪಹೃತ್+ಪಾದಾಬ್ಜಂ [=ಪಾದ+ಅಬ್ಜಂ>ಅಬ್ಜನ್])** ಪಾಪಗಳನ್ನು ಹೋಗಲಾಡಿಸುವಂಥ ಪಾದಕಮಲಗಳನ್ನುಳ್ಳವನು, **(ಜಗತ್ಸ್ವಾಮಿ)** ಜಗದೊಡೆಯ ನೆಂದು **(ಸಂದ)** ಪ್ರಸಿದ್ಧನಾದ **(ಆದಿಬ್ರಹ್ಮನ್)** ಆದಿಬ್ರಹ್ಮನು ಅಂದರೆ ಆದಿ ತೀರ್ಥಂಕರನಾದ ವೃಷಭದೇವನು **(ಎಮಗೆ)** ನಮಗೆ **(ಮುಕ್ತಿಶ್ರೀ)** ಮೋಕ್ಷಲಕ್ಷ್ಮಿಯೆಂಬ **(ಸುಖಾವಾಪ್ತಿಯಂ=ಸುಖ+ಆವಾಪ್ತಿಯಂ)** ಸುಖಪ್ರಾಪ್ತಿಯನ್ನು **(ದಯೆಗೆಯ್ವನಕ್ಕೆ= ದಯೆಗೆಯ್ವನ್+ಅಕ್ಕೆ)** ದಯಪಾಲಿಸುವವನಾಗಲಿ ॥ ೧-೧

ಈ ವೃತ್ತಪದ್ಯದಲ್ಲಿ ಪ್ರಥಮ ತೀರ್ಥಂಕರನಾದ ವೃಷಭದೇವನನ್ನು ತನ್ಮೂಲಕ ಪಂಚಪರಮೇಷ್ಠಿಗಳಲ್ಲಿ ಮೊದಲನೆಯವರಾದ ಅರಿಹಂತರನ್ನು ಕವಿಯು ಸ್ತುತಿಸಿರುವನು ಹಾಗೂ ತೀರ್ಥಂಕರರ ಅಥವಾ ಅರಿಹಂತರ ಲಕ್ಷಣಗಳನ್ನು ವರ್ಣಿಸಿರುವನು.

ಭಾವಾರ್ಥ: ದೇವೇಂದ್ರರಿಂದಲೂ ಗಣಧರರಿಂದಲೂ ಸ್ತುತಿಸಲ್ಪಡುವ ಅನಂತ ಗುಣಗಳ ರಾಶಿಯುಳ್ಳವನೂ, ಗಂಭೀರವಾದ ಜ್ಞಾನಕ್ಕೆ ಆವಾಸಸ್ಥಾನನೂ ಅಂದರೆ ಕೇವಲಜ್ಞಾನಿಯೂ, ರತ್ನತ್ರಯಗಳೆಂಬ ಮೋಕ್ಷ ಮಾರ್ಗದ ನಾಯಕನೂ, ಪಾಪಗಳನ್ನು ಹೋಗಲಾಡಿಸುವಂತಹ ಪಾದಕಮಲಗಳನ್ನುಳ್ಳವನೂ, ಜಗದೊಡೆಯನೆಂದು ಪ್ರಸಿದ್ಧನಾದ ಆದಿಬ್ರಹ್ಮನು ಅಂದರೆ ಆದಿತೀರ್ಥಂಕರನಾದ ವೃಷಭದೇವನು ನಮಗೆ ಮೋಕ್ಷಲಕ್ಷ್ಮಿಯೆಂಬ ಸುಖಪ್ರಾಪ್ತಿಯನ್ನು ದಯಪಾಲಿಸುವವನಾಗಲಿ ಎಂದು ಕವಿಯು ಸ್ತುತಿಸಿರುವನು. ೧-೧

ವಿಶೇಷ ವಿವರಣೆ: ಮಂಗಳಾಚರಣೆ: ಮಹಾಕವಿ ಪಂಪನು ಸಂಪ್ರದಾಯದಂತೆ **'ಆದಿತೀರ್ಥಂಕರರನ್ನು (ಅರಿಹಂತರನ್ನು)'** ಸ್ತುತಿಸುವ ಮಂಗಳಾಚರಣೆ ಪದ್ಯದೊಂದಿಗೆ **ಆದಿಪುರಾಣ ಮಹಾಕಾವ್ಯ**ವನ್ನು ಪ್ರಾರಂಭಿಸುತ್ತಾನೆ. **'ಮಂಗಳಾಚರಣೆ'** ಪದವು ಉಪಲಕ್ಷಣ ಮಾತ್ರವಾಗಿರುತ್ತದೆ. ಏಕೆಂದರೆ, ಗ್ರಂಥಕರ್ತೃಗಳು ಶಾಸ್ತ್ರವನ್ನು ಆರು ಉಪಲಕ್ಷಣಗಳೊಂದಿಗೆ ಪ್ರಾರಂಭಿಸಬೇಕೆಂಬ ನಿಯಮವನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಅವು ಯಾವುವೆಂದರೆ:

ಮಂಗಳ ಣಿಮಿತ್ತ ಹೇಊ ಪರಿಮಾಣಂ ಣಾಮ ತಹ ಯ ಕತ್ತಾರಂ ।
ವಾಗರಿಯ ಛ ಪ್ಪಿ ಪಚ್ಛಾ ವಕ್ಖಾಣಉ ಸತ್ಥಮಾಇರಿಯೋ ॥
(ಛಕ್ಖಂಡಾಗಮೇ ಜೀವಟ್ಠಾಣಂ, ಧವಳ ಟೀಕಾ, ಸಂತ ಪರೂವಣಾಣುಯೋಗದ್ದಾರೇ ಮಂಗಲಾಯರಣಂ, ೧)

[2]**ಮಂಗಲ ಕಾರಣ ಹೇದೂ ಸತ್ಥಸ್ಸ ಪಮಾಣ ಣಾಮ ಕತ್ತಾರಾ ।**
ಪಢಮಂ ಚಿಯ ಕಹಿದವ್ವಾ ಏಸಾ ಆಇರಿಯ ಪರಿಭಾಸಾ ॥ (ತಿಲೋಯಪಣ್ಣತ್ತೀ, ೧-೭)

ಅರ್ಥ: (೧) ಮಂಗಳಾಚರಣೆ, (೨) ಗ್ರಂಥರಚನೆಯ ಕಾರಣ, (೩) ಗ್ರಂಥ ರಚನೆಯ ಉದ್ದೇಶ (ಪ್ರಯೋಜನ), (೪) ಗ್ರಂಥದ ಪ್ರಮಾಣ, (೫) ಗ್ರಂಥದ ಹೆಸರು, (೬) ಗ್ರಂಥದ ಕರ್ತೃ. ಈ ಆರು ಅಧಿಕಾರಗಳ (ವಿಷಯಗಳನ್ನು) ಕುರಿತು ಗ್ರಂಥದ ಆರಂಭದಲ್ಲಿಯೇ ಹೇಳಬೇಕು. ಇದು ಆಚಾರ್ಯರ ಪರಿಭಾಷೆ (ಲಕ್ಷಣನಿರೂಪಣೆ/ವ್ಯಾಖ್ಯೆ) ಆಗಿದೆ. ಈ ಆರು ಉಪಲಕ್ಷಣಗಳಲ್ಲಿ **'ಮಂಗಳಾಚರಣೆ'**ಯು ಮೊದಲನೆಯ ಉಪಲಕ್ಷಣವಾಗಿರುತ್ತದೆ.

ಪಂಪನೂ ಈ **'ಆದಿಪುರಾಣ'** ಮಹಾಕಾವ್ಯದ ರಚನೆಯಲ್ಲಿ ಜೈನಪೂರ್ವಾಚಾರ್ಯರು ಹಾಕಿಕೊಟ್ಟ ಹಾದಿಯಲ್ಲೇ ಬಹುಮಟ್ಟಿಗೆ ತಪ್ಪದೇ ಸಾಗಿದ್ದಾನೆ ಎನ್ನಬಹುದು. (೧) ಈ ಆಶ್ವಾಸದ ಮೊದಲ ಹದಿನಾರು ಪದ್ಯಗಳು ಮಂಗಳಾಚರಣೆ ಪದ್ಯಗಳಾಗಿವೆ. (೨) ೩೪ ನೆಯ ಪದ್ಯದಲ್ಲಿ ಬುಧಸಮೂಹವು ಗಣಧರೋದಿತ (ಗಣಧರರಿಂದ ಹೇಳಿದ) ಚರಿತವಾದ ಆದಿತೀರ್ಥಂಕರರ ಭವಾವಳಿಯ

---

[1] **'ಅರ್ಥ'** ವಿಭಾಗದಲ್ಲಿ ಚೌಕಕಂಸಗಳಲ್ಲಿ [ ] ತೋರಿಸಿರುವ ಪದಗಳು ಅರ್ಥ ಸ್ಪಷ್ಟತೆಗಾಗಿ ಅಧಿಕವಾಗಿ ಸೇರಿಸಲಾದ ಪದಗಳಾಗಿವೆ. ಅವು ಕಾವ್ಯದ ಮೂಲಪಾಠದ (ಪದ್ಯದ/ವಚನದ) ಭಾಗಗಳಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಸಮಾನಾರ್ಥಕ/ಪರ್ಯಾಯ ಪದಗಳನ್ನೂ ಚೌಕಕಂಸಗಳಲ್ಲಿ ನೀಡಿರುತ್ತದೆ.

[2] ಈ ಕೃತಿಯಲ್ಲಿ **'ವಿಶೇಷ ವಿವರಣೆ'** ವಿಭಾಗದಲ್ಲಿ ಉದ್ಧರಿಸಿರುವ ಪ್ರಾಕೃತದ ಅಥವಾ ಸಂಸ್ಕೃತದ, ಗಾಥೆ/ಶ್ಲೋಕಗಳನ್ನು ಆಯಾ ಗ್ರಂಥಗಳ ಸಂಪಾದಕರು, ಅವರ ಸಂಪಾದನಾ ಗ್ರಂಥಗಳಲ್ಲಿ ನೀಡಿರುವಂತೆ ಉದ್ಧರಿಸಲಾಗಿದೆ. ಆಯಾ ಗಾಥೆ/ಶ್ಲೋಕಗಳಿಗೆ ಇಲ್ಲಿ ನೀಡಿರುವ ಕನ್ನಡ ಭಾಷಾಂತರವೂ ಈ ಲೇಖಕನ ಭಾಷಾಂತರವಾಗಿರುವುದಿಲ್ಲ. ಆಯಾ ಸಂಪಾದಕರು/ಅನುವಾದಕರು ಗಾಥೆ/ಶ್ಲೋಕಗಳಿಗೆ ಅವುಗಳ ಅಡಿಯಲ್ಲಿ ಅವರು ನೀಡಿರುವ ಕನ್ನಡದ ಭಾಷಾಂತರವನ್ನೇ ಯಥಾವತ್ತಾಗಿ (ಅಪರೂಪದ ಅಪವಾದಗಳನ್ನು ಹೊರತುಪಡಿಸಿ) ನೀಡಲಾಗಿದೆ. ಈ ವಿಷಯದಲ್ಲಿ, ಈ ಲೇಖಕನು ಆಯಾ ಗ್ರಂಥಗಳ ಸಂಪಾದಕರಿಗೆ/ಅನುವಾದಕರಿಗೆ ಬಹುವಾಗಿ ಋಣಿಯಾಗಿದ್ದಾನೆ.

ಕಥೆಯನ್ನು ಹೇಳೆಂದು ಕೇಳಿಕೊಂಡುದರ ಕಾರಣದಿಂದ ಈ ಕಾವ್ಯವನ್ನು ರಚಿಸಿದೆನೆಂದು ಕವಿಯು ಕಾವ್ಯ ರಚನೆಯ ಕಾರಣವನ್ನು ಹೇಳುತ್ತಾನೆ. (೩) ನಂತರ ೩೬, ೩೭ ಮತ್ತು ೩೮ ನೆಯ ಪದ್ಯಗಳಲ್ಲಿ ಈ ಕಾವ್ಯ ರಚನೆಯ ಉದ್ದೇಶವನ್ನು (ಪ್ರಯೋಜನವನ್ನು) ತಿಳಿಸಿದ್ದಾನೆ. (೪) ೩೮, ೩೯, ೪೦, ೪೧ ನೆಯ ಪದ್ಯಗಳಲ್ಲಿ ಕಾವ್ಯದ ಪ್ರಮಾಣ ಅಂದರೆ ವಿಷಯ ವ್ಯಾಪ್ತಿಯನ್ನು ವಿವರಿಸುತ್ತಾನೆ. (೫) ೩೮ ನೆಯ ಪದ್ಯದಲ್ಲಿ ಕಾವ್ಯದ ಹೆಸರನ್ನು ಸೂಚಿಸುತ್ತಾನೆ. (೬) ೨೮ ರಿಂದ ೩೩ ನೆಯ ಪದ್ಯಗಳಲ್ಲಿ ಗ್ರಂಥಕರ್ತೃವಿನ ಬಗ್ಗೆ ಅಂದರೆ ಕವಿಯು ತನ್ನ ಬಗ್ಗೆ ಹೇಳಿಕೊಂಡಿದ್ದಾನೆ.

ಗ್ರಂಥ ರಚನಕಾರರು ಗ್ರಂಥದ ಪ್ರಾರಂಭದಲ್ಲಿ ನಾಲ್ಕು ರೀತಿಯ ಫಲಾಪೇಕ್ಷೆಯಿಂದ ಮಂಗಳಾಚರಣೆಯನ್ನು ಮಾಡುತ್ತಾರೆ ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಅವು ಯಾವುವೆಂದರೆ:

[1]ನಾಸ್ತಿಕತ್ವ ಪರಿಹಾರಃ ಶಿಷ್ಟಾಚಾರ ಪ್ರಪಾಲನಂ ।
ಪುಣ್ಯಾವಾಪ್ತಿಶ್ಚ ನಿರ್ವಿಘ್ನಂ ಶಾಸ್ತ್ರಾದೌ ತೇನ ಸಂಸ್ತುತಿಃ ॥

ಅರ್ಥ: (೧) ನಾಸ್ತಿಕತ್ವದ ಪರಿಹಾರ, (೨) ಶಿಷ್ಟಾಚಾರದ ಪರಿಪಾಲನೆ, (೩) ಪುಣ್ಯಪ್ರಾಪ್ತಿ, (೪) ನಿರ್ವಿಘ್ನ ಕಾರ್ಯಸಾಧನೆಗಾಗಿ ಶಾಸ್ತ್ರದ ಪ್ರಾರಂಭದಲ್ಲಿ ಮೂರು ರೀತಿಯಿಂದ ಮೂರು ದೇವತೆಗಳನ್ನು ಸ್ತುತಿಸುತ್ತಾರೆ.

ವಿಶೇಷ ವಿವರಣೆ: ಮೂರು ರೀತಿಯಿಂದ: ಕಾಯಾ, ವಾಚಾ, ಮನಸಾ ಈ ಮೂರರಿಂದ, ಇಷ್ಟರು, ಅಧಿಕೃತರು ಮತ್ತು ಅಭಿಮತರು, ಈ ಮೂವರಿಗೆ ನಮಸ್ಕರಿಸಲಾಗಿದೆ.

ಮೂರು ದೇವತೆಗಳನ್ನು: (೧) ಇಷ್ಟರು (ಇಷ್ಟದೇವತೆಗಳು ಅಥವಾ ತನಗೆ ಇಷ್ಟರಾದ ಪೂಜ್ಯರಾದವರು), (೨) ಅಧಿಕೃತರು (ಗ್ರಂಥ ಪ್ರಾರಂಭದಲ್ಲಿ ಅಥವಾ ಸಂದರ್ಭವನ್ನು ಅನುಸರಿಸಿ ಯಾರನ್ನು ಮುಖ್ಯರನ್ನಾಗಿ ಮಾಡಿಕೊಂಡು ಸ್ತುತಿಸಲಾಗುತ್ತದೆಯೋ ಅವರು), (೩) ಅಭಿಮತರು (ನಿರ್ವಿವಾದವಾಗಿ ಸರ್ವಸಮ್ಮತರಾದವರು), ಇವರನ್ನು ಗ್ರಂಥಕರ್ತೃಗಳು ಸ್ತುತಿಸುತ್ತಾರೆ.

ಈ ಕೆಳಗಿನ ರೀತಿಯ ಮಂಗಳಾಚರಣೆಯೊಂದಿಗೆ ಆಚಾರ್ಯ ಶ್ರೀ ಮಾಘಣಂದಿಯವರು ತಮ್ಮ '**ಪದಾರ್ಥಸಾರ**'ವೆಂಬ ಗ್ರಂಥ ರಚನೆಯನ್ನು ಪ್ರಾರಂಭಿಸುತ್ತಾರೆ:

ಇಂತು ಮಂಗಳಾದ್ಯರ್ಥಂ ವಿಶಿಷ್ಟೇಷ್ಟಾಧಿಕೃತಾಭಿಮತ ದೇವತಾತ್ರಯಕ್ಕೆ ನಾಸ್ತಿಕ್ಯಪರಿಹಾರಾರ್ಥಂ ಶಿಷ್ಟಾಚಾರ ಪ್ರತಿಪಾಲನಾರ್ಥಂ ಪುಣ್ಯಾವಾಪ್ತ್ಯರ್ಥಂ ನಿರ್ವಿಘ್ನಾರ್ಥಮಾಗಿ ನಮಸ್ಕಾರಮಂ ಮಾಡಿ ಪದಾರ್ಥಸಾರವೆಂಬ ಗ್ರಂಥಮಂ ಪೇಳ್ವೆನದೆಂತೆನೆ: (ತ್ರೈವಿದ್ಯಚೂಡಾಮಣಿ ಮಾಘಣಂದಿ ವಿರಚಿತ 'ಪದಾರ್ಥಸಾರ'ದ ಮಂಗಳಾಚರಣೆ)

ಅರ್ಥ: (ಇಂತು) ಹೀಗೆ **(ಮಂಗಳಾದ್ಯರ್ಥಂ)** ಶುಭ ಉಂಟಾಗಬೇಕೆಂಬ ಉದ್ದೇಶದಿಂದ (೧) **(ವಿಶಿಷ್ಟ)** ವಿಶೇಷವಾಗಿ **(ಇಷ್ಟ)** ಇಷ್ಟ [ದೇವತೆಗಳು] (೨) **(ಅಧಿಕೃತ)** ಅಧಿಕೃತ [ದೇವತೆಗಳು] (೩) **(ಅಭಿಮತ)** ಸಮ್ಮತರಾದ [ದೇವತೆಗಳು] **(ದೇವತಾತ್ರಯಕ್ಕೆ)** ಈ ಮೂರು ದೇವತೆಗಳಿಗೆ, (೧) **(ನಾಸ್ತಿಕ್ಯಪರಿಹಾರಾರ್ಥಂ)** ನಾಸ್ತಿಕತೆಯ ಪರಿಹಾರಕ್ಕಾಗಿ (೨) **(ಶಿಷ್ಟಾಚಾರಪ್ರತಿಪಾಲನಾರ್ಥಂ)** ಶಿಷ್ಟಾಚಾರ ಪರಿಪಾಲನೆಗಾಗಿ (೩) **(ಪುಣ್ಯಾವಾಪ್ತ್ಯರ್ಥಂ)** ಪುಣ್ಯಪ್ರಾಪ್ತಿ ಮಾಡಿಕೊಳ್ಳುವ ಉದ್ದೇಶದಿಂದ (೪) **(ನಿರ್ವಿಘ್ನಾರ್ಥಮಾಗಿ)** [ಮತ್ತು ಈ ಗ್ರಂಥ ರಚನೆಯು] ನಿರ್ವಿಘ್ನವಾಗಿ ಪೂರ್ಣಗೊಳ್ಳಬೇಕೆನ್ನುವ ಅಪೇಕ್ಷೆಯಿಂದ **(ನಮಸ್ಕಾರಮಂ)** ನಮಸ್ಕಾರವನ್ನು **(ಮಾಡಿ)** ಮಾಡಿ **(ಪದಾರ್ಥಸಾರವೆಂಬ)** ಪದಾರ್ಥಸಾರವೆಂಬ **(ಗ್ರಂಥಮಂ)** ಗ್ರಂಥವನ್ನು **(ಪೇಳ್ವೆನ್)** ಹೇಳುತ್ತೇನೆ **(ಅದೆಂತೆನೆ)** ಅದು ಹೇಗೆಂದರೆ–

ಹೀಗೆ, ಈ ನಾಲ್ಕರ ಅಪೇಕ್ಷೆಯಿಂದ: (೧) ನಾಸ್ತಿಕತ್ವದ ಪರಿಹಾರಕ್ಕಾಗಿ, (೨) ಶಿಷ್ಟಾಚಾರದ ಪರಿಪಾಲನೆಗಾಗಿ, (೩) ಪುಣ್ಯಪ್ರಾಪ್ತಿಯ ಅಪೇಕ್ಷೆಯಿಂದ, (೪) ಈ ಗ್ರಂಥ ರಚನೆಯು ನಿರ್ವಿಘ್ನವಾಗಿ ಪೂರ್ಣಗೊಳ್ಳಬೇಕೆನ್ನುವ ಅಪೇಕ್ಷೆಯಿಂದ; ಈ ಮೂರರಿಂದ: ಕಾಯಾ, ವಾಚಾ, ಮನಸಾ; ಈ ಮೂರೂ ದೇವತೆಗಳನ್ನು: (೧) ಇಷ್ಟರು (ಇಷ್ಟದೇವತೆಗಳು ಅಥವಾ ತನಗೆ ಇಷ್ಟರಾದ ಪೂಜ್ಯರಾದವರು), (೨) ಅಧಿಕೃತರು (ಗ್ರಂಥ ಪ್ರಾರಂಭದಲ್ಲಿ ಅಥವಾ ಸಂದರ್ಭವನ್ನು ಅನುಸರಿಸಿ ಯಾರನ್ನು ಮುಖ್ಯರನ್ನಾಗಿ ಮಾಡಿಕೊಂಡು ಸ್ತುತಿಸಲಾಗುತ್ತದೆಯೋ ಅವರು), (೩) ಅಭಿಮತರು (ನಿರ್ವಿವಾದವಾಗಿ ಸರ್ವಸಮ್ಮತರಾದವರು) ಗ್ರಂಥಕರ್ತೃಗಳು ಸ್ತುತಿಸುತ್ತಾರೆ. ಇಲ್ಲಿ ಮಹಾಕವಿ ಪಂಪನು ಪ್ರಥಮಾಶ್ವಾಸದ ಮೊದಲ ಹದಿನಾರು ಪದ್ಯಗಳಲ್ಲಿ ತನಗೆ **'ಇಷ್ಟರು'**, **'ಅಧಿಕೃತರು'** ಮತ್ತು **'ಅಭಿಮತರು'** ಇವರನ್ನು ನೆನೆದು ಸ್ತುತಿಪದ್ಯಗಳನ್ನು ರಚಿಸಿದ್ದಾನೆ.

ಕವಿಯು ಈ ಮೊದಲನೆಯ ಮಂಗಳಾಚರಣೆ ಪದ್ಯದಲ್ಲಿ, ಈ ಕಾವ್ಯದ ನಾಯಕನಾದ, ಜಗತ್ಸ್ವಾಮಿಯಾದ ಆದಿಬ್ರಹ್ಮ ವೃಷಭ ತೀರ್ಥಂಕರರನ್ನು ಸ್ತುತಿಸುತ್ತಿರುವನಾದರೂ ತೀರ್ಥಂಕರರು ಅರಿಹಂತ ಪರಮೇಷ್ಠಿಗಳ ಪದದಲ್ಲಿರುವುದರಿಂದ ಇದು ಅರಿಹಂತರ

---

[1] ಈ ಶ್ಲೋಕವನ್ನು ಶ್ರೀ ಪಂಚಾಸ್ತಿಕಾಯದ ಮೊದಲನೆಯ ಗಾಥೆಯ ತಾತ್ಪರ್ಯವೃತ್ತಿ ಟೀಕೆಯಲ್ಲಿ ಆಧಾರರೂಪದಿಂದ ಶ್ರೀ ಜಯಸೇನಾಚಾರ್ಯರು ಹೇಳಿದ್ದಾರೆ.

ಸ್ತುತಿಯೂ ಆಗಿರುವುದು. ಮೊದಲು ಅರಿಹಂತರನ್ನು ಸ್ತುತಿಸುವ ಕಾರಣವನ್ನು **ಬೃಹದ್ದ್ರವ್ಯಸಂಗ್ರಹ**ದ ಶ್ರೀ ಬ್ರಹ್ಮದೇವಕೃತ ಸಂಸ್ಕೃತ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ:

'ಅತ್ರಾಧ್ಯಾತ್ಮಶಾಸ್ತ್ರೇ ಯದ್ಯಪಿ ಸಿದ್ಧಪರಮೇಷ್ಠಿ ನಮಸ್ಕಾರ ಉಚಿತಸ್ತಥಾಪಿ ವ್ಯವಹಾರನಯಮಾಶ್ರಿತ್ಯ ಪ್ರತ್ಯುಪಕಾರ ಸ್ಮರಣಾರ್ಥಮರ್ಹತ್ಪರಮೇಷ್ಠಿ ನಮಸ್ಕಾರ ಏವ ಕೃತಃ ।'

ಅರ್ಥ: ಈ ಆಧ್ಯಾತ್ಮಶಾಸ್ತ್ರದಲ್ಲಿ ಸಿದ್ಧಪರಮೇಷ್ಠಿಗಳಿಗೆ ನಮಸ್ಕಾರ ಮಾಡುವುದು ಯೋಗ್ಯವಾಗಿದ್ದರೂಕೂಡ, ವ್ಯವಹಾರನಯದ ಆಶ್ರಯ ತೆಗೆದುಕೊಂಡು ಉಪಕಾರದ ಸ್ಮರಣೆ ಮಾಡುವ ಸಲುವಾಗಿ ಅರಹಂತ ಪರಮೇಷ್ಠಿಗಳಿಗೇ ನಮಸ್ಕಾರ ಮಾಡಲಾಗಿದೆ.

ನಂತರ, ೧–೨ ನೆಯ ಪದ್ಯದಲ್ಲಿ ಸಿದ್ಧಪರಮೇಷ್ಠಿಗಳನ್ನು, ೧–೩ ನೆಯ ಪದ್ಯದಲ್ಲಿ ಆಚಾರ್ಯಪರಮೇಷ್ಠಿಗಳನ್ನು, ೧–೪ ನೆಯ ಪದ್ಯದಲ್ಲಿ ಉಪಾಧ್ಯಾಯಪರಮೇಷ್ಠಿಗಳನ್ನು, ೧–೫ ನೆಯ ಪದ್ಯದಲ್ಲಿ ಸರ್ವಸಾಧುಗಳನ್ನು ಸ್ತುತಿಸಿರುವನು. ೧–೬ ನೆಯ ಪದ್ಯದಲ್ಲಿ ಪಂಚಪರಮೇಷ್ಠಿಗಳನ್ನು ಒಟ್ಟಿಗೆ ಸ್ತುತಿಸಿರುವನು. ಹೀಗೆ ಕವಿಯು ಮೊದಲಿನ ಆರು ಮಂಗಳಾಚರಣ ಪದ್ಯಗಳಲ್ಲಿ ಪಂಚಪರಮೇಷ್ಠಿಗಳನ್ನು ಸ್ತುತಿಸಿರುವನು.

ಶಾಸ್ತ್ರ ರಚನೆಯ ಪ್ರಾರಂಭದಲ್ಲಿ ಪಾಲಿಸಬೇಕಾದ ಪದ್ಧತಿಗಳನ್ನು ಕಾವ್ಯ ರಚನೆಯ ಪ್ರಾರಂಭದಲ್ಲಿಯೂ ಕವಿ ಪಂಪನು ಪರಿಪಾಲಿಸಿರುವನು ಎಂದ ಮೇಲೆ ಈ **'ಪಂಪಕವಿ ವಿರಚಿತಂ ಆದಿಪುರಾಣಂ'** ಕೃತಿಯು ಕಾವ್ಯವೇ? ಇಲ್ಲ ಶಾಸ್ತ್ರವೇ? ಎಂಬ ಜಿಜ್ಞಾಸೆ ಮನದಲ್ಲಿ ಮೂಡದೆ ಇರದು. ಹೌದು, ಪಂಪನ ಈ **'ಆದಿಪುರಾಣಂ'** ಕೃತಿಯು ಕಾವ್ಯವೂ ಹೌದು! ಶಾಸ್ತ್ರವೂ ಹೌದು!! ಜೈನಶಾಸ್ತ್ರವನ್ನೊಳಗೊಂಡ (ಜಿನಾಗಮವನ್ನೊಳಗೊಂಡ) ಮಹಾಕಾವ್ಯ. ಇದು ಶ್ರುತಸ್ಕಂಧದ **ಪ್ರಥಮಾನುಯೋಗ**ದ ಗುಂಪಿಗೆ ಸೇರಿದ ಆಗಮಗ್ರಂಥ. ಜೈನಾಗಮವನ್ನು (ಜೈನಸಿದ್ಧಾಂತವನ್ನು) **ಅನುಕೂಲ, ದೃಷ್ಟಾಂತ** ಮತ್ತು **ಉದಾಹರಣೆ**ಗಳೊಂದಿಗೆ ವರ್ಣಿಸುವುದೇ **ಪ್ರಥಮಾನುಯೋಗ**ದ ಮೂಲ ಉದ್ದೇಶ. ಪ್ರಥಮಾನುಯೋಗದಲ್ಲಿ ಉಳಿದ ಮೂರು ಅನುಯೋಗಗಳಾದ **ಕರಣಾನುಯೋಗ, ಚರಣಾನುಯೋಗ** ಮತ್ತು **ದ್ರವ್ಯಾನುಯೋಗ** ಇವುಗಳ ವಿಷಯಗಳು ಯಥಾವತ್ತಾಗಿಯೂ, ಪ್ರಚ್ಛನ್ನವಾಗಿಯೂ ಸೇರಿಕೊಂಡಿರುತ್ತವೆ. ಆದುದರಿಂದ ಪಂಪನ **ಆದಿಪುರಾಣ**ವು ಜೈನದರ್ಶನವನ್ನೊಳಗೊಂಡ **ಮಹಾಕಾವ್ಯ**ವಾಗಿದೆ. ಈ ವಿಷಯವನ್ನು ಕವಿಯೇ ಮುಂದಿನ ೧–೩೮ ನೆಯ ಕಂದಪದ್ಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾನೆ.

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ: ಅರಿಹಂತರು ಅಥವಾ **ಆದಿತೀರ್ಥಂಕರನಾದ ವೃಷಭದೇವನು,** ದೇವೇಂದ್ರರಾದಿಯಾಗಿ ಮುನೀಂದ್ರರ (ಗಣಧರರ) ವರೆಗೆ ಎಲ್ಲರಿಂದಲೂ ವಂದಿಸಲ್ಪಡುವ ಗುಣಗಳ ರಾಶಿಯನ್ನುಳ್ಳವನು. ಹಾಗೆಯೇ, ಬೇರೆ ಬೇರೆ ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಅರಿಹಂತರನ್ನು ಸ್ತುತಿಸುವ ಮಂಗಳಾಚರಣೆ ಸ್ತೋತ್ರಗಳನ್ನು ಇಲ್ಲಿ ಪರಿಶೀಲಿಸುವುದು ಯುಕ್ತವೆನಿಸುತ್ತದೆ.

ಶ್ರೀ ಕುಂದಕುಂದಾಚಾರ್ಯ ಕೃತ **'ಪಂಚಾಸ್ತಿಕಾಯ ಸಂಗ್ರಹ'**ದ ಮಂಗಳಾಚರಣೆ ಗಾಥೆ ಹೀಗಿದೆ:

ಇಂದಸದವಂದಿಯಾಣಂ ತಿಹುವಣಹಿದಮಧುರವಿಸದವಕ್ಕಾಣಂ ।
ಅಂತಾತೀದಗುಣಾಣಂ ಣಮೋ ಜಿಣಾಣಂ ಜಿದಭವಾಣಂ ॥ (ಪಂಚಾಸ್ತಿಕಾಯ ಸಂಗ್ರಹ, ೧–೧)

ಅರ್ಥ: ಯಾರು ನೂರು ಜನ ಇಂದ್ರರುಗಳಿಂದ ವಂದಿತರಿದ್ದಾರೆ, ಯಾರ ವಾಣಿಯು ಮೂರು ಲೋಕಕ್ಕೆ ಹಿತಕರ, ಮಧುರ ಹಾಗೂ ವಿಶದ (ನಿರ್ಮಲ, ಸ್ಪಷ್ಟ) ವಾಗಿದೆ, ಯಾರಿಗೆ (ಚೈತನ್ಯದ ಅನಂತ ವಿಲಾಸ ಸ್ವರೂಪವಾದ) ಅನಂತಗುಣಗಳು ವರ್ತಿಸುತ್ತವೆ ಮತ್ತು ಯಾರು ಭವದ ಮೇಲೆ ವಿಜಯ ಪ್ರಾಪ್ತಮಾಡಿಕೊಂಡಿದ್ದಾರೆ, ಆ ಜಿನೇಶ್ವರರಿಗೆ ನಮಸ್ಕರಿಸುತ್ತೇನೆ.

ಶ್ರೀ ಕುಂದಕುಂದಾಚಾರ್ಯರಿಂದಲೇ ವಿರಚಿತವಾದ **'ಪ್ರವಚನಸಾರ'**ದ ಮಂಗಳಾಚರಣೆ ಗಾಥೆ ಹೀಗಿದೆ:

ಏಸ ಸುರಾಸುರಮಣುಸಿಂದವಂದಿದಂ ಧೋದಘಾಇಕಮ್ಮಮಲಂ ।
ಪಣಮಾಮಿ ವಡ್ಢಮಾಣಂ ತಿತ್ಥಂ ಧಮ್ಮಸ್ಸ ಕತ್ತಾರಂ ॥ (ಪ್ರವಚನಸಾರ, ೧–೧)

ಅರ್ಥ: ಯಾರು **ಸುರೇಂದ್ರರು (ಊರ್ಧ್ವಲೋಕವಾಸಿ ದೇವತೆಗಳ ಇಂದ್ರ), ಅಸುರೇಂದ್ರರು (ಅಧೋಲೋಕವಾಸಿ ದೇವತೆಗಳ ಇಂದ್ರ), ಮತ್ತು ನರೇಂದ್ರರುಗಳಿಂದ (ಮಧ್ಯಲೋಕವಾಸಿ ಚಕ್ರವರ್ತಿಗಳಿಂದ) ವಂದಿತರಿದ್ದಾರೆ** ಹಾಗೂ ಘಾತಿಕರ್ಮಮಲವನ್ನು ತೊಳೆದು ಹಾಕಿದ್ದಾರೆ ಅಂಥ ತೀರ್ಥರೂಪ ಮತ್ತು ಧರ್ಮದ ಕರ್ತೃವಾದ ಶ್ರೀ ವರ್ಧಮಾನಸ್ವಾಮಿಗೆ ಈ ನಾನು ನಮಸ್ಕಾರ ಮಾಡುತ್ತೇನೆ.

ಶ್ರೀ ಯತಿವೃಷಭಾಚಾರ್ಯ ಕೃತ **'ತಿಲೋಯಪಣ್ಣತ್ತೀ'**ಯ ಮೂರನೆಯ ಮಹಾಧಿಕಾರದ ಮಂಗಳಾಚರಣೆ ಗಾಥೆ ಹೀಗಿದೆ:

ಭವ್ವಜಣ ಮೊಕ್ಖಜಣಣಂ ಮುಣಿಂದ ದೇವಿಂದ ಪಣದ ಪಯ ಕಮಲಂ ।
ಣಮಿಯ ಅಹಿಣಂದಣೇಸಂ ಭಾವಣ ಲೋಯಂ ಪರೋವೇಮೋ ॥ (ತಿಲೋಯಪಣ್ಣತ್ತೀ, ೩–೧)

ಅರ್ಥ: 'ಭವ್ಯ ಜೀವಿಗಳಿಗೆ ಮೋಕ್ಷವನ್ನು ನೀಡುವವರೂ **ಮುನೀಂದ್ರರಿಂದ [ಮತ್ತು] ದೇವೇಂದ್ರರಿಂದ ವಂದನೀಯ ಚರಣ ಕಮಲಗಳುಳ್ಳವರೂ** ಆದಂತಹ ಅಭಿನಂದನ ಸ್ವಾಮಿಯವರಿಗೆ ನಮಸ್ಕರಿಸಿ ಭಾವನ ಲೋಕದ ನಿರೂಪಣೆ ಮಾಡುತ್ತೇನೆ.'

ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಕೃತ '**ಬೃಹತ್ ದ್ರವ್ಯಸಂಗ್ರಹ**'ದ ಮಂಗಳಾಚರಣೆ ಗಾಥೆ ಹೀಗಿದೆ:

ಜೀವಮಜೀವಂ ದವ್ವಂ ಜಿಣವರ ವಸಹೇಣ ಜೇಣ ಣಿದ್ದಿಟ್ಠಂ ।
ದೇವಿಂದವಿಂದವಂದಂ ವಂದೇ ತಂ ಸವ್ವದಾ ಸಿರಸಾ ॥ (ಬೃಹದ್ದ್ರವ್ಯಸಂಗ್ರಹ, ೧–೧)

ಅರ್ಥ: ಜಿನವರ ವೃಷಭರಿಂದ ಜೀವ ಮತ್ತು ಅಜೀವವೆಂದು ದ್ರವ್ಯವು ಎರಡು ಬಗೆ ಇರುತ್ತದೆ ಎಂದು ನಿರ್ದೇಶಿಸಲ್ಪಟ್ಟಿದೆ. **ದೇವೇಂದ್ರ ಸಮೂಹದಿಂದ ವಂದಿತನಾದ** ಆ ಜಿನೇಶ್ವರನಿಗೆ ನಿತ್ಯವೂ ತಲೆಬಾಗಿಸಿ ವಂದಿಸುತ್ತೇನೆ.

ಶ್ರೀ ವಸುಣಂದಿ ಆಚಾರ್ಯ ಕೃತ '**ವಸುಣಂದಿ ಶ್ರಾವಕಾಚಾರ**'ದ ಮಂಗಳಾಚರಣೆಯ ಗಾಥೆ ಹೀಗಿದೆ:

ಸುರವಇ (ತಿ)ಕಿರೀಡಮಣಿ ಕಿರಣವಾರಿಧಾರಾಹಿಸಿತ್ತಪಯಕಮಲಂ ।
ವರಸಯಲ ವಿಮಲಕೇವಲ ಪಯಾಸಿಯಾಸೇಸತಚ್ಚತ್ಥಂ ॥ (ವಸುನಂದಿ ಶ್ರಾವಕಾಚಾರ, ೧–೧)

ಅರ್ಥ: ದೇವೇಂದ್ರರ ಮುಕುಟ (ಕಿರೀಟ) ದಲ್ಲಿ ಅಡಕವಾದ ರತ್ನಗಳ ಕಿರಣರೂಪಿ ಜಲಧಾರೆಯಿಂದ ಯಾರ ಚರಣ ಕಮಲಗಳು ಅಭಿಷಿಕ್ತವಾಗಿವೆಯೋ, ಯಾರು ಸರ್ವೋತ್ಕೃಷ್ಟ ನಿರ್ಮಲ ಕೇವಲಜ್ಞಾನದ ಮೂಲಕ ಸಮಸ್ತ ತತ್ತ್ವಾರ್ಥವನ್ನು ಪ್ರಕಾಶಿತಗೊಳಿಸುವವರಾಗಿದ್ದಾರೋ ಮತ್ತು ಯಾರು ಭವ್ಯ ಜೀವಿಗಳಿಗೆ ಶ್ರಾವಕಧರ್ಮ ಹಾಗೂ ಮುನಿಧರ್ಮದ ಉಪದೇಶವನ್ನು ನೀಡಿದ್ದಾರೋ ಅಂಥ ಶ್ರೀ ಜಿನೇಂದ್ರದೇವರಿಗೆ ನಮಸ್ಕರಿಸಿ ನಾವು (ವಸುಣಂದಿ ಆಚಾರ್ಯರು) ಶ್ರಾವಕಧರ್ಮದ ಪ್ರರೂಪಣೆ ಮಾಡುತ್ತೇವೆ.

ಹೀಗೆ ಬೇರೆ ಬೇರೆ ಜೈನಾಚಾರ್ಯರು, ಗ್ರಂಥ ಕರ್ತೃಗಳು, ಜೈನಕವಿಗಳು ತಮ್ಮ ಗ್ರಂಥಗಳ ಮಂಗಳಾಚರಣೆ ಶ್ಲೋಕ ಅಥವಾ ಗಾಥೆ ಅಥವಾ ಪದ್ಯಗಳಲ್ಲಿ ತೀರ್ಥಂಕರರನ್ನು '**ದೇವೇಂದ್ರರಿಂದ** ಅಥವಾ **ದೇವೇಂದ್ರ ಸಮೂಹದಿಂದ ವಂದಿತರಾದವರು**' ಎಂದೇ ಸ್ತುತಿಸುತ್ತಾರೆ. ಇಲ್ಲಿ '**ದೇವೇಂದ್ರ**' ಎಂದರೆ ದೇವೇಂದ್ರ ಒಬ್ಬನಾಗಿರುವುದಿಲ್ಲ. ದೇವೇಂದ್ರರ ಸಮೂಹದಿಂದ ವಂದಿತರಾದ ಎಂದು ತಿಳಿಯಬೇಕು. ಜೈನಾಗಮಗಳ ಪ್ರಕಾರ ದೇವೇಂದ್ರ ಒಬ್ಬನಿರುವುದಿಲ್ಲ. ದೇವೇಂದ್ರರು ಅಥವಾ ಇಂದ್ರರು ನೂರು ಮಂದಿ ಇರುತ್ತಾರೆ. ಹೇಗೆಂದರೆ,

ದೇವ ಅಥವಾ ದೇವತೆಗಳು, ಇಂದ್ರರು, ದೇವೇಂದ್ರರು, ದೇವನಿಕಾಯಗಳು:

೧. ತೀರ್ಥಂಕರ ಭಗವಾನರು ನೂರು ಇಂದ್ರರಿಂದ ವಂದಿತರಾಗಿರುತ್ತಾರೆ. ಆ ನೂರು ಜನ ಇಂದ್ರರು ಅಥವಾ ದೇವೇಂದ್ರರ ಬಗ್ಗೆ ತಿಳಿಯುವುದಕ್ಕೆ ಮೊದಲು '**ದೇವ**' ಅಥವಾ '**ದೇವತೆ**'ಗಳು ಎಂದರೆ ಯಾರು? ಎಂದು ತಿಳಿಯುವುದು ಅವಶ್ಯವಾಗಿರುತ್ತದೆ. ಜೈನಾಗಮಗಳ ಪ್ರಕಾರ '**ದೇವ**' ಎಂದರೆ:

'ದೇವಗತಿನಾಮಕರ್ಮೋದಯೇ ಸತ್ಯಂಭ್ಯಂತರೇ ಹೇತೌ ಬಾಹ್ಯವಿಭೂತಿವಿಶೇಷ್ಯೈಃ ದ್ವೀಪಾದ್ರಿಸಮುದ್ರಾದಿ ಪ್ರದೇಶೇಷು ಯಥೇಷ್ಟಂ ದಿವ್ಯಂತಿ ಕ್ರೀಡಂತೀತಿ ದೇವಾಃ'. (ಸರ್ವಾರ್ಥಸಿದ್ಧಿ, ೪–೧; ಟೀಕಾ ಸಂ. ೪೪೩)

ಅರ್ಥ: ಅಭ್ಯಂತರ ಕಾರಣವಾದ ದೇವಗತಿ ನಾಮಕರ್ಮ ಉದಯವಾದನಂತರ ನಾನಾ ಬಗೆಯ ಬಾಹ್ಯ ವಿಭೂತಿಗಳಿಂದ ದ್ವೀಪಸಮುದ್ರಾದಿ ಅನೇಕ ಸ್ಥಾನಗಳಲ್ಲಿ ಇಚ್ಛೆಬಂದಂತೆ ಕ್ರೀಡೆಯಲ್ಲಿ ತೊಡಗಿರುವವರನ್ನು '**ದೇವ**'ಗಳು (ದೇವತೆಗಳು) ಎಂದು ಹೇಳುತ್ತಾರೆ. ಈ '**ದೇವ**'ಗಳಲ್ಲಿ (ದೇವತೆಗಳಲ್ಲಿ) ನಾಲ್ಕು ಭೇದಗಳಿವೆ:

ದೇವಾಶ್ಚತುರ್ಣಿಕಾಯಾಃ ॥ (ತತ್ತ್ವಾರ್ಥಸೂತ್ರ, ೪–೧)

ಅರ್ಥ: (ದೇವಾಃ) ದೇವಗಳ **(ಚತುಃ)** ನಾಲ್ಕು **(ನಿಕಾಯಾಃ)** ಸಮೂಹಗಳು ಇರುತ್ತವೆ.

ಕೇ ಪುನಸ್ತೇ? ಭವನವಾಸಿನೋ ವ್ಯಂತರಾ ಜ್ಯೋತಿಷ್ಕಾ ವೈಮಾನಿಕಾಶ್ಚೇತಿ । (ಸರ್ವಾರ್ಥಸಿದ್ಧಿ ೪–೧ ಟೀಕಾ ಸಂ. ೪೪೩)

ಅರ್ಥ: ಈ ನಾಲ್ಕು ನಿಕಾಯಗಳ ಹೆಸರು ಏನಿವೆ? ಭವನವಾಸಿ, ವ್ಯಂತರ, ಜ್ಯೋತಿಷ್ಕ, ವೈಮಾನಿಕ, ಇವು ಆ ನಾಲ್ಕು ನಿಕಾಯಗಳ ಹೆಸರುಗಳು.

ಆ **'ದೇವ'**ಗಳ ಭೇದ ಅಥವಾ ಸಮೂಹಗಳು ಅಥವಾ ನಿಕಾಯಗಳು ಯಾವುವೆಂದರೆ: (೧) ಭವನವಾಸಿ ದೇವತೆಗಳು, (೨) ವ್ಯಂತರ ದೇವತೆಗಳು, (೩) ಜ್ಯೋತಿಷ್ಕ ದೇವತೆಗಳು, (೪) ವೈಮಾನಿಕ (ಕಲ್ಪವಾಸಿ) ದೇವತೆಗಳು. (ಕಲ್ಪೋಪಪನ್ನ ಅಂದರೆ ಹದಿನಾರನೆಯ ಸ್ವರ್ಗದವರೆಗಿನ ದೇವತೆಗಳ ಗುಂಪಿನ ಈ ನಾಲ್ಕು ಪ್ರಕಾರದ ದೇವತೆಗಳಲ್ಲಿ ಕ್ರಮವಾಗಿ ಹತ್ತು, ಎಂಟು, ಐದು ಮತ್ತು ಹನ್ನೆರಡು ಪ್ರಭೇದಗಳಿವೆ).

ಈ ನಾಲ್ಕು ನಿಕಾಯದ ದೇವತೆಗಳಲ್ಲಿ ಪ್ರತಿಯೊಂದರಲ್ಲೂ ಮತ್ತೆ ಹತ್ತು ಪ್ರಕಾರದ ಸಾಮಾನ್ಯ ಭೇದಗಳಿವೆ. ಅವು ಯಾವುವೆಂದರೆ:

ಎಕ್ಕೆಕ್ಕಸ್ಸಿಂ ಇಂದೇ ಪರಿವಾರ ಸುರಾ ಹವಂತಿ ದಸ ಭೇದಾ ।
ಪಡಿಇಂದಾ ತೆತ್ತೀಸತ್ತಿದಸಾ ಸಾಮಣಿಯಾ ದಿಸಾಇಂದಾ ॥ (ತಿಲೋಯಪಣ್ಣತ್ತೀ, ೩-೬೨)

ತಣುರಕ್ಖಾ ತಿಪ್ಪರಿಸಾ ಸತ್ತಾಣಿಯಾ ಪಇಣ್ಣಗಭಿಯೋಗಾ ।
ಕಿಬ್ಬಿಸಿಯಾ ಇದಿ ಕಮಸೋ ಪವಣ್ಣಿದಾ ಇಂದ ಪರಿವಾರಾ ॥ (ತಿಲೋಯಪಣ್ಣತ್ತೀ, ೩-೬೩)

ಅರ್ಥ: ಪ್ರತೀಂದ್ರ, ತ್ರಾಯಸ್ತ್ರಿಂಶ, ಸಾಮಾನಿಕ, ದಿಶಾ ಇಂದ್ರ (ಲೋಕಪಾಲ), ತನುರಕ್ಷಕ, ಮೂರು ಪಾರಿಷದ್, ಏಳು ಅನೀಕ, ಪ್ರಕೀರ್ಣಕ, ಆಭಿಯೋಗ್ಯ ಮತ್ತು ಕಿಲ್ವಿಷಿಕ, –ಹೀಗೆ ಅನುಕ್ರಮವಾಗಿ ಇಂದ್ರರಿಗೆ ಹತ್ತು ಪರಿವಾರ ದೇವತೆಗಳನ್ನು ಹೇಳಲಾಗಿದೆ.

ಆದರೆ (ಮೇಲೆ ಹೇಳಿದ ನಿಯಮಕ್ಕೆ ಅಪವಾದವೆಂಬಂತೆ), ವ್ಯಂತರ ದೇವತೆಗಳ ಮತ್ತು ಜ್ಯೋತಿಷ್ಕ ದೇವತೆಗಳ ನಿಕಾಯದಲ್ಲಿ ತ್ರಯಸ್ತ್ರಿಂಶ ಮತ್ತು ಲೋಕಪಾಲ ಈ ಎರಡು ಭೇದಗಳನ್ನು ಬಿಟ್ಟು ಉಳಿದ ಎಂಟೂ ಭೇದಗಳೂ ಇರುತ್ತವೆ. (ತತ್ತ್ವಾರ್ಥಸೂತ್ರ, ಸೂತ್ರ ಸಂ. ೪-೫)

ಯಾವ ದೇವನು ಬೇರೆ ದೇವತೆಗಳಲ್ಲಿರದ ಅಣಿಮಾದಿ ಋದ್ಧಿ (ಗುಣ) ಸಹಿತನಾಗಿದ್ದಾನೆ, ಅವನನ್ನು **'ಇಂದ್ರ'**ನೆಂದು ಕರೆಯುತ್ತಾರೆ. ಇಂದ್ರನ ಹತ್ತು ಪರಿವಾರ ದೇವತೆಗಳ ಸ್ಥಾನಮಾನಗಳನ್ನು **ತಿಲೋಯಪಣ್ಣತ್ತೀ**ಯ ಐದು ಗಾಥೆಗಳಲ್ಲಿ ಈ ಕೆಳಗಿನಂತೆ ವಿವರಿಸಿರುತ್ತಾರೆ:

ಇಂದಾ ರಾಯ ಸರಿಚ್ಛಾ ಜುವರಾಯ ಸಮಾ ಹವಂತಿ ಪಡಿಇಂದಾ ।
ಪುತ್ತ ಣಿಹಾ ತೆತ್ತೀಸತ್ತಿದಸಾ ಸಾಮಾಣಿಯಾ ಕಲತ್ತಂ ವಾ ॥ (ತಿಲೋಯಪಣ್ಣತ್ತೀ, ೩-೬೪)

ಅರ್ಥ: ಇಂದ್ರ ರಾಜನಂತೆ, ಪ್ರತೀಂದ್ರ ಯುವರಾಜನಂತೆ, ತ್ರಾಯಸ್ತ್ರಿಂಶ ದೇವ ಪುತ್ರನಂತೆ ಹಾಗೂ ಸಾಮಾನಿಕ ದೇವನು ಕಳತ್ರರಂತೆ (ಪತ್ನಿಯಂತೆ) ಇರುತ್ತಾರೆ.

ಚತ್ತಾರಿ ಲೋಯಪಾಲಾ ಸಾರಿಚ್ಛಾ ಹೊಂತಿ ತಂತವಾಲಾಣಂ ।
ತಣುರಕ್ಖಾಣ ಸಮಾಣಾ ಸರೀರ ರಕ್ಖಾ ಸುರಾ ಸವ್ವೇ ॥ (ತಿಲೋಯಪಣ್ಣತ್ತೀ, ೩-೬೫)

ಅರ್ಥ: ನಾಲ್ಕೂ ಲೋಕಪಾಲರು (ಸೋಮ, ಯಮ, ವರುಣ, ಕುಬೇರ) ತಂತ್ರಪಾಲರಂತೆ ಮತ್ತು ಎಲ್ಲ ತನುರಕ್ಷಕ ದೇವತೆಗಳು ರಾಜನ ಅಂಗರಕ್ಷಕರಂತೆ ಇರುತ್ತಾರೆ.

ಬಾಹಿರ ಮಜ್ಝಬ್ಭಂತರ ತಂಡಯ ಸರಿಸಾ ಹವಂತಿ ಪಿಪ್ಪರಿಸಾ ।
ಸೇಣೋವಮಾ ಅಣೀಯಾ ಪಇಣ್ಣಯಾ ಪುರಜಣ ಸರಿಚ್ಛಾ ॥ (ತಿಲೋಯಪಣ್ಣತ್ತೀ, ೩-೬೬)

ಅರ್ಥ: ರಾಜನ ಬಾಹ್ಯ, ಮಧ್ಯ ಹಾಗೂ ಅಭ್ಯಂತರ ಸಮಿತಿಯ ಸದೃಶ ದೇವತೆಗಳಲ್ಲೂ ಮೂರು ತರಹದ ಪರಿಷತ್ತುಗಳಿರುತ್ತವೆ. ಅನೀಕ ದೇವತೆಗಳು ಸೇನೆಯಂತೆ ಹಾಗೂ ಪ್ರಕೀರ್ಣಕ ದೇವತೆಗಳು ಪುರಜನರಂತೆ (ಪ್ರಜೆಗಳಂತೆ) ಇರುತ್ತಾರೆ.

ಪರಿವಾರ ಸಮಾಣಾ ತೇ ಅಭಿಯೋಗ ಸುರಾ ಹವಂತಿ ಕಿಬ್ಬಿಸಿಯಾ ।
ಪಾಣೋವಮಾಣಧಾರೀ ದೇವಾಣಿಂದಸ್ಸ ಣಾದವ್ವಂ ॥ (ತಿಲೋಯಪಣ್ಣತ್ತೀ, ೩-೬೭)

ಅರ್ಥ: ಆ ಆಭಿಯೋಗ್ಯ ಜಾತಿಯ ದೇವತೆಗಳು ದಾಸರಂತೆ ಮತ್ತು ಕಿಲ್ವಿಷಿಕ ದೇವತೆಗಳು ಚಾಂಡಾಲರ ಉಪಮೆಯನ್ನು ಹೊಂದಿದವರಾಗಿದ್ದಾರೆ. ಈ ಪ್ರಕಾರದ ದೇವತೆಗಳನ್ನು ಇಂದ್ರನ ಪರಿವಾರವೆಂದು ತಿಳಿಯಬೇಕು.

ಇಂದಾ ಸಮಾ ಪಡಿಇಂದಾ ತೆತ್ತೀಸ ಸುರಾ ಹವಂತಿ ತೆತ್ತೀಸಂ ।
ಚಮರಾದೀ ಇಂದಾಣಂ ಪುಹ ಪುಹ ಸಾಮಾಣಿಯಾ ಇಮೇ ದೇವಾ ॥ (ತಿಲೋಯಪಣ್ಣತ್ತೀ, ೩-೬೮)

ಅರ್ಥ: ಪ್ರತೀಂದ್ರ ಇಂದ್ರನಿಗೆ ಸಮಾನ ಹಾಗೂ ತ್ರಾಯಸ್ತ್ರಿಂಶ ದೇವತೆಗಳು ೩೩ ಜನ ಇರುತ್ತಾರೆ. ಚಮರ ಮುಂತಾದ ಇಂದ್ರರ ಸಾಮಾನಿಕ ದೇವತೆಗಳ ಪ್ರಮಾಣ ಪ್ರತ್ಯೇಕವಾಗಿ ಹೀಗಿದೆ.

ಆಯಾ ದೇವಲೋಕಗಳಲ್ಲಿ (ನಿಕಾಯಗಳಲ್ಲಿ) ನಿರ್ದಿಷ್ಟ ಸಂಖ್ಯೆಯ ಇಂದ್ರರಿರುತ್ತಾರೆ. ಹೀಗೆ, ದೇವೇಂದ್ರರು, ಜೈನಶಾಸ್ತ್ರಗಳ ಪ್ರಕಾರ, ಒಟ್ಟು ನೂರು ಜನರಿರುತ್ತಾರೆ. ಈ ಇಂದ್ರಾದಿಗಳ ಸಂಖ್ಯೆಯನ್ನು ತಿಳಿಸುವ, **ಬೃಹದ್ದ್ರವ್ಯಸಂಗ್ರಹ** ಗ್ರಂಥದ ಪ್ರಾರಂಭದ ಗಾಥೆಯೊಂದು ಹೀಗಿದೆ:

ಭವಣಾಲಯಚಾಲೀಸಾ ವಿಂತರ ದೇವಾಣ ಹೊಂತಿ ಬತ್ತೀಸಾ ।
ಕಪ್ಪಾಮರ ಚಉವೀಸಾ ಚಂದೋ ಸೂರೋ ಣರೋ ತಿರಿಯೋ ॥ (ದ್ರವ್ಯಸಂಗ್ರಹ)

ಅರ್ಥ: ಭವನವಾಸಿ ದೇವತೆಗಳ ಇಂದ್ರರು ನಲವತ್ತು, ವ್ಯಂತರ ದೇವತೆಗಳ ಇಂದ್ರರು ಮೂವತ್ತೆರಡು, ಕಲ್ಪವಾಸಿ ದೇವತೆಗಳ ಇಂದ್ರರು ಇಪ್ಪತ್ತನಾಲ್ಕು, ಜೋತಿಷ್ಕ ದೇವತೆಗಳ ಇಂದ್ರರು ಚಂದ್ರ ಮತ್ತು ಸೂರ್ಯ ಎರಡು, ಮನುಷ್ಯರಿಗೆ ಚಕ್ರವರ್ತಿ ಮತ್ತು ತಿರ್ಯಂಚಗಳಿಗೆ ಮೃಗೇಂದ್ರ (ಸಿಂಹ).

ಮೇಲಿನ ಗಾಥಾರ್ಥದಂತೆ ದೇವೇಂದ್ರರ ವಿವರಗಳು ಈ ಕೆಳಗಿನಂತಿವೆ:

೧.	**ದೇವಲೋಕದ ಇಂದ್ರರು (ದೇವನಿಕಾಯದಲ್ಲಿ)**		**ಇಂದ್ರರ ಸಂಖ್ಯೆ**
	(೧)	ಭವನವಾಸಿ ದೇವತೆಗಳ ಇಂದ್ರರು (ಇಂದ್ರರು ೨೦ + ಪ್ರತೀಂದ್ರರು ೨೦)	೪೦
	(೨)	ವ್ಯಂತರ ದೇವತೆಗಳ ಇಂದ್ರರು (ಇಂದ್ರರು ೧೬ + ಪ್ರತೀಂದ್ರರು ೧೬)	೩೨
	(೩)	ವೈಮಾನಿಕ (ಕಲ್ಪವಾಸಿ) ದೇವತೆಗಳ ಇಂದ್ರರು (ಇಂದ್ರರು ೧೨ + ಪ್ರತೀಂದ್ರರು ೧೨)	೨೪
	(೪)	ಜ್ಯೋತಿಷ್ಕ ದೇವತೆಗಳ ಇಂದ್ರರು-ಚಂದ್ರ ಮತ್ತು ಸೂರ್ಯ (ಇಂದ್ರ ಚಂದ್ರ ಮತ್ತು + ಪ್ರತೀಂದ್ರ ಸೂರ್ಯ)	೨
೨.	**ಮಧ್ಯ ಲೋಕದ ಇಂದ್ರರು (ಮನುಷ್ಯಗಣದಲ್ಲಿ)**		
	(೧)	ನರೇಂದ್ರ-ಚಕ್ರವರ್ತಿ	೧
೩.	**ಮಧ್ಯ ಲೋಕದ ಇಂದ್ರರು (ತಿರ್ಯಂಚಗಣದಲ್ಲಿ)**		
	(೧)	ತಿರ್ಯಂಚ ಸಮೂಹದ ಇಂದ್ರರು-ಸಿಂಹ	೧
		ಒಟ್ಟು	**೧೦೦**

ಈ ನೂರೂ ಇಂದ್ರರುಗಳು ಅವರವರ ನಿಕಾಯಗಳ/ಗಣಗಳ ಮುಖ್ಯರು. ಆದುದರಿಂದ ಈ ಮೂರೂ ಗಣದ ಎಲ್ಲ ಭವ್ಯ ಜೀವಿಗಳಿಂದ ಅರಹಂತರು ವಂದಿಸಲ್ಪಡುತ್ತಾರೆ. ಈ ಕಾವ್ಯದಲ್ಲಿ ಮುಂದೆ ಈ ದೇವತೆಗಳ ಬಗ್ಗೆ ವರ್ಣನೆಗಳು ಬರುವುದರಿಂದ, ದೇವನಿಕಾಯದ ಬಗ್ಗೆ ಇಲ್ಲಿಯೇ ಪೀಠಿಕಾರೂಪದಲ್ಲಿ ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. **ದೇವನಿಕಾಯ**ದ ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಪದ ಸಂಖ್ಯೆ **ನಾಲ್ಕು (೪)-ದೇವ ನಿಕಾಯ (ದೇವತೆಗಳ ಭೇದಗಳು)** ಅನ್ನು ನೋಡಿರಿ.

೨. ಹಾಗೆಯೇ ಮುನಿಗಣಕ್ಕೆ ಮುಖ್ಯರು **ಗಣಧರರು.** ಆದುದರಿಂದ ಗಣಧರರನ್ನು ಮುನೀಂದ್ರರೆಂದು ಕರೆಯುತ್ತಾರೆ. ಆಚಾರ್ಯರನ್ನೂ ಮುನೀಂದ್ರರು ಎಂದು ಸಂಬೋಧಿಸಲಾಗುವುದು (ಇದೇ ಆಶ್ವಾಸದ ಹದಿನೈದನೆಯ ಪದ್ಯವನ್ನು ನೋಡಿರಿ). ಹೀಗೆ ಸರ್ವಜ್ಞನು (ಅರಿಹಂತನು) ದೇವ, ಮನುಷ್ಯ ಮತ್ತು ತಿರ್ಯಕ್ ಈ ಮೂರೂ ಗಣದ ಭವ್ಯಜೀವಿಗಳಿಂದ ಸದಾ ವಂದನೀಯನಾಗಿದ್ದಾನೆ ಎನ್ನುವುದು ತಾತ್ಪರ್ಯ.

'ಶ್ರೀದೇವೇಂದ್ರಮುನೀಂದ್ರವಂದಿತ' ಎನ್ನುವ ಮಾತನ್ನು ಕೆಲವು ವಿದ್ವಾಂಸರು, ಪಂಪನು 'ಶ್ಲೇಷೆಯಿಂದ ತನ್ನ ಗುರುವಾದ ಶ್ರೀ ದೇವೇಂದ್ರಮುನೀಂದ್ರರನ್ನು ಸ್ತುತಿಸಿದ್ದಾನೆ' ಎಂದು ವ್ಯಾಖ್ಯಾನಿಸುತ್ತಾರೆ. ಇದೇ ಆಶ್ವಾಸದ ೧-೨೫ ನೆಯ ಪದ್ಯದಲ್ಲಿ **'ಗುರು ದೇವೇಂದ್ರ ಮುನೀಂದ್ರನ್'** ಎಂದು ಕವಿಯು ತನ್ನ ಗುರುಗಳನ್ನು ಅವರ ಹೆಸರಿನೊಂದಿಗೆ ಸ್ಮರಿಸಿಕೊಳ್ಳುತ್ತಾನೆ. ಕವಿಯ ಗುರುಗಳಾದ **ದೇವೇಂದ್ರ**ಮುನಿಗಳಿಗೂ, ಈ ಪದ್ಯದ ಮೊದಲನೆಯ ಪಾದದಲ್ಲಿ **'ಶ್ರೀದೇವೇಂದ್ರಮುನೀಂದ್ರ ವಂದಿತ'** ಎನ್ನುವ ಮಾತಿನಲ್ಲಿಯೂ ಹಾಗೂ ಪ್ರತಿ ಆಶ್ವಾಸದ ಅಂತ್ಯದಲ್ಲಿ ಬರುವ **'ಇದು ದೇವೇಂದ್ರಮುನೀಂದ್ರವಂದ್ಯ'** ಎನ್ನುವ ಮಾತಿನಲ್ಲಿಯೂ ಬರುವ **ದೇವೇಂದ್ರ**ರಿಗೂ, ಶ್ಲೇಷೆಯ ರೂಪದಲ್ಲಿಯೂ ಸಹ ಯಾವುದೇ ಸಂಬಂಧವಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿಯೇ ಇದೆ. ಕವಿಯ ಗುರುಗಳ ಹೆಸರು **'ದೇವೇಂದ್ರ'** ಎಂದಿರುವುದು ಕೇವಲ ಆಕಸ್ಮಿಕ. ಮಂಗಳಾಚರಣೆಯಲ್ಲಿ ಬರುವ **'ಶ್ರೀದೇವೇಂದ್ರ ಮುನೀಂದ್ರವಂದಿತ'** ಎಂದರೆ ಸಾಕ್ಷಾತ್ತಾಗಿ ವೃಷಭ ತೀರ್ಥಂಕರರು, ಶ್ರೇಷ್ಠರಾದ ದೇವೇಂದ್ರರಿಂದಲೂ (ದೇವೇಂದ್ರರ ಸಮೂಹದಿಂದಲೂ), ಮುನೀಂದ್ರ ಎಂದರೆ ಗಣಧರರಿಂದಲೂ (ಗಣಧರ ಸಮೂಹದಿಂದಲೂ) ಸಮವಸರಣದಲ್ಲಿ ವಂದಿಸಲ್ಪಡು

ತ್ತಾರೆ. ದೇವೇಂದ್ರರೂ ಮತ್ತು ಮುನೀಂದ್ರರೂ ತೀರ್ಥಂಕರರನ್ನು ಸ್ವತಃ (ತಮ್ಮ ಚಕ್ಷುಗಳಿಂದಲೇ) ದರ್ಶನ ಮಾಡುತ್ತಾ ನಮಸ್ಕರಿಸುತ್ತಾರೆ. ಹೀಗೆ ಸಮವಸರಣದಲ್ಲಿ ವಿರಾಜಮಾನರಾಗಿ ದಿವ್ಯಧ್ವನಿಯ ಮೂಲಕ ಉಪದೇಶಿಸುತ್ತಿರುವ ತೀರ್ಥಂಕರರನ್ನು **'ಸಾಕ್ಷಾತ್ ತೀರ್ಥಂಕರರು'** ಎನ್ನುತ್ತಾರೆ. ಹಾಗೆಯೇ ಬೇರೆ ಬೇರೆ ಆಚಾರ್ಯರು/ಗ್ರಂಥ ಕರ್ತೃಗಳು ಅರಿಹಂತರನ್ನು ಈ ಅರ್ಥದಿಂದಲೇ ಸ್ತುತಿಸಿ ಶ್ಲೋಕ/ಪದ್ಯಗಳನ್ನು ರಚಿಸಿರುತ್ತಾರೆ. ಇದು ಕವಿಯು, ತೀರ್ಥಂಕರರ (ಅರಿಹಂತರ) ಬಗ್ಗೆಯೂ ಮತ್ತು ದೇವೇಂದ್ರರೂ ಹಾಗೂ ಗಣಧರರ (ಮುನೀಂದ್ರರ) ಬಗ್ಗೆಯೂ ಹೇಳುವ ಅಗ್ಗಳಿಕೆಯ ಮಾತು. ಪಂಪನ ಗುರುಗಳಾದ ದೇವೇಂದ್ರ ಮುನಿಗಳು ವಂದಿಸುವುದು **ತೀರ್ಥಂಕರ** ಪ್ರತಿರೂಪವಾದ ಜಿನಚೈತ್ಯಾಲಯದಲ್ಲಿ ಪ್ರತಿಷ್ಠಾಪಿಸಿರುವ ಜಿನಚೈತ್ಯಕ್ಕೆ (ಜಿನಪ್ರತಿಮೆಗೆ) ವಂದಿಸುತ್ತಾರೆ. ಹೀಗೆ ಜಿನಚೈತ್ಯಾಲಯಗಳಲ್ಲಿ ಪ್ರತಿಷ್ಠಾಪಿಸಿರುವ ಜಿನಚೈತ್ಯಗಳಿಗೆ **'ಸ್ಥಾಪನಾ ಜಿನೇಂದ್ರರು'** ಎನ್ನುವರು. ಕವಿ ಪಂಪನೂ ಅದೇ ಭಾವನೆಯಿಂದ ಅದೇ ಜಿನಚೈತ್ಯಾಲಯದಲ್ಲಿರುವ ಅದೇ ಜಿನಪ್ರತಿಮೆಗೆ ವಂದಿಸಿರುತ್ತಾನೆ. **'ಅವಸರ್ಪಿಣಿಕಾಲ'**ದ **'ದುಷ್ಷಮಕಾಲ'**ವೆಂದು ಕರೆಯುವ ಈ **'ಪಂಚಮಕಾಲ'**ದಲ್ಲಿ **(ಕಾಲದ** ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ **'ಎರಡು (೨) ಕಾಲದ ಎರಡು ಭೇದಗಳು'**ಅನ್ನು ನೋಡಿರಿ) ಸಾಕ್ಷಾತ್ ತೀರ್ಥಂಕರರನ್ನು ದರ್ಶಿಸುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಕವಿಯು ಪಂಚಪರಮೇಷ್ಠಿಗಳಲ್ಲಿ ಪ್ರಥಮರಾದ ಅರಿಹಂತರನ್ನು ಸ್ತುತಿಸುವಾಗ, 'ಶ್ಲೇಷೆಯಿಂದ ತನ್ನ ಗುರುವಾದ ಶ್ರೀ ದೇವೇಂದ್ರ ಮುನೀಂದ್ರರನ್ನು ಸ್ತುತಿಸಿದ್ದಾನೆ' ಎನ್ನುವುದು ಸಾಧುವೆನಿಸದು. ಅಲ್ಲದೆ, ಪಂಪನ ಗುರುಗಳಾದ ದೇವೇಂದ್ರ ಮುನೀಂದ್ರರು ಏಳನೆಯ ಗುಣಸ್ಥಾನದಲ್ಲಿದ್ದ ವೀತರಾಗಿ ಭಾವಲಿಂಗೀ ಮುನಿಗಳು. ಆದರೆ, ದೇವೇಂದ್ರನು ನಾಲ್ಕನೆಯ ಗುಣಸ್ಥಾನದಲ್ಲಿರುವ ಸರಾಗಿ ಹಾಗೂ ಅಸಂಯಮಿಯಾದ ಸ್ವರ್ಗದ ದೇವತೆ. ಒಂದು ವೇಳೆ ದೇವೇಂದ್ರನು ಪಂಪನ ಗುರುಗಳಾದ 'ದೇವೇಂದ್ರ ಮುನೀಂದ್ರರನ್ನು' ಸಾಕ್ಷಾತ್ತಾಗಿ ಕಂಡಿದಿದ್ದರೆ, ಅವರನ್ನು ಭಕ್ತಿಪರವಶನಾಗಿ ಆರಾಧಿಸುತ್ತಿದ್ದನು. ಹಾಗೊಂದುವೇಳೆ ಕವಿಯು ಅವನ ಗುರುಗಳನ್ನು ಸ್ತುತಿಸಬೇಕೆಂದಿದ್ದರೆ ಅದಕ್ಕಾಗಿಯೇ ಮೀಸಲಿಟ್ಟ ಪದ್ಯವೊಂದನ್ನು ರಚಿಸಿರುತ್ತಿದ್ದನು.

ಪಂಚಪರಮೇಷ್ಠಿಗಳ ಸ್ವರೂಪ: ಮೊದಲಿಗೆ, ಪಂಚಪರಮೇಷ್ಠಿಗಳ ಸ್ವರೂಪವನ್ನು ಅರಿಯುವುದೆಂದರೆ, ಪಂಚಪರಮೇಷ್ಠಿಗಳ ಯಾವ ಮೂಲಗುಣಗಳಿವೆ ಆ ಮೂಲಗುಣಗಳನ್ನು ತಿಳಿಯುವುದರ ಮೂಲಕ ಪರಮೇಷ್ಠಿಗಳ ಬಾಹ್ಯ ಮತ್ತು ಅಭ್ಯಂತರ ಸ್ವರೂಪವನ್ನು ಅರಿಯುವುದೇ ಆಗಿದೆ. ಪಂಚಪರಮೇಷ್ಠಿಗಳ ಸ್ವರೂಪವನ್ನು ತಿಳಿಯುವುದರ ಮೂಲಕ ನಾವು ಮೋಕ್ಷದ ಮಾರ್ಗದಲ್ಲಿ ನಡೆದು ಮೋಕ್ಷಪದವನ್ನು ಪ್ರಾಪ್ತಿಮಾಡಿಕೊಳ್ಳಲು ಸಾಧ್ಯವಿದೆ ಎಂದು ಜಿನಶಾಸನದಲ್ಲಿ ಉಕ್ತವಾಗಿದೆ. ಪಂಚಪರಮೇಷ್ಠಿಗಳು ನಮಗೆ ಸಾಕ್ಷಾತ್ ಮೋಕ್ಷಮಾರ್ಗವನ್ನು ತೋರಿಸುತ್ತಿರುವರು. ಪಂಚಪರಮೇಷ್ಠಿಗಳಲ್ಲಿ **ಸಾಧ್ಯ** ಮತ್ತು **ಸಾಧಕ** ದಶೆಗಳೆರಡೂ ಸಾಮಾವಿಷ್ಟಗೊಂಡಿವೆ (ಕೂಡಿದವುಗಳಾಗಿವೆ). ಒಂದು ದೃಷ್ಟಿಯಿಂದ, **ಸಿದ್ಧಪದ ಸಾಧ್ಯ** ದಶೆ ಇದ್ದರೆ, ಈ ಪದವು ಪ್ರಕಟವಾಗುವ ಮುಂಚಿನ ಯಾವ ಪರ್ಯಾಯಗಳಿರುತ್ತವೆಯೋ ಅವು **ಅರಿಹಂತ, ಆಚಾರ್ಯ, ಉಪಾಧ್ಯಾಯ** ಮತ್ತು **ಸಾಧು** ಪರ್ಯಾಯಗಳಾಗಿರುತ್ತವೆ. **ಸಿದ್ಧಪದದ ಪೂರ್ವಪರ್ಯಾಯಗಳಾದ, ಅರಿಹಂತ, ಆಚಾರ್ಯ, ಉಪಾಧ್ಯಾಯ** ಮತ್ತು **ಸಾಧು ಪದಗಳು ಸಾಧಕ** ದಶೆಗಳಾಗಿರುತ್ತವೆ. ಅರಿಹಂತ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು ಈ ನಾಲ್ಕೂ ಸಾಧಕ ಪದಗಳ ಮುಂದಿನ ಸಾಧ್ಯ ಪರ್ಯಾಯವೇ ಸಿದ್ಧಪದವಾಗಿದೆ. ಹೀಗೆ **ಸಾಧ್ಯ** ಮತ್ತು **ಸಾಧಕ** ರೂಪಗಳಾದಂತಹ ಎರಡೂ ಅವಸ್ಥೆಗಳನ್ನು ಹೊಂದಿರುವಂತಹ ಪಂಚಪರಮೇಷ್ಠಿಗಳ ಸ್ವರೂಪವನ್ನು ಅರಿತು ನಾವು ಮೋಕ್ಷಮಾರ್ಗದಲ್ಲಿ ಕ್ರಮಿಸುವುದು ಸಾಧ್ಯವಿರುತ್ತದೆ. ಆದುದರಿಂದ ಪಂಚಪರಮೇಷ್ಠಿಗಳ ಸ್ವರೂಪವನ್ನು ತಿಳಿಯುವುದು ಅವರನ್ನು ಸ್ತುತಿಸುವುದು ಬಹಳ ಮಹತ್ವಪೂರ್ಣವಾಗಿದೆ. ಆದುದರಿಂದ ಕವಿ ಪಂಪನು **ಆದಿಪುರಾಣಂ** ಮಹಾಕಾವ್ಯದ ಮಂಗಳಾಚರಣೆಯ ಮೊದಲ ಆರು ಪದ್ಯಗಳಲ್ಲಿ ಪಂಚಪರಮೇಷ್ಠಿಗಳನ್ನು ಸ್ತುತಿಸಿರುವನು.

ಈಗ ನಾವು, ಕವಿಯು ಈ ಪದ್ಯದಲ್ಲಿ ಸ್ತುತಿಸಿರುವ, ಪಂಚಪರಮೇಷ್ಠಿಗಳಲ್ಲಿ ಮೊದಲನೆಯವರಾದ ಅರಿಹಂತಪರಮೇಷ್ಠಿಗಳ (ಅಂದರೆ ತೀರ್ಥಂಕರರ) ಸ್ವರೂಪವನ್ನು ಅವರ ಮೂಲಗುಣಗಳನ್ನು ಅರಿಯುವುದರಮೂಲಕ ತಿಳಿದುಕೊಳ್ಳೋಣ. ಶ್ರೀ ಭಗವದ್ ಕುಂದಕುಂದಾಚಾರ್ಯರು ತಮ್ಮ **'ನಿಯಮಸಾರ'** ಗ್ರಂಥದ ವ್ಯವಹಾರಚಾರಿತ್ರ ಅಧಿಕಾರದಲ್ಲಿನ ೭೧ ನೆಯ ಗಾಥೆಯಿಂದ ೭೫ ನೆಯ ಗಾಥೆಯವರೆಗಿನ ಐದು ಗಾಹೆಗಳಲ್ಲಿ ಪಂಚಪರಮೇಷ್ಠಿಗಳ ಸ್ವರೂಪವನ್ನು ವಿಶುದ್ಧ ರೀತಿಯಲ್ಲಿ ವರ್ಣಿಸಿರುವುದನ್ನು ತಿಳಿಯುವುದರ ಮೂಲಕ, ಪಂಪನ ಸ್ತುತಿಪದ್ಯಗಳನ್ನು ಅರ್ಥೈಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಆಚಾರ್ಯರು ಮೊದಲಿಗೆ ಅರಹಂತ ಪರಮೇಷ್ಠಿಗಳ ಸ್ವರೂಪವನ್ನು ಈ ಕೆಳಗಿನಂತೆ ವರ್ಣಿಸಿರುವರು:

ಘಣ ಘಾಇಕಮ್ಮ ರಹಿಯಾ ಕೇವಲಣಾಣಾಇ ಪರಮ ಗುಣಸಹಿಯಾ ।
ಚೋತ್ತಿಸ ಅದಿಸಯಜುತ್ತಾ ಅರಹಂತಾ ಏರಿಸಾ ಹೋಂತಿ ॥ (ನಿಯಮಸಾರ, ೪-೭೧)

ಅರ್ಥ: ಘನ ಘಾತಿಕರ್ಮ ರಹಿತ, ಕೇವಲಜ್ಞಾನಾದಿ ಪರಮ ಗುಣಗಳ ಸಹಿತ ಮತ್ತು ಮೂವತ್ತನಾಲ್ಕು ಅತಿಶಯಗಳಿಂದ ಸಂಯುಕ್ತ ಆದಂತಹವರು ಅರಹಂತರು ಆಗಿರುತ್ತಾರೆ.

ಅರಿಹಂತಪರಮೇಷ್ಠಿಗಳು ೪೬ ಮೂಲಗುಣಗಳನ್ನು ಹೊಂದಿರುವುದರಿಂದ ಈ ಪದ್ಯದಲ್ಲಿ ತೀರ್ಥಂಕರರನ್ನು (ಅರಿಹಂತರನ್ನು)

ಗುಣಗಳ ರಾಶಿಯುಳ್ಳವನೂ (ಗುಣವ್ರಾತಂ>ಗುಣವ್ರಾತನ್) ಎಂದು ಕವಿಯು ಕೊಂಡಾಡುತ್ತಾನೆ. ಅರಿಹಂತರ ೪೬ ಮೂಲಗುಣಗಳು ಯಾವುವೆಂದರೆ:

೧.	ಜನ್ಮಾತಿಶಯ ಗುಣಗಳು	೧೦
೨.	ಕೇವಲಜ್ಞಾನಾತಿಶಯ ಗುಣಗಳು	೧೦
೩.	ದೇವಕೃತಾತಿಶಯ ಗುಣಗಳು	೧೪
	ಅರಿಹಂತರ ಅತಿಶಯ ಗುಣಗಳು ಒಟ್ಟು:	**೩೪**
೪.	**ಇವುಗಳ ಜೊತೆಗೆ ತೀರ್ಥಂಕರರ ೧೨ ಪ್ರಾಪ್ತಗುಣಗಳು:**	
	(೧) ಅಷ್ಟಮಹಾಪ್ರಾತಿಹಾರ್ಯಗಳು	೮
	(೨) ಅನಂತಚತುಷ್ಟಯಗಳು	೪
	ತೀರ್ಥಂಕರರ ಒಟ್ಟು ಮೂಲಗುಣಗಳು	**೪೬**

ಅರಿಹಂತರ ಒಟ್ಟು ಅತಿಶಯಗುಣಗಳು ೩೪ ಇದ್ದು, ಅವುಗಳಲ್ಲಿ, (೧) ಜನ್ಮಾತಿಶಯ ಗುಣಗಳು ಜನ್ಮದೊಂದಿಗೇ ಬಂದು, ಜೀವನ ಪರ್ಯಂತ ಇರುವ ಅತಿಶಯ ಸಂಬಂಧಿ ೧೦ ಗುಣಗಳು; (೨) ಕೇವಲಜ್ಞಾನಾತಿಶಯ ಗುಣಗಳು ಕೇವಲಜ್ಞಾನದೊಂದಿಗೆ ಬರುವ ಅತಿಶಯ ಸಂಬಂಧಿ ೧೦ ಗುಣಗಳು; ಹಾಗೂ (೩) ದೇವಕೃತಾತಿಶಯ ಗುಣಗಳು ದೇವತೆಗಳಿಂದುಂಟಾಗುವ ಅತಿಶಯ ಸಂಬಂಧೀ ೧೪ ಗುಣಗಳು ಆಗಿರುತ್ತವೆ. ಇವುಗಳ ಜೊತೆಗೆ ತೀರ್ಥಂಕರರಿಗೆ ಅವರ ಪ್ರಾಪ್ತಗುಣಗಳಾದ ಹನ್ನೆರಡು ಗುಣಗಳು ಸೇರಿ ತೀರ್ಥಂಕರರ ಒಟ್ಟು ಮೂಲಗುಣಗಳು ೪೬ ಆಗುತ್ತವೆ. ಈ ೪೬ ಮೂಲಗುಣಗಳಲ್ಲಿ ಅನಂತಚತುಷ್ಟಯಗಳನ್ನು ಹೊರತುಪಡಿಸಿ ಉಳಿದ ೪೨ ಗುಣಗಳನ್ನು **ಬಾಹ್ಯಗುಣ**ಗಳೆಂದು ಕರೆಯುವರು. ಅನಂತಚತುಷ್ಟಯಗಳಾದ ನಾಲ್ಕು ಗುಣಗಳನ್ನು **ಆತ್ಮವನ್ನಾಶ್ರಯಿಸಿರುವ ಗುಣ** ಅಥವಾ **ಸ್ವಭಾವ**ಗಳೆಂದು ಕರೆಯುವರು. **'ವಂದಿತ ಗುಣವ್ರಾತಂ'** ಎಂಬ ಮಾತು ಜೈನಧರ್ಮವು ಗುಣಗಳನ್ನು ಆರಾಧಿಸುವ ಧರ್ಮವಾಗಿದ್ದು, ವ್ಯಕ್ತಿಯನ್ನು ಆರಾಧಿಸುವ ಧರ್ಮವಾಗಿರುವುದಿಲ್ಲ ಎಂಬುದನ್ನು ಪ್ರತಿಪಾದಿಸುತ್ತದೆ. ತೀರ್ಥಂಕರರ ಗುಣಗಳಿಗೆ ಸಂಬಂಧಿಸಿದಂತೆ ವಿಷಯವೊಂದನ್ನು ಇಲ್ಲಿಯೇ ಸ್ಪಷ್ಟಪಡಿಸುವುದು ಸೂಕ್ತವೆನಿಸುತ್ತದೆ. ಈ ಮೇಲೆ ತೀರ್ಥಂಕರರ ಒಟ್ಟು ಮೂಲಗುಣಗಳು ೪೬ ಎಂದು ಪಟ್ಟಿಮಾಡಿ ಹೇಳಿದೆಯಲ್ಲವೆ. ಆದರೆ, ಪದ್ಯದಲ್ಲಿ ಕವಿಯು **'ಗುಣವ್ರಾತಂ'** ಅಂದರೆ **'ಗುಣಗಳ ರಾಶಿ'** ಅರ್ಥಾತ್ **'ಅನಂತಗುಣಗಳ ರಾಶಿ'** ಎಂದು ಹೇಳಿದ್ದಾನೆ. ಇದಕ್ಕೆ ಸಮಾಧಾನವೇನೆಂದರೆ, **ವ್ಯವಹಾರದೃಷ್ಟಿ**ಯಿಂದ ತೀರ್ಥಂಕರ ಮೂಲಗುಣಗಳು ೪೬ ಇರುತ್ತವೆ. **ನಿಶ್ಚಯದೃಷ್ಟಿ**ಯಿಂದ ತೀರ್ಥಂಕರರು ಗುಣಗಳರಾಶಿಯನ್ನುಳ್ಳವರಾಗಿರುತ್ತಾರೆ ಅಂದರೆ ಅನಂತಗುಣಗಳನ್ನುಳ್ಳವರಾಗಿರುತ್ತಾರೆ. **ಅರಿಹಂತರ ಗುಣಗಳ** ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ನಲವತ್ತಾರು (೪೬)–ತೀರ್ಥಂಕರ ಅರಿಹಂತರ ಮೂಲಗುಣಗಳು** ನೋಡಿರಿ. ಹಾಗೆಯೇ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಹದಿನೆಂಟು (೧೮)–ದೋಷಗಳು** ಅನ್ನು ನೋಡಬಹುದು.

ಸಂದಾದಿಬ್ರಹ್ಮನ್: ಜೈನಾಗಮಗಳು ಹೇಳಿರುವಂತೆ, ಈಗ ನಡೆಯುತ್ತಿರುವ **ಅವಸರ್ಪಿಣಿ** ಯುಗದ ಆದಿಯಲ್ಲಿ, **ದುಷ್ಷಮ–ಸುಷಮ**ವೆಂಬ ಚತುರ್ಥಕಾಲದ ಪ್ರಾರಂಭದಲ್ಲಿ ಅವತರಿಸಿದ ಪ್ರಥಮ ತೀರ್ಥಂಕರನಾದ ವೃಷಭದೇವನು ಜಗತ್ತಿಗೆ ಮೊದಲ ಬಾರಿಗೆ **ಬ್ರಹ್ಮಸ್ವರೂಪವಾದ ನಿಶ್ಚಯರತ್ನತ್ರಯ ಧರ್ಮವನ್ನು (ಮೋಕ್ಷಮಾರ್ಗವನ್ನು) ಉಪದೇಶಿಸಿದುದರಿಂದ** ಅವನನ್ನು **ಆದಿಬ್ರಹ್ಮನ್** ಎಂದೂ ಕರೆಯುತ್ತಾರೆ.

ದುರ್ವಾರ ಸಂಸಾರ ವಿಚ್ಛೇದೋಪಾಯ ನಿಯುಕ್ತ: ದಾಟಲು ಕಷ್ಟಸಾಧ್ಯವಾದ ಹುಟ್ಟು–ಸಾವುಗಳೆಂಬ ಸಂಸಾರ ಚಕ್ರವನ್ನು ತುಂಡರಿಸಲು ಇರುವ ಉಪಾಯಗಳಾದ ಅರ್ಥಾತ್ ಮೋಕ್ಷ ಪ್ರಾಪ್ತಿಗೆ ಇರುವ ಮಾರ್ಗವಾದ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರಗಳೆಂಬ ರತ್ನತ್ರಯಗಳನ್ನು ಒಳಗೊಂಡಿರುವುದು.

ಸೂಕ್ತಿ ವೃಷಮಾರ್ಗಾಗ್ರೇಸರಂ: ಸಪ್ತತತ್ತ್ವಾದಿ ಹಿತವಚನಗಳನ್ನು ಉಪದೇಶಿಸುವ ಧರ್ಮಮಾರ್ಗದ ಅಥವಾ ಮೋಕ್ಷ ಮಾರ್ಗದ ನಾಯಕರಾದ ಅರಿಹಂತರು ಅಥವಾ ತೀರ್ಥಂಕರರು.

ಮಹಾ ಸ್ರಗ್ಧರೆ **ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ**
ತಣಿವಂ ಕೈಕೊಂಡಮೂರ್ತರ್ಚರಮತನುಸಮಾಕಾರರುದ್ಧೂತಲೇಪರ್
ಪ್ರಣುತರ್ನಿತ್ಯರ್ಜಗನ್ಮಂಗಳನಿಳಯರನಂತತ್ರಿಲೋಕೈಕಚೂಡಾ
ಮಣಿಗಳ್ಸಿದ್ಧರ್ ಸ್ವಕೀಯಪ್ರಭುತೆಯನೆಮಗಂ ಮಾಳ್ಕೆತಿಪ್ರೀತಿಯಿಂದಂ ॥ ೧–೨

ಪದ ವಿಭಾಗ: ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ, ಕಿಡದ–ಗುಣಂ–ಪೊರ್ದೆ–ಬಂದೆಂಟುಂ, ಆದಂ, ತಣಿವಂ–ಕೈಕೊಂಡು, ಅಮೂರ್ತರ್, ಚರಮತನು–ಸಮಾಕಾರರ್, ಉದ್ಧೂತ–ಲೇಪರ್, ಪ್ರಣುತರ್, ನಿತ್ಯರ್, ಜಗನ್ಮಂಗಳನಿಳಯರ್, ಅನಂತರ್, ತ್ರಿಲೋಕೈಕ–ಚೂಡಾಮಣಿಗಳ್, ಸಿದ್ಧರ್, ಸ್ವಕೀಯಪ್ರಭುತೆಯನ್, ಎಮಗಂ, ಮಾಟ್ಕಿತಿಪ್ರೀತಿಯಿಂದಂ ॥ ೧–೨

ಅನ್ವಯಾರ್ಥ: [ಜೀವಾತ್ಮನಿಗೆ] **(ಪೆಣೆದೆಂಟುಂ=ಪೆಣೆದ+ಎಂಟುಂ)** ಹೆಣೆದುಕೊಂಡಿದ್ದ ಎಂಟು **(ಕಿಲ್ಬಿಷಂಗಳ್ಕಿಡೆ= ಕಿಲ್ಬಿಷಂಗಳ್+ಕಿಡೆ)** ಕರ್ಮಗಳು ನಾಶವಾಗಿ [ತತ್ಪರಿಣಾಮವಾಗಿ], **(ಬಂದೆಂಟುಂ=ಬಂದು+ಎಂಟುಂ)** ಲಭಿಸಿದ ಎಂಟು **(ಕಿಡದ ಗುಣಂ ಪೊರ್ದೆ)** ನಾಶವಾಗದ [ಶಾಶ್ವತವಾದ ಎಂಟು] ಗುಣಗಳು ಪ್ರಕಟವಾಗಲು, **(ಆದಂ ತಣಿವಂ ಕೈಕೊಂಡು)** ಅತಿಶಯವಾದ ಅನಂತ ಚತುಷ್ಟಯಗಳನ್ನು ಹೊಂದಿದ [ಪರಿಪೂರ್ಣತೆಯನ್ನು ಹೊಂದಿದ], **(ಅಮೂರ್ತರ್)** ಮೂರ್ತರೂಪದ ದೇಹರಹಿತರೂ, **(ಚರಮತನು ಸಮಾಕಾರರ್[=ಸಮ+ಆಕಾರರ್])** [ಜೀವಾತ್ಮನು ಮುಕ್ತಿ ಹೊಂದುವ ಸಮಯದಲ್ಲಿ ಧಾರಣೆ ಮಾಡಿದ್ದ ಆ ಒಂದು] ಕೊನೆಯ ದೇಹಕ್ಕೆ ಸಮನಾದ ಆಕಾರವುಳ್ಳವರಾಗಿರುವವರೂ, **(ಉದ್ಧೂತ ಲೇಪರ್)** ಕರ್ಮ ಕಳಂಕಗಳನ್ನು ತೆಗೆದೊಗೆದವರೂ, **(ಪ್ರಣುತರ್)** ಸ್ತುತ್ಯರೂ, **(ನಿತ್ಯರ್)** ಜೀವನ ಸ್ವಾಭಾವಿಕವಾದ ಎಂಟು ಗುಣಗಳನ್ನು ಪ್ರತಿ ಸಮಯವೂ ಪ್ರಕಟಗೊಳಿಸುತ್ತಿರುವವರೂ, **(ಜಗನ್ಮಂಗಳ[=ಜಗತ್+ಮಂಗಳ] ನಿಳಯರ್)** ಜಗತ್ತಿನ ಕಲ್ಯಾಣಕ್ಕೆ ಆಕರ ಸ್ಥಾನದಂತಿರುವವರೂ, **(ಅನಂತರ್)** ಅನಂತಗುಣವುಳ್ಳವರೂ, **(ತ್ರಿಲೋಕೈಕ ಚೂಡಾಮಣಿಗಳ್)** ಮೂರು ಲೋಕಗಳಿಗೂ ಒಬ್ಬರೇ ಎನಿಸಿದ, ಶಿರದಲ್ಲಿ ಧರಿಸುವ ರತ್ನದಂತಿರುವವರೂ [ಮೂರು ಲೋಕಗಳ ತುತ್ತತುದಿಯಲ್ಲಿರುವ ವರೂ], [ಆದ] **(ಸಿದ್ಧರ್)** ಸಿದ್ಧಪರಮೇಷ್ಠಿಗಳು, **(ಸ್ವಕೀಯ ಪ್ರಭುತೆಯನ್)** [ಕರ್ಮಗಳಿಂದ ಬಿಡುಗಡೆಗೊಂಡ] ನಿಜಾತ್ಮನ ಪ್ರಭುತ್ವವವನ್ನು [ಮೋಕ್ಷ ಪದವಿಯನ್ನು] **(ಎಮಗಂ)** ನಮಗೂ **(ಅತಿ)** ಅತ್ಯಂತ **(ಪ್ರೀತಿಯಿಂದಂ)** ಪ್ರೀತಿಯಿಂದ **(ಮಾಟ್ಕೆ)** ಉಂಟುಮಾಡಲಿ ॥ ೧–೨

ಕವಿಯು ಈ ವೃತ್ತಪದ್ಯದಲ್ಲಿ ಪಂಚಪರಮೇಷ್ಠಿಗಳಲ್ಲಿ ಎರಡನೆಯವರಾದ ಸಿದ್ಧಪರಮೇಷ್ಠಿಗಳನ್ನು ಸ್ತುತಿಸಿದ್ದಾನೆ.

ಭಾವಾರ್ಥ: ಎಂಟು ಕರ್ಮಗಳಿಂದ ರಹಿತರೂ, ಎಂಟು ಗುಣಗಳಿಂದ ಯುಕ್ತರೂ, ಅನಂತ ಚತುಷ್ಟಯಗಳನ್ನು ಪ್ರಕಟಪಡಿಸಿಕೊಂಡವರೂ, ದೇಹರಹಿತವಾದ [ರೂಪವನ್ನುಳ್ಳವರೂ], ಚರಮಶರೀರಕ್ಕೆ ಸಮನಾದ ಆಕಾರವುಳ್ಳವರೂ, ಕರ್ಮಕಳಂಕಗಳನ್ನು ನಿರ್ಮೂಲಗೊಳಿಸಿದವರೂ, ನಿತ್ಯರೂ, ಜಗನ್ಮಂಗಳ ನಿಳಯರೂ, ಅನಂತರೂ, ಮೂರೂಲೋಕಕ್ಕೂ ಚೂಡಾಮಣಿಗಳೆನಿಸಿದವರೂ ಆದ ಸಿದ್ಧಪರಮೇಷ್ಠಿಗಳು ಮೋಕ್ಷಪದವಿಯನ್ನು ನಮಗೂ ಅತ್ಯಂತ ಪ್ರೀತಿಯಿಂದ ಉಂಟುಮಾಡಲಿ ಎಂದು ಕವಿಯು ಪ್ರಾರ್ಥಿಸಿದ್ದಾನೆ. ೧–೨

ವಿಶೇಷ ವಿವರಣೆ: ಮಂಗಳಾಚರಣೆಯ ಈ ಎರಡನೆಯ ಪದ್ಯದಲ್ಲಿ ಕವಿಯು ಪಂಚಪರಮೇಷ್ಠಿಗಳಲ್ಲಿ ಎರಡನೆಯವರಾದ '**ಸಿದ್ಧಪರಮೇಷ್ಠಿ**'ಗಳನ್ನು ಸ್ತುತಿಸಿದ್ದಾನೆ. ಅರಿಹಂತರಿಗೆ ೪೬ ಮೂಲಗುಣಗಳಿರುವಂತೆ, ಸಿದ್ಧ ಪರಮೇಷ್ಠಿಗಳಿಗೆ ಎಂಟು ಮೂಲಗುಣಗಳಿರುತ್ತವೆ. ಇಲ್ಲಿ ಕವಿಯು ಸಿದ್ಧಪರಮೇಷ್ಠಿಗಳ ಗುಣ ಲಕ್ಷಣಗಳನ್ನು ಸ್ತುತಿ ರೂಪದಲ್ಲಿ ವಿಶದವಾಗಿ ವಿವರಿಸಿರುವನು. ಸಾಮಾನ್ಯವಾಗಿ ಸಿದ್ಧಪರಮೇಷ್ಠಿಗಳ ಲಕ್ಷಣಗಳು ನಾಲ್ಕು ದೃಷ್ಟಿಕೋನಗಳಿಂದ ಅಂದರೆ ನಾಲ್ಕು ನಯಗಳ ಅಪೇಕ್ಷೆಯಿಂದ ವರ್ಣಿಸಲ್ಪಟ್ಟಿರುತ್ತವೆ.

೧. **ವಿಶೇಷ ಭೇದ ನಯದ ದೃಷ್ಟಿಯಿಂದ ಸಿದ್ಧಪರಮೇಷ್ಠಿಗಳ ವರ್ಣನೆ:** ಗತಿ ರಹಿತ, ಇಂದ್ರಿಯ ರಹಿತ, ಗುಣಸ್ಥಾನಾತೀತ, ಅನಂತ ಜ್ಞಾನ, ಅನಂತ ಆನಂದ, ಅನಂತ ಗುಣಗಳಿಂದ ಇರುವವರು.

೨. **ಮಧ್ಯಮ ಅಪೇಕ್ಷೆ ನಯದ ದೃಷ್ಟಿಯಿಂದ ಸಿದ್ಧಪರಮೇಷ್ಠಿಗಳ ವರ್ಣನೆ:** ಸಿದ್ಧಪರಮೇಷ್ಠಿಗಳಲ್ಲಿ ನಮಗೆ ಎಂಟು ಗುಣಗಳು ಕಾಣಿಸುತ್ತವೆ.

೩. **ವಿವಕ್ಷಿತ ಅಭೇದ ನಯದ ದೃಷ್ಟಿಯಿಂದ ಸಿದ್ಧಪರಮೇಷ್ಠಿಗಳ ವರ್ಣನೆ:** ಒಂದು ಅಪೇಕ್ಷೆಯಿಂದ ನೋಡಿದರೆ ಎರಡು ಅಥವಾ ನಾಲ್ಕು ಗುಣಗಳು ಕಾಣಿಸುತ್ತವೆ.

೪. **ಅಭೇದ ನಯದ ದೃಷ್ಟಿಯಿಂದ ಸಿದ್ಧಪರಮೇಷ್ಠಿಗಳ ವರ್ಣನೆ:** ಒಂದು ಅಖಂಡ ಶುದ್ಧ ಚೈತನ್ಯ ದ್ರವ್ಯಗುಣ ಮಾತ್ರ ಇರುತ್ತದೆ.

(ಸಿದ್ಧಪರಮೇಷ್ಠಿಗಳ ಅಂದರೆ **ಶುದ್ಧ ಜೀವದ್ರವ್ಯ**ದ ಗುಣಗಳನ್ನು ಸಮಗ್ರವಾಗಿ ತಿಳಿಯಬೇಕೆಂದರೆ ಶ್ರೀ ನೇಮಿಚಂದ್ರ ಸಿದ್ಧಾಂತಿದೇವ ವಿರಚಿತ **ಬೃಹದ್ರವ್ಯ ಸಂಗ್ರಹ** ಗ್ರಂಥದ ಗಾಥಾ ಸಂಖ್ಯೆ ೧ ರಿಂದ ೧೪ ರವರೆಗಿನ ಗಾಥೆಗಳ ಅಧ್ಯಯನ ಮಾಡಬೇಕಾಗುತ್ತದೆ.)

ಮೇಲಿನ ನಾಲ್ಕು ನಯಗಳ ಅಪೇಕ್ಷೆಯಿಂದ ಪದ್ಯದ ಅರ್ಥವನ್ನು, ಈ ಕೆಳಗಿನ ಮೂರು ಗಾಥೆಗಳ ಅರ್ಥದ ಹಿನ್ನೆಲೆಯಲ್ಲಿ, ತಿಳಿದುಕೊಳ್ಳುವುದು ಸೂಕ್ತವೆನಿಸುವುದು. ಏಕೆಂದರೆ ಈ ಮೂರು ಗಾಥೆಗಳ ಅರ್ಥದ ಸಾರವನ್ನೇ, ಪಂಪನು ಈ ಪದ್ಯದಲ್ಲಿ ತುಂಬಿರುವನು.

ಣಟ್ಠಟ್ಠಕಮ್ಮಬಂಧಾ ಅಟ್ಠ ಮಹಾಗುಣ ಸಮಣ್ಣಿಯಾ ಪರಮಾ ।
ಲೋಯಗ್ಗಠಿದಾ ಣಿಚ್ಚಾ ಸಿದ್ಧಾ ತೇ ಏರಿಸಾ ಹೋಂತಿ ॥ (ನಿಯಮಸಾರ, ೪–೭೨)

ಅರ್ಥ: ಎಂಟು ಕರ್ಮಗಳ ಬಂಧವನ್ನು ನಷ್ಟಮಾಡಿರುವಂತಹ, ಎಂಟು ಮಹಾಗುಣಗಳಿಂದೊಡಗೂಡಿದ ಶ್ರೇಷ್ಠರು, ಲೋಕಾಗ್ರಸ್ಥಿತರು, ನಿತ್ಯರೂ, ಆ ಸಿದ್ಧರು ಆಗಿರುತ್ತಾರೆ.

ವಂದಿತ್ತು ಸವ್ವಸಿದ್ಧೇ ಧುವಮಚಲಮಣೋವಮಂ ಗದಿಂ ಪತ್ತೇ ।
ವೋಚ್ಛಾಮಿ ಸಮಯಪಾಹುಡಮಿಣಮೋ ಸುದಕೇವಲೀಭಣಿದಂ ॥ (ಸಮಯಸಾರ, ೧–೧)

ಅರ್ಥ: ಧ್ರುವ ಅಚಲ ಮತ್ತು ಅನುಪಮ ಈ ಮೂರು ವಿಶೇಷಣಗಳಿಂದ ಯುಕ್ತವಾದ ಗತಿಗೆ ಪ್ರಾಪ್ತರಾದಂಥ ಎಲ್ಲ ಸಿದ್ಧರಿಗೆ ವಂದಿಸಿ, ಓಹೋ! ಶ್ರುತಕೇವಲಿಗಳ ಮುಖಾಂತರ ಹೇಳಲ್ಪಟ್ಟ ಈ ಸಮಯಸಾರವೆಂಬ ಹೆಸರಿನ ಪಾಹುಡವನ್ನು ಹೇಳುವೆನು.

ಣಿಕ್ಕಮ್ಮಾ ಅಟ್ಠಗುಣಾ ಕಿಂಚೂಣಾ ಚರಮ ದೇಹದೋ ಸಿದ್ಧಾ ।
ಲೋಯಗ್ಗಠಿದಾ ಣಿಚ್ಚಾ ಉಪ್ಪಾದ ವಏಹಿಂ ಸಂಜುತ್ತಾ ॥ (ಬೃಹದ್ರವ್ಯ ಸಂಗ್ರಹ, ೧–೧೪)

ಅರ್ಥ: ಸಿದ್ಧರು ನಿಷ್ಕರ್ಮಿಗಳು, ಅಷ್ಟಗುಣ ಸಹಿತರು, ಕೊನೆಯ ಯಾವ ದೇಹದಿಂದ ಮುಕ್ತಿಯನ್ನು ಹೊಂದಿದರೋ ಆ ದೇಹದ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದವರು. ಲೋಕಾಗ್ರಸ್ಥಿತರು, ನಿತ್ಯರೂ, ಉತ್ಪಾದ–ವ್ಯಯಗಳಿಂದ ಸಂಯುಕ್ತವಾಗಿರುವವರೂ [ಸಹಿತರಾಗಿರುವವರೂ].

[ವಿ.ಸೂ.: ಈ ಟಿಪ್ಪಣಿಗಳಲ್ಲಿ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಕೃತಿಗಳಾದ **ಗೊಮ್ಮಟಸಾರ (ಜೀವಕಾಂಡ ಮತ್ತು ಕರ್ಮಕಾಂಡ), ತ್ರಿಲೋಕಸಾರ** ಈ ಗ್ರಂಥಗಳಿಂದಲೂ, ಶ್ರೀ ನೇಮಿಚಂದ್ರ ಸಿದ್ಧಾಂತಿದೇವ ವಿರಚಿತ **ಬೃಹದ್ರವ್ಯಸಂಗ್ರಹ** ಗ್ರಂಥದಿಂದಲೂ ಕೆಲವು ಗಾಥೆ/ಶ್ಲೋಕಗಳ ಉದಾಹರಣೆಗಳನ್ನು ಕೊಟ್ಟಿದೆ ಎನ್ನುವ ಕಾರಣಕ್ಕೆ ಪಂಪನು ಈ ಗ್ರಂಥಗಳ ಅಧ್ಯಯನವನ್ನು ಮಾಡಿದ್ದನೆಂದಾಗಲೀ ಅಥವಾ ಅವುಗಳಿಂದ ಗಾಥೆಗಳನ್ನು ಎರವಲು ಪಡೆದು ಭಾಷಾಂತರಿಸಿದ್ದಾನೆಂದಾಗಲೀ ತಿಳಿಯತಕ್ಕದ್ದಲ್ಲ. ಪಂಪನು ತಿಳಿಸಿರುವ ಸೈದ್ಧಾಂತಿಕ ವಿಷಯವು ವಾಚಕರಿಗೆ ಸ್ಪಷ್ಟವಾಗಿ ಅರ್ಥವಾಗಲಿ ಎನ್ನುವ ಉದ್ದೇಶದಿಂದ ಈ ಗ್ರಂಥಗಳಿಂದಲೂ ಮತ್ತು **ಪದಾರ್ಥಸಾರ** ಇತ್ಯಾದಿ ಪಂಪನ ನಂತರದ ಕಾಲದ ಗ್ರಂಥಗಳಿಂದಲೂ ಗಾಥೆ/ಶ್ಲೋಕ/ಪದ್ಯಗಳನ್ನು ಸಂದರ್ಭೋಚಿತವಾಗಿ **ವಿಶೇಷ ವಿವರಣೆ** ವಿಭಾಗದಲ್ಲಿ ಉದ್ಧರಿಸಲಾಗಿದೆ. ಪಂಪನು ಆದಿಪುರಾಣವನ್ನು ಬರೆದು ಮುಗಿಸಿದ್ದು ಕ್ರಿ.ಶ. ೯೪೧–೯೪೨ ರಲ್ಲಿ (ಹತ್ತನೇ ಶತಮಾನದ ಪ್ರಥಮಾರ್ಧ). ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳೂ ಪಂಪನೂ ಸ್ವಲ್ಪ ಸಮಕಾಲೀನರೆನಿಸುತ್ತದೆ. ಆದರೂ ಪಂಪನೇ ಆಚಾರ್ಯರಿಗಿಂತ ವಯಸ್ಸಿನಲ್ಲಿ ಸ್ವಲ್ಪ ಹಿರಿಯನೆನ್ನಬಹುದು. ಹೇಗೆಂದರೆ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಮಾರ್ಗದರ್ಶನ ಮತ್ತು ಪ್ರೇರಣೆಗಳಿಂದ ಅವರ ಶಿಷ್ಯನಾದ ಚಾವುಂಡರಾಯನು ಕ್ರಿ.ಶ. ೯೮೧ ರಲ್ಲಿ (ಹತ್ತನೇ ಶತಮಾನದ ದ್ವಿತೀಯಾರ್ಧದ ಮಧ್ಯದಲ್ಲಿ) ಶ್ರವಣಬೆಳಗೊಳದ ಬಾಹುಬಲಿಯ ಶಿಲ್ಪವನ್ನು ನಿರ್ಮಾಣಮಾಡಿಸಿದನು. ಆದುದರಿಂದ ಪಂಪನು ಆದಿಪುರಾಣವನ್ನು ರಚಿಸುವ ವೇಳೆಗೆ ಆಚಾರ್ಯರು ತಮ್ಮ ಗ್ರಂಥಗಳನ್ನು ರಚಿಸಿದ್ದರೋ ಇಲ್ಲವೋ ತಿಳಿಯದು. ಅಥವಾ ಗ್ರಂಥಗಳ ರಚನೆಯಾಗಿದ್ದರೂ, ಆದಿಪುರಾಣ ರಚಿಸುವ ವೇಳೆಗೆ ಪಂಪನು ಅವುಗಳನ್ನು ಪರಿಶೀಲಿಸಿದ್ದನೋ ಇಲ್ಲವೋ ಅದೂ ತಿಳಿಯದು. ಅಲ್ಲದೇ ಪಂಪನು ಇದೇ ಆಶ್ವಾಸದ ೧–೩೫ ನೆಯ ಪದ್ಯದಲ್ಲಿ **'ಗಣಭೃತ್ಸಂತಾನವೆಂದೀ ಪರಂಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯ ಪರ್ಯಂತಮಾಗಿರೆ ಬಂದೀ ಕಥೆ'** ಎನ್ನುತ್ತಾನೆ. ಎಂದರೆ ವೃಷಭ ತೀರ್ಥಂಕರರ ಗಣಧರರ ಕಾಲದಿಂದ ಪ್ರಾರಂಭಿಸಿ ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರವರೆಗೆ ಎನ್ನುತ್ತಾನೆ. ಮಹಾವೀರ ತೀರ್ಥಂಕರರ ಗಣಧರರಾದ ಇಂದ್ರಭೂತಿಗೌತಮ ಗಣಧರರ ಕಾಲದಿಂದ ಹಿಡಿದು ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರ ಕಾಲದವರೆಗೆ, ಈ ಮಧ್ಯದಲ್ಲಿ ಬರುವ ಕೆಲವು ಆಚಾರ್ಯರುಗಳನ್ನು ಮಾತ್ರ ಕವಿಯು ತನ್ನ ಕಾವ್ಯದಲ್ಲಿ ಭಕ್ತಿಯಿಂದ ಸ್ಮರಿಸಿದ್ದಾನೆ. ಆದರೆ, ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರ ನಂತರದ (ತನ್ನ ಗುರುಗಳಾದ ದೇವೇಂದ್ರ ಮುನೀಂದ್ರರನ್ನು ಹೊರತುಪಡಿಸಿ) ಯಾವ ಆಚಾರ್ಯರನ್ನೂ ಪಂಪನು ಆದಿಪುರಾಣದಲ್ಲಿ ಸ್ಮರಿಸಿರುವುದಿಲ್ಲ. ಶ್ರೀ ವೀರಸೇನಚಾರ್ಯರು ಮತ್ತು ಶ್ರೀ ಜಿನಸೇನಾಚಾರ್ಯರು ಪಂಪನಿಗಿಂತ ಸುಮಾರು ೧೫೦–೨೦೦ ವರ್ಷ ಹಿಂದಿನವರು ಎನ್ನುವುದು ಗಮನಿಸಬೇಕಾದ ಅಂಶ.]

ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ: ಆತ್ಮನಿಗೆ ಅಂಟಿಕೊಂಡಿರುವ ಎಂಟು ಕರ್ಮಕಳಂಕಗಳನ್ನು (೪ ಘಾತಿ ಕರ್ಮಗಳು ಮತ್ತು ೪ ಅಘಾತಿ ಕರ್ಮಗಳನ್ನು) ಕ್ರಮ ಕ್ರಮವಾಗಿ ನಿವಾರಿಸಿಕೊಂಡ ಕ್ಷಣದಲ್ಲಿಯೇ_

ಆತ್ಮನನ್ನು ಹೆಣೆದುಕೊಂಡಿರುವ ಆ ಎಂಟು ಕಿಲ್ಬಿಷಂ (ಕರ್ಮಮಲ) ಗಳು ಯಾವುವು? ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು **ಗೊಮ್ಮಟಸಾರ (ಕರ್ಮಕಾಂಡ)** ದಲ್ಲಿ ಹೀಗೆ ಹೇಳಿದ್ದಾರೆ:

ಣಾಣಸ್ಸ ದಂಸಣಸ್ಸ ಯ ಆವರಣಂ ವೇಯಣೀಯ ಮೋಹಣೀಯಂ ।
ಆಉಗಣಾಮಂ ಗೋದಂತರಾಯಮಿದಿ ಅಟ್ಠಪಯಡೀಓ ॥ (ಗೊಮ್ಮಟಸಾರ, ಕರ್ಮಕಾಂಡ, ೧-೮)

ಅರ್ಥ: (೧) ಜ್ಞಾನಾವರಣ, (೨) ದರ್ಶನಾವರಣ, (೩) ವೇದನೀಯ, (೪) ಮೋಹನೀಯ, (೫) ಆಯುಷ್ಯ, (೬) ನಾಮ, (೭) ಗೋತ್ರ ಮತ್ತು (೮) ಅಂತರಾಯ ಇವು ಕರ್ಮದ ಎಂಟು ಮೂಲಪ್ರಕೃತಿ (ಸ್ವಭಾವಗಳು) ಗಳಾಗಿರುವುವು.

ಈ ಮೇಲಿನ ಎಂಟು ಕರ್ಮಪ್ರಕೃತಿಗಳಲ್ಲಿ ಘಾತಿ ಮತ್ತು ಅಘಾತಿ ರೂಪದ ಭೇದವನ್ನು ಈ ಕೆಳಗಿನಂತೆ ಹೇಳಿರುವರು:

ಆವರಣಮೋಹವಿಗ್ಘಂ ಘಾದೀ ಜೀವಗುಣಘಾದಣತ್ತಾದೋ ।
ಆಉಗಣಾಮಂ ಗೋದಂ ವೇಯಣೀಯಂ ತಹ ಅಘಾದಿತ್ತಿ ॥ (ಗೊಮ್ಮಟಸಾರ, ಕರ್ಮಕಾಂಡ, ೧-೯)

ಅರ್ಥ: (೧) ಜ್ಞಾನಾವರಣ, (೨) ದರ್ಶನಾವರಣ, (೩) ಮೋಹನೀಯ ಮತ್ತು (೪) ಅಂತರಾಯ ಈ ನಾಲ್ಕು ಕರ್ಮಗಳಾದರೋ ಘಾತಿಯಾ ಕರ್ಮಗಳಾಗಿವೆ. ಏಕೆಂದರೆ, ಇವು ಜೀವದ (ಅನುಜೀವಿ) ಗುಣಗಳನ್ನು ಘಾತಿಸುತ್ತವೆ ಹಾಗೂ (೧) ಆಯುಷ್ಯ, (೨) ನಾಮ, (೩) ಗೋತ್ರ ಮತ್ತು (೪) ವೇದನೀಯ ಈ ನಾಲ್ಕು ಕರ್ಮಗಳು ಅಘಾತಿಯಾ ಕರ್ಮಗಳಾಗಿವೆ. ಇವು ಜೀವದ (ಅನುಜೀವಿ) ಗುಣಗಳನ್ನು ಘಾತಿಸುವುದಿಲ್ಲ. ಆ ಕಾರಣದಿಂದಾಗಿ ಇವುಗಳಿಗೆ ಅಘಾತಿಯಾ ಕರ್ಮಗಳೆಂದು ಹೇಳುತ್ತಾರೆ.

ಜೀವಗುಣ ಘಾತಕತ್ವ ಎಂದರೇನು? **ಗೊಮ್ಮಟಸಾರ (ಕರ್ಮಕಾಂಡ)** ದಲ್ಲಿ ಹೀಗೆ ಹೇಳಿದ್ದಾರೆ:

ಕೇವಳಣಾಣಂ ದಂಸಣಮಣಂತವಿರಿಯಂ ಚ ಖಯಿಯಸಮ್ಮಂ ಚ ।
ಖಯಿಯಗುಣೇ ಮದಿಯಾದೀ ಖಓವಸಮಿಯೇ ಯ ಘಾದೀ ದು ॥ (ಗೊಮ್ಮಟಸಾರ, ಕರ್ಮಕಾಂಡ, ೧-೧೦)

ಅರ್ಥ: ಕೇವಲಜ್ಞಾನ, ಕೇವಲದರ್ಶನ, ಅನಂತವೀರ್ಯ, ಕ್ಷಾಯಿಕ ಸಮ್ಯಕ್ತ್ವ ಹಾಗೂ 'ಚ'ಕಾರದಿಂದ ಕ್ಷಾಯಿಕಚಾರಿತ್ರ, ಹಾಗೂ ಎರಡನೆಯ 'ಚ'ಕಾರದಿಂದ ಕ್ಷಾಯಿಕದಾನಾದಿ ಐದು ಲಬ್ಧಿರೂಪ ಕ್ಷಾಯಿಕ ಭಾವಗಳು ಹಾಗೂ ಮತಿ, ಶ್ರುತ, ಅವಧಿ, ಮನಃಪರ್ಯಯ ಜ್ಞಾನ ಮೊದಲಾದ ಕ್ಷಾಯೋಪಶಮಿಕ ಭಾವಗಳು–ಈ ಗುಣಗಳನ್ನು ಜ್ಞಾನಾವರಣ ಮೊದಲಾದ ಕರ್ಮಗಳು ಘಾತಿಸುತ್ತವೆ. ಈ ಕಾರಣಕ್ಕಾಗಿ ಅವುಗಳನ್ನು ಘಾತಿಯಾ ಕರ್ಮಗಳೆಂದು ಹೇಳುತ್ತಾರೆ.

ತಾತ್ಪರ್ಯ: ಜೀವನ ಸ್ವಾಭಾವಿಕ ಗುಣಗಳಾದ, (೧) ಕೇವಲಜ್ಞಾನ, (೨) ಕೇವಲದರ್ಶನ, (೩) ಅನಂತವೀರ್ಯ, (೪) ಕ್ಷಾಯಿಕಸಮ್ಯಕ್ತ್ವ, (೫) ಕ್ಷಾಯಿಕಚಾರಿತ್ರ, ಮತ್ತು ಕ್ಷಾಯಿಕಗುಣಗಳು [ಅಂದರೆ, (೬) ಕ್ಷಾಯಿಕದಾನ, (೭) ಕ್ಷಾಯಿಕಲಾಭ, (೮) ಕ್ಷಾಯಿಕಭೋಗ, (೯) ಕ್ಷಾಯಿಕ ಉಪಭೋಗ (೧೦) ಕ್ಷಾಯಿಕವೀರ್ಯ ಈ ಕ್ಷಾಯಿಕಭಾವಗಳನ್ನು ಪರಿಪೂರ್ಣವಾಗಿಯೂ] ಹಾಗೂ ಮತಿ ಆದಿಯಾಗಿ, ಅಂದರೆ, ಮತಿ, ಶ್ರುತ, ಅವಧಿ, ಮನಃಪರ್ಯಯ ಎಂಬ ಈ ಕ್ಷಾಯೋಪಶಮಿಕ ಗುಣಗಳನ್ನು [ಏಕದೇಶೀಯವಾಗಿಯೂ, ಮೊದಲಿನ ನಾಲ್ಕು ಕರ್ಮಗಳಾದ, (೧) ಜ್ಞಾನಾವರಣ, (೨) ದರ್ಶನಾವರಣ, (೩) ಮೋಹನೀಯ ಮತ್ತು (೪) ಅಂತರಾಯ ಕರ್ಮಗಳು] ಘಾತಿಸುತ್ತವೆ ಅಂದರೆ ನಾಶಪಡಿಸುತ್ತವೆ. ಇದನ್ನು ಜೀವಗುಣ ಘಾತಕತ್ವ ಎನ್ನುವರು.

ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ: ಆತ್ಮನಲ್ಲಿ ಸ್ವಾಭಾವಿಕವಾಗಿರುವ ಎಂಟು ಗುಣಗಳು (ನಾಲ್ಕು ಘಾತಿ ಕರ್ಮಗಳ ಅಭಾವದಿಂದ ಅನಂತ ಚತುಷ್ಟಯ ಗುಣಗಳು–೪; ನಾಲ್ಕು ಅಘಾತಿ ಕರ್ಮಗಳ ಅಭಾವದಿಂದ ಸೂಕ್ಷ್ಮತ್ವಾದಿ ಆತ್ಮನ ಗುಣಗಳು–೪) ಪ್ರಕಟಗೊಳ್ಳುತ್ತವೆ.

ಇವುಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ಎಂಟು (೮)–ಸಿದ್ಧಪರಮೇಷ್ಠಿಗಳ (ನಿಕಲ ಪರಮಾತ್ಮರ) ಮೂಲಗುಣಗಳು'**, ನಂತರ ವಿಶಿಷ್ಟ ಸಂಖ್ಯೆ **'ಎಂಟು (೮)–ಜೀವಾತ್ಮನಿಗೆ ಅಂಟಿಕೊಂಡಿರುವ ಕರ್ಮಕಳಂಕ ಗಳು'** ಅನ್ನು ನೋಡಿರಿ.

ಎಂಟು ಕರ್ಮಗಳ (ಕಿಲ್ಬಿಷಂಗಳ್) ಸ್ವಭಾವದ ದೃಷ್ಟಾಂತವನ್ನು ಶ್ರೀ ನೇಮಿಚಂದ್ರಸಿದ್ಧಾಂತ ಚಕ್ರವರ್ತಿಗಳು **ಗೊಮ್ಮಟಸಾರ (ಕರ್ಮಕಾಂಡ)** ದಲ್ಲಿ ಹೀಗೆ ನೀಡಿದ್ದಾರೆ:

ಪಡಪಡಿಹಾರಸಿ ಮಜ್ಜಾಹಲಿ ಚಿತ್ತ ಕುಲಾಲ ಭಂಡಯಾರೀಣಂ ।
ಜಹ ಏದೇಸಿಂ ಭಾವಾ ತಹವಿ ಯ ಕಮ್ಮಾ ಮುಣೇಯವ್ವಾ ॥ (ಗೊಮ್ಮಟಸಾರ, ಕರ್ಮಕಾಂಡ, ೧-೨೧)

ಅರ್ಥ: (೧) ದೇವರ ಮುಖ ದರ್ಶನ ಮಾಡದ ಹಾಗೆ ಹಾಕಿದ ಪರದೆಯಂತೆ ಜ್ಞಾನಾವರಣಕರ್ಮವೂ, (೨) ರಾಜನ ದರ್ಶನಕ್ಕೆ ಬಿಡದ ದ್ವಾರಪಾಲಕನಂತೆ ದರ್ಶನಾವರಣಕರ್ಮವೂ, (೩) ತನ್ನ ಮೇಲೆ ಬಳಿದಿರುವ ಜೇನುತುಪ್ಪವನ್ನು ನೆಕ್ಕಿದವನ ನಾಲಿಗೆಯನ್ನು

ಕತ್ತರಿಸಿದ ಕತ್ತಿಯಂತೆ ವೇದನೀಯಕರ್ಮವೂ, (೪) ಅಮಲೇರಿಸುವ ಮತ್ತು ಭ್ರಾಂತಿಯನ್ನುಂಟುಮಾಡುವ ಮದ್ಯದಂತೆ ಮೋಹನೀಯ ಕರ್ಮವೂ, (೫) ಕೆಲವು ಕಾಲದವರೆಗೆ ಅಪರಾಧಿಯನ್ನು ಬಂಧಿಸಿಟ್ಟ ಸಂಕೋಲೆ (ಬೇಡಿ) ಯಂತೆ ಆಯುಷ್ಯಕರ್ಮವೂ, (೬) ನಾನಾ ವಿಧ ಚಿತ್ರಗಳನ್ನು ಬರೆಯುವ ಚಿತ್ರಕಾರನಂತೆ ನಾಮಕರ್ಮವೂ, (೭) ದೊಡ್ಡದಾದ ಮತ್ತು ಚಿಕ್ಕದಾದ ಮಣ್ಣಿನ ಮಡಕೆಗಳನ್ನು ತಯಾರಿಸುವ ಕುಂಬಾರನಂತೆ ಗೋತ್ರಕರ್ಮವೂ, ಮತ್ತು (೮) ರಾಜನು ಕೊಡಬೇಕೆಂದಿರುವ ದಾನಕ್ಕೆ ಅಡ್ಡಿ ಮಾಡುವ ಭಂಡಾರಿ (ಕೋಶಾಧ್ಯಕ್ಷ) ನಂತೆ ಅಂತರಾಯಕರ್ಮವೂ ಇರುತ್ತದೆಂದು ತಿಳಿಯುವುದು.

ಅಮೂರ್ತರ್: ಯಾವ ಶುದ್ಧವಾದ ಮುಕ್ತಜೀವದ್ರವ್ಯದಲ್ಲಿ ವರ್ಣ, ರಸ, ಗಂಧ, ಸ್ಪರ್ಶ ಇವು ಇರುವುದಿಲ್ಲವೋ, ಆ ಕಾರಣದಿಂದ ಅದು ಅಮೂರ್ತವಾಗಿದೆ. ಆಚಾರ್ಯ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು '**ಬೃಹದ್ದ್ರವ್ಯ ಸಂಗ್ರಹ**'ದಲ್ಲಿ ಹೀಗೆ ಹೇಳಿದ್ದಾರೆ:

ವಣ್ಣ ರಸ ಪಂಚ ಗಂಧಾ ದೋ ಫಾಸಾ ಅಟ್ಠ ಣಿಚ್ಚಯಾ ಜೀವೇ ।
ಣೋ ಸಂತಿ ಅಮುತ್ತಿ ತದೋ ವವಹಾರಾ ಮುತ್ತಿ ಬಂಧಾದೋ ॥ (ಬೃಹದ್ದ್ರವ್ಯ ಸಂಗ್ರಹ, ೧–೭)

ಅರ್ಥ: (೧) **(ವಣ್ಣ ಪಂಚ)** ಬಿಳಿ, ಹಳದಿ, ನೀಲ, ಕೆಂಪು, ಕಪ್ಪು– ಈ ಐದು ವರ್ಣಗಳು, (೨) **(ರಸ ಪಂಚ)** ಖಾರ [ಕಟು], ಕಹಿ [ತಿಕ್ತ], ಒಗರು [ಕಷಾಯ], ಹುಳಿ [ಆಮ್ಲ], ಸಿಹಿ [ಮಧುರ]– ಈ ಐದು ರಸಗಳು, (೩) **(ಗಂಧಾ ದೋ)** ಸುಗಂಧ, ದುರ್ಗಂಧ– ಈ ಎರಡು ಗಂಧಗಳು, (೪) **(ಫಾಸಾ ಅಟ್ಠ)** ಶೀತ, ಉಷ್ಣ, ಜಿಗಿಟು [ಸ್ನಿಗ್ಧ], ರೂಕ್ಷ [ಗಟ್ಟಿ], ಮೃದು, ಕರ್ಕಶ [ಕಠೋರ], ಭಾರ [ಗುರು], ಹಗುರ [ಲಘು]– ಈ ಎಂಟೂ ಸ್ಪರ್ಶಗಳು, **(ಣಿಚ್ಚಯಾ)** ಶುದ್ಧ ನಿಶ್ಚಯ ನಯದಿಂದ **(ಜೀವೇ ಣೋ ಸಂತಿ)** ಶುದ್ಧಬುದ್ಧವಾದ ಏಕಸ್ವಭಾವವುಳ್ಳ ಜೀವದ್ರವ್ಯದಲ್ಲಿ ಇರುವುದಿಲ್ಲ, **(ಅಮುತ್ತಿ ತದೋ)** ಆದ ಕಾರಣ ಅಮೂರ್ತವಾಗಿದೆ ಮತ್ತು **(ವವಹಾರಾ)** ವ್ಯವಹಾರ ನಯದಿಂದ **(ಮುತ್ತಿ)** ಮೂರ್ತವಾದ **(ಬಂಧಾದೋ)** ಕರ್ಮಬಂಧದ ಕಾರಣ ಮೂರ್ತವಾಗಿದೆ.

ಆದುದರಿಂದ ಮುಕ್ತರಾದಸಿದ್ಧಪರಮೇಷ್ಠಿಗಳಲ್ಲಿ ವರ್ಣ, ರಸ, ಗಂಧ, ಸ್ಪರ್ಶಗಳಿಲ್ಲದಿರುವುದರಿಂದ ಅವರು ಅಮೂರ್ತರಾಗಿದ್ದಾರೆ.

ಚರಮತನುಸಮ ಆಕಾರರ್: ಯಾವ ಜೀವಾತ್ಮರು ಸಿದ್ಧತ್ವವನ್ನು ಪಡೆಯುವ ಸಮಯದಲ್ಲಿ, ಅಂದರೆ, ದೇಹದಿಂದ ಬಿಡುಗಡೆ ಹೊಂದಿ ಮೋಕ್ಷವನ್ನು ಪಡೆಯುವ ಸಮಯದಲ್ಲಿ, ಯಾವ ದೇಹಧಾರಣೆ ಮಾಡಿರುತ್ತಾರೋ ಆ ದೇಹದ ಆಕಾರವುಳ್ಳವರಾಗಿರುತ್ತಾರೆ. **ಚರಮ ತನು** ಎಂದರೆ ಸಾಮಾನ್ಯ ಅರ್ಥದಲ್ಲಿ **ಅಂತಿಮ ದೇಹ** ಎಂದು ಅರ್ಥವಾಗುತ್ತದೆ. ಆದರೆ ಜೈನಾಗಮದಲ್ಲಿ **ಚರಮ** ಶಬ್ದವನ್ನು, ಈ ಸಂದರ್ಭದಲ್ಲಿ, ಕೇವಲ **ಅಂತಿಮ** ಎನ್ನುವ ಸಾಮಾನ್ಯ ಅರ್ಥದಲ್ಲಿ ಉಪಯೋಗಿಸದೆ, ಒಂದು ವಿಶಿಷ್ಟ ಅರ್ಥದಲ್ಲಿ ಪ್ರಯೋಗಿಸುತ್ತಾರೆ. ಈ ಮೇಲೆ ತಿಳಿಸಿರುವಂತೆ ಜೀವಾತ್ಮನು ಮೋಕ್ಷವನ್ನು ಹೊಂದುವ ಸಮಯದಲ್ಲಿ ಯಾವ ದೇಹವನ್ನು ಧಾರಣೆ ಮಾಡಿರುತ್ತಾನೋ ಅದು **ಚರಮ ಶರೀರ (ದೇಹ)**. ಈ ದೇಹ ಸಾಮಾನ್ಯ ದೇಹಕ್ಕಿಂತ ವಿಶಿಷ್ಟ ಲಕ್ಷಣವುಳ್ಳದ್ದಾಗಿರುತ್ತದೆ. ಜೀವನು ಮೋಕ್ಷ ಹೊಂದಿದನಂತರ ಈ ದೇಹ ಸಾಮಾನ್ಯ ದೇಹದಂತೆ ಸಂಸ್ಕಾರಕ್ಕೆ ಸಿಗುವುದಿಲ್ಲ. ಇದು **ಪರಮ ಔದಾರಿಕ ಶರೀರ**ವಾಗಿರುತ್ತದೆ. ಇದು ಮೋಕ್ಷಹೊಂದುವ ಜೀವಾತ್ಮರುಗಳಿಗೆ ಮಾತ್ರ ಪ್ರಾಪ್ತವಾಗುವ ಶರೀರವಾಗಿರುತ್ತದೆ. ಆದುದರಿಂದ ಇಂತಹ **ಪರಮ ಔದಾರಿಕ ಶರೀರ (ದಿವ್ಯ ಶರೀರ)** ಕ್ಕೆ '**ಚರಮ ತನು**' ಅಥವಾ '**ಚರಮ ದೇಹ**' ಅಥವಾ '**ಚರಮ ಶರೀರ**' ಎನ್ನುವರು.

'**ಣಿಕ್ಕಮ್ಮಾ** ಅಟ್ಠಗುಣಾ **ಕಿಂಚೂಣಾ ಚರಮ ದೇಹದೋ ಸಿದ್ಧಾ**' (ಬೃಹದ್ದ್ರವ್ಯ ಸಂಗ್ರಹ, ೧–೧೪)

ಅರ್ಥ: [ಸಿದ್ಧರು] ನಿಷ್ಕರ್ಮಿಗಳು, ಅಷ್ಟಗುಣ ಸಹಿತರು. ಅವರು ಕೊನೆಯ ಯಾವ ದೇಹದಿಂದ ಮುಕ್ತಿಯನ್ನು ಹೊಂದಿದರೋ ಆ ದೇಹದ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದವರು.

ಈ ನಾಲ್ಕೂ ಲಕ್ಷಣಗಳನ್ನು (ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ, ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ, ಅಮೂರ್ತರ್ ಮತ್ತು ಚರಮತನುಸಮಆಕಾರರ್), ಮೇಲೆ ತಿಳಿಸಿದ **ಎರಡನೆಯದಾದ ಮಧ್ಯಮ ಅಪೇಕ್ಷೆ ನಯದ ದೃಷ್ಟಿಯಿಂದ** ಪಂಪನು ವರ್ಣಿಸಿರುವನು.

ನಿತ್ಯರ್: ಸಿದ್ಧಪರಮೇಷ್ಠಿಗಳು ನಿತ್ಯರಾಗಿರುತ್ತಾರೆ. ಈ ಲಕ್ಷಣವು ಮೇಲೆ ತಿಳಿಸಿದ ನಾಲ್ಕನೆಯದಾದ **ಅಭೇದ ನಯದ ಅಪೇಕ್ಷೆ ದೃಷ್ಟಿಯಿಂದ** ವರ್ಣಿಸಲ್ಪಟ್ಟಿದೆ. ಮೊದಲು '**ನಿತ್ಯ**'ದ ಲಕ್ಷಣವನ್ನು ತಿಳಿಯೋಣ. ಶ್ರೀ ಉಮಾಸ್ವಾಮಿ ವಿರಚಿತ **ತತ್ತ್ವಾರ್ಥ ಸೂತ್ರ**ದ ೫–೩೧ನೆಯ ಸೂತ್ರಕ್ಕೆ ಶ್ರೀ ಪೂಜ್ಯಪಾದಾಚಾರ್ಯರು ಬರೆದಿರುವ **ಸರ್ವಾರ್ಥಸಿದ್ಧಿ** ಟೀಕಾಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

ತದ್ಭಾವಾವ್ಯಯಂ ನಿತ್ಯಮ್ ॥ (ತತ್ತ್ವಾರ್ಥ ಸೂತ್ರ, ೫–೩೧)

ಅರ್ಥ: ತನ್ನ ಭಾವದಿಂದ ಚ್ಯುತವಾಗದಿರುವುದು **ನಿತ್ಯ**ವೆನಿಸುವುದು.

ಸರ್ವಾರ್ಥಸಿದ್ಧಿ, ಟೀಕೆ ಸಂ. ೫೮೬: 'ತದ್ಭಾವಃ' ಇತ್ಯುಚ್ಯತೇ । ಕಸ್ತದ್ಭಾವಃ ? ಪ್ರತ್ಯಭಿಜ್ಞಾನಹೇತುತಾ । ತದೇವೇದಮಿತಿ

ಸ್ಮರಣಂ ಪ್ರತ್ಯಭಿಜ್ಞಾನಮ್ । ತದಕಸ್ಮಾನ್ನ ಭವತೀತಿ ಯೋಽಸ್ಯ ಹೇತುಃ ಸ ಸದ್ಭಾವಃ । ಭವನಂ ಭಾವಃ । ತಸ್ಯ ಭಾವ ಸ್ತದ್ಭಾವಃ । ಯೇನಾತ್ಮನಾ ಪ್ರಾಗ್ದೃಷ್ಟಂ ವಸ್ತು ತೇನೈವಾತ್ಮನಾ ಪುನರಪಿ ಭಾವಾತ್ತದೇ ವೇದಮಿತಿ ಪ್ರತ್ಯಭಿಜ್ಞಾಯತೇ । ಯದ್ಯತ್ಯಂತನಿರೋಧೋಽಭಿನವಪ್ರಾದುರ್ಭಾವಮಾತ್ರಮೇವ ವಾ ಸ್ಯಾತ್ತತಃ ಸ್ಮರಣಾನುಪಪತ್ತಿಃ । ತದಧೀನೋ ಲೋಕ ಸಂವ್ಯವಹಾರೋ ವಿರುಧ್ಯತೇ । ತತಸ್ತದ್ಭಾವೇನಾವ್ಯಯಂ ತದ್ಭಾವಾವ್ಯಯಂ ನಿತ್ಯಮಿತಿ ನಿಶ್ಚೀಯತೇ । ತತ್ ತು ಕಥಂಚಿತ ದ್ವೇದಿತವ್ಯಮ್ । ಸರ್ವಥಾ ನಿತ್ಯತ್ವೇ ಅನ್ಯಥಾ ಭಾವಾಭಾವಾತ್ಸಂಸಾರತದ್ವಿನಿವೃತ್ತಿಕಾರಣಪ್ರಕ್ರಿಯಾವಿರೋಧಃ ಸ್ಯಾತ್ ।

ಟೀಕೆಯ ಭಾವಾರ್ಥ: ಈಗ '**ತದ್ಭಾವ**' ಎಂಬ ಪದದ ಸಾರಾಂಶವನ್ನು ಹೇಳುತ್ತಾರೆ.

ಪ್ರಶ್ನೆ: '**ತದ್ಭಾವ**' ಎನ್ನುವುದು ಎಂತಹ ವಸ್ತು ?

ಉತ್ತರ: ಪ್ರತ್ಯಭಿಜ್ಞಾನಕ್ಕೆ (ಹಿಂದೆ ನೋಡಿದುದನ್ನು ಮತ್ತೆ ನೆನೆಸಿಕೊಳ್ಳುವ ಜ್ಞಾನ) ಕಾರಣವಾದುದು ತದ್ಭಾವವೆನಿಸುತ್ತದೆ. 'ಅದೇ ಇದು' ಎಂಬ ರೀತಿಯಲ್ಲಿ ಸ್ಮರಣೆಮಾಡಿಕೊಳ್ಳುವುದನ್ನು ಪ್ರತ್ಯಭಿಜ್ಞಾನವೆಂದು ಹೇಳುತ್ತಾರೆ. ಅದು ಅಕಸ್ಮಾತ್ ಆಗುವುದಿಲ್ಲವಾದುದರಿಂದ, ಅದಕ್ಕೆ ಕಾರಣವಾದುದೇ ತದ್ಭಾವವೆನಿಸುತ್ತದೆ. ಇದಕ್ಕೆ 'ಭವನಂಭಾವಃ', ತಸ್ಯಭಾವಃ ತದ್ಭಾವಃ ಎಂಬಂತೆ ನಿರುಕ್ತಿ (ವ್ಯುತ್ಪತ್ತಿ) ಆಗುತ್ತದೆ. ಇದರ ಅಭಿಪ್ರಾಯವೇನೆಂದರೆ ಮೊದಲು ನೋಡಿದ್ದ ರೂಪಿನ ವಸ್ತುವನ್ನೇ ಪುನಃ ನೋಡುವುದರಿಂದ 'ಅದೇ ಇದು' ಎಂಬ ರೀತಿಯ ಪ್ರತ್ಯಭಿಜ್ಞಾನವುಂಟಾಗುತ್ತದೆ. ಒಂದು ವೇಳೆ ಹಿಂದಿನ ವಸ್ತುವು ಸಂಪೂರ್ಣವಾಗಿ ನಾಶವಾಗಿದ್ದರೆ, ಅಥವಾ ಸಂಪೂರ್ಣವಾಗಿ ಹೊಸ ವಸ್ತುವು ಆಯಿತೆಂದು ತಿಳಿಯುವುದಾದರೆ, ಇದರಿಂದ ಸ್ಮರಣೆಯು ಉಂಟಾಗಲಾರದು ಮತ್ತು ಸ್ಮರಣೆ ಉಂಟಾಗಲಾರದಾದುದರಿಂದ ಸ್ಮರಣೆಗೆ ಅಧೀನವಾದ ಲೋಕ ಸಂವ್ಯವಹಾರಗಳಷ್ಟಕ್ಕೂ ವಿರೋಧವು ಪ್ರಾಪ್ತವಾಗುತ್ತದೆ. ಆದುದರಿಂದ ಒಂದು ವಸ್ತುವಿಗೆ ಇರುವ ಭಾವವು, ತನ್ನ ರೂಪದಿಂದ ಚ್ಯುತವಾಗದಿರುವುದು ತದ್ಭಾವಾವ್ಯಯ ಅಂದರೆ ನಿತ್ಯವೆನಿಸುತ್ತದೆ ಎಂದು ನಿಶ್ಚಿತವಾಗುತ್ತದೆ. ಆದರೆ ಇದನ್ನು ಒಂದೊಂದುಸಾರಿ ಎಂದು ತಿಳಿಯಬೇಕು. ಒಂದುವೇಳೆ ಇದನ್ನು ಸಂಪೂರ್ಣವಾಗಿ ನಿತ್ಯವೆಂದು ತಿಳಿಯುವುದಾದರೆ ಪರಿಣಮನವು ಸಂಪೂರ್ಣವಾಗಿ ಇಲ್ಲದಂತೆಯೇ ಆಗಬೇಕಾಗುತ್ತದೆ. ಹೀಗೆ ಹೇಳುವುದರಿಂದ ಸಂಸಾರ ಮತ್ತು ಅದರ ನಿವೃತ್ತಿಗೆ ಕಾರಣವಾದ ಪ್ರಕ್ರಿಯೆಗಳಿಗೆ ವಿರೋಧಪ್ರಾಪ್ತವಾಗುತ್ತದೆ.

[**ತಾತ್ಪರ್ಯ:** ಯಾವುದು ಮೊದಲಿನ ಸಮಯದಲ್ಲಿದ್ದಿತು ಅದೇ ಎರಡನೆಯ ಸಮಯದಲ್ಲಿಯೂ ಇದ್ದರೆ ಅದನ್ನು **ತದ್ಭಾವ**ವೆಂದು ಹೇಳುತ್ತಾರೆ. ಅಂದರೆ, **ಪತ್ಯಭಿಜ್ಞಾನಕ್ಕೆ** (ಹಿಂದೆ ನೋಡಿದುದನ್ನು ಮತ್ತೆ ನೆನೆಸಿಕೊಳ್ಳುವ ಜ್ಞಾನಕ್ಕೆ) ಕಾರಣವಾದುದು **ತದ್ಭಾವ**ವೆನಿಸುತ್ತದೆ. ಅದು ನಿತ್ಯವಾಗಿರುತ್ತದೆ. **ಅವ್ಯಯ** ಅಂದರೆ ಅದು ಅವಿನಾಶಿಯಾಗಿರುತ್ತದೆ.]

'**ನಿತ್ಯ**'ದ ವಿಷಯವು ಜೀವತತ್ತ್ವದ ಲಕ್ಷಣವನ್ನು ಅರ್ಥೈಸಿಕೊಳ್ಳುವ ಅಪೇಕ್ಷೆಯಿಂದ ಮುಖ್ಯ ಲಕ್ಷಣವಾಗಿರುವುದರಿಂದ, ಸ್ವಲ್ಪ ದೀರ್ಘವಾದ ಅರ್ಥ ವಿವರಣೆಯನ್ನು ನಿರೀಕ್ಷಿಸುತ್ತದೆ.

'...... ಲೋಯಗ್ಗಠಿದಾ **ಣಿಚ್ಚಾ ಉಪ್ಪಾದವಏಹಿಂ ಸಂಜುತ್ತಾ**' (ಬೃಹದ್ದ್ರವ್ಯ ಸಂಗ್ರಹ, ೧–೧೪)

ಅರ್ಥ: ಲೋಕಾಗ್ರಸ್ಥಿತರು, **ನಿತ್ಯರೂ, ಉತ್ಪಾದವ್ಯಯಗಳಿಂದ ಸಂಯುಕ್ತವಾಗಿರುವವರೂ [ಸಹಿತರಾಗಿರುವವರೂ].**

ಜೈನಾಗಮದಂತೆ **ನಿತ್ಯರು** ಎಂದರೆ ಯಾರು? ಸಿದ್ಧಪರಮೇಷ್ಠಿಗಳೇಕೆ '**ನಿತ್ಯ**'ರಾಗಿರುತ್ತಾರೆ? ಇದನ್ನು ಅರಿಯಲು ಮೊದಲು ದ್ರವ್ಯದ ಸ್ವಭಾವವನ್ನು [ಲಕ್ಷಣವನ್ನು] ತಿಳಿಯಬೇಕಾಗಿದೆ.

ಜೀವಮಜೀವಂ ದವ್ವಂ ..... । (ಬೃಹದ್ದ್ರವ್ಯ ಸಂಗ್ರಹ, ೧–೦೧)

ಅರ್ಥ: ಜೀವ ಮತ್ತು ಅಜೀವವೆಂದು ದ್ರವ್ಯವು ಎರಡು ಬಗೆ ಇರುತ್ತದೆ.

ನಿತ್ಯಾವಸ್ಥಿತಾನ್ಯರೂಪಣಿ ॥ (ತತ್ತ್ವಾರ್ಥ ಸೂತ್ರ, ೫–೪)

ಅರ್ಥ: ಹಿಂದೆ ಹೇಳಿದ (ತ.ಸೂ. ೫–೧) ದ್ರವ್ಯಗಳು ನಿತ್ಯವಾಗಿವೆ, ಅವಸ್ಥಿತವಾಗಿವೆ ಮತ್ತು ಅರೂಪಿಯಾಗಿವೆ.

ಸರ್ವಾರ್ಥಸಿದ್ಧಿ ಟೀಕಾ ಸಂ. ೫೩೩: ನಿತ್ಯಂ ಧ್ರುವಮಿತ್ಯರ್ಥಃ । 'ನೇರ್ಧ್ರುವೇ ತ್ಯಃ' ಇತಿ ನಿಷ್ಪಾದಿತತ್ವಾತ್ ॥ ...

ಟೀಕಾರ್ಥ: ನಿತ್ಯ ಶಬ್ದಕ್ಕೆ ಧ್ರುವವೆಂದು ಅರ್ಥವಾಗುತ್ತದೆ. 'ನೇರ್ಧ್ರುವೇ ತ್ಯಃ' ಎಂಬ ವಾರ್ತಿಕೆಯ ಅನುಸಾರ 'ನಿ' ಶಬ್ದದಿಂದ ಧ್ರುವದ ಅರ್ಥದಲ್ಲಿ 'ತ್ಯ' ಪ್ರತ್ಯಯವನ್ನು ಸೇರಿಸಿ 'ನಿತ್ಯ' ಶಬ್ದವನ್ನು ಮಾಡುತ್ತಾರೆ.

ಸದ್ ದ್ರವ್ಯ ಲಕ್ಷಣಮ್ ॥ (ತತ್ತ್ವಾರ್ಥ ಸೂತ್ರ, ೫–೨೯)

ಅರ್ಥ: ದ್ರವ್ಯದ ಲಕ್ಷಣವು ಸತ್ ಆಗಿದೆ.

ಉತ್ಪಾದವ್ಯಯಧ್ರೌವ್ಯಯುಕ್ತಂ ಸತ್ ॥ (ತತ್ತ್ವಾರ್ಥ ಸೂತ್ರ, ೫-೩೦)

ಅರ್ಥ: ಯಾವುದು ಉತ್ಪಾದ, ವ್ಯಯ, ಧ್ರೌವ್ಯ ಸಹಿತವಾಗಿರುವುದು ಅದು ಸತ್ ಆಗಿದೆ.

(ಸತ್ ಎಂದರೆ **ಸೃಷ್ಟಿ, ಲಯ**ಗಳಿಲ್ಲದಿರುವುದು. ಇಲ್ಲಿ **ಸೃಷ್ಟಿ, ಲಯ** ಪದಗಳು **ಉತ್ಪಾದ, ವ್ಯಯ** ಶಬ್ದಗಳಿಗೆ ಸಮಾನಾರ್ಥಕಗಳೆಂದು ಭಾವಿಸಿ ಗೊಂದಲ ಮಾಡಿಕೊಳ್ಳಬಾರದು. ಜೈನಾಗಮದಲ್ಲಿ **ಸೃಷ್ಟಿ, ಲಯ** ಪದಗಳ ಅರ್ಥವೇ ಬೇರೆ, **ಉತ್ಪಾದ, ವ್ಯಯ** ಪದಗಳ ಅರ್ಥವೇ ಬೇರೆ ಇರುತ್ತದೆ)

ಮೇಲಿನ ಸೂತ್ರಗಳಲ್ಲಿ ತಿಳಿಸಿರುವಂತೆ ಜೀವವು ಒಂದು **ದ್ರವ್ಯ**ವಾಗಿದೆ. (ಸಾಮಾನ್ಯ ವ್ಯಾವಹಾರಿಕ ಅರ್ಥದಲ್ಲಿ **ದ್ರವ್ಯ** ಎಂದರೆ **ಮೂಲವಸ್ತು** ಎನ್ನಬಹುದಾಗಿದೆ). **ದ್ರವ್ಯ**ದ ಸ್ವಭಾವವು **'ಉತ್ಪಾದ, ವ್ಯಯ, ಧ್ರೌವ್ಯ'** ಸಹಿತವಾಗಿದೆ. ಜೀವದ್ರವ್ಯದ ಅಥವಾ ಯಾವುದೇ ದ್ರವ್ಯದ (ದ್ರವ್ಯಗಳು ಆರು ಸಂಖ್ಯೆಯಲ್ಲಿವೆ) ಈ **'ಉತ್ಪಾದ, ವ್ಯಯ, ಧ್ರೌವ್ಯ'** ಸ್ವಭಾವಕ್ಕೆ **'ಅವಸ್ಥೆ'** ಅಥವಾ **'ಪರ್ಯಾಯ'** ಎನ್ನುತ್ತಾರೆ. ಉದಾಹರಣೆಯ ಮೂಲಕ ವಿವರಿಸುವುದಾದರೆ, ಒಂದು ಸಂಸಾರಿ ಜೀವವು (ಎಂದರೆ ಸಂಸಾರಿ ಜೀವದ್ರವ್ಯವು) ಈಗ ಮನುಷ್ಯ **ಅವಸ್ಥೆ**ಯಲ್ಲಿದೆ ಎಂದು ಭಾವಿಸೋಣ. ಅದು **ಆಯುಕರ್ಮ** ಮುಗಿಯುವವರೆಗೆ **ಮನುಷ್ಯ ಅವಸ್ಥೆ** ಅಥವಾ **ಮನುಷ್ಯ ಪರ್ಯಾಯ**ದಲ್ಲಿ ಸ್ಥಿತವಾಗಿರುತ್ತದೆ. ಆಯುಕರ್ಮ ಮುಗಿದ ನಂತರ ಮನುಷ್ಯ ಪರ್ಯಾಯದಲ್ಲಿ ಹಾನಿ ಉಂಟಾಗುತ್ತದೆ. ಇದಕ್ಕೆ **'ವ್ಯಯ'** ಎನ್ನುವರು. ಮನುಷ್ಯ ಪರ್ಯಾಯ ನಷ್ಟವಾದ ನಂತರ, ಆ ಜೀವನು ಬೇರೆ ಗತಿಯಲ್ಲಿ ಅಂದರೆ ಆ ಜೀವನ ಕರ್ಮಕ್ಕನುಗುಣವಾಗಿ ಪುನಃ ಮನುಷ್ಯಗತಿಯಲ್ಲಿಯೋ ಇಲ್ಲವೆ ದೇವ, ತಿರ್ಯಕ್ ಅಥವಾ ನಾರಕಗತಿಯಲ್ಲಿಯೋ ಇಲ್ಲವೇ ನಿಗೋದದಲ್ಲಿಯೋ ಹುಟ್ಟಬಹುದು. ಅಂದರೆ, ಆ ಜೀವದ ಹಿಂದಿನ ಮನುಷ್ಯ ಪರ್ಯಾಯ ನಷ್ಟವಾಗಿ, ಹೊಸ ಪರ್ಯಾಯದಲ್ಲಿ ಪ್ರಕಟವಾಗುತ್ತದೆ. ಈ ಹೊಸ ಪರ್ಯಾಯಕ್ಕೆ **'ಉತ್ಪಾದ'** ಎನ್ನುವರು. ಈ ಹಿಂದೆ ಮನುಷ್ಯ ಪರ್ಯಾಯದಲ್ಲಿ ಇದ್ದ ಜೀವವೇ ಮುಂದಿನ ಪರ್ಯಾಯದಲ್ಲಿಯೂ ಇರುತ್ತದೆ. ಇಲ್ಲಿ ಜೀವವು **ಧ್ರುವತತ್ತ್ವ**ವಾಯಿತು.

ಈಗ **ಮುಕ್ತಜೀವ**ವಾದ ಸಿದ್ಧಪರಮೇಷ್ಠಿಗಳ ಬಗೆಗೆ ತಿಳಿಯೋಣ. ಮುಕ್ತಜೀವನೂ ಅಂದರೆ ಸಿದ್ಧಪರಮೇಷ್ಠಿಗಳ ಜೀವವೂ ಒಂದು ದ್ರವ್ಯವಾಗಿದೆ ಮತ್ತು **'ಸಿದ್ಧ'** ಅವಸ್ಥೆಯಲ್ಲಿರುವ ಆ ಜೀವವೂ **'ಉತ್ಪಾದ, ವ್ಯಯ, ಧ್ರೌವ್ಯ'**ಗಳಿಂದ ಸಂಯುಕ್ತವಾಗಿದೆ ಎಂದು ಆಚಾರ್ಯರೇ ಹೇಳಿದ್ದಾರೆ.

ಮುಕ್ತ ಜೀವರಲ್ಲಿ ಅನಂತ ಗುಣಗಳಿವೆ. ಆ ಗುಣಗಳಿಗೆ ಅನಂತ ಪರ್ಯಾಯಗಳಿವೆ. ಪರ್ಯಾಯಾಗಳು ನಿರಂತರ ಪರಿಣಮನಶೀಲವಾಗಿರುತ್ತದೆ. ಅಂದರೆ, ಮುಕ್ತ ಜೀವ **ಧ್ರುವತತ್ತ್ವ**ವಾದರೆ, ಅವರಲ್ಲಿ ನಡೆಯುವ ಶುದ್ಧಪರ್ಯಾಯಗಳು **ಉತ್ಪಾದ** ಹಾಗು **ವ್ಯಯ** ರೂಪದಿಂದ ಪರಿಣಮಿಸುತ್ತಿರುತ್ತವೆ. ಈ ಸಿದ್ಧತ್ವ ಎಂದೂ ನಾಶವಾಗದಿರುವುದರಿಂದ ಅವರು **ನಿತ್ಯರ್** ಆಗಿದ್ದಾರೆ.

ಶುದ್ಧಾತ್ಮನು **'ನಿತ್ಯ'**ವಾಗಿರುವುದಕ್ಕೆ ಎರಡು ಕಾರಣಗಳಿವೆ: (೧) **'ಸಿದ್ಧ'** ಪರ್ಯಾಯವು **ಸ್ವಾಭಾವಿಕ** ಪರ್ಯಾಯವಾಗಿದೆ. (೨) ಹಾಗೂ ಅದು **ಅನೈಮಿತ್ತಿಕ**ವಾಗಿದೆ. ಅಂದರೆ, ಈ ಸಿದ್ಧ ಪರ್ಯಾಯ ಉತ್ಪನ್ನವಾಗುವುದಕ್ಕೆ ಅನ್ಯ ಯಾವ ಬಾಹ್ಯ ನಿಮಿತ್ತಗಳು ಅವಶ್ಯಕವಿರುವುದಿಲ್ಲ. ಉದಾ: ಮನುಷ್ಯ ಪರ್ಯಾಯ ಉತ್ಪಾದವಾಗಬೇಕಾದರೆ, ಗತಿನಾಮಕರ್ಮ, ಆಯುಕರ್ಮ ಮತ್ತು ಇತರೆ ನಾಮಕರ್ಮಗಳ ಉದಯ ಬೇಕಾಗುತ್ತದೆ. ಆದರೆ ಸಿದ್ಧ ಪರ್ಯಾಯ ಪ್ರಾಪ್ತಿಗೆ ಈ ಯಾವ ಅನ್ಯನಿಮಿತ್ತಗಳು ಅವಶ್ಯವಿರುವುದಿಲ್ಲ. ಸಿದ್ಧ ಪರ್ಯಾಯದಲ್ಲಿ ಸ್ವನಿಮಿತ್ತಕ ಉತ್ಪಾದ-ವ್ಯಯಗಳು ಆಗುತ್ತಿರುತ್ತವೆ (ತತ್ತ್ವಾರ್ಥ ಸೂತ್ರ, ೫-೭; ಸರ್ವಾರ್ಥಸಿದ್ಧಿ ಟೀಕೆ ಸಂ. ೫೭೪). ಹೀಗೆ, ಸಿದ್ಧಪರಮೇಷ್ಠಿಗಳಲ್ಲಿ ಸ್ವಾಭಾವಿಕವಾಗಿ ಉತ್ಪಾದ-ವ್ಯಯಗಳು ಪ್ರತಿಸಮಯ ನಿರಂತರವಾಗಿ ನಡೆಯುತ್ತಿದ್ದರೂ, ಈ ಪರ್ಯಾಯಗಳಲ್ಲಿ ಅಥವಾ ಅವಸ್ಥೆಗಳಲ್ಲಿ, ಯಾವ ಬದಲಾವಣೆಗಳೂ ಆಗುತ್ತಿರುವುದಿಲ್ಲ (ಎಂದರೆ ಪರ್ಯಾಯದ ಸ್ವರೂಪ ಬದಲಾಗುವುದಿಲ್ಲ. ಅದು ಸಿದ್ಧಪರ್ಯಾಯವೇ ಆಗಿರುತ್ತದೆ) ಎನ್ನುವುದನ್ನು ಈಗಾಗಲೇ ತಿಳಿದಾಗಿದೆ. ಅಂದರೆ, ಶುದ್ಧ ಜೀವಾತ್ಮನ ಸ್ವಾಭಾವಿಕ ಗುಣಗಳಾದ ಅನಂತ ಚತುಷ್ಟಯಗಳಾದ ಸಮ್ಯಕ್ತ್ವ (ಅನಂತ ಸುಖ), ಅನಂತ ಜ್ಞಾನ, ಅನಂತ ದರ್ಶನ, ಅನಂತ ವೀರ್ಯ (ಅನಂತ ಶಕ್ತಿ) ಹಾಗೂ ಸೂಕ್ಷ್ಮತ್ವ, ಅಗುರುಲಘುತ್ವ, ಅವಗಾಹನತ್ವ ಮತ್ತು ಅವ್ಯಾಬಾಧತ್ವ, ಈ ಎಂಟು ಮೂಲಗುಣಗಳ ಪರ್ಯಾಯಗಳೇ ಮುಕ್ತಜೀವನಲ್ಲಿ ಪ್ರತಿಸಮಯ **ಉತ್ಪಾದ-ವ್ಯಯ** ರೂಪದಲ್ಲಿ ನಿರಂತರವಾಗಿ ಪರಿಣಮಿಸುತ್ತಿರುತ್ತವೆ.

ಅನಂತರ್: ಈ ಲಕ್ಷಣವು ಮೇಲೆ ತಿಳಿಸಿರುವ ಒಂದನೆಯ **ವಿಶೇಷಭೇದ ನಯದ ದೃಷ್ಟಿಯಿಂದ** ಸಿದ್ಧಪರಮೇಷ್ಠಿಗಳ ವರ್ಣನೆಯನ್ನು ಮಾಡಿರುತ್ತದೆ. ಗತಿ ರಹಿತ, ಇಂದ್ರಿಯ ರಹಿತ, ಗುಣಸ್ಥಾನಾತೀತ, ಅನಂತ ಜ್ಞಾನ, ಅನಂತ ಆನಂದ, ಅನಂತ ಗುಣಗಳಿಂದ ಇರುವವರು ಅನಂತರ್. ಇವುಗಳು ಜೀವದ ಯಥಾರ್ಥವಾದ ಗುಣಗಳಾಗಿರುತ್ತವೆ. ಈ ಅನಂತ ಗುಣಗಳಿಂದ ಕೂಡಿರುವವರು **'ಸಿದ್ಧಪರಮೇಷ್ಠಿಗಳು'**.

ತ್ರಿಲೋಕೈಕಚೂಡಾಮಣಿಗಳ್: ಇದಕ್ಕೆ ಸಂವಾದಿಯಾದ **ನಿಯಮಸಾರ** ಮತ್ತು **ಬೃಹದ್ದ್ರವ್ಯಸಂಗ್ರಹ**ದ ಗಾಥೆಯ ಭಾಗವು ಹೀಗಿದೆ:

.... ಲೋಯಗ್ಗಠಿದಾ ... (ನಿಯಮಸಾರ ೪-೭೨; ಬೃಹದ್ದ್ರವ್ಯಸಂಗ್ರಹ, ೧-೧೪)

ಅರ್ಥ: ... [ಆ ಸಿದ್ಧಭಗವಂತರು] ಲೋಕದ ಅಗ್ರಭಾಗದಲ್ಲಿ ಸ್ಥಿರರಿದ್ದಾರೆ ...

ಮೂರೂ ಲೋಕಗಳಿಗೂ ಒಂದೇ ಆದ [ಲೋಕಾಗ್ರದಲ್ಲಿರುವ] ಸಿದ್ಧಲೋಕದಲ್ಲಿ, ಶಿರದಲ್ಲಿ ಧರಿಸಿರುವ ರತ್ನದಂತೆ, ಸಿದ್ಧಪರಮೇಷ್ಠಿಗಳು ವಿರಾಜಮಾನರಾಗಿರುತ್ತಾರೆ. ಸಿದ್ಧಲೋಕವೆಂದರೆ ಎಂಟನೆಯ ಪೃಥ್ವಿಯಾದ ಈಷತ್ಪ್ರಾಗ್ಭಾರ ಪೃಥ್ವಿಯಿಂದ ಸುಮಾರು ೭೦೫೦ ಧನುಷ್ ಪ್ರಮಾಣ ಎತ್ತರದಲ್ಲಿ ಸಿದ್ಧರ ಆವಾಸಸ್ಥಾನವಾಗಿರುತ್ತದೆ. ಇದನ್ನು ಸಿದ್ಧಲೋಕ ಎನ್ನುತ್ತಾರೆ. ಇದು ಲೋಕದ ಅಗ್ರಭಾಗ ಅಥವಾ ತುತ್ತತುದಿಯಾಗಿರುವ **ತನುವಾತಾವಲಯ**ವಾಗಿರುತ್ತದೆ. ಎಂಟು ಕರ್ಮಗಳಿಂದ ಸಂಪೂರ್ಣ ಮುಕ್ತರಾಗಿ, ಎಂಟು ಗುಣಗಳ ಸಹಿತರಾದ ಮುಕ್ತ ಜೀವಗಳ ಆತ್ಮಪ್ರದೇಶಗಳು ನೇರವಾಗಿ ಊರ್ಧ್ವಗಮನವನ್ನು ಮಾಡಿ ಲೋಕದ ಅಂತಿಮ ಭಾಗವಾದ ಈ ಸಿದ್ಧಲೋಕದಲ್ಲಿ ಅಂದರೆ **ತನುವಾತಾವಲಯ**ದ ತುದಿಗೆ ಅಂಟಿಕೊಂಡಂತೆ ವಿರಾಜಮಾನವಾಗುತ್ತವೆ ಅಥವಾ ಸ್ಥಿತವಾಗುತ್ತವೆ.

ಸ್ವಕೀಯಪ್ರಭುತೆಯನ್: ಕರ್ಮಗಳ ಅಧೀನತೆಯಿಂದ ಪಾರಾಗಿ, ಆತ್ಮನ ನಿಜ ಸ್ವರೂಪದಿಂದ ಪ್ರಕಾಶಿಸಲ್ಪಡುವ ಮೋಕ್ಷಪದ.

ಸ್ರಗ್ಧರೆ **ಮೂವತ್ತಾಱುಂ ಗುಣಂಗಳ್ತಮಗಮರ್ದಿರೆ ಸಂದೈದುಮಾಚಾರದೊಳ್ಸ**
ದ್ಭಾವಂ ಕೈಗಣ್ಮೆ ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ
ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರಿನ್ನೆಮ್ಮನೇನೋ
ದಾವಂ ತಳ್ತಟ್ವದಂತೋಸರಿಸಿ ಕಳೆಗೆ ಸಂಸಾರಕಾಂತಾರದಿಂದಂ ॥ **೧-೩**

ಪದ ವಿಭಾಗ: ಮೂವತ್ತಾಱುಂ-ಗುಣಂಗಳ್ತಮಗಮರ್ದಿರೆ, ಸಂದೈದುಮಾಚಾರದೊಳ್,
ಸದ್ಭಾವಂ-ಕೈಗಣ್ಮೆ, ಶಿಷ್ಯಾಚರಣ-ವಿಧಿಗಳಂ, ತಿರ್ದಿ, ಕಾರುಣ್ಯದಿಂದಂ,
ಸಾವದ್ಯಂ-ಸಾರದಂತಾಗಿರೆ, ನಿಯಮಿಸುವಾಚಾರ್ಯರ್, ಇನ್ನು, ಎಮ್ಮನ್, ಏನೋದಾವಂ,
ತಳ್ತಟ್ವದಂತೋಸರಿಸಿ-ಕಳೆಗೆ-ಸಂಸಾರ-ಕಾಂತಾರದಿಂದಂ ॥ ೧-೩

ಅನ್ವಯಾರ್ಥ: **(ಮೂವತ್ತಾಱುಂಗುಣಂಗಳ್ತಮಗಮರ್ದಿರೆ=ಮೂವತ್ತಾಱುಂ-ಗುಣಂಗಳ್+ತಮಗೆ+ಅಮರ್ದಿರೆ)** ಮೂವತ್ತಾರು ಗುಣಗಳು ತಮಗೆ ಗಾಢವಾಗಿ ಕೂಡಿಕೊಂಡಿರಲು, **(ಸಂದೈದುಮಾಚಾರದೊಳ್ಸದ್ಭಾವಂ=ಸಂದ+ಐದುಂ+ಆಚಾರದೊಳ್ ಸದ್ಭಾವಂ+ಕೈಗಣ್ಮೆ?)** ಪಾಲಿಸುವ ಐದು ಆಚಾರಗಳಲ್ಲಿ ಯಥಾರ್ಥ ಭಾವನೆಯು [ಶ್ರದ್ಧೆಯು] ಪ್ರಕಟವಾಗಿರಲು, **(ಶಿಷ್ಯಾಚರಣವಿಧಿಗಳಂ=ಶಿಷ್ಯ+ಆಚರಣ-ವಿಧಿಗಳಂ)** ಶಿಷ್ಯರ ವ್ರತಾಚರಣೆಯ ಕ್ರಮಗಳನ್ನು **(ಕಾರುಣ್ಯದಿಂದಂ)** ಕರುಣೆಯಿಂದ **(ತಿರ್ದಿ)** ತಿದ್ದಿ [ಅಭ್ಯಾಸಮಾಡಿಸಿ/ಶಿಕ್ಷಣವನ್ನು ನೀಡಿ], **(ಸಾವದ್ಯಂ)** ದೋಷಗಳು [ಕಳಂಕಗಳು] **(ಸಾರದಂತಾಗಿರೆ)** ಸಮೀಪಕ್ಕೆ ಬರದಂತಾಗಿರಲು, **(ನಿಯಮಿಸುವಾಚಾರ್ಯರ್=ನಿಯಮಿಸುವ+ಆಚಾರ್ಯರ್)** [ಪ್ರಾಯಶ್ಚಿತ್ತರೂಪವಾಗಿ] ನಿಯಮಗಳನ್ನು ನೀಡುವ ಆಚಾರ್ಯರು, **(ಇನ್ನು)** ಇನ್ನು [ಮುಂದೆ] **(ಎಮ್ಮನ್)** ನಮ್ಮನ್ನು **(ಸಂಸಾರ ಕಾಂತಾರದಿಂದಂ)** ಸಂಸಾರವೆಂಬ ಅಡವಿಯ, **(ಏನೋದಾವಂ=ಏನೋ[<ಏನಸ್]+ದಾವಂ)** ಪಾಪವೆಂಬ ಕಾಡ್ಗಿಚ್ಚು **(ತಳ್ತಟ್ವದಂತೋಸರಿಸಿ=ತಳ್ತು+ಅಟ್ವದಂತೆ+ ಓಸರಿಸಿ)** ವ್ಯಾಪಿಸಿ ದಹಿಸದಂತೆ ಹಿಮ್ಮೆಟ್ಟಿಸಿ **(ಕಳೆಗೆ)** ಹೋಗಲಾಡಿಸಲಿ ॥ ೧-೩

ಈ ವೃತ್ತಪದ್ಯದಲ್ಲಿ ಕವಿಯು ಪಂಚಪರಮೇಷ್ಠಿಗಳಲ್ಲಿ ಮೂರನೆಯವರಾದ ಆಚಾರ್ಯರನ್ನು ಸ್ತುತಿಸಿದ್ದಾನೆ.

ಭಾವಾರ್ಥ: ಮೂವತ್ತಾರು ಮೂಲಗುಣಗಳಿಂದ ಕೂಡಿದ ಆಚಾರ್ಯರು, ಅವರು ಪಾಲಿಸುವ ಪಂಚಾಚಾರಗಳಲ್ಲಿ ಶ್ರದ್ಧೆಯುಳ್ಳವರಾಗಿ, ಶಿಷ್ಯರ ವ್ರತಾಚರಣೆಗಳಲ್ಲಿ ವಿಧಿಗಳು ತಪ್ಪದಂತೆ ತಿದ್ದಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಲು, ಶಿಷ್ಯರಲ್ಲಿ ದೋಷರಹಿತ ಚಾರಿತ್ರ ಪಾಲನೆಯಾಗುತ್ತದೆ. ಶಿಷ್ಯರ ಆಚರಣೆಯಲ್ಲಿ ಆಕಸ್ಮಿಕವಾಗಿ ಅತಿಚಾರವುಂಟಾದರೆ ಪ್ರಾಯಶ್ಚಿತ್ತಗಳನ್ನು ನೀಡುವ ಅಚಾರ್ಯರು, ನಾವು ಸಂಸಾರವೆಂಬ ಅಡವಿಯಲ್ಲಿ ಸಿಲುಕಿಕೊಂಡು ಪಾಪವೆಂಬ ಕಾಡ್ಗಿಚ್ಚಿನಲ್ಲಿ ದಹಿಸಿಹೋಗದಂತೆ ಕಾಪಾಡಲಿ ಎಂದು ಕವಿಯು ಪ್ರಾರ್ಥಿಸಿದ್ದಾನೆ. ೧-೩

ವಿಶೇಷ ವಿವರಣೆ: ಮಂಗಳಾಚರಣೆಯ ಈ ಮೂರನೆಯ ವೃತ್ತಪದ್ಯದಲ್ಲಿ ಪಂಚಪರಮೇಷ್ಠಿಗಳಲ್ಲಿ ಮೂರನೆಯವರಾದ **'ಆಚಾರ್ಯಪರಮೇಷ್ಠಿ'**ಗಳನ್ನು ಕವಿಯು ಸ್ತುತಿಸಿದ್ದಾನೆ.

'ಆಚಾರ್ಯರು' ಎಂದರೆ ಯಾರು? ಆಚಾರ್ಯರು ಮೂಲತಃ **ಸಾಧು**ಗಳೇ ಆಗಿರುತ್ತಾರೆ. ಸಾಧುಸಂಘ ಅಥವಾ ಮುನಿಸಂಘದಲ್ಲಿರುವ ಯಾವ ಒಬ್ಬ ಸಾಧುವು (ಮುನಿಯು) ವಿಶೇಷವಾದ ಗುಣಗಳ ವ್ಯಕ್ತಿತ್ವವನ್ನು ಹೊಂದಿರುತ್ತಾರೆ, ಅಂದರೆ, ಭೌಗೋಳಿಕ ಜ್ಞಾನ, ಪರಿಸರಜ್ಞಾನ, ಸಾಮಾಜಿಕಪರಿಸ್ಥಿತಿಯ ಅರಿವು, ಸಂಘಟನಾಚಾತುರ್ಯ, ಇಡೀ ಸಂಘದ ವ್ಯವಸ್ಥೆಯನ್ನು ಅಂದರೆ ಆಹಾರ-ವಿಹಾರಗಳನ್ನು ನಿರ್ವಹಿಸುವ, ನಿರ್ದೇಶಿಸುವ, ಇತ್ಯಾದಿ ಸಾಮರ್ಥ್ಯಗಳನ್ನುಳ್ಳವರೂ ಮತ್ತು ಯಾರಲ್ಲಿ ಬಾಹ್ಯ (ಶಾರೀರಿಕ) ಮತ್ತು ಅಭ್ಯಂತರ ತಪವನ್ನು ಆಚರಿಸುವ ಶಕ್ತಿಯು ಅಧಿಕವಾಗಿರುವುದಲ್ಲದೆ, ಪಂಚಾಚಾರಗಳನ್ನು ಮತ್ತು ಆರು ಅವಶ್ಯಕ ಕ್ರಿಯೆಗಳನ್ನು ನಿರ್ದೋಷವಾಗಿ, ಸಮಗ್ರವಾಗಿ, ನಿರಂತರವಾಗಿ ಪಾಲಿಸುವುದರಲ್ಲಿ ಮತ್ತು ಅವುಗಳಲ್ಲಿ ಮಗ್ನರಾಗಿರುವುದರಲ್ಲಿ ಅತ್ಯಂತ ಸಮರ್ಥರಾಗಿರುವವರೂ, ಧೀರರೂ, ಗುಣಗಂಭೀರರೂ (ಪರಮ ವೀತರಾಗತೆ, ಶಾಂತತೆ) ಆಗಿರುವಂತಹ ವಿಶೇಷ ಗುಣಗಳುಳ್ಳವರು ಆಚಾರ್ಯಪದವನ್ನು ಸ್ವೀಕರಿಸುತ್ತಾರೆ. ಅಂದರೆ, ಸಾಮಾನ್ಯ ಅರ್ಥದಲ್ಲಿ **'ಆಚಾರ್ಯರು'** ಎಂದರೆ **'ಮುನಿಸಂಘ (ಸಾಧುಸಂಘ)'**ದ **'ನಾಯಕ'**ರಾಗಿರುತ್ತಾರೆ. ಹಾಗೆಯೇ ಮುನಿಸಂಘದಲ್ಲಿ, ಆಗಮೋಕ್ತವಾದ ಮುನಿಧರ್ಮದ ನಿಯಮಗಳು, ಪಂಚಾಚಾರಗಳು ಇತ್ಯಾದಿಯಾಗಿ ಶಿಸ್ತುಬದ್ಧವಾಗಿ ಪರಿಪಾಲನೆಯಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯು ಆಚಾರ್ಯರದ್ದಾಗಿರುತ್ತದೆ. ಸಂಘದಲ್ಲಿರುವ ಮುನಿಗಳು ತಮ್ಮಿಂದ ಘಟಿಸಿರುವ ಪ್ರಮಾದಗಳನ್ನು/ದೋಷಗಳನ್ನು ಆಚಾರ್ಯರ ಮುಂದೆ ಸ್ವಯಂ ನಿವೇದಿಸಿಕೊಂಡು ಪ್ರಾಯಶ್ಚಿತ್ತವನ್ನು ಕೇಳಿಕೊಳ್ಳಬೇಕಾಗುತ್ತದೆ. ಅಲ್ಲದೆ, ಆಚಾರ್ಯರು ಲೋಕಕಾರುಣ್ಯದಿಂದ ಶಿಷ್ಯರಿಗೆ ದೀಕ್ಷೆ ಹಾಗೂ ಶಿಕ್ಷಣ ಕೊಡುವವರಾಗಿರುತ್ತಾರೆ.

ಆಚಾರ್ಯ ಪರಮೇಷ್ಠಿಗಳು, **ಸಾಧುಪರಮೇಷ್ಠಿಗಳ ೨೮ ಮೂಲಗುಣಗಳನ್ನು ಪಾಲಿಸುವುದರೊಂದಿಗೆ,** ಈ ಕೆಳಗಿನಂತಿರುವ ಮೂವತ್ತಾರು ಮೂಲಗುಣಗಳನ್ನು ಕೂಡಿದವರಾಗಿರುತ್ತಾರೆ:

೧.	ತಪಗಳು	೧೨
೨.	ಆವಶ್ಯಕ ಕ್ರಿಯೆಗಳು	೬
೩.	ಆಚಾರಗಳು	೫
೪.	ದಶಧರ್ಮಗಳು	೧೦
೫.	ಗುಪ್ತಿಗಳು	೩
	ಆಚಾರ್ಯಪರಮೇಷ್ಠಿಗಳ ಮೂಲಗುಣಗಳು	**೩೬**

ಆಚಾರ್ಯ ಪರಮೇಷ್ಠಿಗಳ ಗುಣಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ಮೂವತ್ತಾರು (೩೬)- ಆಚಾರ್ಯ ಪರಮೇಷ್ಠಿಗಳ ಮೂಲಗುಣ'**ಗಳನ್ನು ನೋಡಿರಿ.

ಶ್ರೀ ಭಗವತ್ ಕುಂದಕುಂದಾಚಾರ್ಯರು **ನಿಯಮಸಾರ** ಗ್ರಂಥದಲ್ಲಿ ಆಚಾರ್ಯರ ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ:

ಪಂಚಾಚಾರಸಮಗ್ಗಾ ಪಂಚಿಂದಿಯದಂತಿದಪ್ಪಣಿದ್ದಲಣಾ ।
ಧೀರಾ ಗುಣಗಂಭೀರಾ ಆಯರಿಯಾ ಏರಿಸಾ ಹೋಂತಿ ॥ (ನಿಯಮಸಾರ, ೪-೭೩)

ಅರ್ಥ: ಪಂಚಾಚಾರಗಳಿಂದ ಪರಿಪೂರ್ಣರು, ಪಂಚೇಂದ್ರಿಯರೂಪಿ ಹಸ್ತಿಯ ಮದವನ್ನು ಮರ್ದಿಸುವಂತಹವರು, ಧೀರರು ಮತ್ತು ಗುಣಗಂಭೀರರು ಆದಂತಹವರು ಆಚಾರ್ಯರು ಆಗಿರುತ್ತಾರೆ.

ನಿಯಮಿಸುವಾಚಾರ್ಯರ್: ಈ ಮೇಲೆ ತಿಳಿಸಿದಂತೆ, ಸಂಘದಲ್ಲಿರುವ ಮುನಿಗಳು ತಮ್ಮಿಂದ ಘಟಿಸಿರುವ ಪ್ರಮಾದಗಳನ್ನು/ದೋಷಗಳನ್ನು ಆಚಾರ್ಯರ ಮುಂದೆ ಸ್ವಯಂ ನಿವೇದಿಸಿಕೊಂಡು ಪ್ರಾಯಶ್ಚಿತ್ತವನ್ನು ಕೇಳಿಕೊಂಡಾಗ ಆಚಾರ್ಯರು ಯಾವ ದೋಷವಿದೆಯೋ ಅದಕ್ಕನುಸಾರವಾಗಿ ಜಪ, ತಪ, ಉಪವಾಸಾದಿ ಪ್ರಾಯಶ್ಚಿತ್ತವನ್ನು ವಿಧಿಸುತ್ತಾರೆ. ಆಚಾರ್ಯರು ಮುನಿಸಂಘದಲ್ಲಿ ಈ ರೀತಿಯ ಪ್ರಾಯಶ್ಚಿತ್ತ ವಿಧಿಸುವುದನ್ನು ಪಂಪನು ಈ ಪದ್ಯದಲ್ಲಿ **'ನಿಯಮಿಸುವಾಚಾರ್ಯರ್'** ಎಂದು ಹೇಳುತ್ತಾನೆ.

ಏನೋದಾವಂ, ಸಂಸಾರಕಾಂತಾರ: ಇಲ್ಲಿ ಕವಿಯು ಕರ್ಮಗಳನ್ನು ಕಾಡ್ಗಿಚ್ಚಿಗೂ ಮತ್ತು ಸಂಸಾರವನ್ನು ಅರಣ್ಯಕ್ಕೂ (ಅಥವಾ ಸಾಗರಕ್ಕೂ) ಹೋಲಿಸಿರುತ್ತಾನೆ. **'ಸಂಸಾರ'**ವೆಂದರೆ ಜೀವನು ತಾನು ಅರ್ಜಿಸಿದ ಕರ್ಮಗಳಿಗೆ ಅನುಸಾರವಾಗಿ ನಾಲ್ಕೂ ಗತಿಗಳಲ್ಲಿ ಪರಿಭ್ರಮಣೆ ಮಾಡುವ ಹುಟ್ಟು-ಸಾವುಗಳೆಂಬ ಚಕ್ರ.

ಶಾರ್ದೂಲ ವಿಕ್ರೀಡಿತ

ಹೇಯಂಗಳ್ ಖಳಕರ್ಮಬಂಧನಕರಕ್ರೋಧಾದಿಗಳ್ ಮತ್ತುಪಾ
ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ
ಪಾಯಂಗಳ್ಗಡಿವೆಂದು[1] ಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪುಪಾ
ಧ್ಯಾಯರ್ಜ್ಯೋತಿಸುಗೆಮ್ಮ ಚಿತ್ತಗೃಹದೊಳ್ರತ್ನತ್ರಯಜ್ಯೋತಿಯಂ ॥ ೧–೪

ಪದ ವಿಭಾಗ: ಹೇಯಂಗಳ್–ಖಳ–ಕರ್ಮ–ಬಂಧನಕರ–ಕ್ರೋಧಾದಿಗಳ್, ಮತ್ತು,
ಉಪಾದೇಯಂಗಳ್–ದುರಿತೇಂಧನ, ಅನಳ–ಲಸತ್, ರತ್ನತ್ರಯಂಗಳ್,
ಸುಖೋಪಾಯಂಗಳ್ಗಡಿವೆಂದು, ಭವ್ಯ–ಜನಮಂ, ಕಣ್ಣೂಱಿ, ಕಲ್ಪಿಪ್ಪ,
ಉಪಾಧ್ಯಾಯರ್, ಜ್ಯೋತಿಸುಗೆ, ಎಮ್ಮ, ಚಿತ್ತಗೃಹದೊಳ್, ರತ್ನತ್ರಯ–ಜ್ಯೋತಿಯಂ ॥ ೧–೪

ಅನ್ವಯಾರ್ಥ: **(ಖಳಕರ್ಮ)** ಆತ್ಮನಿಗೆ ಅಹಿತವಾದ ಕರ್ಮಗಳ [ಪಾಪ ಕರ್ಮಗಳ] **(ಬಂಧನಕರ)** ಬಂಧಕ್ಕೆ ಕಾರಣಗಳಾದ **(ಕ್ರೋಧಾದಿಗಳ್)** ಕ್ರೋಧ ಮೊದಲಾದವು **(ಹೇಯಂಗಳ್)** ತ್ಯಜಿಸಲು ಯೋಗ್ಯವಾದುವು. **(ಮತ್ತು)** ಅಲ್ಲದೆ, **(ದುರಿತೇಂಧನ=ದುರಿತ+ಇಂಧನ)** ಪಾಪವೆಂಬ ಕಟ್ಟಿಗೆಯನ್ನು [ಸುಡುವ] **(ಅನಳಲಸದ್ರತ್ನತ್ರಯಂಗಳ್=ಅನಳ–ಲಸತ್+ ರತ್ನತ್ರಯಂಗಳ್)** ಅಗ್ನಿಯಂತೆ ಪ್ರಕಾಶಿಸುವ ರತ್ನತ್ರಯಗಳು **(ಉಪಾದೇಯಂಗಳ್)** ಸ್ವೀಕಾರಾರ್ಹವಾದುವು. **(ಸುಖೋಪಾಯಂಗಳ್ಗಡಿವೆಂದು=ಸುಖ+ಉಪಾಯಂಗಳ್+ಗಡಿಂ[=ಗಡ+ಇಂ]+ಎಂದು)** [ಹೇಗೆಂದರೆ ರತ್ನತ್ರಯಗಳು] ಶಾಶ್ವತ ಸುಖವನ್ನು ಹೊಂದುವುದಕ್ಕಿರುವ ಉಪಾಯ ಅಥವಾ ಯುಕ್ತಿಗಳು, ಇವುಗಳೇ! ಎಂಬುದಾಗಿ, **(ಭವ್ಯ ಜನಮಂ)** ಭವ್ಯಜನರನ್ನು [ಮುಮುಕ್ಷುಗಳ ಸಮೂಹವನ್ನು] **(ಕಣ್ಣೂಱಿ ಕಲ್ಪಿಪ್ಪ)** ಗಮನದಲ್ಲಿರಿಸಿಕೊಂಡು [ಕರುಣೆಯಿಟ್ಟು(?)] ಬೋಧಿಸುವ **(ಉಪಾಧ್ಯಾಯರ್)** ಉಪಾಧ್ಯಾಯರು, **(ಎಮ್ಮ ಚಿತ್ತಗೃಹದೊಳ್)** ನಮ್ಮ ಮನಸ್ಸೆಂಬ ಮನೆಯಲ್ಲಿ **(ರತ್ನತ್ರಯ ಜ್ಯೋತಿಯಂ)** [ಸಮ್ಯಗ್ದರ್ಶನಜ್ಞಾನಚಾರಿತ್ರಗಳೆಂಬ] ರತ್ನತ್ರಯಗಳ ಬೆಳಕನ್ನು **(ಜ್ಯೋತಿಸುಗೆ)** ಬೆಳಗಿಸಲಿ ॥ ೧–೪

ಈ ವೃತ್ತಪದ್ಯದಲ್ಲಿ ಕವಿಯು ಪಂಚಪರಮೇಷ್ಠಿಗಳಲ್ಲಿ ನಾಲ್ಕನೆಯವರಾದ ಉಪಾಧ್ಯಾಯ ಪರಮೇಷ್ಠಿಗಳನ್ನು ಸ್ತುತಿಸಿದ್ದಾನೆ.

ಭಾವಾರ್ಥ: ಉಪಾಧ್ಯಾಯರು ನಮಗೆ, ಜೀವನಿಗೆ ಯಾವುವು ಹೇಯ, ಜ್ಞೇಯ ಮತ್ತು ಉಪಾದೇಯವಾದುವುಗಳು ಎಂಬ ಬಗ್ಗೆ ತಿಳಿವಳಿಕೆಯನ್ನು ನೀಡುವರಲ್ಲದೆ, ಪಾಪ ಬಂಧಕ್ಕೆ ಕಾರಣಗಳಾದ ಕ್ರೋಧಾದಿ ಕಷಾಯಗಳು ಹೇಯವೆಂದೂ, ಪಾಪಕರ್ಮಗಳನ್ನು ಸುಡುವ ರತ್ನತ್ರಯಗಳು ಉಪಾಧೇಯವೆಂದು ಭವ್ಯಜನಗಳಿಗೆ ಬೋಧಿಸುತ್ತಾರೆ. ಇಂತಹ ಉಪಾಧ್ಯಾಯರು ನಮ್ಮ ಮನಸ್ಸೆಂಬ ಮನೆಯಲ್ಲಿ ರತ್ನತ್ರಯವೆಂಬ ಜ್ಯೋತಿಯನ್ನು ಬೆಳಗಿಸಲಿ ಎಂದು ಉಪಾಧ್ಯಾಯ ಪರಮೇಷ್ಠಿಗಳನ್ನು ಕವಿಯು ಸ್ತುತಿಸಿದ್ದಾನೆ. ೧–೪

ವಿಶೇಷ ವಿವರಣೆ: ಪಂಚಪರಮೇಷ್ಠಿಗಳಲ್ಲಿ ನಾಲ್ಕನೆಯವರಾದ '**ಉಪಾಧ್ಯಾಯರು**' ಎಂದರೆ ಮುನಿಸಂಘದಲ್ಲಿ ಯಾರು '**ಪಠನ ಪಾಠನ**' ಕ್ರಿಯೆಗಳನ್ನು ಮಾಡುತ್ತಾರೆಯೋ ಅವರನ್ನು '**ಉಪಾಧ್ಯಾಯರು**' (ಕಲಿತು–ಕಲಿಸುವುದರಲ್ಲಿ ಪರಿಣತರಾಗಿರುವವರು) ಎನ್ನುವರು. ಉಪಾಧ್ಯಾಯ ಪರಮೇಷ್ಠಿಗಳು, **ಸಾಧುಪರಮೇಷ್ಠಿಗಳ ಇಪ್ಪತ್ತೆಂಟು ಮೂಲಗುಣಗಳನ್ನು ಪಾಲಿಸುವುದರೊಂದಿಗೆ,** ಇಪ್ಪತ್ತೈದು ಮೂಲಗುಣಗಳನ್ನು ಹೊಂದಿರುವವರಾಗಿರುತ್ತಾರೆ. ಅಂದರೆ **ದ್ವಾದಶಾಂಗ ಶ್ರುತ** ಮತ್ತು **ಚತುರ್ದಶ ಪೂರ್ವಗಳ** ಪೂರ್ಣ ಜ್ಞಾನವನ್ನು ಹೊಂದಿದವರಾಗಿರುತ್ತಾರೆ. ಆದುದರಿಂದ **ಉಪಾಧ್ಯಾಯ ಪರಮೇಷ್ಠಿ**ಗಳನ್ನು '**ದ್ವಾದಶಾಂಗಶ್ರುತ ಕೇವಲಿಗಳು**' ಅಥವಾ '**ದ್ರವ್ಯಶ್ರುತಕೇವಲಿಗಳು**' ಎಂದು ಕರೆಯುತ್ತಾರೆ. ಈ ಪದ್ಯದಲ್ಲಿ ಉಪಾಧ್ಯಾಯರ ಮೂಲಗುಣಗಳ ಸಂಖ್ಯೆಯನ್ನು ತಿಳಿಸಿರುವುದಿಲ್ಲ. ಶ್ರೀ ಭಗವತ್ ಕುಂದಕುಂದಾಚಾರ್ಯರು **ನಿಯಮಸಾರ** ಗ್ರಂಥದಲ್ಲಿ ಉಪಾಧ್ಯಾಯಪರಮೇಷ್ಠಿಗಳ

---

[1] ಮೂಲಪಾಠ–'ಸುಖೋಪಾಯಂಗಳ್ಗ**ಡಿ**ವೆಂದು', ಕೆಜಿ ಯವರ ಪಾಠ–'ಸುಖೋಪಾಯಂಗಳ್ಗ**ಡ**ವೆಂದು', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. ಆದರೆ, ಮೂಲಪಾಠದಲ್ಲಿರುವ 'ಸುಖೋಪಾಯಂಗಳ್ಗಡಿವೆಂದು' ಪದದ ಅಂತ್ಯದಲ್ಲಿರುವ '[ಳ್ಗಡಿ]**ವೆಂ**ದು' ಎಂದು ಅಚ್ಚಾಗಿರುವುದು **ಅಶುದ್ಧ**ವೆಂದೂ, '[ಳ್ಗಡಿ]**ವೆಂ**ದು' ಎಂಬುದು **ಶುದ್ಧ**ವೆಂದೂ ತೋರಿಸಿ, ಇದನ್ನು ತಿದ್ದಿಕೊಳ್ಳಲು **ಶೋಧನಪತ್ರಿಕೆ**ಯಲ್ಲಿ ಸೂಚಿಸಿರುತ್ತಾರೆ. ಆದರೆ, ಮುಂದೆ ಎಂಟನೆಯ ಆಶ್ವಾಸದ ೩೨ನೆಯ ಕಂದಪದ್ಯದ ಎರಡನೆಯ ಪಾದದಲ್ಲಿ (ಮೂಲ ಕೃತಿಯ ಪುಟ ಸಂ. ೨೦೦) 'ಗಡಿ**ವೆಂ**ದು' ಎಂದೇ ಅಚ್ಚಾಗಿರುತ್ತದೆ. ಸಂಪಾದಕರು ಇದಕ್ಕೆ ಶೋಧನಪತ್ರಿಕೆಯಲ್ಲಿ ಶುದ್ಧ–ಅಶುದ್ಧವನ್ನು ಸೂಚಿಸಿರುವುದಿಲ್ಲ. ಆದುದರಿಂದ, ೮ ನೆಯ ಆಶ್ವಾಸದ ೩೨ನೆಯ ಪದ್ಯದಲ್ಲಿರುವಂತೆಯೇ (೮–೩೨), ಈ ವೃತ್ತಪದ್ಯದಲ್ಲಿಯೂ '[ಳ್ಗಡಿ]ವೆಂದು' ಎಂಬ ರೂಪವನ್ನೇ ಸ್ವೀಕರಿಸಿದೆ.

ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ:

ರಯಣತ್ತಯಸಂಜುತ್ತಾ ಜಿಣಕಹಿಯಪಯತ್ಥದೇಸಯಾ ಸೂರಾ ।
ಣಿಕ್ಕಂಖಭಾವಸಹಿಯಾ ಉವಜ್ಝಾಯಾ ಏರಿಸಾ ಹೋಂತಿ ॥ (ನಿಯಮಸಾರ, ೪-೭೪)

ಅರ್ಥ: ರತ್ನತ್ರಯದಿಂದ ಸಂಯುಕ್ತ, ಜಿನಕಥಿತ (ಜಿನೇಂದ್ರರು ಹೇಳಿರುವ) ಪದಾರ್ಥಗಳ ಶೂರವೀರ ಉಪದೇಶಕ ಮತ್ತು ನಿಃಕಾಂಕ್ಷಭಾವಸಹಿತರಾದಂತಹವರು ಉಪಾಧ್ಯಾಯರುಗಳಾಗಿರುತ್ತಾರೆ.

ರತ್ನತ್ರಯಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ '**ಮೂರು (೩)-ರತ್ನತ್ರಯಗಳು**'ಅನ್ನು, ಕಷಾಯಗಳಿಗೆ ವಿಶಿಷ್ಟ ಸಂಖ್ಯೆ '**ನಾಲ್ಕು (೪)-ಕಷಾಯಗಳು**'ಅನ್ನು ಮತ್ತು ಉಪಾಧ್ಯಾಯರ ಗುಣಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ '**ಇಪ್ಪತ್ತೈದು (೨೫)-ಉಪಾಧ್ಯಾಯ ಪರಮೇಷ್ಠಿಗಳ ಮೂಲಗುಣಗಳು**'ಅನ್ನು ನೋಡಿರಿ.

(೧) ಹೇಯಂಗಳ್ (ತ್ಯಜಿಸತಕ್ಕವು ಅಥವಾ ತ್ಯಜಿಸುವುದಕ್ಕೆ ಯೋಗ್ಯವಾದಂತಹವು), (೨) ಉಪಾದೇಯಂಗಳ್ (ಸ್ವೀಕರಿಸತಕ್ಕವು ಅಥವಾ ಗ್ರಹಿಸುವುದಕ್ಕೆ ಯೋಗ್ಯವಾದಂತಹವು) ಮತ್ತು (೩) ಜ್ಞೇಯಂಗಳ್ (ತಿಳಿಯತಕ್ಕವು ಅಥವಾ ತಿಳಿಯುವುದಕ್ಕೆ ಯೋಗ್ಯವಾದಂತಹವು): ಮೋಕ್ಷಮಾರ್ಗದ ಹಾದಿಯಲ್ಲಿರುವ ಪ್ರತಿಯೊಂದು ಜೀವನು, ಜೈನ ಸಿದ್ಧಾಂತವು ಹೇಳುವ ರತ್ನತ್ರಯಗಳು, ಸಪ್ತತತ್ತ್ವಗಳು, ನವಪದಾರ್ಥಗಳು, ಷಡ್ದ್ರವ್ಯಗಳು, ಪಂಚಾಸ್ತಿಕಾಯಗಳು, ಕಷಾಯಗಳು ಇತ್ಯಾದಿಗಳಲ್ಲಿ, ಯಾವುದು ತ್ಯಜಿಸಲು ಯೋಗ್ಯವಾದುದು, ಯಾವುದು ಸ್ವೀಕರಿಸಲು ಅರ್ಹವಾದುದು ಮತ್ತು ಯಾವುದು ತಿಳಿಯಲು ಅರ್ಹವಾದುದು ಎಂಬುದನ್ನು ಅರಿತು ಅದರಂತೆ ನಡೆದರೆ, ಮೋಕ್ಷದೆಡೆಗಿನ ಜೀವನ ಗುಣಸ್ಥಾನವು ವೃದ್ಧಿಯಾಗುತ್ತಾ ಹೋಗುತ್ತದೆ. ಅಂದರೆ ಜೀವನಲ್ಲಿ ಹೇಯ-ಜ್ಞೇಯ-ಉಪಾದೇಯ ರೂಪದ ಶಕ್ತಿಯು ಹೇಗೆ-ಹೇಗೆ ವರ್ಧಮಾನವಾಗುತ್ತ ಹೋಗುತ್ತದೆಯೋ, ಹಾಗೆ-ಹಾಗೆ ಗುಣಸ್ಥಾನದ ವೃದ್ಧಿಯು ಆಗುತ್ತದೆಂದು ಶಾಸ್ತ್ರಗಳಲ್ಲಿ ಹೇಳಿದೆ. ಹಾಗಾದರೆ, ಯಾವ ತತ್ತ್ವಗಳನ್ನು '**ಹೇಯಂಗಳ್**' ಅಂದರೆ '**ತ್ಯಜಿಸಲು ಯೋಗ್ಯವಾದುವು**'ಗಳೆಂದೂ, ಯಾವ ತತ್ತ್ವಗಳನ್ನು '**ಉಪಾದೇಯಂಗಳ್**' ಅಂದರೆ '**ಸ್ವೀಕರಿಸತಕ್ಕವು**'ಗಳೆಂದೂ ಮತ್ತು ಯಾವ ತತ್ತ್ವಗಳನ್ನು '**ಜ್ಞೇಯಂಗಳ್**' ಅಂದರೆ '**ತಿಳಿಯತಕ್ಕವು**' ಎಂದು ತಿಳಿಯುವುದು? ಭೇದವಿಜ್ಞಾನದ ಆಧಾರದಮೇಲೆ ಇದನ್ನು ತಿಳಿಯಬಹುದಾಗಿದೆ. ಆಚಾರ್ಯರುಗಳು ಸಪ್ತತತ್ತ್ವಗಳನ್ನು, ಮೇಲೆ ತಿಳಿಸಿದ (೧) ಹೇಯಂಗಳ್, (೨) ಉಪಾದೇಯಂಗಳ್, ಮತ್ತು (೩) ಜ್ಞೇಯಂಗಳ್ ಈ ಮೂರೂ ವರ್ಗಗಳಡಿಯಲ್ಲಿ, ಈ ಕೆಳಗಿನಂತೆ ವಿಂಗಡಿಸುತ್ತಾರೆ.

ಸಪ್ತತತ್ತ್ವಗಳು ಮತ್ತು ಅವುಗಳ ವರ್ಗವಿಂಗಡಣೆ:

೧. **ಜೀವ ತತ್ತ್ವ**-ಇದು **ಪರಮ ಉಪಾದೇಯ**ವಾಗಿದೆ.
೨. **ಅಜೀವ ತತ್ತ್ವ-ಅಜೀವತತ್ತ್ವ**ವಾದ **ಪುದ್ಗಲವು ಹೇಯ**ವಾಗಿದೆ. ಆದರೆ, **ದ್ರವ್ಯರೂಪವಾದ ಜೀವ** ಮತ್ತು **ಅಜೀವದ್ರವ್ಯ**ಗಳಾದ **ಷಡ್ದ್ರವ್ಯ**ಗಳು **ಜ್ಞೇಯ**ವಾಗಿವೆ.
೩. **ಆಸ್ರವ ತತ್ತ್ವ**-ಇದು **ಹೇಯ**ವಾಗಿದೆ.
೪. **ಬಂಧ ತತ್ತ್ವ**-ಇದೂ ಕೂಡ **ಹೇಯ**ವಾಗಿದೆ.
೫. **ಸಂವರ ತತ್ತ್ವ**-ಇದು **ಏಕದೇಶ ಉಪಾದೇಯವಾಗಿದೆ** ಅಂದರೆ **ಆಂಶಿಕವಾಗಿ ಉಪಾದೇಯ**ವಾಗಿದೆ ಅಂದರೆ **ಭಾಗಶಃ ಉಪಾದೇಯ**ವಾಗಿದೆ.
೬. **ನಿರ್ಜರ ತತ್ತ್ವ**-ಇದೂ ಕೂಡ **ಏಕದೇಶ ಉಪಾದೇಯವಾಗಿದೆ** ಅಂದರೆ **ಆಂಶಿಕವಾಗಿ ಉಪಾದೇಯ**ವಾಗಿದೆ ಅಂದರೆ **ಭಾಗಶಃ ಉಪಾದೇಯ**ವಾಗಿದೆ.
೭. **ಮೋಕ್ಷ ತತ್ತ್ವ**-ಇದು **ಸಂಪೂರ್ಣವಾಗಿ** ಅಥವಾ **ಪೂರ್ಣ ಉಪಾದೇಯ**ವಾಗಿದೆ.

ಪಂಪನು ೧೦-೬೩ (ವ) ದಲ್ಲಿ '**ಅಲ್ಲಿ ಸಂಸಾರಕಾರಣಂಗಳ್ ಹೇಯಂಗಳ್; ಮುಕ್ತಿಕಾರಣಂಗಳು ಪಾದೇಯಂಗಳ್**' ಎಂದು ಸರಳವಾಗಿ ಮತ್ತು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾನೆ. ಇಲ್ಲಿ '**ಸಂಸಾರ ಕಾರಣಂಗಳ್**' ಎಂದರೆ ಪಂಪನು ಹೇಳುವ ರೀತ್ಯಾ, ಮೇಲೆ ವಿವರಿಸಿರುವ ಸಪ್ತತತ್ತ್ವಗಳಲ್ಲಿ ಎರಡನೆಯದಾದ '**ಪುದ್ಗಲರೂಪಿ ಅಜೀವತತ್ತ್ವ**', ಮೂರನೆಯ ಮತ್ತು ನಾಲ್ಕನೆಯ ತತ್ವಗಳಾದ '**ಆಸ್ರವತತ್ತ್ವ**' ಮತ್ತು '**ಬಂಧತತ್ತ್ವ**'ಗಳನ್ನು ನಿರ್ದೇಶಿಸಿ ಅವು **ಹೇಯಂಗಳ್** ಎಂದು ಹೇಳುತ್ತಿದ್ದಾನೆ. ಆಕುಲತೆಯನ್ನು ಉತ್ಪನ್ನಮಾಡುವ ನಿಗೋದ-ನರಕಾದಿ ಗತಿಯ ದುಃಖ ಹಾಗೂ ಇಂದ್ರಿಯಗಳ ಮುಖಾಂತರ ಉತ್ಪನ್ನವಾಗುವ ಯಾವ ಕಲ್ಪಿತ ಸುಖವಿದೆಯೋ ಅವು ಹೇಯವಾಗಿವೆ. ಅಂದರೆ ಬಿಡಲು ಯೋಗ್ಯವಾಗಿವೆ. ಅವುಗಳ ಅಂದರೆ ದುಃಖ, ಸುಖಗಳ ಕಾರಣವು ಸ್ವಭಾವದಿಂದ ಚ್ಯುತಿರೂಪ ಸಂಸಾರಕ್ಕೆ ಕಾರಣವಾಗಿದೆ. ಸಂಸಾರಕ್ಕೆ ಕಾರಣಗಳು **ಆಸ್ರವ** ಹಾಗೂ **ಬಂಧ** ಈ ಎರಡೂ ತತ್ತ್ವಗಳಾಗಿವೆ. **ಪುಣ್ಯ-ಪಾಪ** ಎರಡೂ **ಬಂಧ ತತ್ತ್ವ**ಗಳಿವೆ. ಆದುದರಿಂದ, **ಆಸ್ರವ, ಬಂಧ, ಪುಣ್ಯ, ಪಾಪ**ಗಳು **ಹೇಯ**ಗಳಾಗಿವೆ.

ಹಾಗೆಯೇ **'ಮುಕ್ತಿಕಾರಣಂಗಳು'** ಆಗಿರುವ **'ಸಂವರತತ್ತ್ವ'** ಮತ್ತು **'ನಿರ್ಜರತತ್ತ್ವ'**ಗಳು **ಉಪಾದೇಯಂಗಳ್** ಎಂದು ಅವುಗಳನ್ನು ನಿರ್ದೇಶಿಸಿ ಹೇಳುತ್ತಿದ್ದಾನೆ. ಅಂದರೆ, ಯಾವುದು **ಅಕ್ಷಯ ಅನಂತಸುಖ**ವಿದೆ ಅದು **ಉಪಾದೇಯ**ವಾಗಿದೆ. ಅಕ್ಷಯ ಅನಂತಸುಖಕ್ಕೆ ಕಾರಣ ಮೋಕ್ಷತತ್ತ್ವವಾಗಿದೆ. ಮೋಕ್ಷದ ಕಾರಣ ಸಂವರ ನಿರ್ಜರಾ ತತ್ತ್ವಗಳಾಗಿವೆ. ಆದುದರಿಂದ **ಸಂವರ, ನಿರ್ಜರ** ಮತ್ತು **ಮೋಕ್ಷ**ಗಳು **ಉಪಾದೇಯ**ಗಳಾಗಿವೆ.

ಹೀಗೆಯೇ ಬೇರೆ-ಬೇರೆ ಆಚಾರ್ಯರು ತಮ್ಮ-ತಮ್ಮ ವ್ಯಾಖ್ಯಾನಗಳಲ್ಲಿ, ತಾತ್ಪರ್ಯಗಳಲ್ಲಿ ಆಯಾ ಪ್ರಕರಣಗಳಿಗನುಸಾರವಾಗಿ ಹೇಯ-ಉಪಾದೇಯ-ಜ್ಞೇಯಗಳನ್ನು ಅನ್ವಯಿಸಿ ವಿವರಣೆ ನೀಡಿರುತ್ತಾರೆ.

'ಪದಾರ್ಥಸಾರ' ಕೃತಿಯಲ್ಲಿ ಅದರ ಕರ್ತೃ **ತ್ರೈವಿದ್ಯಚೂಡಾಮಣಿ ಶ್ರೀ ಮಾಘಣಂದಿ ಆಚಾರ್ಯರು** ದ್ವಿತೀಯ ಪರಿಚ್ಛೇದವಾದ **'ಸಪ್ತತತ್ತ್ವ ನಿರೂಪಣಂ'** ಅಧ್ಯಾಯದಲ್ಲಿ (ಸಪ್ತತತ್ತ್ವ ಪ್ರಕರಣದಲ್ಲಿ) ಹೀಗೆ ಹೇಳಿದ್ದಾರೆ:

(೧) ಹೇಯಂಗಳ್ (ತ್ಯಜಿಸತಕ್ಕವು): 'ಇನ್ನಜೀವತತ್ತ್ವಮೆಂತೆನೆ' (ಇನ್ನು+ಅಜೀವತತ್ತ್ವಂ+ಎಂತು+ಎನೆ) ಎಂದರೆ ಅಜೀವ ತತ್ತ್ವಕ್ಕೆ ವ್ಯಾಖ್ಯಾನವನ್ನು ನೀಡುತ್ತ, ಹೀಗೆ ಹೇಳಿದ್ದಾರೆ:

> **'ಅಱಿವ ಕಾಣ್ಬ ಗುಣಮಿಲ್ಲದುದು, ಚೇತನೋಪಯೋಗ ರಹಿತಮಪ್ಪುದುದು, ಪುದ್ಗಲಾದಿ ಪಂಚವಿಧಮಪ್ಪ ಅಜೀವತತ್ತ್ವಮದು ಹೇಯಮೇಕೆಂದೊಡೆ: "*ಜಾಣಿತ್ತಾ ಪರಿಹರೇ ದಬ್ಬಾ(ವ್ವಾ)*" ಎಂಬೀ ನ್ಯಾಯದಿಂದಱಿದು ತೊಱೆಯುವುದೆಂಬುದರ್ಥಂ.'**

ಅರ್ಥ: ತಿಳಿಯುವ, ನೋಡುವ ಗುಣವಿಲ್ಲದ, ಚೇತನ ಉಪಯೋಗ ರಹಿತವಾದ, ಪುದ್ಗಲಾದಿ ಐದು ವಿಧವಾದ ಅಜೀವತತ್ತ್ವವು ಹೇಯವು (ತ್ಯಜಿಸಲು ಯೋಗ್ಯವಾದವು) ಅದೇಕೆ ಎಂದರೆ **'(ಜಾಣಿತ್ತಾ)** ಜ್ಞಾನಿಯಾದವನು [ತಿಳಿದವನು/ಅರಿತವನು] **(ಪರಿಹರೇ)** ತ್ಯಜಿಸುವುದಕ್ಕೆ [ವರ್ಜಿಸುವುದಕ್ಕೆ] **(ದಬ್ಬಾ(ವ್ವಾ))** ಯೋಗ್ಯವಾದುದು' ಎಂಬ ಈ ನ್ಯಾಯದಿಂದ ಅರಿತು ತೊರೆಯಬೇಕು ಎಂಬುದು ಅರ್ಥವು.

ಈ ವ್ಯಾಖ್ಯಾನದಂತೆ ಅಜೀವ ತತ್ತ್ವಗಳಾದ ಪುದ್ಗಲ, ಆಸ್ರವ ಮತ್ತು ಬಂಧ ತತ್ತ್ವಗಳು ಆತ್ಮನಲ್ಲಿ **ಔದಯಿಕಭಾವ**ವನ್ನು (ಕರ್ಮಗಳ ನಿಮಿತ್ತದಿಂದ ಆತ್ಮನು ತನ್ನಲ್ಲಿ ಯಾವ ವಿಕಾರಭಾವ ಮಾಡುತ್ತಾನೆ ಆ ಭಾವಕ್ಕೆ **'ಔದಯಿಕಭಾವ'** ಎನ್ನುವರು) ಉಂಟುಮಾಡುವುದರಿಂದ ಇವು **'ಹೇಯಂಗಳ್'** (ತ್ಯಜಿಸಲು ಯೋಗ್ಯವಾದವು) ಎಂದು ಹೇಳುತ್ತಾರೆ. ಹಾಗೆಯೇ ಷಡ್ದ್ರವ್ಯಗಳು ಅಥವಾ ಬೇರೆ ವಿಷಯಗಳ ಬಗ್ಗೆ ನಿರೂಪಣೆ ಮಾಡುವಾಗ ಅವುಗಳಲ್ಲಿ ಯಾವುವು ಹೇಯ ಮತ್ತು ಯಾವ ಕಾರಣದಿಂದ ಹೇಯ ಎಂದು ತಿಳಿಸುತ್ತಾರೆ.

(೨) ಉಪಾದೇಯಂಗಳ್ (ಸ್ವೀಕರಿಸತಕ್ಕವು): 'ಅಲ್ಲಿ ಜೀವತತ್ತ್ವ ಲಕ್ಷಣಮೆಂತೆನೆ' ಎಂದರೆ ಜೀವತತ್ತ್ವಕ್ಕೆ ವ್ಯಾಖ್ಯಾನವನ್ನು ನೀಡುತ್ತ, ಹೀಗೆ ಹೇಳಿದ್ದಾರೆ:

> **'ನಿರ್ಮಲ ನಿಷ್ಕಲ ನಿಷ್ಕ್ರಿಯ ನಿಜ ಪರಮ ಪಾರಿಣಾಮಿಕಭಾವಂ ಸಾಕ್ಷಾದುಪಾದೇಯಮೆಂಬುದು ತಾತ್ಪರ್ಯಂ.'**

ಅರ್ಥ: ಕರ್ಮಮಲ ರಹಿತವೂ (ನಾಲ್ಕು ಘಾತಿ ಮತ್ತು ನಾಲ್ಕು ಅಘಾತಿ ಕರ್ಮ ರಹಿತವೂ), ಶರೀರ ರಹಿತವೂ (ಪಂಚೇಂದ್ರಿಯ ರಹಿತವೂ), ಕ್ರಿಯಾ ರಹಿತವೂ (ಮನ, ವಚನ, ಕಾಯಗಳಿಂದ ಚಂಚಲ ರಹಿತವೂ) ತನ್ನ (ಜೀವನ/ಆತ್ಮನ) [ಸ್ವಭಾವ ಸಿದ್ಧವಾದ ಶುದ್ಧವಾದ ನಿರಂತರವಾದ ಸದ್ಭಾವವಿರುವ] ಆ ಪಾರಿಣಾಮಿಕ ಭಾವವು ಸಾಕ್ಷಾತ್ ಉಪಾದೇಯವು (ಎಂದರೆ ಪರಮ ಉಪಾದೇಯವು) ಎಂಬುದು ತಾತ್ಪರ್ಯವು.

ಈ ವ್ಯಾಖ್ಯಾನದಂತೆ ಜೀವನಲ್ಲಿ ಯಾವ ಪಾರಿಣಾಮಿಕಭಾವ ಇದೆಯೋ (ಯಾವ ಭಾವವು ಕರ್ಮದ ಉದಯ, ಉಪಶಮ, ಕ್ಷಯ, ಕ್ಷಯೋಪಶಮ, ಇವುಗಳ ಅಪೇಕ್ಷೆಯನ್ನು ಮಾಡದೇ ಸ್ವಭಾವತಃ ಇರುತ್ತದೆಯೋ ಅದಕ್ಕೆ **'ಪಾರಿಣಾಮಿಕಭಾವ'** ಎನ್ನುತ್ತಾರೆ) ಅದು **'ಉಪಾದೇಯಂಗಳ್'** (ಸ್ವೀಕರಿಸಲು ಯೋಗ್ಯವಾದವು) ಎಂದು ಹೇಳುತ್ತಾರೆ.

ಈ ವ್ಯಾಖ್ಯಾನದಂತೆ **ಸಂವರ, ನಿರ್ಜರ** ತತ್ತ್ವಗಳು **ಸಾಧನ ರೂಪದಿಂದ** ಉಪಾದೇಯಗಳು. **ಮೋಕ್ಷತತ್ತ್ವವು ಸಾಧ್ಯರೂಪದಿಂದ ಉಪಾದೇಯ.** ಪರಮಾತ್ಮ ಸ್ವರೂಪವಂತೂ ಸಾಕ್ಷಾದುಪಾದೇಯವಾಗಿದೆ.

(೩) ಜ್ಞೇಯಂಗಳ್ (ತಿಳಿಯತಕ್ಕವು): 'ಜ್ಞಾನ'ದ **ವಿಷಯಕ್ಕೆ 'ಜ್ಞೇಯ'** ಎಂದು ಹೇಳಲಾಗುತ್ತದೆ. **ಅನ್ಯ ಆರು ದ್ರವ್ಯಗಳ** ವಿಚಾರರೂಪವು **'ಜ್ಞೇಯಂಗಳ್'** ಅಥವಾ **'ತಿಳಿಯಲು ಯೋಗ್ಯ'**ವಾದವುಗಳಾಗಿವೆ. ಏಕೆಂದರೆ, ದ್ರವ್ಯದ ಸಾಮಾನ್ಯ ಗುಣಗಳಲ್ಲಿ **ಪ್ರಮೇಯತ್ವ** ಎಂಬ ಗುಣದ ಉಲ್ಲೇಖ ಬರುತ್ತದೆ. ದ್ರವ್ಯದ ಆರು ಸಾಮಾನ್ಯ ಗುಣಗಳು: (೧) ಅಸ್ತಿತ್ವ, (೨) ವಸ್ತುತ್ವ, (೩) ದ್ರವ್ಯತ್ವ, (೪) ಪ್ರಮೇಯತ್ವ, (೫) ಅಗುರುಲಘುತ್ವ, ಮತ್ತು (೬) ಪ್ರದೇಶತ್ವ.

(೧) ಅಸ್ತಿತ್ವ ಗುಣದಿಂದಾಗಿ ದ್ರವ್ಯವು ಸತ್ ರೂಪವಿದೆ.

(೨) ವಸ್ತುತ್ವ ಗುಣದಿಂದಾಗಿ ದ್ರವ್ಯವು ಉಪಯೋಗಿಯಿದೆ.

(೩) ದ್ರವ್ಯತ್ವ ಗುಣದಿಂದಾಗಿ ದ್ರವ್ಯವು ಪರಿಣಮನಶೀಲವಾಗಿದೆ.

(೪) ಪ್ರಮೇಯತ್ವ ಗುಣದಿಂದಾಗಿ ದ್ರವ್ಯವು ಜ್ಞಾನದ ವಿಷಯವಾಗಿದೆ.

(೫) ಅಗುರುಲಘುತ್ವ ಗುಣದಿಂದಾಗಿ ದ್ರವ್ಯವು ತನ್ನದೇ ಆದ ಸ್ವರೂಪವನ್ನು ಹೊಂದಿದೆ.

(೬) ಪ್ರದೇಶತ್ವ ಗುಣದಿಂದಾಗಿ ದ್ರವ್ಯವು ತನ್ನದೇ ಆದ ಆಕಾರವನ್ನು ಹೊಂದಿದೆ.

ಪ್ರಮೇಯತ್ವ ಗುಣದಿಂದಾಗಿ **ದ್ರವ್ಯವು ಜ್ಞಾನ**ದ ವಿಷಯವಾಗಿರುವುದರಿಂದ ಅದು **ಜ್ಞೇಯ**ವಾಗಿದೆ.

(ಸದೃಶವಾದ ಅನೇಕ ವಸ್ತುಗಳಲ್ಲಿರುವ ಸಾಮಾನ್ಯಧರ್ಮವನ್ನು (ಸಾಮಾನ್ಯಗುಣಗಳನ್ನು) ಸಂಸ್ಕೃತದಲ್ಲಿ **'ತ್ವ'** ಎಂಬ ಶಬ್ದದ ಮೂಲಕ ವ್ಯಕ್ತಪಡಿಸುತ್ತಾರೆ. ವ್ಯಾಕರಣಶಾಸ್ತ್ರದಲ್ಲಿ ಇದನ್ನು **ತದ್ಧಿತ ಪ್ರತ್ಯಯ**ವೆನ್ನುವರು. ಇದಕ್ಕೆ ಇಂಗ್ಲೀಷಿನಲ್ಲಿ 'Abstract Noun form' ಅಂದರೆ 'ಭಾವನಾಮರೂಪ' ಎನ್ನುವರು. **ಉದಾಹರಣೆಗೆ:** ಎಲ್ಲ ರಾಜರ ಸಾಮಾನ್ಯಧರ್ಮ **ರಾಜತ್ವ**. ಎಲ್ಲ ವಸ್ತುಗಳ ಸಾಮಾನ್ಯಧರ್ಮ **ವಸ್ತುತ್ವ,** ಎಲ್ಲ ದ್ರವ್ಯಗಳ ಸಾಮಾನ್ಯಧರ್ಮ **ದ್ರವ್ಯತ್ವ,** ಎಲ್ಲ ಪುಣ್ಯಗಳ ಸಾಮಾನ್ಯಧರ್ಮ **ಪುಣ್ಯತ್ವ,** ಇತ್ಯಾದಿ.)

ಜಗತ್ತಿನಲ್ಲಿರುವ ಎಲ್ಲ ವಸ್ತುಗಳು ಜ್ಞೇಯುವೇ ಆಗಿವೆ. ಅಂದರೆ ಜಗತ್ತಿನಲ್ಲಿರುವ ಎಲ್ಲ ವಸ್ತುಗಳು ತಿಳಿಯಲು ಯೋಗ್ಯವಾಗಿವೆ.

ಇದು **ಹೇಯ–ಜ್ಞೇಯ–ಉಪಾದೇಯ**ಗಳ ಸಾಮಾನ್ಯ ವಿವರಣೆ.

ಈಗ ಪದ್ಯದಲ್ಲಿ ಬರುವ ವಾಕ್ಯಖಂಡಗಳ ಅರ್ಥ ವಿವರಣೆ:

ಹೇಯಂಗಳ್ ಖಳಕರ್ಮಬಂಧನಕರಕ್ರೋಧಾದಿಗಳ್: ಜೈನಾಗಮದ ಪ್ರಕಾರ ಕರ್ಮಗಳಲ್ಲಿ ಎರಡು ವಿಧ. (೧) **ಪಾಪಕರ್ಮ,** (೨) **ಪುಣ್ಯಕರ್ಮ. ಪಾಪಕರ್ಮ** ಜೀವನಲ್ಲಿ **ಅಶುಭಪರಿಣಾಮ**ವನ್ನುಂಟುಮಾಡುತ್ತದೆ. **ಪುಣ್ಯಕರ್ಮ ಶುಭಪರಿಣಾಮ**ವನ್ನುಂಟುಮಾಡುತ್ತದೆ. ಜೀವನಿಗೆ (ಆತ್ಮನಿಗೆ) ಈ ಎರಡೂ ಕರ್ಮಗಳು ಬಂಧಗಳೇ ಆಗಿದ್ದು, ಅಹಿತವಾದವುಗಳೇ ಆಗಿರುತ್ತವೆ. ಆದುದರಿಂದ, ಕವಿಯು ಈ ಪದ್ಯದಲ್ಲಿ **ಪಾಪಕರ್ಮ** ಮತ್ತು **ಪುಣ್ಯಕರ್ಮ** ಈ ಎರಡನ್ನೂ ಆತ್ಮನಿಗೆ ಅಹಿತವಾದ **'ಖಳಕರ್ಮ'** ಎಂದೇ ನಿರ್ದೇಶಿಸಿ ಹೇಳುತ್ತಿದ್ದಾನೆ. ಆದರೂ, ಪಾಪಕರ್ಮದ ಬಂಧನಕ್ಕೆ **'ಕ್ರೋಧಾದಿಗಳ್'** ಎಂದರೆ, (೧) **ಕ್ರೋಧ,** (೨) **ಮಾನ,** (೩) **ಮಾಯ** ಮತ್ತು (೪) **ಲೋಭ**ಗಳೆಂಬ ನಾಲ್ಕು **ಕಷಾಯ**ಗಳು ಕಾರಣ ಎಂದು **ಪಾಪಕರ್ಮ ಬಂಧದ** ಕಾರಣಗಳನ್ನು ಕವಿಯು ತಿಳಿಸಿದ್ದಾನೆ. ಇವುಗಳು ತ್ಯಜಿಸಲು ಯೋಗ್ಯವಾದವುಗಳು (ಹೇಯಂಗಳ್) ಎಂದು ಉಪಾಧ್ಯಾಯರು ಭವ್ಯಜನಕ್ಕೆ ತಿಳಿಹೇಳುತ್ತಾರೆ. ಕವಿಯು ೧೦–೬೩ (ವ) ದಲ್ಲಿ **'ಅಲ್ಲಿ ಸಂಸಾರಕಾರಣಂಗಳ್ ಹೇಯಂಗಳ್'** ಎಂದು ಹೇಳಿರುವಂತೆ ಆತ್ಮನಿಗೆ ಬಂಧನಕರವಾಗಿರುವಂತಹ ಕ್ರೋಧಾದಿಗಳು ಸಂಸಾರಕ್ಕೆ ಕಾರಣಗಳಾಗಿವೆ. ಆದುದರಿಂದ ಇವುಗಳು ತ್ಯಜಿಸಲು ಯೋಗ್ಯವಾಗಿವೆ ಎಂಬುದು ತಾತ್ಪರ್ಯ.

ಉಪಾದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್: ಪಾಪಗಳೆಂಬ ಕಟ್ಟಿಗೆಯನ್ನು ಸುಡುವ ಅಗ್ನಿಯಂತೆ ಪ್ರಕಾಶಿಸುವ ರತ್ನತ್ರಯಗಳು **'ಉಪಾದೇಯಂಗಳ್'**–ಸ್ವೀಕಾರಾರ್ಹವೆಂದು ಉಪಾಧ್ಯಾಯರು ಭವ್ಯಜನರಿಗೆ [ಮೋಕ್ಷಾಪೇಕ್ಷಿ ಜನರಿಗೆ] ಉಪದೇಶಿಸುವರು ಎಂದು ಕವಿಯು ತಿಳಿಸುತ್ತಾನೆ. ಹೀಗೆ, ಈ ನಾಲ್ಕನೇ ಪದ್ಯದಲ್ಲಿ **'ಉಪಾಧ್ಯಾಯ ಪರಮೇಷ್ಠಿ'**ಗಳಿಂದ ಭವ್ಯಜನರಿಗಾಗುವ ಪ್ರಯೋಜನವನ್ನು ಕೊಂಡಾಡಿ ಅವರನ್ನು ಕವಿಯು ಸ್ತುತಿಸಿರುವನು. ಕವಿಯು ಇಲ್ಲಿ ಪ್ರಯೋಗಿಸಿರುವ **ದುರಿತೇಂಧನಾನಳ** ಈ ಪದಬಂಧಕ್ಕೆ ಸರಿಸಮಾನವಾದ **ಕರ್ಮೇಂಧನಧಗಪ್ಯೇಶ** ಎಂಬ ಪದಬಂಧವನ್ನು ಶ್ರೀ ಜಿನಸೇನಾ ಚಾರ್ಯರು **ಪೂರ್ವಪುರಾಣ**ದ ೧೨–೧೬೦ ನೆಯ ಶ್ಲೋಕದಲ್ಲಿ ಹೀಗೆ ಪ್ರಯೋಗಿಸಿದ್ದಾರೆ:

ಗುಣನಾಮಾಕರಃ ಪ್ರೋದ್ಯದ್ರತ್ನರಾಶಿ ನಿಶಾಮನಾತ್ ।
ಕರ್ಮೇಂಧನಧಗಪ್ಯೇಶ ನಿರ್ಧೂಮಜ್ವಲನೇಕ್ಷಣಾತ್ ॥ಪೂ.ಪು., ೧೨–೧೬೦॥

ಅರ್ಥ: ದೇದೀಪ್ಯಮಾನವಾದ ರತ್ನಗಳ ರಾಶಿಯನ್ನು ನೋಡಿದುದರಿಂದ ಗುಣಗಳಿಗೆ ಉತ್ಪತ್ತಿಸ್ಥಾನನಾಗುವನು. ಹೊಗೆಯಿಲ್ಲದ ಬೆಂಕಿಯ ದರ್ಶನದಿಂದ ಈತನು **ಕರ್ಮವೆಂಬ ಕಟ್ಟಿಗೆಯನ್ನು ಸುಡುವವನಾಗುವನು.**

ರತ್ನತ್ರಯಂಗಳ್ ಸುಖೋಪಾಯಂಗಳ್ಗೆ: ಜೈನಾಗಮದಲ್ಲಿ **'ಸುಖ'**ವೆಂದರೆ **'ಶಾಶ್ವತಸುಖ'**. ಎಂದರೆ **'ಮೋಕ್ಷಪದ'**. ಮೋಕ್ಷಪದ ಪ್ರಾಪ್ತಿಗೆ ಇರುವ ಉಪಾಯವೆಂದರೆ **ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ**ಗಳೆಂಬ **ರತ್ನತ್ರಯ**ಗಳ ಮಾರ್ಗ. ಮಂಗಳಾಚರಣೆಯ ಮೊದಲನೆಯ ಪದ್ಯದಲ್ಲಿಯೂ ಕವಿಯು **ದುರ್ವಾರ ಸಂಸಾರ ವಿಚ್ಛೇದೋಪಾಯನಿಯುಕ್ತ** ಎಂದರೆ

'ದಾಟಲು ಕಷ್ಟಸಾಧ್ಯವಾದ ಹುಟ್ಟು–ಸಾವುಗಳೆಂಬ ಸಂಸಾರ ಚಕ್ರವನ್ನು ತುಂಡರಿಸಿ ಕೊನೆಗೊಳಿಸಲು ಇರುವ ಉಪಾಯವೂ' ಈ ರತ್ನತ್ರಯಗಳೇ ಎಂದು ಮಾರ್ಮಿಕವಾಗಿ ಹೇಳುತ್ತಾನೆ. ಮೇಲಿನ ಎರಡೂ ಪಂಙ್ತಿಗಳು ಒಂದೇ ಅರ್ಥವನ್ನು ನೀಡುತ್ತವೆ. ಒಂದನೇ ಪದ್ಯದಲ್ಲಿ ಅರಿಹಂತರನ್ನು ಸ್ತುತಿಸುವಾಗ ರತ್ನತ್ರಯಗಳ ಹೆಸರನ್ನು ಕವಿಯು ನೇರವಾಗಿ ಹೇಳಿರುವುದಿಲ್ಲ. ಆದರೆ ಪರೋಕ್ಷವಾಗಿ 'ಸೂಕ್ತಿ **ವೃಷಮಾರ್ಗ (ಧರ್ಮಮಾರ್ಗ)** ಅಗ್ರೇಸರ' ಎನ್ನುತ್ತಾನೆ. ಧರ್ಮಮಾರ್ಗವೆಂದರೆ ಮೋಕ್ಷಮಾರ್ಗ ಅಥವಾ ರತ್ನತ್ರಯಮಾರ್ಗವೆಂದು ಜೈನಾಗಮಗಳು ಹೇಳುತ್ತವೆ. ತಾತ್ಪರ್ಯವೇನೆಂದರೆ, (೧) ಶಾಶ್ವತಸುಖ ಹೊಂದಲು; ಮತ್ತು (೨) ಸಂಸಾರ ಚಕ್ರವನ್ನು ತುಂಡರಿಸಿ ಕೊನೆಗೊಳಿಸಲು, ಈ ಎರಡಕ್ಕೂ ಇರುವ ಏಕೈಕ ಉಪಾಯವೆಂದರೆ **ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ**ಗಳೆಂಬ **ರತ್ನತ್ರಯ** ಮಾರ್ಗವೆಂದು ಕವಿಯು ಈ ಸ್ತುತಿಪದ್ಯ (ಮಂಗಳಾಚರಣೆ ಪದ್ಯ) ದಲ್ಲಿ ತಿಳಿಸಿದ್ದಾನೆ.

ಮತ್ತೇಭ ವಿಕ್ರೀಡಿತ

ಬಗೆಯೊಳ್ಪೊಣ್ಮೆ ದಯಾರಸಂ ಚರಿತದೊಳ್ಕೈಗಣ್ಮೆ ಚಾರಿತ್ರಮಾ
ವಗಮಾವಶ್ಯಕದೊಳ್ತಗುಳ್ದು ಪಲವುಂ ಶೀಲಂಗಳಂ ತಾಳ್ದಿ ದಂ
ದುಗವೆಂದುಂ[1]ತಮಗಾಗದಂತೆಸಗುವರ್ಸರ್ವೋತ್ತಮರ್ಸರ್ವಸಾ
ಧುಗಳೋರಂತೆ ಕಟಿಲ್ಚು[2]ಗೆಮ್ಮಮನದಿಂ ದುರ್ಮೋಹಸಂದೋಹಮಂ ॥ ೧–೫

ಪದ ವಿಭಾಗ: ಬಗೆಯೊಳ್, ಪೊಣ್ಮೆ, ದಯಾರಸಂ, ಚರಿತದೊಳ್, ಕೈಗಣ್ಮೆ, ಚಾರಿತ್ರಂ,
ಆವಗಂ, ಆವಶ್ಯಕದೊಳ್, ತಗುಳ್ದು, ಪಲವುಂ–ಶೀಲಂಗಳಂ–ತಾಳ್ದಿ, ದಂದುಗಂ,
ಎಂದುಂ, ತಮಗಾಗದಂತೆ, ಎಸಗುವರ್, ಸರ್ವೋತ್ತಮರ್, ಸರ್ವಸಾಧುಗಳ್,
ಓರಂತೆ, ಕಟಿಲ್ಚುಗೆ, ಎಮ್ಮ, ಮನದಿಂ, ದುರ್ಮೋಹ–ಸಂದೋಹಮಂ ॥ ೧–೫

ಅನ್ವಯಾರ್ಥ: (ಬಗೆಯೊಳ್) ಮನಸ್ಸಿನಲ್ಲಿ **(ದಯಾರಸಂ)** ದಯಾರಸವು **(ಪೊಣ್ಮೆ)** ಪ್ರವಹಿಸುತ್ತಿರಲು, **(ಚರಿತದೊಳ್)** [ಸಾಧುಗಳ ಜೀವನ ಕ್ರಮದ] ಆಚಾರದಲ್ಲಿ **(ಚಾರಿತ್ರಂ)** [ಸಮ್ಯಕ್] ಚಾರಿತ್ರವನ್ನು **(ಕೈಗಣ್ಮೆ)** ಹೊಂದಿದವರಾಗಿ, **(ಆವಗಂ)** ನಿರಂತರವಾಗಿ **(ಆವಶ್ಯಕದೊಳ್)** [ಆರು] ಆವಶ್ಯಕ ಕ್ರಿಯೆಗಳಲ್ಲಿ **(ತಗುಳ್ದು)** ಉದ್ಯುಕ್ತರಾಗಿದ್ದು, **(ಪಲವುಂ)** ಅನೇಕ **(ಶೀಲಂಗಳಂ)** ಶೀಲ ಗುಣಗಳನ್ನು **(ತಾಳ್ದಿ)** ಹೊಂದಿದವರಾಗಿ, **(ದಂದುಗವೆಂದುಂ=ದಂದುಗಂ+ಎಂದುಂ)** ಲೋಕಸಂಸಾರದ ಗೊಡವೆಯು ಅಥವಾ ಸಹವಾಸವು ಯಾವಕಾಲದಲ್ಲೂ **(ತಮಗಾಗದಂತೆಸಗುವರ್=ತಮಗೆ+ಆಗದಂತೆ+ಎಸಗುವರ್)** ತಮಗೆ ಉಂಟಾಗದಂತೆ [ಅಂಟದಂತೆ] ನಡೆದುಕೊಳ್ಳುವವರೂ, **(ಸರ್ವೋತ್ತಮರ್)** ಸರ್ವೋತ್ತಮರೂ ಆದ, **(ಸರ್ವಸಾಧುಗಳ್)** [ಈ ಲೋಕದ] ಸಮಸ್ತ ಸಾಧುಗಳು **(ಎಮ್ಮ ಮನದಿಂ)** ನಮ್ಮ ಮನಸ್ಸಿನಿಂದ **(ದುರ್ಮೋಹ ಸಂದೋಹಮಂ)** ಮೋಹದಿಂದ ಆವರಿಸಿದ ಅಜ್ಞಾನದ ಸಮೂಹವನ್ನು **(ಓರಂತೆ)** ಒಂದೇ ಸಮನಾಗಿ **(ಕಟಿಲ್ಚುಗೆ)** ತೊಲಗಿಸಲಿ ॥ ೧–೫

ಈ ವೃತ್ತಪದ್ಯದಲ್ಲಿ ಕವಿಯು ಪಂಚಪರಮೇಷ್ಠಿಗಳಲ್ಲಿ ಐದನೆಯವರಾದ ಈ ಲೋಕದ ಸರ್ವಸಾಧುಗಳನ್ನು ಸ್ತುತಿಸಿರುವನು.

ಭಾವಾರ್ಥ: ದಯಾಪರರೂ, ಸಮ್ಯಕ್ ಚಾರಿತ್ರವಂತರೂ, ಆರು ಅವಶ್ಯಕಗಳಲ್ಲಿ ತೊಡಗಿಕೊಂಡವರೂ, ಅನೇಕ ಶೀಲಗುಣಗಳನ್ನು ತಳೆದವರೂ, ಲೌಕಿಕ ವ್ಯವಹಾರಗಳಿಂದ ದೂರಸರಿದವರೂ, ಸರ್ವೋತ್ತಮರೂ ಆದ ಲೋಕದ ಸರ್ವಸಾಧುಗಳು, ನಮ್ಮ ಮನಸ್ಸಿನಲ್ಲಿ ಆವರಿಸಿರುವ ದುರ್ಮೋಹವೆಂಬ ಅಜ್ಞಾನವನ್ನು ಸಂಪೂರ್ಣವಾಗಿ ತೊಲಗಿಸಲಿ ಎಂದು ಕವಿಯು ಸ್ತುತಿಸಿದ್ದಾನೆ. ೧–೫

ವಿಶೇಷ ವಿವರಣೆ: ಕವಿಯು, ಈ ಐದನೇ ಮಂಗಳಾಚರಣೆ ಪದ್ಯದಲ್ಲಿ ಪಂಚಪರಮೇಷ್ಠಿಗಳಲ್ಲಿ ಕೊನೆಯವರಾದ **'ಸಾಧುಪರಮೇಷ್ಠಿ'**ಗಳನ್ನು ಸ್ತುತಿಸಿದ್ದಾನೆ. ಸಾಧು ಪರಮೇಷ್ಠಿಗಳು ೨೮ ಮೂಲ ಗುಣಗಳನ್ನು ಹೊಂದಿರುವರು. ಕವಿಯು, ಸಾಧು (ಯತಿ) ಗಳಿಗಿರುವ ಮೂಲಗುಣಗಳ ಸಂಖ್ಯೆಯನ್ನು ಪದ್ಯದಲ್ಲಿ ಹೇಳಿರದಿದ್ದರೂ, ಗುಣಗಳ ನಾಮಾಂಕಿತಗಳಾದ **ಚಾರಿತ್ರ** ಮತ್ತು **ಅವಶ್ಯಕ** ಕ್ರಿಯೆಗಳನ್ನು ಹೆಸರಿಸಿದ್ದಾನೆ. ಶ್ರೀ ವಟ್ಟಕೇರಾಚಾರ್ಯರು (ಶ್ರೀ ಕುಂದಕುಂದಾಚಾರ್ಯರು) **ಮೂಲಾಚಾರ** ಗ್ರಂಥದಲ್ಲಿ

---

[1] ಮೂಲಪಾಠ–'ದಂದುಗವೆಂದುಂ', ಕೆಜಿ ಯವರ ಪಾಠ–'ದಂದುಗಮೆಂದುಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. ಶಬ್ದಮಣಿದರ್ಪಣಂ ಗ್ರಂಥದ ಸಮಾಪ್ತಿವಾಕ್ಯಂಗಳ್ ಇಲ್ಲಿನ ಕೊನೆಯ ವೃತ್ತಪದ್ಯ 'ಗಮಕಸಮಾಸದಿಂ .... **ವ ಮ** ಹ ಪ ಭೇದದಿಂ......' ಇತ್ಯಾದಿ.

[2] ಮೂಲಪಾಠ–'ಕಟಿಲ್ಚು', ಕೆಜಿ ಯವರ ಪಾಠ–'ಕಳಲ್ಚು', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಯತಿಗಳಿಗೆ **ಇಪ್ಪತ್ತೆಂಟು ಮೂಲಗುಣ**ಗಳನ್ನು ಈ ಕೆಳಗಿನಂತೆ ಹೇಳಿದ್ದಾರೆ:

ಪಂಚಯ ಮಹವ್ವಯಾಇಂ ಸಮಿದೀವೋಪಂಚ ಜಿಣವರು ದ್ದಿಟ್ಠಾ ।
ಪಂಚೇವಿಂದಿಯರೋಹಾ ಛಪ್ಪಿಯ ಆವಾಸಯಾ ಲೋವೋ ॥ (ಮೂಲಾಚಾರ, ಮೂಲಗುಣಾಧಿಕಾರ, ೧–೨)

ಗಾಥಾರ್ಥ: ಐದು ಮಹಾವ್ರತ, ಐದು ಸಮಿತಿ, ಐದು ಇಂದ್ರಿಯಗಳ ನಿರೋಧ, ಆರು ಅವಶ್ಯಕ, ಲೋಚ ...

ಅಚೇಲಕಮಣ್ಹಾಣಂ ಖಿದಿಸಯಣಮದಂತಘಂಸಣಂ ಚೇವ ।
ಠಿದಿಭೋಯಣೇಯ ಭತ್ತಂ ಮೂಲಗುಣಾ ಅಟ್ಠವೀಸಾ ದು ॥ (ಮೂಲಾಚಾರ, ಮೂಲಗುಣಾಧಿಕಾರ, ೧–೩)

ಗಾಥಾರ್ಥ: ಅಚೇಲಕ್ಯ, ಅಸ್ನಾನ, ಕ್ಷಿತಿಶಯನ, ಅದಂತಧಾವನ, ಸ್ಥಿತಿಭೋಜನ ಮತ್ತು ಏಕಭುಕ್ತ ಇವು ಇಪ್ಪತ್ತೆಂಟು ಮೂಲಗುಣ ಗಳನ್ನು ಜಿನೇಂದ್ರದೇವರು ಯತಿಗಳಿಗೆ ಹೇಳಿದ್ದಾರೆ.

ಶ್ರೀ ಕುಂದಕುಂದಾಚಾರ್ಯರು **ನಿಯಮಸಾರ** ಗ್ರಂಥದಲ್ಲಿ **ಸಾಧುಪರಮೇಷ್ಠಿ**ಗಳ ಸ್ವರೂಪವನ್ನು ಹೀಗೆ ವರ್ಣಿಸಿದ್ದಾರೆ:

ವಾವಾರವಿಪ್ಪಮುಕ್ಕಾ ಚಉವ್ವಿಹಾರಾಹಣಾಸಯಾರತ್ತಾ ।
ಣಿಗ್ಗಂಥಾ ಣಿಮ್ಮೋಹಾ ಸಾಹೂ ದೇ ಏರಿಸಾ ಹೋಂತಿ ॥ (ನಿಯಮಸಾರ, ೪–೭೫)

ಅರ್ಥ: ಸಮಸ್ತ ವ್ಯಾಪಾರದಿಂದ ವಿಮುಕ್ತರು, ಚತುರ್ವಿಧದ ಆರಾಧನೆಯಲ್ಲಿ ಯಾವಾಗಲೂ ಆಸಕ್ತರು, ನಿರ್ಗ್ರಂಥರು ಮತ್ತು ನಿರ್ಮೋಹರಾದಂತಹವರು ಸಾಧುಗಳಾಗಿರುತ್ತಾರೆ. (**ವ್ಯಾಪಾರ**ವೆಂದರೆ **ಆರಂಭ**. ಯಾವ ಪರಪದಾರ್ಥಗಳಲ್ಲಿ ತನ್ನ ಜ್ಞಾನೋಪಯೋಗದ ಪರಿಣಮನೆ/ಪರಿಭ್ರಮಣೆಯಿದೆಯೋ ಅದು ವ್ಯಾಪಾರ. ವ್ಯಾವಹಾರಿಕ ಅರ್ಥದಲ್ಲಿ ವ್ಯಾಪಾರವೆಂದರೆ ಕೊಡುವುದು ಮತ್ತು ತೆಗೆದುಕೊಳ್ಳುವುದು. ಅದೇ ರೀತಿಯಲ್ಲಿ, ಇಲ್ಲಿ ನಮ್ಮ **ಜ್ಞಾನೋಪಯೋಗವು** ಪರಪದಾರ್ಥಗಳಲ್ಲಿ ಹೋಗುತ್ತದೆ. ಇದು ಕೊಡುವಿಕೆ. ಅದರಿಂದ ನಮಗೆ **ರಾಗದ್ವೇಷ**ಗಳು ಬರುತ್ತವೆ. ಇದು ತೆಗೆದುಕೊಳ್ಳುವಿಕೆ. ಇದನ್ನು ಇಲ್ಲಿ **ವ್ಯಾಪಾರ** ಎಂದು ಹೇಳುತ್ತಿದ್ದಾರೆ. **ಚತುರ್ವಿಧ ಆರಾಧನೆ** ಎಂದರೆ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ ಮತ್ತು ಸಮ್ಯಕ್‌ತಪಸ್ಸು ಎಂಬ ನಾಲ್ಕು ಬಗೆಯ ಆರಾಧನೆಗಳು.)

ಪಲವುಂ ಶೀಲಂಗಳಂ ತಾಳ್ದಿ: ಮುನಿಗಳು ಭಾವಿಸಿ ಆಚರಿಸುವ ಗುಣಗಳಲ್ಲಿ: (೧) ಮೂಲಗುಣ, (೨) ಶೀಲಗುಣ ಮತ್ತು (೩) ಉತ್ತರಗುಣ ಎಂದು ಮೂರು ಭೇದಗಳಿವೆ. **ಸಾಧುಗಳ ಮೂಲ ಗುಣಗಳ** ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಇಪ್ಪತ್ತೆಂಟು (೨೮)–ಸಾಧುಪರಮೇಷ್ಠಿಗಳ ಮೂಲಗುಣ**ಗಳನ್ನು ನೋಡಿರಿ.

ಶೀಲಂಗಳ ಬಗ್ಗೆ ಶ್ರೀ ವಟ್ಟಕೇರಾಚಾರ್ಯ (ಶ್ರೀ ಕುಂದಕುಂದಾಚಾರ್ಯ) ವಿರಚಿತ **ಮೂಲಾಚಾರ** ಗ್ರಂಥದ ಮೇಲೆ ಶ್ರೀ ವಸುನಂದಿ ಸಿದ್ಧಾಂತ ಚಕ್ರವರ್ತಿ ವಿರಚಿತ ಟೀಕೆ (ಆಚಾರವೃತ್ತಿ) ಯಲ್ಲಿ **ಮೂಲಾಚಾರ** ಗ್ರಂಥದ ಹನ್ನೊಂದನೆಯ ಅಧಿಕಾರವಾದ **ಶೀಲಗುಣಾಧಿಕಾರ**ದ ೧೦೧೮ ನೆಯ ಗಾಥೆಗೆ ಬರೆದಿರುವ ಆಚಾರವೃತ್ತಿಯಲ್ಲಿ ಹೀಗೆ ಹೇಳಿದೆ:

ಸೀಲಗುಣಾಲಯಭೂದೇ ಕಲ್ಲಾಣವಿಸೇಸಪಾಡಿ ಹೇರ ಜುದೇ ।
ವಂದಿತ್ತಾ ಅರಹಂತೇ ಸೀಲಗುಣೇ ಕಿತ್ತಿಸ್ಸಾಮಿ ॥ (ಮೂಲಾಚಾರ, ಶೀಲಗುಣಾಧಿಕಾರ, ೧೧–೧೦೧೮)

ಗಾಥಾರ್ಥ: ಪಂಚಕಲ್ಯಾಣಕ ಅತಿಶಯ ಮತ್ತು ಪ್ರಾತಿಹಾರ್ಯಗಳಿಂದ ಯುಕ್ತ, ಶೀಲ ಹಾಗೂ ಗುಣಗಳ ಸ್ಥಾನಸ್ವರೂಪ ಅರಹಂತರಿಗೆ ನಮಸ್ಕಾರ ಮಾಡಿ ನಾನು ಶೀಲ ಮತ್ತು ಗುಣಗಳ ಕೀರ್ತನ ಮಾಡುವೆನು.

ಸಂಸ್ಕೃತ ಟೀಕೆ: ಸೀಲ–ಶೀಲವ್ರತ ಪರಿರಕ್ಷಣಂ ಶುಭಯೋಗ ವೃತ್ತಿರಶುಭಯೋಗವೃತ್ತಿ ಪರಿಹಾರ ಆಹಾರ ಭಯ ಮೈಥುನ ಪರಿಗ್ರಹ ಸಂಜ್ಞಾವಿರತಿ ಪಂಚೇಂದ್ರಿಯ ನಿರೋಧಃ ಕಾಯಸಂಯಮ ವಿಷಯೋದ್ಭವದೋಷಾಭಾವಃ ಕ್ಷಾಂತ್ಯಾದಿಯೋಗಾಚ್ಚ ।

ಆಚಾರವೃತ್ತಿ: ಯಾರು ವ್ರತಗಳ ರಕ್ಷೆಯನ್ನು ಮಾಡುತ್ತಾರೋ ಅವರಿಗೆ ಶೀಲವೆನ್ನುತ್ತಾರೆ. ಶುಭ ಮನ–ವಚನ–ಕಾಯದಲ್ಲಿ ವರ್ತನ ಮಾಡುವುದು ಮತ್ತು ಅಶುಭ ಮನ–ವಚನ–ಕಾಯದ ಪ್ರವೃತ್ತಿಯನ್ನು ಪರಿಹಾರ ಮಾಡುವುದು; ಆಹಾರ ಭಯ ಮೈಥುನ ಮತ್ತು ಪರಿಗ್ರಹ ಈ ನಾಲ್ಕು ಸಂಜ್ಞೆಗಳಿಂದ ವಿರತವಾಗುವುದು, ಐದೂ ಇಂದ್ರಿಯಗಳನ್ನು ತಮ್ಮ ವಿಷಯಗಳಿಂದ ನಿಲ್ಲಿಸುವುದು; ಕಾಯಸಂಯಮ–ಪ್ರಾಣಿಸಂಯಮದ ವಿಷಯದಲ್ಲಿ ಉತ್ಪನ್ನವಾದ ದೋಷಗಳನ್ನು ದೂರಮಾಡುವುದು ಮತ್ತು ಉತ್ತಮ ಕ್ಷಮಾದಿಯನ್ನು ಧಾರಣ ಮಾಡುವುದು ಇವೆಲ್ಲ ಶೀಲದ ಭೇದಗಳಾಗಿವೆ. ಸರ್ವಶೀಲಗಳು ಹದಿನೆಂಟು ಸಾವಿರ ಭೇದರೂಪಗಳಾಗಿವೆ....

ಗುಣಾ–ಗುಣಾಃ ಸಂಯಮವಿಕಲ್ಪಾಃ ಪಂಚ ಮಹಾವ್ರತಾದಯಃ ಕಷಾಯಾಧ್ಯ ಭಾವೋsತಿಕ್ರಮಾಧ್ಯಭಾವಃ ಷಟ್ಕಾಯ ಸವಿಕಲ್ಪಸಂಯಮದಶಪ್ರಕಾರಾಬ್ರಹ್ಮಾಭಾವ ಆಕಂಪಿತಾದಿದೋಷವಿಮುಕ್ತಿರಾಲೋಚನಾದಿ ಪ್ರಾಯಶ್ಚಿತ್ತ ಕರಣಂ ।

ಆಚಾರವೃತ್ತಿ: ಯಾವುದು ಆತ್ಮದ ಉಪಕಾರ ಮಾಡುತ್ತದೆಯೋ ಅದು ಗುಣವಾಗಿದೆ. ಇಲ್ಲಿ ಸಂಯಮದ ಭೇದಗಳಿಗೆ ಗುಣವೆನ್ನುತ್ತಾರೆ. ಯಾವುವು ಐದು ಮಹಾವ್ರತಾದಿ ರೂಪವಿದೆ, ಕಷಾಯಾದಿಗಳ ಅಭಾವವಾಗುವುದು, ಅತಿಕ್ರಮ, ವ್ಯತಿಕ್ರಮಾದಿಯ ಅಭಾವವಾಗುವುದು, ಷಟ್ಕಾಯ ಜೀವಗಳ ಮೇಲೆ ದಯಾಪಾಲನರೂಪ ಸಂಯಮವಾಗುವುದು, ಹತ್ತು ಪ್ರಕಾರದ ಅಬ್ರಹ್ಮದ ಅಭಾವವಾಗುವುದು, ಆಕಂಪಿತಾದಿ ದೋಷದಿಂದ ರಹಿತ ಆಲೋಚನಾ, ಪ್ರಾಯಶ್ಚಿತ್ತಾದಿಯನ್ನು ಮಾಡುವುದು ಇವೆಲ್ಲವು ಗುಣಗಳಿವೆ. ಇವು ಎಂಬತ್ತನಾಲ್ಕು ಲಕ್ಷಗಳಾಗುತ್ತವೆ. ಅವುಗಳ ವರ್ಣನೆಯನ್ನು ಇಲ್ಲಿ ಮಾಡುವೆವು.
[ವಿ.ಸೂ.: ಗುಣಗಳು ಅಥವಾ ಸಂಯಮದ ಭೇದಗಳು ಎಂದು ಈ ಮೇಲಿನ ಆಚಾರವೃತ್ತಿಯಲ್ಲಿ ಹೇಳಲ್ಪಟ್ಟಿರುವ ಎಂಬತ್ತನಾಲ್ಕು ಲಕ್ಷ ಗುಣಗಳನ್ನು ಉತ್ತರಗುಣಗಳೆಂದೂ ಕರೆಯುತ್ತಾರೆ]

ಜೋಏ ಕರಣೇ ಸಣ್ಣಾ ಇಂದಿಯ ಭೊಮ್ಮಾದಿ ಸಮಣಧಮ್ಮೇಯ ।
ಅಣ್ಣೋಣ್ಣೇಹಿಂ ಅಭತ್ಥಾ ಅಟ್ಠಾರಹ ಸೀಲ ಸಹಸ್ಸಾಇಂ ॥ (ಮೂಲಾಚಾರ, ಶೀಲಗುಣಾಧಿಕಾರ, ೧೧–೧೦೧೯)

ಗಾಥಾರ್ಥ: ೩ ಯೋಗ, ೩ ಕರ್ಣ, ೪ ಸಂಜ್ಞೆಗಳು, ೫ ಇಂದ್ರಿಯಗಳು, ಪೃಥ್ವಿಯಾದಿ ೧೦ ಕಾಯಗಳು (೬ ಸ್ಥಾವರ ಮತ್ತು ೪ ತ್ರಸ) ಮತ್ತು ೧೦ ಶ್ರಮಣಧರ್ಮ ಇವುಗಳನ್ನು ಪರಸ್ಪರದಲ್ಲಿ ಗುಣಿಸಿದರೆ ಹದಿನೆಂಟುಸಾವಿರ ಭೇದಗಳಾಗಿ ಬಿಡುತ್ತವೆ.

ಇಗಿವೀಸ ಚತುರ ಸದಿಯಾ ದಸ ದಸ ದಸಗಾ ಯ ಆಣುಪ್ಪುವ್ವೀಯ ।
ಹಿಂಸಾದಿಕ್ಕಮಕಾಯಾವಿರಾಹಣಾ ಲೋಯಣಾಸೋಹೀ ॥ (ಮೂಲಾಚಾರ, ಶೀಲಗುಣಾಧಿಕಾರ, ೧೧–೧೦೨೫)

ಗಾಥಾರ್ಥ: ಹಿಂಸಾ, ಅತಿಕ್ರಮ, ಕಾಯ, ವಿರಾಧನಾ, ಆಲೋಚನಾ ಮತ್ತು ಶುದ್ಧಿ ಇವು ಕ್ರಮದಿಂದ ೨೧, ೪, ೧೦೦, ೧೦, ೧೦ ಮತ್ತು ೧೦ ಆಗುತ್ತವೆ. [ಇವುಗಳನ್ನು ಪರಸ್ಪರದಲ್ಲಿ ಗುಣಿಸಿದರೆ ೮೪೦೦೦೦೦ ಭೇದಗಳಾಗಿ ಬಿಡುತ್ತವೆ.]

ಶ್ರೀ ಕುಂದಕುಂದಾಚಾರ್ಯ ವಿರಚಿತ **ಅಷ್ಟಪಾಹುಡ**ದ ಐದನೆಯ ಭಾಗವಾದ **ಭಾವಪಾಹುಡ**ದಲ್ಲಿ **ಶೀಲ** ಮತ್ತು **ಉತ್ತರಗುಣ**ಗಳ ಬಗ್ಗೆ ಹೀಗೆ ಹೇಳಿದೆ:

ಸೀಲಸಹಸ್ಸಟ್ಠಾರಸ ಚಉರಾಸೀಗುಣಗಣಾಣ ಲಕ್ಖಾಇಂ ।
ಭಾವಹಿ ಅಣುದಿಣು ಣಿಹಿಲಂ ಅಸಪ್ಪಲಾವೇಣ ಕಿಂ ಬಹುಣಾ ॥ (ಅಷ್ಟಪಾಹುಡ, ಭಾವಪಾಹುಡ, ೫–೧೨೦)

ಗಾಥಾರ್ಥ: ಶೀಲವು ಹದಿನೆಂಟುಸಾವಿರ ಭೇದರೂಪವಿದೆ ಮತ್ತು ಉತ್ತರ ಗುಣಗಳು ಎಂಬತ್ತನಾಲ್ಕು ಲಕ್ಷ ಇವೆ. ಎಲೈ ಮುನಿಯೇ ! ಅಧಿಕ ಅಸತ್ಯ ಪ್ರಲಾಪರೂಪವಾದ ನಿರರ್ಥಕ ವಚನಗಳಿಂದೇನು ಪ್ರಯೋಜನವಿದೆ ? ಈ ಶೀಲಗಳನ್ನು ಮತ್ತು ಉತ್ತರಗುಣಗಳೆಲ್ಲವನ್ನೂ ನೀನು ನಿರಂತರವಾಗಿ ಭಾವಿಸು. ಇವುಗಳ ಭಾವನೆ–ಚಿಂತನೆ–ಅಭ್ಯಾಸಗಳನ್ನು ನಿರಂತರ ಮಾಡು, ಹೇಗೆ ಅವುಗಳ ಪ್ರಾಪ್ತಿಯಾಗುವುದೋ ಹಾಗೆಯೇ ಮಾಡು.

ಮುನಿಧರ್ಮದ **ಶೀಲಗುಣ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಹದಿನೆಂಟುಸಾವಿರ (೧೮೦೦೦)–ಶೀಲಗಳು**ಅನ್ನು ನೋಡಿರಿ. ಹಾಗೆಯೇ **ಸಾಧು**ಗಳ **ಉತ್ತರಗುಣ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಎಂಬತ್ತನಾಲ್ಕು ಲಕ್ಷ (೮೪೦೦೦೦೦)–ಗುಣಗಳು (ಸಾಧುಗಳ ಉತ್ತರಗುಣಂಗಳು)** ಅನ್ನು ನೋಡಿರಿ. **ಮುನಿಗಳ ಭೇದ**ಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಮೂರು (೩)–ಲಿಂಗದ ಮೂರು ಭೇದಗಳು** ಅನ್ನು ನೋಡಿರಿ.

ಕಂದ **ಕಾರ್ಯಮೆಮಗಿದುವೆ ಶಿವಪದ**
ಪರ್ಯಂತಂಬರಮಮೋಘಮುದ್ಧರಿಸುಗೆ ತಾ
ತ್ಪರ್ಯದಿನರ್ಹತ್ಸಿದ್ಧಾ
ಚಾರ್ಯೋಪಾಧ್ಯಾಯಸರ್ವಸಾಧುಗಳೆಮ್ಮಂ ॥ **೧–೬**

ಪದ ವಿಭಾಗ: ಕಾರ್ಯಮೆಮಗಿದುವೆ, ಶಿವಪದ–
ಪರ್ಯಂತಂಬರಂ, ಅಮೋಘಂ, ಉದ್ಧರಿಸುಗೆ,
ತಾತ್ಪರ್ಯದಿನ್,
ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯಸರ್ವಸಾಧುಗಳ್, ಎಮ್ಮಂ ॥ ೧–೬

ಅನ್ವಯಾರ್ಥ: (ಕಾರ್ಯಮೆಮಗಿದುವೆ=ಕಾರ್ಯಂ+ಎಮಗೆ+ಇದುವೆ) [ದುರ್ಮೋಹದ ಸಮೂಹವನ್ನು ಚೆನ್ನಾಗಿ ಹೋಗಲಾಡಿಸುವುದೇ ಈಗ] ನಮಗಿರುವ ಕಾರ್ಯ. **(ಶಿವಪದ)** ಮುಕ್ತಿಪದ **(ಪರ್ಯಂತಂ ಬರಂ)** [ದೊರಕುವ] ವರೆಗೆ, **(ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯಸರ್ವಸಾಧುಗಳ್=ಅರ್ಹತ್+ಸಿದ್ಧ+ಆಚಾರ್ಯ+ಉಪಾಧ್ಯಾಯ+ಸರ್ವಸಾಧುಗಳ್)** ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧುಗಳು, **(ತಾತ್ಪರ್ಯದಿನ್)** [ನಮ್ಮ] ಆಶಯವು [ಗುರಿಯು] **(ಅಮೋಘಂ)** ವ್ಯರ್ಥವಾಗದಂತೆ **(ಎಮ್ಮಂ)** ನಮ್ಮನ್ನು **(ಉದ್ಧರಿಸುಗೆ)** ಕಾಪಾಡಲಿ [ಸಂರಕ್ಷಿಸಲಿ] ॥ ೧–೬

ಮೊದಲಿನ ಐದು ಮಂಗಳಾಚರಣೆಯ ಪದ್ಯಗಳಲ್ಲಿ ಪಂಚಪರಮೇಷ್ಠಿಗಳನ್ನು ಅಂದರೆ, ಅರಿಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವಸಾಧು ಪರಮೇಷ್ಠಿಗಳನ್ನು ಪ್ರತ್ಯೇಕವಾಗಿ ಸ್ತುತಿಸಿರುವನು. ಈ ಪದ್ಯದಲ್ಲಿ ಕವಿಯು '**ಪಂಚಪರಮೇಷ್ಠಿ**'ಗಳೆಲ್ಲರನ್ನು ಒಟ್ಟಿಗೆ ಸ್ತುತಿಸಿರುವನು.

ಭಾವಾರ್ಥ: ದುರ್ಮೋಹ ಸಂದೋಹಮಂ ಅಂದರೆ, ದುರ್ಮೋಹದಿಂದ ಆವರಿಸಿದ ಅಜ್ಞಾನದ ಸಮೂಹವನ್ನು ಚೆನ್ನಾಗಿ ಹೋಗಲಾಡಿಸುವುದೇ ಈಗ ನಮಗಿರುವ ಕಾರ್ಯ. ನಮಗೆ ಮುಕ್ತಿಪದ ದೊರಕುವವರೆಗೂ, ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧುಗಳು ನಮ್ಮ ಈ ಆಶಯವು ವ್ಯರ್ಥವಾಗದಂತೆ ಕಾಪಾಡಲಿ ಎಂದು ಕವಿಯು ಪ್ರಾರ್ಥಿಸಿದ್ದಾನೆ. ೧–೬

ವಿಶೇಷ ವಿವರಣೆ: ಕಾರ್ಯಮೆಮಗಿದುವೆ ಶಿವಪದಪರ್ಯಂತಂ: ಮೋಕ್ಷಪದವನ್ನು ಪಡೆಯುವವರೆಗೆ ನಮಗೆ ಇರುವ ಕಾರ್ಯ ಯಾವುದು? ಅದನ್ನು ಕವಿಯು ಹಿಂದಿನ ಪದ್ಯದ ಕೊನೆಯಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ '**ದುರ್ಮೋಹದ ಸಮೂಹವನ್ನು ಹೋಗಲಾಡಿಸುವುದು**' ಎಂದು ತಿಳಿಯಬೇಕು. **ಪಂಚನಮಸ್ಕಾರ ಮಂತ್ರ**ದ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಐದು (೫)–ಪಂಚ ಣಮೋಕಾರ ಮಂತ್ರ**ವನ್ನು ನೋಡಿರಿ.

ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯಸರ್ವಸಾಧುಗಳ್: ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧುಗಳು ಇವರನ್ನು ಜೈನಾಗಮದಲ್ಲಿ ಪಂಚಪರಮೇಷ್ಠಿಗಳೆಂದೂ, ಪಂಚಗುರುಗಳೆಂದೂ ಕರೆಯುತ್ತಾರೆ. **ಪಂಚಪರಮೇಷ್ಠಿ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಐದು (೫)–ಪಂಚ ಪರಮೇಷ್ಠಿಗಳು (ಪಂಚಗುರುಗಳು)**ಅನ್ನು ನೋಡಿರಿ.

ಮಹಾ ಸ್ರಗ್ಧರೆ **ವರದಂ[1] ಪದ್ಮಾಂಕಿತಂ ತೋಳೆರಡು ನಿಶಿತವಜ್ರಪ್ರಭಾಭಾಸುರಂ ತೋ**
ಳೆರಡುದ್ಯಚ್ಚಕ್ರಿಚಕ್ರೋಜ್ಜ್ವಳತರತರಳಜ್ಯೋತಿ ತೋಳೆಂಟಗುರ್ವಾ
ಗಿರೆ ಬಣ್ಣಂ ಪೊನ್ನ ಬಣ್ಣಕ್ಕೆಣೆಯೆನೆ ಗರುಡಂ ವಾಹಮಾಗಿರ್ಪ ಚಕ್ರೇ
ಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳನಲೆದಾಟಿಕ್ಕೆ ವಿಕ್ರಾಂತದಿಂದಂ ॥ **೧–೭**

ಪದ ವಿಭಾಗ: ವರದಂ–ಪದ್ಮಾಂಕಿತಂ–ತೋಳೆರಡು; ನಿಶಿತ–ವಜ್ರ–ಪ್ರಭಾ–ಭಾಸುರಂ–ತೋಳೆರಡು; ಉದ್ಯಚ್ಚಕ್ರಿ–ಚಕ್ರೋಜ್ಜ್ವಳತರ–ತರಳ–ಜ್ಯೋತಿ–ತೋಳೆಂಟು, ಅಗುರ್ವಾಗಿರೆ; ಬಣ್ಣಂ–ಪೊನ್ನ–ಬಣ್ಣಕ್ಕೆ+ಎಣೆಯೆನೆ, ಗರುಡಂ–ವಾಹಮಾಗಿರ್ಪ, ಚಕ್ರೇಶ್ವರಿ, ಭಾಸ್ವತ್, ಧರ್ಮಚಕ್ರಾಕ್ರಮಿಗಳನ್, ಅಲೆದಾಟಿಕ್ಕೆ, ವಿಕ್ರಾಂತದಿಂದಂ ॥ ೧–೭

ಅನ್ವಯಾರ್ಥ: (ವರದಂ) ಅನುಗ್ರಹಿಸುತ್ತಿರುವ [ಹಾಗೂ] **(ಪದ್ಮಾಂಕಿತಂ=ಪದ್ಮ+ಅಂಕಿತಂ)** ಕಮಲವನ್ನು ಹಿಡಿದ ಮುದ್ರೆಯುಳ್ಳ **(ತೋಳೆರಡು)** ಎರಡು ತೋಳುಗಳು; **(ನಿಶಿತ ವಜ್ರ ಪ್ರಭಾಭಾಸುರಂ)** ಹರಿತವಾದ ವಜ್ರಾಯುಧದ ಕಾಂತಿಯಿಂದ ಶೋಭಿಸುವ **(ತೋಳೆರಡು)** ತೋಳುಗಳೆರಡು; **(ಚಕ್ರೋಜ್ಜ್ವಳತರ=ಚಕ್ರ+ಉಜ್ಜ್ವಳತರ)** ಚಕ್ರರತ್ನದಂತೆ ಹೆಚ್ಚು ಪ್ರಭೆಯುಳ್ಳ **(ಉದ್ಯಚ್ಚಕ್ರಿ=ಉದ್ಯತ್+ಚಕ್ರಿ)** ಶ್ರೇಷ್ಠವಾದ ಚಕ್ರಗಳನ್ನು ಹಿಡಿದ **(ತರಳ ಜ್ಯೋತಿ)** ಮಿರುಗುವ ಜ್ಯೋತಿಯಂತಿರುವ **(ತೋಳೆಂಟಗುರ್ವಾಗಿರೆ=ತೋಳ್+ಎಂಟು+ಅಗುರ್ವು+ಆಗಿರೆ)** ಎಂಟು ತೋಳುಗಳು ಬೆರಗುಗೊಳಿಸುತ್ತಿರಲು, **(ಬಣ್ಣಂ)** ದೇಹ ಕಾಂತಿಯು **(ಪೊನ್ನ ಬಣ್ಣಕ್ಕೆಣೆಯೆನೆ[=ಬಣ್ಣಕ್ಕೆ+ಎಣೆಯೆನೆ])** ಬಂಗಾರದ ಬಣ್ಣಕ್ಕೆ ಸಮಾನವಾಗಿಯೂ, **(ಗರುಡಂ**

---

[1] ವರದಂ–ಸಾಮಾನ್ಯವಾಗಿ ದೇವತಾವಿಗ್ರಹಗಳಲ್ಲಿ ಎರಡು ಬಗೆಯ ಹಸ್ತಮುದ್ರೆಗಳು ಕಂಡುಬರುತ್ತವೆ. (೧) ವರದಹಸ್ತ=ಅನುಗ್ರಹವನ್ನು ನೀಡುವ ಕೈಯಿನ ಭಂಗಿ, (೨) ಅಭಯಹಸ್ತ=ರಕ್ಷಣೆಯನ್ನು ಸೂಚಿಸುವ ಕೈಯಿನ ಭಂಗಿ.

ವಾಹಮಾಗಿರ್ಪ[=ವಾಹಂ+ಆಗಿರ್ಪ]) ಗರುಡನನ್ನು ವಾಹನವಾಗುಳ್ಳ **(ಚಕ್ರೇಶ್ವರಿ)** ಚಕ್ರೇಶ್ವರಿಯು, **(ಭಾಸ್ವದ್ಧರ್ಮ ಚಕ್ರಾಕ್ರಮಿಗಳನ್=ಭಾಸ್ವತ್+ಧರ್ಮಚಕ್ರ+ಆಕ್ರಮಿಗಳನ್)** ಹೊಳೆಯುವ ಧರ್ಮಚಕ್ರದ [ನಿರ್ದೇಶವನ್ನು] ಮೀರುವವರನ್ನು **(ವಿಕ್ರಾಂತದಿಂದಂ)** ತನ್ನ ಪರಾಕ್ರಮದಿಂದ **(ಅಲೆದಾಟಿಕ್ಕೆ=ಅಲೆದಾಟ+ಇಕ್ಕೆ)** ಅಲೆದಾಡಿಸಲಿ [ನಿಶ್ಯಕ್ತರನ್ನಾಗಿಸಲಿ] ॥ ೧-೭

ಈ ವೃತ್ತಪದ್ಯದಲ್ಲಿ ಕವಿಯು ವೃಷಭ ತೀರ್ಥಂಕರರ ಯಕ್ಷಿಯಾದ ಚಕ್ರೇಶ್ವರಿಯನ್ನು ಸ್ತುತಿಸಿರುವನು. ಇದರಲ್ಲಿ ಕವಿಯು ಚಕ್ರೇಶ್ವರಿಯ ರೂಪ ಲಕ್ಷಣಗಳನ್ನು ವರ್ಣಿಸಿರುವನು.

ಭಾವಾರ್ಥ: ಚಕ್ರೇಶ್ವರಿಗಿರುವ ಹನ್ನೆರಡು ಕೈಗಳಲ್ಲಿ ಒಂದು ಕೈ ವರದಾಂಕಿತವಾಗಿರುವುದು. ಇನ್ನೊಂದು ಕೈ ಕಮಲದ ಹೂವನ್ನು ಹಿಡಿದಿರುವುದು. ಇನ್ನು ಎರಡು ಕೈಗಳು ಹರಿತವಾದ ವಜ್ರಾಯುಧಗಳನ್ನು ಹಿಡಿದಿರುವುವು. ಉಳಿದ ಎಂಟು ಕೈಗಳು ಚಕ್ರರತ್ನದ ಪ್ರಭೆಯುಳ್ಳ ಶ್ರೇಷ್ಠವಾದ ಚಕ್ರಗಳನ್ನು ಹಿಡಿದಿರುವುವು. ಹೀಗೆ ಆಯುಧಗಳನ್ನು ಹಿಡಿದಿರುವ ಚಕ್ರೇಶ್ವರಿಯ ರೂಪವು ಬೆರಗುಗೊಳಿಸುತ್ತಿದೆ. ಬಂಗಾರದ ಬಣ್ಣಕ್ಕೆ ಸಮಾನವಾದ ದೇಹಕಾಂತಿಯುಳ್ಳವಳೂ, ಗರುಡನನ್ನು ವಾಹನವನ್ನಾಗುಳ್ಳವಳೂ ಆದ ಚಕ್ರೇಶ್ವರಿಯು ಧರ್ಮಚಕ್ರವನ್ನು ಅತಿಕ್ರಮಿಸುವವರನ್ನು ತನ್ನ ಪರಾಕ್ರಮದಿಂದ ಅಲೆದಾಡಿಸಿ ನಿಶ್ಯಕ್ತರನ್ನಾಗಿಸಲಿ ಎಂದು ಕವಿಯು ಸ್ತುತಿಸಿದ್ದಾನೆ. ೧-೭

ವಿಶೇಷ ವಿವರಣೆ: ತೀರ್ಥಂಕರರ ಯಕ್ಷ ಮತ್ತು ಯಕ್ಷಿ: ಈ ಪದ್ಯದ ವಿಶೇಷ ವಿವರಣೆ ನೀಡುವ ಮೊದಲು, ಜೈನಧರ್ಮೀಯ ರಲ್ಲಿ ಒಂದು ಪಂಥದವರು, ಅಚಲವಾದ ನಂಬಿಕೆಯುಳ್ಳವರಾಗಿ ಭಕ್ತಿಮಾಡುವ ತೀರ್ಥಂಕರರ **ಯಕ್ಷ** ಮತ್ತು **ಯಕ್ಷಿ**ಯರ ಬಗ್ಗೆ ತಿಳಿಯುವುದು ಸೂಕ್ತವೆನಿಸುತ್ತದೆ. ಜೈನಾಗಮದ ಪ್ರಕಾರ, ದೇವತೆಗಳು ಯಾರು ಎಂಬುದರ ಬಗ್ಗೆ ೧ ನೆಯ ಪದ್ಯದ **ವಿಶೇಷ ವಿವರಣೆ**ಯ ವಿಭಾಗದಲ್ಲಿ ವಿವರಿಸಲಾಗಿದೆ. ಜೈನಪುರಾಣಗಳಲ್ಲಿ ವರ್ಣಿಸಿರುವಂತೆ, ದೇವತೆಗಳಲ್ಲಿ: (೧) ಭವನವಾಸೀ, (೨) ವ್ಯಂತರ, (೩) ಜ್ಯೋತಿಷ್ಕ, ಮತ್ತು (೪) ವೈಮಾನಿಕ ಎಂಬ ನಾಲ್ಕು ನಿಕಾಯದ ದೇವತೆಗಳಿರುತ್ತಾರೆ. ಈ ನಾಲ್ಕು ನಿಕಾಯಗಳಲ್ಲಿ ಮೊದಲ ಮೂರು ನಿಕಾಯದ ದೇವತೆಗಳನ್ನು ಅಂದರೆ, (೧) ಭವನವಾಸೀ, (೨) ವ್ಯಂತರ ಮತ್ತು (೩) ಜ್ಯೋತಿಷ್ಕ ದೇವತೆಗಳನ್ನು '**ದೇವದುರ್ಗತಿಯ ದೇವತೆ**'ಗಳೆಂದು ಕರೆಯುವರು. ನಾಲ್ಕನೆಯ ನಿಕಾಯದ ವೈಮಾನಿಕ ದೇವತೆಗಳನ್ನು '**ಉಚ್ಚಗತಿಯ ದೇವತೆ**'ಗಳೆಂದು ಕರೆಯುವರು. ನಾಲ್ಕು ನಿಕಾಯಗಳಲ್ಲಿ ಎರಡನೆಯ ನಿಕಾಯದವರಾದ **ವ್ಯಂತರ ದೇವತೆ**ಗಳಲ್ಲಿ ಎಂಟು ಭೇದಗಳಿವೆ.

ವ್ಯಂತರಾಃ ಕಿನ್ನರ-ಕಿಂಪುರುಷ-ಮಹೋರಗ-ಗಂಧರ್ವ-ಯಕ್ಷ-ರಾಕ್ಷಸ-ಭೂತ-ಪಿಶಾಚಾಃ ॥

(ತತ್ತ್ವಾರ್ಥ ಸೂತ್ರ ೪-೧೧)

ಅರ್ಥ: ವ್ಯಂತರ ದೇವತೆಗಳಲ್ಲಿ (೧) ಕಿನ್ನರ, (೨) ಕಿಂಪುರುಷ, (೩) ಮಹೋರಗ, (೪) ಗಂಧರ್ವ, (೫) ಯಕ್ಷ, (೬) ರಾಕ್ಷಸ, (೭) ಭೂತ, ಮತ್ತು (೮) ಪಿಶಾಚವೆಂದು ಎಂಟು ಭೇದಗಳಿವೆ.

ವ್ಯಂತರ ದೇವತೆಗಳ ಬಗೆಗೆ ಈ ಕೆಳಗಿನ ಕೆಲವು ವಿವರಗಳನ್ನು ಇಲ್ಲಿ ಕೊಡುವುದು ಉಚಿತವೆನಿಸುತ್ತದೆ:

(೧) ಅದೆಷ್ಟೋ ವ್ಯಂತರ ದೇವತೆಗಳು ಜಂಬೂದ್ವೀಪ ಹಾಗೂ ಇತರ ಅಸಂಖ್ಯಾತ ದ್ವೀಪ-ಸಮುದ್ರಗಳಲ್ಲಿ ವಾಸ ಮಾಡುತ್ತಾರೆ.

(೨) ಭಿನ್ನ-ಭಿನ್ನ ದಿಶಾಂತರಗಳಲ್ಲಿ ಈ ದೇವಗಳ ನಿವಾಸಗಳಿರುವುದರಿಂದ ಅವರನ್ನು ವ್ಯಂತರರೆಂದು ಹೇಳಲಾಗುತ್ತದೆ. ಮೇಲೆ ಹೇಳಿದ ಎಂಟೂ ಸಂಜ್ಞೆಗಳು (ಹೆಸರುಗಳು) ಭಿನ್ನ-ಭಿನ್ನ ನಾಮಕರ್ಮದ ಉದಯದಿಂದ ಬಂದಿರುತ್ತವೆ.

(೩) ಪವಿತ್ರ ವೈಕ್ರಿಯಿಕ ಶರೀರದ ಧಾರಕರಾದ ದೇವಗಳು, ಎಂದೂ ಕೂಡ, ಮನುಷ್ಯರ ಅಶುಚಿಮಯ ಔದಾರಿಕ ಶರೀರದ ಜತೆಯಲ್ಲಿ ಕಾಮವಾಸನೆಯನ್ನು ಮಾಡುವುದೇ ಇಲ್ಲ. ದೇವಗಳಿಗೆ ಮಾಂಸ ಭಕ್ಷಣವೆಂದೂ ಇರುವುದೇ ಇಲ್ಲ. ದೇವಗಳಿಗೆ ಕಂಠಗಳಿಂದ ಸ್ರವಿಸುವ ಅಮೃತದ ಆಹಾರವಿರುತ್ತದೆ. ಆದರೆ ಅವರಿಗೆ ಕವಲಾಹಾರವಿರುವುದಿಲ್ಲ.

(೪) ವ್ಯಂತರ ದೇವಗಳ ಸ್ಥಾನಗಳಲ್ಲಿ ಜಿನಬಿಂಬ ಸಹಿತ ಎಂಟು ಪ್ರಕಾರದ ಚೈತ್ಯವೃಕ್ಷಗಳಿರುತ್ತವೆ ಮತ್ತು ಅವು ಮಾನಸ್ತಂಭ ಮೊದಲಾದವುಗಳಿಂದ ಯುಕ್ತವಿರುತ್ತವೆ.

(೫) ವ್ಯಂತರ ದೇವಗಳ ಆವಾಸವು ದ್ವೀಪ, ಸಮುದ್ರ, ಪರ್ವತ, ದೇಶ, ಗ್ರಾಮ, ನಗರ, ಮೂರು ದಾರಿ ಸೇರುವ ಸ್ಥಳ, ನಾಲ್ಕು ದಾರಿ ಸೇರುವ ಸ್ಥಳ, ಮನೆಯ ಅಂಗಳ, ಮಾರ್ಗ, ಓಣಿ, ನದಿಯ ದಡ, ವನ, ಉಪವನ, ದೇವಕುಲ ಇವೇ ಮೊದಲಾದ ಅಸಂಖ್ಯಾತ ಸ್ಥಾನಗಳಿವೆ.

ಈ ವ್ಯಂತರ ದೇವತೆಗಳಲ್ಲಿ, ಅದರಲ್ಲೂ ವಿಶೇಷವಾಗಿ **ಯಕ್ಷಜಾತಿ**ಯ ದೇವತೆಯರಲ್ಲಿ ಕೆಲವರು ಜೈನಧರ್ಮದ ಉಪಾಸಕರಾಗಿರುತ್ತಾರೆ. ಧರ್ಮದ ಮೇಲೆ, ಧರ್ಮಾಯತನಗಳ ಮೇಲೆ ಉಪಸರ್ಗ ಬಂದಾಗ, ಗೊತ್ತಾದರೆ ನಿವಾರಣೆ

ಮಾಡುತ್ತಾರೆ. ಈ ದೇವತೆಗಳು ಜೈನಧರ್ಮದ ಅನುಯಾಯಿಗಳಾಗಿರುವುದರಿಂದ ಜಿನಧರ್ಮೀಯರು ಅವರ ಉಪಕಾರ ಭಾವನೆಯನ್ನು ಸ್ಮರಿಸಿ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ತೀರ್ಥಂಕರರ ಸಮವಸರಣದಲ್ಲಿ ಅವರು ಜಿನೇಂದ್ರನ ಸರ್ವಶ್ರೇಷ್ಠ ಐಹಿಕ ಮಹತ್ವವನ್ನು ಪ್ರದರ್ಶಿಸುವುದಕ್ಕಾಗಿ, ಗೊತ್ತುಮಾಡಿದ ಸ್ಥಳದಲ್ಲಿ ನಿಂತು ಭಗವಂತನ ವಿಷಯದಲ್ಲಿ ಪೂಜ್ಯಭಾವವನ್ನೂ, ನಮ್ರತೆಯನ್ನೂ ಪ್ರಕಟಿಸುತ್ತಿರುತ್ತಾರೆ. ಹೀಗೆ ಅವರು ತೀರ್ಥಂಕರರ ಹತ್ತಿರ ಸ್ಥಿತವಾಗಿರುತ್ತಾರೆ. ಜಿನಧರ್ಮೀಯರಲ್ಲಿ ಒಂದು ಪಂಥದವರು ತೀರ್ಥಂಕರರ ಯಕ್ಷ-ಯಕ್ಷಿಯರಲ್ಲಿ ಅಚಲವಾದ ನಂಬಿಕೆ ಮತ್ತು ಭಕ್ತಿಭಾವ ಹೊಂದಿದ್ದು, ಅವರಲ್ಲಿ, (೧) ವೃಷಭ ತೀರ್ಥಂಕರರ ಯಕ್ಷ-ಯಕ್ಷಿಯರಾದ ಗೋಮುಖಯಕ್ಷ-ಚಕ್ರೇಶ್ವರಿಯಕ್ಷಿ, (೨) ಚಂದ್ರಪ್ರಭ ತೀರ್ಥಂಕರರ ಯಕ್ಷ-ಯಕ್ಷಿಯರಾದ ಶ್ಯಾಮಯಕ್ಷ-ಜ್ವಾಲಾಮಾಲಿನೀಯಕ್ಷಿ, (೩) ಶೀತಲನಾಥ ತೀರ್ಥಂಕರರ ಯಕ್ಷ-ಯಕ್ಷಿಯರಾದ ಬ್ರಹ್ಮದೇವಯಕ್ಷ-ಮಾನವೀಯಕ್ಷಿ, (೪) ನೇಮಿನಾಥ ತೀರ್ಥಂಕರರ ಯಕ್ಷ-ಯಕ್ಷಿಯರಾದ ಸರ್ವಾಹ್ಣಯಕ್ಷ-ಕೂಷ್ಮಾಂಡಿನಿಯಕ್ಷಿ, (೫) ಪಾರ್ಶ್ವನಾಥ ತೀರ್ಥಂಕರರ ಯಕ್ಷ-ಯಕ್ಷಿಯರಾದ ಧರಣೇಂದ್ರಯಕ್ಷ-ಪದ್ಮಾವತೀಯಕ್ಷಿ, ಪ್ರಸಿದ್ಧರು. ಸ್ವರ್ಗದಲ್ಲಿರುವ ಇಂತಹ ದೇವರಿಗೆ ಅವರ ಪೂರ್ವಪುಣ್ಯಕ್ಕನುಸಾರವಾಗಿ ಋದ್ಧಿಗಳು ಲಭಿಸಿರುತ್ತವೆ. ಅದರಿಂದ ಅವರು ಒಮ್ಮೊಮ್ಮೆ ಯಾವನಾದರೂ ಒಬ್ಬ ಪುಣ್ಯಪುರುಷನ ಪುಣ್ಯೋದಯದಿಂದ ಅವನ ದುಃಖವನ್ನು ನಿವಾರಿಸುವುದಕ್ಕೂ ಸಮರ್ಥರಾಗಿರುತ್ತಾರೆ. ಯಕ್ಷ-ಯಕ್ಷಿಯರು ಮೊದಲಾದ ದೇವಗಳು ಜಿನಶಾಸನವನ್ನು ರಕ್ಷಣೆ ಮಾಡುವವರೆಂದು ಅವರನ್ನು **ಜಿನಶಾಸನ ದೇವತೆ**ಗಳು ಎಂದೂ ಕರೆಯುತ್ತಾರೆ. ಹಾಗೂ ಈ ಉಪಕಾರಕ್ಕಾಗಿ ಜೈನಧರ್ಮೀಯರು ಅವರಿಗೆ ಗೌರವವನ್ನು ಸಲ್ಲಿಸುತ್ತಾರೆ.

ಸಾಲಿಗ್ರಾಮದ ಭಕ್ತಾಮರ ಬಸದಿಯಲ್ಲಿರುವ ಚಕ್ರೇಶ್ವರಿ ಯಕ್ಷಿಯ ವಿಗ್ರಹ



ಭಾಸ್ವದ್ಧರ್ಮಚಕ್ರಾಕ್ರಮಿಗಳನಲೆದಾಟಿಕ್ಕೆ: ಚಕ್ರೇಶ್ವರಿ ಮಾತೆಯು ವೃಷಭ ತೀರ್ಥಂಕರರ ಯಕ್ಷಿ ದೇವತೆ. ಪದ್ಯದಲ್ಲಿ ವರ್ಣಿಸಿರುವಂತೆ ಆಕೆಯು ತನ್ನ ಎಂಟು ತೋಳುಗಳಲ್ಲಿ (ಈ ಪದ್ಯದಲ್ಲಿ ವರ್ಣಿಸಿರುವಂತೆ, ಚಕ್ರೇಶ್ವರಿಗೆ ಒಟ್ಟು ೧೨ ತೋಳುಗಳಿವೆ) ಹಿಡಿದಿರುವ ಚಕ್ರಗಳಿಂದ, ನೋಡಲು ಬೆರಗುಗೊಳಿಸುತ್ತಿರುವಂತೆ ಕಂಡರೂ, ಧರ್ಮಪಾಲನೆಗಾಗಿ ಅಧರ್ಮಿಗಳಾದವರನ್ನು ಸಂಹರಿಸುವುದಿಲ್ಲ. ಬದಲಿಗೆ ಧರ್ಮಚಕ್ರವನ್ನು ಆಕ್ರಮಿಸುವವರನ್ನು, ತನ್ನ ಪರಾಕ್ರಮದಿಂದ, ದಿಕ್ಕೆಟ್ಟು ಅಲೆದಾಡಿಸಿ, ಬಸವಳಿಯುವಂತೆ ಮಾಡಿ ಅವರನ್ನು ನಿಶ್ಶಕ್ತರನ್ನಾಗಿಸುತ್ತಾಳೆ. ಹೀಗೆ ಧರ್ಮರಕ್ಷಣೆ ಮಾಡುವಾಗಲೂ ಪರಮ ಜಿನೇಂದ್ರರು ಬೋಧಿಸಿದ ಅಹಿಂಸಾ ಮಾರ್ಗವನ್ನೇ ಪಾಲಿಸುತ್ತಾಳೆ.

ಜೈನಬಸದಿಗಳಲ್ಲಿ ಶ್ರೀ ಚಕ್ರೇಶ್ವರಿಯಕ್ಷಿಯ ವಿಗ್ರಹಗಳು ಕಾಣುವುದು ಅಪರೂಪ. ಪಂಪನ ತಮ್ಮ ಜಿನವಲ್ಲಭನು, ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಗಂಗಾಧರಂ ಮಂಡಲಕ್ಕೆ ಸೇರಿದ ಕುರ್ಕ್ಯಾಲ ಎಂಬ ಹಳ್ಳಿಯ ಹತ್ತಿರದ ಬೊಮ್ಮಲಮ್ಮಗುಟ್ಟ (ಬೆಟ್ಟ) ದ ಮೇಲೆ ಕೆತ್ತಿಸಿರುವ ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದ ಶಾಸನದ ಮೇಲುಭಾಗದಲ್ಲಿ ಚಕ್ರೇಶ್ವರಿಯ ಶಿಲ್ಪವನ್ನು ಕೆತ್ತಲಾಗಿದೆ. ಹಾಗೆಯೇ, ಚಕ್ರೇಶ್ವರಿ ಯಕ್ಷಿಯ ವಿಗ್ರಹವು, ಮೈಸೂರು ಜಿಲ್ಲೆ, ಸಾಲಿಗ್ರಾಮದಲ್ಲಿ (ಈಗ ಈ ಊರನ್ನು ತಾಲ್ಲೂಕು ಕೇಂದ್ರವೆಂದು ಕರ್ನಾಟಕ ಸರ್ಕಾರವು ಘೋಷಿಸಿದೆ) ಇರುವ ಶ್ರೀ ೧೦೦೮ ವೃಷಭ ತೀರ್ಥಂಕರರ ಛತ್ರದ ಬಸದಿ (ಈಗ ಇದನ್ನು 'ಭಕ್ತಾಮರ ಬಸದಿ' ಎಂದು ಕರೆಯುತ್ತಾರೆ) ಯಲ್ಲಿ ಇರುತ್ತದೆ. ಅಲ್ಲಿ ಪ್ರತಿಷ್ಠಾಪಿತವಾಗಿರುವ ಶ್ರೀ ಚಕ್ರೇಶ್ವರಿಯಕ್ಷಿಯ ಸಾಲಂಕಾರವಾದ ಸುಮಾರು ನಾಲ್ಕು ಅಡಿ ಎತ್ತರದ ವಿಗ್ರಹವನ್ನು ನೋಡಿದರೆ, ಅದನ್ನು ನಿರ್ಮಿಸಿದ ಶಿಲ್ಪಿಯು ಪಂಪನ ಆದಿಪುರಾಣದ ಈ ಏಳನೆಯ ಪದ್ಯವನ್ನು ಬಹಳ ಆಳವಾಗಿ ಅಧ್ಯಯನ ಮಾಡಿ ಆ ಚಕ್ರೇಶ್ವರಿಯ ಶಿಲ್ಪವನ್ನು ಕಡೆದಿರುವನೋ ಎನ್ನುವ ಮಟ್ಟಿಗೆ ಈ ಪದ್ಯಕ್ಕೂ, ಆ ಚಕ್ರೇಶ್ವರಿಯಶಿಲ್ಪಕ್ಕೂ ಸಾದೃಶ್ಯವಿದೆ. ಪಂಪನ ಈ ಪದ್ಯವು **'ಕಾವ್ಯಶಿಲ್ಪ'**ವಾದರೆ, ಅಜ್ಞಾತ ಶಿಲ್ಪಿಯ ಆ ನಿರ್ಮಿತಿಯು **'ಶಿಲ್ಪಕಾವ್ಯ'**ವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಚಂಪಕಮಾಲೆ **ಪರಶುಫಳಾ[1]ಕ್ಷಸೂತ್ರವರದೋಚಿತಚಿಹ್ನಚತುರ್ಭುಜಂ ಮನೋ**
ಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸುಂ[2]
ದರತರವರ್ಣನೀವೃಷಭನಾಥಕಥಾರಚನೋಕ್ತಿಯಲ್ಲಿ ಮಾ
ಟ್ಟಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ ॥ ೧–೮

ಪದ ವಿಭಾಗ: ಪರಶು–ಫಳಾಕ್ಷಸೂತ್ರ–ವರದೋಚಿತ–ಚಿಹ್ನ–ಚತುರ್ಭುಜಂ,
ಮನೋಹರ–ವೃಷಲಾಂಛನಂ, ವೃಷಮುಖಂ, ವೃಷವಾಹನನ್, ಇಂದು–ಕುಂದ–
ಸುಂದರ–ತರ–ವರ್ಣನ್, ಈ–ವೃಷಭನಾಥ–ಕಥಾ–ರಚನೋಕ್ತಿಯಲ್ಲಿ,
ಮಾಟ್ಕೆ, ಇರದೆ, ಎಮಗೆ, ಆಗಳುಂ, ವೃಷಭಯಕ್ಷನ್, ಅವಿಘ್ನ–ಮನಃಪ್ರವೃತ್ತಿಯಂ ॥ ೧–೮

ಅನ್ವಯಾರ್ಥ: **(ಪರಶು ಫಳ ಅಕ್ಷಸೂತ್ರ ವರದೋಚಿತ[=ವರದ+ಉಚಿತ])** ಕೊಡಲಿ, ಫಲ, ಜಪಮಾಲೆಯನ್ನು ಹಿಡಿದ [ಹಾಗು] ಅನುಗ್ರಹ ಯುಕ್ತವಾದ **(ಚಿಹ್ನ)** ಮುದ್ರೆಯುಳ್ಳ **(ಚತುರ್ಭುಜಂ>ಚತುರ್ಭುಜನ್)** ನಾಲ್ಕು ತೋಳುಗಳನ್ನುಳ್ಳವನು, **(ಮನೋಹರ ವೃಷಲಾಂಛನಂ>ಲಾಂಛನನ್)** ಮನೋಹರವಾದ ವೃಷಭ ಲಾಂಛನವನ್ನುಳ್ಳವನು, **(ವೃಷಮುಖಂ>ವೃಷಮುಖನ್)** ಎತ್ತಿನ ಮುಖವುಳ್ಳವನು [ಗೋಮುಖನು], **(ವೃಷವಾಹನನ್)** ವೃಷಭವಾಹನನು, **(ಇಂದು ಕುಂದ ಸುಂದರ ತರ ವರ್ಣನ್)** ಚಂದ್ರ [ಮತ್ತು] ಮಲ್ಲಿಗೆ ಹೂವಿನಲ್ಲಿರುವಂತಹ ಸುಂದರವಾದ ವರ್ಣವುಳ್ಳವನು [ಚಂದ್ರ ಮತ್ತು ಮಲ್ಲಿಗೆ ಹೂವಿನಲ್ಲಿರುವಂತಹ ಧವಳ ವರ್ಣದ ಮೈಕಾಂತಿಯುಳ್ಳವನು], [ಆಗಿರುವ] **(ವೃಷಭಯಕ್ಷನ್)** ವೃಷಭ ತೀರ್ಥಂಕರರ ಯಕ್ಷನಾದ [ಗೋಮುಖ ಯಕ್ಷನು] **(ಈ)** ಈ **(ವೃಷಭನಾಥ ಕಥಾರಚನೋಕ್ತಿಯಲ್ಲಿ[=ಕಥಾರಚನ+ಉಕ್ತಿಯಲ್ಲಿ])** ವೃಷಭನಾಥನ ಜೀವನ ಕಥೆಯನ್ನು ರಚಿಸಿ ಹೇಳುವುದರಲ್ಲಿ **(ಆಗಳುಂ)** ಯಾವಾಗಲೂ **(ಎಮಗೆ)** ನಮಗೆ **(ಅವಿಘ್ನ ಮನಃಪ್ರವೃತ್ತಿಯಂ)** ಅಡಚಣೆಗಳಿಲ್ಲದ [ನಿರ್ವಿಘ್ನವಾದ] ಮನೋಧರ್ಮವನ್ನು **(ಇರದೆ>ಸುಮ್ಮನಿರದೆ)** ನಿರಂತರವಾಗಿ [ಸತತವಾಗಿ] **(ಮಾಟ್ಕೆ)** ಉಂಟು ಮಾಡಲಿ ॥ ೧–೮


ಭಾವಾರ್ಥ: ಒಂದು ಕೈಯಲ್ಲಿ ಕೊಡಲಿ, ಇನ್ನೊಂದು ಕೈಯಲ್ಲಿ ಹಣ್ಣು, ಮತ್ತೊಂದು ಕೈಯಲ್ಲಿ ಜಪಮಾಲೆ, ಇನ್ನೊಂದು

[1] ಮೂಲಪಾಠ–'ಫಳಾ', ಕೆಜಿ ಯವರ ಪಾಠ–'ಫಲಾ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಸುಂದರ', ಕೆಜಿ ಯವರ ಪಾಠ–'ಸೌಂದರ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಕೈಯಲ್ಲಿ ಅನುಗ್ರಹ ನೀಡುತ್ತಿರುವ ಮುದ್ರೆಗಳುಳ್ಳ ನಾಲ್ಕು ತೋಳುಗಳನ್ನುಳ್ಳ, ವೃಷಭ ಲಾಂಛನವನ್ನುಳ್ಳ, ಎತ್ತಿನ ಮುಖವುಳ್ಳ, ವೃಷಭವಾಹನವನ್ನುಳ್ಳ, ಧವಳ ವರ್ಣದ ಮೈಕಾಂತಿಯುಳ್ಳ, ವೃಷಭ ತೀರ್ಥಂಕರರ ಯಕ್ಷನಾದ, ಗೋಮುಖಯಕ್ಷನು ಈ ವೃಷಭನಾಥನ ಕಥೆಯನ್ನು ರಚಿಸುವಾಗ ನಿರ್ವಿಘ್ನವಾದ ಮನೋಧರ್ಮವನ್ನು ಉಂಟುಮಾಡಲಿ ಎಂದು ಕವಿಯು ಸ್ತುತಿಸಿದ್ದಾನೆ. ೧-೮

ಸಾಲಿಗ್ರಾಮದ ಭಕ್ತಾಮರ ಬಸದಿಯ ಬಾಗಿಲುವಾಡದಲ್ಲಿರುವ ಗೋಮುಖಯಕ್ಷನ ವಿಗ್ರಹ:



ಮುಂದಿನ ಪದ್ಯದಲ್ಲಿ ಕವಿಯು ವೃಷಭ ತೀರ್ಥಂಕರರ ಯಕ್ಷರಾದ ಗೋಮುಖ (ವೃಷಮುಖ/ಗೋವದನ) ಯಕ್ಷ ದೇವತೆಯನ್ನು ಸ್ತುತಿಸಿದ್ದಾನೆ.

ಕವಿಯು ಈ ವೃತ್ತಪದ್ಯದಲ್ಲಿ ವೃಷಭತೀರ್ಥಂಕರರ ಯಕ್ಷನಾದ ಗೋಮುಖಯಕ್ಷನನ್ನು ಸ್ತುತಿಸಿರುವನು. ಇಲ್ಲಿ ಕವಿಯು ಗೋಮುಖಯಕ್ಷನ ಬಾಹ್ಯ ರೂಪ ಲಕ್ಷಣಗಳನ್ನು ವರ್ಣಿಸಿರುವನು.

ವಿಶೇಷ ವಿವರಣೆ: ಈ ಪದ್ಯದಲ್ಲಿ ಕವಿಯು ವೃಷಭ ತೀರ್ಥಂಕರರ ಯಕ್ಷನಾದ ಗೋಮುಖಯಕ್ಷನನ್ನು ಕಾವ್ಯರಚನೆಗೆ ಸಹಕಾರಿ ಯಾದ ಮನಃಪ್ರವೃತ್ತಿಯನ್ನು ನೀಡುವಂತೆ ಕೋರಿ ಸ್ತುತಿಸಿರುವನು. ಜೈನಪುರಾಣಗಳಲ್ಲಿ ವರ್ಣಿಸಿರುವಂತೆ, ವೃಷಭ ತೀರ್ಥಂಕರರ ಯಕ್ಷನ ಮುಖವು ಗೋಮುಖದಂತೆ ಇರುವುದು. ಆದುದರಿಂದ ಆತನನ್ನು ಗೋಮುಖಯಕ್ಷ ಎಂದು ಕರೆಯುವರು. ಕವಿಯು ಈ ಪದ್ಯದಲ್ಲಿ ಯಕ್ಷನನ್ನು '**ವೃಷಮುಖ**' ಎಂದು ಬಣ್ಣಿಸಿರುವನು. ಗೋಮುಖಯಕ್ಷನ ಶಿಲ್ಪವು ಕಾಣಸಿಗುವುದು ಅಪರೂಪ. ಮೇಲಿನ ಏಳನೆಯ ಪದ್ಯದ **ವಿಶೇಷ ವಿವರಣೆ**ಯಲ್ಲಿ ತಿಳಿಸಿರುವಂತೆ ಸಾಲಿಗ್ರಾಮದಲ್ಲಿ ಇರುವ ಶ್ರೀ ೧೦೦೮ ವೃಷಭತೀರ್ಥಂಕರರ ಛತ್ರದ

ಬಸದಿಯ (ಈಗ ಇದನ್ನು 'ಭಕ್ತಾಮರ ಬಸದಿ' ಎಂದು ಕರೆಯುತ್ತಾರೆ) ಗರ್ಭಗೃಹದ ಕಲ್ಲಿನ ಬಾಗಿಲುವಾಡದ ಮೇಲೆ ಕೆಳಭಾಗದಲ್ಲಿ ಎಡಗಡೆಗೆ ಗೋಮುಖಯಕ್ಷನ ಸುಂದರವಾದ ಉಬ್ಬುಶಿಲ್ಪವನ್ನು ಕಡೆದಿರುತ್ತಾರೆ. ಮತ್ತೊಂದು ಪಾರ್ಶ್ವದಲ್ಲಿ ಚಿಕ್ಕದಾದ ಚಕ್ರೇಶ್ವರಿಯಕ್ಷಿಯ ಉಬ್ಬುಶಿಲ್ಪವನ್ನು ಕಡೆದಿರುತ್ತಾರೆ. ಈ ಎರಡೂ ಉಬ್ಬುಶಿಲ್ಪಗಳಿಗೆ ಹಿತ್ತಾಳೆಯ ಕವಚವನ್ನು ಜೋಡಿಸಿರುತ್ತಾರೆ.

ಚಂಪಕಮಾಲೆ **ಪರಮಜಿನೇಂದ್ರವಾಣಿಯೆ[1] ಸರಸ್ವತಿ ಬೇಱದು ಪೆಣ್ಣರೂಪಮಂ**
ಧರಿಯಿಸಿ[2] ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆಱೆದಪೆನಾಸರಸ್ವತಿಯೆ ಮಾಟ್ಕೆಮಗಿಲ್ಲಿಯೆ ವಾಗ್ವಿಳಾಸಮಂ ॥ ೧–೯

ಪದ ವಿಭಾಗ: ಪರಮಜಿನೇಂದ್ರ–ವಾಣಿಯೆ–ಸರಸ್ವತಿ, ಬೇಱದು, ಪೆಣ್ಣ–ರೂಪಮಂ, ಧರಿಯಿಸಿ, ನಿಂದುದಲ್ತು, ಅದುವೆ, ಭಾವಿಸಿಯೋದುವ, ಕೇಳ್ವ, ಪೂಜಿಪ, ಆದರಿಸುವ, ಭವ್ಯಕೋಟಿಗೆ, ನಿರಂತರ–ಸೌಖ್ಯಮನ್, ಈವುದು, ಆನ್, ಅದರ್ಕೆಱೆದಪೆನ್, ಆ, ಸರಸ್ವತಿಯೆ, ಮಾಟ್ಕೆ, ಎಮಗೆ, ಇಲ್ಲಿಯೆ, ವಾಗ್ವಿಳಾಸಮಂ ॥ ೧–೯

ಅನ್ವಯಾರ್ಥ: **(ಪರಮಜಿನೇಂದ್ರ ವಾಣಿಯೆ ಸರಸ್ವತಿ)** ಶ್ರೇಷ್ಠರಾದ ತೀರ್ಥಂಕರರ ದಿವ್ಯಧ್ವನಿಯೇ [ದಿವ್ಯಧ್ವನಿಯ ರೂಪದಲ್ಲಿ ಹೊರಟು, ಗಣಧರೋಕ್ತವಾದ ಶ್ರುತವೇ] ಸರಸ್ವತಿ. **(ಬೇಱದು=ಬೇಱ್+ಅದು)** [ಅದು] ವಿಶಿಷ್ಟವಾದ **(ಪೆಣ್ಣರೂಪಮಂ)** ಹೆಣ್ಣಿನ ರೂಪವನ್ನು [ಆಕಾರವನ್ನು] **(ಧರಿಯಿಸಿ)** ಧಾರಣೆಮಾಡಿ [ಪಡೆದು] **(ನಿಂದುದಲ್ತು=ನಿಂದುದು+ ಅಲ್ತು)** ನಿಂತಿರುವುದಲ್ಲ. **(ಅದುವೆ)** ಆ ಜಿನೇಂದ್ರ ವಾಣಿಯೇ, [ಅದನ್ನು] **(ಭಾವಿಸಿಯೋದುವ=ಭಾವಿಸಿ+ಓದುವ)** ಅಂತಃಕರಣದಿಂದ ಓದುವ, **(ಕೇಳ್ವ)** ಕೇಳುವ, **(ಪೂಜಿಪ)** ಆರಾಧಿಸುವ [ಗೌರವಿಸುವ], **(ಆದರಿಸುವ)** ವಾತ್ಸಲ್ಯವನ್ನು ತೋರಿಸುವ, **(ಭವ್ಯಕೋಟಿಗೆ)** ಅಸಂಖ್ಯಾತ ಮುಮುಕ್ಷುಗಳ ಸಮೂಹಕ್ಕೆ [ಮುಕ್ತಿಯನ್ನು ಹೊಂದಲು ಯೋಗ್ಯರಾದ ಅಸಂಖ್ಯ ಜೀವಿಗಳ ಸಮೂಹಕ್ಕೆ], **(ನಿರಂತರ ಸೌಖ್ಯಮನ್)** ಎಡೆಬಿಡದ ಸುಖವನ್ನು [ಶಾಶ್ವತಸುಖವನ್ನು] **(ಈವುದು)** ಕೊಡುತ್ತದೆ. **(ಆ ಸರಸ್ವತಿಯೆ)** [ಪರಮ ಜಿನೇಂದ್ರ ವಾಣಿಯೆಂಬ] ಆ ಸರಸ್ವತಿಯೆ **(ವಾಗ್ವಿಳಾಸಮಂ=ವಾಕ್+ವಿಳಾಸಮಂ)** ಮಾತಿನ ಸೊಗಸನ್ನು **(ಮಾಟ್ಕೆಮಗಿಲ್ಲಿಯೆ=ಮಾಟ್ಕೆ+ಎಮಗೆ+ಇಲ್ಲಿಯೆ=ಎಮಗೆ–ಇಲ್ಲಿಯೇ–ಮಾಟ್ಕೆ)** ನಮಗೆ ಈ ಸಂದರ್ಭ ದಲ್ಲಿಯೇ [ಈ ಮಹಾಕಾವ್ಯವನ್ನು ರಚಿಸುವ ಕಾಲದಲ್ಲಿಯೇ] ಉಂಟುಮಾಡಲಿ [ಎಂದು] **(ಆನದರ್ಕೆಱೆದಪೆನ್=ಆನ್+ ಅದರ್ಕೆ+ಎಱೆದಪೆನ್)** ನಾನು ಅದಕ್ಕೆ [ಆ ಪರಮ ಜಿನೇಂದ್ರ ವಾಣಿಗೆ/ಯನ್ನು] ಬೇಡುತ್ತೇನೆ ॥ ೧–೯

ಈ ವೃತ್ತಪದ್ಯದಲ್ಲಿ ಕವಿಯು, ಜಿನೇಂದ್ರವಾಣಿಯೆಂಬ ಸರಸ್ವತಿಯನ್ನು ಸ್ತುತಿಸಿದ್ದಾನೆ.

ಭಾವಾರ್ಥ: ಶ್ರೇಷ್ಠರಾದ ತೀರ್ಥಂಕರರ ದಿವ್ಯಧ್ವನಿಯ ರೂಪದಲ್ಲಿ ಹೊರಟು, ಗಣಧರೋಕ್ತವಾದ ಶ್ರುತವೇ ಸರಸ್ವತಿ ಎಂದು ಕವಿಯು ಸ್ಪಷ್ಟಪಡಿಸುತ್ತಾನೆ. ವಿಶಿಷ್ಟವಾದ ಸ್ತ್ರೀರೂಪವನ್ನು ಧರಿಸಿ ನಿಂತಿರುವುದು ಸರಸ್ವತಿಯಲ್ಲ. ಸರಸ್ವತಿಯೆಂಬ ಆ ಪರಮಜಿನೇಂದ್ರವಾಣಿಯನ್ನು ಭಾವಿಸಿ ಓದುವ, ಕೇಳುವ, ಪೂಜಿಸುವ, ಆದರಿಸುವ ಭವ್ಯಜನಕ್ಕೆ ನಿರಂತರವಾದ ಸುಖವನ್ನು ಕೊಡುತ್ತದೆ. ಅಂತಹ ಸರಸ್ವತಿಯು ನಮಗೆ ಈ ಕಾವ್ಯವನ್ನು ರಚಿಸುವ ಸಂದರ್ಭದಲ್ಲಿ ಮಾತಿನ ಸೊಗಸನ್ನು ಉಂಟುಮಾಡಲಿ ಎಂದು ಆ ಪರಮ ಜಿನೇಂದ್ರವಾಣಿಯೆಂಬ ಸರಸ್ವತಿಯನ್ನು ಬೇಡುತ್ತೇನೆ ಎಂದು ಕವಿಯು ಸ್ತುತಿಸಿದ್ದಾನೆ. ೧–೯

---

[1] ಮೂಲಪಾಠ–'ವಾಣಿಯ', ಕೆಜಿ ಯವರ ಪಾಠ–'ವಾಣಿಯೆ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಬೇಱದು ಪೆಣ್ಣರೂಪಮಂ ಧರಿಯಿಸಿ', ಎಫ್. ಕಿಟ್ಟೆಲ್ ಸಂಪಾದಿತ ಕೇಶಿರಾಜನ ಶಬ್ದಮಣಿ ದರ್ಪಣಂ, ಸೂತ್ರಂ ೮೮, ಪ್ರಯೋಗಂ: ಸ್ತ್ರೀನಪುಂಸಕಕ್ಕೆ_ ನೀಡಿರುವ ನಾಲ್ಕನೆಯ ವೃತ್ತಭಾಗದ ಉದ್ಧೃತವಾಕ್ಯದಲ್ಲಿರುವ ಪಾಠ–'ಬೆಱದು ಪೆಣ್ರೂಪಮಮಂ ಧರಿಸಿ', ಕ.ಸಾ.ಪ. ಸಂಪಾದಿತ ಕೃತಿಯಲ್ಲಿ ಇದೇ ಸೂತ್ರಂ ೮೮ ರ ಪ್ರಯೋಗದಲ್ಲಿರುವ ಪಾಠ–'ಬೆಱೆದು ಪೆಣ್ರೂಪಮಂ ಧರಿಯಿಸಿ', ಈ ಎರಡೂ ಸಂಪಾದಿತ ಕೃತಿಗಳಲ್ಲಿ ಉದ್ಧೃತವಾಗಿರುವ ಪಾಠಗಳು ಛಂದೋದೋಷದಿಂದಲೂ ಕೂಡಿರುವುವು. ಆದುದರಿಂದ ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ವಿಶೇಷ ವಿವರಣೆ: ಮೊದಲನೇ ಆಶ್ವಾಸದಲ್ಲಿನ ಮಂಗಳಾಚರಣೆಯ ಪದ್ಯಗಳಾದ ಮೊದಲ ೧೬ ಸ್ತುತಿ ಪದ್ಯಗಳಲ್ಲಿ, ಸ್ವರಸ್ವತಿಯನ್ನು ಸ್ತುತಿಸಿರುವ ಈ ವೃತ್ತಪದ್ಯವು ಅತ್ಯಂತ ಸುಂದರವೂ, ಶ್ರೇಷ್ಠ ಕಾವ್ಯಗುಣ ಹೊಂದಿರುವುದೂ ಆಗಿರುತ್ತದೆ.

ಬೇಱದು ಪೆಣ್ಣರೂಪಮಂ ಧರಿಯಿಸಿ ನಿಂದುದಲ್ತು: ಜೈನಾಗಮಗಳ ದೃಷ್ಟಿಯಲ್ಲಿ ಸರಸ್ವತಿ ಎಂದರೆ, ಸಾಮಾನ್ಯವಾಗಿ ಜನಮಾನಸದಲ್ಲಿ ನೆಲೆಸಿರುವ, ರತ್ನಖಚಿತ ಕಿರೀಟ ಧರಿಸಿರುವ, ಕುಂದ, ಇಂದು ಮತ್ತು ತುಷಾರದ ಬಿಂದುಗಳ ಹಾರದಂತೆ ಧವಳ ವರ್ಣದ **(ಯಾ ಕುಂದೇಂದು ತುಷಾರಹಾರ ಧವಳಾ)** ಛಾಯೆಯ ದೇಹವನ್ನುಳ್ಳವಳಾಗಿ, ಶುಭ್ರ [ಶ್ವೇತ] ವಸ್ತ್ರಧಾರಿಯಾಗಿ **(ಯಾ ಶುಭ್ರ ವಸ್ತ್ರಾವೃತಾ)**, ಎರಡು ಕೈಗಳಲ್ಲಿ ವೀಣೆ, [ಮತ್ತೆರಡು ಕೈಗಳಲ್ಲಿ ಶಾಸ್ತ್ರ ಹಾಗು ಜಪಮಾಲೆಗಳಿಂದ] ಅಲಂಕೃತಳಾಗಿ **(ಯಾ ವೀಣಾವರದಂಡ ಮಂಡಿತ ಕರಾ)**, ಬೆಳ್ದಾವರೆಯ ಮೇಲೆ ಆಸೀನಳಾದ **(ಯಾ ಶ್ವೇತಪದ್ಮಾಸನ)**, ಸೌಂದರ್ಯದ ರಾಶಿಯಂತಿರುವ ಮುಖಾರವಿಂದವನ್ನು ಹೊಂದಿದವಳಾಗಿ, ಆಕೆಯ ವಾಹನವಾದ ಮಯೂರವು ಇರಲಾಗಿ, ಸುಂದರವಾದ ವನದ ಮಧ್ಯದಲ್ಲಿ, ಶಿಲಾಪೀಠದ ಮೇಲೆ ಕಾಲಮೇಲೆಕಾಲುಹಾಕಿ ಕುಳಿತಿರುವ, ಹೀಗೆ ವಿಶಿಷ್ಟವಾದ ರೀತಿಯಲ್ಲಿ ಶೃಂಗರಿಸಲ್ಪಟ್ಟ **(ಬೇಱದು)** ಮೂರ್ತವಾದ ಆ ಸ್ತ್ರೀರೂಪವಲ್ಲ !! ಸರಸ್ವತಿ ಎಂದರೆ ಸಾಕ್ಷಾತ್ **ಜಿನೇಂದ್ರವಾಣಿ**ಯೇ ಸರಸ್ವತಿ. ಶ್ರೇಷ್ಠರಾದ ತೀರ್ಥಂಕರರ ದಿವ್ಯಧ್ವನಿಯಿಂದ ಹೊರಟು ಗಣಧರರಿಂದ ಪ್ರಣೀತವಾದ **ದ್ವಾದಶಾಂಗ ಶ್ರುತ**ವೇ ಸರಸ್ವತಿ ಎಂದು ಆಗಮೋಕ್ತ ರೀತಿಯಲ್ಲಿ ಕವಿಯು ಸ್ಪಷ್ಟವಾಗಿ ತಿಳಿಯಪಡಿಸಿದ್ದಾನೆ. ಆ ಜಿನವಾಣಿಯನ್ನು ಭಾವಿಸಿ ಓದುವ, ಕೇಳುವ, ಪೂಜಿಸುವ, ಆದರಿಸುವ ಸಕಲ ಭವ್ಯ ಜೀವರಿಗೆ ನಿರಂತರ ಸುಖವನ್ನು ನೀಡುತ್ತದೆ. ಜಿನವಾಣಿಯೆನ್ನುವ ಆ ಸರಸ್ವತಿಯು ತನಗೆ ಈ ಕಾವ್ಯ ರಚನೆಗೆ ಬೇಕಾದ ಮಾತಿನ ಸೊಗಸನ್ನು ಉಂಟುಮಾಡಲಿ ಎಂದು ನಾನು ಅದನ್ನು ಬೇಡುತ್ತೇನೆ ಎಂದು ಕವಿಯು ಈ ಪದ್ಯದಲ್ಲಿ ವಿನೀತನಾಗಿ ಪ್ರಾರ್ಥಿಸಿದ್ದಾನೆ.

ಭಾವಿಸಿಯೋದುವ (ಭಾವಿಸಿ+ಓದುವ): 'ಭಾವಿಸು' ಅಥವಾ '**ಭಾವಪೂರ್ವಕ**'ವಾಗಿ ಎಂದರೆ **ಆತ್ಮನ ಸಹಜ, ಶುದ್ಧ, ಚೈತನ್ಯದ ಭಾವನೆಯಿಂದ ಉತ್ಪನ್ನವಾದಂತಹ ಯಾವ ಸಹಜ, ಶುದ್ಧ, ಆನಂದವಿದೆಯೋ, ಆ ಸಹಜ, ಶುದ್ಧ, ಆನಂದದ ಅನುಭೂತಿಯಾಗುವುದಕ್ಕೆ** '**ಭಾವಿಸು**'ವುದು ಅಥವಾ '**ಭಾವಪೂರ್ವಕ**'ವಾಗಿ ಎನ್ನುವರು. ಆದುದರಿಂದ ಜಿನೇಂದ್ರವಾಣಿಯನ್ನು ಓದುವಾಗ (ಸ್ವಾಧ್ಯಾಯ ಮಾಡುವಾಗ) ಆತ್ಮನ ಸಹಜ, ಶುದ್ಧ ಆನಂದದ ಅನುಭೂತಿಯಾಗುವಂತೆ ಮನಸ್ಸಿನಲ್ಲಿ ಭಾವನೆಯನ್ನು ಹೊಂದಿ ಓದಬೇಕು ಅಥವಾ ಸ್ವಾಧ್ಯಾಯ ಮಾಡಬೇಕು ಎಂದು ಕವಿಯು ಹೇಳುತ್ತಾನೆ. ಈ '**ಭಾವಿಸಿ**' ಎನ್ನುವ ವಿಶೇಷಣವನ್ನು '**ಆದಿ ದೀಪಕ**'ದಂತೆ, ಪದ್ಯದಲ್ಲಿ ಮುಂದೆ ಬರುವ '**ಕೇಳ್ವ**', '**ಪೂಜಿಪ**', '**ಆದರಿಸುವ**' ಪದಗಳ ಹಿಂದೆಯೂ ಸೇರಿಸಿಕೊಳ್ಳ ಬಹುದು. ಅಂದರೆ **[ಭಾವಿಸಿ] ಕೇಳ್ವ, [ಭಾವಿಸಿ] ಪೂಜಿಪ, [ಭಾವಿಸಿ] ಆದರಿಸುವ** ಎಂದು ಸೇರಿಸಿಕೊಳ್ಳುವುದರಿಂದ ಕೇಳ್ವ, ಪೂಜಿಪ ಮತ್ತು ಆದರಿಸುವ ಪದಗಳ ಅರ್ಥಗರ್ಭಿತತೆ ಹೆಚ್ಚಾಗುತ್ತದೆ.

ಕಂದ **ಅನುಯೋಗಕುಸುಮಪಾದಪ**
ಮನೇಕನಯಲತಿಕಮಂಗಫಲಮಹಿಜಂ ಸ
ದ್ವನಜವನಮೆಮಗೆ ವಿಶ್ರಮ
ವನಮಕ್ಕತಿವಿಶ್ರುತಶ್ರುತಸ್ಕಂಧವನಂ ॥ ೧-೧೦

ಪದ ವಿಭಾಗ: ಅನುಯೋಗ-ಕುಸುಮ-ಪಾದಪಂ,
ಅನೇಕ-ನಯ-ಲತಿಕಂ, ಅಂಗ-ಫಲ-ಮಹಿಜಂ,
ಸದ್ವನಜ-ವನಂ, ಎಮಗೆ, ವಿಶ್ರಮವನಂ,
ಅಕ್ಕೆ, ಅತಿ-ವಿಶ್ರುತ-ಶ್ರುತಸ್ಕಂಧ-ವನಂ ॥ ೧-೧೦

ಅನ್ವಯಾರ್ಥ: (ಅನುಯೋಗ ಕುಸುಮ ಪಾದಪಂ) ಅನುಯೋಗಗಳೆಂಬ ಪುಷ್ಪವೃಕ್ಷಗಳಿಂದಲೂ, **(ಅನೇಕ ನಯ ಲತಿಕಂ)** ಅನೇಕ ಪ್ರಭೇದಗಳನ್ನುಳ್ಳ ನಯಗಳೆಂಬ ಬಳ್ಳಿಗಳಿಂದಲೂ, **(ಅಂಗ ಫಲ ಮಹಿಜಂ)** ಅಂಗ ಎಂದರೆ ದ್ವಾದಶಾಂಗವೆಂಬ ಹಣ್ಣಿನ ವೃಕ್ಷಗಳಿಂದಲೂ, **(ಸದ್ವನಜವನಂ=ಸತ್+ವನಜ-ವನಂ)** ಸತ್, ಸಂಖ್ಯಾ, ಕ್ಷೇತ್ರ, ಸ್ಪರ್ಶನ, ಕಾಲ, ಅಂತರ, ಭಾವ, ಅಲ್ಪಬಹುತ್ವ ಎಂಬ ಎಂಟು ಅನುಯೋಗದ್ವಾರಗಳೆಂಬ ತಾವರೆಗಳ ಕೊಳದಿಂದಲೂ, [ಕೂಡಿದ] **(ಅತಿ ವಿಶ್ರುತ)** ಅತ್ಯಂತ ಪ್ರಸಿದ್ಧವಾದ **(ಶ್ರುತಸ್ಕಂಧವನಂ)** ಶ್ರುತಸ್ಕಂಧವೆಂಬ [ಶ್ರುತವೃಕ್ಷವೆಂಬ] ವನವು **(ಎಮಗೆ)** ನಮಗೆ **(ವಿಶ್ರಮವನಮಕ್ಕೆ= ವಿಶ್ರಮ-ವನಂ+ಅಕ್ಕೆ)** [ಶಾಂತಿ ನೆಮ್ಮದಿಗಳನ್ನು ನೀಡುವ] ವಿಶ್ರಾಂತಿಯ ತಾಣವಾಗಲಿ ॥ ೧-೧೦

ಈ ಕಂದಪದ್ಯದಲ್ಲಿ ಕವಿಯು ಶ್ರುತಸ್ಕಂಧವನ್ನು ಒಂದು ವನಕ್ಕೆ ಹೋಲಿಸಿ ವರ್ಣಿಸಿದ್ದಾನೆ.

ಭಾವಾರ್ಥ: ಶ್ರುತಸ್ಕಂಧವೆಂಬ ವನವು ಅನುಯೋಗಗಳೆಂಬ ಹೂವೃಕ್ಷಗಳಿಂದಲೂ, ಅನೇಕ ಪ್ರಭೇದಗಳನ್ನುಳ್ಳ ನಯಗಳೆಂಬ ಬಳ್ಳಿಗಳಿಂದಲೂ, ಅಂಗಗಳೆಂಬ ಹಣ್ಣಿನ ವೃಕ್ಷಗಳಿಂದಲೂ, ಸತ್ ಮೊದಲಾದ ಎಂಟು ಅನುಯೋಗದ್ವಾರಗಳೆಂಬ ತಾವರೆಗಳ ಕೊಳದಿಂದಲೂ ಕೂಡಿರುವ ಅತ್ಯಂತ ಪ್ರಸಿದ್ಧವಾದ ಶ್ರುತಸ್ಕಂಧವೆಂಬ ಉದ್ಯಾನವು ನಮಗೆ ವಿಶ್ರಾಂತಿಯ ತಾಣವಾಗಲಿ ಎಂದು ಕವಿಯು ಸ್ತುತಿಸಿದ್ದಾನೆ. ೧-೧೦

ವಿಶೇಷ ವಿವರಣೆ: ಶ್ರುತಸ್ಕಂಧವನ: ಜೈನಧರ್ಮದ ಪೂರ್ವಾಚಾರ್ಯರುಗಳು **ಶ್ರುತ**ವನ್ನು ಅಂದರೆ **ಜಿನವಾಣಿ**ಯನ್ನು ಒಂದು **ಸ್ಕಂಧ**ಕ್ಕೆ ಅಂದರೆ ವೃಕ್ಷಕ್ಕೆ ಹೋಲಿಸುತ್ತಾರೆ. ಪಂಪನು ಆ **ಶ್ರುತಸ್ಕಂಧ**ವನ್ನು ಈ ಕಂದಪದ್ಯದಲ್ಲಿ ಸುಂದರವಾದ ವನಕ್ಕೆ ಹೋಲಿಸಿ ವರ್ಣಿಸಿದ್ದಾನೆ. **ಶ್ರುತಸ್ಕಂಧ**ವೆಂಬ ಆ ವನವು, ಶ್ರೇಷ್ಠವಾದ ಕಮಲದ ಹೂಗಳಂತಿರುವ, (೧) **ಅನುಯೋಗ**ಗಳೆಂಬ ಪುಷ್ಪವೃಕ್ಷಗಳಿಂದಲೂ, (೨) **ನಯ**ಗಳೆಂಬ ಬಳ್ಳಿಗಳಿಂದಲೂ, (೩) **ಅಂಗ**ಗಳೆಂಬ ಫಲವೃಕ್ಷಗಳಿಂದಲೂ, (೪) **ಸತ್** ಮೊದಲಾದ ಎಂಟು ಅನುಯೋಗದ್ವಾರಗಳೆಂಬ ತಾವರೆಯ ಕೊಳದಿಂದಲೂ ಒಳಗೊಂಡಿದೆ ಎಂದು ವರ್ಣಿಸುತ್ತಾನೆ. ಈ **ಶುತಸ್ಕಂಧ**ವೆಂಬ ವನವು ನಮಗೆ ವಿಶ್ರಾಂತಿಧಾಮವಾಗಲಿ ಎಂದು ಆಶಿಸುತ್ತಾನೆ.

(೧) ಅನುಯೋಗ: ತೀರ್ಥಂಕರರ ವಾಣಿಗೆ **'ಶ್ರುತ'**ವೆನ್ನುತ್ತಾರೆ. ಇಲ್ಲಿ **'ಸ್ಕಂಧ'**ವೆಂದರೆ **'ಬೇರಿನಿಂದ ಮೊದಲುಗೊಂಡು ರೆಂಬೆಗಳವರೆಗಿನ ವೃಕ್ಷದ ದಿಂಡು/ದೂಲ'** ಎಂದು ಅರ್ಥ. ಅಂದರೆ ತೀರ್ಥಂಕರರಿಂದ ಹೊರಟ ದಿವ್ಯಧ್ವನಿಯನ್ನು ಹೃದಯದಲ್ಲಿ ಧರಿಸಿಕೊಂಡು ಗಣಧರರು ರಚಿಸಿದ **ದ್ವಾದಶಾಂಗ**ರೂಪದ ಸೂತ್ರಗಳ ಸಮೂಹಕ್ಕೆ **'ಶ್ರುತಸ್ಕಂಧ'**ವೆನ್ನುವರು. ಈ ಶ್ರುತವು **ಹನ್ನೆರಡು ಅಂಗ** ಮತ್ತು **ಹದಿನಾಲ್ಕು ಪೂರ್ವ**ಗಳನ್ನು ಒಳಗೊಂಡಿರುತ್ತದೆ (ವಾಸ್ತವವಾಗಿ ಹನ್ನೊಂದು ಅಂಗಗಳಿರುವುವು. ಹನ್ನೆರಡನೆಯ ಅಂಗವು ಹದಿನಾಲ್ಕು ಪೂರ್ವಗಳನ್ನು ಒಳಗೊಂಡಿರುತ್ತದೆ. **'ದ್ವಾದಶಾಂಗಚತುರ್ದಶಪೂರ್ವ'** ಎನ್ನುವುದು ರೂಢಿಯಲ್ಲಿರುವ ಮಾತು). ಈ ದ್ವಾದಶಂಗ ಶ್ರುತ ಅಥವಾ ಜೈನಾಗಮವು (೧) **ಪ್ರಥಮಾನುಯೋಗ,** (೨) **ಕರಣಾನುಯೋಗ,** (೩) **ಚರಣಾನುಯೋಗ** ಮತ್ತು (೪) **ದ್ರವ್ಯಾನುಯೋಗ**ಗಳೆಂಬ ನಾಲ್ಕು ವಿಭಾಗಗಳಲ್ಲಿ ವಿಭಜನೆಗೊಂಡಿದೆ. ಅವುಗಳನ್ನು ನಾಲ್ಕು **ಅನುಯೋಗ**ಗಳೆಂದು ಕರೆಯುತ್ತಾರೆ. 'ಜೈನ ವಾಙ್ಮಯವು ನಾಲ್ಕು ಅನುಯೋಗಗಳ ರೂಪದಲ್ಲಿ ಯಾವಾಗ ವರ್ಗೀಕರಣಗೊಂಡಿತು ಎಂಬುದು ಸಂಶೋಧನೆಯ ವಿಷಯವಾಗಿದೆ' ಎಂದು ಮುನಿಶ್ರೀ ಪ್ರಮಾಣಸಾಗರರು ಹೇಳುತ್ತಾರೆ. ಅವರು ಮುಂದುವರೆದು, 'ಹಾಗೆ ಹೇಳುವುದಾದರೆ ದ್ವಾದಶಾಂಗದ [ಹನ್ನೆರಡನೆಯ ಅಂಗವಾದ] ದೃಷ್ಟಿವಾದ ಅಂಗದ ಐದು ಭೇದಗಳಲ್ಲಿ ಒಂದು ಭೇದ **ಪ್ರಥಮಾನುಯೋಗ**ವೆಂದೂ ಸಹ ಇದೆ. ನಾಲ್ಕು ಅನುಯೋಗಗಳ ವರ್ಗೀಕರಣದ ಬೀಜ (ಮೂಲ) ಇದೇ ಎಂದು ತಿಳಿದುಬರುತ್ತದೆ. ಒಂದುವೇಳೆ ವರ್ತಮಾನ ವ್ಯತಿಕ್ರಮಣಪಾಠವನ್ನು ಗಣಧರ ರಚಿತವೆಂದು ಸ್ವೀಕಾರ ಮಾಡಿದರೆ ಅದರಲ್ಲಿ ಉಲ್ಲೇಖಿತವಾದ **ಪ್ರಥಮಂ, ಕರಣಂ, ಚರಣಂ, ದ್ರವ್ಯಂ ನಮಃ ಪದವು ನಾಲ್ಕು ಅನುಯೋಗಗಳ ಪ್ರಾಚೀನತೆಯನ್ನು ಸಿದ್ಧಪಡಿಸುತ್ತದೆ'** ಎಂದೂ ಹೇಳುತ್ತಾರೆ. ಜೈನವಾಙ್ಮಯದಲ್ಲಿರುವ ವಿಷಯಗಳನ್ನು ಆಧರಿಸಿ ಕ್ರಮಬದ್ಧವಾಗಿ ನಾಲ್ಕು ಅನುಯೋಗಗಳನ್ನಾಗಿ ವಿಂಗಡಿಸಿರುವ ವಿಷಯವು ಶಾಸ್ತ್ರಾಧಾರ ರೂಪದಲ್ಲಿ ಪ್ರಪ್ರಥಮವಾಗಿ ಶ್ರೀ ಸಮಂತಭದ್ರಾಚಾರ್ಯರ **ರತ್ನಕರಂಡಕ ಶ್ರಾವಕಾಚಾರ**ದ **ಜ್ಞಾನಾಧಿಕಾರ**ದಲ್ಲಿ ಸಿಗುತ್ತದೆ. ಶ್ರೀ ಸಮಂತಭದ್ರಾಚಾರ್ಯರು **ರತ್ನಕರಂಡಕ ಶ್ರಾವಕಾಚಾರ**ದಲ್ಲಿ **ಅನುಯೋಗ**ಗಳ ಬಗ್ಗೆ ಹೀಗೆ ಹೇಳಿದ್ದಾರೆ:

ಪ್ರಥಮಾನುಯೋಗಮರ್ಥಾಖ್ಯಾನಂ ಚರಿತಂ ಪುರಾಣಮಪಿ ಪುಣ್ಯಮ್ ।
ಬೋಧಸಮಾಧಿನಿಧಾನಂ ಬೋಧತಿ ಬೋಧಃ ಸಮೀಚೀನಃ ॥

(ರತ್ನಕರಂಡಕ ಶ್ರಾವಕಾಚಾರ, ಜ್ಞಾನಾಧಿಕಾರ, ೨-೪೩)

ಅರ್ಥ: ಸಮ್ಯಗ್‌ಜ್ಞಾನವು ಧರ್ಮವೇ ಮೊದಲಾದ ನಾಲ್ಕು ಪುರುಷಾರ್ಥಗಳ ನಿರೂಪಣೆಯು ಯಾವುದರಲ್ಲಿದೆಯೋ ಆ ಚರಿತ್ರವನ್ನು ಪುರಾಣವನ್ನು ಹಾಗೆಯೇ ಪುಣ್ಯದಾಯಕವಾದ ರತ್ನತ್ರಯ ಮತ್ತು ಧರ್ಮ-ಶುಕ್ಲಧ್ಯಾನ ಇವುಗಳ ತವರುಮನೆಯಾದಂಥ ಪ್ರಥಮಾನುಯೋಗ ಶಾಸ್ತ್ರವು ತಿಳಿಸುತ್ತದೆ.

ಲೋಕಾಲೋಕವಿಭಕ್ತೇರ್ಯುಗಪರಿವೃತ್ತೇಶ್ಚತುರ್ಗತೀನಾಂ ಚ ।
ಆದರ್ಶಮಿವ ತಥಾಮತಿರವೈತಿ ಕರಣಾನುಯೋಗಂ ಚ ॥

(ರತ್ನಕರಂಡಕ ಶ್ರಾವಕಾಚಾರ, ಜ್ಞಾನಾಧಿಕಾರ, ೨-೪೪)

ಅರ್ಥ: ಅದೇ ಪ್ರಕಾರ ಸಮ್ಯಗ್‌ಜ್ಞಾನವು ಲೋಕ ಮತ್ತು ಅಲೋಕಗಳ ಭೇದವನ್ನೂ, ಆರು ಕಾಲಗಳ ಪರಿವರ್ತನವನ್ನೂ, ನಾಲ್ಕು ಗತಿಗಳನ್ನೂ ಕನ್ನಡಿಯಂತೆ ಸ್ಪಷ್ಟಗೊಳಿಸುವ ಕರಣಾನುಯೋಗವೆಂಬ ಆಗಮ ವಿಭಾಗವು ತಿಳಿಸುತ್ತದೆ.


ಗೃಹಮೇಧ್ಯನಗಾರಾಣಾಂ ಚಾರಿತ್ರೋತ್ಪತ್ತಿವೃದ್ಧಿರಕ್ಷಾಂಗಮ್ ।
ಚರಣಾನುಯೋಗಸಮಯಂ ಸಮ್ಯಗ್ಜ್ಞಾನಂ ವಿಜಾನಾತಿ ॥
(ರತ್ನಕರಂಡಕ ಶ್ರಾವಕಾಚಾರ, ಜ್ಞಾನಾಧಿಕಾರ, ೨-೪೫)

ಅರ್ಥ: ಸಮ್ಯಗ್ಜ್ಞಾನವು ಗೃಹಸ್ಥ ಹಾಗೂ ಮುನಿಯ ಚಾರಿತ್ರದ ಹುಟ್ಟು, ಬೆಳವಣಿಗೆ ಮತ್ತು ರಕ್ಷಣೆ ಇವುಗಳಿಗೆ ಕಾರಣವಾದ ಚರಣಾನುಯೋಗ ಶಾಸ್ತ್ರವನ್ನು ತಿಳಿಸುತ್ತದೆ.

ಜೀವಾಜೀವಸುತತ್ತ್ವೇ ಪುಣ್ಯಾಪುಣ್ಯೇ ಚ ಬಂಧಮೋಕ್ಷೌ ಚ ।
ದ್ರವ್ಯಾನುಯೋಗದೀಪಃ ಶ್ರುತವಿದ್ಯಾಲೋಕಮಾತನುತೇ ॥
(ರತ್ನಕರಂಡಕ ಶ್ರಾವಕಾಚಾರ, ಜ್ಞಾನಾಧಿಕಾರ, ೨-೪೬)

ಅರ್ಥ: ದ್ರವ್ಯಾನುಯೋಗವೆಂಬ ದೀಪವು ಜೀವ-ಅಜೀವ ಈ ನಿಜವಾದ ತತ್ತ್ವಗಳನ್ನು, ಪುಣ್ಯ ಮತ್ತು ಪಾಪಗಳನ್ನು ಮತ್ತು ಬಂಧ ಹಾಗೂ ಮೋಕ್ಷಗಳನ್ನು ಭಾವಶ್ರುತ ಜ್ಞಾನ ರೂಪ ಪ್ರಕಾಶವು ಹೇಗೆ ಉತ್ಪನ್ನವಾಗುವುದೋ ಆ ರೀತಿಯಿಂದ ವಿಸ್ತಾರಗೊಳಿಸುತ್ತದೆ, ಪ್ರಕಾಶದಲ್ಲಿ ತರುತ್ತದೆ.

ಶ್ರುತಸ್ಕಂಧದ ಚಿತ್ರವು ಹೀಗಿದೆ:



ಹೀಗೆ, ಈ **ಜೈನ ವಾಙ್ಮಯ**ವು ಅತಿ ವಿಶಾಲವಾದುದರಿಂದಲೂ, ಜೈನ ಶ್ರುತವು ಸೂತ್ರಗಳ ರೂಪದಲ್ಲಿ ಪ್ರಣೀತವಾಗಿರುವುದರಿಂದಲೂ, ಶ್ರುತವು ಪ್ರತಿಪಾದಿಸುವ ಸಿದ್ಧಾಂತ ಹಾಗೂ ನಿಯಮಗಳನ್ನು ಭವ್ಯ ಜನರಿಗೆ ಸುಲಭವಾಗಿ ಅರ್ಥೈಸಿಸುವ ಸಲುವಾಗಿ, ಶ್ರುತದ ವಿಷಯಗಳನ್ನು ಓರಣಗೊಳಿಸಿ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿರುತ್ತಾರೆ. ಈ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ ವರ್ಣಿಸಿರುವ **ಶ್ರುತವೇ ಅನುಯೋಗವೆನಿಸುವುದು.** ಈ ಬಗೆಗಿನ ವಿವರಣೆಯನ್ನು ಇದೇ ಆಶ್ವಾಸದ ೧–೩೯ ನೆಯ ಪದ್ಯದಲ್ಲಿ ಕವಿಯು ನೀಡಿದ್ದಾನೆ. **ಅನುಯೋಗ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ನಾಲ್ಕು (೪)–ಅನುಯೋಗಗಳು (ಶ್ರುತಸ್ಕಂಧ)** ಅನ್ನು ನೋಡಿರಿ.

(೨) **ನಯ:** ನಯಗಳು ಶ್ರುತಜ್ಞಾನದ ಭೇದಗಳಾಗಿವೆ. ವಸ್ತುವು ಅನೇಕ ಧರ್ಮಗಳಿಂದ (ಸ್ವಭಾವಗಳಿಂದ) ಕೂಡಿರುತ್ತದೆ. ಅದನ್ನು ತಿಳಿದುಕೊಳ್ಳುವುದು ಜಟಿಲವಾಗಿರುತ್ತದೆ. ಆದ್ದರಿಂದ ಒಂದೊಂದು ಧರ್ಮವನ್ನೂ ಕ್ರಮದಿಂದ ತಿಳಿದುಕೊಂಡು ವಸ್ತುವಿನ ಪೂರ್ಣ ಸ್ವರೂಪವನ್ನು ತಿಳಿದುಕೊಳ್ಳಬೇಕಾಗುತ್ತದೆ. ಹೀಗೆ ವಸ್ತುವಿನ ಅನೇಕ ಧರ್ಮಗಳಲ್ಲಿ ಯಾವುದಾದರೂ ಒಂದು ಅಂಶವನ್ನು ತಿಳಿಯುವ ಜ್ಞಾನಕ್ಕೆ **'ನಯ'**ವೆಂದು ಹೆಸರು. ಇವುಗಳಲ್ಲಿ ಏಳು ವಿಧಗಳಿವೆ. **ನಯ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಏಳು (೭)–ಸಪ್ತ ನಯಗಳು** ಅನ್ನು ನೋಡಿರಿ.

(೩) **ಅಂಗ:** ಶ್ರುತಜ್ಞಾನವು (ಅ) ಅಂಗಪ್ರವಿಷ್ಟ, ಮತ್ತು (ಆ) ಅಂಗಬಾಹ್ಯವೆಂದು ಎರಡು ವಿಧವಾಗಿದೆ. ಶ್ರುತಜ್ಞಾನದ ಬಹ್ವಂಶವು ಮೊದಲ ವಿಧವಾದ ಅಂಗಪ್ರವಿಷ್ಟಗಳಲ್ಲಿ ಅಡಕವಾಗಿದೆ. ಅಂಗಪ್ರವಿಷ್ಟವು ಹನ್ನೆರಡು (ದ್ವಾದಶಾಂಗ ಶ್ರುತ) ಬಗೆಯಾಗಿವೆ. **ಅಂಗ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಇಪ್ಪತ್ತೈದು (೨೫)–ಉಪಾಧ್ಯಾಯ ಪರಮೇಷ್ಠಿಗಳ ೨೫ ಮೂಲಗುಣಗಳು** ಇದರಲ್ಲಿ **೧ ನೆಯ ವಿಭಾಗ**ವನ್ನು ನೋಡಿರಿ.

(೪) **ಸತ್:** ಸತ್, ಸಂಖ್ಯಾ, ಕ್ಷೇತ್ರ, ಸ್ಪರ್ಶನ, ಕಾಲ, ಅಂತರ, ಭಾವ, ಅಲ್ಪಬಹುತ್ವ ಎಂಬ ಎಂಟನ್ನು **ಅನುಯೋಗದ್ವಾರ**ಗಳೆಂದು ಹೇಳುತ್ತಾರೆ. ಈ ಅನುಯೋಗದ್ವಾರಗಳನ್ನು ತಿಳಿಸುವ **ತತ್ತ್ವಾರ್ಥಸೂತ್ರ**ದ ಸೂತ್ರವು ಹೀಗಿದೆ:

ಸತ್ಸಂಖ್ಯಾಕ್ಷೇತ್ರಸ್ಪರ್ಶನಕಾಲಾಂತರಭಾವಾಲ್ಪಬಹುತ್ವೈಶ್ಚ ॥ (ತತ್ತ್ವಾರ್ಥಸೂತ್ರ, ೧–೮)

ಅರ್ಥ: ಸತ್, ಸಂಖ್ಯಾ, ಕ್ಷೇತ್ರ, ಸ್ಪರ್ಶನ, ಕಾಲ, ಅಂತರ, ಭಾವ ಮತ್ತು ಅಲ್ಪಬಹುತ್ವಗಳಿಂದಲೂ ಸಮ್ಯಗ್ದರ್ಶನ ಮೊದಲಾದ ವಿಷಯಗಳ ಜ್ಞಾನವುಂಟಾಗುತ್ತದೆ.

ಅನುಯೋಗದ್ವಾರವೆಂದರೇನು? ಹೇಳಲಾಗುವ ಯಾವೊಂದು ವಿಷಯದ ಅರ್ಥತಿಳಿಯುವ ಉಪಾಯವನ್ನೊಳಗೊಂಡ ಅಧಿಕಾರವನ್ನು ಅನುಯೋಗದ್ವಾರವೆಂದು ಹೇಳುತ್ತಾರೆ. ಅಂದರೆ ವಸ್ತುವಿನ ನಿರೂಪಣೆ ಮಾಡುವುದರಲ್ಲಿ ಅವಶ್ಯಕತೆ ಇರುವ ಅಧಿಕಾರಗಳನ್ನು ಅನುಯೋಗದ್ವಾರ ಎನ್ನುತ್ತಾರೆ. ಆದುದರಿಂದ ಅನುಯೋಗದ್ವಾರಗಳು ಕೇವಲ ಎಂಟು ಮಾತ್ರ ಎಂದು ಭಾವಿಸಬಾರದು. ಈ ಸತ್ ಮೊದಲಾದ ಎಂಟು ಅನುಯೋಗದ್ವಾರಗಳಿಂದ ಸಮ್ಯಗ್ದರ್ಶನದಿಗಳ ಮತ್ತು ಜೀವಾದಿ ಪದಾರ್ಥಗಳ ಜ್ಞಾನವುಂಟಾಗುವುದೆಂದು ತಿಳಿಯಬೇಕು.

ಶ್ರೀಮತ್ಸಮಂತಭದ್ರ
ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ ॥ **೧–೧೧**

ಪದ ವಿಭಾಗ: ಶ್ರೀಮತ್ಸಮಂತಭದ್ರಸ್ವಾಮಿಗಳ,
ಜಗತ್ಪ್ರಸಿದ್ಧ–ಕವಿಪರಮೇಷ್ಠಿಸ್ವಾಮಿಗಳ,
ಪೂಜ್ಯಪಾದಸ್ವಾಮಿಗಳ,
ಪದಂಗಳ್, ಈಗೆ, ಶಾಶ್ವತ–ಪದಮಂ ॥ ೧–೧೧

ಅನ್ವಯಾರ್ಥ: (ಶ್ರೀಮತ್ಸಮಂತಭದ್ರಸ್ವಾಮಿಗಳ) ಶ್ರೀಮತ್ ಸಮಂತಭದ್ರಸ್ವಾಮಿಗಳ, **(ಜಗತ್ಪ್ರಸಿದ್ಧ=ಜಗತ್+ಪ್ರಸಿದ್ಧ)** ಲೋಕ ಪ್ರಸಿದ್ಧರಾದ **(ಕವಿಪರಮೇಷ್ಠಿ ಸ್ವಾಮಿಗಳ)** ಕವಿಪರಮೇಷ್ಠಿಸ್ವಾಮಿಗಳ, **(ಪೂಜ್ಯಪಾದ ಸ್ವಾಮಿಗಳ)** ಪೂಜ್ಯಪಾದಸ್ವಾಮಿಗಳ **(ಪದಂಗಳ್)** ಪಾದಗಳು **(ಶಾಶ್ವತಪದಮಂ)** [ನಮಗೆ] ಮೋಕ್ಷಪದವನ್ನು **(ಈಗೆ)** ದಯಪಾಲಿಸಲಿ ॥ ೧–೧೧

ಈ ಕಂದಪದ್ಯದಿಂದ ಪ್ರಾರಂಭಿಸಿ ಮುಂದಿನ ಆರು ಪದ್ಯಗಳಲ್ಲಿ ಕವಿಯು ಜೈನಾಚಾರ್ಯಪರಂಪರೆಯಲ್ಲಿ ಬಂದಿರುವ ಕೆಲವು ಪ್ರಸಿದ್ಧ

ಜೈನಾಚಾರ್ಯರನ್ನು ಸ್ತುತಿಸಿದ್ದಾನೆ.

ಭಾವಾರ್ಥ: ಈ ಪದ್ಯದಲ್ಲಿ ಕವಿಯು ಪೂರ್ವಾಚಾರ್ಯರುಗಳಾದ ಶ್ರೀಮತ್ಸಮಂತಭದ್ರಸ್ವಾಮಿಗಳ, ಜಗತ್ಪ್ರಸಿದ್ಧ ಕವಿಪರಮೇಷ್ಠಿಸ್ವಾಮಿಗಳ, ಪೂಜ್ಯಪಾದಸ್ವಾಮಿಗಳ ಪಾದಗಳು ಮುಕ್ತಿಪದವನ್ನು ದಯಪಾಲಿಸಲಿ ಎಂದು ಭಕ್ತಿಯಿಂದ ಸ್ಮರಿಸಿದ್ದಾನೆ. ೧-೧೧

ವಿಶೇಷ ವಿವರಣೆ: ಸಮಂತಭದ್ರ ಸ್ವಾಮಿಗಳು: ಇವರು ತಮಿಳುನಾಡಿನ ಕಾವೇರಿ ನದಿಯ ದಕ್ಷಿಣ ತೀರದಲ್ಲಿರುವ ತಿರುಚಿನಾಪಳ್ಳಿ ಯಲ್ಲಿ ಕ್ಷತ್ರಿಯವಂಶದಲ್ಲಿ ಕ್ರಿ.ಶ.ಸು. ೨-೩ನೆಯ ಶತಮಾನದಲ್ಲಿ ಜನಿಸಿದವರು. ಇವರ ಬಾಲ್ಯದ ಹೆಸರು ಶಾಂತಿವರ್ಮ. ಅವರು ಇಡೀ ಭರತ ಖಂಡವನ್ನೆಲ್ಲ ಸಂಚರಿಸಿದ್ದರು. ಇವರಿಗೆ ಭಸ್ಮಕವ್ಯಾಧಿ ಅಂಟಿಕೊಂಡಿತ್ತೆಂದೂ, ಅದನ್ನು ಹೋಗಲಾಡಿಸಿಕೊಂಡ ಪರಿಯ ಬಗ್ಗೆ ಒಂದು ಕುತೂಹಲಕಾರಿಯಾದ ಕಥೆ ಇದೆ. ಇವರು (೧) ರತ್ನಕರಂಡಕ ಶ್ರಾವಕಾಚಾರ, (೨) ಗಂಧಹಸ್ತಿ ಮಹಾಭಾಷ್ಯ (ಇದು ತತ್ತ್ವಾರ್ಥ ಸೂತ್ರದ ಮೇಲಿನ ವ್ಯಾಖ್ಯಾನ), (೩) ಆಪ್ತಮೀಮಾಂಸಾ (ದೇವಾಗಮ ಸ್ತೋತ್ರ), (೪) ಸ್ವಯಂಭೂ ಸ್ತೋತ್ರ, (೫) ಯುಕ್ತ್ಯನುಶಾಸನ (ವೀರಜಿನ ಸ್ತೋತ್ರ), (೬) ಜೈನಾಷ್ಟಕಮ್ (ಜಿನಸ್ತುತಿ ಶತಕ), (೭) ತತ್ತ್ವಾನುಶಾಸನ, (೮) ವಿಜಯಧವಳ ಟೀಕಾ, (೯) ಜೀವಸಿದ್ಧಿ, (೧೦) ಪ್ರಾಕೃತ ವ್ಯಾಕರಣ, (೧೧) ಪ್ರಮಾಣ ಪದಾರ್ಥ, (೧೨) ಕರ್ಮಪ್ರಾಭೃತ ಟೀಕಾ, ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆಂದು ತಿಳಿಯುತ್ತದೆ. ಇವುಗಳಲ್ಲಿ ಅನೇಕ ಕೃತಿಗಳು ಈಗ ಉಪಲಬ್ಧವಿಲ್ಲ.

ಕವಿಪರಮೇಷ್ಠಿ ಸ್ವಾಮಿಗಳು: ಬಹುಶ್ರುತ ವಿದ್ವಾಂಸರಾದ ಡಾ. ಆ.ನೇ. ಉಪಾಧ್ಯೆಯವರು **ಪ್ರಬುದ್ಧ ಕರ್ಣಾಟಕ**ದಲ್ಲಿ ಬರೆದಿರುವ **ಕವಿ ಪರಮೇಶ್ವರ ಅಥವಾ ಪರಮೇಷ್ಠಿ** ಎಂಬ ಲೇಖನದಲ್ಲಿ (ಸಂಪುಟ ೨೮ ಸಂಚಿಕೆ ೩ [೨೮-೩, ಪುಟ ಸಂ. ೩ ರಿಂದ ೮]) **ಕವಿಪರಮೇಷ್ಠಿಯ** ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾರೆ:

'ಸುಮಾರು ೯ನೆಯ ಶತಮಾನದ ಆದಿಭಾಗದಿಂದ ೧೩ನೆಯ ಶತಮಾನದ ಮಧ್ಯದವರೆಗೂ ಬೇರೆ ಬೇರೆ ಕವಿಗಳು ಕವಿಪರಮೇಷ್ಠಿಯ ಹೆಸರನ್ನು ಒಳ್ಳೆ ಆದರಭಾವದಿಂದ ಹೇಳಿದುದು ನಮಗೆ ಕಂಡುಬರುತ್ತದೆ. ಅವನೊಬ್ಬ ಸುಪ್ರಸಿದ್ಧನಾದ ಕವಿಯಾಗಿ ಅರುವತ್ತುಮೂರು ಶಲಾಕಾ ಪುರುಷರನ್ನು ಅಥವಾ ಜಿನಧರ್ಮದ ಪ್ರಸಿದ್ಧ ಪುರುಷರನ್ನು ಬೆಳಗಿಸುವ ಪುರಾಣವನ್ನು ಬರೆದವನು ಎಂಬ ಅವನ ವ್ಯಕ್ತಿತ್ವವು ನಮ್ಮ ಕಣ್ಣಮುಂದೆ ನೆರೆ ನಿಲ್ಲುತ್ತದೆ. ಗುಣಭದ್ರನು ಈ ಗ್ರಂಥವು **ಗದ್ಯ-ಕಥೆ**ಯಾಗಿದ್ದು ಅದು ತನ್ನ ಗುರುವಾದ ಜಿನಸೇನನ ಕೃತಿಗೆ ಮಾತೃಕೆಯಾಗಿತ್ತೆಂದು ಹೇಳಿದ್ದಾನೆ. ಜಿನಸೇನನು ಅದನ್ನು **ವಾಗಾರ್ಥಸಂಗ್ರಹ**ವೆಂದು ಕರೆದಂತೆ ತೋರುತ್ತದೆ. ಚಾವುಂಡರಾಯನು ತನ್ನ **ಕನ್ನಡ ಚಾವುಂಡರಾಯ ಪುರಾಣ**ಕ್ಕೆ ಅದನ್ನು ಉಪಯೋಗಿಸಿಕೊಂಡಿದ್ದಾನೆ. ...... ಅವನ ಕಾಲವು ಅನಿಶ್ಚಿತವಾಗಿದ್ದರೂ, ಅವನು ಕ್ರಿ.ಶ. ೮೩೭ರಲ್ಲಿ ಜಯಧವಳವನ್ನು ರಚಿಸಿದ ಜಿನಸೇನನಿಗಿಂತಲೂ ಮೊದಲಿನವನೆಂದು ನಿರ್ಧಾರವಾಗಿ ಹೇಳಬಹುದು. ... ಇಂದಿನವರೆಗೂ ಯಾವ ಹಸ್ತಪ್ರತಿಗಳ ಸಂಗ್ರಹಾಲಯಗಳಲ್ಲಿಯೂ ಅವನ ಕೃತಿಯನ್ನು ಗುರುತಿಸುವುದು ನಮ್ಮಿಂದ ಸಾಧ್ಯವಾಗಿಲ್ಲ.'

ಪೂಜ್ಯಪಾದ ಸ್ವಾಮಿಗಳು: ಇವರು ಕರ್ನಾಟಕದ ಕೊಳ್ಳೇಗಾಲದಲ್ಲಿ ಜನಿಸಿದವರು. ಇವರ ಬಾಲ್ಯದ ಹೆಸರು ದೇವನಂದಿ ಎಂದು ಇದ್ದಿತು. ಇವರ ಕಾಲ ಕ್ರಿ.ಶ. ಸುಮಾರು ೨೫೮-೩೦೮ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವರು (೧) ಸಮಾಧಿತಂತ್ರ, (೨) ಇಷ್ಟೋಪದೇಶ, (೩) ದಶಭಕ್ತಿ (ಸಂಸ್ಕೃತ), (೪) ಜೈನೇಂದ್ರ ವ್ಯಾಕರಣ, (೫) ಶಾಂತ್ಯಷ್ಟಕ, (೬) ಸಾರಸಂಗ್ರಹ, (೭) ಚಿಕಿತ್ಸಾಶಾಸ್ತ್ರ, (೮) ಜೈನಾಭಿಷೇಕ, (೯) ಸರ್ವಾರ್ಥಸಿದ್ಧಿ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೆಲವು ಈಗ ಉಪಲಬ್ಧವಿಲ್ಲ. ಈ ಆಚಾರ್ಯರ ಬಗ್ಗೆ ಅನೇಕ [ದಂತ]ಕಥೆಗಳಿವೆ.

ಆರ್ಯನುತಗೃಧ್ರಪಿಂಛಾ
ಚಾರ್ಯಜಟಾಚಾರ್ಯವಿಶ್ರುತಶ್ರುತಕೀರ್ತ್ಯಾ
ಚಾರ್ಯಪುರಸ್ಸರಮಪ್ಪಾ
ಚಾರ್ಯಪರಂಪರೆಯೆ ಕುಡುಗೆ ಭವ್ಯೋತ್ಸವಮಂ ॥ ೧-೧೨

ಪದ ವಿಭಾಗ: ಆರ್ಯ-ನುತ-ಗೃಧ್ರಪಿಂಛಾಚಾರ್ಯ,
ಜಟಾಚಾರ್ಯ, ವಿಶ್ರುತ-ಶ್ರುತಕೀರ್ತ್ಯಾಚಾರ್ಯ,
ಪುರಸ್ಸರಮಪ್ಪ, ಆಚಾರ್ಯ-
ಪರಂಪರೆಯೆ, ಕುಡುಗೆ, ಭವ್ಯೋತ್ಸವಮಂ ॥ ೧-೧೨

ಅನ್ವಯಾರ್ಥ: **(ಆರ್ಯ ನುತ)** ಸಜ್ಜನರು ಸ್ತುತಿಸುವ **(ಗೃಧ್ರಪಿಂಛಾಚಾರ್ಯ)** ಗೃಧ್ರಪಿಂಛಾಚಾರ್ಯರು [ಮತ್ತು]

(ಜಟಾಚಾರ್ಯ) ಜಟಾಚಾರ್ಯರು, **(ವಿಶ್ರುತ)** ಅತ್ಯಂತ ಪ್ರಸಿದ್ಧರಾದ **(ಶ್ರುತಕೀರ್ತ್ಯಾಚಾರ್ಯ)** ಶ್ರುತಕೀರ್ತಿ ಆಚಾರ್ಯರು **(ಪುರಸ್ಸರಮಪ್ಪ)** ಸಹಿತರಾಗಿರುವ **(ಆಚಾರ್ಯ ಪರಂಪರೆಯೆ)** ಆಚಾರ್ಯ ಪರಂಪರೆಯು **(ಭವ್ಯೋತ್ಸವಮಂ=ಭವ್ಯ+ ಉತ್ಸವಮಂ)** ಭವ್ಯಜನರಿಗೆ [ಮುಮುಕ್ಷುಗಳಿಗೆ] ಸಂತೋಷವನ್ನು **(ಕುಡುಗೆ)** ನೀಡಲಿ ॥ ೧-೧೨

ಭಾವಾರ್ಥ: ಸಜ್ಜನರು ಕೊಂಡಾಡುವ ಗೃಧ್ರಪಿಂಛಾಚಾರ್ಯರು (ಆಚಾರ್ಯ ಉಮಾಸ್ವಾಮಿಗಳು), ಜಟಾಚಾರ್ಯರು, ಹಾಗೂ ಅತ್ಯಂತ ಪ್ರಸಿದ್ಧರಾದ ಶ್ರುತಕೀರ್ತಿ ಆಚಾರ್ಯರುಗಳಿಂದ ಕೂಡಿದ ಶ್ರೇಷ್ಠ ಆಚಾರ್ಯ ಪರಂಪರೆಯು ಭವ್ಯಜನರಿಗೆ ಸಂತೋಷವನ್ನು ನೀಡಲಿ ಎಂದು ಕವಿಯು ಆಶಿಸಿದ್ದಾನೆ. ೧-೧೨

ವಿಶೇಷ ವಿವರಣೆ: ಗೃಧ್ರಪಿಂಛಾಚಾರ್ಯರು: ಅತಿ ಪ್ರಸಿದ್ಧವಾದ **'ತತ್ತ್ವಾರ್ಥ ಸೂತ್ರ'** ಅಥವಾ **'ಮೋಕ್ಷಶಾಸ್ತ್ರ'**ದ ಕರ್ತೃಗಳೇ ಗೃಧ್ರಪಿಂಛಾಚಾರ್ಯರು. ಇದು ಸಂಸ್ಕೃತ ಭಾಷೆಯಲ್ಲಿ ರಚಿಸಲ್ಪಟ್ಟ ಮೊಟ್ಟಮೊದಲನೆಯ ಜೈನಾಗಮ ಗ್ರಂಥವಾಗಿದೆ. ಇವರ ನಿಜ ನಾಮಧೇಯ **ಉಮಾಸ್ವಾಮಿ**ಗಳು ಎಂದು. ಉತ್ತರ ಭಾರತದಲ್ಲಿ ಇವರು **ಉಮಾಸ್ವಾತಿ**ಗಳೆಂದು ಪ್ರಸಿದ್ಧರು. ಇವರ ಕಾಲಮಾನ ಸುಮಾರು ಕ್ರಿ.ಶ. ಎರಡನೆಯ ಶತಮಾನ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆಗ್ಗೆ ವಿದ್ಯೆ, ಸಂಯಮ ಮತ್ತು ತಪಸ್ಸುಗಳಲ್ಲಿ ಇವರನ್ನು ಹೋಲುವ ಬೇರೆ ಯಾವ ಮುನಿಗಳೂ ಇರಲಿಲ್ಲವೆಂದು ಉಲ್ಲೇಖಗಳಲ್ಲಿ ದೊರೆಯುತ್ತವೆ. ಇವರು ಮಹಾವ್ರತ ಪಾಲನೆಯಲ್ಲಿ ಬಹಳ ಎಚ್ಚರಿಕೆಯಿಂದ ಇದ್ದರು ಹಾಗೂ ಪ್ರಾಣಿಗಳ ರಕ್ಷಣೆಯಲ್ಲಿ ಅತ್ಯಂತ ಎಚ್ಚರಿಕೆಯಿಂದ ವರ್ತಿಸುತ್ತಿದ್ದರು. ಒಂದು ಸಾರಿ ಅವರ ನವಿಲುಗರಿಯ ಪಿಂಛವು ಬಿದ್ದುಹೋಗಲು, ಅವರು ಹದ್ದಿನ ಗರಿಗಳಿಂದ ಮಾಡಿದ ಪಿಂಛವನ್ನು ಧರಿಸಿದರು. ಅಂದಿನಿಂದ ಶ್ರಾವಕರು ಇವರನ್ನು **'ಗೃಧ್ರಪಿಂಛಾಚಾರ್ಯ'**ರೆಂದು ಕರೆಯತೊಡಗಿದರು.

ಜಟಾಚಾರ್ಯರು: ಜಟಾಚಾರ್ಯರು ಅಥವ ಜಟಾಸಿಂಹನಂದಿ ಇವರು **'ವರಾಂಗ ಚರಿತೆ'**ಯೆಂಬ ಸಂಸ್ಕೃತ ಪುರಾಣಕಾವ್ಯವನ್ನು ರಚಿಸಿರುತ್ತಾರೆ. ಆ ಕೃತಿಯನ್ನು ಧರಣಿಪಂಡಿತನೆಂಬುವನು ಕನ್ನಡಕ್ಕೆ ಅನುವಾದಿಸಿದ್ದಾನೆಂಬುದು ತಿಳಿದುಬರುತ್ತದೆ. ಇವರ ಕಾಲ ಕ್ರಿ.ಶ.ಸು. ಏಳನೆಯ ಶತಮಾನ. [ಇವರ ಹೆಸರು ಕೊಪ್ಪಳದ ಸಮೀಪದ ಗುಡ್ಡದಲ್ಲಿನ ಪಾಲ್ಕಿಗುಂಡಿನ ಮೇಲೆ (ಪಾಲ್ಕಿಗುಂಡು ಶಾಸನ) '... ಶ್ರೀ ಜಟಾ ... (ಸಿಂಹನಂದಿ)' ಎಂದು ಉಲ್ಲೇಖವಾಗಿದೆ.] ಈ ಕೃತಿಯನ್ನು ಡಾ. ಆ.ನೇ. ಉಪಾಧ್ಯೆಯವರು ವಿಮಾರ್ಶಾತ್ಮಕ ಪೀಠಿಕೆ ಮತ್ತು ಟಿಪ್ಪಣಿಗಳೊಂದಿಗೆ ೧೯೩೮ ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

ಶ್ರುತಕೀರ್ತ್ಯಾಚಾರ್ಯರು: ಪಂಪನು ಈ ಪದ್ಯದಲ್ಲಿ ಸ್ತುತಿಸಿರುವ ಶ್ರುತಕೀರ್ತಿ ಆಚಾರ್ಯರ ಬಗ್ಗೆ ಅಧಿಕೃತ ಮಾಹಿತಿ ದೊರೆಯುವುದಿಲ್ಲ.

ಎಮಗೆ ಮಲಧಾರಿಸಿದ್ಧಾಂ
ತಮುನೀಶ್ವರಚರಣಸರಸಿಜಾತಂ ದೇವೇಂ
ದ್ರಮುನಿಪದಾಬ್ಜಂ ಜಯನಂ
ದಿಮುನಿಕ್ರಮಕಮಳಮೀಗೆ ಬೋಧೋದಯಮಂ ॥ ೧-೧೩

ಪದ ವಿಭಾಗ: ಎಮಗೆ, ಮಲಧಾರಿ-ಸಿದ್ಧಾಂತ-
ಮುನೀಶ್ವರ-ಚರಣಸರಸಿಜಾತಂ, ದೇವೇಂದ್ರಮುನಿ-
ಪದಾಬ್ಜಂ, ಜಯನಂದಿಮುನಿ-
ಕ್ರಮಕಮಳಂ, ಈಗೆ, ಬೋಧೋದಯಮಂ ॥ ೧-೧೩

ಅನ್ವಯಾರ್ಥ: (ಮಲಧಾರಿ ಸಿದ್ಧಾಂತ ಮುನೀಶ್ವರ ಚರಣಸರಸಿಜಾತಂ) ಮಲಧಾರಿ ಸಿದ್ಧಾಂತ ಮುನೀಶ್ವರರ ಪಾದಕಮಲ ಗಳು, **(ದೇವೇಂದ್ರಮುನಿ ಪದಾಬ್ಜಂ[=ಪದ+ಅಬ್ಜಂ])** ದೇವೇಂದ್ರ ಮುನಿಗಳ ಪಾದಕಮಲಗಳು, **(ಜಯನಂದಿ ಮುನಿ)** ಜಯನಂದಿ ಮುನಿಗಳ **(ಕ್ರಮಕಮಳಂ)** ಪಾದಕಮಲಗಳು **(ಎಮಗೆ)** ನಮಗೆ **(ಬೋಧೋದಯಮಂ=ಬೋಧ+ಉದಯಮಂ)** ಸಮ್ಯಗ್ಜ್ಞಾನ ಉಂಟಾಗುವಂತೆ **(ಈಗೆ)** ಅನುಗ್ರಹಿಸಲಿ ॥ ೧-೧೩

ಭಾವಾರ್ಥ: ಈ ಪದ್ಯದಲ್ಲಿ ಕವಿಯು, ಮಲಧಾರಿ ಸಿದ್ಧಾಂತ ಮುನೀಶ್ವರರ ಪಾದಕಮಲಗಳು, ದೇವೇಂದ್ರ ಮುನಿಗಳ ಪಾದಕಮಲಗಳು, ಜಯನಂದಿ ಮುನಿಗಳ ಪಾದಕಮಲಗಳು ನಮಗೆ ಸಮ್ಯಗ್ಜ್ಞಾನ ಉಂಟಾಗುವಂತೆ ಅನುಗ್ರಹಿಸಲಿ ಎಂದು ಈ ಆಚಾರ್ಯರನ್ನು ಸ್ಮರಿಸಿದ್ದಾನೆ. ೧-೧೩

ವಿಶೇಷ ವಿವರಣೆ: ಈ ಪದ್ಯವನ್ನು ಒಮ್ಮೆ ಓದಿದರೆ, ಇದನ್ನು ಈ ಕೆಳಗಿರುವಂತೆ ಸರಳವಾಗಿ ಅರ್ಥೈಸ ಬಹುದಾಗಿದೆ:

'ಮಲಧಾರಿ ಸಿದ್ಧಾಂತ ಮುನೀಶ್ವರರ ಪಾದಕಮಲಗಳು, ದೇವೇಂದ್ರ ಮುನಿಗಳ ಪಾದಕಮಲಗಳು ಮತ್ತು ಜಯನಂದಿ ಮುನಿಗಳ ಪಾದಕಮಲಗಳು ನಮಗೆ ಸಮ್ಯಗ್‌ಜ್ಞಾನ ಉಂಟಾಗುವಂತೆ ಅನುಗ್ರಹಿಸಲಿ'

ಆದರೆ, ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದ, ಆಂಧ್ರಪ್ರದೇಶ (ಈಗಿನ ತೆಲಂಗಾಣ) ರಾಜ್ಯದ ಕರೀಂನಗರ ಜಿಲ್ಲೆಯ ಕರೀಂನಗರ ತಾಲ್ಲೂಕಿನ ಗಂಗಾಧರಂ ಮಂಡಲದ ಕುರ್ಕ್ಯಾಲ ಗ್ರಾಮದ ಸಮೀಪದಲ್ಲಿರುವ ಬೊಮ್ಮಲಮ್ಮಗುಟ್ಟದ ಮೇಲಿನ ಒಂದು ಬಂಡೆಯ ಮೇಲೆ ದೊರಕಿರುವ ಕನ್ನಡದ ಆದಿಕವಿ ಪಂಪನಿಗೆ ಸಂಬಂಧಿಸಿದ ಶಾಸನವು, ಈ ಪದ್ಯದ ಒಟ್ಟಾರೆ ಭಾವಾರ್ಥವನ್ನು ಬದಲಿಸುತ್ತದೆ ಎಂದರೆ ಸೋಜಿಗವೆನಿಸದೆ ಇರದು. ಈ ಶಾಸನವನ್ನು ಮಾಡಿಸಿರುವವನು ಪಂಪನ ತಮ್ಮನಾದ **'ಜಿನವಲ್ಲಭ'**. ಆದುದರಿಂದ ಈ ಶಾಸನವು '**ಜಿನವಲ್ಲಭನ ಶಾಸನ**'ವೆಂದೂ ಕರೆಯುತ್ತಾರೆ. ಈ ಬಗೆಗಿನ ಹೆಚ್ಚಿನ ವಿವರಣೆಗೆ ಈ ಆಶ್ವಾಸದ ಕೊನೆಯಲ್ಲಿ ನೀಡಿರುವ **ಇತರೆ ಕಾವ್ಯ/ಶಾಸ್ತ್ರಗ್ರಂಥ/ಶಾಸನಗಳ ಉಲ್ಲೇಖಗಳು** ಈ ವಿಭಾಗದಲ್ಲಿ ನೋಡಿರಿ.

ಮಲಧಾರಿ ಸಿದ್ಧಾಂತ ಮುನೀಶ್ವರ ಚರಣಸರಸಿಜಾತಂ: ಇಲ್ಲಿ ಮುನಿಗಳ ಹೆಸರಿನಲ್ಲಿರುವ **ಮಲಧಾರಿ** ಪದದ ಅರ್ಥವನ್ನು ತಿಳಿಯಲು ಪ್ರಯತ್ನಿಸೋಣ. ಜೈನ ಮುನಿಗಳಿಗೆ ವಿಶೇಷಣವಾಗಿ ಉಪಯೋಗಿಸುವ ಈ ಶಬ್ದವು ವೈಶಿಷ್ಟ್ಯಪೂರ್ಣವಾದುದು. ಮೊದಲಿಗೆ, **ಮಲ** ಶಬ್ದದ ವ್ಯಾಖ್ಯೆಯನ್ನು ತಿಳಿಯೋಣ. **ತಿಲೋಯಪಣ್ಣತ್ತೀ**ಯಲ್ಲಿ **ಮಲ**ದ ವ್ಯಾಖ್ಯೆಯನ್ನು ಸ್ಥೂಲವಾಗಿ ಹೀಗೆ ಹೇಳಿದೆ:

ಪಾವಂ ಮಲಂ ತಿ ಭಣ್ಣಇ ಉವಯಾರ ಸರೂವಏಣ ಜೀವಾಣಂ । .... ॥ (ತಿಲೋಯಪಣ್ಣತ್ತೀ, ೧-೧೭)
ಗಾಥಾರ್ಥ: ಜೀವಿಗಳ ಪಾಪಕ್ಕೆ ಉಪಚಾರ (ಗೌಣ) ದಿಂದ 'ಮಲ'ವೆಂದು ಹೇಳಲಾಗುತ್ತದೆ. ....

ಇಂತಹ ಪಾಪ ಮಲಗಳನ್ನು ನಿವಾರಿಸಿಕೊಳ್ಳುವ ಉದ್ಯೋಗದಲ್ಲಿರುವ ಮುನೀಶ್ವರರನ್ನು **ಮಲಧಾರಿ**ಗಳು ಎಂದರೆ ವಿರೋಧಾಭಾಸವೆನಿಸದೆ ಇರದು. ಆದರೆ ಇಲ್ಲಿ ಹೇಳಿರುವ **ಮಲಧಾರಿ ಸಿದ್ಧಾಂತ ಮುನೀಶ್ವರ** ಎಂಬ ಹೆಸರಿನಲ್ಲಿರುವ **ಮಲ**ವು ಪಾಪಮಲಕ್ಕೆ ಸಂಬಂಧಿಸಿರದೆ, ಬಾಹ್ಯದ್ರವ್ಯಮಲವೆನಿಸಿದ ಶರೀರದ ಮೇಲೆ ಸಾಂದ್ರಗೊಂಡ ಬೆವರು, ಧೂಳು, ಕೆಸರು ಇತ್ಯಾದಿಗಳಿಗೆ ಸಂಬಂಧಿಸಿದ ಮಲವಾಗಿರುತ್ತದೆ. ಈ ಮಲದ ಬಗ್ಗೆ ಸ್ವಲ್ಪ ವಿಶದವಾಗಿ ತಿಳಿಯುವುದು ಅವಶ್ಯವಾಗಿದೆ. ಮಲಗಳಲ್ಲಿ ಎರಡು ಪ್ರಕಾರಗಳಿವೆಯೆಂದು **ತಿಲೋಯಪಣ್ಣತ್ತೀ**ಯಲ್ಲಿ ಹೇಳಿದೆ. ಆ ಗಾಥೆಯು ಹೀಗಿದೆ:

ದೊಣ್ಣಿ ವಿಯಪ್ಪಾ ಹೊಂತಿ ಹು ಮಲಸ್ಸ ಇಹ ದವ್ವ ಭಾವ ಭೇಏಹಿಂ ।
ದವ್ವಮಲಂ ದುವಿಹಪ್ಪಂ ಬಾಹಿರಮಬ್ಭಂತರಂ ಚೇಯ ॥ (ತಿಲೋಯಪಣ್ಣತ್ತೀ, ೧-೧೦)

ಗಾಥಾರ್ಥ: (ಯಥಾರ್ಥದಿಂದ) ದ್ರವ್ಯ ಹಾಗೂ ಭಾವ ಎಂಬ ಭೇದಗಳಿಂದ ಮಲವು ಎರಡು ಪ್ರಕಾರವಾಗಿದೆ. ದ್ರವ್ಯ ಮಲವು ಬಾಹ್ಯ ಹಾಗೂ ಅಭ್ಯಂತರವೆಂದು ಎರಡು ಪ್ರಕಾರದ್ದಾಗಿದೆ.

ಸೇದ ಜಲ ರೇಣು ಕದ್ದಮ ಪಹುದೀ ಬಾಹಿರ ಮಲಂ ಸಮುದ್ದಿಟ್ಠಂ ।
.... ॥ (ತಿಲೋಯಪಣ್ಣತ್ತೀ, ೧-೧೧)

ಗಾಥಾರ್ಥ: ಬೆವರು, ಧೂಳು, ಕೆಸರು ಮುಂತಾದವುಗಳನ್ನು ಬಾಹ್ಯ ದ್ರವ್ಯಮಲವೆಂದು ಹೇಳಲಾಗಿದೆ. ....

ಸಾಧುಪರಮೇಷ್ಠಿಗಳ ೨೮ ಮೂಲಗುಣಗಳಲ್ಲಿ '**ಅಸ್ನಾನ**'ವೂ ಒಂದು. **ಅಸ್ನಾನ** ಮಹಾವ್ರತದ ಬಗ್ಗೆ **ಮೂಲಾಚಾರ** ಗ್ರಂಥದಲ್ಲಿ ಹೀಗೆ ಹೇಳಿದೆ:

ಣ್ಹಾಣಾದಿವಜ್ಜಣೇಣ ಯ ವಿಲಿತ್ತ ಜಲ್ಲಮಲ ಸೇದ ಸವ್ವಂಗಂ ।
ಅಣ್ಹಾಣಂ ಘೋರಗುಣಂ ಸಂಜಮದುಗಪಾಲ ಯಂ ಮುಣಿಣೋ ॥
(ಮೂಲಾಚಾರ, ಮೂಲಗುಣಾಧಿಕಾರ, ೧-೩೧)

ಗಾಥಾರ್ಥ: ಸ್ನಾನಾದಿಗಳನ್ನು ತ್ಯಾಗ ಮಾಡುವುದರಿಂದ ಶರೀರದ ಕೊಳೆ ಮತ್ತು ಬೆವರಿನಿಂದ ಸರ್ವಾಂಗವೂ ಲಿಪ್ತವಾಗುವುದರಿಂದ ಮುನಿಗಳು ಪ್ರಾಣಿ ಸಂಯಮ ಮತ್ತು ಇಂದ್ರಿಯ ಸಂಯಮ ಪಾಲನೆ ಮಾಡುವ ರೂಪದಿಂದ ಘೋರ ಗುಣ ಸ್ವರೂಪ ಅಸ್ನಾನ ವ್ರತವಾಗುತ್ತದೆ.

ಹೀಗೆ **ಅಸ್ನಾನವ್ರತಧಾರಿ**ಗಳಾದ ಮುನಿಗಳಿಗೆ, ಬಿಸಿಲಿನ ಧಗೆಯಿಂದ ಬೆವರು ಬಂದು ಅದಕ್ಕೆ ಗಾಳಿಯಿಂದ ಧೂಳು ಮೊದಲಾದ ಕಲ್ಮಶಗಳು ಅಂಟಿಕೊಂಡು ಕಾಲಕ್ರಮದಲ್ಲಿ ಅವು ಶರೀರದಮೇಲೆ ಸಂಗ್ರಹಗೊಂಡು ಶರೀರವು ಹೆಚ್ಚು ಮಲಿನಗೊಳ್ಳುತ್ತದೆ. ಹೀಗೆ ಶರೀರದ ಮೇಲೆ ಅಂಟಿದ ಬೆವರು, ಧೂಳು, ಕೆಸರು ಇತ್ಯಾದಿ ಬಾಹ್ಯಮಲವು ಎದ್ದು ಕಾಣುವಂತೆ ಸಂಗ್ರಹಗೊಂಡಿರುತ್ತದೆ. ಇದಕ್ಕೆ

ಮಲಪರೀಷಹ ಎನ್ನುವರು. ಶರೀರದ ಮೇಲಿನ ಮಮಕಾರವನ್ನು ತ್ಯಜಿಸಿ, ಈ ಬಾಹ್ಯಮಲಗಳಿಗೆ ಬೇಸರಪಡದೆ ಸಹಿಸಿಕೊಳ್ಳುವುದಕ್ಕೆ **ಮಲಪರಿಷಹಜಯ** ಎನ್ನುವರು. ಶರೀರದ ಮೇಲಿನ ಇಂತಹ ಮಲವನ್ನು ಹೊಂದಿರುವ ಮುನಿಗಳಿಗೆ **ಮಲಧಾರಿ ಮುನಿಗಳು** ಎಂದು ಕರೆಯುವರು. ಎಲ್ಲ ಜೈನಮುನಿಗಳೂ ಮಲಧಾರಿಮುನಿಗಳೇ ಆಗಿರುವವರಾದರೂ, ಕೆಲವು ವಿಶೇಷ ಕಾರಣಗಳಿಂದಾಗಿ ಕೆಲವು ಮುನಿಗಳನ್ನು ಮಾತ್ರ '**ಮಲಧಾರಿಮುನಿಗಳು**' ಅಥವಾ '**ಮಲಧಾರಿ ಸಿದ್ಧಾಂತ ಮುನೀಶ್ವರರು**' ಎಂಬ ಅಭಿಧಾನದಿಂದಲೇ ಕರೆಯುತ್ತಾರೆ. **ಮಲಧಾರಿಮುನಿ** ಎಂಬ ಪದವು ಶ್ರವಣಬೆಳಗೊಳದ ಬಹಳಷ್ಟು ಶಾಸನಗಳಲ್ಲಿ ಕಾಣಸಿಗುತ್ತದೆ.

ಮುನಿಜನದೋದಿಸಿದೋಜೆಯೊ
ಳನುವದಿಪುದಿದೊಂದೆ[1] ಕೊಂಡಕುಂದಾನ್ವಯ[2] ನಂ
ದನವನಶುಕಮೆಂದೆನಗಿನಿ
ಸನುಗ್ರಹಂಗೆಯ್ಗೆ ಕರುಣದಿಂ ಮುನಿನಿವಹಂ ॥ ೧–೧೪

ಪದ ವಿಭಾಗ: ಮುನಿಜನದೋದಿಸಿದೋಜೆಯೊಳ್,
ಅನುವದಿಪುದು, ಇದೊಂದೆ, ಕೊಂಡಕುಂದಾನ್ವಯ,
ನಂದನವನ–ಶುಕಂ, ಎಂದು, ಎನಗೆ, ಇನಿಸು,
ಅನುಗ್ರಹಂ, ಗೆಯ್ಗೆ, ಕರುಣದಿಂ, ಮುನಿ–ನಿವಹಂ ॥ ೧–೧೪

ಅನ್ವಯಾರ್ಥ: **(ಮುನಿಜನದೋದಿಸಿದೋಜೆಯೊಳ್=ಮುನಿಜನದ+ಓದಿಸಿದ+ಓಜೆಯೊಳ್)** ಮುನಿವೃಂದವು [ಉಪಾಧ್ಯಾಯ ಪರಮೇಷ್ಠಿಗಳು ಶಾಸ್ತ್ರಗಳ] ಅಧ್ಯಯನ ಮಾಡಿಸಿದ ಕ್ರಮದಲ್ಲಿಯೇ **(ಅನುವದಿಪುದು)** ಹೇಳಿಕೊಟ್ಟ ಹಾಗೆ ಹೇಳುವುದು [ಒಪ್ಪಿಸುವುದು]; **(ಇದೊಂದೆ)** ಇದೊಂದು **(ಕೊಂಡಕುಂದಾನ್ವಯ=ಕೊಂಡಕುಂದ+ಅನ್ವಯ)** ಕೊಂಡಕುಂದ ಕುಲ ಅಥವಾ ಆಚಾರ್ಯ ಪರಂಪರೆಯೆಂಬ **(ನಂದನವನ)** ನಂದನವನದ **(ಶುಕಮೆಂದು=ಶುಕಂ+ಎಂದು)** [ಈ] ಗಿಳಿಯೆಂದು [ಭಾವಿಸಿ] **(ಮುನಿ ನಿವಹಂ)** ಮುನಿ ಗಣವು **(ಕರುಣದಿಂ)** ಕರುಣೆಯಿಂದ **(ಎನಗೆ)** ನನಗೆ **(ಇನಿಸು)** ಕೊಂಚವಾದರೂ **(ಅನುಗ್ರಹಂಗೆಯ್ಗೆ)** ಅನುಗ್ರಹವನ್ನುಂಟುಮಾಡಲಿ ॥ ೧–೧೪

ಈ ಪದ್ಯದಲ್ಲಿ ಕವಿಯು, ಯಥಾರ್ಥವಾದ ದೇವ ಗುರು ಶಾಸ್ತ್ರಗಳಲ್ಲಿ ತನಗಿರುವ ಶ್ರದ್ಧೆಯನ್ನು ತೋರಿಸಿರುವನು.

ಭಾವಾರ್ಥ: ಕವಿಯು ಈ ಪದ್ಯದಲ್ಲಿ, ತಾನು ಉಪಾಧ್ಯಾಯ ಪರಮೇಷ್ಠಿಗಳು ಶಾಸ್ತ್ರಾಧ್ಯಯನ ಮಾಡಿಸಿದ ಕ್ರಮದಲ್ಲಿಯೇ ಕಲಿತು ಒಪ್ಪಿಸುವವನು. ಆದುದರಿಂದ ತನ್ನನ್ನು ಕೊಂಡಕುಂದಾಚಾರ್ಯ ಪರಂಪರೆಯೆಂಬ ನಂದನವನದ ಗಿಳಿಯೆಂಬ ಕರುಣೆಯಿಂದ, ಮುನಿಗಣವು ತನ್ನಲ್ಲಿ ಕೊಂಚವಾದರೂ ಅನುಗ್ರಹವನ್ನುಂಟುಮಾಡಲೆಂದು ಪ್ರಾರ್ಥಿಸುತ್ತಾನೆ. ೧–೧೪

ವಿಶೇಷ ವಿವರಣೆ: ಪಂಪನು ಅವನ ಪೂರ್ವಾಚಾರ್ಯರು ನಿರ್ದಿಷ್ಟಗೊಳಿಸಿದ ಮಾರ್ಗದಲ್ಲಿ ಶ್ರದ್ಧೆಯುಳ್ಳವನು. ಪರಂಪರಾನುಗತ ಪದ್ಧತಿಗಳಿಗನುಗುಣವಾಗಿ ನಡೆಯುವ ವಿನಯವಂತನು. ಪಂಪನು ಆಚಾರ್ಯ ಕೊಂಡಕುಂದರು ಹಾಕಿಕೊಟ್ಟ ಪದ್ಧತಿಯಲ್ಲಿಯೇ ಕ್ರಮಿಸುವ ಶ್ರದ್ಧಾಳು. ಪೂರ್ವಾಚಾರ್ಯರ ಪರಂಪರೆಗೆ '**ಅನ್ವಯ**' ಅಥವಾ '**ಕುಲ**' ಎನ್ನುವರು. '**ಕೊಂಡಕುಂದಾನ್ವಯ ನಂದನವನಶುಕ**' ಎಂದರೆ ಆಚಾರ್ಯ ಕೊಂಡಕುಂದರು ಉಪದೇಶಿಸಿದ ಸಿದ್ಧಾಂತಗಳಲ್ಲಿ ಶ್ರದ್ಧೆಯಿಟ್ಟು ಶಾಸ್ತ್ರಗಳನ್ನು ಕಲಿತವನು ಮತ್ತು ಆ ಮಾರ್ಗದಲ್ಲಿಯೇ ನಡೆಯತಕ್ಕವನು ಎಂದು ಮಾತ್ರ ತಿಳಿಯಬಹುದು. ಕೊಂಡಕುಂದರು ಕ್ರಿ.ಪೂ.ಸು. ೧ ನೆಯ ಶತಮಾನಕ್ಕೆ ಸೇರಿದವರು. ಪಂಪನು ಕ್ರಿ.ಶ.ಸು. ೧೦ ನೆಯ ಶತಮಾನಕ್ಕೆ ಸೇರಿದವನು. ಪಂಪನು ತನ್ನನ್ನು '**ಶ್ರೀವತ್ಸಕುಲ ತಿಲಕ**'ನೆಂದು ಕರೆದುಕೊಂಡಿದ್ದಾನೆ (ಪದ್ಯ ೧–೩೦). ಅಲ್ಲದೇ ಅವನ ಪೂರ್ವಜರು ವೈದಿಕ ಧರ್ಮಕ್ಕೆ ಸೇರಿದವರಾಗಿದ್ದರು ಎಂದು ಪಂಪನೇ ಹೇಳಿಕೊಂಡಿದ್ದಾನೆ. ಆದುದರಿಂದ ಪಂಪನು ಕೊಂಡಕುಂದರ ಶಿಷ್ಯ ಪರಂಪರೆಗೆ ಸೇರಿದವನೆಂದು ಮಾತ್ರ ಅರ್ಥೈಸಬೇಕು. ಈ ಗುರು–ಶಿಷ್ಯ ಪರಂಪರೆಗೆ '**ಅನ್ವಯ**' ಎನ್ನುವರು.

ಕೊಂಡಕುಂದಾಚಾರ್ಯರು ಅಥವಾ **ಕುಂದಕುಂದಾಚಾರ್ಯರು:** ದಿಗಂಬರ ಜೈನಾಚಾರ್ಯ ಪರಂಪರೆಯಲ್ಲಿ ಭಗವಾನ್ ಕುಂದಕುಂದಾಚಾರ್ಯರದ್ದು ಬಹು ದೊಡ್ಡ ಹೆಸರು. ಕುಂದಕುಂದಾಚಾರ್ಯರಿಗೆ ಪದ್ಮನಂದಿ, ವಕ್ರಗ್ರೀವಾಚಾರ್ಯ, ಗೃಧ್ರಪಿಂಛಾ

---

[1] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಪುದಿದೊಂದೆ', ಕನ್ನಡ ಕೈಪಿಡಿ, ಸಂಪುಟ–೨, IV. ಜೈನ ಕವಿಗಳು, ಪುಟ ೪೨೯ ರಲ್ಲಿನ ಪಾಠ–'ಪುದೊಂದೆ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಅನ್ವವಾಯಃ, ಅನ್ವಯಃ, ವಂಶಃ, ಗೋತ್ರಂ, ಅಭಿಜನಂ, ಕುಳಂ–ಈ ೬ ಕುಲಂ (ಅಭಿಧಾನ ರತ್ನಮಾಲ ೨–೨೪೨ ಪು. ೬೬)

ಚಾರ್ಯ, ಏಲಾಚಾರ್ಯರೆಂದು ಮತ್ತೆ ನಾಲ್ಕು ಹೆಸರುಗಳಿರುತ್ತವೆ. ಇವರ ಮೂಲ ಸ್ಥಳ ಆಂಧ್ರಪ್ರದೇಶದ, ಅನಂತಪುರ ಜಿಲ್ಲೆಯ, ಅನಂತಪುರ-ಗುಂತಕಲ್ ಮಾರ್ಗದಲ್ಲಿ ಗುಂತಕಲ್‌ನಿಂದ ಕೇವಲ ೮ ಕಿ.ಮೀ. ದೂರದಲ್ಲಿರುವ ಕೊನಕೊಂಡ್ಲ ಗ್ರಾಮವೆಂದೂ, ಇವರ ಕಾಲವು ಕ್ರಿ.ಪೂ.ಸು. ಒಂದನೆಯ ಶತಮಾನದ ೮ ನೆಯ ವರ್ಷವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮತ್ತೆ ಕೆಲವು ವಿದ್ವಾಂಸರು ಇವರು ಕ್ರಿ.ಶ. ಎರಡನೆಯ ಶತಮಾನಕ್ಕೆ ಸೇರಿದವರೆಂದೂ ಅಭಿಪ್ರಾಯಪಡುತ್ತಾರೆ. ಇವರ ತಂದೆ ಗುಣಕೀರ್ತಿ ಶ್ರೇಷ್ಠಿ ಮತ್ತು ತಾಯಿ ಶಾಂತಳೆ. ಇವರ ಬಾಲ್ಯದ ಹೆಸರು ಪದ್ಮಪ್ರಭನೆಂದು ತಿಳಿದುಬರುತ್ತದೆ. ಇವರು ಎಳವೆಯಲ್ಲಿಯೇ ಅಪ್ರತಿಮ ಪ್ರತಿಭಾವಂತರಾಗಿದ್ದು, ಧರ್ಮದ ಒಲವನ್ನು ಸಂಸ್ಕಾರವಶದಿಂದ ವೃದ್ಧಿಪಡಿಸಿಕೊಂಡಿದ್ದರು. ನಂತರ ಇವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ತಮ್ಮ ೧೧ ನೆಯ ವಯಸ್ಸಿನಲ್ಲಿಯೇ ದೀಕ್ಷೆ ತಳೆದು ತಮಿಳುನಾಡಿನ ಪೊನ್ನೂರು ಮಲೈ ಎನ್ನುವ ಸ್ಥಳವನ್ನು ತಮ್ಮ ಸಾಧನೆಯ ಕ್ಷೇತ್ರವನ್ನಾಗಿ ಮಾಡಿಕೊಂಡರೆಂದು ಹೇಳುತ್ತಾರೆ. ನಂತರ ಅವರು ಕರ್ನಾಟಕದ ತೀರ್ಥಹಳ್ಳಿಯ ಹತ್ತಿರವಿರುವ ಕುಂದಾದ್ರಿಯಲ್ಲಿ ನೆಲಸಿದ್ದರು ಎಂದು ಐತಿಹ್ಯವಿದೆ. ಆಚಾರ್ಯ ಶ್ರೀಕುಂದಕುಂದರ ವಿದೇಹಗಮನದ ಬಗ್ಗೆ ಅನೇಕ ಉಲ್ಲೇಖಗಳು ದೊರೆಯುತ್ತವೆ. ಇವರು (೧) ಸಮಯಸಾರ (ಸಮಯಪಾಹುಡ), (೨) ನಿಯಮಸಾರ, (೩) ಪಂಚಾಸ್ತಿಕಾಯಸಾರ, (೪) ಪ್ರವಚನಸಾರ, (೫) ರಯಣಸಾರ (೬) ಅಷ್ಟಪಾಹುಡ, (೭) ದಶಭಕ್ತಿ ಎಂಬ ಶ್ರೇಷ್ಠ ಗ್ರಂಥಗಳನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದ್ದಾರೆ. ಇದಲ್ಲದೆ **'ತಿರುಕ್ಕುರಳ್'** ಎನ್ನುವ ತಮಿಳು ಗ್ರಂಥವನ್ನೂ ರಚಿಸಿದ್ದಾರೆಂದು ಪ್ರಸಿದ್ಧಿಯಿದೆ (ಆದರೆ ಈ ಮಾತು ಇತಿಹಾಸದ ಸತ್ಯವಲ್ಲವೆಂದು ಪ್ರಾಚೀನ ಗ್ರಂಥ ಸಂಶೋಧಕರು ಅಭಿಪ್ರಾಯಪಡುತ್ತಾರೆ). ಇವರ **ಸಮಯಪಾಹುಡ** ಗ್ರಂಥದ ಮೇಲೆ ಶ್ರೇಷ್ಠವಾದ ಎರಡು ಟೀಕಾ ಗ್ರಂಥಗಳ ರಚನೆಯಾಗಿದೆ. (೧) ಶ್ರೀ ಅಮೃತಚಂದ್ರಾಚಾರ್ಯ ವಿರಚಿತ **ಆತ್ಮಖ್ಯಾತಿ ಟೀಕಾ,** (೨) ಶ್ರೀ ಜಯಸೇನಾಚಾರ್ಯ ವಿರಚಿತ **ತಾತ್ಪರ್ಯವೃತ್ತಿ ಟೀಕಾ.** ಈ ಎರಡೂ ಟೀಕಾ ಗ್ರಂಥಗಳು ಸಮಯಪಾಹುಡ ಗ್ರಂಥ ರಚನೆಯಾದ ಒಂದು ಸಾವಿರ ವರ್ಷಗಳ ನಂತರ ರಚನೆಯಾದ ಪ್ರೌಢ ಟೀಕಾ ಗ್ರಂಥಗಳಾಗಿವೆ. ಜೈನರಿಗೆ ಕುಂದಕುಂದಾಚಾರ್ಯರಲ್ಲಿ ಬಹು ಪೂಜ್ಯಸ್ಥಾನವಿದ್ದು ಅವರನ್ನು **ಶ್ರೀ ಭಗವದ್ಕುಂದುಕುಂದಾಚಾರ್ಯರು** ಎಂದು ಸಂಬೋಧಿಸುತ್ತಾರೆ.

ಪರಮಜಿನಮಾಲೆ ವರಗಣ
ಧರಮಾಲೆ ಮುನೀಂದ್ರಮಾಲೆ ಮುನಿಮಾಲೆ ನಿರಂ
ತರಮೀಗೆ ಭವ್ಯಮಾಲೆಗೆ
ಪರಾರ್ಥ್ಯಗುಣರತ್ನಮಾಲೆಯಂ ದಯೆಯಿಂದಂ ॥ **೧-೧೫**

ಪದ ವಿಭಾಗ: ಪರಮಜಿನ-ಮಾಲೆ, ವರ-ಗಣಧರ-ಮಾಲೆ,
ಮುನೀಂದ್ರ-ಮಾಲೆ, ಮುನಿ-ಮಾಲೆ,
ನಿರಂತರಂ, ಈಗೆ, ಭವ್ಯಮಾಲೆಗೆ,
ಪರಾರ್ಥ್ಯ-ಗುಣರತ್ನ-ಮಾಲೆಯಂ, ದಯೆಯಿಂದಂ ॥ ೧-೧೫

ಅನ್ವಯಾರ್ಥ: (ಪರಮಜಿನ ಮಾಲೆ) ತೀರ್ಥಂಕರರ ಪರಂಪರೆಯೂ [ಸಮೂಹವೂ], **(ವರ ಗಣಧರ ಮಾಲೆ)** ಶ್ರೇಷ್ಠರಾದ ಗಣಧರರ ಪರಂಪರೆಯೂ [ಸಮೂಹವೂ], **(ಮುನೀಂದ್ರ ಮಾಲೆ)** ಆಚಾರ್ಯರ ಪರಂಪರೆಯೂ [ಸಮೂಹವೂ], **(ಮುನಿ ಮಾಲೆ)** ಮುನಿ [ಸಾಧು] ಗಣವೂ, **(ನಿರಂತರಂ)** ನಿರಂತರವಾಗಿ **(ಭವ್ಯ ಮಾಲೆಗೆ)** ಮುಮುಕ್ಷುಗಳ ಸಮೂಹಕ್ಕೆ **(ಪರಾರ್ಥ್ಯ ಗುಣರತ್ನ ಮಾಲೆಯಂ)** ಬಹಳ ಶ್ರೇಷ್ಠವಾದ ಗುಣಗಳೆಂಬ ರತ್ನಗಳ ಸಮೂಹವನ್ನು [ಹಾರವನ್ನು] **(ದಯೆಯಿಂದಂ)** ಕರುಣೆಯಿಂದ **(ಈಗೆ)** ಅನುಗ್ರಹಿಸಲಿ [ದಯಪಾಲಿಸಲಿ] ॥ ೧-೧೫

ಭಾವಾರ್ಥ: ವೃಷಭನಾಥರಾದಿಯಾಗಿ ಮಹಾವೀರರ ಪರ್ಯಂತ ಇರುವ ಇಪ್ಪತ್ತನಾಲ್ಕು ತೀರ್ಥಂಕರರ ಪರಂಪರೆಯೂ, ಅದೇ ಪರಂಪರೆಯಿಂದ ನಡೆದುಬಂದ ವೃಷಭಸೇನರಾದಿಯಾಗಿ ಇಂದ್ರಭೂತಿಗೌತಮರ ಪರ್ಯಂತ ಇರುವ ಶ್ರೇಷ್ಠರಾದ ಗಣಧರರ ಪರಂಪರೆಯೂ, ಅನಂತರ ಬಂದ ಆಚಾರ್ಯರ ಪರಂಪರೆಯೂ, ಅನಂತರದ ಮುನಿ [ಸಾಧು] ಗಣವೂ, ನಿರಂತರವಾಗಿ ಭವ್ಯಜನರಿಗೆ ಶ್ರೇಷ್ಠವಾದ ಗುಣಗಳೆಂಬ ರತ್ನಗಳ ಸಮೂಹವನ್ನು [ಹಾರವನ್ನು] ಕರುಣೆಯಿಂದ ಅನುಗ್ರಹಿಸಲಿ ಎಂದು ಕವಿಯು ಸ್ತುತಿಸಿರುವನು. ೧-೧೫

ವಿಶೇಷ ವಿವರಣೆ: ಕವಿಯು ಈ ಪದ್ಯದಲ್ಲಿ ಚತುರ್ವಿಂಶತಿ ತೀರ್ಥಂಕರರನ್ನೂ, ತೀರ್ಥಂಕರರುಗಳ ಗಣಧರರುಗಳನ್ನೂ, ಅವರ ಪರಂಪರೆಯಲ್ಲಿ ಬರುವ ಆಚಾರ್ಯರುಗಳನ್ನೂ, ಮುನಿಗಣವನ್ನೂ ಸ್ತುತಿಸಿದ್ದಾನೆ. **ತೀರ್ಥಂಕರರುಗಳು ಮತ್ತು ಗಣಧರರ**

ಶುಭನಾಮಾವಳಿಗಳ ವಿವರಣೆಗೆ ಸಂಖ್ಯಾ ವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಪದ ಸಂಖ್ಯೆ **ಇಪ್ಪತ್ತನಾಲ್ಕು (೨೪)– ತೀರ್ಥಂಕರರ ಮತ್ತು ಗಣಧರರ ಶುಭನಾಮಾವಳಿಗಳ** ಪಟ್ಟಿಯನ್ನು ನೋಡಿರಿ.

ತಮಮಂ ದ್ಯುಮಣಿಮಯೂಖೋ
ದ್ಗಮಮಲೆವವೊಲಲೆಗೆ ಜಗದ ಮಿಥ್ಯಾತ್ವತಮ
ಸ್ತಮಮನಕಳಂಕದೇವ
ಪ್ರಮಾಣರತ್ನಪ್ರದೀಪರಶ್ಮಿಕಳಾ[1]ಪಂ ॥ ೧–೧೬

ಪದ ವಿಭಾಗ: ತಮಮಂ–ದ್ಯುಮಣಿ–ಮಯೂಖೋದ್ಗಮಂ,
ಅಲೆವವೊಲ್, ಅಲೆಗೆ–ಜಗದ–ಮಿಥ್ಯಾತ್ವ–
ತಮಸ್ತಮಮನ್, ಅಕಳಂಕದೇವ–
ಪ್ರಮಾಣ–ರತ್ನಪ್ರದೀಪ–ರಶ್ಮಿಕಳಾಪಂ ॥ ೧–೧೬

ಅನ್ವಯಾರ್ಥ: **(ತಮಮಂ)** ಕತ್ತಲೆಯನ್ನು **(ದ್ಯುಮಣಿಮಯೂಖೋದ್ಗಮಂ=ದ್ಯುಮಣಿಮಯೂಖ+ಉದ್ಗಮಂ)** ಸೂರ್ಯ ರಶ್ಮಿಯ ಮೇಲೇರುವಿಕೆಯು [ಸೂರ್ಯೋದಯವು] **(ಅಲೆವವೊಲ್)** ಕಳೆಯುವಂತೆ [ನಿವಾರಿಸುವಂತೆ], **(ಜಗದ ಮಿಥ್ಯಾತ್ವ ತಮಸ್ತಮಮನ್)** ಜಗತ್ತಿನ ಮಿಥ್ಯಾತ್ವವೆಂಬ ಘೋರಾಂಧಕಾರವನ್ನು **(ಅಕಳಂಕದೇವ)** ಅಕಳಂಕದೇವ [ವಿರಚಿತ] **(ಪ್ರಮಾಣ)** ಪ್ರಮಾಣ ಸಂಗ್ರಹ [ಇದು ಜೈನ ನ್ಯಾಯಗ್ರಂಥದ ಹೆಸರು] **(ರತ್ನಪ್ರದೀಪ)** [ಎಂಬ] ರತ್ನದ ದೀವಿಗೆಯ **(ರಶ್ಮಿಕಳಾಪಂ)** ಕಿರಣಗಳ ಸಮೂಹವು **(ಅಲೆಗೆ)** ಹೋಗಲಾಡಿಸಲಿ [ನಿವಾರಿಸಲಿ] ॥ ೧–೧೬

ಭಾವಾರ್ಥ: ಸೂರ್ಯೋದಯವು ಜಗತ್ತಿನ ಕತ್ತಲೆಯನ್ನು ಕಳೆಯುವಂತೆ, ಅಕಳಂಕದೇವ ವಿರಚಿತ **ಪ್ರಮಾಣ ಸಂಗ್ರಹ** ಎಂಬ ರತ್ನದ ದೀವಿಗೆಯ ಕಿರಣಗಳ ಸಮೂಹವು, ಜಗತ್ತಿನ ಮಿಥ್ಯಾತ್ವವೆಂಬ ಘೋರಾಂಧಕಾರವನ್ನು ಹೋಗಲಾಡಿಸಲಿ ಎಂದು ಕವಿಯು ಆಶಿಸಿದ್ದಾನೆ. ೧–೧೬

ವಿಶೇಷ ವಿವರಣೆ: ಈ ಪದ್ಯದಲ್ಲಿ ಕವಿಯು ತಿಳಿಸಿರುವ '**ಪ್ರಮಾಣ**' ಅಥವಾ '**ಪ್ರಮಾಣ ಸಂಗ್ರಹ**' ಎನ್ನುವುದು ಶ್ರೀ ಆಚಾರ್ಯ ಅಕಳಂಕರು ರಚಿಸಿರುವ ಒಂದು **ಜೈನನ್ಯಾಯ ಗ್ರಂಥ.** '**ಪ್ರಮಾಣ ಸಂಗ್ರಹ**'ವು ಜಗತ್ತಿನ ಮಿಥ್ಯಾತ್ವವೆಂಬ ಘೋರಾಂಧಕಾರವನ್ನು ಹೋಗಲಾಡಿಸಲಿ ಎಂದು ಕವಿಯು ಆಶಿಸುತ್ತಾನೆ.

ಅಕಳಂಕಾಚಾರ್ಯರು ಕ್ರಿ.ಶ. ಏಳನೇ ಶತಮಾನದಲ್ಲಿದ್ದ ಪ್ರಕಾಂಡ ಪಂಡಿತರಾದ ಜೈನಾಚಾರ್ಯರು. ಇವರು ನ್ಯಾಯದರ್ಶನವನ್ನು ಜೈನಾಗಮಗಳಿಗೆ ಅನ್ವಯಿಸಿದ/ಪರಿಚಯಿಸಿದ ಪ್ರವರ್ತಕರು ಮತ್ತು ಜೈನನ್ಯಾಯ ಗ್ರಂಥಗಳ ರಚನೆಗೆ ಅಸ್ತಿಭಾರ ಹಾಕಿದವರು ಮತ್ತು ಅತಿ ಹೆಚ್ಚು ಅಂದರೆ ಆರು ನ್ಯಾಯ ಗ್ರಂಥಗಳನ್ನು ರಚಿಸಿರುವವರು. ಇವರು (೧) ರಾಜವಾರ್ತಿಕ (ತತ್ತ್ವಾರ್ಥ ಸೂತ್ರ ಟೀಕೆ), (೨) ಅಷ್ಟಶತಿ (ಸಮಂತಭದ್ರರ ಆಪ್ತಮೀಮಾಂಸಾ ಟೀಕೆ), (೩) ಲಘೀಯಸ್ ತ್ರಯ, (೪) ಬೃಹತ್ ತ್ರಯಂ, (೫) ನ್ಯಾಯ ವಿನಿಶ್ಚಯ, (೬) ಸಿದ್ಧಿ ವಿನಿಶ್ಚಯ, (೭) ಪ್ರಮಾಣ ಸಂಗ್ರಹ, (೮) ನ್ಯಾಯ ಚೂಲಿಕಾ, (೯) ಸ್ವರೂಪ ಸಂಬೋಧನಾ, (೧೦) ಅಕಲಂಕ ಸ್ತೋತ್ರ ಎನ್ನುವ ಗ್ರಂಥಗಳನ್ನು ರಚಿಸಿದ್ದಾರೆ. ಮೊದಲ ಎರಡು ಕೃತಿಗಳು ಟೀಕಾ ಗ್ರಂಥಗಳಾಗಿದ್ದು, ನಂತರದ ಆರು ಕೃತಿಗಳು ನ್ಯಾಯ ಗ್ರಂಥಗಳಾಗಿವೆ. ಕೊನೆಯ ಎರಡು ಸ್ತೋತ್ರ ಗ್ರಂಥಗಳಾಗಿವೆ.

'**ರತ್ನಪ್ರದೀಪ ರಶ್ಮಿಕಳಾಪಂ**' ಈ ವಾಕ್ಯಖಂಡವನ್ನು ಹೀಗೂ ಅರ್ಥೈಸಬಹುದಾಗಿದೆ: '**ರಶ್ಮಿಕಳಾಪ** ಎಂದರೆ ಐವತ್ತನಾಲ್ಕು ಎಳೆಗಳುಳ್ಳ ಮುತ್ತಿನಹಾರ ಎಂದು ಅರ್ಥವಿದೆ. ಈ ಹಾರದ ರತ್ನಗಳ ದೀಪದ ಬೆಳಕು ಘೋರಾಂಧಕಾರವಾದ ಮಿಥ್ಯಾತ್ವವನ್ನು ನಿವಾರಿಸಲಿ'. ಈ ಪದ್ಯದೊಂದಿಗೆ ಕವಿಯು ಮಂಗಳಾಚರಣೆಯುಕ್ತವಾದ ಸ್ತುತಿ ಪದ್ಯಗಳನ್ನು ಪೂರ್ಣಗೊಳಿಸಿರುವನು.

ಮಂಗಳಾಚರಣೆಯ ೧–೧೧ ನೆಯ ಪದ್ಯದಿಂದ ೧–೧೬ ನೆಯ ಪದ್ಯದವರೆಗಿನ ಈ ಆರು ಪದ್ಯಗಳಲ್ಲಿ ಜೈನಾಚಾರ್ಯ ಪರಂಪರೆಯಲ್ಲಿ ಬಂದ ಹಲವು ಆಚಾರ್ಯ ಶಿರೋಮಣಿಗಳನ್ನು ಪಂಪನು ಬಹು ಭಕ್ತಿಯಿಂದ ಸ್ತುತಿಸಿರುವನು. ಪಂಪನು ಈ ಕಾವ್ಯದಲ್ಲಿ, ಸಾಮಾನ್ಯವಾಗಿ **ಕರಣಾನುಯೋಗಕ್ಕೆ** ಸಂಬಂಧಿಸಿದ ವಿಷಯಗಳನ್ನು ಮತ್ತು ಅಂಕಿ–ಸಂಖ್ಯೆಗಳನ್ನು ನೀಡುವಾಗ,

---

[1] ಮೂಲಪಾಠ–'ರಶ್ಮಿಕಳಾಪಂ', ಕೆಜಿ ಯವರ ಪಾಠ–'ರಶ್ಮಿಕಲಾಪಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. ರಶ್ಮಿಕಳಾಪ=ಐವತ್ತನಾಲ್ಕು ಎಳೆಗಳುಳ್ಳ ಮುತ್ತಿನಹಾರ (ಕ.ಸಾ.ಪ. ನಿಘಂಟು, ಏಳನೆಯ ಸಂಪುಟ, ಪು.ಸಂ. ೭೫೭೯)

ಬಹ್ವಂಶದಲ್ಲಿ **ತಿಲೋಯಪಣ್ಣತ್ತೀ** ಗ್ರಂಥವನ್ನು ಅನುಸರಿಸಿರುವನು. ಆದರೂ, **ಕಸಾಯಪಾಹುಡಕ್ಕೆ** **'ಚೂರ್ಣಿಸೂತ್ರ'**ವನ್ನು ಹಾಗೂ **ಕರಣಾನುಯೋಗ**ದ ಮಹತ್ವದ ಕೃತಿಯಾದ **'ತಿಲೋಯಪಣ್ಣತ್ತೀ'** **(ತ್ರಿಲೋಕ ಪ್ರಜ್ಞಪ್ತಿ)** ಗ್ರಂಥವನ್ನು ರಚಿಸಿದ, ಕ್ರಿ.ಶ.ಸು. ಎರಡನೆಯ ಶತಮಾನಕ್ಕೆ ಸೇರಿದ, ಶ್ರೇಷ್ಠ ಜೈನಾಚಾರ್ಯರಲ್ಲೊಬ್ಬರಾದ **ಶ್ರೀ ಯತಿವೃಷಭರ** ಹೆಸರನ್ನೇ ಸ್ಮರಿಸದಿರುವುದು ಸೋಜಿಗದ ವಿಷಯವೇ ಸರಿ.

ಮೃದುಪದಗತಿಯಿಂ ರಸಭಾ
ವದ ಪೆರ್ಚಿಂ ಪಣ್ಯವನಿತೆವೋಲ್[1] ಕೃತಿ ಸೌಂದ
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧ ಬುಧಜನದ ಮನಮನಲೆಯಲೆ ವೇಡಾ ॥ ೧-೧೭

ಪದ ವಿಭಾಗ: ಮೃದುಪದಗತಿಯಿಂ, ರಸಭಾವದ-
ಪೆರ್ಚಿಂ, ಪಣ್ಯವನಿತೆವೋಲ್, ಕೃತಿ-
ಸೌಂದರ್ಯದ, ಚಾತುರ್ಯದ, ಕಣಿಯೆನೆ,
ವಿದಗ್ಧ-ಬುಧ-ಜನದ-ಮನಮನ್, ಅಲೆಯಲೆ-ವೇಡಾ? ॥ ೧-೧೭

ಅನ್ವಯಾರ್ಥ: (ಮೃದುಪದಗತಿಯಿಂ) [ನರ್ತನದಲ್ಲಿ] ಪಾದಗಳ ಸೌಮ್ಯ ಹಾಗೂ ನವಿರಾದ ರೀತಿಯ ಚಲನೆಯಿಂದ; [ಕಾವ್ಯದಲ್ಲಿ] ಉಚ್ಚರಿಸಲು ಸುಲಭವಾದ, ಕೋಮಲವಾದ ಪದರಚನೆಯಿಂದ, **(ರಸಭಾವದ ಪೆರ್ಚಿಂ)** [ನರ್ತನದಲ್ಲಿ] ರಸಾನುಭವವನ್ನುಂಟು ಮಾಡುವ ಚಿತ್ತವೃತ್ತಿಯ ಆಧಿಕ್ಯದಿಂದ; [ಕಾವ್ಯದಲ್ಲಿ] ರಸ ಮತ್ತು ಭಾವಗಳ ಉಕ್ಕುವಿಕೆಯಿಂದ, **(ಪಣ್ಯವನಿತೆ ವೋಲ್)** ಗಣಿಕೆಯಂತೆ, **(ಕೃತಿ)** [ಈ] ಕಾವ್ಯವು **(ಸೌಂದರ್ಯದ)** [ನರ್ತನದಲ್ಲಿ] ರಸದ ಪ್ರಾಪ್ತಿಗೆ ನೆರವಾಗುವ ಎಲ್ಲ ಅಂಗಗಳ ಸಮನ್ವಯದ; [ಕಾವ್ಯದಲ್ಲಿ] ವಾಕ್ಯರಚನಾ ಸೌಂದರ್ಯದ, **(ಚಾತುರ್ಯದ)** [ನರ್ತನದಲ್ಲಿ] ನಾಟ್ಯ ಚಾತುರ್ಯದ ನಾಲ್ಕು ಬಗೆಗಳಿಂದ ಕೂಡಿ; [ಕಾವ್ಯದಲ್ಲಿ] ಮಾತಿನ ಚಮತ್ಕಾರದ **(ಕಣಿಯೆನೆ=ಕಣಿ+ಎನೆ)** ಗಣಿಯೆನಿಸಿದ್ದು, **(ವಿದಗ್ಧ)** [ಕಾವ್ಯರಸಾಸ್ವಾದನೆಯಲ್ಲಿ] ನಿಪುಣರಾದ **(ಬುಧ ಜನದ)** ಪಂಡಿತ ಸಮೂಹದ **(ಮನಮನ್)** ಮನಸ್ಸನ್ನು **(ಅಲೆಯಲೆವೇಡಾ)** [ನರ್ತನವು] ಸೋಲಿಸಬೇಡವೇ?; [ಕಾವ್ಯವು] ಸ್ಪರ್ಶಿಸಬೇಡವೆ? ॥ ೧-೧೭

ಈ ಪದ್ಯವನ್ನು ಹೀಗೂ ಅರ್ಥೈಸಬಹುದು: (ಮೃದುಪದಗತಿಯಿಂ) ಉಚ್ಚರಿಸಲು ಸುಲಭವೂ, ಕೋಮಲವೂ ಆದ ಪದಗಳಿಂದ ಕೂಡಿರುವುದೂ, **(ರಸಭಾವದ ಪೆರ್ಚಿಂ)** ರಸಭಾವವನ್ನು ಚಿತ್ತದಲ್ಲಿ ಉಕ್ಕಿಹರಿಸುವುದೂ; **(ಪಣ್ಯವನಿತೆ ವೋಲ್)** ಗಣಿಕೆಯತೆರದಿ, **(ಕೃತಿ ಸೌಂದರ್ಯದ ಚಾತುರ್ಯದ ಕಣಿಯೆನೆ)** ಸೌಂದರ್ಯದ ಮತ್ತು ಚಾತುರ್ಯದ ಗಣಿಯೆನಿಸಿರುವ [ಈ] ಕಾವ್ಯವು **(ವಿದಗ್ಧ ಬುಧ ಜನದ)** ಕಾವ್ಯರಸಾಸ್ವಾದನೆಯಲ್ಲಿ ನಿಪುಣರಾದ ಪಂಡಿತ ಜನರ **(ಮನಮನ್)** ಮನಸ್ಸನ್ನು **(ಅಲೆಯಲೆವೇಡಾ)** ಸೂರೆಗೊಳ್ಳಬೇಡವೇ? ೧-೧೭

ಭಾವಾರ್ಥ: ಉಚ್ಚರಿಸಲು ಸುಲಭವೂ, ಕೋಮಲವೂ ಆದ ಪದಗಳಿಂದ ಕೂಡಿರುವುದೂ, ರಸಭಾವವನ್ನು ಚಿತ್ತದಲ್ಲಿ ಉಕ್ಕಿಹರಿಸುವುದೂ; ಗಣಿಕೆಯತೆರದಿ, ಸೌಂದರ್ಯದ ಮತ್ತು ಚಾತುರ್ಯದ ಗಣಿಯೆನಿಸಿರುವ ಈ ಕಾವ್ಯವು ಕಾವ್ಯರಸಾಸ್ವಾದನೆಯಲ್ಲಿ ನಿಪುಣರಾದ ಪಂಡಿತ ಜನರ ಮನಸ್ಸನ್ನು ಸೂರೆಗೊಳ್ಳಬೇಡವೇ? ೧-೧೭

ವಿಶೇಷ ವಿವರಣೆ: ಈ ಪದ್ಯದಲ್ಲಿ ಪಂಪನು, ಪದ್ಯದ ಶಬ್ದಗಳು **ವರ್ಣಿಸುವ ವಿಷಯ**ವಾದಂತಹ **ಆದಿಪುರಾಣ ಕಾವ್ಯದ ಲಕ್ಷಣ** ಮತ್ತು **ಅವರ್ಣ್ಯವಿಷಯ**ವಾದಂತಹ **ನಾಟ್ಯದ ಲಕ್ಷಣ** ಇವುಗಳ ನಡುವೆ **ಶ್ಲೇಷಾಲಂಕಾರ**ವನ್ನಿಟ್ಟು ವರ್ಣಿಸಿರುವನು. ಈ ಪದ್ಯವು **ಶ್ಲೇಷಾಲಂಕಾರ**ಕ್ಕೆ ಒಂದು ಸುಂದರ ಉದಾಹರಣೆಯಾಗಿದೆ. ಅದು ಹೀಗಿದೆ:

[1] ಮೂಲಪಾಠ-'ಪಣ್ಯವನಿತೆವೋಲ್', ಕೆಜಿ ಯವರ ಪಾಠ-'ಪುಣ್ಯವನಿತೆಯೊಲ್ ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

<u>ಕೃತಿ</u>	<u>ನರ್ತನದ ಪರವಾಗಿ</u>	<u>ಕೃತಿ (ಕಾವ್ಯದ) ಪರವಾಗಿ</u>
(ಮೃದುಪದಗತಿಯಿಂ) ...	ಪಾದಗಳನ್ನು ಸೌಮ್ಯ, ನವಿರಾದ ರೀತಿಯಲ್ಲಿ ಚಲನೆ ಮಾಡುವ ಶೈಲಿ. ವಿಶೇಷವಾಗಿ, ಮೃದುಸ್ವಭಾವದ ಹೆಣ್ಣುಪಾತ್ರಗಳು ತಮ್ಮ ಭಾವನೆ ವ್ಯಕ್ತಪಡಿಸುವಂಥ ಸಂದರ್ಭದಲ್ಲಿ ಬಳಸುವ ಹೆಜ್ಜೆಶೈಲಿಯಿಂದ ಕೂಡಿ ... (**ಮೃದುಪದಗತಿ**ಗೆ ವಿರುದ್ಧವಾಗಿ **ತೀವ್ರಪದಗತಿ**ಯೂ ಇದೆ, ಇದರೊಟ್ಟಿಗೆ **ಮಧ್ಯಪದಗತಿ**ಯೂ ಇದೆ. ಶೌರ್ಯ, ಕ್ರೋಧ, ಉತ್ಸಾಹಭಾವ ಪ್ರಕಟಣೆಯಲ್ಲಿ **ತೀವ್ರಪದಗತಿ** ಬಳಕೆಯಿದೆ)	ಉಚ್ಚರಿಸಲು ಸುಲಭವಾದ, ಕೋಮಲವಾದ ಪದರಚನೆಗಳು ಪಾಂಡಿತ್ಯದ ನೈಪುಣ್ಯತೆಯಿಂದ ಕೂಡಿದ ...
(ರಸಭಾವದ ಪೆರ್ಚಿಂ) ...	ರಸಿಕನಲ್ಲಿ ರಸಾನುಭವವನ್ನುಂಟುಮಾಡುವ ಚಿತ್ತವೃತ್ತಿಯನ್ನು ವೃದ್ಧಿಸುವ ...	ಸಹೃದಯನ ಹೃದಯದಲ್ಲಿ ರಸಭಾವವನ್ನು ಉಕ್ಕಿಹರಿಸುವುದು...
(ಸೌಂದರ್ಯದ) ...	ರಸದ ಪ್ರಾಪ್ತಿಗೆ ನೆರವಾಗುವ ಎಲ್ಲ ಅಂಗಗಳ ಸಮನ್ವಯ: (೧) ರಚನಾ ಸೌಂದರ್ಯ (೨) ಗತಿ ಸೌಂದರ್ಯ (೩) ಶಬ್ದ ಸೌಂದರ್ಯ (೪) ಆತ್ಮ ಸೌಂದರ್ಯ	ವಾಕ್ಯರಚನಾ ಸೌಂದರ್ಯ ...
(ಚಾತುರ್ಯದ) ...	ನಾಟ್ಯ ಚಾತುರ್ಯದ ನಾಲ್ಕು ಬಗೆಗಳಾದ: (೧) ಅಂಗ ಚಾತುರ್ಯ–ಶರೀರ ಚಲನೆ (೨) ವಾಚಿಕ ಚಾತುರ್ಯ–ಧ್ವನಿ (೩) ಆಹಾರ್ಯ ಚಾತುರ್ಯ–ವೇಷಭೂಷಣ (೪) ಸಾತ್ತ್ವಿಕ ಚಾತುರ್ಯ–ಭಾವ ಇವುಗಳಿಂದ ಕೂಡಿದ ನರ್ತನವು ... (ನಾಟ್ಯಶಾಸ್ತ್ರದಲ್ಲಿ ಚತುರ್ಯವು ಅಭಿನಯದಲ್ಲಿ (ನಟನೆ ಅಥವಾ ಅಭಿವ್ಯಕ್ತಿ) ಬುದ್ಧಿವಂತಿಕೆ ಅಥವಾ ಕೌಶಲವನ್ನು ಸೂಚಿಸುತ್ತದೆ. ಇವುಗಳ ಮೂಲಕ ನಟರು ನಟನೆಯಲ್ಲಿ ತೊಡಗಿದಾಗ ಅದನ್ನು **ನಟಚಾತುರ್ಯ**ವೆನ್ನುತ್ತಾರೆ.)	ಮಾತುಗಳಲ್ಲಿನ ಚಮತ್ಕಾರದಿಂದ ಕೂಡಿದ ಕಾವ್ಯವು ...
(ವಿದಗ್ಧ ಬುಧಜನ ಮನಮನಲೆಯಲೆ ವೇಡಾ) ...	ನಾಟ್ಯರಸಿಕರ ಮನಸ್ಸನ್ನು ಸೋಲಿಸಬೇಕಲ್ಲವೇ?	ಸಹೃದಯೀ ಕಾವ್ಯರಸಿಕರ ಮನಸ್ಸನ್ನು ಸ್ಪರ್ಶಿಸಬೇಡವೆ?

ಮುಂದಿನ ಎಂಟು ಪದ್ಯಗಳಲ್ಲಿ (ಪದ್ಯ ಸಂಖ್ಯೆ ೧೭ ರಿಂದ ೨೪ ರವರೆಗೆ) ಪಂಪನು ಸತ್ಕಾವ್ಯಗಳ ಲಕ್ಷಣಗಳನ್ನು, ಸತ್ಕೃತಿಯ ಗುಣಗಳನ್ನೂ, ದುಷ್ಕೃತಿಯ ದೋಷಗಳನ್ನೂ, ಕಾವ್ಯರಚನೆಯ ರಹಸ್ಯಗಳನ್ನು ವಿವರಿಸಿರುವನು. ಹಾಗೆಯೇ, ಸತ್ಕವಿಗಳು ಮತ್ತು ಕುಕವಿಗಳು, ಸಹೃದಯೀ ಕಾವ್ಯರಸಿಕರು ಮತ್ತು ಜಡರು, ಪಂಡಿತೋತ್ತಮರು ಮತ್ತು ಅಸೂಯಾಪರರು, ಶುಷ್ಕವೈಯಾಕರಣಿಗಳು, ಶುಷ್ಕತಾರ್ಕಿಕರು ಮತ್ತು ಕಾವ್ಯವನ್ನು ಓದಿ ಆಸ್ವಾದಿಸುವವರು ಇವರುಗಳ ಲಕ್ಷಣಗಳನ್ನೂ ಮತ್ತು ಇವರ ನಡುವಿನ ವ್ಯತ್ಯಾಸಗಳನ್ನು ಸುಂದರವಾಗಿಯೂ, ವ್ಯಂಗ್ಯಭರಿತ ಧ್ವನಿಯಲ್ಲಿಯೂ ವಿವರಿಸಿರುವನು.

ಕಿವಿಯಿಂ ಬಗೆವುಗುವೊಡೆ ಕೊಂ
ಕುವೆತ್ತ ಪೊಸನುಡಿಯೆ ಪುಗುಗುಮುೞಿದುದು ಸಱುಸ್ಸೈ
ತವಚಱನೆ ಮಾಡಿ ಸಱುಸ್ಸೈ
ತುವ್ರೋಕುವೋಂ ಬಗೆಯ ಬಟ್ಟೆಯಂ ಮುಟ್ಟುಗುವೇ ॥ **೧–೧೪**

ಪದ ವಿಭಾಗ: ಕಿವಿಯಿಂ, ಬಗೆವುಗುವೊಡೆ,

ಕೊಂಕುವೆತ್ತ, ಪೊಸ-ನುಡಿಯೆ, ಪುಗುಗುಂ, ಉೞಿದುದು,
ಸಱುಸ್ಯೆತವಚಱನೆ-ಮಾಡಿ, ಸಱುಸ್ಯೆತುವೋಕುಂ,
ಏಂ, ಬಗೆಯ, ಬಟ್ಟೆಯಂ, ಮುಟ್ಟುಗುಮೇ ॥ ೧-೧೮

ಅನ್ವಯಾರ್ಥ: (ಕವಿಯಿಂ) [ಮಾತುಗಳು] ಕವಿಯ ಮೂಲಕ **(ಬಗೆವುಗುವೊಡೆ=ಬಗೆ+ಪುಗುವೊಡೆ>ಪೊಗುವೊಡೆ)** ಮನಸ್ಸಿನ ಒಳಗೆ ಸೇರಬೇಕಾದರೆ **(ಕೊಂಕುವೆತ್ತ)** ವಕ್ರೋಕ್ತಿಯಿಂದ ಕೂಡಿದ **(ಪೊಸನುಡಿಯೆ)** ಅಪೂರ್ವವಾದ ನುಡಿಗಳು ಮಾತ್ರವೇ **(ಪುಗುಗುಂ>ಪೊಗುಗುಂ)** ಒಳಸೇರುವುವು. **(ಉೞಿದುದು)** ಉಳಿದ [ಮಾತುಗಳು] **(ಸಱುಸ್ಯೆತವಚಱನೆ ಮಾಡಿ=ಸಱುಸ್ಯೆತು+ ಅವಚಱನೆ-ಮಾಡಿ)** ಸುಮ್ಮನೆ [ಮನಸ್ಸಿಗೆ] ಬೇಸರವನ್ನುಂಟುಮಾಡಿ **(ಸಱುಸ್ಯೆತುವೋಕುಂ=ಸಱುಸ್ಯೆತು+ಪೋಕುಂ)** ಸುಮ್ಮನೆ [ವ್ಯರ್ಥವಾಗಿ] ಹೋಗುವುವು. **(ಏಂ)** [ಅಷ್ಟಲ್ಲದೆ] ಅವೇನು, **(ಬಗೆಯ)** ಅಂತರಂಗದ **(ಬಟ್ಟೆಯಂ)** ಹಾದಿಯನ್ನು **(ಮುಟ್ಟುಗುಮೇ)** ಮುಟ್ಟುವುವೇ? ॥ ೧-೧೮

ಭಾವಾರ್ಥ: ಜನರ ಕಿವಿಗೆ ಬಿದ್ದ ಮಾತುಗಳಲ್ಲಿ, (೧) ವಕ್ರತೆಯಿಂದೊಡಗೂಡಿದ, (೨) ಏಕತಾನತೆ ಇಲ್ಲದ, (೩) ಹೊಚ್ಚಹೊಸತನವುಳ್ಳ ಅಪೂರ್ವವಾದ ಮಾತುಗಳು ಮಾತ್ರ ಅವರ ಮನಸ್ಸಿಗೆ ಮುಟ್ಟುತ್ತವೆ ಎಂಬುದು ಕವಿಯ ಅನುಭವ. ಉಳಿದವು ಸುಮ್ಮನೆ ಹೀಗೆ ಬಂದು ಮನಸ್ಸಿಗೆ ಬೇಸರವನ್ನುಂಟುಮಾಡಿ ಹಾಗೇ ವ್ಯರ್ಥವಾಗಿ ಹೋಗಿಬಿಡುತ್ತವೆಯಲ್ಲದೆ, ಅವು ಮನಸ್ಸಿನ ಅಂತರಂಗವನ್ನು ಮುಟ್ಟುವುವೇ? ಎಂದು ಸತ್ಕೃತಿಯ ಒಂದು ಗುಣವನ್ನೂ, ದುಷ್ಕೃತಿಯ ಒಂದು ದೋಷವನ್ನೂ ಈ ಕಂದಪದ್ಯದಲ್ಲಿ ಕವಿಯು ವಿವರಿಸಿರುವನು. ೧-೧೮

ಮೃದುಮಧುರವಚನರಚನೆಯೊ
ಳುದಾತ್ತಮರ್ಥಪ್ರತೀತಿಯಂ ಕೇಳ್ವ ಜನ
ಕ್ಕಿದಿರೊಳ್ಕುಡದಂದದು ಕ
ಬ್ಬದೊಳಿರ್ದುಂ ಕವಿಯ ಮನದೊಳಿರ್ದಂತೆ ವಲಂ ॥ ೧-೧೯

ಪದ ವಿಭಾಗ: ಮೃದು-ಮಧುರ-ವಚನರಚನೆಯೊಳ್,
ಉದಾತ್ತಂ, ಅರ್ಥಪ್ರತೀತಿಯಂ, ಕೇಳ್ವ-ಜನಕ್ಕೆ,
ಇದಿರೊಳ್, ಕುಡದಂದು, ಅದು, ಕಬ್ಬದೊಳ್,
ಇರ್ದುಂ, ಕವಿಯ-ಮನದೊಳ್, ಇರ್ದಂತೆ, ವಲಂ ॥ ೧-೧೯

ಅನ್ವಯಾರ್ಥ: (ಮೃದು ಮಧುರ ವಚನರಚನೆಯೊಳ್) ಮೃದುವೂ, ಮಧುರವೂ [ಆದ] ಮಾತಿನ ಒಕ್ಕಣೆಯಲ್ಲಿ, **(ಉದಾತ್ತಂ)** ಶ್ರೇಷ್ಠವಾದುದುದನ್ನೂ, **(ಅರ್ಥಪ್ರತೀತಿಯಂ)** ನಿಶ್ಚಿತವಾದ ಅರ್ಥವನ್ನೂ **(ಕೇಳ್ವಜನಕ್ಕಿದಿರೊಳ್[=ಕೇಳ್ವಜನಕ್ಕೆ+ ಇದಿರೊಳ್])** ಕೇಳುವ [ನಿರೀಕ್ಷಿಸುವ] ಜನಕ್ಕೆ ನೇರವಾಗಿ/ಪ್ರತ್ಯಕ್ಷವಾಗಿ [ಕಾವ್ಯವು] **(ಕುಡದಂದು)** ಕೊಡದಿದ್ದಲ್ಲಿ, **(ಅದು)** ಅದು ಎಂದರೆ ಉದಾತ್ತವಾದುದು ಮತ್ತು ಅರ್ಥಪ್ರತೀತಿಯನ್ನುಳ್ಳದ್ದು **(ಕಬ್ಬದೊಳಿರ್ದುಂ=ಕಬ್ಬದೊಳ್+ಇರ್ದುಂ)** ಕಾವ್ಯದಲ್ಲಿ ಇದ್ದರೂ, **(ಕವಿಯಮನದೊಳಿರ್ದಂತೆ=ಕವಿಯಮನದೊಳ್+ಇರ್ದಂತೆ)** ಕವಿಯ ಮನಸ್ಸಿನೊಳಗೇ ಉಳಿದುಹೋದಂತೆಯೇ **(ವಲಂ)** ಸರಿ ॥ ೧-೧೯

ಈ ಪದ್ಯದಲ್ಲಿ ಕವಿಯು, ಸಹೃದಯಿ ಕಾವ್ಯರಸಿಕನ ದೃಷ್ಟಿಯಿಂದ ಕಾವ್ಯವು ಹೇಗಿರಬೇಕೆಂದು ಹೇಳುತ್ತಾನೆ.

ಭಾವಾರ್ಥ: ಕಾವ್ಯದಲ್ಲಿ ಉದಾತ್ತವಾದುದನ್ನೂ, ಅರ್ಥಪ್ರತೀತಿಯನ್ನು ನಿರೀಕ್ಷಿಸುವ ಜನರಿಗೆ, ಕವಿಯು ತನ್ನ ಕಾವ್ಯದಲ್ಲಿ ಪ್ರತಿಪಾದಿಸಿರುವ ಅಥವಾ ವರ್ಣಿಸಿರುವ ವಿಷಯವು ಎಷ್ಟೇ ಉದಾತ್ತವಾಗಿದ್ದರೂ, ಕಾವ್ಯವನ್ನು ವಾಚಿಸಿದಾಗ ಸಹೃದಯೀ ಕಾವ್ಯರಸಿಕನಿಗೆ ಅದು ತಲುಪದಿದ್ದರೆ, ಕಾವ್ಯದ ಆ ವಸ್ತುವು ಕವಿಯ ಮನಸ್ಸಿನೊಳಗೇ ಉಳಿದುಹೋದಂತೆಯೇ ಸರಿ [ಅಂದರೆ, ಕವಿಯು ತನ್ನಲ್ಲಿರುವ ಉದಾತ್ತವಿಷಯವನ್ನು ಪ್ರಕಟಪಡಿಸುವುದರಲ್ಲಿ ನಿಷ್ಫಲನಾದಂತೆಯೇ ಸರಿ] ಎಂದು ಸತ್ಕೃತಿಯ ಮತ್ತೊಂದು ಗುಣವನ್ನೂ, ದುಷ್ಕೃತಿಯ ಮತ್ತೊಂದು ದೋಷವನ್ನೂ ಈ ಕಂದಪದ್ಯದಲ್ಲಿ ವಿವರಿಸಿರುವನು. ೧-೧೯

ಕವಿತಾರಹಸ್ಯಮಂ ಸ
ತ್ಕವಿಯಱಿಗುಮನೇಡ[1]ಮೂಕನೇಡಂ ಜಡನೆಂ
ಬವನಱಿಗುಮೆ ವಿಟನಱಿಗುಂ
ಕುವಿಟಂ ಸ್ತ್ರೀರತರಹಸ್ಯದೊಳಗಱಿದಪನೇ ॥ ೧–೨೦

ಪದ ವಿಭಾಗ: ಕವಿತಾ–ರಹಸ್ಯಮಂ, ಸತ್ಕವಿ
ಅಱಿಗುಂ; ಅನೇಡಮೂಕನ್, ಏಡಂ, ಜಡನ್,
ಎಂಬವನ್, ಅಱಿಗುಮೆ; ವಿಟನ್, ಅಱಿಗುಂ,
ಕುವಿಟಂ, ಸ್ತ್ರೀರತ–ರಹಸ್ಯದೊಳಗ[ನ್], ಅಱಿದಪನೇ ॥ ೧–೨೦

ಅನ್ವಯಾರ್ಥ: (ಕವಿತಾ ರಹಸ್ಯಮಂ) ಕಾವ್ಯರಚನೆಯ ಗುಟ್ಟನ್ನು [ಮರ್ಮವನ್ನು] **(ಸತ್ಕವಿಯಱಿಗುಂ=ಸತ್ಕವಿ+ಅಱಿಗುಂ)** ಉತ್ತಮ ಕವಿಯು ತಿಳಿದಿರುತ್ತಾನೆ. **(ಅನೇಡಮೂಕನ್)** [ಹುಟ್ಟು] ಕಿವುಡನೂ ಮೂಕನೂ, **(ಏಡಂ)** ಕಿವುಡನೂ, **(ಜಡನೆಂಬವನಱಿಗುಮೆ=ಜಡನ್+ಎಂಬುವನ್+ಅಱಿಗುಮೆ)** ಭಾವನಾ ರಹಿತನು ಎನ್ನುವಂತಹವನು [ಕವಿತಾ ರಹಸ್ಯವನ್ನು] ತಿಳಿಯುವನೇ? **(ಸ್ತ್ರೀರತರಹಸ್ಯದೊಳಗ=ಸ್ತ್ರೀರತ–ರಹಸ್ಯದ+ಒಳಗ[ನ್])** ಸ್ತ್ರೀಯೊಂದಿಗಿನ ರತಿಕ್ರೀಡೆಯ ಒಳಗುಟ್ಟನ್ನು **(ವಿಟನ್)** [ರಸಿಕನಾದ] ವಿಲಾಸಿಯು **(ಅಱಿಗುಂ)** ತಿಳಿಯಬಲ್ಲನು, [ಹೊರತು] **(ಕುವಿಟಂ)** ಕುತ್ಸಿತನಾದ ವಿಟನು **(ಅಱಿದಪನೇ)** ತಿಳಿಯುವನೇ !! ॥ ೧–೨೦

ಭಾವಾರ್ಥ: ಕಾವ್ಯರಚನೆಯ ರಹಸ್ಯವನ್ನು ಉತ್ತಮ ಕವಿಯು ತಿಳಿದಿರುತ್ತಾನೆ. ಹುಟ್ಟು ಕಿವುಡನೂ ಮೂಕನೂ, ಕಿವುಡನೂ, ಭಾವನಾ ರಹಿತನೂ ಆಗಿರುವಂತಹವನು ಕಾವ್ಯರಚನೆಯ ರಹಸ್ಯವನ್ನು ತಿಳಿಯುವನೇ? ಸಾಧ್ಯವಿಲ್ಲ. ಹೇಗೆಂದರೆ, ಸ್ತ್ರೀರತದ ರಹಸ್ಯವನ್ನು ವಿಟನು ತಿಳಿಯಬಲ್ಲನೇ ಹೊರತು ಕುವಿಟನು ತಿಳಿಯಬಲ್ಲನೇ ಎಂದು ಪ್ರಶ್ನಿಸಿ, ಕವಿತಾರಹಸ್ಯವು ಕವಿಗಳಿಗಲ್ಲದೆ ಸಾಮಾನ್ಯನಿಗೆ ತಿಳಿಯದೆಂದು ಕವಿಯು ಹೇಳಿದ್ದಾನೆ. ೧–೨೦

ವಿಶೇಷ ವಿವರಣೆ: ವಿಟ ... ಕುವಿಟಂ ... : ಈ ಎರಡು ಪದಗಳ ಅರ್ಥವ್ಯತ್ಯಾಸವನ್ನು ತಿಳಿಯುವುದು ಈ ಪದ್ಯದ ಸಂದರ್ಭದಲ್ಲಿ ಯುಕ್ತವಿದೆ. **ವಿಟ**ನಿಗೆ ಪ್ರತಿಯಾಗಿ **ಕುವಿಟ** ಭೇದವಿದೆ. ಸಂಸ್ಕೃತ ನಾಟಕಗಳಲ್ಲಿ ಎರಡಕ್ಕೂ ಉದಾಹರಣೆಗಳು ದೊರಕುತ್ತವೆ. ನಾಯಕನ ಸ್ನೇಹಿತನೂ, ಅವನ ವಿರಹತಾಪವನ್ನು ನೀಗಿಸುವವನೂ, ಮಾತಿನ ಚಾತುರ್ಯವುಳ್ಳವನೂ **ವಿಟ**ನೆನಿಸುವನು. ಸಂದರ್ಭೋಚಿತವಲ್ಲದ ಮಾತುಗಳನ್ನಾಡುವ, ತಿಳಿವಳಿಕೆಯಿಲ್ಲದ, ಮನೋರಂಜನೆ ಮಾತ್ರ ಉಂಟುಮಾಡುವ, ವಿದೂಷಕ ರೀತಿಯವ **ಕುವಿಟ**. ಆತನ ಮಾತಿನಲ್ಲಿ ಯಾವ ಮೌಲ್ಯವಿರದು. **ಕುವಿಟ**ನಿಗೆ ಉತ್ತಮ ಉದಾಹರಣೆಯೆಂದರೆ, ಶೂದ್ರಕ ಕವಿಯ **ಮೃಚ್ಛಕಟಿಕಾ** ಸಂಸ್ಕೃತ ನಾಟಕದ **ಶಕಾರನ** (ಸಂಸ್ಥಾನಕನ) ಪಾತ್ರ.

ಭಾಷಾವಿದರ್ಕವಿತ್ವವಿ
ಶೇಷಜ್ಞರ್ನಿಕಷರಪ್ಪೊಡಪ್ಪುದು ಸಭೆಯೊಳ್
ಮಾಷಮುಖರಂತೆ[2] ದೋಷಗ
ವೇಷಣಪರರಪ್ಪರೆಂದೊಡದು ತೆಗಟಿಲ್ತೆ ॥ ೧–೨೧

ಪದ ವಿಭಾಗ: ಭಾಷಾವಿದರ್, ಕವಿತ್ವವಿಶೇಷಜ್ಞರ್,
ನಿಕಷರ್, ಅಪ್ಪೊಡೆ, ಅಪ್ಪುದು, ಸಭೆಯೊಳ್–
ಮಾಷಮುಖರಂತೆ–ದೋಷಗವೇಷಣಪರರಪ್ಪರ್,
ಎಂದೊಡೆ+ಅದು–ತೆಗಟಿಲ್ತೆ ॥ ೧–೨೧

ಅನ್ವಯಾರ್ಥ: (ಭಾಷಾವಿದರ್) ಭಾಷಾಪಂಡಿತರು [ಹಾಗೂ] **(ಕವಿತ್ವ ವಿಶೇಷಜ್ಞರ್)** ಕಾವ್ಯರಚನೆಯ ಬಗ್ಗೆ ವಿಶೇಷ ಜ್ಞಾನ

---

[1] ಮೂಲಪಾಠ–'ಮನೇಡ', ಕೆಜಿ ಯವರ ಪಾಠ–'ಮನೇಕ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಮಾಷಮುಖದಂತೆ', ಕೆಜಿ ಯವರ ಪಾಠ–'ಮಾಷಮುಖರಂತೆ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

ವುಳ್ಳವರು **(ಸಭೆಯೊಳ್)** ಸಭೆಯಲ್ಲಿ **(ನಿಕಷರಪ್ಪೊಡಪ್ಪುದು=ನಿಕಷರ್+ಅಪ್ಪೊಡೆ+ಅಪ್ಪುದು)** [ಕಾವ್ಯದ ಗುಣಮಟ್ಟವನ್ನು] ಒರೆಹಚ್ಚುವವರಾದರೆ ಆಗಬಹುದು. [ಹಾಗಲ್ಲದೆ] **(ಮಾಷಮುಖರಂತೆ=ಉದ್ದಿನಕಾಳಿನ ಮುಖದಂತಿರುವ ಮೂತಿಯುಳ್ಳ)** ನೊಣದ ಮುಖದಂತಹ ಮೂತಿಯುಳ್ಳ ಮೂರ್ಖರು **(ದೋಷಗವೇಷಣಪರರಪ್ಪರ್=ದೋಷಗವೇಷಣಪರರ್+ಅಪ್ಪರ್)** ತಪ್ಪುಗಳನ್ನೇ ಹುಡುಕುವುದರಲ್ಲಿ ನಿರತರಾಗಿರುವವರು **(ಎಂದೊಡದು=ಎಂದೊಡೆ+ಅದು)** ಎಂದಾದರೆ ಅದು **(ತೆಗಟಲ್ತೆ=ತೆಗಟ್+ಅಲ್ತೆ)** ಅಣಕವಲ್ಲವೇ? ॥ ೧-೨೧

ಭಾವಾರ್ಥ: ಭಾಷಾಪಂಡಿತರು ಹಾಗೂ ಕಾವ್ಯರಚನೆಯ ಬಗ್ಗೆ ವಿಶೇಷ ಜ್ಞಾನವುಳ್ಳವರು ಕಾವ್ಯದ ಗುಣವನ್ನು ಪರೀಕ್ಷಿಸುವವರಾದರೆ ಒಪ್ಪಬಹುದು. ಹಾಗಲ್ಲದೆ, ಮೂರ್ಖರು ಕಾವ್ಯದಲ್ಲಿ ತಪ್ಪುಗಳನ್ನೇ ಹುಡುಕುವುದರಲ್ಲಿ ನಿರತರಾದರೆ ಅದು ಅಣಕವಲ್ಲದೆ ಬೇರೇನು? ಎಂದು ಕವಿಯು ಈ ಪದ್ಯದಲ್ಲಿ ಭಾಷಾವಿದರನ್ನು ಮತ್ತು ಕವಿತ್ವವಿಶೇಷಜ್ಞರನ್ನು ಶ್ಲಾಘಿಸಿ, ದೋಷಗವೇಷಣಪರರನ್ನು ನೊಣಗಳಿಗೆ ಹೋಲಿಸಿ ದೂಷಿಸುವನು. ೧-೨೧

ಧಿಷಣರ ಕೃತಿಗಳೊಳೆಸೆವಭಿ
ಲಷಿತಗುಣಂಗಳನೆ ಬಿಸುಟು ಮಾತ್ಸರ್ಯಮಹಾ
ವಿಷಮಮತಿಯಿಂದೆ ದೋಷಾ
ಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂ[1]ಗಳ್ ॥ **೧-೨೨**

ಪದ ವಿಭಾಗ: ಧಿಷಣರ-ಕೃತಿಗಳೊಳ್, ಎಸೆವ, ಅಭಿಲಷಿತ,
ಗುಣಂಗಳನೆ, ಬಿಸುಟು, ಮಾತ್ಸರ್ಯ-
ಮಹಾವಿಷಮಮತಿಯಿಂದೆ, ದೋಷಾಮಿಷಮನೆ,
ಪೊರ್ದಿರ್ಪುವಲ್ತೆ, ಕುಕವಿ-ಬಕಂಗಳ್ ॥ ೧-೨೨

ಅನ್ವಯಾರ್ಥ: **(ಧಿಷಣರ ಕೃತಿಗಳೊಳ್)** ಪ್ರಾಜ್ಞರ ಕಾವ್ಯಗಳಲ್ಲಿ **(ಎಸೆವ)** ಶೋಭಿಸುವ **(ಅಭಿಲಷಿತ)** ಅಪೇಕ್ಷಣೀಯವಾದ [ಮೆಚ್ಚತಕ್ಕ] **(ಗುಣಂಗಳನೆ ಬಿಸುಟು)** ಗುಣಗಳನ್ನು ತಿರಸ್ಕರಿಸಿ, **(ಮಾತ್ಸರ್ಯ ಮಹಾ ವಿಷಮಮತಿಯಿಂದೆ ಕುಕವಿ ಬಕಂಗಳ್)** ಅಸೂಯಾಪರರಾಗಿ ಅತ್ಯಂತ ನೀಚಬುದ್ಧಿಯಿಂದ ಅಧಮ ಕವಿಗಳೆಂಬ ಬಕಪಕ್ಷಿಗಳು **(ದೋಷಾಮಿಷಮನೆ=ದೋಷ+ಆಮಿಷಮನೆ)** ದೋಷವೆಂಬ ಮಾಂಸವನ್ನೇ **(ಪೊರ್ದಿರ್ಪುವಲ್ತೆ=ಪೊರ್ದಿರ್ಪುವು+ಅಲ್ತೆ)** ಅರಸುತ್ತವೆಯಲ್ಲವೇ? ॥ ೧-೨೨

ಭಾವಾರ್ಥ: ಅಧಮ ಕವಿಗಳೆಂಬ (ಕುಕವಿಗಳೆಂಬ) ಬಕಪಕ್ಷಿಗಳು, ಪ್ರಾಜ್ಞರ ಕಾವ್ಯಗಳಲ್ಲಿ ಕಂಗೊಳಿಸುವ ಗುಣಗಳನ್ನು ಮೆಚ್ಚದೆ, ಅವುಗಳನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿ, ಅಸೂಯಾಪರರಾಗಿ ಅತ್ಯಂತ ನೀಚಬುದ್ಧಿಯಿಂದ, ಬಕಪಕ್ಷಿಗಳು ಹೇಗೆ ಮಾಂಸವನ್ನೇ ಅರಸಿಹೋಗುತ್ತವೆಯೋ ಹಾಗೆ, ಕಾವ್ಯಗಳಲ್ಲಿ ಇಲ್ಲದ ದೋಷವೆಂಬ ಮಾಂಸವನ್ನೇ ಅರಸುತ್ತಾರೆ ಎಂದು ಕವಿಯು ಕುಕವಿಗಳನ್ನು ಬಕಪಕ್ಷಿಗಳಿಗೆ ಹೋಲಿಸಿ ದೂಷಿಸಿದ್ದಾನೆ. ೧-೨೨

ವಿಶೇಷ ವಿವರಣೆ: ... ಅಭಿಲಷಿತ ಗುಣಂಗಳನೆ ಬಿಸುಟು ... ದೋಷಾಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್: ಕವಿಯು ಹಿಂದಿನ ೧-೧೭ ನೆಯ ಕಂದಪದ್ಯದಲ್ಲಿ ಸತ್ಕಾವ್ಯದ ಲಕ್ಷಣಗಳನ್ನು ಹೇಳಿರುವನು. ನಂತರ ೧-೧೮ ಮತ್ತು ೧-೧೯ ನೆಯ ಪದ್ಯಗಳಲ್ಲಿ ಸತ್ಕಾವ್ಯದಲ್ಲಿರುವ ಗುಣಗಳನ್ನೂ, ದುಷ್ಕೃತಿಯಲ್ಲಿರುವ ದೋಷಗಳನ್ನೂ ಹೇಳಿರುವನು. ನಂತರ ೧-೨೦ ನೆಯ ಪದ್ಯದಲ್ಲಿ ಕವಿಯು ಕವಿತಾರಹಸ್ಯವು ಸತ್ಕವಿಗಳಿಗಲ್ಲದೆ ಇತರರಿಗೆ ತಿಳಿಯದೆಂದು ಹೇಳಿದ್ದಾನೆ. ಕವಿಯು ಹಿಂದಿನ ೧-೨೧ ನೆಯ ಕಂದಪದ್ಯದಲ್ಲಿ ಭಾಷಾವಿದರನ್ನು ಮತ್ತು ಕವಿತ್ವ ವಿಶೇಷಜ್ಞರನ್ನು ಶ್ಲಾಘಿಸಿರುವನು. ಈ ಕಂದ್ಯಪದ್ಯದಲ್ಲಿ ಕುಕವಿಗಳನ್ನು ಅತ್ಯಂತ ತೀಕ್ಷ್ಣವಾಗಿ ದೂಷಿಸಿದ್ದಾನೆ. ಕುಕವಿಗಳಲ್ಲಿ ಅಡಗಿರುವ ತಾಮಸಿಕ ಮನೋಧರ್ಮವನ್ನು ನೇರವಾಗಿ ಹೊರಗೆಡವಿದ್ದಾನೆ. ಅಲ್ಲದೆ, ಸತ್ಕವಿಗಳ ಸಾತ್ವಿಕ ಮನೋಧರ್ಮವನ್ನು ಈ ಪದ್ಯದಲ್ಲಿ ಪ್ರಚ್ಛನ್ನಗೊಳಿಸಿ ವರ್ಣಿಸಿದ್ದಾನೆ.

ಪ್ರಸ್ತುತ ಪದ್ಯದಲ್ಲಿ ಕವಿಯು, ಕುಕವಿಗಳನ್ನು ಬಕಗಳಿಗೆ ಹೋಲಿಸಿ, ಸತ್ಕೃತಿಯೆಂಬ ಸರೋವರದಲ್ಲಿ ಕುಕವಿಗಳೆಂಬ ಬಕಗಳು ಇರುತ್ತವೆಂಬ ಭಾವವುಂಟಾಗುವಂತೆ ಹೇಳುತ್ತಾನೆ. ಹಾಗೆಯೇ ಕುಕವಿಗಳು ಪ್ರಾಜ್ಞರ ಕಾವ್ಯಗಳಲ್ಲಿ ಹುಡುಕುವ [ಅಲ್ಲಿಲ್ಲದ] **ದೋಷ**ಗಳನ್ನು **ಆಮಿಷ (ಮಾಂಸ)** ಕ್ಕೆ ಹೋಲಿಸಿರುವನು. ಬಕವಾದರೋ ಯುಕ್ತಿ, ಮೋಸ ಹಾಗೂ ಜಾಗರೂಕತೆಗಳಿಗೆ ಹೆಸರಾದ

[1] 'ಬಕಂ'=ಯುಕ್ತಿ, ಮೋಸ ಹಾಗೂ ಜಾಗರೂಕತೆಗಳಿಗೆ ಹೆಸರಾದ ಕೊಕ್ಕರೆ ಜಾತಿಗೆ ಸೇರಿದ ಒಂದು ಬಗೆಯ ಪಕ್ಷಿ.

ಶುದ್ಧ ಮಾಂಸಾಹಾರಿ ಪಕ್ಷಿ. ಬಕವು, ಹಂಸದಂತೆ ಸಾತ್ವಿಕ ಆಹಾರವಾದ ಕಮಲದ ಬೀಜ ಇತ್ಯಾದಿಗಳನ್ನು ಅಪೇಕ್ಷಿಸದೆ, ತನ್ನ ಸ್ವಭಾವಸಿದ್ಧ ಆಹಾರವಾದ, ಸರೋವರದಲ್ಲಿರುವ ಮೀನು ಇತ್ಯಾದಿ ಮಾಂಸದೆಡೆಗೆ ಹೇಗೆ ತೆರಳುವುದೋ ಹಾಗೆಯೇ ಮಾತ್ಸರ್ಯ ಮಹಾವಿಷಮತಿಯುಳ್ಳವರಾದ ತಾಮಸಿಕ ಪ್ರವೃತ್ತಿಯ ಕುಕವಿಗಳು ಪ್ರಾಜ್ಞರ ಕಾವ್ಯಗಳಲ್ಲಿರುವ ಅಪೇಕ್ಷಣೀಯ ಗುಣಗಳನ್ನು ಕಡೆಗಣಿಸಿ, ತಿರಸ್ಕರಿಸಿ, ಅದರಲ್ಲಿಲ್ಲದ ದೋಷಗಳನ್ನೇ ಅರಸುತ್ತಾರೆಂದು ಕವಿಯು ಈ ಪದ್ಯದಲ್ಲಿ ಹೇಳಿದ್ದಾನೆ. **ಅಭಿಲಷಿತ ಗುಣಂಗಳ** ಬಗ್ಗೆ ಹೆಚ್ಚಿನ ವಿವರಣೆಗೆ ಆಶ್ವಾಸದ ಕೊನೆಯಲ್ಲಿ **ಕಾವ್ಯಧರ್ಮ (ಕಾವ್ಯಗುಣ)** ಇದರಡಿ ನೀಡಿರುವ ಟಿಪ್ಪಣಿಯನ್ನು ನೋಡಿರಿ.

ಕೋಗಿಲೆಯ ಸರವರಣ್ಯದೊ
ಳೇಗೆಯ್ದುದೊ ಮೂರ್ಖಜಡಜನಾರಣ್ಯದೊಳಿಂ
ಪೋಗಡಿಸಿದ ಕವಿಶಬ್ದಮ
ದೇಗೆಯ್ದುದರಣ್ಯರುದಿತಮದು ಬಗೆವಾಗಳ್ ॥ **೧–೨೩**

ಪದ ವಿಭಾಗ: ಕೋಗಿಲೆಯ–ಸರಂ, ಅರಣ್ಯದೊಳ್,
ಏಗೆಯ್ದುದೊ; ಮೂರ್ಖ–ಜಡಜನಾರಣ್ಯದೊಳ್,
ಇಂಪೋಗಡಿಸಿದ, ಕವಿಶಬ್ದಂ,
ಅದು, ಏಗೆಯ್ದುದು; ಅರಣ್ಯ–ರುದಿತಂ, ಅದು, ಬಗೆವಾಗಳ್ ॥ ೧–೨೩

ಅನ್ವಯಾರ್ಥ: (ಕೋಗಿಲೆಯಸರವರಣ್ಯದೊಳೇಗೆಯ್ದುದೊ=ಕೋಗಿಲೆಯ–ಸರಂ+ಅರಣ್ಯದೊಳ್+ಏಗೆಯ್ದುದೊ) ಕೋಗಿಲೆಯ ಸ್ವರವು ಅರಣ್ಯದಲ್ಲಿ ಏನು ಮಾಡೀತೋ? [ಏನು ಪ್ರಯೋಜನವೋ? ಅದೇರೀತಿ] **(ಮೂರ್ಖಜಡಜನಾರಣ್ಯದೊಳ್= ಮೂರ್ಖ–ಜಡ–ಜನಾರಣ್ಯದೊಳ್)** ಅವಿವೇಕಿಗಳು ಹಾಗೂ ಮಂದಮತಿಗಳಿರುವ ಜನಸಮೂಹವೆಂಬ ಅರಣ್ಯದಲ್ಲಿ **(ಇಂಪೋಗಡಿಸಿದ=ಇಂಪು+ಓಗಡಿಸಿದ)** ಮಾಧುರ್ಯವನ್ನು ಹೊರಸೂಸುವ **(ಕವಿಶಬ್ದಮದು=ಕವಿಶಬ್ದಂ+ಅದು)** ಕವಿವಾಣಿ ಯಾದರೂ [ಕವಿಯ ಮಾತುಗಳಾದರೂ ತಾನೆ] **(ಏಗೆಯ್ದುದು)** ಏನು ಮಾಡುತ್ತದೆ? **(ಬಗೆವಾಗಳ್)** [ಹಾಗೇ] ಯೋಚಿಸಿ ನೋಡಿದರೆ **(ಅದು)** ಆ ಕವಿವಾಣಿಯೂ ಕೂಡ **(ಅರಣ್ಯರುದಿತಂ)** ವ್ಯರ್ಥಾಲಾಪವೇ ಸರಿ [ಕಾಡಿನಲ್ಲಿ ಅತ್ತ ಹಾಗೆಯೇ ಅಂದರೆ ಅರಣ್ಯರೋದನವೇ ಸರಿ] ॥ ೧–೨೩

ಭಾವಾರ್ಥ: ಅರಣ್ಯದಲ್ಲಿ ಕುಳಿತು ಹಾಡುವ ಕೋಗಿಲೆಯ ಮಧುರವಾಣಿಯು ಆ ಕಾಡಿನಲ್ಲಿ ಏನು ಮಾಡಬಲ್ಲದು? ಯಾವ ಪರಿಣಾಮವನ್ನುಂಟುಮಾಡೀತು? ಹಾಗೆಯೇ ಮೂರ್ಖ ಹಾಗೂ ಮಂದಮತಿಗಳ ಗುಂಪಿನಲ್ಲಿ ಮಾಧುರವಾದ ಕವಿವಾಣಿಯಾದರೂ ತಾನೆ ಏನು ಮಾಡೀತು? ಅಂತಹವರ ಮಧ್ಯೆ ಯಾವ ಪರಿಣಾಮವನ್ನು ತಾನೆ ಉಂಟುಮಾಡೀತು? ಹಾಗೇ ಯೋಚಿಸಿದರೆ ಅಂತಹವರ ಗುಂಪಿನಲ್ಲಿ ವಾಚಿಸಿದ ಕವಿವಾಣಿಯು ಅರಣ್ಯರೋದನದಂತೆಯೇ ಸರಿ. ಅದೊಂದು ವ್ಯರ್ಥಾಲಾಪ ಎನ್ನುತ್ತಾನೆ ಕವಿ. ೧–೨೩

ಇರು[1] ಮರುಳೆ ಶುಷ್ಕವೈಯಾ
ಕರಣಂಗಂ ಶುಷ್ಕತಾರ್ಕಿಕಂಗಂ[2] ಬೆಳ್ಳ
ಕ್ಕರಿಗಂಗಂ ವಿಷಯಮೆ ಕಾ
ವ್ಯರತ್ನಮತಿಚತುರ ಕವಿಕದಂಬಕವಿಷಯಂ ॥ **೧–೨೪**

ಪದ ವಿಭಾಗ: ಇರು–ಮರುಳೆ, ಶುಷ್ಕ–ವೈಯಾಕರಣಂಗಂ,
ಶುಷ್ಕ–ತಾರ್ಕಿಕಂಗಂ,
ಬೆಳ್ಳಕ್ಕರಿಗಂಗಂ, ವಿಷಯಮೆ–

---

[1] ಮೂಲಪಾಠ–'ಇರು', ಕೆಜಿ ಯವರ ಪಾಠ–'ಇದು', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಶುಷ್ಕತಾರ್ಕಿಕಂಗಂ', ಕೆಜಿ ಯವರ ಪಾಠ–'ಶುಷ್ಕತಾರ್ಕ್ಕಿಗಂಗಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಕಾವ್ಯರತ್ನಂ, ಅತಿ–ಚತುರ–ಕವಿಕದಂಬಕ–ವಿಷಯಂ ॥ ೧–೨೪

ಅನ್ವಯಾರ್ಥ: **(ಇರು ಮರುಳೆ)** ಅಯ್ಯಾ ತಿಳಿಗೇಡಿಯೇ, ಸ್ವಲ್ಪ ತಾಳು, **(ಶುಷ್ಕವೈಯಾಕರಣಂಗಂ)** ಒಣ ವ್ಯಾಕರಣ ಪಂಡಿತನಿಗೂ, **(ಶುಷ್ಕತಾರ್ಕಿಕಂಗಂ)** ಒಣ ತಾರ್ಕಿಕನಿಗೂ, **(ಬೆಳ್ಳಕ್ಕರಿಗಂಗಂ)** ಅಕ್ಷರತಿಳಿದವನಾದ ಮೂರ್ಖನಿಗೂ **(ಕಾವ್ಯರತ್ನಂ)** [ಈ] ಕಾವ್ಯರತ್ನವು **(ವಿಷಯಮೆ)** [ರಸಾಸ್ವಾದನೆಗೆ] ವಸ್ತುವಾಗಬಲ್ಲುದೇ? [ಸಾಧ್ಯವಿಲ್ಲ] **(ಅತಿಚತುರ ಕವಿ ಕದಂಬಕ)** ಅತ್ಯಂತ ಜಾಣರಿರುವ ಕವಿಗೋಷ್ಠಿಗೆ ಮಾತ್ರ **(ವಿಷಯಂ)** ಕಾವ್ಯರಸಾಸ್ವಾದನೆಗೆ ವಸ್ತುವಾಗಬಲ್ಲದು ॥ ೧–೨೪

ಭಾವಾರ್ಥ: ಅತ್ಯಂತ ಜಾಣರಾದ ಕವಿಗಳ ಗೋಷ್ಠಿಗೆ ಮಾತ್ರ ಈ ಕಾವ್ಯರತ್ನವು ಗೋಚರಿಸುವ ವಸ್ತುವಾಗಬಲ್ಲುದೇ ಹೊರತು, ಒಣ ವೈಯಾಕರಣನಿಗೂ, ಒಣ ತಾರ್ಕಿಕನಿಗೂ, ಅಕ್ಷರಜ್ಞನಾಗಿ ಕೆಲವು ಗ್ರಂಥಗಳನ್ನು ಓದಿಕೊಂಡ ಬೆಪ್ಪು ಪಂಡಿತನಿಗೂ, ಕಾವ್ಯರತ್ನದ ವಸ್ತುವು ದಕ್ಕುವುದಿಲ್ಲ ಎಂದು ಕವಿಯು ವ್ಯಂಗ್ಯವಾಗಿ ಹೇಳಿದ್ದಾನೆ. ೧–೨೪

ವಿಶೇಷ ವಿವರಣೆ: ಕವಿಯು ಇಲ್ಲಿಗೆ ಸತ್ಕಾವ್ಯದ ಹಾಗೂ ಸತ್ಕವಿಯ ಲಕ್ಷಣಗಳನ್ನು, ಸತ್ಕೃತಿಯ ಗುಣಗಳನ್ನು, ದುಷ್ಕೃತಿಯ ದೋಷಗಳನ್ನು, ಕವಿತಾರಹಸ್ಯವನ್ನು, ಕೃತಿಯ ಗುಣಪರೀಕ್ಷಣವನ್ನು, ಕುಕವಿಬಕಗಳು ದೋಷಾಮಿಷವನ್ನೇ ಅರಸುವುದನ್ನು ಕುರಿತ ವಿವರಣೆಗಳನ್ನು ಪೂರ್ಣಗೊಳಿಸಿರುವನು. ಇನ್ನುಮುಂದೆ ನೇರವಾಗಿ ತನ್ನ ಕಾವ್ಯದ ಹಿರಿಮೆಗರಿಮೆಗಳನ್ನು ಹೇಳಲುದ್ಯುಕ್ತನಾಗುವನು.

ಮತ್ತೇಭ **ಗುರು ದೇವೇಂದ್ರಮುನೀಂದ್ರನಿಂದ್ರನಮಿತಂ ದೇವಂ ಕಥಾನಾಯಕಂ**
ವಿಕ್ರೀಡಿತ **ಪುರುದೇವಂ ಕಥೆಯುಂ ತದಾದಿಪುರುಷಪ್ರಸ್ತುತ್ಯಜನ್ಮಾಳಿಬಂ**
ಧುರಮೆಂದಂದೆ ಮದೀಯವಾಗ್ವಿಭವವಿನ್ಯಾಸಂ ಬಲಂಬೆತ್ತುದಿ
ನ್ನಿರು ಬಲ್ಲಿತ್ತಱ ಕೋಡು ಕೂರಿತದನಂತಿಂತುಂತೆನಲ್ಬರ್ಕುಮೇ ॥ ೧–೨೫

ಪದ ವಿಭಾಗ: ಗುರು–ದೇವೇಂದ್ರ–ಮುನೀಂದ್ರನ್; ಇಂದ್ರನಮಿತಂ–ದೇವಂ–ಕಥಾನಾಯಕಂ–
ಪುರುದೇವಂ; ಕಥೆಯುಂ–ತದಾದಿಪುರುಷ–ಪ್ರಸ್ತುತ್ಯ–ಜನ್ಮಾಳಿ–ಬಂಧುರಂ;
ಎಂದಂದೆ, ಮದೀಯ, ವಾಗ್ವಿಭವವಿನ್ಯಾಸಂ, ಬಲಂಬೆತ್ತುದು, ಇನ್, ಇರು,
ಬಲ್ಲಿತ್ತಱ–ಕೋಡು–ಕೂರಿತು, ಅದನ್, ಅಂತಿಂತುಂತು, ಎನಲ್, ಬರ್ಕುಮೇ ॥ ೧–೨೫

ಅನ್ವಯಾರ್ಥ: **(ಗುರು ದೇವೇಂದ್ರಮುನೀಂದ್ರನ್)** ಆಚಾರ್ಯ ದೇವೇಂದ್ರಮುನಿಯು [ನನ್ನ] ಗುರು; **(ಇಂದ್ರನಮಿತಂ)** ಇಂದ್ರರಿಂದ ನಮಸ್ಕರಿಸಲ್ಪಟ್ಟ **(ದೇವಂ ಪುರುದೇವಂ)** ಸ್ವಾಮಿಯಾದ ಪುರುದೇವನು [ವೃಷಭದೇವನು] **(ಕಥಾನಾಯಕಂ)** [ಈ ಕಾವ್ಯದ] ಕಥಾನಾಯಕನು; **(ಕಥೆಯುಂ)** [ಈ] ಕಥೆಯೂ **(ತದಾದಿಪುರುಷ=ತತ್+ಆದಿಪುರುಷ)** ಆ ಪ್ರಥಮ ತೀರ್ಥಂಕರನ **(ಪ್ರಸ್ತುತ್ಯ)** ಕೊಂಡಾಡಲ್ಪಡುವ **(ಜನ್ಮಾಳಿ)** ಭವಾವಳಿಗಳಿಂದ [ಜನ್ಮಾಂತರ ಕಥೆಗಳಿಂದ] **(ಬಂಧುರಂ)** ಮನೋಹರವಾದದ್ದು; **(ಎಂದಂದೆ)** ಎಂದಾಗಲೆ **(ಮದೀಯ)** ನನ್ನ **(ವಾಗ್ವಿಭವ ವಿನ್ಯಾಸಂ)** ಮಾತಿನ ವೈಭವದ ರಚನಾಕ್ರಮವು [ನಡಿಗೆಯು] **(ಬಲಂಬೆತ್ತುದು=ಬಲಂ+ಪೆತ್ತುದು)** ಬಲವನ್ನು ಪಡೆಯಿತು! **(ಇನ್ನಿರು=ಇನ್+ಇರು)** ಇನ್ನು ಬಿಡು, **(ಬಲ್ಲಿತ್ತಱ ಕೋಡು ಕೂರಿತು)** 'ಬಲವಾದದ್ದರ ಕೊಂಬು ಹರಿತವಾಯಿತು' [ಎಂಬ ಗಾದೆಯ ಮಾತಿನಂತೆ] **(ಅದನ್)** ಅದನ್ನು [ಕಾವ್ಯವನ್ನು] **(ಅಂತಿಂತುಂತು=ಅಂತು+ಇಂತು+ಉಂತು)** ಹಾಗೆ, ಹೀಗೆ, ಹಾಗೂ ಹೀಗೂ **(ಎನಲ್)** ಎನ್ನಲು **(ಬರ್ಕುಮೇ)** ಬರುವುದೇ? [ಆಗುವುದೇ?] ॥ ೧–೨೫

ಕವಿಯು ಈ ಪದ್ಯದಲ್ಲಿ, ತನ್ನ **ಆದಿಪುರಾಣ** ಕಾವ್ಯದ ರಚನೆಗೆ ಅಸ್ತಿವಾರಗಳಾದ ಮೂಲ ಸಾಧನಸಂಪತ್ತುಗಳ ಅಗ್ಗಳಿಕೆಯನ್ನು ಕುರಿತು ಹೇಳಿದ್ದಾನೆ.

ಭಾವಾರ್ಥ: ದೇವೇಂದ್ರ ಮುನೀಂದ್ರರೇ ನನ್ನ ಗುರುಗಳು. ನಾನು ರಚಿಸುತ್ತಿರುವ ಕಾವ್ಯದ ಕಥಾನಾಯಕನಾದರೋ ಇಂದ್ರರಿಂದ ನಮಸ್ಕರಿಸಲ್ಪಟ್ಟ ಸ್ವಾಮಿಯಾದ ಪುರುದೇವನು (ವೃಷಭದೇವನು). ಇದರ ಕಥಾವಸ್ತುವಾದರೋ ಆದಿಪುರುಷನಾದ ವೃಷಭತೀರ್ಥಂಕರನ ಭವಾವಳಿಗಳಿಂದ ಮನೋಹರವಾಗಿದೆ. ಇವುಗಳಿಂದಲೇ ನನ್ನ ಮಾತಿನ ವೈಭವದ ರಚನಾಕ್ರಮವು ಬಲಿಷ್ಠವಾಯಿತು. ಬಲ್ಲಿತ್ತಱ ಕೋಡು ಕೂರಿತು ಎಂಬ ಗಾದೆಯ ಮಾತಿನಂತೆ ನನ್ನ ಕಾವ್ಯದ

ಬಗ್ಗೆ ಹಾಗೆ, ಹೀಗೆ, ಹೇಗೋ ಎಂದು ಹಗುರವಾಗಿ ಮಾತನಾಡಲು ಸಾಧ್ಯವೇ? ಎಂಬ ಆತ್ಮವಿಶ್ವಾಸದಿಂದ ತನ್ನ ಕಾವ್ಯರಚನೆಯ ಸಾಮರ್ಥ್ಯದ ಬಗ್ಗೆ ಕವಿಯು ಹೇಳಿದ್ದಾನೆ. ೧–೨೫

ವಿಶೇಷ ವಿವರಣೆ: ಕವಿಯ ಕಾವ್ಯಪ್ರತಿಭೆಯು ಅತ್ಯಂತ ಶ್ರೇಷ್ಠವೇ ಆಗಿದ್ದರೂ, ಅದು ಶಕ್ತಿದಾಯಕವಾಗುವುದು ಕವಿಯು ಅವನ ಪರಿಸರದಿಂದ ಪಡೆಯುವ ಮೂಲದ್ರವ್ಯಗಳಿಂದಲೇ. ಹಾಗೆಯೇ ಪಂಪನೂ ಈ ಕಾವ್ಯದ ವಿನ್ಯಾಸದಲ್ಲಿರುವ ಅಂದರೆ ಕಾವ್ಯದ ರಚನಾಕ್ರಮದಲ್ಲಿ ಉಪಯೋಗವಾಗಿರುವ, ಅವನ ಪರಿಸರದಿಂದ ಪಡೆದ ಮೂಲದ್ರವ್ಯಗಳ ಗುಣಾತಿಶಯಗಳನ್ನು ಬಹಳ ಸುಂದರವಾಗಿ ನಿರೂಪಿಸುತ್ತಾನೆ. ಮೊದಲನೆಯದಾಗಿ, ಅವನ ವಿದ್ಯಾರ್ಜನೆ. ಪಂಪನ ವಿದ್ಯಾಗುರುಗಳು ಅಂತಿಂಥಹವರಲ್ಲ. ಸಾಕ್ಷಾತ್ ದೇವೇಂದ್ರ ಮುನೀಂದ್ರರೇ ಅವನ ವಿದ್ಯಾಗುರುಗಳು. ಅವನು ವಿದ್ಯಾಭ್ಯಾಸ ನಡೆಸಿರುವುದು ದೇವೇಂದ್ರ ಮುನೀಂದ್ರರ ಪದತಳದಲ್ಲಿ. ಇನ್ನು ಎರಡನೆಯದಾಗಿ, ಅವನ ಕಾವ್ಯದ ಕಥಾನಾಯಕನಾದರೂ ಯಾರು? ದೇವೇಂದ್ರನಿಂದಲೇ ನಮಸ್ಕರಿಸಲ್ಪಡುವ ಸಾಕ್ಷಾತ್ ಪುರುದೇವ ಅಂದರೆ ವೃಷಭದೇವನಾದ ಆದಿ ತೀರ್ಥಂಕರ. ಮೂರನೆಯದಾಗಿ ಕಥೆಯಾದರು ಎಂತಹದು? ಆ ಆದಿಪುರುಷನಾದ ಸಾಕ್ಷಾತ್ ವೃಷಭದೇವನಿಗೆ ಸಂಬಂಧಿಸಿದ, ಎಲ್ಲರಿಂದಲೂ ಸ್ತುತಿಸಲ್ಪಡುವಂತಹ ಅವನ ಭವಾವಳಿಗಳ ಮನೋಹರವಾದ ಕಥೆ. ಇಷ್ಟೆಲ್ಲಾ ಒದಗಿದಮೇಲೆ ಇನ್ನು ಕೇಳುವುದೇನು? ಕವಿಯಲ್ಲಿರುವ ಕಾವ್ಯಪ್ರತಿಭೆಯು ಅಂದರೆ ವಾಗ್ವೈಭವವು, ಕಾವ್ಯವಿನ್ಯಾಸಕ್ಕೆ ಅಗತ್ಯವಾಗಿರುವ ಪುಷ್ಟಿಯನ್ನು ಈ ಮೂಲದ್ರವ್ಯಗಳಿಂದ ಪಡೆಯದೆ ಇದ್ದೀತೇ?

'ಬಲ್ಲಿತ್ತಱ ಕೋಡು ಕೂರಿತು' ಬಲಿಷ್ಠವಾದುದರ ಕೊಂಬು ಚೂಪಾಗಿರುವುದು– ಇದು ಪಂಪನ ಕಾಲದ ಒಂದು ಗಾದೆಮಾತು. ಬಲಿಷ್ಠರಾದ ವ್ಯಕ್ತಿಗಳನ್ನು ಪೂರ್ವ ವಿವೇಚನೆಯಿಲ್ಲದೆ ಟೀಕಿಸಿ ಎದುರು ಹಾಕಿಕೊಳ್ಳಬಾರದು ಎಂಬ ಅರ್ಥವನ್ನು ಇದು ಸೂಚಿಸುತ್ತದೆ.

ಮಹಾ ಸ್ರಗ್ಧರೆ **ವಿದಿತಂಪ್ರಾತೀತಿಕಂ[1] ಕೋಮಳಮತಿಸುಭಗಂ ಸುಂದರಂ ಸೂಕ್ತಿಗರ್ಭಂ**
ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಳಂ[2]ವ್ಯಾ
ಪ್ತದಿಗಂತಂ ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚಿ ನಿಚ್ಚಂ ಮನಂಗೊ
ಳ್ವುದಱಿಂದಂ ನೆಟ್ಟನೀತಂಸುಕವಿಜನಮನೋಮಾನಸೋತ್ತಂಸಹಂಸಂ ॥ ೧–೨೬

ಪದ ವಿಭಾಗ: ವಿದಿತಂ, ಪ್ರಾತೀತಿಕಂ, ಕೋಮಳಂ, ಅತಿ–ಸುಭಗಂ, ಸುಂದರಂ, ಸೂಕ್ತಿಗರ್ಭಂ, ಮೃದುಸಂದರ್ಭಂ, ವಿಚಾರಕ್ಷಮಂ, ಉಚಿತ–ಪದಂ, ಶ್ರವ್ಯಂ, ಅವ್ಯಾಕುಳಂ, ವ್ಯಾಪ್ತ–ದಿಗಂತಂ, ಕಾವ್ಯಂ, ಎಂದು, ಅನ್ವಿತ–ಸುಕವಿಜನಂ, ಮೆಚ್ಚಿ, ನಿಚ್ಚಂ, ಮನಂಗೊಳ್ವುದಱಿಂದಂ–ನೆಟ್ಟನೆ, ಈತಂ, ಸುಕವಿ–ಜನ–ಮನೋ–ಮಾನಸೋತ್ತಂಸ–ಹಂಸಂ ॥ ೧–೨೬

ಅನ್ವಯಾರ್ಥ: **(ವಿದಿತಂ)** ಈ ಕಾವ್ಯವು ಎಲ್ಲರಿಗೂ ಗೊತ್ತಿರುವುದೂ [ಎಲ್ಲರಿಗೂ ಪರಿಚಿತವಾಗಿರುವುದೂ], **(ಪ್ರಾತೀತಿಕಂ)** ಶ್ರದ್ಧೆಯನ್ನುಂಟುಮಾಡುವುದೂ, **(ಕೋಮಳಂ)** ರಮಣೀಯವಾದುದೂ, **(ಅತಿ ಸುಭಗಂ)** ಅತ್ಯಂತ ಶ್ರೇಷ್ಠವಾದುದೂ, **(ಸುಂದರಂ)** ಚಿತ್ತವನ್ನು ಆಕರ್ಷಿಸುವಂತಹದೂ [ಸುಂದರವಾದುದೂ], **(ಸೂಕ್ತಿಗರ್ಭಂ)** ಸುಭಾಷಿತಗಳನ್ನು ಒಳಗೊಂಡುದುದೂ, **(ಮೃದು ಸಂದರ್ಭಂ)** ಕೋಮಲವಾದ ಕಥಾ ಸನ್ನಿವೇಶಗಳಿಂದ ಕೂಡಿದುದೂ, **(ವಿಚಾರಕ್ಷಮಂ)** ತತ್ತ್ವನಿರ್ಣಯಕ್ಕೆ ಅರ್ಹವಾದುದೂ, **(ಉಚಿತ ಪದಂ)** ಔಚಿತ್ಯಪೂರ್ಣವಾದ ಪದಗಳುಳ್ಳದ್ದೂ, **(ಶ್ರವ್ಯಂ)** ಶ್ರವಣಯೋಗ್ಯವಾದದ್ದೂ [ಆಲಿಸಲು ಹಿತವಾದದ್ದೂ], **(ಅವ್ಯಾಕುಳಂ)** ಕಳವಳವಿಲ್ಲದುದೂ [ಶಾಂತಿಯಿಂದ ಕೂಡಿದುದೂ], **(ವ್ಯಾಪ್ತದಿಗಂತಂ)** [ಕ್ಷಿತಿಜದವರೆಗೆ] ದಿಗಂತದವರೆಗೆ ಹರಡಿಕೊಂಡಿರುವುದೂ, [ಆದ] **(ಕಾವ್ಯಮೆಂದು=ಕಾವ್ಯಂ+ಎಂದು)** ಕಾವ್ಯವೆಂದು **(ಅನ್ವಿತ ಸುಕವಿಜನಂ)** ವಿದ್ವಾಂಸರಾದ ಒಳ್ಳೆಯ ಕವಿಸಮೂಹವು **(ಮೆಚ್ಚಿ)** ಇಷ್ಟಪಡಲು **(ನಿಚ್ಚಂ)** [ಆ ಕಾವ್ಯವು] ಸದಾ **(ಮನಂಗೊಳ್ವುದಱಿಂದಂ)** [ಅವರ] ಮನಸ್ಸನ್ನು ಸೆಳೆಯುವುದರಿಂದ, **(ನೆಟ್ಟನೆ)** ನಿಸ್ಸಂದೇಹವಾಗಿ **(ಈತಂ)** ಈತನು [ಇದನ್ನು ರಚಿಸಿದ ಕವಿಯು] **(ಸುಕವಿಜನ)** ಒಳ್ಳೆಯ ಕವಿಗಳ ವೃಂದದಲ್ಲಿ [ಸಮೂಹದಲ್ಲಿ] **(ಮನೋಮಾನಸ)** ಮನವೆಂಬಮಾನಸ ಸರೋವರದಲ್ಲಿ **(ಉತ್ತಂಸ ಹಂಸಂ)** ಶ್ರೇಷ್ಠಹಂಸನಾಗಿರುವವನು ॥ ೧–೨೬

---

[1] 'ಪ್ರಾತೀತಿಕಂ'<'ಪ್ರತೀತಿಃ'–'ಪ್ರತೀತಿಃ, ಪ್ರತ್ಯಯಃ, ಶ್ರದ್ಧಾ–ಈ ೩ ನಂಬುಗೆ' (ಅಭಿಧಾನ ರತ್ನಮಾಲ ೪–೯೫, ಪು. ೧೨೮)

[2] ಮೂಲಪಾಠ–'ವ್ಯಾಕುಳಂ', ಕೆಜಿ ಯವರ ಪಾಠ–'ವ್ಯಾಕುಲಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಮೇಲಿನ ೧-೨೫ ಮತ್ತು ೧-೨೬ ರ ಎರಡು ವೃತ್ತಪದ್ಯಗಳಲ್ಲಿ, ಕವಿಯು ತನ್ನ **ಆದಿಪುರಾಣಂ** ಕಾವ್ಯದ ಶ್ರೇಷ್ಠತೆಯನ್ನು ಹಾಗೂ ಯಾವುದೇ ಒಂದು ಶ್ರೇಷ್ಠಕಾವ್ಯದ ಸಾಮಾನ್ಯ ಗುಣಲಕ್ಷಣಗಳನ್ನು ಹೇಳಿರುವನು.

ಭಾವಾರ್ಥ: ಈ ಆದಿಪುರಾಣ ಕಾವ್ಯವು ಎಲ್ಲರಿಗೂ ಪರಿಚಿತವಾದುದೂ, ಭವ್ಯಜನರಲ್ಲಿ ಶ್ರದ್ಧೆಯನ್ನುಂಟುಮಾಡುವುದೂ, ಕಾವ್ಯರಸಿಕರಿಗೆ ರಮಣೀಯವಾದುದೂ, ಕಾವ್ಯಗಳಲ್ಲಿ ಅತ್ಯಂತ ಶ್ರೇಷ್ಠವಾದುದೂ, ಸುಂದರವಾದುದೂ, ಸುಭಾಷಿತಗಳಿಂದ ತುಂಬಿದುದೂ, ಅಂತರಂಗವನ್ನು ಮಿಡಿಯುವಂತಹ ಕೋಮಲವಾದ ಕಥಾ ಸನ್ನಿವೇಶಗಳಿಂದ ಕೂಡಿದುದೂ, ತತ್ತ್ವಚರ್ಚೆಗೆ ಅರ್ಹವಾದುದೂ, ಔಚಿತ್ಯಪೂರ್ಣವಾದ ಪದಗಳುಳ್ಳದ್ದೂ, ಕಥಾಶ್ರವಣಕ್ಕೆ ಯೋಗ್ಯವಾದದ್ದೂ, ಕಥಾವಸ್ತುವಿನಲ್ಲಿ ಕಳವಳವಿಲ್ಲದುದೂ [ಶಾಂತಿಯಿಂದ ಕೂಡಿದುದೂ], ಕಾವ್ಯದ ಕೀರ್ತಿಯು ದಿಗಂತದವರೆಗೆ ಹರಡಿಕೊಂಡಿರುವುದೂ, ಆದ ಕಾವ್ಯವೆಂದು ವಿದ್ವಾಂಸರಾದ ಒಳ್ಳೆಯ ಕವಿಸಮೂಹವು ಇಷ್ಟಪಡಲು, ಕಾವ್ಯವು ಸದಾ ಅವರ ಮನಸ್ಸನ್ನು ಸೆಳೆಯುವುದರಿಂದ ನಿಸ್ಸಂದೇಹವಾಗಿ ಇದನ್ನು ರಚಿಸಿದ ಕವಿಯು ಒಳ್ಳೆಯ ಕವಿಜನರ ಮನಸ್ಸೆಂಬ ಮಾನಸಸರೋವರದಲ್ಲಿ ಶ್ರೇಷ್ಠ ಹಂಸನಂತಿರುವವನು ಎಂದು ಹೇಳಿಕೊಂಡಿರುವನು. ೧-೨೬

ಹಾಗೆಯೇ, ಒಂದು ಶ್ರೇಷ್ಠ ಕಾವ್ಯದ ಗುಣಗಳು ಯಾವುವೆಂದರೆ, (೧) ವಿದಿತಂ, (೨) ಪ್ರಾತೀತಿಕಂ, (೩) ಕೋಮಳಂ, (೪) ಅತಿ ಸುಭಗಂ, (೫) ಸುಂದರಂ, (೬) ಸೂಕ್ತಿಗರ್ಭಂ, (೭) ವಿಚಾರಕ್ಷಮಂ, (೮) ಉಚಿತಪದಂ, (೯) ಶ್ರವ್ಯಂ, (೧೦) ಅವ್ಯಾಕುಳಂ, (೧೧) ವ್ಯಾಪ್ತದಿಗಂತಂ, ಇವುಗಳಾಗಿದ್ದು, ಇವು ಕಾವ್ಯಧರ್ಮವೂ ಆಗಿವೆ. ೧-೨೬

ಮತ್ತೇಭ ವಿಕ್ರೀಡಿತ

ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ
ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ
ಭ್ಯುದಯಪ್ರಾಪ್ತಿನಿಮಿತ್ತಮುತ್ತಮಯಶಂ ಸಂಸಾರದೊಳ್ಸಾರಮ
ಪ್ಪುದಱಿಂ[1] ಧರ್ಮಮದಂ ನಿಮಿರ್ಚುವುದಱಿಂ ಸಂಸಾರಸಾರೋದಯಂ ॥ ೧-೨೭

ಪದ ವಿಭಾಗ: ಇದು-ನಿಚ್ಚಂ-ಪೊಸತು; ಅರ್ಣವಂಬೊಲ್, ಅತಿ-ಗಂಭೀರಂ,
ಕವಿತ್ವಂ, ಜಗಕ್ಕೆ; ಅದಱಿಂದಂ, ಕವಿತಾಗುಣಾರ್ಣವನ್, ಇಳಾ-ಲೋಕೈಕ-ವಿಖ್ಯಾತನ್;
ಅಭ್ಯುದಯಪ್ರಾಪ್ತಿ-ನಿಮಿತ್ತಂ, ಉತ್ತಮ-ಯಶಂ, ಸಂಸಾರದೊಳ್, ಸಾರಂ,
ಅಪ್ಪುದಱಿಂ, ಧರ್ಮಂ, ಅದಂ, ನಿಮಿರ್ಚುವುದಱಿಂ, ಸಂಸಾರಸಾರೋದಯಂ ॥ ೧-೨೭

ಅನ್ವಯಾರ್ಥ: **(ಇದು)** ಈ [ಆದಿಪುರಾಣ] ಕಾವ್ಯವು **(ನಿಚ್ಚಂ ಪೊಸತು)** ನಿತ್ಯ ನೂತನವಾದದ್ದು. **(ಕವಿತ್ವಂ)** ಈ ಕಾವ್ಯವು **(ಜಗಕ್ಕೆ)** ಜಗತ್ತಿಗೆ **(ಅರ್ಣವಂಬೊಲ್=ಅರ್ಣವಂ+ಪೊಲ್)** ಸಮುದ್ರದಂತೆ **(ಅತಿ ಗಂಭೀರಂ)** ಅತ್ಯಂತ ಭವ್ಯವಾದುದು. **(ಅದಱಿಂದಂ)** ಇಂತಹ ಕಾವ್ಯವನ್ನು ರಚಿಸಿದುದರಿಂದಾಗಿ ಪಂಪನು, **(ಕವಿತಾಗುಣಾರ್ಣವನ್)** ಕವಿತಾಗುಣಾರ್ಣವನೆಂದು [ಕಾವ್ಯ ರಚಿಸುವಿಕೆಯ ಗುಣಗಳಿಗೆ ಸಮುದ್ರದಂತಿರುವವನೆಂದು] **(ಇಳಾ ಲೋಕೈಕ ವಿಖ್ಯಾತನ್)** ಈ ಭೂಲೋಕದಲ್ಲೆಲ್ಲಾ ಆತನೊಬ್ಬನೇ ಪ್ರಸಿದ್ಧನಾಗಿರುವನು. **(ಅಭ್ಯುದಯ)** ಉತ್ತರೋತ್ತರ ಅಭಿವೃದ್ಧಿಯ [ಆತ್ಮಕಲ್ಯಾಣದ] **(ಪ್ರಾಪ್ತಿ)** ಪ್ರಾಪ್ತಿಗೆ **(ನಿಮಿತ್ತಂ)** ಹೇತುವಾದ **(ಉತ್ತಮ ಯಶಂ)** ಉತ್ತಮ ಯಶಸ್ಸು **(ಸಂಸಾರದೊಳ್ಸಾರಮಪ್ಪುದಱಿಂ=ಸಂಸಾರದೊಳ್+ಸಾರಂ+ಅಪ್ಪುದಱಿಂ)** ಸಂಸಾರದಲ್ಲಿ ಸಾರವಾಗಿರುವುದರಿಂದ [ತಿರುಳಾಗಿರುವುದರಿಂದ], **(ಧರ್ಮಮದಂ=ಧರ್ಮಂ+ಅದಂ[>ಅದನ್])** ಧರ್ಮವು ಆ ಸಾರವನ್ನು **(ನಿಮಿರ್ಚುವುದಱಿಂ)** ಉಂಟುಮಾಡುವುದರಿಂದ **(ಸಂಸಾರಸಾರೋದಯಂ)** [ಈ ಕಾವ್ಯವನ್ನು ರಚಿಸಿದ ಪಂಪನು] ಸಂಸಾರಸಾರೋದಯನು [ಎಂದು ಬಿರುದಾಂಕಿತನಾದನು] ॥ ೧-೨೭

ಭಾವಾರ್ಥ: ಪಂಪನು ರಚಿಸಿರುವ ಈ ಆದಿಪುರಾಣ ಕಾವ್ಯವು ನಿತ್ಯ ನೂತನವಾದದ್ದು. ಈತನ ಕಾವ್ಯವು ಸಮುದ್ರದ ಹಾಗೆ ಅತ್ಯಂತ ಗಂಭೀರ. ಆದುದರಿಂದ ಭೂಲೋಕದಲ್ಲೆಲ್ಲಾ ಈತನೊಬ್ಬನೇ ಕವಿತಾಗುಣಾರ್ಣವನೆಂದು ವಿಖ್ಯಾತನಾಗಿದ್ದಾನೆ. ಜನರ ಅಭ್ಯುದಯ ಪ್ರಾಪ್ತಿಗೆ ಕಾರಣವಾದ ಉತ್ತಮ ಯಶಸ್ಸು ಸಂಸಾರದ ಸತ್ವವಾಗಿರುವುದರಿಂದ, ಧರ್ಮವು ಆ ಸತ್ವವನ್ನು ಉಂಟುಮಾಡುವುದರಿಂದ, ಪಂಪನು ಸಂಸಾರಸಾರೋದಯನೆಂದು ಅಂದರೆ ಈ ಕಾವ್ಯದ

[1] ಮೂಲಪಾಠ-'ಪ್ಪುದಱಿಂ', ಕೆಜಿ ಯವರ ಪಾಠ-'ಪ್ಪುದು ತಾಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಮೂಲಕ 'ಸಂಸಾರದಲ್ಲಿ ಸತ್ವವನ್ನು ಮೂಡಿಸುವವನು' ಎಂದು ಬಿರುದಾಂಕಿತನಾದನು. ೧-೨೭

ವಿಶೇಷ ವಿವರಣೆ: ಈ ವೃತ್ತಪದ್ಯದಲ್ಲಿ ತನಗೆ ಸಂದ ಬಿರುದುಗಳನ್ನು ಹಾಗೂ ಅವು ತನಗುಂಟಾದ ಬಗೆಯನ್ನು ತಿಳಿಸಿರುವನು. ಮುಂದಿನ ಆರು ಕಂದಪದ್ಯಗಳಲ್ಲಿ ತನ್ನ ವ್ಯಕ್ತಿತ್ವವನ್ನೂ, ದೇಹಾಕೃತಿಯನ್ನೂ ವರ್ಣಿಸಿಕೊಂಡಿರುವನು.

ಕಂದ **ಅತಿಸುಭಗಗೆ ಸಂದ ಸರ**
ಸ್ವತಿಗೀತನ ಲಲಿತವಾಗ್ವಿಳಾಸಮೆ ದಲಲಂ
ಕೃತಿಯವೊಲೆಸೆದಪುದು ಜಗ
ತ್ಪ್ರತೀತನೀತನೆ ಸರಸ್ವತೀಮಣಿಹಾರಂ ॥ **೧-೨೮**

ಪದ ವಿಭಾಗ: ಅತಿ-ಸುಭಗಗೆ, ಸಂದ-ಸರಸ್ವತಿಗೆ,
ಈತನ, ಲಲಿತ-ವಾಗ್ವಿಳಾಸಮೆ, ದಲ್,
ಅಲಂಕೃತಿಯವೊಲ್, ಎಸೆದಪುದು,
ಜಗತ್ಪ್ರತೀತನ್, ಈತನೆ, ಸರಸ್ವತೀ-ಮಣಿಹಾರಂ ॥ ೧-೨೮

ಅನ್ವಯಾರ್ಥ: (ಅತಿ ಸುಭಗಗೆ) ಅತ್ಯಂತ ಚೆಲುವೆಗೆ, **(ಸಂದ ಸರಸ್ವತಿಗೆ)** ಶೋಭಿಸುವ ಸರಸ್ವತಿಗೆ **(ಈತನ)** ಇವನ [ಪಂಪನ] **(ಲಲಿತ ವಾಗ್ವಿಳಾಸಮೆ[=ವಾಕ್+ವಿಳಾಸಮೆ])** ಸೊಗಸಾದ ಮಾತಿನ ಸೊಬಗೇ **(ದಲ್)** ಸಹಜವಾದ **(ಅಲಂಕೃತಿಯವೊಲ್)** ಆಭರಣದಂತೆ **(ಎಸೆದಪುದು)** ಕಂಗೊಳಿಸುತ್ತಿದೆ. **(ಜಗತ್ಪ್ರತೀತನ್=ಜಗತ್+ಪ್ರತೀತನ್)** ಲೋಕಪ್ರಸಿದ್ಧನಾದ **(ಈತನೆ)** ಇವನೇ [ಪಂಪನೇ] **(ಸರಸ್ವತೀ ಮಣಿಹಾರಂ)** ಸರಸ್ವತಿಗೆ ರತ್ನದ ಹಾರವಾಗಿರುವನು ॥ ೧-೨೮

ಭಾವಾರ್ಥ: ಅತ್ಯಂತ ಚೆಲುವಿನಿಂದ ಶೋಭಿಸುವ ಸರಸ್ವತಿಗೆ ಪಂಪನ ಸೊಗಸಾದ ಮಾತಿನ ಸೊಬಗೇ ಸಹಜವಾದ ಆಭರಣದಂತೆ ಕಂಗೊಳಿಸುತ್ತಿದೆ. ಲೋಕಪ್ರಸಿದ್ಧನಾದ ಪಂಪನೇ ಸರಸ್ವತಿಯ ಕೊರಳ ರತ್ನದಹಾರದಂತಿವನು. ೧-೨೮

ವಿಶೇಷ ವಿವರಣೆ: ಸರಸ್ವತಿಗೆ: ಕವಿಯು ಈ ಪದ್ಯದಲ್ಲಿ ಕೊಂಡಾಡಿರುವ '**ಸರಸ್ವತಿಗೆ**' ಎಂಬುದರ ಅರ್ಥ, (೧) ಇದೇ ಆಶ್ವಾಸದ ಒಂಬತ್ತನೆಯ ಪದ್ಯದಲ್ಲಿ ಹೇಳಿರುವ '**ಜಿನೇಂದ್ರವಾಣಿಯೋ ಸರಸ್ವತಿ**'ಯಾಗಿರಬಹುದು, ಇಲ್ಲವೆ (೨) '**ಕಾವ್ಯಸರಸ್ವತಿ**' ಎಂದೂ ಅರ್ಥೈಸಬಹುದಾಗಿದೆ. ಪಂಪನ ಈ '**ಆದಿಪುರಾಣ**'ವನ್ನು '**ಜಿನೇಂದ್ರವಾಣಿಯೋ ಸರಸ್ವತಿ**' ಎಂದು ಭಾವಿಸುವುದಾದರೆ, ಜಿನೇಂದ್ರವಾಣಿಯ ಮೊದಲನೆಯ ಅನುಯೋಗವಾದ '**ಪೂರ್ವಾನುಯೋಗ**'ಕ್ಕೆ, ಈ ಕಾವ್ಯವೂ ಒಂದು ಆಭರಣದಂತೆ ಸೇರ್ಪಡೆಯಾಗುತ್ತದೆ. ಈ ಕಾವ್ಯವನ್ನು '**ಕಾವ್ಯಸರಸ್ವತಿ**' ಎಂದು ಭಾವಿಸುವುದಾದರೆ, ಈ ಕಾವ್ಯದಲ್ಲಿ ಕವಿಯು ಸಹಜವಾಗಿ ಮೂಡಿಸಿರುವ ಅರ್ಥಾಲಂಕಾರ, ಶಬ್ದಾಲಂಕಾರ, ಇತ್ಯಾದಿಗಳು '**ಕಾವ್ಯಸರಸ್ವತಿ**'ಯ ಆಭರಣಗಳಂತೆ ಶೋಭಿಸುತ್ತಿದ್ದು, ಈ ಕಾವ್ಯರಚನೆ ಮಾಡಿದ ಪಂಪನೇ '**ಸರಸ್ವತೀಮಣಿಹಾರಂ**' ಅಂದರೆ, ಆ 'ಕಾವ್ಯಸರಸ್ವತಿಯು ಕೊರಳಲ್ಲಿ ಧರಿಸಿರುವ ರತ್ನದ ಹಾರದಂತೆ' ಮೆರೆಯುತ್ತಿದ್ದಾನೆ ಎನ್ನಬಹುದು. '**ಸರಸ್ವತೀಮಣಿಹಾರಂ**' ಎನ್ನುವುದೂ ಕವಿಯ ಒಂದು ಬಿರುದು.

ಕದಳೀಗರ್ಭಶ್ಯಾಮಂ
ಮೃದುಕುಟಿಲಶಿರೋರುಹಂ ಸರೋರುಹವದನಂ
ಮೃದುಮಧ್ಯಮತನು ಹಿತಮಿತ
ಮೃದುವಚನಂ ಲಲಿತಮಧುರಸುಂದರವೇಷಂ ॥ **೧-೨೯**

ಪದ ವಿಭಾಗ: ಕದಳೀಗರ್ಭ-ಶ್ಯಾಮಂ;
ಮೃದು-ಕುಟಿಲ-ಶಿರೋರುಹಂ; ಸರೋರುಹ-ವದನಂ;
ಮೃದು-ಮಧ್ಯಮ-ತನು; ಹಿತ-ಮಿತ-
ಮೃದುವಚನಂ; ಲಲಿತ-ಮಧುರ-ಸುಂದರ-ವೇಷಂ ॥ ೧-೨೯

ಅನ್ವಯಾರ್ಥ: (ಕದಳೀಗರ್ಭ ಶ್ಯಾಮಂ) [ಪಂಪನು] ಬಾಳೆಯ ದಿಂಡಿನಂತೆ [ಬಾಳೆಕಂಬದ ಒಳಗಿನ ಭಾಗದಂತೆ] ನಸುಗಪ್ಪು ಬಣ್ಣವುಳ್ಳವನು. **(ಮೃದು ಕುಟಿಲ ಶಿರೋರುಹಂ)** ಮೃದುವಾದ ಗುಂಗುರಾದ ತಲೆಕೂದಲುಗಳುಳ್ಳವನು. **(ಸರೋರುಹ**

ವದನಂ) ತಾವರೆಯಂತಹ ದುಂಡಾದ ಮುಖವುಳ್ಳವನು. **(ಮೃದು ಮಧ್ಯಮ ತನು)** ಸುಕುಮಾರವೂ, ಮಧ್ಯಮ ಗಾತ್ರದ [ಸ್ಥೂಲವಲ್ಲದ, ಸಣಕಲಲ್ಲದ, ಅತಿ ಕುಳ್ಳಲ್ಲದ, ಅತಿ ಎತ್ತರವಲ್ಲದ ಮಟ್ಟಸನಾದ] ದೇಹವುಳ್ಳವನು. **(ಹಿತಮಿತ ಮೃದುವಚನಂ)** ಒಳ್ಳೆಯದಾಗಿಯೂ, ಮಿತವಾಗಿಯೂ, ಮೃದುವಾಗಿಯೂ ಮಾತುಗಳನ್ನಾಡುವವನು. **(ಲಲಿತ ಮಧುರ ಸುಂದರ ವೇಷಂ)** ಮನೋಹರವೂ ಆಪ್ಯಾಯಮಾನವೂ ಹಾಗೂ ಸುಂದರವಾಗಿಯೂ ಇರುವ ಉಡುಗೆತೊಡುಗೆಗಳನ್ನು ಧರಿಸುವವನು ॥ ೧-೨೯

ಕವಿಯು ಈ ಪದ್ಯದಲ್ಲಿ ತನ್ನ ರೂಪಾತಿಶಯಗಳನ್ನು ಹೇಳಿಕೊಂಡಿದ್ದಾನೆ.

ಭಾವಾರ್ಥ: ಪಂಪನು ಬಾಳೆಯ ದಿಂಡಿನಂತೆ ನಸುಗಪ್ಪು ಬಣ್ಣವುಳ್ಳವನು. ಮೃದುವಾದ ಗುಂಗುರು ಕೂದಲುಗಳನ್ನುಳ್ಳ ವನು. ತಾವರೆಯಂತಹ ದುಂಡಾದ ಮುಖವುಳ್ಳವನು. ಸುಕುಮಾರವೂ, ಮಧ್ಯಮ ಗಾತ್ರದ ಮಟ್ಟಸನಾದ ದೇಹವುಳ್ಳವನು. ಒಳ್ಳೆಯದಾಗಿಯೂ, ಮಿತವಾಗಿಯೂ, ಮೃದುವಾಗಿಯೂ ಮಾತುಗಳನ್ನಾಡುವವನು. ಮನೋಹರವೂ ಆಪ್ಯಾಯಮಾ ನವೂ ಹಾಗೂ ಸುಂದರವಾಗಿಯೂ ಇರುವ ಉಡುಗೆತೊಡುಗೆಗಳನ್ನು ಧರಿಸುವವನು ಎಂದು ತನ್ನ ರೂಪಾತಿಶಯಗಳ ಬಗ್ಗೆ ಬಣ್ಣಿಸಿಕೊಂಡಿದ್ದಾನೆ. ೧-೨೯

ವಿಶೇಷ ವಿವರಣೆ: ಶ್ಯಾಮಂ: 'ಶ್ಯಾಮ' ಎಂದರೆ 'ಕಪ್ಪುಬಣ್ಣ, ಕಡುನೀಲಿವರ್ಣ' ಎನ್ನುವ ಅರ್ಥವಿದೆ. ಭಟ್ಟ ಹಲಾಯುಧನ **'ಅಭಿದಾನರತ್ನಮಾಲಾ'** ಇದರ ಮೇಲಿನ ಎರಡನೆಯ ನಾಗವರ್ಮನ ಕರ್ಣಾಟಕ ಟೀಕೆ, 'ಸಾಮಾನ್ಯ ಕಾಂಡ'ದ ೧೨೧-೪೯ ರಲ್ಲಿ 'ಶ್ಯಾಮಂ' ಪದದ ಅರ್ಥವು 'ಶ್ಯಾಮಂ, ಶ್ಯಾಮಳಂ, ರಾಮಂ, ಪಾಲಾಶಂ, ಹರಿತಂ, ಹರಿತ್-ಈ ೬ ಪ(ಹ)ಸುರ್' ಎಂದಿರುತ್ತದೆ. ಎರಡನೆಯ ನಾಗವರ್ಮನ **'ಅಭಿದಾನ ವಸ್ತುಕೋಶಂ'**ನ ೧೦೮-೬೩ ರಲ್ಲಿ 'ಶ್ಯಾಮಳಂ ಅಸಿತಂ ಕೃಷ್ಣಂ ಶ್ಯಾಮಂ ಕಾಳಂ ಶಿತಿಯೆ ನೀಳಂ' ಎಂದಿರುತ್ತದೆ. ಆದರೆ, ಬಾಳೆಯದಿಂಡು ಸ್ವಲ್ಪ ಬೂದು ಮಿಶ್ರಿತ ಬಿಳಿಬಣ್ಣದ್ದಾಗಿರುತ್ತದೆ. ವಿದ್ವಾಂಸರು ಇದನ್ನು 'ನಸುಗಪ್ಪು' ಎಂದೂ, 'ಬಾಳೆದಿಂಡಿನಂತೆ ಸುಂದರವಾದ ಗೌರವರ್ಣದವನು' ಎಂದೂ ಅರ್ಥೈಸಿರುತ್ತಾರೆ.

ವತ್ಸಕುಲತಿಲಕನಭಿಜನ
ವತ್ಸಳನಭಿಮಾನಮೂರ್ತಿ ಸುಕವಿ[1]ಯಶೋನಿ
ರ್ಮತ್ಸರನಮೃತಮಯೋಕ್ತಿ ಶ
ರತ್ಸಮಯಸುಧಾಂಶುವಿಶದಕೀರ್ತಿವಿತಾನಂ ॥ ೧-೩೦

ಪದ ವಿಭಾಗ: ವತ್ಸಕುಲತಿಲಕನ್; ಅಭಿಜನ
ವತ್ಸಳನ್; ಅಭಿಮಾನಮೂರ್ತಿ; ಸುಕವಿ-ಯಶೋ-
ನಿರ್ಮತ್ಸರನ್; ಅಮೃತಮಯ-ಉಕ್ತಿ;
ಶರತ್ಸಮಯ-ಸುಧಾಂಶು-ವಿಶದ-ಕೀರ್ತಿ-ವಿತಾನಂ ॥ ೧-೩೦

ಅನ್ವಯಾರ್ಥ: (ವತ್ಸಕುಲ ತಿಲಕನ್) [ಪಂಪನು] ವತ್ಸಕುಲದವರಲ್ಲಿ ಶ್ರೇಷ್ಠನಾದವನು. **(ಅಭಿಜನವತ್ಸಳನ್)** ಸ್ವದೇಶಾಭಿ ಮಾನಿಯಾದವನು [ಸತ್ಕುಲಜರಲ್ಲಿ, ಸಜ್ಜನರಲ್ಲಿ ಪ್ರೀತಿಯುಳ್ಳವನು]. **(ಅಭಿಮಾನಮೂರ್ತಿ)** ಆತ್ಮಗೌರವವೇ ರೂಪವನ್ನು ತಾಳಿದಂತಿರುವವನು. **(ಸುಕವಿ ಯಶೋನಿರ್ಮತ್ಸರನ್)** ಉತ್ತಮ ಕವಿಗಳ ಕೀರ್ತಿಯ ಬಗ್ಗೆ ಹೊಟ್ಟೆಕಿಚ್ಚಿಲ್ಲದವನು. **(ಅಮೃತಮಯ ಉಕ್ತಿ)** ಅಮೃತ ತುಂಬಿದಂತಹ ಮಾತುಗಳನ್ನಾಡುವವನು. **(ಶರತ್ಸಮಯ[=ಶರತ್+ಸಮಯ] ಸುಧಾಂಶು [=ಅಮೃತವನ್ನು ಕಿರಣಗಳಲ್ಲಿ ಹೊಂದಿರುವವನು])** ಶರತ್ಕಾಲದ ಚಂದ್ರನಂತೆ **(ವಿಶದ ಕೀರ್ತಿ ವಿತಾನಂ)** ಶುಭ್ರವಾದ ಹರಡಿದ ಕೀರ್ತಿವುಳ್ಳವನು ॥ ೧-೩೦

ಭಾವಾರ್ಥ: ಪಂಪನು ವತ್ಸಕುಲದವರಲ್ಲಿ ಶ್ರೇಷ್ಠನಾದವನು. ತಾಯ್ನಾಡಿನಲ್ಲಿ ಪ್ರೇಮವುಳ್ಳವನು [ಸತ್ಕುಲಜರಲ್ಲಿ, ಸಜ್ಜನರಲ್ಲಿ ಪ್ರೀತಿಯುಳ್ಳವನು]. ಆತ್ಮಗೌರವವೇ ರೂಪವನ್ನು ತಾಳಿದಂತಿರುವವನು. ಉತ್ತಮ ಕವಿಗಳ ಕೀರ್ತಿಯ ಬಗ್ಗೆ ಹೊಟ್ಟೆಕಿಚ್ಚಿಲ್ಲದವನು [ಮಾತ್ಸರ್ಯವಿಲ್ಲದಿರುವವನು]. ಅಮೃತ ತುಂಬಿದಂತಹ ಮಾತುಗಳನ್ನಾಡುವವನು. ಶರತ್ಕಾಲದ

---

[1] ಮೂಲಪಾಠ-'ಸುಕವಿ', ಕೆಜಿ ಯವರ ಪಾಠ-'ಕುಕವಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[ಅಶ್ವಯುಜ–ಕಾರ್ತೀಕ ಮಾಸಗಳನ್ನು ಒಳಗೊಂಡ ಋತು] ಚಂದ್ರನಂತೆ ಶುಭ್ರವಾಗಿ ಪಸರಿಸಿರುವ ಖ್ಯಾತಿವಂತನಾಗಿರುವವನು ಈ ಪಂಪ. ೧–೩೦

ವನಿತಾಕಟಾಕ್ಷಕುವಲಯ
ವನಚಂದ್ರಂ ಯುವತಿಜಘನಕಾಂಚೀರತ್ನಂ
ಸ್ತನಭರವಿನಮ್ರಗಣಿಕಾ
ಸ್ತನತಟಹಾರಂ ಸರಸ್ವತೀಮಣಿಹಾರಂ ॥ **೧–೩೧**

ಪದ ವಿಭಾಗ: ವನಿತಾ–ಕಟಾಕ್ಷ–ಕುವಲಯವನ –
ಚಂದ್ರಂ; ಯುವತಿ–ಜಘನ–ಕಾಂಚೀ–ರತ್ನಂ;
ಸ್ತನಭರ–ವಿನಮ್ರ–ಗಣಿಕಾ–
ಸ್ತನ–ತಟ–ಹಾರಂ; ಸರಸ್ವತೀ–ಮಣಿಹಾರಂ ॥ ೧–೩೧

ಅನ್ವಯಾರ್ಥ: (ವನಿತಾ ಕಟಾಕ್ಷ ಕುವಲಯುವನ ಚಂದ್ರಂ) ಸ್ತ್ರೀಯರ ಕುಡಿನೋಟವೆಂಬ ಕನ್ನೈದಿಲೆಯ ಸಮೂಹಕ್ಕೆ ಚಂದ್ರನಂತಿರುವನು. **(ಯುವತಿ ಜಘನ ಕಾಂಚೀರತ್ನಂ)** ತರುಣಿಯರ ಸೊಂಟದ ಡಾಬಿನಲ್ಲಿರುವ ರತ್ನದಂತಿರುವನು. **(ಸ್ತನಭರ ವಿನಮ್ರ ಗಣಿಕಾ)** ಮೊಲೆಗಳ ಭಾರದಿಂದ ಬಾಗಿದ ಗಣಿಕಾಸ್ತ್ರೀಯರ **(ಸ್ತನ ತಟ ಹಾರಂ)** ಸ್ತನಗಳ ಪ್ರದೇಶದಲ್ಲಿರುವ ಹಾರದಂತಿರುವನು. [ಎನ್ನಿಸಿರುವ ಪಂಪನು] **(ಸರಸ್ವತೀ ಮಣಿಹಾರಂ)** ಸರಸ್ವತಿಯ ಕೊರಳ ರತ್ನದ ಹಾರವಾಗಿರುವನು ॥ ೧–೩೧

ಭಾವಾರ್ಥ: ಸ್ತ್ರೀಯರ ಕುಡಿನೋಟವೆಂಬ ಕನ್ನೈದಿಲೆಯಸಮೂಹಕ್ಕೆ ಚಂದ್ರನಂತಿರುವವನೂ, ತರುಣಿಯರ ಸೊಂಟದ ಡಾಬಿನಲ್ಲಿರುವ [ಒಡ್ಯಾಣದ] ರತ್ನದಂತಿರುವವನೂ, ಮೊಲೆಗಳ ಭಾರದಿಂದ ಬಾಗಿದ ಗಣಿಕಾಸ್ತ್ರೀಯರ ಸ್ತನಗಳ ಪ್ರದೇಶದಲ್ಲಿರುವ ಹಾರದಂತಿರುವವನೂ ಎನ್ನಿಸಿರುವ ಪಂಪನು ಸರಸ್ವತಿಯ ರತ್ನಹಾರವಾಗಿರುವನು. ೧–೩೧

ಕೇರಳವಿಟೀಕಟೀಸೂ
ತ್ರಾರುಣಮಣಿ ಮಲಯಯುವತಿದರ್ಪಣನಾಂಧ್ರೀ
ನೀರಂಧ್ರಬಂಧುರಸ್ತನ
ಹಾರನುದಾರಂ ಸರಸ್ವತೀಮಣಿಹಾರಂ ॥ **೧–೩೨**

ಪದ ವಿಭಾಗ: ಕೇರಳ–ವಿಟೀ–ಕಟೀಸೂತ್ರಾರುಣಮಣಿ;
ಮಲಯ–ಯುವತಿ–ದರ್ಪಣನ್; ಆಂಧ್ರೀ–
ನೀರಂಧ್ರ–ಬಂಧುರ–ಸ್ತನ–
ಹಾರನ್; ಉದಾರಂ, ಸರಸ್ವತೀ–ಮಣಿಹಾರಂ ॥ ೧–೩೨

ಅನ್ವಯಾರ್ಥ: (ಕೇರಳ ವಿಟೀ) ಕೇರಳದ ಗಣಿಕೆಯರ **(ಕಟೀಸೂತ್ರಾರುಣಮಣಿ=ಕಟೀಸೂತ್ರ+ಅರುಣಮಣಿ)** ಒಡ್ಯಾಣದಲ್ಲಿರುವ ಕೆಂಪುರತ್ನದಂತಿರುವನು [ಮಾಣಿಕ್ಯದಂತಿರುವನು]. **(ಮಲಯ ಯುವತಿ)** ಮಲಯ ದೇಶದ ಯುವತಿಯರ **(ದರ್ಪಣನ್)** [ಕೈ]ಕನ್ನಡಿಯಂತಿರುವನು. **(ಆಂಧ್ರೀ)** ಆಂಧ್ರದೇಶದ ಸ್ತ್ರೀಯರ **(ನೀರಂಧ್ರ ಬಂಧುರ ಸ್ತನ)** ಒತ್ತಾದ [ಬಿಗಿಯಾದ] ಸುಂದರ ಮೊಲೆಗಳ [ಮೇಲಿನ] **(ಹಾರನ್)** ಹಾರದಂತಿರುವನು **(ಉದಾರಂ)** ಎಂದು ಖ್ಯಾತಿಪಡೆದ [ಪಂಪನು] **(ಸರಸ್ವತೀ ಮಣಿಹಾರಂ)** ಸರಸ್ವತಿಯ ಕೊರಳ ರತ್ನದ ಹಾರವಾಗಿರುವನು ॥ ೧–೩೨

ಭಾವಾರ್ಥ: ಕೇರಳದ ಗಣಿಕೆಯರ ಒಡ್ಯಾಣದಲ್ಲಿರುವ ಮಾಣಿಕ್ಯದಂತಿರುವನು. ಮಲಯ ದೇಶದ ಯುವತಿಯರ ಕೈಕನ್ನಡಿಯಂತಿರುವನು. ಆಂಧ್ರದೇಶದ ಯುವತಿಯರ ಒತ್ತಾದ [ಬಿಗಿಯಾದ] ಸುಂದರ ಮೊಲೆಗಳ ಮೇಲಿನ ಹಾರದಂತಿರುವನು ಎಂದು ಖ್ಯಾತಿಪಡೆದ ಪಂಪನು ಸರಸ್ವತಿಯ ಕೊರಳ ರತ್ನದ ಹಾರವಾಗಿರುವನು. ೧–೩೨

ದುಂದುಭಿ ಗಭೀರನಿನದಂ
ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ
ದುಂದುಭಿ ಸಿಂಹಾಸನ ಸುರ
ದುಂದುಭಿಪತಿ ಚರಣಕಮಳಭೃಂಗಂ ಪಂಪಂ ॥ **೧-೩೩**

ಪದ ವಿಭಾಗ: ದುಂದುಭಿ-ಗಭೀರ-ನಿನದಂ;
ದುಂದುಭಿ-ಸಂವತ್ಸರೋದ್ಭವಂ; ಪ್ರಕಟ-
ಯಶೋದುಂದುಬಿ; ಸಿಂಹಾಸನ-
ಸುರದುಂದುಭಿ-ಪತಿ-ಚರಣಕಮಳ-ಭೃಂಗಂ-ಪಂಪಂ ॥ ೧-೩೩

ಅನ್ವಯಾರ್ಥ: (ದುಂದುಭಿ ಗಭೀರ ನಿನದಂ) ಭೇರಿಯ [ಧ್ವಾನದಂತೆ] ಘನವಾದ ಧ್ವನಿಯುಳ್ಳವನೂ, **(ದುಂದುಭಿಸಂವತ್ಸರೋದ್ಭವಂ=ದುಂದುಭಿಸಂವತ್ಸರ+ಉದ್ಭವಂ)** ದುಂದುಭಿ ಸಂವತ್ಸರದಲ್ಲಿ ಜನಿಸಿದವನೂ, **(ಪ್ರಕಟ ಯಶೋದುಂದುಭಿ)** ನಿಚ್ಚಳವಾದ ಯಶಸ್ಸನ್ನು ಸಾರುವ ದುಂದುಭಿಯಂತಿರುವವನೂ, **(ಸಿಂಹಾಸನ ಸುರದುಂದುಭಿ ಪತಿ)** ಸಿಂಹಾಸನ, ದೇವದುಂದುಭಿ [ಮೊದಲಾದ ಅಷ್ಟಮಹಾಪ್ರಾತಿಹಾರ್ಯಗಳ] ಒಡೆಯನಾದ ಅಂದರೆ ಜಿನೇಂದ್ರನ **(ಚರಣಕಮಳ ಭೃಂಗಂ)** ಪಾದಕಮಲಗಳಲ್ಲಿ ದುಂಬಿಯಂತಿರುವನು **(ಪಂಪಂ)** ಈ ಪಂಪ ॥ ೧-೩೩

ಭಾವಾರ್ಥ: ಪಂಪನು, ಭೇರಿಯ ಧ್ವಾನದಂತೆ ಗಂಭೀರವಾದ ಧ್ವನಿಯುಳ್ಳವನೂ, ದುಂದುಭಿ ಸಂವತ್ಸರದಲ್ಲಿ ಜನಿಸಿದವನೂ, ನಿಚ್ಚಳವಾದ ಯಶಸ್ಸನ್ನು ಸಾರುವ ದುಂದುಭಿಯಂತಿರುವವನೂ, ಸಿಂಹಾಸನ, ದೇವದುಂದುಭಿ ಮೊದಲಾದ ಅಷ್ಟಮಹಾಪ್ರಾತಿಹಾರ್ಯಗಳ ಅಧಿಪತಿಯಾದ ಜಿನೇಂದ್ರ ಭಗವಂತರಲ್ಲಿ ಅತ್ಯಂತ ಶ್ರದ್ಧಾಭಕ್ತಿಯುಳ್ಳವನು. ೧-೩೩

ವಿಶೇಷ ವಿವರಣೆ: ದುಂದುಭಿ ಸಂವತ್ಸರೋದ್ಭವಂ: ಪಂಪನು ತಾನು ದುಂದುಭಿ ಸಂವತ್ಸರದಲ್ಲಿ ಜನಿಸಿದವನು ಎಂದು ಹೇಳಿಕೊಂಡಿರುವ ಸಂವತ್ಸರವು ಕ್ರಿ.ಶ. ೯೦೧-೦೨ ಕ್ಕೆ ಸರಿಹೊಂದುತ್ತದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಸಿಂಹಾಸನ ಸುರದುಂದುಭಿ ಪತಿ: ಎಂದರೆ ಜಿನೇಂದ್ರರು ಅಥವ ತೀರ್ಥಂಕರರು ಎಂದು ಅರ್ಥ. ತೀರ್ಥಂಕರರ ಅಥವಾ ಜಿನೇಂದ್ರರ ಚರಣಕಮಳ ಎನ್ನದೆ, ಕವಿಯು ಅಲಂಕಾರಿಕವಾಗಿ **'ಸಿಂಹಾಸನ ಪತಿ'** ಮತ್ತು **'ಸುರದುಂದುಭಿ ಪತಿ'** ಚರಣಕಮಳ ಎನ್ನುತ್ತಾನೆ. ಅರಿಹಂತರ ೩೪ ಮೂಲ ಗುಣಗಳ ಜೊತೆಗೆ ತೀರ್ಥಂಕರರಿಗೆ ಮತ್ತೆ ೧೨ ಗುಣಗಳು ಪ್ರಾಪ್ತವಾಗುತ್ತವೆ. ಅವು (೧) ಅನಂತಚತುಷ್ಟಯಗಳು-೪, (೨) ಅಷ್ಟಮಹಾಪ್ರಾತಿಹಾರ್ಯಗಳು-೮, ಹೀಗೆ ಒಟ್ಟು ೧೨ ಗುಣಗಳು ಪ್ರಾಪ್ತವಾಗುತ್ತವೆ. ಅಷ್ಟಮಹಾಪ್ರಾತಿಹಾರ್ಯಗಳಾದ: (೧) ಅಶೋಕವೃಕ್ಷ, (೨) ಸುರ ಪುಷ್ಪವೃಷ್ಟಿ, (೩) ದಿವ್ಯಧ್ವನಿ, (೪) ಅರವತ್ತನಾಲ್ಕು ಚಾಮರಗಳು, (೫) ಸಿಂಹಾಸನ (ರತ್ನ ಖಚಿತ ಸಿಂಹಪೀಠ), (೬) ಭಾಮಂಡಲ, (೭) ದೇವದುಂದುಭಿ, (೮) ಆತಪತ್ರ (ಛತ್ರತ್ರಯ) ಇವು ಸಮವಸರಣದ ಒಡೆಯರಾದ ತೀರ್ಥಂಕರರಿಗೆ ವಿಶೇಷವಾಗಿ ಪ್ರಾಪ್ತವಾದವುಗಳು. ಈ ಅಷ್ಟಮಹಾಪ್ರಾತಿಹಾರ್ಯಗಳಲ್ಲಿ (೧) ಸಿಂಹಾಸನ ಮತ್ತು (೨) ಸುರದುಂದುಭಿಗಳು ಇರುತ್ತವೆ. **ಅಷ್ಟಮಹಾಪ್ರಾತಿಹಾರ್ಯಗಳ** ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ನಲವತ್ತಾರು (೪೬)-ತೀರ್ಥಂಕರರ ಅರಿಹಂತರ ಮೂಲಗುಣಗಳು** ಇದರಲ್ಲಿನ ೪. (ಆ) ನೆಯ ಉಪವಿಭಾಗವನ್ನು ನೋಡಿರಿ.

ಎಂದಿಂತು ತಮ್ಮ ತಮ್ಮಣು
ಗಿಂದಂ ಪೆಸರಿಟ್ಟು ಬುಧಸಮೂಹಮಿದಂ ಪೇ
ೞೆಂದೊಡೆ ಪೇೞಲ್ಕಾಂಬಗೆ
ದಂದೆನಿದೆಂನಳವೆ ಗಣಧರೋದಿತಚರಿತಂ ॥ **೧-೩೪**

ಪದ ವಿಭಾಗ: ಎಂದಿಂತು, ತಮ್ಮತಮ್ಮ, ಅಣುಗಿಂದಂ,
ಪೆಸರಿಟ್ಟು, ಬುಧ-ಸಮೂಹಂ, ಇದಂ, ಪೇೞ್,
ಎಂದೊಡೆ, ಪೇಳಲ್ಕೆ, ಆಂ, ಬಗೆದಂದೆನ್,
ಇದು, ಎಂನ>ಎನ್ನ, ಅಳವೆ, ಗಣಧರೋದಿತ-ಚರಿತಂ ॥ ೧-೩೪

ಅನ್ವಯಾರ್ಥ: (ಎಂದಿಂತು=ಎಂದು+ಇಂತು) ಈ ಪ್ರಕಾರವಾಗಿ ಮಾತಾಡಿಕೊಂಡು **(ತಮ್ಮತಮ್ಮ)** ತಮ್ಮತಮ್ಮ **(ಅಣುಗಿಂದಂ)** ಪ್ರೀತಿಯಿಂದ **(ಪೆಸರಿಟ್ಟು)** [ಪಂಪನನ್ನು] ಮೆಚ್ಚಿ ಹೊಗಳಿ **(ಬುಧ ಸಮೂಹಂ)** ವಿದ್ವಜ್ಜನ ಸಮೂಹವು **(ಇದಂ)** ಇದನ್ನು [ಆದಿ ತೀರ್ಥಂಕರರ ಚರಿತೆಯನ್ನು] **(ಪೇಟ್)** ಹೇಳು [ಕಾವ್ಯ ರಚನೆ ಮಾಡು] **(ಎಂದೊಡೆ)** ಎಂದು ಹೇಳಿದಾಗ, **(ಪೇೞಲ್ಕೆ)** ಹೇಳುವುದಕ್ಕೆ [ಆದಿ ತೀರ್ಥಂಕರರ ಚರಿತೆಯನ್ನು ರಚಿಸುವುದಕ್ಕೆ] **(ಆಂ)** ನಾನು **(ಬಗೆದಂದೆನ್)** ಮನಸ್ಸು ಮಾಡಿದೆ. [ಆದರೂ] **(ಗಣಧರೋದಿತ=ಗಣಧರ+ಉದಿತ)** ಗಣಧರರಿಂದ ಹೇಳಲ್ಪಟ್ಟ **(ಚರಿತಂ)** ಚರಿತೆಯನ್ನು **(ಇದೆಂನಳವೆ=ಇದು+ಎಂನ>ಎನ್ನ+ಅಳವೆ)** ಹೇಳುವುದು ಅಥವಾ ಕಾವ್ಯ ರಚನೆ ಮಾಡುವ ಕಾರ್ಯವು ನನಗೆ ಸಾಧ್ಯವಾದುದೇ? ॥ ೧–೩೪

ಭಾವಾರ್ಥ: ಈ ಪ್ರಕಾರವಾಗಿ ಬುಧ ಸಮೂಹವು ತಮ್ಮತಮ್ಮ ಪ್ರೀತಿಗನುಗುಣವಾಗಿ ಪಂಪನಿಗೆ 'ಸುಕವಿಜನಮನೋ ಮಾನಸೋತ್ತಂಸಹಂಸಂ', 'ಕವಿತಾಗುಣಾರ್ಣವನ್', 'ಸಂಸಾರಸಾರೋದಯಂ', 'ಸರಸ್ವತೀಮಣಿಹಾರಂ' ಇತ್ಯಾದಿ ಹೆಸರಿಟ್ಟು, ಹೊಗಳಿ ತಮಗೆ ಆದಿ ತೀರ್ಥಂಕರರ ಚರಿತೆಯನ್ನು ಹೇಳು ಎಂದು ಕೇಳಿದಾಗ, ಪಂಪನು ಆದಿ ತೀರ್ಥಂಕರರ ಚರಿತೆಯ ಕಾವ್ಯವನ್ನು ರಚಿಸುವುದಕ್ಕೆ ಮನಸ್ಸುಮಾಡಿದನು. ಆದರೆ ಗಣಧರರಿಂದ ಹೇಳಲ್ಪಟ್ಟ ಈ ಚರಿತೆಯನ್ನು ರಚಿಸುವುದು ನನ್ನಿಂದ ಸಾಧ್ಯವೇ ಎಂದು ತನ್ನ ಸಾಮರ್ಥ್ಯದ ಬಗ್ಗೆ ತಾನೇ ಅನುಮಾನವನ್ನು ವ್ಯಕ್ತಪಡಿಸುವ ಮೂಲಕ ಕವಿಯು ತನ್ನ ವಿನಯವನ್ನು ಪ್ರದರ್ಶಿಸಿದ್ದಾನೆ. ೧–೩೪

ವಿಶೇಷ ವಿವರಣೆ: ಎಂದಿಂತು ತಮ್ಮ ತಮ್ಮಣುಗಿಂದಂ ಪೆಸರಿಟ್ಟು ಬುಧಸಮೂಹಂ: ಮೇಲಿನ ೧–೨೮ ರಿಂದ ೧–೩೩ ರವರೆಗಿನ ಆರು ಕಂದಪದ್ಯಗಳಲ್ಲಿ ಕವಿಯನ್ನು ಹಾಡಿಹೊಗಳಿರುವ ಮಾತುಗಳು, ಕವಿಯು ತನ್ನನ್ನು ತಾನೇ ಕೀರ್ತಿಸಿಕೊಂಡ ಮಾತುಗಳಲ್ಲ. ಆ ಹೊಗಳಿಕೆಯ ಮಾತುಗಳು ಬುಧ ಸಮೂಹವು ಪಂಪನನ್ನು ಕುರಿತು ಆಡಿರುವ ಅವನ ಗುಣಗಾನದ ಮಾತುಗಳಾಗಿವೆ. ಆ ವಿದ್ವಜ್ಜನರು ತನ್ನ ಬಗ್ಗೆ ಹೇಳಿರುವ ಮಾತುಗಳನ್ನು ಕವಿಯು ಈ ಪದ್ಯಗಳಲ್ಲಿ ದಾಖಲಿಸಿದ್ದಾನೆ. ಆ ಬುಧಸಮೂಹವು ಪಂಪನನ್ನು 'ಸುಕವಿಜನಮನೋಮಾನಸೋತ್ತಂಸಹಂಸ (೧–೨೬)', 'ಕವಿತಾಗುಣಾರ್ಣವ', 'ಸಂಸಾರಸಾರೋದಯ (೧–೨೭)', 'ಸರಸ್ವತೀ ಮಣಿಹಾರ (೧–೨೮)' ಎಂಬುದಾಗಿ ಹೆಸರಿಟ್ಟು (ಬಿರುದು ನೀಡಿ) ಹೊಗಳಿ, ತಮಗೆ ಆದಿ ತೀರ್ಥಂಕರರ ಚರಿತೆಯನ್ನು ಹೇಳು (ರಚಿಸು) ಎಂದು ಅವನನ್ನು ಕೇಳಲಾಗಿ, ಅವರ ಕೋರಿಕೆಯನ್ನು ಮನ್ನಿಸಿ ಆದಿ ತೀರ್ಥಂಕರರ ಚರಿತೆಯನ್ನು ಹೇಳಲು ಕವಿಯು ಮನಸ್ಸು ಮಾಡಿದರೂ, ಗಣಧರರಿಂದ ಹೇಳಲ್ಪಟ್ಟ ಈ ಚರಿತೆಯನ್ನು ತನ್ನಿಂದ ಹೇಳಲು ಸಾಧ್ಯವೇ ಎಂದು ತನ್ನ ಸಾಮರ್ಥ್ಯದ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸುವ ಮೂಲಕ ಬಹುಶ್ರುತನಾದ ಪಂಪನು ತನ್ನ ವಿನಯವನ್ನು ಮೆರೆಯುತ್ತಾನೆ. ಮೇಲಿನ ೧–೨೮ ರಿಂದ ೧–೩೪ ನೆಯ ಪದ್ಯಗಳಲ್ಲಿ ತನ್ನ ವ್ಯಕ್ತಿತ್ವ, ದೇಹಾಕೃತಿ, ರೂಪು, ಘನತೆ, ಗಾಂಭೀರ್ಯ, ಕೀರ್ತಿ, ಕುಲ, ಜನ್ಮತಳೆದ ಸಂವತ್ಸರ (ವರ್ಷ), ತಾನು ಹೊತ್ತಿದ್ದ ಬಿರುದುಗಳು, ತನ್ನ ಸಮಕಾಲೀನರೊಂದಿಗೆ ಗಳಿಸಿಕೊಂಡಿದ್ದ ಪ್ರೀತಿ–ವಿಶ್ವಾಸಗಳು, ಹೀಗೆ ತನ್ನ ಹತ್ತು ಹಲವು ವೈಯಕ್ತಿಕ ವಿಚಾರಗಳನ್ನು ನಮಗೆ ಪರಿಚಯಿಸಿದ್ದಾನೆ. ಹಾಗೆಯೇ ತಾನು ಈ ಪುರುದೇವನ ಕಥೆಯನ್ನು ಹೇಳಲು ಕಾರಣವಾದ ವ್ಯಕ್ತಿಗಳು ಹಾಗೂ ಸಂದರ್ಭವನ್ನೂ ಸಹ ತಿಳಿಸಿದ್ದಾನೆ.

ಮತ್ತೇಭ **ಪುರುದೇವಾದಿಜಿನೇಂದ್ರಮಾಲೆ ಗಣಭೃತ್ಸಂತಾನವೆಂದೀಪರಂ**
ವಿಕ್ರೀಡಿತ **ಪರೆಯಿಂ ವಿಶ್ರುತವೀರಸೇನಜಿನಸೇನಾಚಾರ್ಯಪರ್ಯಂತಮಾ**
ಗಿರೆ ಬಂದೀಕಥೆ ಗುಣ್ಪುವೆತ್ತುದವರುಂ ಜ್ಞಾನರ್ಧಿಸಂಪನ್ನರೆಂ
ದಿರದಾಂ ಧೃಷ್ಟನೆನೀಕಥಾಬ್ಧಿಯುಮನೇನೀಸಲ್ಮನಂದಂದೆನೋ ॥ **೧–೩೫**

ಪದ ವಿಭಾಗ: ಪುರುದೇವಾದಿ–ಜಿನೇಂದ್ರ–ಮಾಲೆ, ಗಣ–ಭೃತ್, ಸಂತಾನಂ, ಎಂದ, ಈ,
ಪರಂಪರೆಯಿಂ, ವಿಶ್ರುತ–ವೀರಸೇನ–ಜಿನಸೇನಾಚಾರ್ಯ–ಪರ್ಯಂತಮಾಗಿರೆ, ಬಂದ, ಈ, ಕಥೆ,
ಗುಣ್ಪುವೆತ್ತುದು, ಅವರುಂ, ಜ್ಞಾನರ್ಧಿ–ಸಂಪನ್ನರ್, ಎಂದಿರದೆ, ಆಂ,
ಧೃಷ್ಟನೆನ್, ಈ, ಕಥಾಬ್ಧಿಯುಮನ್, ಏನ್, ಈಸಲ್, ಮನಂದಂದೆನೋ ೧–೩೫

ಅನ್ವಯಾರ್ಥ: (ಪುರುದೇವಾದಿ ಜಿನೇಂದ್ರ ಮಾಲೆ) ವೃಷಭದೇವರಾದಿಯಾಗಿ [ಮಹಾವೀರರವರೆಗಿನ ಇಪ್ಪತ್ತನಾಲ್ಕು] ತೀರ್ಥಂಕರರ ಪರಂಪರೆಯಲ್ಲಿ [ಬಂದುದೂ], **(ಗಣಭೃತ್)** [ನಂತರ] ಗಣಧರರಿಂದ ಪೋಷಿಸಲ್ಪಟ್ಟು [ಸಂರಕ್ಷಿಸಲ್ಪಟ್ಟು], **(ಸಂತಾನಮೆಂದೀ=ಸಂತಾನಂ+ಎಂದ+ಈ)** ಅವಿಚ್ಛಿನ್ನವಾಗಿ ಶಿಷ್ಯ–ಪ್ರಶಿಷ್ಯ ಎಂಬ ಈ **(ಪರಂಪರೆಯಿಂ)** ಪರಂಪರೆಯಲ್ಲಿ

(ವಿಶ್ರುತ) ಪ್ರಸಿದ್ಧರಾದ **(ವೀರಸೇನ ಜಿನಸೇನಾಚಾರ್ಯ ಪರ್ಯಂತಮಾಗಿರೆ=ವೀರಸೇನಾಚಾರ್ಯ-ಜಿನಸೇನಾಚಾರ್ಯ-ಪರ್ಯಂತಮಾಗಿ+ಇರೆ)** ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರವರೆಗೆ ಉಳಿದು **(ಬಂದೀಕಥೆ=ಬಂದ+ಈ+ಕಥೆ)** ಬಂದಿರುವ ಈ ಕಥೆಯು [ಆದಿಪುರಾಣವು] **(ಗುಣ್ಪುವೆತ್ತುದು)** ಹಿರಿಮೆಯನ್ನು ಪಡೆದಿರುವುದು. **(ಅವರುಂ)** ಅವರೆಲ್ಲರೂ ಅಂದರೆ, ತೀರ್ಥಂಕರಕುಲ ಪರಂಪರಾನುಗತವಾಗಿ ಇದನ್ನು ಸಂರಕ್ಷಿಸಿ ಪ್ರಚುರಪಡಿಸಿದ ಗಣಧರಾದಿ ಆಚಾರ್ಯರೆಲ್ಲರೂ **(ಜ್ಞಾನರ್ಧಿ[=ಜ್ಞಾನ+ಋದ್ಧಿ] ಸಂಪನ್ನರ್)** ಹೆಚ್ಚು ಜ್ಞಾನದಿಂದ ಕೂಡಿಕೊಂಡಿರುವವರು **(ಎಂದು)** ಎಂದು [ತಿಳಿದೂ], **(ಇರದೆ)** [ಸುಮ್ಮನೆ] ಇರದೆ, **(ಈ)** ಈ **(ಕಥಾಬ್ಧಿಯುಮನ್)** ಕಥಾ ಸಾಗರವನ್ನು **(ಏನ್>ಏಮ್)** ಏನೆಂದು **(ಈಸಲ್)** ಈಜಲು **(ಮನಂದಂದೆನೋ)** ಮನಸ್ಸು ಮಾಡಿದೆನೋ? **(ಆಂ ಧೃಷ್ಟನೆನ್)** ನಾನು ಉದ್ಧಟನೇ ಆಗಿದ್ದೇನೆ ॥ ೧-೩೫

ಭಾವಾರ್ಥ: ಪುರುದೇವ ಮೊದಲ್ಗೊಂಡು ಮಹಾವೀರರವರೆಗಿನ ತೀರ್ಥಂಕರ ಪರಂಪರೆಯಲ್ಲಿ ಬಂದುದೂ, ನಂತರ ಗಣಧರರಿಂದ ಪೋಷಿಸಲ್ಪಟ್ಟು ಮುಂದೆ ಅವಿಚ್ಛಿನ್ನವಾಗಿ ನಡೆದು ಬಂದ ಶಿಷ್ಯ-ಪ್ರಶಿಷ್ಯ ಪರಂಪರೆಯಲ್ಲಿ ಪ್ರಸಿದ್ಧರಾದ ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರವರೆಗೆ ಉಳಿದು ಬಂದಿರುವ ಈ ಕಥೆಯು ಗಂಭೀರತೆಯನ್ನು ಪಡೆದಿದೆ. ಇಂತಹ ಕಥೆಯನ್ನು ಪ್ರಚುರಪಡಿಸಿದವರು ಜ್ಞಾನರ್ದ್ಧಿಸಂಪನ್ನರು. ಇಂತಹ ಕಥಾ ಸಾಗರವನ್ನು ನಾನು ಅದು ಹೇಗೆ ಈಜಲು ನಿರ್ಧರಿಸದೆನೋ? ನಾನು ಉದ್ಧಟನೇ ಸರಿ!! ಎಂದು ವಿನಯವನ್ನು ತೋರಿಸಿಕೊಂಡಿದ್ದಾನೆ. ೧-೩೫

ವಿಶೇಷ ವಿವರಣೆ: ಗಣಭೃತ್ಸಂತಾನಮೆಂದೀಪರಂಪರೆಯಿಂ: 'ಗಣಧರರಿಂದ ಕಾಪಾಡಲ್ಪಟ್ಟಿದುದು' ಎಂದರೆ, ಮಹಾವೀರ ತೀರ್ಥಂಕರರು **ಸಮವಸರಣ**ದಲ್ಲಿ **ದಿವ್ಯಧ್ವನಿ**ಯನ್ನು ಮೊಳಗಿಸಿದರು. ಅದನ್ನು ಗೌತಮಾದಿ ಹನ್ನೆರಡು ಮಂದಿ ಗಣಧರರು ಲೋಕಕ್ಕೆ **ಶ್ರುತ**ದ ಮೂಲಕ ಪ್ರಕಟಿಸಿ ಕಾಪಾಡಿದರು ಎಂದು ತಾತ್ಪರ್ಯ.

ಅನಂತರ ಈ ಗಣಧರರ ಶಿಷ್ಯ-ಪ್ರಶಿಷ್ಯ ಪರಂಪರೆಯು ಈ ಮುಂದೆ ವಿವರಿಸಿರುವಂತೆ ಮುಂದುವರೆದಿರುತ್ತದೆ. ಮೊದಲನೆಯದಾಗಿ, ಗೌತಮ ಗಣಧರರು ಯಾವ ದಿವಸ ಮುಕ್ತರಾದರೋ ಆ ದಿವಸವೇ ಸುಧರ್ಮ ಗಣಧರರಿಗೆ ಕೇವಲಜ್ಞಾನ ಉಂಟಾಯಿತು. ಇವರು ಹನ್ನೆರಡು ವರ್ಷಗಳವರೆಗೆ ವಿಹಾರ ಮಾಡಿದರು. ಯಾವ ದಿವಸ ಸುಧರ್ಮ ಗಣಧರರು ಮುಕ್ತರಾದರೋ ಆ ದಿವಸವೇ ಜಂಬೂಸ್ವಾಮಿಗಳಿಗೆ ಕೇವಲಜ್ಞಾನ ಉಂಟಾಯಿತು. ಇವರು ಮೂವತ್ತೆಂಟು ವರ್ಷಗಳವರೆಗೆ ವಿಹಾರ ಮಾಡಿದರು (ಪೂರ್ವಪುರಾಣ, ೨-೧೩೭, ೧೩೮, ೧೩೯, ೧೪೦). ಆಮೇಲೆ ಕ್ರಮವಾಗಿ ವಿಷ್ಣುಮುನಿ, ನಂದಿಮಿತ್ರ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹು ಈ ಐವರು ಮಹಾಮುನಿಗಳು ಚತುರ್ದಶ ಮಹಾವಿದ್ಯಾಸ್ಥಾನಪಾರಗರಾಗಿ ನೂರು ವರ್ಷಗಳವರೆಗೆ ಸಮಸ್ತ ದ್ವಾದಶಾಂಗ ಶ್ರುತವನ್ನು ಪ್ರಕಾಶಗೊಳಿಸಿದರು (ಪೂರ್ವಪುರಾಣ, ೨-೧೪೧, ೧೪೨). ಇವರೆಲ್ಲರೂ ಶ್ರುತಕೇವಲಿಗಳಾಗಿದ್ದರು. ಶ್ರುತಕೇವಲಿಗಳೆಂದರೆ ದ್ವಾದಶಾಂಗ ಶ್ರುತದ ಸಂಪೂರ್ಣ ಜ್ಞಾನವನ್ನು ಹೊಂದಿದವರೆಂದು ಅರ್ಥ. ಭದ್ರಬಾಹುಗಳೇ ಕೊನೆಯ ಶ್ರುತಕೇವಲಿಗಳು. ಆಮೇಲೆ ದಶಪೂರ್ವಧಾರಿಗಳಾದ ವಿಶಾಖಾಚಾರ್ಯ, ಪ್ರೋಷ್ಠಿಲಾಚಾರ್ಯ, ಕ್ಷತ್ರಿಯಾಚಾರ್ಯ, ಜಯಸೇನಾಚಾರ್ಯ, ನಾಗಸೇನಾಚಾರ್ಯ, ಸಿದ್ಧಾರ್ಥಾಚಾರ್ಯ, ಧೃತಿಷೇಣಾಚಾರ್ಯ, ವಿಜಯಸೇನಾಚಾರ್ಯ, ಬುದ್ಧಿಲಆಚಾರ್ಯ, ಗಂಗದೇವಾಚಾರ್ಯ ಮತ್ತು ಧರ್ಮಸೇನಾಚಾರ್ಯ ಈ ಹನ್ನೊಂದು ಜನ ಮಹಾಮುನಿಗಳು ನೂರ ಎಂಭತ್ತಮೂರು ವರ್ಷಗಳ ವರೆಗೆ ಶ್ರುತವನ್ನು ಪ್ರಕಾಶಿಸಿದರು (ಪೂರ್ವಪುರಾಣ, ೨-೧೪೩, ೧೪೪, ೧೪೫). ಆ ಬಳಿಕ ತೀರ್ಥಂಕರ ಕುಲಪರಂಪರೆಯಲ್ಲಿ ಬಂದ ಏಕದಶಾಂಗವಿದ್ಯೆಗಳ ಪಾರಗರಾದ ಐವರು ಆಚಾರ್ಯರು, ಕ್ರಮವಾಗಿ ನಕ್ಷತ್ರಾಚಾರ್ಯ, ಜಯಪಾಲಾಚಾರ್ಯ, ಪಾಂಡ್ವಾಚಾರ್ಯ, ಧ್ರುವಸೇನಾಚಾರ್ಯ ಮತ್ತು ಕಂಸಾಚಾರ್ಯ ಮುನೀಶ್ವರರು ಇನ್ನೂರ ಇಪ್ಪತ್ತು ವರ್ಷಗಳವರೆಗೆ ಏಕದಶಾಂಗ ಶ್ರುತವನ್ನು ಪ್ರಕಾಶಿಸಿದರು (ಪೂರ್ವಪುರಾಣ, ೨-೧೪೬, ೧೪೭, ೧೪೮). ಆ ನಂತರ ಆಚಾರಾಂಗಧರರಾದ ನಾಲ್ವರು ಕ್ರಮವಾಗಿ ಸುಭದ್ರಾಚಾರ್ಯ, ಅಭಯಭದ್ರಾಚಾರ್ಯ (ಯಶೋಭದ್ರಾಚಾರ್ಯ), ಭದ್ರಬಾಹು ಆಚಾರ್ಯ (ಜಯಬಾಹು ಆಚಾರ್ಯ) ಮತ್ತು ಲೋಹಾಚಾರ್ಯರೆಂಬ ಈ ನಾಲ್ವರು ಮಹಾಯತೀಶ್ವರರು ನೂರಹದಿನೆಂಟು ವರ್ಷಗಳವರೆಗೆ ಶ್ರುತವನ್ನು ಬೋಧನೆ ಮಾಡಿದರು (ಪೂರ್ವಪುರಾಣ, ೨-೧೪೯, ೧೫೦). ಆಮೇಲೆ ವಿನಯಧರ, ಶ್ರೀದತ್ತ, ಶಿವದತ್ತ, ಅರ್ಹದ್ದತ್ತ, ಅಂಗಪೂರ್ವ ದೇಶಧರರಾದ ನಾಲ್ವರು ಆರಾತೀಯ ಯತಿಗಳಾದರು. ಇವರ ನಂತರ ಎಲ್ಲಾ ಅಂಗಗಳನ್ನೂ ಮತ್ತು ಎಲ್ಲಾ ಪೂರ್ವಗಳನ್ನು ಏಕದೇಶವಾಗಿ ತಿಳಿಯುವ ಅರ್ಹದ್ಬಲಿ ಎಂಬ ಆಚಾರ್ಯರಾದರು. ಇವರ ನಂತರ ಮಾಘನಂದಿ ಆಚಾರ್ಯರಾದರು. ಭಗವಾನ್ ಮಾಹಾವೀರ ಸ್ವಾಮಿಯವರು ಮುಕ್ತಿಹೊಂದಿದ ಆರುನೂರ ಎಂಭತ್ತಮೂರು ವರ್ಷಗಳಾದಮೇಲೆ ಧರಸೇನಾಚಾರ್ಯರಾದರು. ಇವರ ಶಿಷ್ಯರು ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರು. ಆಚಾರ್ಯ ಪುಷ್ಪದಂತರು ಕರ್ನಾಟಕದ ಶಿರಸಿಯ ಹತ್ತಿರದ ಬನವಾಸಿ ನಾಡಿನಲ್ಲಿ (ಬಂಕಾಪುರದಲ್ಲಿ) ನೆಲೆಸಿದ್ದರೆಂದೂ, ಭೂತಬಲ್ಯಾಚಾರ್ಯರು ತಮಿಳುನಾಡಿನ, ತಿರುವಣ್ಣಾಮಲೈ ಜಿಲ್ಲೆಯ, ವಂದವಾಸಿ ತಾಲ್ಲೂಕಿನ, ವೆನ್‌ಕುಡ್ರಂ ಎಂಬ ಊರಿನ ಹತ್ತಿರವಿರುವ ಧವಳಗಿರಿ ಎಂಬ ಬೆಟ್ಟದ ಮೇಲೆ ತಂಗಿದ್ದರು ಎಂದು ಐತಿಹ್ಯವಿದೆ. ಈ ಇಬ್ಬರು ಆಚಾರ್ಯರಿಂದಲೇ ಜೈನಶ್ರುತವು ಲಿಪಿಬದ್ಧವಾದದ್ದು. ಹೀಗೆ ಲಿಪಿಬದ್ಧವಾದ **'ಶ್ರುತ'**ಕ್ಕೆ **'ಜೈನಶಾಸ್ತ್ರ'**

ಅಥವಾ '**ಜೈನಾಗಮ**' ಅಥವಾ '**ಜಿನಶಾಸನ**' ಎನ್ನುವರು. ಪುಷ್ಪದಂತಾಚಾರ್ಯರು '**ಅಷ್ಟಪ್ರಾಭೃತ**' (ಜೀವಟ್ಠಾಣದ ಭಾಗ) ಎಂಬ ಶಾಸ್ತ್ರವನ್ನು ಅಕ್ಷರಗಳಲ್ಲಿ ಬರೆದು ಜಿನಪಾಲಿತ ಎಂಬ ತಮ್ಮ ಶಿಷ್ಯನೊಡನೆ ಭೂತಬಲಿ ಆಚಾರ್ಯರ ಬಳಿಗೆ ಕಳುಹಿಸಿದರು. ಅನಂತರ ಭೂತಬಲ್ಯಾಚಾರ್ಯರು ಅದರ ಜೊತೆಗೆ **(೧) ಜೀವಟ್ಠಾಣ (ಜೀವಸ್ಥಾನ), (೨) ಖುದ್ದಾಬಂಧ (ಕ್ಷುಲ್ಲಕಬಂಧ), (೩) ಬಂಧಸಾಮಿತ್ತವಿಚಓ (ಬಂಧಸ್ವಾಮಿತ್ವ), (೪) ವರ್ಗಣಾಖಂಡ, (೫) ವೇದನಾಖಂಡ, (ಭಾವವೇದನಾ), (೬) ಮಹಾಬಂಧ** ಈ ಆರು ಖಂಡಗಳನ್ನು ಸೇರಿಸಿದರು. ಈ ಇಬ್ಬರೂ ಆಚಾರ್ಯರು ಪ್ರಾಕೃತ ಭಾಷೆಯಲ್ಲಿ ಜೈನಾಗಮದ ಮೊದಲ ಸಿದ್ಧಾಂತ ಗ್ರಂಥ '**ಷಟ್ ಖಂಡಾಗಮ**'ವನ್ನು ರಚಿಸಿದರು. ಷಟ್ ಖಂಡಾಗಮ ಗ್ರಂಥದ ರಚನೆ ಪೂರ್ಣಗೊಂಡ **ಜ್ಯೇಷ್ಠ ಶುಕ್ಲ ಪಂಚಮೀದಿನ**ವನ್ನು ಜೈನರು '**ಶ್ರುತಪಂಚಮಿ**' ಎಂದು ಆಚರಿಸುತ್ತಾಬಂದಿದ್ದು, ಇದೇ ದಿನ ಈಗಲೂ ಕೂಡ ಜೈನರು ಅವಿಚ್ಛಿನ್ನವಾಗಿ **ಶ್ರುತಪೂಜೆ**ಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರ ನಂತರ ಕೊಂಡಕುಂದಾಚಾರ್ಯರು, ಉಮಾಸ್ವಾಮಿಗಳು, ಜಟಾಚಾರ್ಯರು, ಸಮಂತಭದ್ರಾಚಾರ್ಯರು, ಪೂಜ್ಯಪಾದ ಸ್ವಾಮಿಗಳು, ಶ್ರುತಕೀರ್ತ್ಯಾಚಾರ್ಯರು ಪ್ರಸಿದ್ಧರಾಗಿದ್ದರು. ಆ ನಂತರ ಬಂದವರು ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರು. ಹೀಗೆ ಶಿಷ್ಯ–ಪ್ರಶಿಷ್ಯ ಸಂತಾನದ ಆಚಾರ್ಯ ಪರಂಪರೆಯು ಮುಂದುವರೆದುಕೊಂಡು ಬಂದಿದ್ದು, ಇವರೆಲ್ಲರಿಂದಲೂ ಶ್ರುತವು ಕಾಪಾಡಲ್ಪಟ್ಟಿದ್ದಾಗಿರುತ್ತದೆ. ಕ್ರಿ.ಪೂ. ೧ ನೆಯ ಶತಮಾನದಿಂದ ಕ್ರಿ.ಶ. ೮–೯ ನೆಯ ಶತಮಾನದ ಅವಧಿಯಲ್ಲಿ ಆಗಿಹೋದ ಶ್ರೇಷ್ಠರಾದ ಜೈನಾಚಾರ್ಯರಲ್ಲಿ ಕೆಲವರನ್ನು ಪಂಪನು ತನ್ನ ಕೃತಿಯಲ್ಲಿ ಸ್ಮರಿಸಿ ಸ್ತುತಿಸಿದ್ದಾನೆ. ಹೀಗೆ ಜೈನಾಚಾರ್ಯರ ಪರಂಪರೆಯು ಅವಿಚ್ಛಿನ್ನವಾಗಿ ನಡೆದುಕೊಂಡುಬರುತ್ತಿದೆ.

ವಿಶ್ರುತ ವೀರಸೇನ ಜಿನಸೇನಾಚಾರ್ಯಪರ್ಯಂತಂ: ಕಡೆಗೆ ಪಂಪನು ಈ ಪದ್ಯದಲ್ಲಿ 'ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯ ರವರೆಗೆ' ಎಂದು ಸಂಬೋಧಿಸುತ್ತಾನೆ. ಏಕೆಂದರೆ ಪಂಪನ ಕಾಲಕ್ಕೆ ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರೇ ಕೊನೆಯವರಾದ ಮತ್ತು ಪ್ರಸಿದ್ಧರಾದ ಜೈನಾಚಾರ್ಯರುಗಳು. ವೀರಸೇನಾಚಾರ್ಯರು ಕ್ರಿ.ಶ. ೭ ನೆಯ ಶತಮಾನಕ್ಕೆ ಸೇರಿದವರು. ಇವರು ಷಟ್ಖಂಡಾಗಮಕ್ಕೆ ೭೨೦೦೦ ಶ್ಲೋಕ ಪ್ರಮಾಣದ '**ಧವಳಾ ಟೀಕೆ**'ಯನ್ನು '**ಕಷಾಯ ಪ್ರಾಭೃತ**'ದ ಮೇಲೆ ೨೦೦೦೦ ಶ್ಲೋಕ ಪ್ರಮಾಣದ '**ಜಯಧವಳಾ**' ಟೀಕೆಯನ್ನು ರಚಿಸಿ ಕಾಲವಾದರು. ವೀರಸೇನಾಚಾರ್ಯರ ಶಿಷ್ಯರಾದ ಜಿನಸೇನಾಚಾರ್ಯರು (ಕಾಲ ಸುಮಾರು ಕ್ರಿ.ಶ. ೭–೮ ನೆಯ ಶತಮಾನ) ಅವರ ಗುರುಗಳಿಂದ ಅಪೂರ್ಣವಾಗಿದ್ದ ಧವಳಾ ಟೀಕೆಯ ಉಳಿದ ೪೦೦೦೦ ಶ್ಲೋಕಗಳನ್ನು ರಚಿಸಿ ಅದನ್ನು ಪೂರ್ಣಗೊಳಿಸಿದರು. ಇವರು **ಪೂರ್ವಪುರಾಣ**ದ ಕರ್ತೃಗಳು. ಪಂಪನ ಕಾಲ ಕ್ರಿ.ಶ. ೧೦ ನೆಯ ಶತಮಾನ. ಆದುದರಿಂದ 'ವೀರಸೇನಾಚಾರ್ಯ ಮತ್ತು ಜಿನಸೇನಾಚಾರ್ಯರವರೆಗೆ' ಎಂದು ಕವಿಯು ತನ್ನ ಕಾಲದ ವರೆಗೆ ಆಗಿಹೋದ ಆಚಾರ್ಯರುಗಳನ್ನು ಕುರಿತು ಹೇಳಿದ್ದಾನೆ. ಹಿಂದಿನ ಪದ್ಯದಲ್ಲಿ ಪಂಪನು 'ಗಣಧರರು ಹೇಳಲ್ಪಟ್ಟ ಈ ಚರಿತೆಯನ್ನು ಹೇಳಲು ನನ್ನಿಂದ ಸಾಧ್ಯವೇ?' ಎಂದೂ ಈ ಪದ್ಯದಲ್ಲಿ ಈ ಮೇಲೆ ವಿವರಿಸಿದಂತೆ ಪರಂಪರೆಯಿಂದ ಬಂದ ಎಲ್ಲಾ ಆಚಾರ್ಯರೂ 'ಜ್ಞಾನರ್ದ್ಧಿಸಂಪನ್ನರು', ಇಂತಹವರು ಹೇಳಿದ 'ಈ ಕಥಾ ಸಾಗರವನ್ನು ತಾನು ಏಕೆ ಈಜಲು ಮನಸ್ಸು ಮಾಡಿದೆನೋ? ನಾನು ಉದ್ಧಟನೆ ಸರಿ' ಎಂದು ಹೇಳಿ ಮತ್ತೊಮ್ಮೆ ತನ್ನ ಸದ್ವಿನಯವನ್ನು ಪ್ರಕಟಗೊಳಿಸಿದ್ದಾನೆ.

ಜ್ಞಾನರ್ಧಿಸಂಪನ್ನರ್: 'ಜ್ಞಾನರ್ಧಿ' ಪದದಲ್ಲಿರುವ ಸಂಧಿಯನ್ನು ಬಿಡಿಸಿದಾಗ, ಜ್ಞಾನ+ಋದ್ಧಿ ಎಂದಾಗುತ್ತದೆ. ಇಲ್ಲಿ 'ಜ್ಞಾನ'ವೆಂದರೆ 'ಸಮ್ಯಜ್ಞಾನ'ವೆಂದೂ, 'ಋದ್ಧಿ' ಎಂದರೆ 'ಅಷ್ಟರ್ಧಿ' ಅಥವಾ 'ಅಷ್ಟಋದ್ಧಿ'ಗಳು ಎಂದೂ ತಿಳಿಯಬೇಕಾಗುತ್ತದೆ. ಈ ಶಬ್ದಗಳ ಅರ್ಥಪ್ರತೀತಿಯನ್ನು ನೀಡಲು ಪ್ರಯತ್ನಸಿದರೆ ಆಗ ವಿವರಣೆಯು ವಿಸ್ತರಿಸಲ್ಪಡುತ್ತದೆ. ಆದುದರಿಂದ ಇಲ್ಲಿ ಇದರ ಶಬ್ದಾರ್ಥವಾದ 'ಹೆಚ್ಚು ಜ್ಞಾನದಿಂದ ಕೂಡಿಕೊಂಡಿರುವವರು' ಎನ್ನುವ ಅರ್ಥವನ್ನು ನೀಡಿದೆ.

ಚಂಪಕಮಾಲೆ **ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಟ್ತೆ ಲಾಭಮೆಂ**
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಟ್ತೆ ಮುಕ್ತಿ ಸಂ
ಭವಿಸುವಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಱರೀವುದೇಂ ಪೆಱರ[1] ಮಾಡುವುದೇಂ ಪೆಱರಿಂದ[2]ವಪ್ಪುದೇಂ[3] ॥ ೧–೩೬

---

[1] ಮೂಲಪಾಠ–'ಪೆಱರ', ಕೆಜಿ ಯವರ ಪಾಠ–'ಪೆಱಱ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. 'ಪೆಱರ' ಈ ಪದವು ಷಷ್ಠಿವಿಭಕ್ತಿಯಲ್ಲಿದ್ದು, ವಿಭಕ್ತಿಪಲ್ಲಟವಾಗಿ ಹೊಸಗನ್ನಡದಲ್ಲಿ 'ಇತರರು' ಎಂಬ ಪ್ರಥಮಾವಿಭಕ್ತಿ ರೂಪದಲ್ಲಿರುತ್ತದೆ.

[2] ಮೂಲಪಾಠ–'ಪೆಱರಿಂದ', ಕೆಜಿ ಯವರ ಪಾಠ–'ಪೆಱಱಿಂದ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ–'ಪೆಱರಿಂದವಪ್ಪುದೇಂ', ಕೆಲವು ಪ್ರತಿಗಳಲ್ಲಿರುವ ಪರ್ಯಾಯಪಾಠ–'ಪೆಱರಿಂದಮಪ್ಪುದೇಂ', ('ಶಬ್ದಮಣಿದರ್ಪಣ'ದ 'ಸಮಾಪ್ತಿ ವಾಕ್ಯಂಗಳ್' ಇದರಲ್ಲಿ ಕಡೆಯ ಸೂತ್ರಂ ೩೪೨ ನೆಯ ಮೂರನೆಯ ಪಾದವನ್ನು ನೋಡಿರಿ– 'ವಮಹಪ ಭೇದದಿಂ.....ದರಿದಲ್ತೆ ಕನ್ನಡಂ'.), ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಪದ ವಿಭಾಗ: ಕವಿತೆಯೊಳಾಸೆಗೆಯ್ವ, ಫಲಮಾವುದೊ; ಪೂಜೆ-ನೆಗಟ್ಟೆ-ಲಾಭಂ,
ಎಂಬಿವೆ, ವಲಂ; ಇಂದ್ರಪೂಜೆ, ಭುವನಸ್ತುತಮಪ್ಪ-ನೆಗಟ್ಟೆ, ಮುಕ್ತಿ-ಸಂಭವಿಸುವ-
ಲಾಭಂ, ಎಂಬಿವೆ, ಜಿನೇಂದ್ರ-ಗುಣಸ್ತುತಿಯಿಂದೆ, ತಾಮೆ, ಸಾರವೆ;
ಪೆಱರೀವುದೇಂ, ಪೆಱರ-ಮಾಡುವುದೇಂ, ಪೆಱರಿಂದಂ, ಅಪ್ಪುದೇಂ ॥ ೧-೩೬

ಅನ್ವಯಾರ್ಥ: **(ಕವಿತೆಯೊಳಾಸೆಗೆಯ್ವ=ಕವಿತೆಯೊಳ್+ಆಸೆಗೆಯ್ವ)** ಕಾವ್ಯ ರಚನೆಯಿಂದ ಬಯಸುವ [ಅಪೇಕ್ಷಿಸುವ] **(ಫಲಮಾವುದೊ=ಫಲಂ+ಆವುದೊ)** ಫಲಗಳು ಯಾವುವೊ? **(ಪೂಜೆನೆಗಟ್ಟೆಲಾಭಮೆಂಬಿವೆ=ಪೂಜೆ ನೆಗಟ್ಟೆ ಲಾಭಂ+ಎಂಬಿವೆ)** ಗೌರವ [ಮನ್ನಣೆ], ಪ್ರಸಿದ್ಧಿ [ಹೊಗಳಿಕೆ], ಲಾಭ [ಧನ ಸಂಪಾದನೆ] ಎನ್ನುವ ಇವುಗಳೇ **(ವಲಂ)** ಅಲ್ಲವೆ? **(ಇಂದ್ರ ಪೂಜೆ)** ದೇವೇಂದ್ರನಿಂದ ಪೂಜೆಗೊಳ್ಳುವ ಗೌರವ, **(ಭುವನ ಸ್ತುತಮಪ್ಪ ನೆಗಟ್ಟೆ)** [ಇಡೀ] ಲೋಕವೇ ಸ್ತುತಿಸುವಂತಹ ಪ್ರಸಿದ್ಧಿ [ಮತ್ತು] **(ಮುಕ್ತಿ ಸಂಭವಿಸುವ ಲಾಭಂ)** ಮೋಕ್ಷಪದ ಪ್ರಾಪ್ತವಾಗುವ ಲಾಭ **(ಎಂಬಿವೆ)** ಎಂಬ ಇವುಗಳೆಲ್ಲವೂ **(ಜಿನೇಂದ್ರ ಗುಣಸ್ತುತಿಯಿಂದೆ)** ತೀರ್ಥಂಕರರ ಗುಣಗಳ ಕೊಂಡಾಡುವಿಕೆಯಿಂದ [ಗುಣಗಳ ಆರಾಧನೆಯಿಂದ] **(ತಾಮೆ ಸಾರವೆ)** ತಮ್ಮಷ್ಟಕ್ಕೆ ತಾವೇ [ನಮಗೆ] ಲಭಿಸುವುದಿಲ್ಲವೇ? [ಎಂದಮೇಲೆ] **(ಪೆಱರೀವುದೇಂ=ಪೆಱರ್+ಈವುದು+ಏಂ)** ಇತರರು ಏನು ಕೊಡುವರು? **(ಪೆಱರ ಮಾಡುವುದೇಂ[=ಮಾಡುವುದು+ಏಂ])** ಇತರರು ಏನು ಮಾಡುವರು? **(ಪೆಱರಿಂದವಪ್ಪುದೇಂ= ಪೆಱರಿಂದಂ+ಅಪ್ಪುದು+ಏಂ)** ಇತರರಿಂದ ಏನು ಆಗುವುದು? ೧-೩೬

ಕವಿಯು, ಈ ಆದಿಪುರಾಣ ಕಾವ್ಯವನ್ನು ರಚಿಸುವುದರಿಂದ ತಾನು ಅಪೇಕ್ಷಿಸುವ ಫಲಗಳೇನು ಎಂಬುದನ್ನು ತಿಳಿಸಿರುವನು.

ಭಾವಾರ್ಥ: ಲೋಕದಲ್ಲಿ ಸಾಮಾನ್ಯವಾಗಿ ಕವಿಯೊಬ್ಬನು ತಾನು ತನ್ನ ಕಾವ್ಯ ರಚನೆಯಿಂದ ಬಯಸುವ ಫಲಗಳೇನು? ಎಂಬುದನ್ನು ಪಂಪನು ತಿಳಿಸಿರುವನು. ಪೂಜೆ, ಹೊಗಳಿಕೆ, ಧನಲಾಭ. ಇವುಗಳನ್ನಲ್ಲವೇ ಕವಿಯೊಬ್ಬನು ಅಪೇಕ್ಷಿಸುವುದು? ಆದರೆ, ಜಿನೇಂದ್ರರ ಗುಣಗಳ ಕೊಂಡಾಡುವಿಕೆಯಿಂದ ಅಂದರೆ, ಈ ಆದಿಪುರಾಣವನ್ನು ರಚಿಸುವುದರಿಂದ ಇಂದ್ರನಿಂದಲೇ ಪೂಜೆಗೊಳ್ಳುದು, ಇಡೀ ಜಗತ್ತಿನಿಂದಲೇ ಸ್ತುತಿಗೊಳ್ಳುವಿಕೆ, ಮೋಕ್ಷಪದ ಉಂಟಾಗುವ ಲಾಭ ಇವುಗಳು ತಮ್ಮಷ್ಟಕ್ಕೆ ತಾವೇ ಲಭಿಸುವುವಲ್ಲವೇ? [ಅಂದರೆ, ತೀರ್ಥಂಕರಪದವೇ ಪ್ರಾಪ್ತವಾಗುತ್ತದೆ] ಎಂದಮೇಲೆ ಬೇರೆಯವರು ಕೊಡುವುದೇನು? ಇತರರು ಮಾಡುವುದೇನು? ಇತರರಿಂದ ಆಗುವುದೇನು? ಆಗುವುದೇನೂ ಇಲ್ಲ ಎಂಬುದು ಪಂಪನ ಅಚಲವಾದ ನಂಬಿಕೆ. ೧-೩೬

ವಿಶೇಷ ವಿವರಣೆ: ಕವಿಯು ಕಾವ್ಯ ರಚನೆಯಿಂದ ಅಪೇಕ್ಷಿಸುವ ಫಲಗಳೇನು ಎಂಬುದನ್ನು ಪಂಪನು ಈ ಪದ್ಯದಲ್ಲಿ ಮನೋಜ್ಞವಾಗಿ ವರ್ಣಿಸಿದ್ದಾನೆ. ಇಂದ್ರಪೂಜೆ, ಭುವನಸ್ತುತಮಪ್ಪನೆಗಟ್ಟೆ, ಮುಕ್ತಿಸಂಭವಿಸುವಲಾಭಂ ಈ ಮೂರೂ ವಿಶೇಷಣಗಳೂ ಒಟ್ಟಿಗೆ ಸೇರಿ ತೀರ್ಥಂಕರಪದವನ್ನು ಸೂಚಿಸುತ್ತದೆ. ಇಲ್ಲಿ ಇಂದ್ರಪೂಜೆಯೆಂದರೆ ಪಂಚಕಲ್ಯಾಣಕಗಳು. ಪಂಪನು ವಿನಯಶೀಲನಷ್ಟೇ ಅಲ್ಲ. ಅವನು ಅಭಿಮಾನಧನ. ಹಿಂದಿನ ಎರಡು ಪದ್ಯಗಳಲ್ಲಿ ತನ್ನ ವಿನಯವನ್ನು ಮೆರೆದಿದ್ದರೆ, ಈ ಪದ್ಯದಲ್ಲಿ ತನ್ನ ಆತ್ಮಾಭಿಮಾನವನ್ನು ತೋರ್ಪಡಿಸಿಕೊಂಡಿದ್ದಾನೆ. ಅಲ್ಲದೆ ಜಿನೇಂದ್ರರ ಗುಣಸ್ತುತಿಯೇ ಜಗತ್ತಿನಲ್ಲಿ ಸರ್ವೋತ್ಕೃಷ್ಟವಾದದ್ದು ಎಂಬುದನ್ನೂ ತಿಳಿಸಿದ್ದಾನೆ.

ಮತ್ತೇಭ ವಿಕ್ರೀಡಿತ

ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊಱಲ್ದೆತ್ತಾನು[1]ಮೋರೊರ್ಮೆ ಚಿಂ
ತಿಸಿದೊಂಗಂ ಪವಣಿಲ್ಲ ಪುಣ್ಯಮೆನೆ ಪೂಣ್ದೊಳ್ಪಿಂದಮೋರಂತೆ ಭಾ
ವಿಸಿ ತಾಂ[2] ತನ್ಮಯನಾಗಿ ತಚ್ಚರಿತಮಂ ಕಾವ್ಯಂಗಳೊಳ್ಕೂಡೆ ಬಂ
ಣಿಸಿ[3] ಪೇೞ್ದಾತನ ಕರ್ಮನಿರ್ಜರೆಯನಂತಿಂತುಂತೆನಲ್ಬರ್ಕುಮೇ ॥ ೧–೩೭

ಪದ ವಿಭಾಗ: ಪೆಸರ್ಗೊಂಡ, ಇಂದ್ರ–ನರೇಂದ್ರ–ವಂದ್ಯನನ್, ಒಱಲ್ದು, ಎತ್ತಾನುಂ, ಓರೊರ್ಮೆ,
ಚಿಂತಿಸಿದೊಂಗಂ, ಪವಣಿಲ್ಲ–ಪುಣ್ಯಮೆನೆ, ಪೂಣ್ದು, ಒಳ್ಪಿಂದಂ, ಓರಂತೆ–ಭಾವಿಸಿ,
ತಾಂ, ತನ್ಮಯನಾಗಿ, ತಚ್ಚರಿತಮಂ, ಕಾವ್ಯಂಗಳೊಳ್, ಕೂಡೆ, ಬಂಣಿಸಿ,
ಪೇೞ್ದಾತನ, ಕರ್ಮ–ನಿರ್ಜರೆಯನ್, ಅಂತಿಂತುಂತು, ಎನಲ್, ಬರ್ಕುಮೇ ॥ ೧–೩೭

ಅನ್ವಯಾರ್ಥ: **(ಪೆಸರ್ಗೊಂಡಿಂದ್ರನರೇಂದ್ರವಂದ್ಯನನ್=ಪೆಸರ್ಗೊಂಡ+ಇಂದ್ರ–ನರೇಂದ್ರ–ವಂದ್ಯನನ್)** ಪ್ರಖ್ಯಾತರಾದ ಇಂದ್ರರಿಂದಲೂ ಚಕ್ರವರ್ತಿಗಳಿಂದಲೂ ನಮಸ್ಕರಿಸಲ್ಪಡುವವನಾದ ವೃಷಭ ತೀರ್ಥಂಕರರನ್ನು **(ಒಱಲ್ದು)** ಪ್ರೀತಿಯಿಂದ [ಭಕ್ತಿಯಿಂದ(?)] **(ಎತ್ತಾನುಂ)** ಎಲ್ಲಿಯಾದರೂ **(ಓರೊರ್ಮೆ)** ಒಂದೊಂದು ಸಲ **(ಚಿಂತಿಸಿದೊಂಗಂ)** ಧ್ಯಾನಿಸಿದವನಿಗೂ **(ಪವಣಿಲ್ಲ)** ಅಸದಳವಾದ [ಅಪರಿಮಿತ] **(ಪುಣ್ಯಮೆನೆ=ಪುಣ್ಯಂ+ಎನೆ)** ಪುಣ್ಯವು [ಲಭಿಸುತ್ತದೆ] ಎಂದಮೇಲೆ, **(ಪೂಣ್ದು)** ವ್ರತವನ್ನು ಸ್ವೀಕರಿಸಿ **(ಒಳ್ಪಿಂದಂ<ಒಳ್ಪಾಗು)** ಮನಸ್ಸಿನಾಳದಿಂದ **(ಓರಂತೆ ಭಾವಿಸಿ)** ಒಂದೇ ಸಮನೆ ಭಾವಿಸಿ, **(ತಾಂ ತನ್ಮಯನಾಗಿ)** ತಾನು ಸಂಪೂರ್ಣವಾಗಿ ತಲ್ಲೀನನಾಗಿ [ತಾದಾತ್ಮ್ಯದಿಂದ] **(ತಚ್ಚರಿತಮಂ=ತತ್+ಚರಿತಮಂ)** ಆ ಪುರುದೇವನ ಚರಿತೆಯನ್ನು **(ಕಾವ್ಯಂಗಳೊಳ್ಕೂಡೆ=ಕಾವ್ಯಂಗಳೊಳ್+ಕೂಡೆ)** ಕಾವ್ಯಗಳಲ್ಲಿ ಹೊಂದಿಕೊಳ್ಳುವ ಹಾಗೆ **(ಬಂಣಿಸಿ)** ವರ್ಣಿಸಿ **(ಪೇೞ್ದಾತನ)** ಹೇಳಿದಾತನ **(ಕರ್ಮ ನಿರ್ಜರೆಯನ್)** ಕರ್ಮಕ್ಷಯವಾಗುವುದನ್ನು **(ಅಂತಿಂತುಂತು=ಅಂತು+ಇಂತು+ಉಂತು)** ಹಾಗೆ ಹೀಗೆ ಹೇಗೆಹೇಗೋ **(ಎನಲ್ಬರ್ಕುಮೆ=ಎನಲ್+ಬರ್ಕುಮೇ)** ಎನ್ನಲು ಬರುವುದೇ!! [ಎಂದು ಸಂದೇಹಿಸಲು ಸಾಧ್ಯವೇ!! ಖಂಡಿತ ಕರ್ಮ ನಿರ್ಜರೆಯಾಗುತ್ತದೆ] ॥ ೧–೩೭

ಭಾವಾರ್ಥ: ವೃಷಭ ತೀರ್ಥಂಕರರನ್ನು ಭಕ್ತಿಯಿಂದ ಎಲ್ಲಿಯಾದರೂ ಒಂದೊಂದು ಸಲ ಧ್ಯಾನಿಸಿದವನಿಗೂ ಅಸದಳವಾದ ಪುಣ್ಯವು ಲಭಿಸುತ್ತದೆ ಎಂದಮೇಲೆ, ವ್ರತವನ್ನು ಕೈಗೊಂಡು, ಅದರಲ್ಲೇ ಮನಸ್ಸುಳ್ಳವನಾಗಿ, ಒಂದೇ ಸಮನೆ ಭಾವಿಸಿ ತಾನು ಸಂಪೂರ್ಣವಾಗಿ ಕಾವ್ಯರಚನೆಯಲ್ಲಿ ಮುಳುಗಿದವನಾಗಿ ಆ ಪುರುದೇವನ ಚರಿತೆಯನ್ನು ಕವಿತೆಗಳೊಳಗೆ ಹೊಂದಿಕೊಳ್ಳುವ ಹಾಗೆ ವರ್ಣಿಸಿ ಹೇಳಿದಾತನ ಕರ್ಮಕ್ಷಯವಾಗುವುದರಲ್ಲಿ ಸಂದೇಹವಿಲ್ಲ ಎಂದು ಕವಿಯು ಹೇಳುತ್ತಾನೆ. ೧–೩೭

ವಿಶೇಷ ವಿವರಣೆ: ಬುಧಸಮೂಹವು [ಪಂಡಿತ ವರ್ಗವು] ಪಂಪನನ್ನು, ಆದಿತೀರ್ಥಂಕರನಾದ ಪುರುದೇವನ ಚರಿತೆಯನ್ನು ಹೇಳೆಂದು ಕೇಳಿತು. ಇಂತಹ ಶ್ರೇಯಸ್ಕರವಾದ ವೃಷಭನಾಥನ ಕಥೆಯನ್ನು ಹೇಗೆಂದರೆಹಾಗೆ ಹೇಳಲಾದೀತೆ? ಮನೋವಾಕ್ಕಾಯಗಳ ಸಿದ್ಧತೆ ಇರದಿದ್ದರೆ, ಆ ಕಥಾನಕದಲ್ಲಿ ಪೂಜ್ಯಬುದ್ಧಿ ಉಂಟಾಗಿ ಮೋಕ್ಷಫಲ ಪ್ರಾಪ್ತವಾಗುವುದಾದರೂ ಹೇಗೆ? ಹೀಗಾಗಿ, ಈ ಕಾವ್ಯ ರಚನೆಗೆ ತೊಡಗಿದಾಗಿನಿಂದ ಪಂಪನು ಪ್ರತಿಜ್ಞಾಬದ್ಧನಾಗಿದ್ದಾನೆ (ವ್ರತ–ನಿಯಮಾದಿಗಳನ್ನು ಕೈಗೊಂಡು ನೇಮನಿಷ್ಠನಾಗಿದ್ದಾನೆ). ಕಾಯ, ವಾಚ, ಮನಸಾ ತ್ರಿಕರಣಪೂರ್ವಕ ಶುದ್ಧನಾಗಿದ್ದಾನೆ. ಜಿನೇಂದ್ರ ಭಗವಂತರಲ್ಲಿ ಏಕಾಗ್ರತೆ ಸಾಧಿಸಿದ್ದಾನೆ. ಜಿನೇಂದ್ರರನ್ನು ಭಾವಿಸಿ ತನ್ಮಯನಾಗಿ ಪುರುದೇವನ ಚರಿತೆಯನ್ನು ಕಾವ್ಯದಲ್ಲಿ ಅಳವಡಿಸಿದ್ದಾನೆ. ಹೀಗೆ ಕವಿಯು ಈ ಮಹಾಕಾವ್ಯ

---

[1] **‘ಎತ್ತಾನುಂ=ಎತ್ತ+ಆನುಂ’**–ಶಬ್ದಮಣಿದರ್ಪಣ, ೮. ಅವ್ಯಯ ಪ್ರಕರಣಂ, ‘ಆನುಮೆನಿಪ್ಪವ್ಯಯಮಂ । ಸ್ಥಾನದಿಶಾಕಾಲ ಸಂಖ್ಯೆಗಳೊಳು ಸಿರ್ವರ್ ಮ ॥ ತ್ತೇನುಮೆನಿಪ್ಪರ್ಥಮನಿರ । ದಾನಿಪರಣಮಾಣಮೆಂದು ನುಡಿವವ್ಯಯದೊಳ್’ ಸೂತ್ರಂ, [೩೦೩, ಸಂ.: ಕಸಾಪ; ೩೧೮, ಸಂ.: ಡಿಎಲ್ಎನ್], ಸ್ಥಳಕ್ಕೆ–ಎಲ್ಲಿ(?)[ಷ್ಟ] ಯಾನುಂ; **ದೆಸೆಗೆ–ಎತ್ತಾನುಂ;** ಕಾಲಕ್ಕೆ–ಎಂದಾನುಂ; ಸಂಖ್ಯೆಗೆ–ಒಂದಾನುಂ, ಎರಡಾನುಂ, ಪತ್ತಾನುಂ ನೂಱಾನುಂ; ಅಣಕ್ಕೆ–ಕಾರ್ಯಮಣಮಿಲ್ಲ; ಆಣಕ್ಕೆ–ಗುಣಮಾಣಮಿಲ್ಲ ಎನಲೊಡಂ ಏನುಮಿಲ್ಲೆಂದಱುವುದು.

[2] ಮೂಲಪಾಠ ಮತ್ತು ಕೆಜಿ ಯವರ ಪಾಠ–‘ತಾಂ’, ಕನ್ನಡ ಕೈಪಿಡಿ, ಸಂಪುಟ–೨, IV. ಜೈನ ಕವಿಗಳು, ಪುಟ ೪೪೩ ರಲ್ಲಿರುವ ಪಾಠ–‘ತಾನ್’, ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ–‘ಬಂಣಿಸಿ’, ಕೆಜಿ ಯವರ ಪಾಠ–‘ಬಣ್ಣಿಸಿ’ಕನ್ನಡ ಕೈಪಿಡಿ, ಸಂಪುಟ–೨, IV. ಜೈನ ಕವಿಗಳು, ಪುಟ ೪೪೩ ರಲ್ಲಿರುವ ಪಾಠ–‘ಬಣ್ಣಿಸಿ’, ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ವನ್ನು ಹೇಳುವವರಿಗೂ, ಕೇಳುವವರಿಗೂ ಭಗವಂತನಲ್ಲಿ ಶ್ರದ್ಧೆಯುಂಟಾಗುವಂತೆ ಮಾಡಲು ಅಂತರಂಗ-ಬಹಿರಂಗಗಳನ್ನು ಅಣಿಗೊಳಿಸಿಕೊಂಡಿರುತ್ತಾನೆ. ಎಲ್ಲಿಯಾದರೊಮ್ಮೆ ಭಕ್ತಿಯಿಂದ ಜಿನೇಂದ್ರರನ್ನು ಧ್ಯಾನಿಸಿದವನಿಗೇ ಎಣೆಯಿಲ್ಲದ ಪುಣ್ಯ ಲಭ್ಯವಾಗುತ್ತದೆ ಎಂದಮೇಲೆ, ಅಪರಿಮಿತ ಶ್ರದ್ಧೆಯಿಂದ ಕಾವ್ಯರಚನೆ ಮಾಡುತ್ತಿರುವ ತನಗೆ ಕರ್ಮಕ್ಷಯವಾಗುವುದರಲ್ಲಿ ಸಂದೇಹವೇ ಇಲ್ಲ ಎನ್ನುವುದು ಕವಿಯ ಅಚಲವಾದ ನಂಬಿಕೆ. ೧-೩೭

ಕಂದ **ಇದುವೆ ಸುಕವಿಪ್ರಮೋದ**
ಪ್ರದಮಿದುವೆ ಸಮಸ್ತಭವ್ಯಲೋಕಪ್ರಮುದ[1]
ಪ್ರದವೆನೆ ನೆಗಟ್ದಾದಿಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ॥ **೧-೩೮**

ಪದ ವಿಭಾಗ: ಇದುವೆ-ಸುಕವಿ-ಪ್ರಮೋದ-ಪ್ರದಂ;
ಇದುವೆ-ಸಮಸ್ತ-ಭವ್ಯ-ಲೋಕ-ಪ್ರಮದ-ಪ್ರದಂ;
ಎನೆ, ನೆಗಟ್ದ, ಆದಿಪುರಾಣದೊಳ್,
ಅಱಿವುದು-ಕಾವ್ಯಧರ್ಮಮಂ-ಧರ್ಮಮುಮಂ ॥ ೧-೩೮

ಅನ್ವಯಾರ್ಥ: "**(ಇದುವೆ)** ಇದೆಯೇ [ಈ ಆದಿಪುರಾಣ ಕಾವ್ಯವು] **(ಸುಕವಿ)** ಒಳ್ಳೆಯ ಕವಿಗಳಿಗೆ **(ಪ್ರಮೋದಪ್ರದಂ)** ರಸಾನಂದವನ್ನು ಕೊಡುವುದು. **(ಇದುವೆ)** ಇದೆಯೇ [ಈ ಪುರುದೇವ ಚರಿತೆಯು] **(ಸಮಸ್ತ)** ಸಕಲ **(ಭವ್ಯಲೋಕ)** ಮುಮುಕ್ಷುಗಳ ಸಮೂಹಕ್ಕೆ **(ಪ್ರಮದಪ್ರದಂ)** ಸುಖವನ್ನು ಕೊಡುವುದು" **(ಎನೆ)** ಎಂದು **(ನೆಗಟ್ದ)** ಪ್ರಸಿದ್ಧಿ ಪಡೆದ **(ಆದಿಪುರಾಣದೊಳ್)** ಆದಿಪುರಾಣದಲ್ಲಿ **(ಕಾವ್ಯಧರ್ಮಮಂ)** ಕಾವ್ಯಧರ್ಮವನ್ನೂ [ಹಾಗೂ] **(ಧರ್ಮಮುಮಂ)** [ಜಿನ]ಧರ್ಮವನ್ನೂ [ಈ ಎರಡನ್ನೂ] **(ಅಱಿವುದು)** ತಿಳಿಯಬೇಕು ॥ ೧-೩೮

ತಾನು ರಚಿಸಿರುವ ಆದಿಪುರಾಣ ಕಾವ್ಯದ ವಾಚನದಿಂದ ಏನನ್ನು ತಿಳಿಯಬೇಕು ಎಂಬುದನ್ನು ಕವಿಯು ಈ ಪದ್ಯದಲ್ಲಿ ತಿಳಿಸಿದ್ದಾನೆ.

ಭಾವಾರ್ಥ: "ಈ ಆದಿಪುರಾಣ ಕಾವ್ಯವು ಒಳ್ಳೆಯ ಕವಿಗಳಿಗೆ ರಸಾನುಭವವನ್ನೂ ಹಾಗೆಯೇ ಸಕಲ ಮುಮುಕ್ಷುಗಳ ಸಮೂಹಕ್ಕೆ ಸುಖವನ್ನು ಕೊಡುವುದು" ಎಂಬುದಾಗಿ ಪ್ರಸಿದ್ಧಿ ಪಡೆದ ಈ ಕಾವ್ಯದಿಂದ **ಕಾವ್ಯಧರ್ಮ**ವನ್ನೂ ಹಾಗೂ **[ಜಿನ]ಧರ್ಮ**ವನ್ನೂ ಈ ಎರಡನ್ನೂ ತಿಳಿಯಬೇಕು ಎಂದು ಕವಿಯು ಹೇಳಿದ್ದಾನೆ. ೧-೩೮

ವಿಶೇಷ ವಿವರಣೆ: ನೆಗಟ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ: ಇದರ ಹೆಚ್ಚಿನ ವಿವರಣೆಗೆ ಆಶ್ವಾಸದ ಕೊನೆಯಲ್ಲಿ **ಕಾವ್ಯಧರ್ಮ (ಕಾವ್ಯಗುಣ)** ಇದರಡಿ ನೀಡಿರುವ ಟಿಪ್ಪಣಿಯನ್ನು ನೋಡಿರಿ.

ಮತ್ತೇಭ **ನೆಱವಂ ತಾಳ್ದಿದಪಾಸ್ತದುರ್ನಯತಮೋಬಂಧಂ ಶ್ರುತಸ್ಕಂಧಮಾ**
ವಿಕ್ರೀಡಿತ **ದಱಿವಿಂದಂ ಗಣನಾಯಕರ್ಸಮಱೆ ಭವ್ಯಶ್ರೇಣಿಗವ್ಯಾಜದಿಂ**
ದಱಿಯಲ್ನಾಲ್ಕನುಯೋಗಮಾದುದದಱೊಳ್ಪೂರ್ವಾನುಯೋಗಾಬ್ಧಿಯಿಂ[2]
ಪೊಱಪೊಣ್ಮುತ್ತದು ವೇಳೆಯಂತೆ ಕಥೆ ಲಂಬೋದ್ದಾಮವೀಚೀಚಯಂ ॥ **೧-೩೯**

ಪದ ವಿಭಾಗ: ನೆಱವಂ-ತಾಳ್ದಿದ, ಅಪಾಸ್ತ-ದುರ್ನಯ-ತಮೋ-ಬಂಧಂ, ಶ್ರುತಸ್ಕಂಧಂ,
ಆದಱಿವಿಂದಂ, ಗಣನಾಯಕರ್, ಸಮಱೆ, ಭವ್ಯ-ಶ್ರೇಣಿಗೆ, ಅವ್ಯಾಜದಿಂದ, ಅಱಿಯಲ್,

---

[1] ಮೂಲಪಾಠ-'ಪ್ರಮದ', ಕೆಜಿ ಯವರ ಪಾಠ ಮತ್ತು ಕನ್ನಡ ಕೈಪಿಡಿ, ಸಂಪುಟ-೨, IV. ಜೈನ ಕವಿಗಳು, ಪುಟ ೪೪೫ ರಲ್ಲಿರುವ ಪಾಠ-'ಪ್ರಮುದ', ಇಲ್ಲಿ ಮೂಲಪಾಠನ್ನು ಸ್ವೀಕರಿಸಿದೆ.

[2] ಮೂಲಪಾಠ (ಎಸ್.ಜಿ.ಎನ್.) ಮತ್ತು ಕೆಜಿ ಯವರ ಪಾಠ-'ಯಂ', ಆದರೆ, ಎಸ್.ಜಿ. ನರಸಿಂಹಾಚಾರ್ಯರ ಗ್ರಂಥದ ಅಡಿಟಿಪ್ಪಣಿಯಲ್ಲಿ 'ಕ.-ಯಿಂ' (ಕ ಪ್ರತಿಯಲ್ಲಿ 'ಯಿಂ' ಎಂದು ಇರುತ್ತದೆ) ಎಂದು ಪಾಠಭೇದವನ್ನು ಸೂಚಿಸಿರುತ್ತಾರೆ. ಕೆಜಿ ಯವರ ಗ್ರಂಥದಲ್ಲಿ ಪಾಠಭೇದವನ್ನು ಸೂಚಿಸಿರುವುದಿಲ್ಲ. ಹಾಗೆಯೇ ಕ.ಸಾ.ಪ. ನಿಘಂಟುವಿನ ಆನೆಯ ಸಂಪುಟದ ೮೦೨೨ನೆಯ ಪುಟದಲ್ಲಿ 'ವೇಲೆ, ವೇಳೆ' ಪದಕ್ಕೆ ಅರ್ಥವನ್ನು ನೀಡುವಾಗ ಉದಾಹರಣೆಯಾಗಿ ಈ ವಾಕ್ಯವನ್ನೇ ಉದ್ಧರಿಸಿದ್ದು, ಅದರಲ್ಲಿ 'ಯಿಂ' ರೂಪವೇ ಇರುತ್ತದೆ. ಪದ್ಯದ ಸಂದರ್ಭಕ್ಕೆ 'ಯಿಂ' ರೂಪವು ಸೂಕ್ತವಾಗಿರುವುದರಿಂದ ಆಕರ ಗ್ರಂಥದ ಅಡಿಟಪ್ಪಣಿಯ ಪಾಠಭೇದದಲ್ಲಿರುವ 'ಕ.-ಯಿಂ' ಪಾಠವನ್ನು ಸ್ವೀಕರಿಸಿದೆ.

ನಾಲ್ಕನುಯೋಗಂ, ಆದುದು, ಅದರೊಳ್, ಪೂರ್ವಾನುಯೋಗ, ಅಬ್ಧಿಯಿಂ,
ಪೊಱಪೊಣ್ಮಿತ್ತದು, ವೇಳೆಯಂತೆ, ಕಥೆ, ಲಂಬೋದ್ದಾಮ, ವೀಚೀಚಯಂ ॥ ೧–೩೯

ಅನ್ವಯಾರ್ಥ: (ಶ್ರುತಸ್ಕಂಧಂ) ಶ್ರುತಸ್ಕಂಧವು [ಅಂಗಪ್ರವಿಷ್ಟದ ಹನ್ನೊಂದು ಅಂಗ ಮತ್ತು ಹದಿನಾಲ್ಕು ಪೂರ್ವಗಳು, ದೃಷ್ಟಿವಾದಾಂಗದ ಪರಿಕರ್ಮಾದಿ ಐದು ವಿಧಗಳು, ಇವುಗಳಿಂದ ಕೂಡಿದ ದ್ವಾದಶಾಂಗಶ್ರುತದ ಸಂಪೂರ್ಣವಾದ ಜ್ಞಾನವು], **(ನೆಱವಂ ತಾಳ್ದಿದ)** [ಕೇವಲ] ಚಮತ್ಕಾರಗಳಿಂದ ಕೂಡಿದ **(ದುರ್ನಯ ತಮೋಬಂಧಂ)** ಕುಮತವೆಂಬ [ಮಿಥ್ಯಾತ್ವವೆಂಬ] ಅಜ್ಞಾನದ ಕಟ್ಟನ್ನು [ಬಂಧವನ್ನು] **(ಅಪಾಸ್ತ)** ಹೋಗಲಾಡಿಸಿದೆ. **(ಆದಱಿವಿಂದಂ=ಆದ+ಅಱಿವಿಂದಂ)** ತಮಗೆ ಪ್ರಾಪ್ತವಾದ ಕೇವಲಜ್ಞಾನದಿಂದ [ಜಿನೇಂದ್ರರ ವಾಣಿಯನ್ನು] **(ಗಣನಾಯಕರ್ಸಮಱಿ=ಗಣನಾಯಕರ್+ಸಮಱಿ)** ಮುನಿಗಣಕ್ಕೆ ನಾಯಕರಾದ ಗಣಧರರು ಓರಣಗೊಳಿಸಿ [ವ್ಯವಸ್ಥಿತವಾಗಿ ವಿಷಯಾನುಕ್ರಮದಲ್ಲಿ ವಿಂಗಡಿಸಿ] **(ಭವ್ಯ ಶ್ರೇಣಿಗೆ)** ಭವ್ಯರ [ಮುಮುಕ್ಷುಗಳ] ಸಮೂಹಕ್ಕೆ **(ಅವ್ಯಾಜದಿಂದಱಿಯಲ್=ಅವ್ಯಾಜದಿಂದ+ಅಱಿಯಲ್)** ಸರಳವಾದ [ವರ್ಗೀಕರಣ ವಿಧಾನದಿಂದ] ಬೋಧಿಸಲಾಗಿ **(ನಾಲ್ಕನುಯೋಗಮಾದುದು=ನಾಲ್ಕು+ಅನುಯೋಗಂ+ಆದುದು)** ನಾಲ್ಕು ಅನುಯೋಗಗಳು ಉಂಟಾದುವು. **(ಅದರೊಳ್)** ಅದರಲ್ಲಿ **(ಪೂರ್ವಾನುಯೋಗಾಬ್ಧಿಯಂ=ಪೂರ್ವಾನುಯೋಗ+ಅಬ್ಧಿಯಿಂ)** ಪೂರ್ವಾನುಯೋಗ [ಪ್ರಥಮಾನುಯೋಗ] ವೆಂಬ ಸಮುದ್ರದಿಂದ **(ಲಂಬೋದ್ದಾಮ=ಲಂಬ+ಉದ್ದಾಮ)** ದೀರ್ಘವಾದ [ಮತ್ತು] ಉನ್ನತವಾದ **(ವೀಚೀಚಯಂ)** ಅಲೆಗಳ ಸಮೂಹವು [ತರಂಗಮಾಲೆಗಳು] **(ವೇಳೆಯಂತೆ)** ಉಕ್ಕಿ ಹರಿಯುವಂತೆ, **(ಕಥೆ)** ತ್ರಿಷಷ್ಟಿ ಶಲಾಕಾಪುರುಷರ ಕಥೆಗಳು **(ಪೊಱಪೊಣ್ಮಿತ್ತದು)** ಹೊರಹೊಮ್ಮಿದ್ದಿತು ॥ ೧–೩೯

ಈ ವೃತ್ತಪದ್ಯದಲ್ಲಿ ಮಹಾಪುರಾಣದಲ್ಲಿರುವ ವಸ್ತುವಿನ ಆಕರವನ್ನು ವಿವರಿಸಿರುವನು.

ಭಾವಾರ್ಥ: ಶ್ರುತಸ್ಕಂಧವು, ಕೇವಲ ಚಮತ್ಕಾರಗಳಿಂದ ಕೂಡಿದ ಮಿಥ್ಯಾತ್ವವೆಂಬ ಅಜ್ಞಾನವನ್ನು ಹೋಗಲಾಡಿಸಿದೆ. ಗಣಧರರು ತಮಗೆ ಪ್ರಾಪ್ತವಾಗಿದ್ದ ಕೇವಲಜ್ಞಾನದಿಂದ ಭವ್ಯಸಮೂಹಕ್ಕೆ ಸರಳವಾದ ವರ್ಗೀಕರಣ ವಿಧಾನದಿಂದ ಜಿನವಾಣಿಯನ್ನು ನಾಲ್ಕು ಅನುಯೋಗಗಳನ್ನಾಗಿ ವಿಂಗಡಿಸಿ ಬೋಧಿಸಿದರು. ಈ ಅನುಯೋಗಗಳಲ್ಲಿ ಮೊದಲನೆಯದಾದ ಪೂರ್ವಾನುಯೋಗ ಅಥವಾ ಪ್ರಥಮಾನುಯೋಗದಿಂದ ತ್ರಿಷಷ್ಟಿ ಶಲಾಕಾಪುರುಷರ ಕಥೆಗಳು ಹೊರಹೊಮ್ಮಿದವು. ೧–೩೯

ವಿಶೇಷ ವಿವರಣೆ: ಈ ಪದ್ಯದಲ್ಲಿ ಕವಿಯು, **'ಜಿನವಾಣಿಯನ್ನು'** ಅಥವಾ **'ಶ್ರುತಸ್ಕಂಧ'**ವನ್ನು ನಾಲ್ಕು ಅನುಯೋಗಗಳಾಗಿ ವಿಭಾಗಿಸಲ್ಪಟ್ಟ ಉದ್ದೇಶವನ್ನು ಹೇಳುತ್ತಾನೆ. ಆ ನಾಲ್ಕು ಅನುಯೋಗಗಳಲ್ಲಿ ಮೊದಲನೆಯದು **'ಪ್ರಥಮಾನುಯೋಗ'**. **'ಪ್ರಥಮ'** ಎನ್ನುವ ಪದ ಇಲ್ಲಿ ಸಂಖ್ಯಾವಾಚಕವಾಗಿರುವುದಿಲ್ಲ. **'ಪ್ರಥಮ'** ಎಂದರೆ **ಹಿಂದಿನದು, ಪೂರ್ವದ್ದು** ಎಂದು ಅರ್ಥ. ಎಂದರೆ ಹಿಂದೆ ನಡೆದುದು ಅಥವಾ ಪೂರ್ವದಲ್ಲಿ ನಡೆದುದು. ಆದುದರಿಂದ ಪಂಪನು ಇಲ್ಲಿ **'ಪ್ರಥಮಾನುಯೋಗ'**ವನ್ನು ಅದರ ಪರ್ಯಾಯ ಪದವಾದ **'ಪೂರ್ವಾನುಯೋಗ'** ಎಂಬ ಹೆಸರಿನಿಂದ ಕರೆಯುತ್ತಾನೆ. **ಪ್ರಥಮಾನುಯೋಗ**ವು ಅಥವಾ **ಪೂರ್ವಾನುಯೋಗ**ವು ತ್ರಿಷಷ್ಟಿಶಲಾಕಾಪುರುಷರ ಕಥೆಗಳನ್ನು ಒಳಗೊಂಡಿರುವ ಶ್ರುತಸ್ಕಂಧದ ಭಾಗವಾಗಿರುತ್ತದೆ. ಶ್ರೀ ಜಿನಸೇನಾಚಾರ್ಯರು ಮತ್ತು ಶ್ರೀ ಗುಣಭದ್ರಾಚಾರ್ಯರಿಂದ ರಚಿತವಾಗಿರುವ **ಮಹಾಪುರಾಣ**ವು ಪ್ರಥಮಾನುಯೋಗಕ್ಕೆ ಸೇರಿದ್ದು, ಅದರಲ್ಲಿ ಆದಿತೀರ್ಥಂಕರರ ಕಥೆಯನ್ನು ಹೇಳುವ **ಪೂರ್ವಪುರಾಣ** ಮತ್ತು ಉಳಿದ ಇಪ್ಪತ್ತಮೂರು ತೀರ್ಥಂಕರರ ಹಾಗೂ ೩೯ ಶಲಾಕಾಪುರುಷರ ಕಥೆಯನ್ನೊಳಗೊಂಡ **ಉತ್ತರಪುರಾಣ**ಗಳೆಂದು ಎರಡು ಭಾಗಗಳಿರುತ್ತವೆ. **ತ್ರಿಷಷ್ಟಿಶಲಾಕಾಪುರುಷರ** ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಅರವತ್ತಮೂರು (೬೩)–ತಿಷಷ್ಟಿಶಲಾಕಾಪುರುಷರ ಶುಭನಾಮಾವಳಿಗಳು** ಇದನ್ನು ನೋಡಿರಿ. ಹಾಗೆಯೇ **ಶ್ರುತಜ್ಞಾನದ ಭೇದ**ಗಳ ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಇಪ್ಪತ್ತೈದು (೨೫)–ಉಪಾಧ್ಯಾಯ ಪರಮೇಷ್ಠಿಗಳ ಮೂಲಗುಣಗಳು** ಇದರಲ್ಲಿ **ಶ್ರುತಜ್ಞಾನದ ಭೇದಗಳು** ಇದನ್ನು ನೋಡಿರಿ.

ಉತ್ಪಲಮಾಲೆ **ಪಾಪಹರಂ ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ ಮಹಾ**
ಷ್ಟಾಪದಶೈಲದೊಳ್ವಿಜಿತಘಾತಿಚತುಷ್ಟಯನತ್ಯುದಾರರಾ
ಗೋಪನತಾಮರೇಂದ್ರದನುಜೇಂದ್ರನರೇಂದ್ರಪದಂ ಸಮಸ್ತ ವಿ
ದ್ಯಾಪತಿ ನಾಭಿನಂದನನುಪಾಶ್ರಿತಭವ್ಯಜನಾಭಿನಂದನಂ ॥ ೧-೪೦

ಪದ ವಿಭಾಗ: ಪಾಪಹರಂ, ಪ್ರಕಾಶಿತವೃಷಂ, ವೃಷಭಂ, ವೃಷಧ್ವಜಂ,
ಮಹಾಅಷ್ಟಾಪದ-ಶೈಲದೊಳ್, ವಿಜಿತ-ಘಾತಿಚತುಷ್ಟಯನ್, ಅತ್ಯುದಾರ-ರಾಗ,
ಉಪನತ, ಅಮರೇಂದ್ರ-ದನುಜೇಂದ್ರ-ನರೇಂದ್ರ, ಪದಂ, ಸಮಸ್ತ-
ವಿದ್ಯಾಪತಿ, ನಾಭಿನಂದನನ್, ಉಪಾಶ್ರಿತ-ಭವ್ಯಜನಾಭಿನಂದನಂ ॥ ೧-೪೦

ಅನ್ವಯಾರ್ಥ: (ಪಾಪಹರಂ) ಪಾಪವನ್ನು ನಾಶಮಾಡುವವನೂ, **(ಪ್ರಕಾಶಿತವೃಷಂ)** ಧರ್ಮಪ್ರವರ್ತಕನೂ [ಧರ್ಮವನ್ನು ಪ್ರಭಾವನೆಗೊಳಿಸುವವನೂ], **(ವೃಷಭಂ)** ಅಹಿಂಸಾರೂಪವಾದ ಅಥವಾ ರತ್ನತ್ರಯರೂಪವಾದ ಧರ್ಮದಿಂದ ಶೋಭಿಸುವವನೂ [ಜ್ಞಾನಿಯೂ], **(ವೃಷಧ್ವಜಂ)** ಎತ್ತಿನ ಚಿಹ್ನೆಯ ಧ್ವಜವುಳ್ಳವನೂ [ಧರ್ಮಕ್ಕೆ ಧ್ವಜದಂತಿರುವವನೂ], **(ಮಹಾಷ್ಟಾಪದಶೈಲದೊಳ್=ಮಹಾ+ಅಷ್ಟಾಪದ-ಶೈಲದೊಳ್)** ಶ್ರೇಷ್ಠವಾದ ಅಷ್ಟಾಪದ ಪರ್ವತದಲ್ಲಿ [ಕೈಲಾಸ ಪರ್ವತ ದಲ್ಲಿ] **(ವಿಜಿತ ಘಾತಿಚತುಷ್ಟಯನ್)** ನಾಲ್ಕು ಘಾತಿ ಕರ್ಮಗಳನ್ನು ಜಯಿಸಿದವನೂ [ಕೇವಲಜ್ಞಾನಿಯಾದವನೂ], **(ಅಮರೇಂದ್ರ ದನುಜೇಂದ್ರ ನರೇಂದ್ರ)** ದೇವೇಂದ್ರ [ದೇವಗಣದ ಇಂದ್ರ], ರಾಕ್ಷಸೇಂದ್ರ [ರಾಕ್ಷಸಗಣದ ಇಂದ್ರ], ಚಕ್ರವರ್ತಿ [ಮನುಷ್ಯಗಣದ ಇಂದ್ರ] [ಇವರು] **(ಅತ್ಯುದಾರರಾಗೋಪನತ=ಅತಿ+ಉದಾರ-ರಾಗ+ಉಪನತ)** ಅತ್ಯಂತ ಶ್ರೇಷ್ಠವಾದ ಪ್ರೀತಿಯಿಂದ [ಪ್ರಶಸ್ತರಾಗದಿಂದ] ತಲೆಬಾಗಿ ನಮಸ್ಕರಿಸಿದ **(ಪದಂ)** ಪಾದಗಳುಳ್ಳವನೂ, **(ಸಮಸ್ತ ವಿದ್ಯಾಪತಿ)** ಸಕಲ ವಿದ್ಯೆಗಳಿಗೆ ಒಡೆಯನಾದ ಆತನು **(ನಾಭಿನಂದನನ್)** ನಾಭಿರಾಜನ ಪುತ್ರನೂ, **(ಉಪಾಶ್ರಿತಭವ್ಯಜನಾಭಿನಂದನಂ=ಉಪಾಶ್ರಿತ-ಭವ್ಯಜನ+ಅಭಿನಂದನಂ)** ಆಶ್ರಯಿಸಿದ ಭವ್ಯಜನರನ್ನು ಸಂಪೂರ್ಣವಾಗಿ ಸಂತೋಷಪಡಿಸುವವನು [ಆದಂತಹವನು ಆ ವೃಷಭದೇವನು.] ॥ ೧-೪೦

ಈ ವೃತ್ತಪದ್ಯದಲ್ಲಿ ಕವಿಯು ವೃಷಭದೇವನನ್ನು ಅನೇಕ ವಿಶೇಷಣಗಳೊಂದಿಗೆ ಸ್ತುತಿಸಿದ್ದಾನೆ.

ಭಾವಾರ್ಥ: ಪಾಪವನ್ನು ನಾಶಮಾಡುವವನೂ, ಧರ್ಮವನ್ನು ಪ್ರಭಾವನೆಗೊಳಿಸಿದವನೂ, ಅಹಿಂಸಾರೂಪವಾದ ಅಥವಾ ರತ್ನತ್ರಯರೂಪವಾದ ಧರ್ಮದಿಂದ ಶೋಭಿಸುವವನೂ, ಎತ್ತಿನ ಚಿಹ್ನೆಯ ಧ್ವಜವುಳ್ಳವನೂ, ಶ್ರೇಷ್ಠವಾದ ಅಷ್ಟಾಪದ ಪರ್ವತದಲ್ಲಿ [ಕೈಲಾಸ ಪರ್ವತದಲ್ಲಿ] ನಾಲ್ಕು ಘಾತಿಕರ್ಮಗಳನ್ನು ಜಯಿಸಿದವನೂ, ದೇವೇಂದ್ರ, ರಾಕ್ಷಸೇಂದ್ರ, ಚಕ್ರವರ್ತಿ ಇವರು ಅತ್ಯುದಾರ ರಾಗದಿಂದ ತಲೆಬಾಗಿ ನಮಸ್ಕರಿಸಿದ ಪಾದಗಳುಳ್ಳವನೂ, ಸಕಲ ವಿದ್ಯೆಗಳಿಗೆ ಒಡೆಯನಾದ ಆತನು ನಾಭಿರಾಜ ಮನುವಿನ ಪುತ್ರನೂ, ಆಶ್ರಯಿಸಿಬಂದ ಭವ್ಯಜನರನ್ನು ಸಂಪೂರ್ಣವಾಗಿ ಸಂತೋಷಪಡಿಸುವವನು [ಆದಂತಹವನು ಆ ವೃಷಭದೇವನು.] ೧-೪೦

ವಿಶೇಷ ವಿವರಣೆ: ಮಹಾಷ್ಟಾಪದಶೈಲದೊಳ್: ವೃಷಭನಾಥರು '**ಅಷ್ಟಾಪದ ಶೈಲ**'ದಲ್ಲಿ ಮುಕ್ತಿ ಹೊಂದಿದರು. '**ಅಷ್ಟಾಪದ ಶೈಲ**' ಪದದ ಅರ್ಥವನ್ನು ಎರಡು ರೀತಿಯಲ್ಲಿ ಹೇಳಬಹುದು:

(೧) '**ಅಷ್ಟಾಪದ**' ಎಂದರೆ ಎಂಟು ಕಾಲುಗಳನ್ನುಳ್ಳ ಪ್ರಾಣಿ. ವೈದಿಕಪುರಾಣಗಳಲ್ಲಿ '**ಶರಭ**' ಎನ್ನುವ ಎಂಟು ಕಾಲುಗಳನ್ನುಳ್ಳ ಕಾಲ್ಪನಿಕ ಪ್ರಾಣಿಯ ಉಲ್ಲೇಖ ದೊರೆಯುತ್ತದೆ. ಎರಡನೆಯ ನಾಗವರ್ಮನ '**ಅಭಿಧಾನ ವಸ್ತುಕೋಶ**'ದಲ್ಲಿ ಈ ಪದದ ಉಲ್ಲೇಖವಿದೆ.

ಶರಭಮದಷ್ಟಾಪದಮಿಭ । ವಿರೋಧಿ ಕಂಠೀರವಂ ಮೃಗಾಧೀಶಂ ಕೇ ॥
ಸರಿ ಹರಿ ಸಿಂಹ ವ್ಯಾಘ್ರಂ । ತರಕ್ಷು ಮೃಗರಿಪು ಚಮೂರವೆನೆ ಶಾರ್ದೂಲಂ ॥೧॥

(ಅಭಿಧಾನ ವಸ್ತುಕೋಶ, ಕಾಂಡಂ-೧. ಅವಿಭಿನ್ನಾರ್ಥಕಾಂಡಂ, ವರ್ಗ-೯. ಮೃಗಪಕ್ಷಿವರ್ಗಂ)

ಪದವಿಭಾಗ: ಶರಭಂ+ಅದು+**ಅಷ್ಟಾಪದಂ**+ಇಭ-ವಿರೋಧಿ-ಕಂಠೀರವಂ-ಮೃಗಾಧೀಶಂ ॥
ಕೇಸರಿ-ಹರಿ-ಸಿಂಹಂ-ವ್ಯಾಘ್ರಂ-ತರಕ್ಷು-ಮೃಗರಿಪು-ಚಮೂರಂ+ಎನೆ-ಶಾರ್ದೂಲಂ ॥೧॥

ಕವಿಯು ಮೇಲಿನ ವೃತ್ತಪದ್ಯದಲ್ಲಿ ಹೇಳುವ **ಅಷ್ಟಾಪದ**ವೇ, ನಾಗವರ್ಮನು **ಅಭಿಧಾನ ವಸ್ತುಕೋಶ**ದಲ್ಲಿ ಹೇಳಿರುವ **ಶರಭ**ವಾಗಿರಬಹುದು. **ಅಷ್ಟಾಪದ**ದ ವಿಶೇಷವೆಂದರೆ ಅದರ ಬೆನ್ನಿನಮೇಲೂ ನಾಲ್ಕು ಕಾಲುಗಳಿದ್ದುವಂತೆ ! **ಅಷ್ಟಾಪದ**ವು ಆಕಸ್ಮಿಕ ವಾಗಿ ಮೇಲಿನಿಂದ ಬಿದ್ದರೂ ಅದಕ್ಕೆ ಏನೂ ಆಗುತ್ತಿರಲಿಲ್ಲವಂತೆ !! ಏಕೆಂದರೆ ಅದು ಮೇಲಿನಿಂದ ಬಿದ್ದರೂ, ಅದರ ಬೆನ್ನಿನಮೇಲೆ ಕಾಲುಗಳಿದ್ದುದರಿಂದ ಅದರ ಕಾಲಮೇಲೇ ನಿಲ್ಲುತ್ತಿತ್ತಂತೆ !!! **ಪೂರ್ವಪುರಾಣ**ದಲ್ಲಿ **ಅಷ್ಟಾಪದ**ದ ವರ್ಣನೆ ಹೀಗಿದೆ:

ಶರಭಃ[೧] ಖಂ ಸಮುತ್ಪತ್ಯ ಪತನ್ನುತ್ತಾನಿತೋಽಪಿ ಸನ್ ।
ನೈಷ ದುಃಖಾಸಿಕಾಂ ವೇದ ಚರಣೈಃ ಪೃಷ್ಠವರ್ತಿಭಿಃ ॥ಪೂ.ಪು., ೨೭–೭೦॥

೧ ಪಾಠಭೇದ 'ಅಷ್ಟಾಪದಃ'

ಅರ್ಥ: ಎಂಟು ಕಾಲುಗಳುಳ್ಳ ಅಷ್ಟಾಪದವೆಂಬ ಮೃಗವು ಆಕಾಶಕ್ಕೆ ಹಾರಿ ಮೇಲ್ಮುಖವಾಗಿ ಬಿದ್ದರೂ, ಅದು ಬೆನ್ನಿನಮೇಲೂ ಕಾಲುಗಳುಳ್ಳುದ್ದಾಗಿರುವುದರಿಂದ, ಇದು ಬೆನ್ನಿನಲ್ಲಿರುವ ಕಾಲುಗಳಲ್ಲಿ ನಿಂತು ಕಷ್ಟವನ್ನು ತಿಳಿಯುವುದಿಲ್ಲ. ಬೆನ್ನಿನಲ್ಲಿರುವ ಕಾಲುಗ ಳಿಂದ ನಿಂತಿತೆಂದರ್ಥವು.

ವೃಷಭ ತೀರ್ಥಂಕರರ ಕಾಲದಲ್ಲಿ ಅವರು ತಪಸ್ಸು ಮಾಡಿದ ಆ ಪರ್ವತದಲ್ಲೆಲ್ಲಾ ಆ ಅಷ್ಟಾಪದಗಳು ಇದ್ದುವಂತೆ. ಈಗ ಅವು ಇಲ್ಲ. ಈ 'ಅಷ್ಟಾಪದ' ಎನ್ನುವ ಮೃಗಗಳು ಆ ಪರ್ವತ ಪ್ರದೇಶದಲ್ಲೆಲ್ಲಾ ಇದ್ದುದರಿಂದ ಆ ಪರ್ವತಕ್ಕೆ 'ಅಷ್ಟಾಪದ ಪರ್ವತ' ಅಥವ '**ಅಷ್ಟಾಪದ ಶೈಲ**' ಎನ್ನುವ ಹೆಸರು ಬಂದಿತಂತೆ.

(೨) '**ಅಷ್ಟಾಪದ**' ಪದಕ್ಕೆ '**ಚಿನ್ನ**' ಎನ್ನುವ ಅರ್ಥವೂ ಇದೆ. ಸೂರ್ಯೋದಯ ಮತ್ತು ಸೂರ್ಯಾಸ್ತ ಸಮಯದಲ್ಲಿ ಸೂರ್ಯನ ಕಿರಣಗಳು ಈ ಹಿಮಪರ್ವತದ ಮೇಲೆ ಬಿದ್ದಾಗ ಇಡೀ ಹಿಮಪರ್ವತವೇ ಸಾಕ್ಷಾತ್ ಚಿನ್ನದ ಪರ್ವತದಂತೆ ಪ್ರಕಾಶಮಾನವಾಗಿ ಹೊಳೆಯುತ್ತಿರುತ್ತದೆ. ಆದುದರಿಂದ ಈ ಪರ್ವತಕ್ಕೆ '**ಅಷ್ಟಾಪದ ಶೈಲ**' ಎಂಬ ಹೆಸರು ಬಂದಿರಬಹುದು.

ಇಲ್ಲಿ ಎರಡನೆಯ ಅರ್ಥವೇ ಸಮಂಜಸವೆನಿಸುತ್ತದೆ. '**ಅಷ್ಟಾಪದ ಶೈಲ**' ಎನ್ನುವ ಹೆಸರು ಜೈನಪುರಾಣಗಳಲ್ಲಿ ಮಾತ್ರ ಕಾಣಸಿಗು ತ್ತದೆ. '**ಹೊಂಬುಜ ಸಿದ್ಧಾಂತ ಪಾಠಾವಳಿ**'ಯ ನಿರ್ವಾಣ ಕಾಂಡದಲ್ಲಿ '**ಅಟ್ಠಾವಯಮ್ಮಿ ವಸಹೋ**' ಎಂದರೆ 'ಅಷ್ಟಾಪದದಲ್ಲಿ ವೃಷಭರು' [ನಿರ್ವಾಣ ಹೊಂದಿದರು] ಎಂದು ಹೇಳಲಾಗಿದೆ. ಆದರೆ, ಈಗ '**ಅಷ್ಟಾಪದ ಶೈಲ**'ವು '**ಕೈಲಾಸಪರ್ವತ**'ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಕೈಲಾಸ ಪರ್ವತವು ಜೈನಧರ್ಮೀಯರಿಗೆ ಮಾತ್ರವಲ್ಲ, ಅದು ಹಿಂದುಗಳು ಹಾಗು ಬೌದ್ಧರಿಗೂ ಪವಿತ್ರ ಸ್ಥಳವಾಗಿದೆ. ಮೊದಲು ಇದು ಟಿಬೆಟ್ ದೇಶದ ಭಾಗವಾಗಿದ್ದು, ಈಗ ಈ ಪರ್ವತವು ಚೀನಾದೇಶದ ಗಡಿಯೊಳಗೆ ಸೇರಿರುವ ಪ್ರದೇಶವಾಗಿರುತ್ತದೆ.

ಘಾತಿಚತುಷ್ಟಯನ್: ನಾಲ್ಕು ಘಾತಿಕರ್ಮಗಳು, (೧) ಜ್ಞಾನಾವರಣೀಯ, (೨) ದರ್ಶನಾವರಣೀಯ, (೩) ಮೋಹನೀಯ, (೪) ಅಂತರಾಯ ಕರ್ಮಗಳು. ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಎಂಟು (೮)–ಎಂಟು ಕಿಲ್ಬಿಷಂಗಳು** ಅನ್ನು ನೋಡಿರಿ.

ಅತ್ಯುದಾರ ರಾಗ: '**ರಾಗ**' ಶಬ್ದವು ಜೈನಪಾರಿಭಾಷಿಕ ಶಬ್ದಗಳಲ್ಲೆಲ್ಲ ಅತ್ಯಂತ ಪ್ರಮುಖವಾದ ಒಂದು ಶಬ್ದವಾಗಿರುತ್ತದೆ. ಜೀವನಿಗೆ ಅರಿಹಂತಪದ ಪ್ರಾಪ್ತವಾಗುವ ಕೊನೆಯ ಕ್ಷಣದವರೆಗೂ ಈ '**ರಾಗ**'ವು ಅಂಟಿಕೊಂಡಿರುತ್ತದೆ. ಆದುದರಿಂದಲೇ, ಅರಿಹಂತರನ್ನು '**ವೀತರಾಗಿ**' ಅಂದರೆ '**ರಾಗವನ್ನು ಜಯಿಸಿದವರು**', '**ರಾಗವನ್ನು ಕಳೆದು ಕೊಂಡವರು**', '**ರಾಗದಿಂದ ನಿವೃತ್ತರಾದವರು**' ಎಂದೂ ಕರೆಯುತ್ತಾರೆ. ಜೈನಾಗಮಗಳಲ್ಲಿ '**ವೀತರಾಗಿ**' ಅಂದರೆ '**ರಾಗವನ್ನು ಜಯಿಸಿದವರು**' ಎಂದೇ ಅರ್ಥೈಸುತ್ತಾರೆ. ಆದುದರಿಂದ, ಜೈನಾಗಮಗಳ ಪ್ರಕಾರ '**ರಾಗ**' ಎಂದರೇನು ಎಂಬುದನ್ನು ತಿಳಿಯೋಣ. ಜೀವನಲ್ಲಿ '**ರಾಗ**'ವನ್ನು ಹುಟ್ಟಿಸುವ ಕರ್ಮಗಳು ಎರಡು ಇವೆ ಎಂದು ಆಗಮದಲ್ಲಿ ಹೇಳಿದೆ: (೧) ಮಾಯಾ ಕಷಾಯ, (೨) ಲೋಭ ಕಷಾಯ. ಈ ಎರಡು ಕಷಾಯಗಳಿಂದ '**ರಾಗಭಾವ**' ಜನ್ಮತಾಳುತ್ತದೆಂದು ಹೇಳಿದ್ದಾರೆ. ಅಂದರೆ, '**ಮಾಯಾ, ಲೋಭ, ಮೂರುವೇದಗಳು (ಸ್ತ್ರೀ, ಪುರುಷ ಮತ್ತು ನಪುಂಸಕ ವೇದ), ಹಾಸ್ಯ ಮತ್ತು ರತಿಗಳು ರಾಗವೆನಿಸುತ್ತವೆ**' ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. (ಇದರಲ್ಲಿ ಮಾಯಾ ಮತ್ತು ಲೋಭ ಈ ಎರಡೂ ಕಷಾಯಗಳು ಹಾಗೂ ಮೂರು ವೇದಗಳು, ಹಾಸ್ಯ ಮತ್ತು ರತಿ ಇವು ಮೂರು ನೋಕಷಾಯಗಳು). ಇಷ್ಟ ಪದಾರ್ಥಗಳ ವಿಚಾರದಲ್ಲಿ ರತಿಭಾವವುಂಟಾಗುವುದನ್ನು '**ರಾಗ**'ವೆನ್ನುತ್ತಾರೆ. '**ರಾಗ**'ವನ್ನು ಇಂಗ್ಲೀಷ್ ಭಾಷೆಯಲ್ಲಿ '**ATTACHMENT**' ಎಂದು ಕರೆಯುತ್ತಾರೆ. ಅಂದರೆ, ದೇಹ, ಧನ, ಸ್ತ್ರೀ, ಪುತ್ರ, ಐಶ್ವರ್ಯ, ಆಭರಣ ಇತ್ಯಾದಿ ಪರದ್ರವ್ಯಗಳ ಮೇಲೆ **ಪ್ರೀತಿ**ಯು ಉತ್ಪನ್ನವಾಗುವುದು '**ರಾಗ**' ಅಥವಾ '**ರಾಗಪರಿಗ್ರಹ**' ಎನಿಸುತ್ತದೆ. '**ರಾಗ**'ದಲ್ಲಿ '**ಶುಭರಾಗ**' ಮತ್ತು '**ಅಶುಭರಾಗ**'ವೆಂದು ಎರಡು ಬಗೆಯಾಗಿರುತ್ತದೆ. ಪರದ್ವೇಷವು ಅಶುಭವೇ ಆಗಿರುತ್ತದೆ. ಇದನ್ನು '**ಅಪ್ರಶಸ್ತರಾಗ**' ವೆಂದೂ ಹೇಳುತ್ತಾರೆ. ಈ '**ಅಪ್ರಶಸ್ತರಾಗ**'ವೇ ಪದಾರ್ಥಗಳ ಇಷ್ಟಬುದ್ಧಿಗೆ ಕಾರಣವಾಗಿರುವುದರಿಂದ ಇದು '**ಹೇಯ**'ವಾಗಿದೆ.

ಸಮ್ಯಕ್ತ್ವದ ಹಾದಿಯಲ್ಲಿ ಸಾಗುವ ಸಮ್ಯಗ್ದೃಷ್ಟಿ ಜೀವನಿಗೆ ಜಿನೇಂದ್ರ ಭಗವಂತರಲ್ಲಿ, ಜೈನಾಗಮದಲ್ಲಿ, ಷಡ್ದ್ರವ್ಯಾದಿ ಸಪ್ತತತ್ತ್ವ ನವಪದಾರ್ಥಗಳಲ್ಲಿ ಪ್ರೀತಿಯುಂಟಾಗುವುದು ಸಹಜವೇ ಆಗಿರುತ್ತದೆ. ಹೀಗೆ ತತ್ತ್ವಾರ್ಥಗಳಲ್ಲಿ **'ಪ್ರೀತಿಯಭಾವ'** ಉಂಟಾಗುವುದು **ಶುಭವೇ** ಆಗಿರುತ್ತದೆ. ಈ **'ಶುಭರಾಗ'**ವನ್ನು **'ಪ್ರಶಸ್ತರಾಗ'**ವೆಂದೂ ಹೇಳುವುದುಂಟು. ಈ **'ಪ್ರಶಸ್ತರಾಗ'**ವನ್ನೇ ಕವಿಯು ಈ ಪದ್ಯದಲ್ಲಿ **'ಅತ್ಯುದಾರ ರಾಗ'** ಎಂದು ಕರೆದಿದ್ದಾನೆ. **'ಪ್ರಶಸ್ತರಾಗ'**ವು ವ್ಯವಹಾರದಿಂದ **'ಉಪಾದೇಯ'**ವಾಗಿದೆ.

ಈ ವೃತ್ತಪದ್ಯಕ್ಕೆ ಸಂವಾದಿಯಾದ ಪೂರ್ವಪುರಾಣದ ಶ್ಲೋಕಗಳು: ಪ್ರಕಾಶಿತವೃಷಂ ವೃಷಭಂ ವೃಷಧ್ವಜಂ:

ತಮಾದಿದೇವಂ ನಾಭೇಯಂ ವೃಷಭಂ ವೃಷಭಧ್ವಜಮ್ ।
ಪ್ರಣೌಮಿ ಪ್ರಣಿಪತ್ಯಾಹಂ ಪ್ರಣಿಧಾಯ ಮುಹುರ್ಮುಹುಃ ॥ಪೂ.ಪು., ೧-೧೫॥

ಅರ್ಥ: ನಾಭಿರಾಜಮನುವಿನ ಪುತ್ರರೂ ವೃಷಭಚಿಹ್ನೆಯ ಧ್ವಜವುಳ್ಳವರೂ ಆದಿಬ್ರಹ್ಮರೂ ಆದ ಅಂತಹ ವೃಷಭಸ್ವಾಮಿಯನ್ನು ನಾನು ನಮ್ರನಾಗಿ ನಮಸ್ಕರಿಸಿ ಪುನಃಪುನಃ ಸ್ತೋತ್ರಮಾಡುತ್ತೇನೆ.

ಕವಿಯು ಈ ವೃತ್ತಪದ್ಯದಲ್ಲಿ ಪ್ರಯೋಗಿಸಿರುವ ಕೆಲವು ವಿಶೇಷಣಗಳನ್ನು **ಪೂರ್ವಪುರಾಣ**ದ ೨೫ ನೆಯ ಪರ್ವದ ೧೦೦ ನೆಯ ಶ್ಲೋಕದಿಂದ ೨೧೬ ನೆಯ ಶ್ಲೋಕದ ವರೆಗಿರುವ ವೃಷಭ ತೀರ್ಥಂಕರರ ಅಷ್ಟೋತ್ತರಸಹಸ್ರನಾಮಾವಳಿಯಿಂದ ಆಯ್ದುಕೊಂಡಿದ್ದಾನೆ. ಅಂತಹ ವಿಶೇಷಣಗಳಿರುವ ಶ್ಲೋಕಗಳನ್ನು ಮತ್ತು ಆ ಸಂಬಂಧಿತ ವಿಶೇಷಣಗಳ ಅರ್ಥವನ್ನು ಈ ಕೆಳಗೆ ನೀಡಿದೆ:

ಶ್ರೀಮಾನ್ಸ್ವಯಂಭೂರ್ವೃಷಭಃ ಶಂಭವಃ ಶಂಭುರಾತ್ಮಭೂಃ ।
ಸ್ವಯಂಪ್ರಭಃ ಪ್ರಭುರ್ಭೋಕ್ತಾ ವಿಶ್ವಭೂರಪುನರ್ಭವಃ ॥ಪೂ.ಪು., ೨೫-೧೦೦॥

ಅರ್ಥ: ... ೩. **'ವೃಷಭಃ'** ಅಹಿಂಸಾರೂಪವಾದ ಅಥವಾ ರತ್ನತ್ರಯರೂಪವಾದ ಧರ್ಮದಿಂದ ಶೋಭಿಸುವವನೂ ...

ವೃಷಧ್ವಜೋ ವೃಷಾಧೀಶೋ ವೃಷಕೇತುರ್ವೃಷಾಯುಧಃ ।
ವೃಷೋ ವೃಷಪತಿರ್ಭರ್ತಾ ವೃಷಾಭಾಂಕೋ ವೃಷೋದ್ಭವಃ ॥ಪೂ.ಪು., ೨೫-೧೧೬॥

ಅರ್ಥ: ... ೪೯. **'ವೃಷಧ್ವಜಃ'** ಧ್ವಜದಲ್ಲಿ ಎತ್ತಿನ ಚಿಹ್ನೆಯುಳ್ಳವನು. ... ೫೧. **'ವೃಷಕೇತುಃ'** ಧರ್ಮಕ್ಕೆ ಧ್ವಜದಂತಿರುವವನು. ... ೫೬. **'ವೃಷಭಾಂಕಃ'** ವೃಷಭಲಾಂಛನವುಳ್ಳವನು. ...

ಕವಿಃ ಪುರಾಣಪುರುಷೋ ವರ್ಷೀಯಾನ್ವೃಷಭಃ ಪುರುಃ ।
ಪ್ರತಿಷ್ಠಾಪ್ರಸವೋ ಹೇತುರ್ಭುವನೈಕಪಿತಾಮಹಃ ॥ಪೂ.ಪು., ೨೫-೧೪೩॥

ಅರ್ಥ: ... ೯೬. **'ಋಷಭಃ'** ಜ್ಞಾನಿಯು. ೯೭. **'ಪುರುಃ'** ಶ್ರೇಷ್ಠನು. ...

ಸಹಸ್ರಶೀರ್ಷಃ ಕ್ಷೇತ್ರಜ್ಞಃ ಸಹಸ್ರಾಕ್ಷಃ ಸಹಸ್ರಪಾತ್ ।
ಭೂತಭವ್ಯಭವದ್ಭರ್ತಾ ವಿಶ್ವವಿದ್ಯಾಮಹೇಶ್ವರಃ ॥ಪೂ.ಪು., ೨೫-೧೨೧॥

ಅರ್ಥ: ... ೧೦೦. **'ವಿಶ್ವವಿದ್ಯಾಮಹೇಶ್ವರಃ'** ಸಮಸ್ತ ವಿದ್ಯೆಗಳಿಗೆ ಸ್ವಾಮಿಯು. **(ಸಮಸ್ತ ವಿದ್ಯಾಪತಿ)**

ಆನಂದೋ ನಂದನೋ ನಂದೋ ವಂದ್ಯೋಽನಿಂದ್ಯೋಽಭಿನಂದನಃ ।
ಕಾಮಹಾ ಕಾಮದಃ ಕಾಮ್ಯಃ ಕಾಮಧೇನುರರಿಂಜಯಃ ॥ಪೂ.ಪು., ೨೫-೧೬೭॥

ಅರ್ಥ: ೯೧. **'ನಂದನಃ'** ಸಂತೋಷಪಡಿಸುವವನು. ೯೫. **'ಅಭಿನಂದನಃ'** ಸಂಪೂರ್ಣವಾಗಿ ಸಂತೋಷಪಡಿಸುವವನು.

ಜಿನೇಂದ್ರಃ ಪರಮಾನಂದೋ ಮುನೀಂದ್ರೋ ದುಂದುಭಿಸ್ವನಃ ।
ಮಹೇಂದ್ರವಂದ್ಯೋ ಯೋಗೀಂದ್ರೋ ಯತೀಂದ್ರೋ ನಾಭಿನಂದನಃ ॥ಪೂ.ಪು., ೨೫-೧೭೦॥

ಅರ್ಥ: ... ೨೨. **'ಮಹೇಂದ್ರವಂದ್ಯಃ'** ದೇವೇಂದ್ರರಿಂದ ವಂದಿಸಲ್ಪಡುವುದಕ್ಕೆ ಯೋಗ್ಯನು. ... ೨೫. **'ನಾಭಿನಂದನಃ'** ನಾಭಿರಾಜಮನುವನ್ನು ಸಂತೋಷಪಡಿಸುವವನು.

ಚಂಪಕಮಾಲೆ **ಇರೆ ಹರಿಪೀಠದೊಳ್ಭರತನಾದರದಿಂ ಬೆಸಗೊಂಡುದಂ ಜಿನೇ**
ಶ್ವರಮತದಿಂದಮಾವೃಷಭಸೇನಗಣಾಗ್ರಣಿ ಪೇೞ್ದುದಂ ಸವಿ
ಸ್ತರದೊಳೆವರ್ಧಮಾನಜಿನಸಂನಿಧಿಯೊಳ್ವಿಪುಳಾದ್ರಿಯೊಳ್ನಿಜಾ
ದರದೊಳೆ ಗೌತಮರ್ಮಗಧನಾಯಕನುಂ ತಿಳಿವಂತು ಪೇೞ್ದುದಂ ॥ ೧-೪೧

ಕಂದ **ಪ್ರಾಣಿಹಿತಮಂ ವಿನೇಯ**
ಪ್ರೀಣನಕರಮಂ ಜಗತ್ತ್ರಯಪ್ರಕಟಿತ ಕ
ಲ್ಯಾಣಮನೀ ನೆಗೞ್ದಾದಿಪು
ರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ ॥ ೧-೪೨

(ವಿ.ಸೂ.: ೧-೪೨ ನೆಯ ಕಂದಪದ್ಯವು, ಹಿಂದಿನ ೧-೪೧ ನೆಯ ವೃತ್ತಪದ್ಯದ ಮುಂದುವರಿದ ಭಾಗವಾಗಿರುವುದರಿಂದ, ಈ ಎರಡೂ ಪದ್ಯಗಳ ಪದವಿಭಾಗ, ಅನ್ವಯಾರ್ಥ, ಭಾವಾರ್ಥ, ವಿಶೇಷ ವಿವರಣೆಗಳನ್ನು ಇದರಡಿಯೇ ನೀಡಲಾಗಿದೆ.)

ಪದ ವಿಭಾಗ: ಇರೆ-ಹರಿಪೀಠದೊಳ್, ಭರತನ್, ಆದರದಿಂ, ಬೆಸಗೊಂಡುದಂ,
ಜಿನೇಶ್ವರ-ಮತದಿಂದಂ, ಆ, ವೃಷಭಸೇನ-ಗಣಾಗ್ರಣಿ-ಪೇೞ್ದುದಂ,
ಸವಿಸ್ತರದೊಳೆ, ವರ್ಧಮಾನ-ಜಿನ-ಸಂನಿಧಿಯೊಳ್, ವಿಪುಳಾದ್ರಿಯೊಳ್, ನಿಜ,
ಆದರದೊಳೆ, ಗೌತಮರ್, ಮಗಧ-ನಾಯಕನುಂ, ತಿಳಿವಂತು-ಪೇೞ್ದುದಂ ॥ ೧-೪೧

ಪದ ವಿಭಾಗ: ಪ್ರಾಣಿ-ಹಿತಮಂ, ವಿನೇಯ-
ಪ್ರೀಣನಕರಮಂ, ಜಗತ್ತ್ರಯ-ಪ್ರಕಟಿತ-
ಕಲ್ಯಾಣಮನ್, ಈ, ನೆಗೞ್ದ, ಆದಿಪುರಾಣಮನ್,
ಅಪರಿಮಿತ-ಭಕ್ತಿಯಿಂ, ವಿರಚಿಸುವೆಂ ॥ ೧-೪೨

ಅನ್ವಯಾರ್ಥ: **(ಇರೆ ಹರಿಪೀಠದೊಳ್)** [ವೃಷಭನಾಥ ತೀರ್ಥಂಕರರು ಸಮವಸರಣದಲ್ಲಿ] ಸಿಂಹಾಸನದಲ್ಲಿ ವಿರಾಜಮಾನರಾಗಿರಲು, **(ಭರತನ್)** [ಅವರ ಸಮವಸರಣದಲ್ಲಿ ಮುಖ್ಯ ಶ್ರೋತೃವಾದ] ಭರತನು **(ಆದರದಿಂ)** ಗೌರವದಿಂದ **(ಬೆಸಗೊಂಡುದಂ)** ಪ್ರಶ್ನಿಸಿಸುದನ್ನು **(ಜಿನೇಶ್ವರ ಮತದಿಂದಂ)** ತೀರ್ಥಂಕರರ ತತ್ತ್ವ ಚಿಂತನೆಯಂತೆ [ಅಂದರೆ, ವೃಷಭ ತೀರ್ಥಂಕರರ ಮುಖಕಮಲದಿಂದ ಹೊರಟ ದಿವ್ಯಧ್ವನಿಯಲ್ಲಿ ಧ್ವನಿತವಾದ ಜಿನಶಾಸನದಂತೆ] **(ಆ)** ಆ **(ವೃಷಭಸೇನ ಗಣಾಗ್ರಣಿ)** ಮುಖ್ಯ ಗಣಧರನಾದ ವೃಷಭಸೇನರು **(ಪೇೞ್ದುದಂ)** ಹೇಳಿದುದನ್ನು, **(ವಿಪುಳಾದ್ರಿಯೊಳ್)** [ಮಹಾವೀರ ತೀರ್ಥಂಕರರ ಸಮವಸರಣ ರಚನೆಯ ಸ್ಥಳವಾದ] ವಿಪುಲಾಚಲದಲ್ಲಿ **(ವರ್ಧಮಾನ ಜಿನ)** ವರ್ಧಮಾನ ತೀರ್ಥಂಕರರ **(ಸಂನಿಧಿಯೊಳ್)** ಸನ್ನಿಧಿಯಲ್ಲಿ [ಸಮವಸರಣದಲ್ಲಿ] **(ಗೌತಮರ್)** ಗೌತಮ [ಗಣಧರರು] **(ನಿಜ)** ತಮ್ಮ ಸ್ವಭಾವಸಿದ್ಧವಾದ [ಕೃತ್ರಿಮವಲ್ಲದ] **(ಆದರದೊಳೆ)** ಗೌರವದಿಂದ **(ಮಗಧ ನಾಯಕನುಂ)** ಮಗಧ ರಾಜನೂ [ಮಹಾವೀರ ತೀರ್ಥಂಕರರ ಸಮಸರಣದಲ್ಲಿ ಮುಖ್ಯ ಶ್ರೋತೃವಾದ ಮಗಧ ರಾಜ ಶ್ರೇಣಿಕ ಮಹಾರಾಜನೂ] **(ತಿಳಿವಂತು)** ತಿಳಿಯುವಂತೆ **(ಸವಿಸ್ತರದೊಳೆ)** ಸವಿಸ್ತಾರವಾಗಿ [ತ್ರಿಷಷ್ಟಿಶಲಾಕಾಪುರುಷರ ಪುರಾಣವನ್ನು] **(ಪೇೞ್ದುದಂ)** ಹೇಳಿದುದನ್ನು [ಅಂದರೆ] ... ॥ ೧-೪೧

ಅನ್ವಯಾರ್ಥ: **(ಪ್ರಾಣಿ ಹಿತಮಂ)** ಪ್ರಾಣಿಗಳಿಗೆ ಒಳ್ಳೆಯದಾದುದೂ, **(ವಿನೇಯ ಪ್ರೀಣನಕರಮಂ)** ಸಜ್ಜನರಿಗೆ ಆನಂದಕರವಾದುದೂ, **(ಜಗತ್ತ್ರಯ ಪ್ರಕಟಿತ ಕಲ್ಯಾಣಮನ್)** ಮೂರು ಲೋಕಗಳಿಗೂ ಪ್ರತ್ಯಕ್ಷವಾಗಿ ಮಂಗಳವನ್ನು [ಉಂಟು ಮಾಡುವುದೂ ಆದ] **(ಈ)** ಈ **(ನೆಗೞ್ದ)** ಪ್ರಸಿದ್ಧವಾದ **(ಆದಿಪುರಾಣಮನ್)** ಆದಿಪುರಾಣವನ್ನು **(ಅಪರಿಮಿತ)** ಎಲ್ಲೆಯಿಲ್ಲದ [ಅಪಾರವಾದ] **(ಭಕ್ತಿಯಿಂ)** ಭಕ್ತಿಯಿಂದ **(ವಿರಚಿಸುವೆಂ)** ವಿರಚಿಸುತ್ತೇನೆ ॥ ೧-೪೨

ಕವಿಯು ಈ ಹಿಂದೆ ೧-೩೫ ನೆಯ ವೃತ್ತಪದ್ಯದಲ್ಲಿ **ಪುರುದೇವಾದಿಜಿನೇಂದ್ರಮಾಲೆ** ಅಂದರೆ ಪುರುದೇವ ಮೊದಲ್ಗೊಂಡು ಇಪ್ಪತ್ತನಾಲ್ಕು ತೀರ್ಥಂಕರರ ಪರಂಪರೆಯಲ್ಲಿ ಅವಿಚ್ಛಿನ್ನವಾಗಿ ಬಂದ ಈ ಕಥೆ ಎನ್ನುತ್ತಾನೆ. ಕವಿಯು ಇದೇ ಮಾತನ್ನು ೧-೪೧ ನೆಯ ಈ ಪದ್ಯದಲ್ಲಿ ವಿಸ್ತರಿಸಿ ಪುಷ್ಟೀಕರಿಸುತ್ತಾನೆ. ಸಮವಸರಣದಲ್ಲಿ ವೃಷಭ ತೀರ್ಥಂಕರರಿಂದ ಹೇಳಲ್ಪಟ್ಟ ಜಿನವಾಣಿಯು ಹೇಗೆ ಭವ್ಯಜೀವರನ್ನು ಸೇರಿತು ಎನ್ನುವುದನ್ನು ಕವಿಯು ವರ್ಣಿಸಿದ್ದಾನೆ.

ಭಾವಾರ್ಥ: ವೃಷಭದೇವನ ಸಮವಸರಣದಲ್ಲಿ ಮುಖ್ಯಶ್ರೋತೃವಾಗಿದ್ದ ಭರತನು ತೀರ್ಥಂಕರರ ಮುಖಕಮಲದಿಂದ ದಿವ್ಯಧ್ವನಿಯ ಮೂಲಕ ಹೊರಟ ಜಿನವಾಣಿಯನ್ನು ತಿಳಿಯಲು ಅಲ್ಲಿನ ಮುಖ್ಯ ಗಣಧರರಾದ ವೃಷಭಸೇನರನ್ನು ಪ್ರಶ್ನಿಸಿದಾಗ, ಆ ಜಿನವಾಣಿಯನ್ನು ಗಣಧರರು ಭವ್ಯಜೀವರುಗಳಿಗೆ ಅರ್ಥವಾಗುವಂತೆ ಹೇಳುತ್ತಾರೆ. ಇದು ಹೀಗೆಯೇ ಮುಂದಿನ ಇಪ್ಪತ್ತಮೂರು ತೀರ್ಥಂಕರರ ಸಮವಸರಣದಲ್ಲಿಯೂ ಮುಂದುವರೆದು ಕೊನೆಯ ತೀರ್ಥಂಕರರಾದ ಮಹಾವೀರ ತೀರ್ಥಂಕರರ ಸಮವಸರಣದಲ್ಲಿ ಅಲ್ಲಿನ ಮುಖ್ಯ ಶ್ರೋತೃವಾದ ಮಗಧರಾಜನಾದ ಶ್ರೇಣಿಕನು ಕೇಳಿದ ಪ್ರಶ್ನೆಗೆ ಅಲ್ಲಿನ ಮುಖ್ಯ ಗಣಧರರಾದ ಗೌತಮಗಣಧರರು ಇದೇ ಕಥೆಯನ್ನು ಸವಿಸ್ತಾರವಾಗಿ ಹೇಳಿದ್ದನ್ನು, ೧-೪೧

ಭಾವಾರ್ಥ: ಅಂದರೆ, ಪ್ರಾಣಿಗಳಿಗೆ ಹಿತವಾದುದೂ, ವಿನಯಶೀಲರಿಗೆ ಆನಂದಕರವಾದುದೂ, ಮೂರು ಲೋಕಗಳಿಗೆ ಪ್ರತ್ಯಕ್ಷವಾಗಿ ಕಲ್ಯಾಣವನ್ನುಂಟುಮಾಡುವುದೂ ಆದ ಈ ಪ್ರಸಿದ್ಧವಾದ ಆದಿಪುರಾಣವನ್ನು ಅಪಾರವಾದ ಭಕ್ತಿಯಿಂದ ವಿರಚಿಸುತ್ತೇನೆ ಎಂದು ಕವಿಯು ಹೇಳುತ್ತಿರುವನು. ೧-೪೨

ವಿಶೇಷ ವಿವರಣೆ (೧-೪೧): 'ಇರೆ ಹರಿಪೀಠದೊಳ್ಭರತನ್' ಎನ್ನುವ ಮಾತನ್ನು 'ಹರಿಪೀಠದಲ್ಲಿ ಭರತನು ಕುಳಿತಿರಲಾಗಿ' ಎಂದು ಅನ್ವಯಾರ್ಥವನ್ನು ನೀಡಿದರೆ, ಭರತನು ಚಕ್ರವರ್ತಿಯಾದುದರಿಂದ ಅವನು ಹರಿಪೀಠದಲ್ಲಿ (ಸಿಂಹಾಸನದಲ್ಲಿ) ಕುಳಿತಿದ್ದನು ಎನ್ನುವ ವಾಕ್ಯಾರ್ಥವು ಸರಿಕಾಣಬಹುದು. ಆದರೆ ಭರತನು ಇರುವುದು ತೀರ್ಥಂಕರರ ಸಮವಸರಣ ಮಂಟಪದಲ್ಲಿ. ತೀರ್ಥಂಕರರಿಂದ ಉಪದೇಶ ನಡೆಯುವಾಗ ಭರತನು ಅವರ ಮುಂದೆ ಸಿಂಹಾಸನದಲ್ಲಿ ಕುಳಿತಿದ್ದನು ಎನ್ನುವ ಮಾತು ಅಸಂಬದ್ಧವಾಗಿ ಕೇಳುತ್ತದೆ. ಆದುದರಿಂದ ಕವಿ ಹೇಳುತ್ತಿರುವಂತೆ, ಹರಿಪೀಠದಲ್ಲಿ ಎಂದರೆ ಸಿಂಹಾಸನದಲ್ಲಿ ಕುಳಿತಿದ್ದವರು ತೀರ್ಥಂಕರರು ಎಂದು ಭಾವಿಸುವುದು ಸೂಕ್ತವೆನಿಸುತ್ತದೆ. ತೀರ್ಥಂಕರರ ಪ್ರಾಪ್ತಿರೂಪದ ಗುಣಗಳಲ್ಲಿ ಒಂದಾದ **'ಅಷ್ಟಮಹಾಪ್ರಾತಿಹಾರ್ಯ'**ಗಳಲ್ಲಿ **'ಸಿಂಹಾಸನ'**ವೂ ಒಂದು. **ತಿಲೋಯಪಣ್ಣತ್ತೀ**ಯಲ್ಲಿ ಹೀಗೆ ಹೇಳಿದೆ:

ರಯಣ ಖಚಿದಾಣಿ ತಾಣಿಂ ಜಿಣಿಂದ ಉಚ್ಛೇಹ ಜೊಗ್ಗ ಉದಯಾಣಿಂ ।
ಇತ್ಥಂ ತಿತ್ಥಯರಾಣಂ ಕಹಿದಾಇಂ ಸಮವಸರಣಾಇಂ ॥ (ತಿಲೋಯಪಣ್ಣತ್ತೀ, ೪-೯೦೩)

ಅರ್ಥ: ರತ್ನಗಳಿಂದ ಖಚಿತ ಆ ಸಿಂಹಾಸನಗಳ ಎತ್ತರ ತೀರ್ಥಂಕರರ ಎತ್ತರದಷ್ಟೇ ಇರುತ್ತದೆ. ಹೀಗೆ ಇಲ್ಲಿ ತೀರ್ಥಂಕರರ ಸಮವಸರಣಗಳ (ಕಥನ) ಮಾಡಲಾಗಿದೆ.

ಚಉರಂಗುಲಂತರಾಲೇ ಉವರಿಂ ಸಿಂಹಾಸಣಾಣಿ ಅರಹಂತಾ ।
ಚೆಟ್ಠಂತಿ ಗಯಣ ಮಗ್ಗೇ ಲೋಯಾಲೋಯಪ್ಪಯಾಸ ಮತ್ತಂಡಾ ॥ (ತಿಲೋಯಪಣ್ಣತ್ತೀ, ೪-೯೦೪)

ಅರ್ಥ: ಲೋಕ-ಅಲೋಕಗಳನ್ನು ಪ್ರಕಾಶಿಸಲು ಸೂರ್ಯನಂತಿರುವ ಭಗವಾನ ಅರಹಂತದೇವರು ಆ ಸಿಂಹಾಸನಗಳ ಮೇಲೆ ಆಕಾಶಮಾರ್ಗದಲ್ಲಿ ನಾಲ್ಕು ಅಂಗುಲದ ಅಂತರಾಳದಿಂದ ಸ್ಥಿತರಾಗಿರುತ್ತಾರೆ.

ಸಿಂಹಾಸಣಂ ವಿಸಾಲಂ ವಿಸುದ್ಧ ಫಲಿಹೋವಲೇಹಿ ಣಿಮ್ಮವಿದಂ ।
ವರ ರಯಣ ಣಿಯರ ಖಚಿದಂ ಕೋ ಸಕ್ಕಇ ವಣ್ಣಿದುಂ ತಾಣಂ ॥ (ತಿಲೋಯಪಣ್ಣತ್ತೀ, ೪-೯೩೧)

ಅರ್ಥ: ನಿರ್ಮಲ ಸ್ಫಟಿಕ ಪಾಷಾಣದಿಂದ ನಿರ್ಮಿಸಲ್ಪಟ್ಟ ಹಾಗೂ ಉತ್ಕೃಷ್ಟವಾದ ರತ್ನಗಳ ಸಮೂಹದಿಂದ ಖಚಿತವಾದ ಆ ತೀರ್ಥಂಕರರ ವಿಶಾಲವಾದ ಸಿಂಹಾಸನದ ವರ್ಣನೆ ಮಾಡಲು ಯಾರು ತಾನೆ ಸಮರ್ಥರಿರುವರು?

ಹೀಗೆ, ತೀರ್ಥಂಕರರು ಸಿಂಹಾಸನ (ಹರಿಪೀಠ) ದಲ್ಲಿ, ಸಿಂಹಾಸನವನ್ನು ಬಿಟ್ಟು ನಾಲ್ಕು ಆತ್ಮಾಂಗುಲದಷ್ಟು ಮೇಲೆ ವಿರಾಜಮಾನರಾಗಿರುತ್ತಾರೆ ಎಂದು ಜೈನಾಗಮಗಳಲ್ಲಿ ವರ್ಣಿಸಲಾಗಿದೆ. ಇದೇ ಅರ್ಥದಲ್ಲಿ ಬಸದಿಯ ಗರ್ಭಗೃಹದ ನಟ್ಟನಡುವಿನಲ್ಲಿ ಜಿನಬಿಂಬವನ್ನು ಸ್ಥಾಪಿಸಿರುವ ಎತ್ತರವಾದ ಚೌಕಾಕಾರದ ಅಥವಾ ಆಯತಾಕಾರದ ಜಗಲಿ ಅಥವಾ ವೇದಿಕೆಯನ್ನು **'ಹರಿಪೀಠ'**ವೆಂದು ಕರೆಯುತ್ತಾರೆ. ಸಮವಸರಣದಲ್ಲಿ ತೀರ್ಥಂಕರರು ವಿರಾಜಮಾನರಾಗಿರುವ ಸಿಂಹಾಸನಕ್ಕೆ ಪಂಪನು ಹರಿಪೀಠವೆಂದು ಹೇಳುತ್ತಿದ್ದಾನೆ ಎಂದು ಭಾವಿಸಬಹುದು.

ವಿಶೇಷ ವಿವರಣೆ (೧–೪೨): ಮೇಲಿನ ೧–೩೯, ೧–೪೦, ೧–೪೧ ನೆಯ ಪದ್ಯಗಳಲ್ಲಿ ಶ್ರುತಸ್ಕಂಧವು ಅನುಯೋಗಗಳಾಗಿ ವಿಂಗಡಿಸಿ ಹೇಗೆ ಹರಿದು ಬಂದವು ಎನ್ನುವುದನ್ನು ಕವಿಯು ವಿವರಿಸಿದ್ದಾನೆ. ಶ್ರುತಸ್ಕಂಧದ ಕಥೆಯನ್ನು ಮೊದಲು ವೃಷಭ ತೀರ್ಥಂಕರರ ಸನ್ನಿಧಿಯಲ್ಲಿ ಅಂದರೆ ಸಮವಸರಣದಲ್ಲಿ ವೃಷಭಸೇನ ಗಣಧರರು ಭರತನಿಗೆ ಹೇಳಿದರು. ಅದನ್ನೇ ವರ್ಧಮಾನ ತೀರ್ಥಂಕರರ ಸನ್ನಿಧಿಯಲ್ಲಿ ಅಂದರೆ ಸಮವಸರಣದಲ್ಲಿ ವಿಪುಲಾಚಲದಲ್ಲಿ ಗೌತಮ ಗಣಧರರು ಮಗಧ ರಾಜನಾದ ಶ್ರೇಣಿಕನಿಗೆ ವಿವರಿಸಿದರು. ಮೂರು ಲೋಕಗಳಿಗೂ ಕಲ್ಯಾಣಕರವಾದುದೂ ಆದ ಶ್ರುತಸ್ಕಂಧದ ಪೂರ್ವಾನುಯೋಗದ ತ್ರಿಷಷ್ಟಿಶಲಾಕಾ ಪುರುಷರ ಕಥೆಗಳಲ್ಲಿ ಪ್ರಥಮ ತೀರ್ಥಂಕರನಾದ ವೃಷಭದೇವನ ಚರಿತೆಯನ್ನು ವರ್ಣಿಸುವ ಆದಿಪುರಾಣವನ್ನು ಅಪಾರ ಭಕ್ತಿಯಿಂದ ವಿರಚಿಸುತ್ತಿರುವನೆಂದು ಕವಿಯು ಈ ಕಾವ್ಯರಚನೆಯಲ್ಲಿ ತನಗಿರುವ ಭಕ್ತಿಯನ್ನು ಪ್ರಕಟಪಡಿಸಿದ್ದಾನೆ. ಮುಂದಿನ ೧–೪೨ (ವ) ನೆಯ ವಚನದಲ್ಲಿ, ಕವಿಯು, ಪುರಾಣದ ಅವಯವಗಳನ್ನು ಪೀಠಿಕಾರೂಪದಲ್ಲಿ ವಿವರಿಸುವ ಮೂಲಕ **ಆದಿಪುರಾಣ** ವನ್ನು ಹೇಳಲು ಉಪಕ್ರಮಿಸುತ್ತಾನೆ.

ವಚನ ॥ ಆ ಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂಪತ್ಪರಿ ವರ್ಣನಮುಂ ರಾಜ್ಯರಮಣೀಯತಾಖ್ಯಾನಮುಂ[1] ತೀರ್ಥಮಹಿಮಸಮರ್ಥನಮುಂ ಚತುರ್ಗತಿ ಸ್ವರೂಪನಿರೂಪಣಮುಂ ತಪೋದಾನವಿಧಾನವರ್ಣನಮುಂ ತತ್ಫಳಪ್ರಾಪ್ತಿಪ್ರಕಟನಮುಮೆಂದಿಂತ ವಯುವಂಗಳೆಂಟಕ್ಕುಂ. ೧–೪೨ (ವ)

ಪದ ವಿಭಾಗ: ವ.ಪಾ. ॥ ಆ, ಪುರಾಣಕ್ಕಂ, ಲೋಕಾಕಾರಕಥನಮುಂ, ದೇಶನಿವೇಶೋಪದೇಶಮುಂ, ನಗರಸಂಪತ್ಪರಿವರ್ಣನಮುಂ, ರಾಜ್ಯ–ರಮಣೀಯತಾಖ್ಯಾನಮುಂ, ತೀರ್ಥ–ಮಹಿಮ–ಸಮರ್ಥನಮುಂ, ಚತುರ್ಗತಿ–ಸ್ವರೂಪ–ನಿರೂಪಣಮುಂ, ತಪೋದಾನ–ವಿಧಾನ–ವರ್ಣನಮುಂ, ತತ್ಫಳಪ್ರಾಪ್ತಿ–ಪ್ರಕಟನಮುಂ, ಎಂದಿಂತು, ಅವಯವಂಗಳ್, ಎಂಟು, ಅಕ್ಕುಂ. ೧–೪೨ (ವ)

ಅನ್ವಯಾರ್ಥ: **(ಆ)** ಆ **(ಪುರಾಣಕ್ಕಂ)** ಪುರಾಣಕ್ಕೆ [ತ್ರಿಷಷ್ಟಿಶಲಾಕಾಪುರುಷರ ಪುರಾಣಕ್ಕೆ], (೧) **(ಲೋಕಾಕಾರಕಥನಮುಂ)** [ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕಗಳೆಂಬ ಮೂರೂ ಲೋಕಗಳು ಸ್ಥಿತವಾಗಿರುವ] ಲೋಕಾಕಾರದ ವರ್ಣನೆಯೂ; (೨) **(ದೇಶನಿವೇಶೋಪದೇಶಮುಂ=ದೇಶ+ನಿವೇಶ+ಉಪದೇಶಮುಂ)** ದೇಶ, ಅದರ ವಿಸ್ತೀರ್ಣ, ವಿನ್ಯಾಸ, ಗಡಿ, ಇವುಗಳ ತಿಳಿವಳಿಕೆಯೂ; (೩) **(ನಗರಸಂಪತ್ಪರಿವರ್ಣನಮುಂ=ನಗರಸಂಪತ್+ಪರಿವರ್ಣನಮುಂ)** ನಗರ ಸಂಪತ್ತಿನ ಸೊಗಸಾದ ವರ್ಣನೆಯೂ; (೪) **(ರಾಜ್ಯರಮಣೀಯತಾಖ್ಯಾನಮುಂ)** ರಾಜ್ಯಸೌಂದರ್ಯದ ಕಥೆಯೂ; (೫) **(ತೀರ್ಥಮಹಿಮ ಸಮರ್ಥನಮುಂ)** ತೀರ್ಥಕ್ಷೇತ್ರಗಳ ಮಹಿಮೆಯನ್ನು ಸಮರ್ಥಿಸುವುದೂ; (೬) **(ಚತುರ್ಗತಿ ಸ್ವರೂಪನಿರೂಪಣಮುಂ)** ದೇವ, ಮನುಷ್ಯ, ತಿರ್ಯಗ್ ಮತ್ತು ನಾರಕಿ ಎಂಬ ಚತುರ್ಗತಿಗಳ ಸ್ವರೂಪದ ನಿರೂಪಣೆಯೂ; (೭) **(ತಪೋದಾನವಿಧಾನ ವರ್ಣನಮುಂ)** ತಪಸ್ಸು ಮತ್ತು ದಾನಮಾಡುವ ಕ್ರಮದ ವರ್ಣನೆಯೂ; (೮) **(ತತ್ಫಳಪ್ರಾಪ್ತಿ ಪ್ರಕಟನಮುಂ)** ಅದರಿಂದ ದೊರೆಯುವ ಫಲಗಳ ಪ್ರಾಪ್ತಿಯನ್ನು ಪ್ರಸಿದ್ಧಪಡಿಸುವುದೂ, **(ಎಂದಿಂತು)** ಈ ಪ್ರಕಾರವಾಗಿ **(ಅವಯುವಂಗಳೆಂಟಕ್ಕುಂ)** ಎಂಟು ಅಂಗಗಳಿವೆ. ೧–೪೨ (ವ)

ಈ ವಚನ ಭಾಗದಲ್ಲಿ ಕವಿಯು ಪುರಾಣದ ಎಂಟು ಅವಯವಗಳನ್ನು ತಿಳಿಸುತ್ತಾನೆ.

ಭಾವಾರ್ಥ: ತ್ರಿಷಷ್ಟಿಶಲಾಕಾಪುರುಷರ ಪುರಾಣಕ್ಕೆ (ಇದನ್ನು ಮಹಾಪುರಾಣವೆಂದೂ ಕರೆಯುತ್ತಾರೆ. ಆದಿಪುರಾಣ ಅಥವಾ ವೃಷಭ ತೀರ್ಥಂಕರನ ಚರಿತೆಯು ಈ ಮಹಾಪುರಾಣದ ಒಂದು ಭಾಗ), (೧) ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕ, ಈ ಮೂರೂಲೋಕಗಳು ಸ್ಥಿತವಾಗಿರುವ ಲೋಕಾಕಾರದ ವರ್ಣನೆಯೂ; (೨) ದೇಶ, ಅದರ ವಿಸ್ತೀರ್ಣ, ವಿನ್ಯಾಸ, ಗಡಿ, ಇವುಗಳ ತಿಳಿವಳಿಕೆಯೂ; (೩) ನಗರ ಸಂಪತ್ತಿನ ಸೊಗಸಾದ ವರ್ಣನೆಯೂ; (೪) ರಾಜ್ಯಸೌಂದರ್ಯದ ಕಥೆಯೂ; (೫) ತೀರ್ಥಕ್ಷೇತ್ರಗಳ ಮಹಿಮೆಯನ್ನು ಸಮರ್ಥಿಸುವುದೂ; (೬) ದೇವ, ಮನುಷ್ಯ, ತಿರ್ಯಗ್ ಮತ್ತು ನಾರಕಿ ಎಂಬ ಚತುರ್ಗತಿಗಳ ಸ್ವರೂಪದ ನಿರೂಪಣೆಯೂ; (೭) ತಪಸ್ಸು ಮತ್ತು ದಾನಮಾಡುವ

[1] ಮೂಲಪಾಠ–'ರಾಜ್ಯರಮಣೀಯತಾಖ್ಯಾನಮುಂ', ಕನ್ನಡ ಕೈಪಿಡಿ, ಸಂಪುಟ–೨, IV. ಜೈನ ಕವಿಗಳು, ಪುಟ ೪೪೯ ರಲ್ಲಿರುವ ಪಾಠ–'ರಾಜ್ಯರಮಣೀಯಕಾಖ್ಯಾನಮುಂ'

ಕ್ರಮದ ವರ್ಣನೆಯೂ; (೮) ಅದರಿಂದ ದೊರೆಯುವ ಫಲಗಳ ಪ್ರಾಪ್ತಿಯನ್ನು ಪ್ರಸಿದ್ಧಪಡಿಸುವುದೂ, ಈ ಪ್ರಕಾರವಾಗಿ ಎಂಟು ಅಂಗಗಳಿವೆ. ೧-೪೨ (ವ)

ಈ ವಚನಕ್ಕೆ ಸಂವಾದಿಯಾದ ಪೂರ್ವಪುರಾಣದ ಶ್ಲೋಕಗಳು:

ಲೋಕೋ ದೇಶಃ ಪುರಂ ರಾಜ್ಯಂ ತೀರ್ಥಂ ದಾನತಪೋದ್ವಯಮ್ ।
ಪುರಾಣೇಷ್ವಷ್ಟಧಾಖ್ಯೇಯಂ ಗತಯಃ ಫಲಮಿತ್ಯಪಿ ॥ಪೂ.ಪು., ೪-೩॥

ಅರ್ಥ: ಪುರಾಣಗಳಲ್ಲಿ ಲೋಕ, ದೇಶ, ಪಟ್ಟಣ, ರಾಜ್ಯ, ತೀರ್ಥ, ದಾನತಪಸ್ಸು, ಗತಿಗಳು, ಫಲ ಈ ಎಂಟು ವಿಷಯಗಳನ್ನು ಹೇಳಬೇಕು.

(೧) ವಿಸ್ತಾರವಾಗಿ ಲೋಕದ ಹೆಸರನ್ನೂ, ಅವಯವಾರ್ಥವನ್ನೂ, ದಿಕ್ಕುಗಳ ವಿಶೇಷ ವರ್ಣನೆಯನ್ನೂ ವರ್ಣಿಸುವುದಕ್ಕೆ ಲೋಕಾಖ್ಯಾನವೆಂದು ಹೆಸರು (ಪೂ.ಪು., ೪-೪); (೨) ಲೋಕದ ಏಕದೇಶಗಳಾದ ದೇಶ, ಪರ್ವತ, ದ್ವೀಪ, ಸಮುದ್ರ ಮೊದಲಾದವುಗಳ ವಿಸ್ತಾರವಾದ ವರ್ಣನೆಯು ದೇಶಾಖ್ಯಾನವೆಂದು ಸಮ್ಯಗ್ಜ್ಞಾನವೆಂಬ ನೇತ್ರವುಳ್ಳ ಪ್ರಾಜ್ಞರು ತಿಳಿಯಬೇಕು (ಪೂ.ಪು., ೪-೫); (೩) ಭರತ ಮೊದಲಾದ ಕ್ಷೇತ್ರಗಳಲ್ಲಿರುವ ರಾಜಧಾನಿಗಳನ್ನು ವರ್ಣನೆಮಾಡುವುದು ಪುರಾಖ್ಯಾನ-ಪಟ್ಟಣದ ಕಥನವೆಂದು ಪುರಾತನಜ್ಞಾನಿಗಳ ಅಭಿಪ್ರಾಯವಾಗಿದೆ (ಪೂ.ಪು., ೪-೬); (೪) ಈ ಕ್ಷೇತ್ರದಲ್ಲಿ ಇದು ದೇಶ, ಇದು ನಗರ, ಇವನು ಆ ನಗರದ ರಾಜನು ಎಂಬುದಾಗಿ ವರ್ಣಿಸುವುದಕ್ಕೆ ಜಿನಾಗಮದಲ್ಲಿ ರಾಜ್ಯಾಖ್ಯಾನವೆಂದು ಹೆಸರು (ಪೂ.ಪು., ೪-೭); (೫) ಅಪಾರವಾದ ಸಂಸಾರವೆಂಬ ಸಮುದ್ರವನ್ನು ದಾಟಿಸುವುದರಲ್ಲಿ ಸಮರ್ಥವಾದ ಜಿನೇಶ್ವರರ ವ್ಯಾಪಾರ-ಉಪದೇಶಕ್ಕೆ ತೀರ್ಥವೆಂದು ಹೆಸರು. ಇದನ್ನು ಹೇಳುವುದಕ್ಕೆ ತೀರ್ಥಸಂಕಥಾ-ತೀರ್ಥಾಖ್ಯಾನವೆಂದು ಹೆಸರು (ಪೂ.ಪು., ೪-೮); (೬) ಉಪಮಾತೀತವಾದ ಗುಣಗಳುಳ್ಳ ತಪಸ್ಸನ್ನೂ ದಾನವನ್ನೂ ವರ್ಣಿಸುವುದಕ್ಕೆ ತಪೋದಾನಕಥೆಯೆಂದು ಹೆಸರು (ಪೂ.ಪು., ೪-೯); (೭) ನರಕಾದಿಭೇದದಿಂದ ಗತಿಗಳು ನಾಲ್ಕು. ಆ ಗತಿಗಳ ವರ್ಣನೆಗೆ ಗತ್ಯಾಖ್ಯಾನವೆಂದು ಹೆಸರು (ಪೂ.ಪು., ೪-೧೦); (೮) ಪ್ರಾಣಿಗಳಿಗುಂಟಾಗುವ ಪಾಪ-ಪುಣ್ಯಗಳನ್ನು ವರ್ಣಿಸುವುದಕ್ಕೆ ಫಲಾಖ್ಯಾನವೆಂದು ಹೆಸರು. ಈ ಫಲಾಖ್ಯಾನವು ಮೋಕ್ಷಪ್ರಾಪ್ತಿ ಯಾಗುವವರೆಗೂ ಇರುತ್ತದೆ (ಪೂ.ಪು., ೪-೧೧). ಇವು **ಪೂರ್ವಪುರಾಣ**ದಲ್ಲಿ ವರ್ಣಿತವಾಗಿರುವ ಪುರಾಣದ ಎಂಟು ವಿಷಯಗಳ ವಿವರಣೆ.

ಮತ್ತೇಭ **ಅವಱೊಳ್ಲೋಕಮದೆಂತುಟೆಂದೊಡೆ ಸಮಂತಾವಂಗಮೆತ್ತೆತ್ತ ನೋ**
ವಿಕ್ರೀಡಿತ **ಡುವೊಡಂ ನೋಡಲನಂತಮಪ್ಪ ವಿಭುವಪ್ಪಾಕಾಶಪದ್ಮಕ್ಕೆ ತಾ**
ನೆ ವಲಂ ಕರ್ಣಿಕೆಯಂದಮಾಯ್ತೆನೆ ವಿಯನ್ಮಧ್ಯಸ್ಥಮಂತಸ್ಸ್ಥ ಕ
ರ್ಮವಶಭ್ರಾಮ್ಯದನೇಕಜೀವನಿವಹಕ್ರೋಡೀಕೃತಾಭ್ಯಂತರಂ ॥ ೧-೪೩

ಪದ ವಿಭಾಗ: ಅವಱೊಳ್, ಲೋಕಂ, ಅದೆಂತುಟು, ಎಂದೊಡೆ, ಸಮಂತು, ಆವ, ಅಂಗಂ, ಎತ್ತೆತ್ತ,
ನೋಡುವೊಡಂ, ನೋಡಲ್, ಅನಂತಮಪ್ಪ, ವಿಭುವಪ್ಪ, ಆಕಾಶ-ಪದ್ಮಕ್ಕೆ,
ತಾನೆ, ವಲಂ, ಕರ್ಣಿಕೆಯಂದಂ, ಆಯ್ತೆನೆ, ವಿಯತ್, ಮಧ್ಯಸ್ಥಂ, ಅಂತಸ್ಸ್ಥ,
ಕರ್ಮವಶ-ಭ್ರಾಮ್ಯತ್, ಅನೇಕ-ಜೀವ-ನಿವಹ-ಕ್ರೋಡೀಕೃತ, ಅಭ್ಯಂತರಂ ॥ ೧-೪೩

ಅನ್ವಯಾರ್ಥ: (ಅವಱೊಳ್) ಅವುಗಳಲ್ಲಿ [ಮೇಲಿನ ವಚನದಲ್ಲಿ ವಿವರಿಸಿರುವ ಪುರಾಣದ ಎಂಟು ಅವಯವಗಳಲ್ಲಿ ಮೊದಲನೆಯದಾದ ಲೋಕಾಕಾರದ ನಿರೂಪಣೆಯಲ್ಲಿ], **(ಲೋಕಮದೆಂತುಟೆಂದೊಡೆ=ಲೋಕಂ+ಅದು+ಎಂತುಟು+ ಎಂದೊಡೆ)** ಲೋಕವು ಅದು ಹೇಗಿದೆಯೆಂದು ಹೇಳುವುದಾದರೆ, **(ಸಮಂತಾವಂಗಮೆತ್ತೆತ್ತ=ಸಮಂತ+ಆವ+ಅಂಗಂ+ಎತ್ತೆತ್ತ)** ದಿಗಂತದ ಯಾವುದೇ ಭಾಗವನ್ನು ಎಲ್ಲೆಲ್ಲಿ **(ನೋಡುವೊಡಂ)** ನೋಡಿದರೂ **(ನೋಡಲ್)** ಕಾಣುವ, **(ಅನಂತಮಪ್ಪ)** ಅನಂತವಾಗಿರುವುದೂ [ಆದಿಅಂತ್ಯವಿಲ್ಲದುದೂ], **(ವಿಭುವಪ್ಪ)** ಸರ್ವವ್ಯಾಪಿಯಾಗಿರುವುದೂ [ಆದ], **(ಆಕಾಶ ಪದ್ಮಕ್ಕೆ)** ಆಕಾಶವೆಂಬ ಕಮಲಕ್ಕೆ **(ವಲಂ)** ಖಂಡಿತವಾಗಿಯೂ **(ತಾನೇ)** ಸ್ವತಃ [ಆ ಲೋಕವೇ] **(ಕರ್ಣಿಕೆಯಂದಂ=ಕರ್ಣಿಕೆ+ಅಂದಂ)** ಕರ್ಣಿಕೆಯ ರೀತಿಯಲ್ಲಿ **(ಆಯ್ತೆನೆ=ಆಯ್ತು+ಎನೆ)** ಒಪ್ಪುತ್ತಿದೆ ಎನ್ನುವಂತೆ **(ವಿಯನ್ಮಧ್ಯಸ್ಥಂ=ವಿಯತ್+ಮಧ್ಯಸ್ಥಂ)** ಆಕಾಶದ ನಟ್ಟನಡುವೆ ನೆಲಸಿದೆ [ಮಧ್ಯದಲ್ಲಿ ಸ್ಥಿತವಾಗಿದೆ]. **(ಅಂತಸ್ಸ್ಥ)** ಅದರ ಒಳಗಡೆ [ಆಕಾಶದ ಮಧ್ಯದಲ್ಲಿ ಕರ್ಣಿಕೆಯಂತೆ ಸ್ಥಿತವಾಗಿರುವ ಲೋಕದ ಒಳಗಡೆ], **(ಕರ್ಮವಶ)** ಕರ್ಮಕ್ಕೆ ಅಧೀನವಾಗಿ [ಆಯಾ ಜೀವಿಗಳ ಕರ್ಮಕ್ಕನುಗುಣವಾಗಿ]

(ಭ್ರಾಮ್ಯತ್) [ನಾಲ್ಕುಗತಿಗಳಲ್ಲಿ] ಸುತ್ತುತ್ತಿರುವ **(ಅನೇಕ ಜೀವ ನಿವಹ)** ಅನೇಕ ಜೀವಿಗಳ ಸಮೂಹವು **(ಅಭ್ಯಂತರಂ)** ಒಳಗೆಲ್ಲಾ **(ಕ್ರೋಡೀಕೃತ)** ತುಂಬಿಕೊಂಡಿವೆ [ಸಂಗ್ರಹೀತವಾಗಿವೆ] ॥ ೧–೪೩

ಭಾವಾರ್ಥ: ಮೇಲಿನ ೧–೪೨ (ವ) ವಚನದಲ್ಲಿ ವಿವರಿಸಿರುವ ಪುರಾಣದ ಎಂಟು ಅವಯವಗಳಲ್ಲಿ ಮೊದಲನೆಯದಾದ ಲೋಕಾಕಾರದ ನಿರೂಪಣೆಯಲ್ಲಿ ಲೋಕವು ಹೇಗಿದೆಯೆಂದು ಹೇಳುವುದಾದರೆ, ದಿಗಂತದ ಯಾವಕಡೆ ನೋಡಿದರೂ ಕಾಣುವ, ಅನಂತವಾಗಿರುವುದೂ [ಆದಿಅಂತ್ಯವಿಲ್ಲದುದೂ], ಸರ್ವವ್ಯಾಪಿಯಾಗಿರುವುದೂ ಆದ ಆಕಾಶವೆಂಬ ಕಮಲಕ್ಕೆ ಆ ಲೋಕವೇ ಕರ್ಣಿಕೆಯಂತಿರುವುದು ಎನ್ನುವಂತೆ ಆಕಾಶದ ನಟ್ಟನಡುವೆ ನೆಲಸಿದೆ. ಆ ಆಕಾಶದ ಮಧ್ಯದಲ್ಲಿ ಕರ್ಣಿಕೆಯಂತೆ ಸ್ಥಿತವಾಗಿರುವ ಲೋಕದ ಒಳಗಡೆ, ಕರ್ಮಕ್ಕೆ ಅಧೀನವಾಗಿ [ಆಯಾ ಜೀವಿಗಳ ಕರ್ಮಕ್ಕನುಗುಣವಾಗಿ] ನಾಲ್ಕುಗತಿಗಳಲ್ಲಿ ಸುತ್ತುತ್ತಿರುವ ಅನೇಕ ಜೀವಿಗಳ ಸಮೂಹವು ಒಳಗೆಲ್ಲಾ ತುಂಬಿಕೊಂಡಿವೆ. ೧–೪೩

ವಿಶೇಷ ವಿವರಣೆ: ಆದಿಪುರಾಣದ ಕಥೆಯನ್ನು ಕವಿಯು, ಲೋಕಾಲೋಕದ ವರ್ಣನೆಯನ್ನು ನೀಡುವ ಈ ಪದ್ಯದೊಂದಿಗೆ ಪ್ರಾರಂಭಿಸುತ್ತಾನೆ. ಮೇಲಿನ ೧–೩೯ ನೆಯ ಪದ್ಯದಲ್ಲಿ, **ಪೂರ್ವಾನುಯೋಗ**ವೆಂಬ (ಪ್ರಥಮಾನುಯೋಗ) ಸಮುದ್ರದಿಂದ ಏಳುವ ಅಲೆಯಂತಿರುವ ಆದಿಪುರಾಣವನ್ನು ತಾನು ಹೇಳುತ್ತಿರುವುದಾಗಿ ಕವಿಯು ತಿಳಿಸಿದ್ದಾನೆ. **ಪೂರ್ವಾನುಯೋಗ**ವು ಉಳಿದ ಮೂರೂ ಅನುಯೋಗಗಳ ವಿಷಯಗಳನ್ನು ಒಳಗೊಂಡಿದುದಾಗಿರುತ್ತದೆ. ಆದುದರಿಂದ, ಕಥೆಯು ಪ್ರಾರಂಭವಾಗುವುದು ಎರಡನೆಯ ಅನುಯೋಗವಾದ **'ಕರಣಾನುಯೋಗ'**ದ ವಿಷಯದಿಂದ ಪ್ರಾರಂಭವಾಗುತ್ತದೆ. **ಕರಣಾನುಯೋಗ**ದಲ್ಲಿ ಲೋಕ, ಅಲೋಕಗಳ ವಿಭಾಗ, ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಕಾಲಗಳ ಭೇದ ಮೊದಲಾದ ವಿಚಾರಗಳು ಬರುತ್ತವೆ. ಕರಣಾನುಯೋಗ ವನ್ನು, (೧) **ಲೋಕಾಲೋಕ ವಿಭಜನ,** (೨) **ಯುಗ ಪರಿವರ್ತನ,** ಮತ್ತು (೩) **ಚತುರ್ಗತಿಗಳ ಭಾಗ** ಎಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಈ ಪದ್ಯದಲ್ಲಿ ಕವಿಯು, ಮೇಲಿನ ೧–೪೨ ನೆಯ ಪದ್ಯದ ನಂತರದ ವಚನದಲ್ಲಿ [೧–೪೨ (ವ)] ತಿಳಿಸಿರುವಂತೆ, ಪುರಾಣದ ಎಂಟು ಅವಯವಗಳಲ್ಲಿ ಮೊದಲನೆಯದಾದ **'ಲೋಕಾಕಾರದ ನಿರೂಪಣೆಯು'**, ನಾಲ್ಕು ಅನುಯೋಗಗಳಲ್ಲಿ ಎರಡನೆಯದಾದ **ಕರಣಾನುಯೋಗ**ದ ಮೊದಲನೆಯ ವಿಭಾಗವಾದ **'ಲೋಕಾಲೋಕ ವಿಭಜನೆ'**ಗೆ ಸಂಬಂಧಿಸಿದ ವಿಷಯವಾಗಿದ್ದು, ಅದರಲ್ಲಿ ಅನಂತವಾಗಿರುವ ಆಕಾಶದ ವರ್ಣನೆಯನ್ನು ಮಾಡಿ, ಅದರ ನಟ್ಟನಡುವೆ ಸ್ಥಿತವಾಗಿರುವ ಲೋಕದ ರೂಪುರೇಖೆಗಳನ್ನು ನಮಗೆ ಪರಿಚಯಿಸಿದ್ದಾನೆ. ಅನಂತವಾಗಿರುವ ಆಕಾಶಕ್ಕೆ ಕಮಲದ ಹೂವಿನ ಆಕಾರದ ಸಾದೃಶ್ಯವನ್ನೂ, ಅದರ ಮಧ್ಯದಲ್ಲಿರುವ ಲೋಕಕ್ಕೆ ತಾವರೆ ಹೂವಿನ ಮಧ್ಯಭಾಗದಲ್ಲಿರುವ ಕರ್ಣಿಕೆ ಅಥವಾ ಬೀಜಕೋಶದ ಸಾದೃಶ್ಯವನ್ನೂ ನೀಡಿರುವನು. ಅನಂತವಾದ ಆಕಾಶದ ಮಧ್ಯದಲ್ಲಿ ಕರ್ಣಿಕೆ ಅಥವಾ ಬೀಜಕೋಶದಂತಿರುವ ಲೋಕವನ್ನು ಅಥವಾ ಲೋಕಾಕಾಶವನ್ನು ಹೊರತುಪಡಿಸಿ, ಆಕಾಶದ ಉಳಿದ ಭಾಗವನ್ನು **'ಅಲೋಕ'** ಅಥವಾ **'ಅಲೋಕಾಕಾಶ'** ಎನ್ನುವರು. ಕರ್ಣಿಕೆಯಂತಿರುವ ಲೋಕದಲ್ಲಿ ಅನೇಕ (ಅನಂತ) ಜೀವಿಗಳ ಸಮೂಹವು, ಅವು ಗಳಿಸಿದ ಕರ್ಮಗಳಿಗೆ ಅಧೀನವಾಗಿ ಚತುರ್ಗತಿಗಳಲ್ಲಿ ಸುತ್ತುತ್ತಿರುವುದನ್ನು ತಿಳಿಸಿರುವನು. ಹೀಗೆ ಕವಿಯು ಲೋಕ ಮತ್ತು ಅಲೋಕಗಳ ವಿಭಜನೆಯ ವಿಚಾರವನ್ನು ಸಂಕ್ಷಿಪ್ತವಾಗಿ ಆದರೆ ಸ್ಪಷ್ಟ ಸಾದೃಶ್ಯಗಳಿಂದ ವರ್ಣಿಸಿರುವನು.

'ಕರ್ಣಿಕೆ' ಎಂದರೆ ಹೂವಿನ ಮಧ್ಯಭಾಗ ಅಂದರೆ ಬೀಜಕೋಶವಿರುವ ವೃತ್ತಾಕಾರದ ಭಾಗ.

ಅನೇಕಜೀವನಿವಹಕ್ರೋಡೀಕೃತಾಭ್ಯಂತರಂ: ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ಲೋಕ್ಯಂತೇऽಸ್ಮಿನ್ನಮೀಕ್ಷ್ಯಂತೇ ಜೀವಾದ್ಯರ್ಥಾಃ ಸಪರ್ಯಯಾಃ ।
ಇತಿ ಲೋಕಸ್ಯ ಲೋಕತ್ವಂ ನಿರಾಹುಸ್ತತ್ತ್ವದರ್ಶಿನಃ ॥ಪೂ.ಪು., ೪–೧೩॥

ಅರ್ಥ: ಜೀವ, ಅಜೀವ ಮೊದಲಾದ ಪದಾರ್ಥಗಳು ಪರ್ಯಾಯಸಹಿತಗಳಾಗಿ ಯಾವುದರಲ್ಲಿ ಕಾಣಲ್ಪಡುತ್ತವೆಯೋ ಅದು ಲೋಕವೆಂದು ತತ್ತ್ವಜ್ಞಾನಿಗಳು ಹೇಳುತ್ತಾರೆ.

ಕಂದ **ಅದನಾದ್ಯನಿಧನಗುಣಯುತ**
ಮದಕೃತ್ರಿಮಮದು ಮರುತ್ತ್ರಿಕಾವೇಷ್ಟಿತಮಂ
ತದು ಸುಪ್ರತಿಷ್ಠಕೋಪಮು[1]
ಮದು ಜಿನಮತದೊಳ್ ದ್ವಿಸಪ್ತರಜ್ಜೂತ್ಸೇಧಂ ॥ ೧-೪೪

ಪದ ವಿಭಾಗ: ಅದು, ಅನಾದ್ಯನಿಧನ-ಗುಣಯುತಂ;
ಅದು, ಅಕೃತ್ರಿಮಂ; ಅದು-ಮರುತ್ತ್ರಿಕಾವೇಷ್ಟಿತಂ;
ಅಂತು, ಅದು, ಸುಪ್ರತಿಷ್ಠಕೋಪಮಂ;
ಅದು, ಜಿನಮತದೊಳ್, ದ್ವಿಸಪ್ತ-ರಜ್ಜೂತ್ಸೇಧಂ ॥ ೧-೪೪

ಅನ್ವಯಾರ್ಥ: **(ಅದನಾದ್ಯನಿಧನಗುಣಯುತಂ=ಅದು+ಅನಾದ್ಯನಿಧನ[=ಅನಾದಿ+ಅನಿಧನ]-ಗುಣಯುತಂ)** ಆ ಲೋಕವು ಅನಾದಿಕಾಲದಿಂದ ಇರುವುದೂ, ನಾಶವಿಲ್ಲದುದೂ ಆದ ಗುಣಾತಿಶಯವನ್ನು ಹೊಂದಿರುವುದು. **(ಅದು)** ಆ ಲೋಕವು **(ಅಕೃತ್ರಿಮಂ=ಸ್ವತಃಸಿದ್ಧವಾದುದು)** ಕೃತಕವಲ್ಲದುದು [ಯಾರೂ ಸೃಷ್ಟಿಸಿಲ್ಲದಿರುವುದು/ಸಹಜವಾದದ್ದು]. **(ಅದು)** ಆ ಲೋಕವು **(ಮರುತ್ತ್ರಿಕಾವೇಷ್ಟಿತಂ=ಮರುತ್ತ್ರಿಕ+ಆವೇಷ್ಟಿತಂ)** [ಕ್ರಮವಾಗಿ] ಘನೋದಧಿ, ಘನವಾತ ಮತ್ತು ತನುವಾತಗಳೆಂಬ ಮೂರು ವಾಯುವಲಯಗಳಿಂದ ಸುತ್ತುವರೆದಿರುವುದು [ಮೂರು ಗಾಳಿಯ ವಲಯದ ಆಧಾರದಿಂದ ನಿಂತಿರುವುದು]. **(ಅಂತು)** ಆ ರೀತಿಯಲ್ಲಿ **(ಅದು)** ಲೋಕವು **(ಸುಪ್ರತಿಷ್ಠಕೋಪಮಂ=ಸುಪ್ರತಿಷ್ಠಕಾ+ಉಪಮಂ)** ಮೂರು ವಸ್ತ್ರಗಳಿಂದ ಸುತ್ತಲ್ಪಟ್ಟ ಸುಪ್ರತಿಷ್ಠಕವೆಂಬ ಮಂಗಲ ದ್ರವ್ಯವನ್ನು ಹೋಲುವುದು. **(ಅದು)** ಆ ಲೋಕವು **(ಜಿನಮತದೊಳ್)** ಜೈನಸಿದ್ಧಾಂತದಲ್ಲಿ ಹೇಳಿರುವಂತೆ [ಜಿನಶಾಸನದಲ್ಲಿ ಉಕ್ತವಾಗಿರುವಂತೆ] **(ದ್ವಿಸಪ್ತರಜ್ಜೂತ್ಸೇಧಂ=ದ್ವಿಸಪ್ತರಜ್ಜು+ಉತ್ಸೇಧಂ)** ಹದಿನಾಲ್ಕು ರಜ್ಜುಗಳಷ್ಟು ಎತ್ತರವನ್ನುಳ್ಳದ್ದು ॥ ೧-೪೪

ಭಾವಾರ್ಥ: ಆ ಲೋಕವು ಮೊದಲಾಗಲಿ (ಹುಟ್ಟುಗಲಿ), ಕೊನೆಯಾಗಲಿ (ನಾಶವಾಗಲಿ) ಇಲ್ಲದುದು ಆದ ಗುಣಾತಿಶಯ ವನ್ನು ಹೊಂದಿರುವುದು. ಆ ಲೋಕವು ಯಾರಿಂದಲೂ ಸೃಷ್ಟಿಯಾಗಿಲ್ಲದಿರುವುದು. ಆ ಲೋಕವು ಕ್ರಮವಾಗಿ ಘನೋದಧಿ, ಘನವಾತ ಮತ್ತು ತನುವಾತಗಳೆಂಬ ಮೂರು ವಾಯುವಲಯಗಳಿಂದ ಸುತ್ತುವರೆದಿರುವುದು. ಆ ರೀತಿಯಲ್ಲಿ ಲೋಕವು ಮೂರು ವಸ್ತ್ರಗಳಿಂದ ಸುತ್ತಲ್ಪಟ್ಟ ಸುಪ್ರತಿಷ್ಠಕವೆಂಬ ಮಂಗಲ ದ್ರವ್ಯವನ್ನು ಹೋಲುವುದು. ಆ ಲೋಕವು ಜೈನಸಿದ್ಧಾಂತದಲ್ಲಿ ಹೇಳಿರುವಂತೆ ಹದಿನಾಲ್ಕು ರಜ್ಜುಗಳಷ್ಟು ಎತ್ತರವುಳ್ಳದ್ದು ॥ ೧-೪೪

ಈ ಕಂದಪದ್ಯಕ್ಕೆ ಸಂವಾದಿಯಾದ ಪೂರ್ವಪುರಾಣದ ಶ್ಲೋಕಗಳು ಹೀಗಿವೆ: ಅನಾದ್ಯನಿಧನ: ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ತತೋಽಸಾವಕೃತೋಽನಾದಿನಿಧನಃ ಕಾಲತತ್ತ್ವವತ್ ।
ಲೋಕೋ ಜೀವಾದಿತತ್ತ್ವಾನಾಮಾಧಾರಾತ್ಮಾ ಪ್ರಕಾಶತೇ ॥ಪೂ.ಪು., ೪-೩೯॥

ಅರ್ಥ: [ಆದುದರಿಂದ] ಜೀವಾದಿ ತತ್ತ್ವಗಳಿಗೆ ಆಧಾರರೂಪವಾದ ಈ ಲೋಕವು ಯಾರಿಂದಲೂ ಮಾಡಲ್ಪಡದೆ ಕಾಲತತ್ತ್ವದಂತೆ ಅನಾದಿನಿಧನವಾಗಿ ಪ್ರಕಾಶಿಸುತ್ತಿದೆ.

ಅಕೃತ್ರಿಮಮಂ: ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ಅಸೃಜ್ಯೋಽಯಮಸಂಹಾರ್ಯಃ ಸ್ವಭಾವನಿಯತಸ್ಥಿತಿಃ ।
ಅಧಸ್ತಿರ್ಯಗುಪರ್ಯಾಖ್ಯೈಸ್ತ್ರಿಭಿರ್ಭೇದೈಃ ಸಮನ್ವಿತಃ ॥ಪೂ.ಪು., ೪-೪೦॥

ಅರ್ಥ: ಅಧೋ ಮಧ್ಯ ಊರ್ಧ್ವ ಈ ಮೂರು ಭೇದಗಳಿಂದ ಕೂಡಿಕೊಂಡಿರುವ ಈ ಲೋಕವನ್ನು ಈಶ್ವರನು ಸೃಷ್ಟಿಸುವುದೂ

[1] ಧ್ವಜ (ಬಾವುಟ), ದರ್ಪಣ (ಕನ್ನಡಿ), ಚಂಚತ್ (ಇಂದ್ರಕ ವಿಮಾನ), ಚಮರಜ (ಚಮರೀಮೃಗದ ಕೂದಲಿನಿಂದ ಮಾಡಿದ ಚಾಮರ), ಮಣಿ (ರತ್ನಗಳು), ಭೃಂಗಾರ (ಸುವರ್ಣಗಿಂಡಿ), ಸುಪ್ರತಿಷ್ಠಕ, ತಾಳ (ತಾಳವಾದ್ಯ), ವ್ಯಜನ (ಬೀಸಣಿಗೆ), ಕಳಶ, ಆತಪತ್ರ (ಬಿಳ್ಗೊಡೆ) ಇತ್ಯಾದಿಗಳು ಮಂಗಳದ್ರವ್ಯಗಳು. ತಿಲೋಯಪಣ್ಣತ್ತೀ ೪-೧೬೩ ರಂತೆ ಮಂಗಳದ್ರವ್ಯಗಳು ಕೇವಲ ಎಂಟು ಮಾತ್ರ.

ಇಲ್ಲ, ಸಂಹಾರಮಾಡುವುದೂ ಇಲ್ಲ. ಇದು ಸ್ವಭಾವದಿಂದಲೇ ನಿಶ್ಚಿತವಾದ ಸ್ಥಿತಿಯುಳ್ಳುದಾಗಿದೆ. (ಹೆಚ್ಚಿನ ವರ್ಣನೆಗೆ ಪೂ.ಪು. ೪–೩೯ ರಿಂದ ೪–೪೫ ರವರೆಗೆ ನೋಡಿರಿ)


ಆದಿ ಣಿಹಣೇಣ ಹೀಣೋ ಪಯಡಿ ಸರೂವೇಣ ಏಸ ಸಂಜಾದೋ ।
ಜೀವಾಜೀವ ಸಮಿದ್ಧೋ ಸವ್ವಣ್ಹಾವಲೋಇಓ ಲೋಓ ॥ (ತಿಲೋಯಪಣ್ಣತ್ತೀ, ೧–೧೩೩)

ಅರ್ಥ: ಸರ್ವಜ್ಞ ಭಗವಂತರು ಕಂಡ ಈ ಲೋಕವು ಆದಿ ಮತ್ತು ಅಂತಗಳಿಂದ ರಹಿತವಾದದ್ದೂ, ಸ್ವತಃ ಉತ್ಪನ್ನವಾದದ್ದೂ, ಮತ್ತು ಜೀವ ಹಾಗೂ ಅಜೀವ ದ್ರವ್ಯಗಳಿಂದ ವ್ಯಾಪ್ತವಾಗಿದೆ.

ಸ್ಫುಟವೈಶಾಖಸ್ಥಾನಂ
ಕಟಿತಟವಿನ್ಯಸ್ತಹಸ್ತಯುಗನಾಗಿ ಮಹಾ
ಲಟಹಂಬೆರಸಿರ್ದೊಪ್ಪುವ
ನಟನಾಕೃತಿ ತಾನೆ ಲೋಕದೊಂದಾಕಾರಂ ॥ **೧–೪೫**

ಪದ ವಿಭಾಗ: ಸ್ಫುಟ–ವೈಶಾಖಸ್ಥಾನಂ,
ಕಟಿತಟ–ವಿನ್ಯಸ್ತ–ಹಸ್ತ–ಯುಗನಾಗಿ,
ಮಹಾ–ಲಟಹಂ, ಬೆರಸಿರ್ದು, ಒಪ್ಪುವ,
ನಟನಾಕೃತಿ–ತಾನೆ, ಲೋಕದೊಂದಾಕಾರಂ ॥ ೧–೪೫

ತ್ರಿಲೋಕದ ಚಿತ್ರ



ಅನ್ವಯಾರ್ಥ: **(ಲೋಕದೊಂದಾಕಾರಂ=ಲೋಕದ+ಒಂದು+ಆಕಾರಂ)** ಲೋಕದ [ಈ] ಒಂದು ಆಕಾರವು, **(ಸ್ಫುಟ ವೈಶಾಖ ಸ್ಥಾನಂ)** ಕಾಲುಗಳನ್ನು ಹಿಗ್ಗಲಿಸಿ ಕಿಸುಗಾಲಲ್ಲಿ ನಿಂತು **(ಕಟಿತಟ ವಿನ್ಯಸ್ತ ಹಸ್ತಯುಗನಾಗಿ)** ಸೊಂಟದ ಮೇಲೆ ಎರಡೂ ಕೈಗಳನ್ನು ಇಟ್ಟುಕೊಂಡವನಾಗಿ, **(ಮಹಾ ಲಟಹಂ)** ಉತ್ಕೃಷ್ಟ ಸೌಂದರ್ಯದಿಂದ **(ಬೆರಸಿರ್ದು)** ಒಡಗೂಡಿ **(ಒಪ್ಪುವ)** ಸೊಗಯಿಸುತ್ತಿರುವ **(ನಟನಾಕೃತಿ=ನಟನ+ಆಕೃತಿ)** ನಟನ ಭಂಗಿಯಲ್ಲಿದೆ **(ತಾನೆ)** ಅಲ್ಲವೇ ॥ ೧-೪೫

ಭಾವಾರ್ಥ: ಉತ್ಕೃಷ್ಟ ಸೌಂದರ್ಯದಿಂದ ಒಡಗೂಡಿ ಸೊಗಯಿಸುತ್ತಿರುವ ಲೋಕದ ಆಕಾರವು, ವ್ಯಕ್ತಿಯೊಬ್ಬನು ಕಾಲುಗಳನ್ನು ಹಿಗ್ಗಲಿಸಿ ಕಿಸುಗಾಲಲ್ಲಿ ನಿಂತು ಎರಡೂ ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಿರುವ ನಟನ ಆಕೃತಿಯಂತಿದೆ. ೧-೪೫

ಈ ಕಂದಪದ್ಯಕ್ಕೆ ಸಂವಾದಿಯಾದ ಪೂರ್ವಪುರಾಣದ ಶ್ಲೋಕಗಳು ಹೀಗಿವೆ: ಸ್ಫುಟವೈಶಾಖಸ್ಥಾನಂ ಕಟಿತಟವಿನ್ಯಸ್ತ ಹಸ್ತಯುಗನಾಗಿ: ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ವೈಶಾಖಸ್ಥಃ ಕಟಿನ್ಯಸ್ತಹಸ್ತಃ ಸ್ಯಾದ್ಯಾದೃಶಃ ಪುಮಾನ್ ।
ತಾದೃಶಂ ಲೋಕಸಂಸ್ಥಾನಮಾಮನಂತಿ ಮನೀಷಿಣಃ ॥ಪೂ.ಪು., ೪-೪೨॥

ಅರ್ಥ: ಕಾಲುಗಳನ್ನು ವಿಸ್ತರಿಸಿ ಕೈಗಳನ್ನು ಸೊಂಟದಲ್ಲಿರಿಸಿ ನಿಂತಿರುವ ಪುರುಷನ ಆಕಾರದಂತೆ ಈ ಲೋಕದ ಆಕಾರವಾಗಿದೆ ಯೆಂದೂ ಪ್ರಾಜ್ಞರು ಹೇಳುತ್ತಾರೆ.

ಮಾಡುವ ಕಿಡಿಸುವ ಗಸಣಿಗೆ
ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾ
ಡಾಡಿಯ ನರರ್ಗದು ಬಗೆಯಲ್
ಕೂಡದಧಸ್ತಿರ್ಯಗೂರ್ಧ್ವಭೇದವಿಭಿನ್ನಂ ॥ **೧-೪೬**

ಪದ ವಿಭಾಗ: ಮಾಡುವ, ಕಿಡಿಸುವ, ಗಸಣಿಗೆ,
ನಾಡೆಯುಮದು, ಪೊಱಗು; ಸಹಜ-ನಿಯತ-ಸ್ಥಿತಿ;
ನಾಡಾಡಿಯ-ನರರ್ಗೆ, ಅದು, ಬಗೆಯಲ್,
ಕೂಡದ, ಅಧಸ್ತಿರ್ಯಗೂರ್ಧ್ವ-ಭೇದ-ವಿಭಿನ್ನಂ ॥ ೧-೪೬

ಅನ್ವಯಾರ್ಥ: **(ಮಾಡುವ)** ಸೃಷ್ಟಿಸುವ **(ಕಿಡಿಸುವ)** ನಾಶಪಡಿಸುವ **(ಗಸಣಿಗೆ)** ಗೊಡವೆಗಳಿಂದ **(ನಾಡೆಯುಮದು= ನಾಡೆಯುಂ+ಅದು)** ಅತಿಶಯವಾಗಿ ಆ ಲೋಕವು **(ಪೊಱಗು)** ಹೊರತಾದುದು. **(ಸಹಜ)** ಸ್ವಭಾವದಿಂದಲೇ **(ನಿಯತ)** ಸ್ಥಿರವಾಗಿ [ಎಂದೆಂದಿಗೂ ಕೆಳಕ್ಕೆ ಬೀಳದಂತೆ] **(ಸ್ಥಿತಿ)** ನಿಂತುಕೊಂಡಿದೆ. **(ನಾಡಾಡಿಯ)** ಸಾಮಾನ್ಯರಾದ **(ನರರ್ಗೆ)** ಜನರಿಗೆ [ಮನುಷ್ಯರಿಗೆ] **(ಅದು)** ಆ ಲೋಕವು **(ಬಗೆಯಲ್)** ಯೋಚನೆಗೂ [ಕಲ್ಪನೆಗೂ] **(ಕೂಡದ)** ನಿಲುಕದ, **(ಅಧಸ್ತಿರ್ಯಗೂರ್ಧ್ವ=ಅಧಸ್+ತಿರ್ಯಕ್+ಊರ್ಧ್ವ)** ಅಧೋ[ಲೋಕ], ತಿರ್ಯಕ್[ಲೋಕ], ಊರ್ಧ್ವ[ಲೋಕ] **(ಭೇದ)** [ಎಂಬ ಮೂರು] ಪ್ರಕಾರದ **(ವಿಭಿನ್ನಂ)** ಭಾಗಗಳುಳ್ಳದ್ದಾಗಿದೆ ॥ ೧-೪೬

ಈ ಪದ್ಯದಲ್ಲಿ ಕವಿಯು ಲೋಕದ ಅತಿಶಯಗಳನ್ನು ಹೇಳಿದ್ದಾನೆ.

ಭಾವಾರ್ಥ: ಲೋಕವು ಸೃಷ್ಟಿಸುವ ಮತ್ತು ನಾಶಪಡಿಸುವ ಗೊಡವೆಗಳಿಂದ ಹೊರತಾದದ್ದು. ಇದು ಸಹಜವಾಗಿ ಕೆಳಗೆ ಬೀಳದಂತೆ ಒಂದೆಡೆ ಸ್ಥಿರವಾಗಿ ನಿಂತುಕೊಂಡಿದೆ. ಸಾಮಾನ್ಯ ಜನರ ಕಲ್ಪನೆಗೂ ನಿಲುಕದಂತೆ ಅದು ಅಧೋಲೋಕ, ತಿರ್ಯಗ್‌ಲೋಕ ಮತ್ತು ಊರ್ಧ್ವಲೋಕವೆಂದು ಮೂರು ಭಾಗವುಳ್ಳದ್ದಾಗಿದೆ. ೧-೪೬

ವಿಶೇಷ ವಿವರಣೆ: ಮಾಡುವ ಕಿಡಿಸುವ ಗಸಣಿಗೆ: ಈ ಲೋಕವನ್ನು ಯಾರೂ ಸೃಷ್ಟಿಸಿರುವುದಿಲ್ಲ ಮತ್ತು ಯಾರೂ ನಾಶಪಡಿಸು ವುದೂ ಇಲ್ಲ. ಇದು ಅನಾದಿನಿಧನವಾಗಿದೆ (ಹುಟ್ಟು ಮತ್ತು ಅಂತ್ಯಗಳಿಲ್ಲದ್ದು, ಶಾಶ್ವತವಾದದ್ದು).

ತಿರ್ಯಕ್ ಲೋಕದ ವರ್ಣನೆಯನ್ನು ಮುಂದೆ ಪದ್ಯ ಸಂಖ್ಯೆ ೧-೪೮ ರಲ್ಲಿಯೂ, ಅಧೋಲೋಕದ (ನರಕಲೋಕದ) ವರ್ಣನೆಯನ್ನು ೫-೮೧ (ವ) ದಿಂದ ೫-೯೪ ರವರೆಗಿನ ಪದ್ಯ/ವಚನಗಳಲ್ಲಿಯೂ, ಉತ್ತಮ ಭೋಗಭೂಮಿಯ ವರ್ಣನೆಯನ್ನು ೫-೨೮ ರಿಂದ ೫-೪೨ (ವ) ರವರೆಗಿನ ಪದ್ಯ/ವಚನಗಳಲ್ಲಿಯೂ ಕವಿಯು ನೀಡಿರುವನು.

ವಿತ್ರಸ್ತಕರ್ಮರಿಪುವ ಜ
ಗತ್ತ್ರಯದೀಪಕನ ಕಾಣ್ಕೆಗೊಳಗಾದುದು ಲೋ
ಕತ್ರಯಮದನುಕ್ರಮದೊಳ್
ವೇತ್ರಾಸನಝಲ್ಲರೀಮೃದಂಗಸಮಾನಂ ॥ ೧-೪೭

ಪದ ವಿಭಾಗ: ವಿತ್ರಸ್ತ, ಕರ್ಮ-ರಿಪುವ,
ಜಗತ್ತ್ರಯ-ದೀಪಕನ, ಕಾಣ್ಕೆಗೊಳಗಾದುದು-
ಲೋಕತ್ರಯಂ, ಅದು, ಅನುಕ್ರಮದೊಳ್,
ವೇತ್ರಾಸನ-ಝಲ್ಲರೀ-ಮೃದಂಗ-ಸಮಾನಂ ॥ ೧-೪೭

ಅನ್ವಯಾರ್ಥ: **(ಕರ್ಮ ರಿಪುವ)** ಕರ್ಮವೆಂಬ ಶತ್ರುಗಳನ್ನು **(ವಿತ್ರಸ್ತ)** ಭಯಗೊಳಿಸಿದ [ಗೆದ್ದ] **(ಜಗತ್ತ್ರಯ[=ಜಗತ್+ತ್ರಯ] ದೀಪಕನ)** ಮೂರುಲೋಕಗಳನ್ನು ಬೆಳಗುವವನಾದ [ಜಿನೇಂದ್ರನ] **(ಕಾಣ್ಕೆಗೆ)** [ಕೇವಲಜ್ಞಾನವೆಂಬ] ನೋಟಕ್ಕೆ **(ಲೋಕತ್ರಯಂ)** ಮೂರೂ ಲೋಕಗಳು [ಅಧೋಲೋಕ, ತಿರ್ಯಗ್ಲೋಕ ಮತ್ತು ಊರ್ಧ್ವಲೋಕ] **(ಒಳಗಾದುದು)** ಒಳಗಾಗಿರುವುದು. **(ಅದು)** ಆ ಲೋಕಗಳು **(ಅನುಕ್ರಮದೊಳ್)** ಅನುಕ್ರಮವಾಗಿ **(ವೇತ್ರಾಸನ=ವೇತ್ರ+ಆಸನ)** ಬೆತ್ತದ ಕುರ್ಚಿ [ಆಸನ], **(ಝಲ್ಲರೀ)** ಝಲ್ಲರಿ ಎಂಬ ವಾದ್ಯ [ಮತ್ತು] **(ಮೃದಂಗ)** ಮೃದಂಗ [ಇವುಗಳಿಗೆ] **(ಸಮಾನಂ)** ಸಮಾನವಾಗಿದೆ ॥ ೧-೪೭

ಜೈನಾಗಮದ **ಕರಣಾನುಯೋಗ** ಗ್ರಂಥಗಳಲ್ಲಿ ಅಧೋತಿರ್ಯಕ್ಊರ್ಧ್ವ ಈ ಮೂರೂ ಲೋಕಗಳ ಆಕಾರವನ್ನು ತಿಳಿಯಲು, ಅವುಗಳ ಸಾದೃಶ್ಯಗಳನ್ನು ನೀಡಿರುವರು. ಈ ಪದ್ಯದಲ್ಲಿಯೂ ಕವಿಯು ಮೂರೂ ಲೋಕಗಳನ್ನು ವರ್ಣಿಸಲು ಆ ಸಾದೃಶ್ಯಗಳನ್ನೇ ನೀಡಿರುವನು.

ಭಾವಾರ್ಥ: ಅಧೋಲೋಕವು ವೇತ್ರಾಸನದಂತೆ ಅಂದರೆ ಬೆತ್ತದ ಕುರ್ಚಿಯಂತೆ, ಮಧ್ಯಲೋಕವು ಝಲ್ಲರಿ ಎಂಬ ವಾದ್ಯದಂತೆ ಹಾಗೂ ಊರ್ಧ್ವಲೋಕವು ಮೃದಂಗದಂತೆ ಇರುವುದು. ನಾಲ್ಕು ಘಾತಿಕರ್ಮಗಳನ್ನು ನಾಶಪಡಿಸಿದವನೂ, ಈ ಮೂರೂ ಲೋಕಗಳನ್ನು ಬೆಳಗುವವನೂ ಆದ ಜಿನೇಂದ್ರ ಭಗವಂತನಿಗೆ ಮಾತ್ರ, ಈ ಲೋಕತ್ರಯಗಳು ಮತ್ತು ಅವುಗಳಲ್ಲಿರುವ ಆರೂ ದ್ರವ್ಯಗಳೂ ಹಾಗೂ ಮೂರೂ ಕಾಲಗಳಲ್ಲಿನ ಅವುಗಳ ಅನಂತ ಪರ್ಯಾಯಗಳು ಏಕಕಾಲದಲ್ಲಿ, ಅವನ ಜ್ಞಾನಚಕ್ಷುವಿನಲ್ಲಿ ಗೋಚರಿಸುತ್ತವೆ ಎಂದು ಕವಿಯು ಹೇಳಿದ್ದಾನೆ. ೧-೪೭


ವಿಶೇಷ ವಿವರಣೆ: ಈ ಪದ್ಯದಲ್ಲಿ ಕವಿಯು ಅಧೋಲೋಕ, ಮಧ್ಯಲೋಕ ಅಥವಾ ತಿರ್ಯಕ್‌ಲೋಕ ಮತ್ತು ಊರ್ಧ್ವಲೋಕ, ಈ ಮೂರೂ ಲೋಕಗಳು ನೋಡಲು ಹೇಗಿವೆ ಎನ್ನುವುದಕ್ಕೆ, **ಕರಣಾನುಯೋಗ**ದ ಗ್ರಂಥಗಳಲ್ಲಿ ಉಲ್ಲೇಖಿಸಿರುವ ರೀತಿಯಲ್ಲಿಯೇ, ಒಂದೊಂದು ಲೋಕದ ಆಕಾರಕ್ಕೂ ಒಂದೊಂದು ವಸ್ತುವಿನ ಸಾದೃಶ್ಯವನ್ನು ನೀಡಿರುವನು. (**ತಿರ್ಯಕ್** ಎಂದರೆ **ತಿರುವಾಗಿ [ಅಡ್ಡವಾಗಿ] ಹರಡಿರುವ** ಕಾರಣದಿಂದ ಇದನ್ನು **ತಿರ್ಯಕ್‌ಲೋಕ**ವೆಂದೂ ಸಹ ಕರೆಯುತ್ತಾರೆ)

ವೇತ್ರಾಸನ ಝಲ್ಲರೀ ಮೃದಂಗ ಸಮಾನಂ: ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ವೇತ್ರವಿಷ್ಟರಝಲ್ಲರ್ಯೌ ಮೃದಂಗಶ್ಚ ಯಥಾವಿಧಾಃ ।
ಸಂಸ್ಥಾನೈಸ್ತಾದೃಶಾನ್ಪ್ರಾಹುಸ್ತ್ರೀನ್ಲೋಕಾನನುಪೂರ್ವಶಃ ॥ಪೂ.ಪು., ೪-೪೧॥

ಅರ್ಥ: ಬೆತ್ತದ ಕುರ್ಚಿಯ (ಆಸನದ) ಕೆಳಭಾಗದಂತೆ ಅಧೋಲೋಕದ ಆಕಾರವೂ, ಝಲ್ಲರಿಯಂತೆ ವರ್ತುಲಾಕಾರವಾಗಿ ಮಧ್ಯಲೋಕದ ಆಕಾರವೂ, ಮೃದಂಗದಂತೆ ಊರ್ಧ್ವಲೋಕದ ಆಕಾರವೂ ಇವೆ.

ಮೃದಂಗ, ಝಲ್ಲರಿ ವೇತ್ರಾಸನದ ಆಕೃತಿಗಳು:



ತಿಲೋಯಪಣ್ಣತ್ತೀಯಲ್ಲಿ ಮೂರೂ ಲೋಕಗಳ ಆಕಾರವನ್ನು ಹೀಗೆ ವರ್ಣಿಸಿದೆ:

> **ಹೇಟ್ಠಿಮ ಲೋೞಯಾಆರೋ, ವೇತ್ತಾಸಣ ಸಣ್ಣಿಹೋ ಸಹಾವೇಣ ।**
> **ಮಜ್ಝಿಮ ಲೋೞಯಾಯಾರೋ, ಉಬ್ಭಿಯ ಮುರಅದ್ಧ ಸಾರಿಚ್ಛೋ ॥ತಿ.ಪ., ೧–೧೩೭॥**
>
> **ಉವರಿಮ ಲೋೞಯಾಆರೋ ಉಬ್ಭಿಯ ಮುರವೇಣ ಹೋೞ ಸರಿಸತ್ತೋ ।**
> **ಸಂಠಾಣೋ ಏದಾಣಂ, ಲೋೞಯಾಣಂ ಎಣ್ಹಿಂ ಸಾಹೇಮಿ ॥ತಿ.ಪ., ೧–೧೩೮॥**

ಅರ್ಥ: ಇವುಗಳಲ್ಲಿ ಅಧೋಲೋಕದ ಆಕೃತಿಯು ಸ್ವಾಭಾವಿಕವಾಗಿ ವೇತ್ರಾಸನ (ಬೆತ್ತದ ಆಸನ) ದಂತೆ ಮತ್ತು ಮಧ್ಯಲೋಕದ ಆಕೃತಿಯು ನಿಲ್ಲಿಸಿದ ಮೃದಂಗದ ಊರ್ಧ್ವ ಭಾಗದಂತಿದೆ. ಊರ್ಧ್ವಲೋಕದ ಆಕೃತಿಯು ನಿಲ್ಲಿಸಿದ ಮೃದಂಗದಂತಿದೆ. ಇನ್ನು ಮುಂದೆ ಈ ಮೂರೂ ಲೋಕಗಳ ಆಕಾರವನ್ನು ಹೇಳಲಾಗುತ್ತದೆ.

ವ ॥ ಆ ಲೋಕತ್ರಯುಮಧ್ಯದೊಳ್ ಮಧ್ಯಮಲೋಕಮೆಂಬ ಪೆಸರಂ ಪಡೆದು, ೧–೪೭ (ವ)

ಸ್ರಗ್ಧರೆ **ಪರ್ಯಾಯಂದಪ್ಪದೇಂಸುತ್ತಿಱಿದುವೊವಳಯಾಕಾರದೊಂದೊಂದನತ್ಯಾ**
ಶ್ಚರ್ಯಂ ದ್ವೀಪಾಬ್ಧಿವರ್ಗಕ್ರಮಮದುವುಮಸಂಖ್ಯಾತಮಾಸಂಖ್ಯೆಯೊಳ್ಗಾ
ತ್ಪರ್ಯಂಗೆಯ್ವಂನವೆಂಬ[1]**ಗ್ಗಳಿಕೆಯಿನೆಸೆದತ್ತೇಕರಜ್ಜುಪ್ರಮಾಣಂ**
ತಿರ್ಯಗ್ಲೋಕಂ ಸ್ವಯಂಭೂರಮಣಜಳಧಿಪರ್ಯಂತಮಂ ತಾಗುವನ್ನಂ ॥ ೧–೪೮

(ವಿ.ಸೂ.: ೧–೪೮ ನೆಯ ಕಂದಪದ್ಯವು, ಹಿಂದಿನ ೧–೪೭ (ವ) ವಚನದ ಮುಂದುವರಿದ ಭಾಗವಾಗಿರುವುದರಿಂದ, ೧–೪೭ (ವ) ಮತ್ತು ೧–೪೮ ನೆಯ ಪದ್ಯ ಈ ಎರಡರ ಪದವಿಭಾಗ, ಅನ್ವಯಾರ್ಥ, ಭಾವಾರ್ಥ, ವಿಶೇಷ ವಿವರಣೆಗಳನ್ನು ಇದರಡಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಆ–ಲೋಕತ್ರಯ–ಮಧ್ಯದೊಳ್, ಮಧ್ಯಮಲೋಕಂ, ಎಂಬ, ಪೆಸರಂ, ಪಡೆದು ... ೧–೪೭ (ವ)

ಪದ ವಿಭಾಗ: ಪರ್ಯಾಯಂದಪ್ಪದೆ, ಏಂ, ಸುತ್ತಿಱಿದುವೊ, ವಳಯಾಕಾರದೆ, ಒಂದೊಂದನ್, ಅತ್ಯಾಶ್ಚರ್ಯಂ, ದ್ವೀಪಾಬ್ಧಿವರ್ಗಕ್ರಮಂ; ಅದುವುಂ, ಅಸಂಖ್ಯಾತಂ; ಆ, ಸಂಖ್ಯೆಯೊಳ್,

[1] ಗೆಯ್ವಂನವೆಂಬ=[ಗೆಯ್ವಂನ>ಗಯ್ವನ್ನ]+[ವೆಂಬ<ಮೆಂಬ]=ಗೆಯ್ವನ್ನಮೆಂಬ=ಗೆಯ್ವನ್ನಂ+ಎಂಬ; ವೆಂಬ<ಮೆಂಬ (ವಮಹಪ ಭೇದದಿಂ–ಕನ್ನಡದ ಅಸಾಧಾರಣ ಲಕ್ಷಣಗಳಲ್ಲೊಂದು)

ತಾತ್ಪರ್ಯಂ, ಗೆಯ್ವನ್ನಂ, ಎಂಬ, ಅಗ್ಗಳಿಕೆಯಿಂ, ಎಸೆದತ್ತು, ಏಕ-ರಜ್ಜು-ಪ್ರಮಾಣಂ,
ತಿರ್ಯಗ್ಲೋಕಂ, ಸ್ವಯಂಭೂರಮಣ-ಜಳಧಿ, ಪರ್ಯಂತಮಮಂ, ತಾಗುವನ್ನಂ ॥ ೧-೪೮

ಅನ್ವಯಾರ್ಥ: **(ಆ)** ಆ **(ಲೋಕತ್ರಯ)** ಮೂರುಲೋಕಗಳ **(ಮಧ್ಯದೊಳ್)** ಮಧ್ಯದಲ್ಲಿ **(ಮಧ್ಯಮಲೋಕಮೆಂಬ)** ಮಧ್ಯಮಲೋಕವೆಂದು **(ಪೆಸರಂ)** ಖ್ಯಾತಿಯನ್ನು **(ಪಡೆದು)** ಹೊಂದಿರುವ ... ೧-೪೭ (ವ)

ಅನ್ವಯಾರ್ಥ: **(ದ್ವೀಪಾಬ್ಧಿ=ದ್ವೀಪ+ಅಬ್ಧಿ)** ದ್ವೀಪ-ಸಮುದ್ರಗಳು **(ವರ್ಗ ಕ್ರಮಂ)** ಶ್ರೇಣಿ ಕ್ರಮದಲ್ಲಿ [ತಿರ್ಯಗ್ಲೋಕದ ನಾಭಿಯ ಭಾಗದಿಂದ ಪ್ರಾರಂಭಿಸಿ ದ್ವೀಪ ಮತ್ತು ಸಮುದ್ರಗಳು ಒಂದನ್ನು ಇನ್ನೊಂದು ವಿಭಾಗಿಸುವಂತೆ, ಒಂದರನಂತರ ಒಂದರಂತೆ ಎಂದರೆ, ದ್ವೀಪ-ಸಮುದ್ರ, ನಂತರ ದ್ವೀಪ-ಸಮುದ್ರ ಈ ರೀತಿಯ ವರ್ಗ ಕ್ರಮದಲ್ಲಿ] **(ಪರ್ಯಾಯಂದಪ್ಪದೆ)** ಪರ್ಯಾಯವನ್ನು ತಪ್ಪದೆ [ದ್ವೀಪ-ಸಮುದ್ರ ನಂತರ ದ್ವೀಪ-ಸಮುದ್ರ ನಂತರ ದ್ವೀಪ-ಸಮುದ್ರ ಈ ಪರ್ಯಾಯ ಕ್ರಮವನ್ನು ತಪ್ಪದೆ] **(ವಳ(ಲ)ಯಾಕಾರದೆ)** ವೃತ್ತಾಕಾರದಲ್ಲಿ [ಬಳೆಗಳಂತೆ] **(ಒಂದೊಂದನ್=ಒಂದು+ಒಂದನ್)** ಒಂದು ಮತ್ತೊಂದನ್ನು **(ಅತ್ಯಾಶ್ಚರ್ಯಂ)** ತುಂಬ ಸೋಜಿಗವಾದ ರೀತಿಯಲ್ಲಿ **(ಏಂ)** [ಅಬ್ಬಾ!!] ಏನು **(ಸುತ್ತಿಱಿದುವೊ)** ಸುತ್ತುವರಿದಿರುವುವೋ!! ; **(ಅದುವುಂ)** ಅವೂಕೂಡ **(ಅಸಂಖ್ಯಾತಂ)** ಎಣಿಕೆಗೆ ಸಿಗದಷ್ಟು ಸಂಖ್ಯೆಯಲ್ಲಿರುವುವು [ಲೆಕ್ಕವಿಲ್ಲದಷ್ಟು ದ್ವೀಪ-ಸಮುದ್ರಗಳಿರುವುವು] ; **(ಆ)** ಆ [ಅಸಂಖ್ಯಾತವೆಂಬ] **(ಸಂಖ್ಯೆಯೊಳ್)** ಸಂಖ್ಯೆಯಲ್ಲಿಯೂ **(ತಾತ್ಪರ್ಯಂ)** ಗುರಿಯನ್ನು [ಸೀಮೆಯನ್ನು] **(ಗೆಯ್ವಂನವೆಂಬ=ಗೆಯ್ವನ್ನಂ+ಎಂಬ)** ಸೂಚಿಸುತ್ತದೆಯೋ(?)ಎನ್ನುವಂತೆ **(ಸ್ವಯಂಭೂರಮಣ ಜಳಧಿ ಪರ್ಯಂತಮಮಂ)** ಸ್ವಯಂಭೂರಮಣ ಸಮುದ್ರದ [ಮಧ್ಯಲೋಕದ ಕೊನೆಯಲ್ಲಿ ಅಂದರೆ ಪರಿಧಿಯ ಭಾಗದಲ್ಲಿ ಸುತ್ತುವರೆದಿರುವ ಸಮುದ್ರ] ಎಲ್ಲೆಯನ್ನು **(ತಾಗುವನ್ನಂ)** ಸೋಕುವವರೆಗೆ [ಮುಟ್ಟುವವರೆಗೆ] ಇರುವ **(ಏಕರಜ್ಜು)** ಒಂದು ರಜ್ಜು **(ಪ್ರಮಾಣಂ)** [ವ್ಯಾಸ] ಪ್ರಮಾಣವುಳ್ಳ **(ತಿರ್ಯಗ್ಲೋಕಂ)** ತಿರ್ಯಗ್ ಲೋಕವು **(ಅಗ್ಗಳಿಕೆಯಿಂ)** ಅತಿಶಯದಿಂದ **(ಎಸೆದತ್ತು)** [ದ್ವೀಪ-ಸಮುದ್ರಗಳಿಂದ ಅಲಂಕೃತವಾಗಿ] ಶೋಭಿಸುತ್ತಿದೆ ॥ ೧-೪೮

ಭಾವಾರ್ಥ: ಆ ಮೂರೂಲೋಕಗಳ ಮಧ್ಯದಲ್ಲಿರುವ ಲೋಕವು ಮಧ್ಯಮಲೋಕವೆಂಬ ಹೆಸರನ್ನು ಹೊಂದಿರುವ [ತಿರ್ಯಕ್ ಲೋಕವು] ... ೧-೪೭ (ವ)

ಭಾವಾರ್ಥ: ಈ ಮೇಲಿನ ವಚನದಲ್ಲಿ ತಿಳಿಸಿರುವಂತೆ ಝಲ್ಲರಿಯಂತೆ ವೃತ್ತಾಕಾರದಲ್ಲಿರುವ ಮಧ್ಯಲೋಕದ ಮಧ್ಯದಲ್ಲಿ ಅದರ ನಾಭಿಯ ಭಾಗದಿಂದ ಪ್ರಾರಂಭಿಸಿ:

೧. ವೃತ್ತಾಕಾರದಲ್ಲಿರುವ ಮೊದಲನೆಯ ದ್ವೀಪವಿದೆ. (ಇದಕ್ಕೆ ಜಂಬೂದ್ವೀಪವೆನ್ನುವರು)
೨. ಈ ಮೊದಲನೆಯ ದ್ವೀಪವನ್ನು ವೃತ್ತಾಕಾರದಲ್ಲಿ ಸುತ್ತುವರಿದಿರುವ ಮೊದಲನೆಯ ಸಮುದ್ರವಿದೆ. (ಇದನ್ನು ಲವಣಸಮುದ್ರವೆನ್ನುವರು)
೩. ಈ ಮೊದಲನೆಯ ಸಮುದ್ರವನ್ನು ವೃತ್ತಾಕಾರದಲ್ಲಿ ಸುತ್ತುರಿದಿರುವ ಎರಡನೆಯ ದ್ವೀಪವಿದೆ.
೪. ಈ ಎರಡನೆಯ ದ್ವೀಪವನ್ನು ವೃತ್ತಾಕಾರದಲ್ಲಿ ಸುತ್ತುವರಿದಿರುವ ಎರಡನೆಯ ಸಮುದ್ರವಿದೆ.
೫. ಈ ಪ್ರಕಾರದಲ್ಲಿ, ಅಸಂಖ್ಯಾತ ಸಂಖ್ಯೆಯಲ್ಲಿರುವ ದ್ವೀಪ-ಸಮುದ್ರಗಳು ಕ್ರಮತಪ್ಪದೆ ಒಂದನ್ನೊಂದು ವೃತ್ತಾಕಾರದಲ್ಲಿ ಸುತ್ತುವರಿದಿವೆ.
೬. ಹೀಗೆ ಸುತ್ತುವರಿದಿರುವ ದ್ವೀಪ-ಸಮುದ್ರಗಳು ವರ್ಗಕ್ರಮದಲ್ಲಿವೆ. ಅಂದರೆ:

(೧) ಮಧ್ಯಲೋಕದ ನಾಭಿ ಪ್ರದೇಶದಲ್ಲಿರುವ ಮೊದಲನೆಯ ದ್ವೀಪದ ಎರಡರಷ್ಟು ವ್ಯಾಸ-ವಿಸ್ತಾರವುಳ್ಳ ಮೊದಲನೆಯ ಸಮುದ್ರವು ಆ ಮೊದಲನೆಯ ದ್ವೀಪವನ್ನು ಸುತ್ತುವರಿದಿದೆ.

(೨) ಈ ಮೊದಲನೆಯ ಸಮುದ್ರದ ಎರಡರಷ್ಟು ವ್ಯಾಸ-ವಿಸ್ತಾರವುಳ್ಳ ಎರಡನೆಯ ದ್ವೀಪವು ಆ ಮೊದಲನೆಯ ಸಮುದ್ರವನ್ನು ಸುತ್ತುವರಿದಿದೆ.

(೩) ಈ ಎರಡನೆಯ ದ್ವೀಪದ ಎರಡರಷ್ಟು ವ್ಯಾಸ-ವಿಸ್ತಾರವುಳ್ಳ ಎರಡನೆಯ ಸಮುದ್ರವು ಆ ಎರಡನೆಯ ದ್ವೀಪವನ್ನು ಸುತ್ತುವರಿದಿದೆ.

(೪) ಇವು ಹೀಗೇ ವರ್ಗಕ್ರಮದಲ್ಲಿ ಮಧ್ಯಲೋಕದ ಅಂತ್ಯದ ವರೆಗೂ ಮುಂದುವರಿಯುತ್ತವೆ. ಅಂದರೆ ಸಮಸ್ತ ದ್ವೀಪ ಸಮುದ್ರಗಳ ವಿಸ್ತಾರವು ಪೂರ್ವವರ್ತಿ ದ್ವೀಪ ಸಮುದ್ರಗಳಿಗಿಂತ ಎರಡೆರಡು ಪಟ್ಟು ಅಧಿಕ ಇರುತ್ತವೆ.

೭. ಹೀಗೇ ಮುಂದುವರಿದು, ಮಧ್ಯಲೋಕದ ಕಟ್ಟಕಡೆಯಲ್ಲಿ, ಅದರ ಅಂಚನ್ನು ತಾಗುವಂತೆ ಸ್ವಯಂಭೂರಮಣ ವೆಂಬ ಸಮುದ್ರವಿದೆ. ಈ ಸಮುದ್ರವು ಮಧ್ಯಲೋಕದ ಕೊನೆಯ ಸ್ವಯಂಭೂರಮಣ ದ್ವೀಪವನ್ನು ವೃತ್ತಾಕಾರ ದಲ್ಲಿ ಸುತ್ತುವರಿದಿದೆ.

೮. ಮಧ್ಯಲೋಕವನ್ನು ತಿರ್ಯಕ್ ಲೋಕವೆನ್ನುತ್ತಾರೆ. ಈ ತಿರ್ಯಕ್ ಲೋಕದ ವ್ಯಾಸ ೧ ರಜ್ಜು ಪ್ರಮಾಣವಿದೆ.

೯. ಹೀಗೆ ತಿರ್ಯಕ್ ಲೋಕವು ದ್ವೀಪ-ಸಮುದ್ರಗಳಿಂದ ಶೋಭಿಸುತ್ತಿದೆ. ೧-೪೮

ವಿಶೇಷ ವಿವರಣೆ: ಹಿಂದಿನ ೧-೪೩ ನೆಯ ಪದ್ಯದಲ್ಲಿ; (೧) ಅನಂತವಾಗಿರುವ ಆಕಾಶವನ್ನೂ, (೨) ಅದರ ನಟ್ಟನಡುವೆ (ಮಧ್ಯದಲ್ಲಿ) ಸ್ಥಿತವಾಗಿರುವ ಲೋಕವನ್ನೂ, (೩) ಆ ಲೋಕವು ಕರ್ಮವಶರಾದ ಜೀವರಾಶಿಗಳಿಂದ ತುಂಬಿರುವುದನ್ನೂ, (೪) ಲೋಕದ ಸುತ್ತ ಆವರಿಸಿರುವ ಅಲೋಕವನ್ನೂ ಪರಿಚಯಿಸಿ; ನಂತರ,

೧-೪೪ ನೆಯ ಪದ್ಯದಲ್ಲಿ ಆ ಲೋಕದ, (೧) ಅನಾದ್ಯನಿಧನ ಗುಣಲಕ್ಷಣಗಳನ್ನೂ, (೨) ಅದು ಕ್ರಮವಾಗಿ ಘನೋದಧಿ, ಘನವಾತ ಮತ್ತು ತನುವಾತಗಳೆಂಬ ಮೂರು ವಾಯುವಲಯಗಳಿಂದ ಸುತ್ತುವರಿದಿರುವುದನ್ನೂ ಮತ್ತು (೪) ಅದರ ಎತ್ತರವನ್ನೂ (ಹದಿನಾಲ್ಕು ರಜ್ಜುಗಳೆಂಬುದನ್ನು) ವಿವರಿಸಿ;

೧-೪೫ ನೆಯ ಪದ್ಯದಲ್ಲಿ, ಅದರ ಆಕಾರವನ್ನು, ವ್ಯಕ್ತಿಯೊಬ್ಬನು ಕಿಸುಗಾಲಲ್ಲಿ ನಿಂತು ಎರಡೂ ಕೈಗಳನ್ನು ಸೊಂಟದಮೇಲೆ ಇಟ್ಟುಕೊಂಡರೆ ಹೇಗೆ ನಾಟ್ಯಭಂಗಿಯಲ್ಲಿರು ನಟನು ಕಾಣುವನೋ ಆ ಆಕಾರಕ್ಕೆ ಹೋಲಿಕೆ ನೀಡಿ ವರ್ಣಿಸಿ;

೧-೪೬ ನೆಯ ಪದ್ಯದಲ್ಲಿ ಆ ಲೋಕವು (೧) ಸೃಷ್ಟಿ-ಲಯಗಳಿಂದ ಹೊರತಾದುದೆಂದೂ, (೨) ಅದು ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕವೆಂದು ಮೂರು ವಿಭಾಗಗಳನ್ನು ಹೊಂದಿರುವುದಾಗಿ ತಿಳಿಸಿ;

೧-೪೭ ನೆಯ ಪದ್ಯದಲ್ಲಿ ಆ ಮೂರೂ ಲೋಕಗಳು, ಕರ್ಮಗಳೆಂಬ ಶತ್ರುಗಳನ್ನು ಗೆದ್ದ, ಕೇವಲಜ್ಞಾನಿಗಳಾದ ಜಿನೇಂದ್ರ ಭಗವಂತರಿಗೆ ಮಾತ್ರ ಗೋಚರಿಸುವುದೆಂದು ತಿಳಿಸಿ, ಅದರ ಆಕಾರವನ್ನು ಶಾಸ್ತ್ರೋಕ್ತವಾದ ಬೆತ್ತದ ಕುರ್ಚಿ, ಝಲ್ಲರಿ, ಮೃದಂಗದ ಸಾದೃಶ್ಯಗಳೊಂದಿಗೆ ವಿವರಿಸಿ;

ಹೀಗೆ ಈ ಐದು ಪದ್ಯಗಳಲ್ಲಿ ಸಂಕ್ಷಿಪ್ತವಾಗಿ ಲೋಕಾಲೋಕಗಳ ವರ್ಣನೆಯನ್ನು ಕರಣಾನುಯೋಗ ಗ್ರಂಥಗಳಲ್ಲಿ ತಿಳಿಸಿರುವ ಸಾದೃಶ್ಯಗಳೊಂದಿಗೆ ವರ್ಣಿಸಿ, ನಂತರ, ಆ ತ್ರಿಲೋಕದ ಮಧ್ಯದಲ್ಲಿ ಮಧ್ಯಲೋಕವಿರುವುದನ್ನು ಕವಿಯು ನಮಗೆ ನೇರವಾಗಿ ಒಂದು ಸಾಲಿನ ೧-೪೭ (ವ) ವಚನಭಾಗದಲ್ಲಿ ಪರಿಚಯಿಸುತ್ತಾನೆ.

ದ್ವೀಪಾಬ್ಧಿವರ್ಗಕ್ರಮಂ: ಗಣಿತಶಾಸ್ತ್ರದಲ್ಲಿ **ವರ್ಗ**ವೆಂದರೆ 'ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಗುಣಿಸಿದಾಗ ಬರುವ ಗುಣಲಬ್ಧ'. ಆದರೆ, ಈ ವೃತ್ತಪದ್ಯದಲ್ಲಿ ಕವಿಯು ಪ್ರಯೋಗಿಸಿರುವ **ವರ್ಗಕ್ರಮಂ** ಪದವು ಗಣಿತಶಾಸ್ತ್ರದ ಈ ಸೂತ್ರಾರ್ಥದಿಂದ ಕೂಡಿರುವುದಿಲ್ಲ. **ವರ್ಗಕ್ರಮಂ** ಪದದ ಇಲ್ಲಿನ ಅರ್ಥವು ಒಂದು ಸಂಖ್ಯೆಯನ್ನು **ಎರಡರಿಂದ ಗುಣಿಸುವುದು** ಎಂದಾಗಿರುತ್ತದೆ.


ದ್ವಿರ್ದ್ವಿರ್ವಿಷ್ಕಂಭಾಃ ಪೂರ್ವಪೂರ್ವಪರಿಕ್ಷೇಪಿಣೋ ವಲಯಕೃತಯಃ ॥ (ತತ್ತ್ವಾರ್ಥಸೂತ್ರ, ೩-೮)

ತತ್ತ್ವಾರ್ಥಸೂತ್ರದ ಈ ಮೇಲಿನ ಸೂತ್ರದಲ್ಲಿರುವ **'ದ್ವಿರ್ದ್ವಿರ್ವಿಷ್ಕಂಭಾಃ'** ಎನ್ನುವ ಪದಕ್ಕೆ ಸಂವಾದಿಯಾಗಿ ಪಂಪನು **'ವರ್ಗಕ್ರಮಂ'** ಎಂಬ ಪದವನ್ನು ವೀಪ್ಸಾರ್ಥದಲ್ಲಿ (ವ್ಯಾಪ್ತಿಯ ಅರ್ಥದಲ್ಲಿ) ಪ್ರಯೋಗಿಸಿದ್ದಾನೆ ಎಂದು ತಿಳಿಯಬಹುದು. ಹೆಚ್ಚಿನ ವಿವರಣೆಗೆ ಏಳನೆಯ ಆಶ್ವಾಸದ ಎಂಬತ್ತಮೂರನೆಯ (೭-೮೩) ಕಂದಪದ್ಯಕ್ಕೆ ನೀಡಿರುವ **ವಿಶೇಷ ವಿವರಣೆ**ಯಡಿ ನೀಡಿರುವ **ತತ್ತ್ವಾರ್ಥಸೂತ್ರ**ದ ೩-೮ ನೆಯ ಸೂತ್ರ ಹಾಗೂ ಆ ಸೂತ್ರಕ್ಕೆ ಶ್ರೀ ಪೂಜ್ಯಪಾದಾಚಾರ್ಯರ **ಸರ್ವಾರ್ಥಸಿದ್ಧಿ** ಗ್ರಂಥದಲ್ಲಿನ ಟೀಕಾ ಸಂಖ್ಯೆ ೩೮೧ ನ್ನು ನೋಡಿರಿ.

ಮಧ್ಯಲೋಕದಲ್ಲಿರುವ ಅಸಂಖ್ಯಾತ ದ್ವೀಪ-ಸಮುದ್ರಗಳಲ್ಲಿ, ನಾಭಿಭಾಗದಿಂದ ಪ್ರಾರಂಭವಾಗುವ ಮೊದಲ ೧೬ ದ್ವೀಪ-ಸಮುದ್ರಗಳ ಮತ್ತು ಅಂಚಿನಿಂದ ಒಳಭಾಗಕ್ಕಿರುವ ೧೬ ದ್ವೀಪ-ಸಮುದ್ರಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟಪದ ಸಂಖ್ಯೆ **ಮೂವತ್ತಎರಡು (೩೨)-ಮಧ್ಯಲೋಕದ ಅಸಂಖ್ಯಾತ ದ್ವೀಪ-ಸಮುದ್ರಗಳಲ್ಲಿ, ಮಧ್ಯದಿಂದ ಪ್ರಾರಂಭವಾಗುವ ೧೬ ದ್ವೀಪ-ಸಮುದ್ರಗಳ ಮತ್ತು ಕೊನೆಯ ೧೬ ದ್ವೀಪ-ಸಮುದ್ರಗಳ ಹೆಸರುಗಳು** ಅನ್ನು ನೋಡಿರಿ.

ಒಂದನ್ನೊಂದು ಸುತ್ತುವರಿದಿರುವ ದ್ವೀಪ–ಸಮುದ್ರಗಳಿಂದ ಕೂಡಿರುವ ಮಧ್ಯಲೋಕದ ಚಿತ್ರ

ತ್ರಸನಾಡಿಯ ಕೊನೆಯವರೆಗೆ ವಾತವಲಯವನ್ನು ಸ್ಪರ್ಶಿಸುವ ಸ್ವಯಂಭೂ ರಮಣ ಸಾಗರ



ವ ॥ ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತಹೈಮವತಹರಿವರ್ಷ[1] ವಿದೇಹರಮ್ಯಕಹೈರಣ್ಯವತೈರಾವತಂಗಳೆಂಬೇೞು[2]ಜನಪದಂಗಳಿಂದಂ[3]ಪೂರ್ವಾಪರಾಯತಂಗಳುಂ ಹೇಮಾರ್ಜುನತಪನೀಯವೈಡೂರ್ಯ[4]ರಜತಹೇಮಮಯಂಗಳುಂ, ಮಣಿವಿಚಿತ್ರಪಾರ್ಶ್ವಂಗಳು ಮಧಸ್ಸ್ಥಳೋಪರಿಮಸ್ಥಳ[5]ಸಮಾನವಿಸ್ತಾರಂಗಳುಮಪ್ಪ ಹಿಮವನ್ಮಹಾಹಿಮವನ್ನಿಷಧನೀಳರುಗ್ಮಿ ಶಿಖರಿಗಳೆಂಬ ವರ್ಷಧರಮಹೀಧರಂಗಳಿಂದಂ ಇನ್ನೂಱುಕನಕಗಿರಿಗಳಿಂದಂ ನಾಲ್ಕುನಾಭಿನಗಂ ಗಳಿಂದಂ ಮೂವತ್ತನಾಲ್ಕು ವಿಜಯಾರ್ಧಪರ್ವತಂಗಳಿಂದಮನಿತೆ ವೃಷಭಾದ್ರಿಗಳಿಂದಂ ಚತುರ್ದಶ

---

[1] ತತ್ತ್ವಾರ್ಥ ಸೂತ್ರದಲ್ಲಿ 'ಹರಿ' ಎಂದು ಮಾತ್ರ ಇರುತ್ತದೆ.

[2] ಮೂಲಪಾಠ–'ಬೇೞು', ಕೆಜಿ ಯವರ ಪಾಠ–'ಬೇೞುಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ–'ಜನಪದಂಗಳಿಂದಂ', ಕೆಜಿ ಯವರ ಪಾಠ–'ಜನಪದಂಗಳಿಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[4] ಎಸ್.ಜಿ.ನರಸಿಂಹಾಚಾರ್‌ರವರು ಸಂಪಾದಿಸಿರುವ ಮೂಲ ಕೃತಿಯಲ್ಲಿ ವೈಡೂರ್ಯದ ನಂತರ 'ವಜ್ರ' ಎಂದಿರುತ್ತದೆ. ಇದು ಪ್ರಕ್ಷಿಪ್ತ ಪದ.

[5] ಮೂಲಪಾಠ–'ಸ್ಥಳ', ಕೆಜಿ ಯವರ ಪಾಠ–'ತಲ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಮಹಾವಾಹಿನಿಗಳಿಂದಮೆಸೆದು, **೧-೪೮ (ವ)**

ಕಂದ **ಅತಿವೃತ್ತದೆ ರವಿಬಿಂಬಾ**
ಕೃತಿ ಯೋಜನಶತಸಹಸ್ರವಿಷ್ಕಂಭಂ ವಿ
ಶ್ರುತಜಂಬೂವೃಕ್ಷಮಹಾ
ಪ್ರತೀತಿಯಿಂ ನೆಗಱ್ದಿಳೆಗೆ ಜಂಬೂದ್ವೀಪಂ ॥ **೧-೪೯**

(ವಿ.ಸೂ.: ೧-೪೯ ನೆಯ ಕಂದಪದ್ಯವು, ಹಿಂದಿನ ೧-೪೮ (ವ) ವಚನದ ಮುಂದುವರಿದ ಭಾಗವಾಗಿರುವುದರಿಂದ, ೧-೪೮ (ವ) ಮತ್ತು ೧-೪೯ ನೆಯ ಪದ್ಯ ಈ ಎರಡರ ಪದವಿಭಾಗ, ಅನ್ವಯಾರ್ಥ, ಭಾವಾರ್ಥ, ವಿಶೇಷ ವಿವರಣೆಗಳನ್ನು ಇದರಡಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಆ, ತಿರ್ಯಗ್ಲೋಕದ, ನಟ್ಟನಡುವೆ, ಲವಣಜಲಧಿ, ಪರಿವೃತಮಾಗಿ, ಭರತ-ಹೈಮವತ-ಹರಿವರ್ಷ-ವಿದೇಹ-ರಮ್ಯಕ-ಹೈರಣ್ಯವತ್ಯೈರಾವತಂಗಳ್, ಎಂಬ, ಏೞು-ಜನಪದಂಗಳಿಂದಂ; ಪೂರ್ವಾಪರ-ಆಯತಂಗಳುಂ, ಹೇಮಾರ್ಜುನ-ತಪನೀಯ-ವೈಡೂರ್ಯ-ರಜತ-ಹೇಮ-ಮಯಂಗಳುಂ; ಮಣಿ-ವಿಚಿತ್ರ-ಪಾರ್ಶ್ವಂಗಳುಂ; ಅಧಸ್ಸ್ಥಳ, ಉಪರಿಮಸ್ಥಳ, ಸಮಾನ, ವಿಸ್ತಾರಂಗಳುಮಪ್ಪ, ಹಿಮವನ್ಮಹಾಹಿಮವನ್ನಿಷಧ-ನೀಳ-ರುಗ್ಮಿ-ಶಿಖರಿಗಳ್, ಎಂಬ, ವರ್ಷಧರ-ಮಹೀಧರಂಗಳಿಂದಂ; ಇನ್ನೂಱು-ಕನಕಗಿರಿಗಳಿಂದಂ; ನಾಲ್ಕು-ನಾಭಿನಗಂಗಳಿಂದಂ; ಮೂವತ್ತನಾಲ್ಕು-ವಿಜಯಾರ್ಧ-ಪರ್ವತಂಗಳಿಂದಂ; ಅನಿತೆ-ವೃಷಭಾದ್ರಿಗಳಿಂದಂ; ಚತುರ್ದಶ-ಮಹಾವಾಹಿನಿಗಳಿಂದಂ, ಎಸೆದು, ೧-೪೮ (ವ)

ಪದ ವಿಭಾಗ: ಅತಿವೃತ್ತದೆ-ರವಿಬಿಂಬಾಕೃತಿ,
ಯೋಜನ-ಶತಸಹಸ್ರ-ವಿಷ್ಕಂಭಂ,
ವಿಶ್ರುತ-ಜಂಬೂವೃಕ್ಷ-ಮಹಾ-
ಪ್ರತೀತಿಯಿಂ-ನೆಗಱ್ದಿಳೆಗೆ-ಜಂಬೂದ್ವೀಪಂ ॥ ೧-೪೯

ಅನ್ವಯಾರ್ಥ: **(ಆ)** ಆ **(ತಿರ್ಯಗ್ಲೋಕದ)** ತಿರ್ಯಗ್ಲೋಕದ [ಮಧ್ಯಲೋಕದ] **(ನಟ್ಟನಡುವೆ)** ನಟ್ಟನಡುವೆ, **(ಲವಣಜಲಧಿ ಪರಿವೃತಮಾಗಿ)** ಲವಣ ಸಮುದ್ರದಿಂದ ಸುತ್ತುವರಿದುದಾಗಿ; **(ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತ್ಯೈರಾವತಂಗಳೆಂಬೇೞು[=ಹೈರಣ್ಯವತ+ಐರಾವತಗಳು+ಎಂಬ+ಏಳು])** (೧) ಭರತ, (೨) ಹೈಮವತ, (೩) ಹರಿವರ್ಷ, (೪) ವಿದೇಹ, (೫) ರಮ್ಯಕ, (೬) ಹೈರಣ್ಯವತ, (೭) ಐರಾವತಗಳೆಂಬ ಏಳು **(ಜನಪದಂಗಳಿಂದಂ)** ಕ್ಷೇತ್ರಗಳಿಂದಲೂ [ನಾಡುಗಳಿಂದಲೂ]; **(ಪೂರ್ವಾಪರಾಯತಂಗಳುಂ=ಪೂರ್ವಾಪರ[=ಪೂರ್ವ+ಅಪರ]+ಆಯತಂಗಳುಂ)** ಪೂರ್ವ-ಪಶ್ಚಿಮವಾಗಿ ಹಬ್ಬಿದವುಗಳೂ, **(ಹೇಮಾರ್ಜುನ[=ಹೇಮ+ಅರ್ಜುನ] ತಪನೀಯ ವೈಡೂರ್ಯ ರಜತ ಹೇಮ ಮಯಂಗಳುಂ)** [ಕ್ರಮವಾಗಿ] (೧) ಹೊಂಬಣ್ಣ, (೨) ಶ್ವೇತವರ್ಣ, (೩) ಕಾದ ಬಂಗಾರ, (೪) ನೀಲವರ್ಣ, (೫) ಬೆಳ್ಳಿಯ ಶ್ವೇತವರ್ಣ, (೬) ಸುವರ್ಣ [ಬಣ್ಣಗಳಿಂದ] ವ್ಯಾಪ್ತವಾದವುಗಳೂ, **(ಮಣಿ ವಿಚಿತ್ರ ಪಾರ್ಶ್ವಂಗಳುಂ)** ನಾನಾ ಬಗೆಯ ರತ್ನಗಳಿಂದ ಕೂಡಿದ ಮೇಲ್ಮೈಯನ್ನುಳ್ಳವುಗಳೂ [ಹಾಗೂ] **(ಅಧಸ್ಸ್ಥಳ[=ಅಧಸ್+ಸ್ಥಳ] ಉಪರಿಮಸ್ಥಳ)** ಕೆಳಗಿನ ಪ್ರದೇಶದಿಂದ ಮೇಲುಗಡೆಯ ಪ್ರದೇಶದ ವರೆಗೆ **(ಸಮಾನ ವಿಸ್ತಾರಂಗಳುಮಪ್ಪ)** ಸಮಾನವಾದ ವಿಸ್ತಾರ[ಗಾತ್ರ]ದಿಂದ ಕೂಡಿದವುಗಳೂ [ಆದ] **(ಹಿಮವನ್ಮಹಾಹಿಮವ ನ್ನಿಷಧನೀಳರುಗ್ಮಿಶಿಖರಿಗಳೆಂಬ=ಹಿಮವನ್+ಮಹಾಹಿಮವನ್+ನಿಷಧ-ನೀಳ-ರುಗ್ಮಿ-ಶಿಖರಿಗಳೆಂಬ)** (೧) ಹಿಮವನ್, (೨) ಮಹಾಹಿಮವನ್, (೩) ನಿಷಧ, (೪) ನೀಳ, (೫) ರುಗ್ಮಿ, (೬) ಶಿಖರಿಗಳೆಂಬ [ಆರು] **(ವರ್ಷಧರ ಮಹೀಧರಂಗಳಿಂದಂ)** ವರ್ಷಧರ ಪರ್ವತಗಳಿಂದಲೂ (ಈ ಆರೂ ಪರ್ವತಗಳು ಮೇಲಿನ ಏಳೂ ಕ್ಷೇತ್ರಗಳನ್ನು ವಿಭಾಗ ಮಾಡುವಂತೆ ಪೂರ್ವದಿಂದ ಪಶ್ಚಿಮದವರೆಗೆ ಉದ್ದಕ್ಕೂ ಹಬ್ಬಿರುತ್ತವೆ); **(ಇನ್ನೂಱು ಕನಕಗಿರಿಗಳಿಂದಂ)** ಇನ್ನೂರು ಕನಕಪರ್ವತಗಳಿಂದಲೂ [ಕಾಂಚನ ಶೈಲಗಳಿಂದಲೂ]; **(ನಾಲ್ಕು ನಾಭಿನಗಂಗಳಿಂದಂ)** ನಾಲ್ಕು ನಾಭಿಪರ್ವತಗಳಿಂದಲೂ; **(ಮೂವತ್ತನಾಲ್ಕು ವಿಜಯಾರ್ಧ ಪರ್ವತಂಗಳಿಂದಂ)** ಮೂವತ್ತನಾಲ್ಕು ವಿಜಯಾರ್ಧ ಪರ್ವತಗಳಿಂದಲೂ; **(ಅನಿತ್ತೆ>ಅಷ್ಟೇ)** ಅಷ್ಟೇ ಸಂಖ್ಯೆಯ ಅಂದರೆ ಮೂವತ್ತನಾಲ್ಕು **(ವೃಷಭಾದ್ರಿಗಳಿಂದಂ)** ವೃಷಭಾದ್ರಿಗಳಿಂದಲೂ; **(ಚತುರ್ದಶ ಮಹಾವಾಹಿನಿಗ**

ಳಿಂದಂ) ಹದಿನಾಲ್ಕು ಮಹಾನದಿಗಳಿಂದಲೂ [ಕೂಡಿ] **(ಎಸೆದು)** ಶೋಭಿಸುತ್ತಿರುವ [ಮತ್ತು] ... ೧-೪೮ (ವ)

ಅನ್ವಯಾರ್ಥ: ... (ರವಿಬಿಂಬಾಕೃತಿ) ಸೂರ್ಯ ಬಿಂಬದಂತೆ **(ಅತಿವೃತ್ತದೆ)** ಅತ್ಯಂತ ಗುಂಡಾಗಿರುವ, **(ಯೋಜನ ಶತಸಹಸ್ರ ವಿಷ್ಕಂಭಂ)** ಒಂದು ಲಕ್ಷ ಯೋಜನ ವಿಸ್ತಾರವುಳ್ಳ [ವ್ಯಾಸವುಳ್ಳ], [ಹಾಗೂ] **(ವಿಶ್ರುತ ಜಂಬೂವೃಕ್ಷ)** ಪ್ರಸಿದ್ಧವಾದ ಜಂಬೂವೃಕ್ಷದಿಂದಾಗಿ **(ಮಹಾ ಪ್ರತೀತಿಯಿಂ ನೆಗಱ್ದುದಿಳೆಗೆ[=ನೆಗಱ್ದುದು+ಇಳೆಗೆ)** ಅನಾದಿ ಪರಂಪರೆಯಿಂದ ಲೋಕೋತ್ತರ ವಾದುದಾದ ಈ ಭೂಮಿಗೆ **(ಜಂಬೂದ್ವೀಪಂ)** ಜಂಬೂದ್ವೀಪವೆಂಬ ಹೆಸರಾಯಿತು ॥ ೧-೪೯

ಈ ೧-೪೮ (ವ) ವಚನದಲ್ಲಿ ಕವಿಯು ಜಂಬೂದ್ವೀಪದ ಭೌಗೋಳಿಕ ಲಕ್ಷಣಗಳನ್ನು ವಿವರಿಸಿದ್ದು, ಮುಂದಿನ ೧-೪೯ ನೆಯ ಪದ್ಯದಲ್ಲಿ ಅದರ ಆಕಾರ, ವಿಸ್ತಾರ, ಅದರ ಹೆಸರು, ಆ ದ್ವೀಪಕ್ಕೆ ಆ ಹೆಸರು ಬಂದಿರುವ ಕಾರಣಗಳನ್ನು ವಿವರಿಸಿರುವನು.

ಭಾವಾರ್ಥ: ತಿರ್ಯಗ್ಲೋಕದ ನಟ್ಟನಡುವೆ, ಲವಣ ಸಮುದ್ರದಿಂದ ಸುತ್ತುವರಿದಿರುವ:

೧. (೧) ಭರತ, (೨) ಹೈಮವತ, (೩) ಹರಿವರ್ಷ, (೪) ವಿದೇಹ, (೫) ರಮ್ಯಕ, (೬) ಹೈರಣ್ಯವತ, (೭) ಐರಾವತಗಳೆಂಬ ಏಳು ಕ್ಷೇತ್ರಗಳಿಂದಲೂ;
೨. ಪೂರ್ವ-ಪಶ್ಚಿಮವಾಗಿ ಹಬ್ಬಿರುವ, (೧) ಹೊಂಬಣ್ಣ, (೨) ಶ್ವೇತವರ್ಣ, (೩) ಕಾದ ಬಂಗಾರ, (೪) ನೀಲವರ್ಣ, (೫) ಬೆಳ್ಳಿಯ ಶ್ವೇತವರ್ಣ, (೬) ಸುವರ್ಣ [ಬಣ್ಣಗಳಿಂದ] ವ್ಯಾಪ್ತವಾದವುಗಳಾಗಿಯೂ, ನಾನಾ ಬಗೆಯ ರತ್ನಗಳಿಂದ ಕೂಡಿದ ಮೇಲ್ಮೈಯನ್ನುಳ್ಳವುಗಳಾಗಿಯೂ, ಕೆಳಗಿನ ಪ್ರದೇಶದಿಂದ ಮೇಲುಗಡೆಯ ಪ್ರದೇಶದವರೆಗೂ ಸಮಾನವಾದ ಗಾತ್ರದಿಂದ ಕೂಡಿದವುಗಳಾಗಿಯೂ ಇರುವ (೧) ಹಿಮವನ್, (೨) ಮಹಾಹಿಮವನ್, (೩) ನಿಷಧ, (೪) ನೀಳ, (೫) ರುಗ್ಮಿ, (೬) ಶಿಖರಿಗಳೆಂಬ [ಆರು] ವರ್ಷಧರ ಪರ್ವತಗಳಿಂದಲೂ;
೩. ಇನ್ನೂರು ಕನಕಪರ್ವತಗಳಿಂದಲೂ [ಕಾಂಚನ ಶೈಲಗಳಿಂದಲೂ];
೪. ನಾಲ್ಕು ನಾಭಿಪರ್ವತಗಳಿಂದಲೂ;
೫. ಮೂವತ್ತನಾಲ್ಕು ವಿಜಯಾರ್ಧಪರ್ವತಗಳಿಂದಲೂ;
೬. ಮೂವತ್ತನಾಲ್ಕು ವೃಷಭಾದ್ರಿಗಳಿಂದಲೂ;
೭. ಹದಿನಾಲ್ಕು ಮಹಾನದಿಗಳಿಂದಲೂ; ಕೂಡಿ ಶೋಭಿಸುತ್ತಿರುವುದೂ [ಆದ]... ೧-೪೮ (ವ)

ಭಾವಾರ್ಥ (೧-೪೯):

೮. ಈ ದ್ವೀಪವು ಸೂರ್ಯಬಿಂಬದಂತೆ ಅತ್ಯಂತ ಗುಂಡಾಗಿರುವ,
೯. ಒಂದು ಲಕ್ಷಯೋಜನ ವಿಸ್ತಾರ (ವ್ಯಾಸ) ಉಳ್ಳ,
೧೦. ಅನಾದಿ ಪರಂಪರೆಯಿಂದ ಲೋಕೋತ್ತರವಾದುದಾದ ಈ ಭೂಮಿಗೆ,
೧೧. ಅಲ್ಲಿರುವ ಪ್ರಸಿದ್ಧವಾದ ಜಂಬೂವೃಕ್ಷದಿಂದಾಗಿ ಜಂಬೂದ್ವೀಪವೆಂಬ ಹೆಸರಾಯಿತು. ೧-೪೯

ವಿಶೇಷ ವಿವರಣೆ (೧-೪೮ (ವ)): ಕವಿಯು ಈ ವಚನದಲ್ಲಿ, ಮಧ್ಯಲೋಕದ ನಟ್ಟನಡುವೆ ಲವಣ ಸಮುದ್ರದಿಂದ ಆವೃತವಾಗಿರುವ ಜಂಬೂ ದ್ವೀಪದ ವರ್ಣನೆಯನ್ನು ಮಾಡಿರುತ್ತಾನೆ. ಆದರೆ ಅದರ ಹೆಸರನ್ನು ಮುಂದಿನ ೧-೪೯ ನೆಯ ಪದ್ಯದ ನಾಲ್ಕನೆಯ ಪಾದದಲ್ಲಿ, ಜಂಬೂದ್ವೀಪವನ್ನು ಪೂರ್ಣವಾಗಿ ವರ್ಣಿಸಿದನಂತರ ಹೇಳಿರುವನು. ಜಂಬೂದ್ವೀಪದ ವರ್ಣನೆಯು **ತತ್ತ್ವಾರ್ಥಸೂತ್ರ**ದ ಮೂರನೆಯ ಅಧ್ಯಾಯದ ಸೂತ್ರ ಸಂಖ್ಯೆ ೭ ರಿಂದ ಪ್ರಾರಂಭವಾಗಿ, ಅಧ್ಯಾಯದ ಮುಕ್ತಾಯದೊಂದಿಗೆ ಕೊನೆಗೊಳ್ಳುವ ಸೂತ್ರ ಸಂಖ್ಯೆ ೩೯ ರ ವರೆಗಿನ ೩೩ ಸೂತ್ರಗಳಲ್ಲಿ ಅಡಕವಾಗಿರುತ್ತದೆ. ಆದರೆ ಪಂಪನು, ಈ ೩೩ ಸೂತ್ರಗಳಲ್ಲಿ **ತತ್ತ್ವಾರ್ಥಸೂತ್ರ**ದ (೧) ಸೂ.ಸಂ. ೩-೭ (ಲವಣ ಸಮುದ್ರದಿಂದ ಆವೃತವಾದ ಜಂಬೂದ್ವೀಪ), (೨) ಸೂ.ಸಂ. ೩-೧೦ (ಆ ಜಂಬೂದ್ವೀಪದಲ್ಲಿರುವ ಏಳು ಕ್ಷೇತ್ರಗಳು), (೩) ಸೂ.ಸಂ. ೩-೧೨ (ಜಂಬೂದ್ವೀಪದಲ್ಲಿರುವ ಆರು ಪರ್ವತಗಳ ಬಣ್ಣಗಳು), (೪) ಸೂ.ಸಂ. ೩-೧೩ (ಪರ್ವತಗಳ ರೂಪಿನ ವರ್ಣನೆ), (೫) ಸೂ.ಸಂ. ೩-೧೧ (ಜಂಬೂದ್ವೀಪದಲ್ಲಿರುವ ಆರು ಪರ್ವತಗಳ ಹೆಸರು), (೬) ಸೂ.ಸಂ. ೩-೨೦ (ಏಳೂ ಜನಪದಗಳ [ಕ್ಷೇತ್ರಗಳ] ಮಧ್ಯದಲ್ಲಿ ಹರಿಯುವ ಹದಿನಾಲ್ಕು ಮಹಾನದಿಗಳು); ಇವುಗಳ ಬಗ್ಗೆ **ತತ್ತ್ವಾರ್ಥಸೂತ್ರ**ದಲ್ಲಿ ಇರುವಂತೆಯೇ ಯಥಾವತ್ತಾಗಿ ವಿವರಿಸಿದ್ದಾನೆ.

ಮೇಲಿನ ವಚನದ ವಾಕ್ಯಗಳಿಗೆ ಸಂವಾದಿಯಾದ ತತ್ತ್ವಾರ್ಥಸೂತ್ರದ ಸೂತ್ರಗಳು ಹೀಗಿವೆ:

(೧) ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತಹೈಮವತಹರಿವರ್ಷವಿದೇಹರಮ್ಯಕಹೈರಣ್ಯವತೈರಾವತಂಗಳೆಂಬೇೞು ಜನಪದಂಗಳಿಂದಂ: ಇದಕ್ಕೆ ಸಂವಾದಿಯಾದ **ತತ್ತ್ವಾರ್ಥಸೂತ್ರದ ಸೂತ್ರ**ಗಳು ಹೀಗಿವೆ:

ಜಂಬೂದ್ವೀಪಲವಣೋದಾದಯಃ ಶುಭನಾಮಾನೋ ದ್ವೀಪಸಮುದ್ರಾಃ ॥ (ತತ್ತ್ವಾರ್ಥಸೂತ್ರ, ೩–೭)

ಸೂತ್ರಾರ್ಥ: ಜಂಬೂದ್ವೀಪ ಮೊದಲಾದ ಶುಭವಾದ ಹೆಸರುಗಳುಳ್ಳ ದ್ವೀಪಗಳೂ ಮತ್ತು ಲವಣೋದವೇ ಮೊದಲಾದ ಹೆಸರುಗಳುಳ್ಳ ಸಮುದ್ರಗಳೂ ಇವೆ.

ಭರತಹೈಮವತಹರಿವಿದೇಹರಮ್ಯಕಹೈರಣ್ಯವತೈರಾವತವರ್ಷಾಃ ಕ್ಷೇತ್ರಾಣಿ ॥ (ತತ್ತ್ವಾರ್ಥಸೂತ್ರ, ೩–೧೦)

ಸೂತ್ರಾರ್ಥ: ಭರತವರ್ಷ, ಹೈಮವತವರ್ಷ, ಹರಿವರ್ಷ, ವಿದೇಹವರ್ಷ, ರಮ್ಯಕವರ್ಷ, ಹೈರಣ್ಯವತವರ್ಷ ಮತ್ತು ಐರಾವತವರ್ಷ ಎಂಬಿವು ಏಳು ಕ್ಷೇತ್ರಗಳಾಗಿವೆ.

(೨) ಹೇಮಾರ್ಜುನತಪನೀಯವೈಡೂರ್ಯರಜತಹೇಮಮಯಂಗಳುಂ: ಇದಕ್ಕೆ ಸಂವಾದಿಯಾದ **ತತ್ತ್ವಾರ್ಥಸೂತ್ರದ ಸೂತ್ರ**ವು ಹೀಗಿದೆ:

ಹೇಮಾರ್ಜುನತಪನೀಯವೈಡೂರ್ಯರಜತಹೇಮಮಯಾಃ ॥ (ತತ್ತ್ವಾರ್ಥಸೂತ್ರ, ೩–೧೨)

ಸೂತ್ರಾರ್ಥ: ಈ ಪರ್ವತಗಳಿಗೆ ಕ್ರಮವಾಗಿ ಚಿನ್ನ, ಬೆಳ್ಳಿ, ಕಾಯಿಸಿದ ಚಿನ್ನ, ವೈಡೂರ್ಯಮಣಿ, ಬೆಳ್ಳಿ ಮತ್ತು ಚಿನ್ನದಂತೆ ಬಣ್ಣಗಳಿವೆ.

(೩) ಮಣಿವಿಚಿತ್ರಪಾರ್ಶ್ವಂಗಳುಮಧಸ್ಸ್ಥಳೋಪರಿಮಸ್ಥಳಸಮಾನವಿಸ್ತಾರಂಗಳುಮಪ್ಪ: ಇದಕ್ಕೆ ಸಂವಾದಿಯಾದ **ತತ್ತ್ವಾರ್ಥ ಸೂತ್ರದ ಸೂತ್ರ**ವು ಹೀಗಿದೆ:

ಮಣಿವಿಚಿತ್ರಪಾರ್ಶ್ವಾ ಉಪರಿ ಮೂಲೇ ಚ ತುಲ್ಯವಿಸ್ತಾರಾಃ ॥ (ತತ್ತ್ವಾರ್ಥಸೂತ್ರ, ೩–೧೩)

ಸೂತ್ರಾರ್ಥ: ಇವುಗಳ ಮೇಲ್ಮೈಗಳು ನಾನಾ ವಿಧವಾದ ರತ್ನಗಳಿಂದ ವ್ಯಾಪ್ತವಾಗಿದೆ ಮತ್ತು ಮೇಲೆ, ಮಧ್ಯದಲ್ಲಿ ಮತ್ತು ಬುಡದಲ್ಲಿ ಸಮಾನವಾದ ವಿಸ್ತಾರವನ್ನುಳ್ಳವಾಗಿವೆ.

(೪) ಪೂರ್ವಾಪರಾಯತಂ ... ಹಿಮವನ್ಮಹಾಹಿಮವನ್ನಿಷಧನೀಳರುಗ್ಮಿಶಿಖರಿಗಳೆಂಬ ವರ್ಷಧರಮಹೀಧರಂಗಳಿಂದಂ: ಇದಕ್ಕೆ ಸಂವಾದಿಯಾದ **ತತ್ತ್ವಾರ್ಥ ಸೂತ್ರದ ಸೂತ್ರ**ವು ಹೀಗಿದೆ:

ತದ್ವಿಭಾಜಿನಃ ಪೂರ್ವಾಪರಾಯತಾ ಹಿಮವನ್ಮಹಾಹಿಮವನ್ನಿಷಧನೀಲರುಕ್ಮಿಶಿಖರಿಣೋವರ್ಷಧರಪರ್ವತಾಃ ॥
(ತತ್ತ್ವಾರ್ಥಸೂತ್ರ, ೩–೧೧)

ಸೂತ್ರಾರ್ಥ: ಆ ಕ್ಷೇತ್ರಗಳನ್ನು ವಿಭಾಗಿಸುವ ಮತ್ತು ಪೂರ್ವಪಶ್ಚಿಮವಾಗಿ ಹಬ್ಬಿರುವ, ಹಿಮವನ್, ಮಹಾಹಿಮವನ್, ನಿಷಧ, ನೀಲ, ರುಕ್ಮಿ ಮತ್ತು ಶಿಖರಿಣ ಎಂಬ ಆರು ವರ್ಷಧರ ಪರ್ವತಗಳಿವೆ.

(೫) ಚತುರ್ದಶ ಮಹಾವಾಹಿನಿಗಳಿಂದಮೆಸೆದು: ಇದಕ್ಕೆ ಸಂವಾದಿಯಾದ **ತತ್ತ್ವಾರ್ಥ ಸೂತ್ರದ ಸೂತ್ರ**ವು ಹೀಗಿದೆ:

ಗಂಗಾಸಿಂಧೂರೋಹಿದ್ರೋಹಿತಾಸ್ಯಾಹರಿದ್ಧರಿಕಾಂತಾಸೀತಾಸೀತೋದಾನಾರೀನರಕಾಂತಾಸುವರ್ಣರೂಪ್ಯಕೂಲಾರಕ್ತಾರಕ್ತೋದಾಃ ಸರಿತಸ್ತನ್ಮಧ್ಯಗಾಃ ॥ (ತತ್ತ್ವಾರ್ಥಸೂತ್ರ, ೩–೨೦)

ಸೂತ್ರಾರ್ಥ: ಈ ಭರತವೇ ಮೊದಲಾದ ಕ್ಷೇತ್ರಗಳಲ್ಲಿ ಗಂಗಾ, ಸಿಂಧು, ರೋಹಿತ, ರೋಹಿತಾಸ್ಯಾ, ಹರಿತ್, ಹರಿಕಾಂತಾ, ಸೀತಾ, ಸೀತೋದಾ, ನಾರೀ, ನರಕಾಂತಾ, ಸುವರ್ಣಕೂಲಾ, ರೂಪ್ಯಕೂಲಾ, ರಕ್ತಾ ಮತ್ತು ರಕ್ತೋದಾ ಎಂಬ ನದಿಗಳು ಹರಿಯುತ್ತವೆ.

ಏಳೂ ಜನಪದಗಳ ಉತ್ತರ ಮತ್ತು ದಕ್ಷಿಣಕ್ಕೆ ಇರುವ ಆರು ಕುಲಾಚಲ ಪರ್ವತಗಳ ಹೆಸರುಗಳು:

ಕ್ರ. ಸಂ.	**ಜಂಬೂದ್ವೀಪದಲ್ಲಿರುವ ಜನಪದಗಳ ಹೆಸರುಗಳು** (ತತ್ತ್ವಾರ್ಥ ಸೂತ್ರ ೩–೧೦) (ತಿಲೋಯಪಣ್ಣತ್ತೀ ೪–೯೩) (ಪೂರ್ವಪುರಾಣ ೪–೪೯)	**ಆಯಾ ಜನಪದಗಳ (ಕ್ಷೇತ್ರಗಳ) ಉತ್ತರ ಮತ್ತು ದಕ್ಷಿಣಕ್ಕೆ ಇರುವ ಕುಲಾಚಲಪರ್ವತಗಳ ಹೆಸರುಗಳು** (ತತ್ತ್ವಾರ್ಥ ಸೂತ್ರ ಸಂ. ೩–೨೦) (ತಿಲೋಯಪಣ್ಣತ್ತೀ ೪–೯೬) (ಪೂ.ಪು. ೪–೪೯)		**ಪರ್ವತದ ಬಣ್ಣಗಳು** (ತತ್ತ್ವಾರ್ಥ ಸೂತ್ರ ಸಂ. ೩–೧೨) (ತಿಲೋಯಪಣ್ಣತ್ತೀ ೪–೯೭)
		ಉತ್ತರಕ್ಕೆ	**ದಕ್ಷಿಣಕ್ಕೆ**	
(೧)	ಭರತ ಕ್ಷೇತ್ರ	ಹಿಮವನ್ ಪರ್ವತ	ಲವಣ ಸಮುದ್ರ	--

(೨)	ಹೈಮವತ ಕ್ಷೇತ್ರ	ಮಹಾಹಿಮವನ್ ಪರ್ವತ	ಹಿಮವನ್ ಪರ್ವತ →	ಸುವರ್ಣ
(೩)	ಹರಿವರ್ಷ	ನಿಷಧ ಪರ್ವತ	ಮಹಾಹಿಮವನ್ ಪರ್ವತ →	ಅರ್ಜುನ
(೪)	ವಿದೇಹ ಕ್ಷೇತ್ರ	ನೀಲ ಪರ್ವತ	ನಿಷಧ ಪರ್ವತ →	ತಪನೀಯ
(೫)	ರಮ್ಯಕ ಕ್ಷೇತ್ರ	ರುಕ್ಮಿ ಪರ್ವತ	ನೀಲ ಪರ್ವತ →	ವೈಡೂರ್ಯಮಣಿ
(೬)	ಹೈರಣ್ಯವತ ಕ್ಷೇತ್ರ	ಶಿಖರಿ ಪರ್ವತ	ರುಕ್ಮಿ ಪರ್ವತ →	ರಜತ
(೭)	ಐರಾವತ ಕ್ಷೇತ್ರ	ಲವಣ ಸಮುದ್ರ	ಶಿಖರಿ ಪರ್ವತ →	ಸ್ವರ್ಣಸದೃಶ

ಏಳೂ ಜನಪದಗಳ [ಕ್ಷೇತ್ರಗಳ] ಮಧ್ಯದಲ್ಲಿ ಹರಿಯುವ ಹದಿನಾಲ್ಕು ಮಹಾನದಿಗಳ ಹೆಸರುಗಳು:

ಕ್ರ. ಸಂ.	**ಜಂಬೂದ್ವೀಪದಲ್ಲಿರುವ ಜನಪದಗಳ ಹೆಸರು (ಕ್ಷೇತ್ರಗಳ ಹೆಸರುಗಳು)** (ತತ್ತ್ವಾರ್ಥ ಸೂತ್ರ ಸಂ. ೩-೧೦) (ತಿಲೋಯಪಣ್ಣತ್ತೀ ೪-೯೩)	**ಆಯಾ ಜನಪದಗಳ (ಕ್ಷೇತ್ರಗಳ) ಮಧ್ಯದಲ್ಲಿ ಹರಿಯುತ್ತಿರುವ ಮಹಾನದಿಗಳ ಹೆಸರುಗಳು** (ತತ್ತ್ವಾರ್ಥ ಸೂತ್ರ ಸಂ. ೩-೨೦)	
		ಪೂರ್ವ ಭಾಗದಲ್ಲಿ	**ಪಶ್ಚಿಮ ಭಾಗದಲ್ಲಿ**
(೧)	ಭರತ ಕ್ಷೇತ್ರ (ಜಂಬೂದ್ವೀಪದ ದಕ್ಷಿಣ ಭಾಗದಲ್ಲಿ)	೧. ಗಂಗಾ	೨. ಸಿಂಧು
(೨)	ಹೈಮವತ ಕ್ಷೇತ್ರ (ಜಂಬೂದ್ವೀಪದ ದಕ್ಷಿಣ ಭಾಗ)	೩. ರೋಹಿತ	೪. ರೋಹಿತಾಸ್ಯಾ
(೩)	ಹರಿವರ್ಷ (ಜಂಬೂದ್ವೀಪದ ದಕ್ಷಿಣ ಭಾಗದಲ್ಲಿ)	೫. ಹರಿತ	೬. ಹರಿಕಾಂತ
(೪)	ವಿದೇಹ ಕ್ಷೇತ್ರ (ಜಂಬೂದ್ವೀಪದ ಮಧ್ಯಭಾಗ)	೭. ಸೀತಾ	೮. ಸೀತೋದಾ
(೫)	ರಮ್ಯಕ ಕ್ಷೇತ್ರ (ಜಂಬೂದ್ವೀಪದ ಉತ್ತರ ಭಾಗ)	೯. ನಾರೀ	೧೦. ನರಕಾಂತಾ
(೬)	ಹೈರಣ್ಯವತ ಕ್ಷೇತ್ರ (ಜಂಬೂದ್ವೀಪದ ಉತ್ತರ)	೧೧. ಸ್ವರ್ಣಕೂಲಾ	೧೨. ರೂಪ್ಯ ಕೂಲಾ
(೭)	ಐರಾವತ ಕ್ಷೇತ್ರ (ಜಂಬೂದ್ವೀಪದ ಉತ್ತರ ಭಾಗ)	೧೩. ರಕ್ತಾ	೧೪. ರಕ್ತೋದಾ

ಒಂದೊಂದು ಕ್ಷೇತ್ರದಲ್ಲಿ ತಲಾ ಎರಡೆರಡು ನದಿಗಳಂತೆ ಒಟ್ಟು ಏಳೂ ಕ್ಷೇತ್ರಗಳಿಂದ ಹದಿನಾಲ್ಕು ಮಹಾನದಿಗಳು ಹರಿಯುತ್ತವೆ. ಪಂಪನು ಈ ನದಿಗಳ ಹೆಸರನ್ನು ಹೇಳದೆ, ಬದಲಿಗೆ **'ಚತುರ್ದಶ ಮಹಾವಾಹಿನಿಗಳಿಂದಂ'** ಎಂದು ನದಿಗಳ ಸಂಖ್ಯೆಯನ್ನು ಮಾತ್ರ ತಿಳಿಸಿದ್ದಾನೆ. ಈ ಮೇಲಿನ ಆರು ಸೂತ್ರಗಳಲ್ಲಿರುವ ವಿಷಯವನ್ನು ಮಾತ್ರ ವರ್ಣಿಸಿದ್ದಾನೆ. ಆದರೆ, ಪಂಪನು ಈ ವಚನದಲ್ಲಿ ಹೇಳುವ, (೧) ಇನ್ನೂರು ಕನಕಗಿರಿಗಳು, (೨) ನಾಲ್ಕು ನಾಭಿ ಪರ್ವತಗಳು, (೩) ಮೂವತ್ತನಾಲ್ಕು ವಿಜಯಾರ್ಧ ಪರ್ವತಗಳು, ಹಾಗೂ (೪) ಮೂವತ್ತನಾಲ್ಕು ವೃಷಭಾದ್ರಿಗಳ ವಿವರಗಳು ಈ ೩೩ ಸೂತ್ರಗಳಲ್ಲಿ ದೊರಕುವುದಿಲ್ಲ. ಆದರೆ, **'ತಿಲೋಯಪಣ್ಣತ್ತೀ'**ಯಲ್ಲಿ ಮಧ್ಯಲೋಕದಲ್ಲಿರುವ ಪರ್ವತಗಳ, ಕ್ಷೇತ್ರಗಳ ಸಂಖ್ಯೆಯನ್ನು ಈ ಕೆಳಗಿನಂತೆ ಹೇಳಲಾಗಿದೆ:

> **ಛಕ್ಕುಲ ಸೇಲಾ ಸವ್ವೇ ವಿಜಯಡ್ಢಾ ಹೊಂತಿ ತೀಸ ಚಉ ಜುತ್ತಾ ।**
> **ಸೋಲಸ ವಕ್ಖಾರಗಿರೀ ವಾರಣದಂತಾ ಯ ಚತ್ತಾರೋ ॥** (ತಿಲೋಯಪಣ್ಣತ್ತೀ, ೪-೨೪೨೪)

ಅರ್ಥ: ಜಂಬೂದ್ವೀಪದಲ್ಲಿ ಒಟ್ಟು **ಕುಲಪರ್ವತಗಳು ಆರು, ವಿಜಯಾರ್ಧ [ಪರ್ವತಗಳು] ಮುವತ್ತನಾಲ್ಕು,** ವಕ್ಷಾರ ಗಿರಿಗಳು ಹದಿನಾರು ಹಾಗೂ ಗಜದಂತ ಪರ್ವತಗಳು ನಾಲ್ಕು ಇವೆ.

> **ತಹ ಅಟ್ಠ ದಿಗ್ಗಇಂದಾ ಣಾಭಿಗಿರಿಂದಾ ಹವಂತಿ ಚತ್ತಾರಿ ।**
> **ಚೊತ್ತೀಸ ವಸಹ ಸೇಲಾ ಕಂಚಣ ಸೇಲಾ ಸಯಾಣ ದುವೇ ॥** (ತಿಲೋಯಪಣ್ಣತ್ತೀ, ೪-೨೪೨೫)

ಅರ್ಥ: ದಿಗ್ಗಜೇಂದ್ರ ಪರ್ವತಗಳು ಎಂಟು, **ನಾಭಿಗಿರೀಂದ್ರಗಳು ನಾಲ್ಕು, ವೃಷಭ ಶೈಲಗಳು ಮುವತ್ತನಾಲ್ಕು** ಹಾಗೂ **ಕಾಂಚನ ಶೈಲಗಳು ಎರಡು ನೂರು** ಇವೆ.

> **ಎಕ್ಕೋ ಯ ಮೇರು ಕೂಡಾ ಪಂಚ ಸಯಾ ಅಟ್ಠಸಟ್ಠಿ ಅಬ್ಭಹಿಯಾ ।**
> **ಸತ್ತ ಚ್ಚಿಯ ಮಹವಿಜಯಾ ಚೊತ್ತೀಸ ಹವಂತಿ ಕಮ್ಮಭೂಮೀಓ ॥** (ತಿಲೋಯಪಣ್ಣತ್ತೀ, ೪-೨೪೨೬)

ಅರ್ಥ: ಒಂದು ಮೇರು, ಐದು ನೂರಾ ಅರವತ್ತೆಂಟು ಕೂಟಗಳು, **ಏಳು ಮಹಾಕ್ಷೇತ್ರಗಳು** ಹಾಗೂ ಮುವತ್ತನಾಲ್ಕು ಕರ್ಮಭೂಮಿಗಳಿವೆ.

ಇನ್ನೂರು ಕನಕಗಿರಿಗಳು: ಪಂಪನು ಈ ವಚನದಲ್ಲಿ ಹೇಳುವ, (೧) ಇನ್ನೂರು ಕನಕಗಿರಿಗಳು, (೨) ನಾಲ್ಕು ನಾಭಿ ಪರ್ವತಗಳು, (೩) ಮೂವತ್ತನಾಲ್ಕು ವಿಜಯಾರ್ಧ ಪರ್ವತಗಳು, ಹಾಗೂ (೪) ಮೂವತ್ತನಾಲ್ಕು ವೃಷಭಾದ್ರಿಗಳ ಪೈಕಿ ಇನ್ನೂರು ಕನಕಗಿರಿಗಳ (ಕನಕಗಿರಿ ಎಂದರೆ ಮೇರುಪರ್ವತವಲ್ಲ) ಬಗ್ಗೆ ಮುಂದಿನ ಕೆಲವು ಆಶ್ವಾಸಗಳಲ್ಲಿ ವರ್ಣನೆಗಳು ಬರುವುದರಿಂದ, ಇದರ ಬಗ್ಗೆ ಇಲ್ಲಿಯೇ ಸ್ವಲ್ಪ ಹೆಚ್ಚಿನ ಪರಿಚಯವನ್ನು ಮಾಡಿಕೊಡಲಾಗಿದೆ.

ಎಕ್ಕೆಕ್ಕಸ್ಸ ದಹಸ್ಸ ಯ ಪುವ್ವ ದುಸಾಏ ಯ ಅವರ ದಿಬ್ಭಾಗೇ ।
ದಹ ದಹ ಕಂಚಣ ಸೇಲಾ ಜೋಯಣ ಸಯ ಮೆತ್ತ ಉಚ್ಛೇಹಾ ॥ (ತಿಲೋಯಪಣ್ಣತ್ತೀ, ೪-೨೧೧೯)

ಗಾಥಾರ್ಥ: ಪ್ರತಿಯೊಂದು ದ್ರಹದ (ಸರೋವರದ) ಪೂರ್ವ ಹಾಗೂ ಪಶ್ಚಿಮ ದಿಶೆಯ ಭಾಗದಲ್ಲಿ ತಲಾ ಒಂದು ನೂರು ಯೋಜನ ಎತ್ತರವಾದ ತಲಾ ಹತ್ತು ಕಾಂಚನಶೈಲ (ಕನಕಗಿರಿ) ಗಳಿವೆ.

ಪಣವೀಸ ಜೋಯಣಾಇಂ ಅವಗಾಢಾ ತೇ ಫುರಂತ ಮಣಿ ಕಿರಣಾ ।
ತಿ ಗುಣಿದ ಣಿಯ ವಿತ್ಥಾರಾ ಅದಿರಿತ್ತಾ ತಾಣ ಪರಿಹೀಓ ॥ (ತಿಲೋಯಪಣ್ಣತ್ತೀ, ೪-೨೧೨೧)

ಗಾಥಾರ್ಥ: ಪ್ರಕಾಶಮಾನವಾದ ಮಣಿ ಕಿರಣಗಳುಳ್ಳ ಆ ಪರ್ವತಗಳು ಇಪ್ಪತ್ತೈದು ಯೋಜನ ಆಳ ಇವೆ. ಈ ಪರಧಿಗಳ ಪ್ರಮಾಣ ಆಯಾ ವಿಸ್ತಾರಕ್ಕಿಂತ ಸ್ವಲ್ಪ ಹೆಚ್ಚು ಮೂರು ಪಟ್ಟು ಇವೆ.

ಈ ಎಲ್ಲಾ ಪರ್ವತಗಳಿಂದಲೂ, ಜನಪದಗಳಿಂದಲೂ (ಜನವಸತಿಯುಳ್ಳ ನಾಡುಗಳಿಂದಲೂ) ಹಾಗೂ ನದಿಗಳಿಂದಲೂ ಜಂಬೂದ್ವೀಪವು ಶೋಭಿಸುತ್ತಿದೆ ಎಂದು ಕವಿಯು ವರ್ಣಿಸಿದ್ದಾನೆ.

ವಿಶೇಷ ವಿವರಣೆ (೧-೪೯): ಅತಿವೃತ್ತದೆ ರವಿಬಿಂಬಾಕೃತಿ ಯೋಜನಶತಸಹಸ್ರವಿಷ್ಕಂಭಂ: ಕವಿಯು, ಸೂರ್ಯಬಿಂಬದಂತೆ ಅತ್ಯಂತ ವೃತ್ತಾಕಾರದಲ್ಲಿರುವ ಜಂಬೂದ್ವೀಪದ ವಿಸ್ತಾರ (ಅಂದರೆ ಜಂಬೂದ್ವೀಪದ ಲವಣಸಮುದ್ರ ತಟದ ಒಂದು ಬಿಂದುವಿನಿಂದ ನೇರವಾಗಿ ದ್ವೀಪದ ಕೇಂದ್ರದಲ್ಲಿ ಸ್ಥಿತವಾಗಿರುವ ಮಂದರ ಪರ್ವತದ ಮೂಲಕ ಹಾದು ವಿರುದ್ಧ ದಿಕ್ಕಿನ ಲವಣಸಮುದ್ರದ ಮತ್ತೊಂದು ತಟದ ಬಿಂದುವನ್ನು ತಲುಪುವ ಸರಳರೇಖೆಯ ಉದ್ದ ಅಥವಾ ವ್ಯಾಸದ ಉದ್ದ) ಅಳತೆ ೧೦೦೦೦೦ ಯೋಜನವಾಗಿದೆ ಎಂದು ಹೇಳುತ್ತಾನೆ.

ಈ ಕಂದಪದ್ಯಕ್ಕೆ ಸಂವಾದಿಯಾದ ಪೂರ್ವಪುರಾಣದ ಶ್ಲೋಕಗಳು ಹೀಗಿವೆ:

ಮಧ್ಯಮಸ್ಯಾಸ್ಯ ಲೋಕಸ್ಯ ಜಂಬೂದ್ವೀಪೋऽಸ್ತಿ ಮಧ್ಯಗಃ ।
ಮೇರುನಾಭಿಃ ಸುವೃತ್ತಾತ್ಮಾ ಲವಣಾಂಭೋಧಿವೇಷ್ಟಿತಃ ॥ಪೂ.ಪು., ೪-೪೮॥

ಅರ್ಥ: ಈ ಮಧ್ಯಲೋಕದ ಮಧ್ಯದಲ್ಲಿ ಮಹಾಮೇರುಪರ್ವತವೇ ನಾಭಿಯಾಗಿರುವುದೂ ವರ್ತುಲಾಕಾರವೂ ಆದ ಜಂಬೂದ್ವೀಪವು ಲವಣಸಮುದ್ರದಿಂದ ಆವರಿಸಿಕೊಂಡಿದೆ.

ಸಪ್ತಭಿಃ ಕ್ಷೇತ್ರವಿನ್ಯಾಸೈಃ ಷಡ್ಭಿಶ್ಚ ಕುಲಪರ್ವತೈಃ ।
ಪ್ರವಿಭಕ್ತಃ ಸರಿದ್ಭಿಶ್ಚ ಲಕ್ಷಯೋಜನವಿಸ್ತೃತಃ ॥ಪೂ.ಪು., ೪-೪೯॥

ಅರ್ಥ: ಭರತ ಹೈಮಾವತ ಹರಿ ವಿದೇಹ ರಮ್ಯಕ ಹೈರಣ್ಯವತ ಐರಾವತಗಳೆಂಬ ಏಳು ಕ್ಷೇತ್ರರಚನೆಗಳಿಂದಲೂ ಹಿಮವನ್ ಮಹಾಹಿಮವನ್ ನಿಷಧ ನೀಲ ರುಕ್ಮಿ ಶಿಖರಿಗಳೆಂಬ ಆರು ಕುಲಪರ್ವತಗಳಿಂದಲೂ ಗಂಗಾ ಸಿಂಧು ಮೊದಲಾದ ಹದಿನಾಲ್ಕು ನದಿಗಳಿಂದಲೂ ವಿಭಾಗವಾದ ಈ ಜಂಬೂದ್ವೀಪವು ಒಂದು ಲಕ್ಷ ಯೋಜನ ವಿಸ್ತಾರವಾಗಿದೆ.

ಜಂಬೂದ್ವೀಪದ ವಿಸ್ತಾರದ ಬಗ್ಗೆ **ತತ್ತ್ವಾರ್ಥ ಸೂತ್ರ**ದ ಸೂ.ಸಂ. ೩-೯ ರಲ್ಲಿ, **ಸರ್ವಾರ್ಥಸಿದ್ಧಿ** ಟೀಕಾ ಗ್ರಂಥದಲ್ಲಿ ಮತ್ತು **ತಿಲೋಯಪಣ್ಣತ್ತೀ**ಯಲ್ಲಿ ಗಾಥೆ ಸಂ. ೪-೧೧ ರಲ್ಲಿ ಈ ಕೆಳಗಿನಂತೆ ವರ್ಣಿಸಲಾಗಿದೆ.

ತನ್ಮಧ್ಯೇಮೇರುನಾಭಿರ್ವೃತ್ತೋ ಯೋಜನಶತಸಹಸ್ರ ವಿಷ್ಕಂಭೋ ಜಂಬೂದ್ವೀಪಃ ॥ (ತತ್ತ್ವಾರ್ಥಸೂತ್ರ, ೩-೯)

ಅರ್ಥ: ಅವೆಲ್ಲದರ ನಡುವೆ (ಆ ಎಲ್ಲಾ ದ್ವೀಪ-ಸಮುದ್ರಗಳ ಮಧ್ಯದಲ್ಲಿ) ಗುಂಡಾಗಿರುವ ಮತ್ತು ಒಂದು ಲಕ್ಷಯೋಜನ ವಿಸ್ತಾರವುಳ್ಳ ಜಂಬೂದ್ವೀಪವಿದೆ.

ಸರ್ವಾರ್ಥಸಿದ್ಧಿ ಟೀಕಾ ಸಂ. ೩೮೩: ತೇಷಾಂ ಮಧ್ಯೆ ತನ್ಮಧ್ಯೇ । ಕೇಷಾಮ್? ಪೂರ್ವೋಕ್ತಾನಾಂ ದ್ವೀಪಸಮುದ್ರಾಣಾಮ್। ನಾಭಿರವ ನಾಭಿಃ । ಮೇರುರ್ನಾಭಿರ್ಯಸ್ಯ ಸ ಮೇರು ನಾಭಿಃ । ವೃತ್ತ ಆದಿತ್ಯಮಂಡಲೋಪಮಾನಃ । ಶತಾನಾಂ ಸಹಸ್ರ ಶತಸಹಸ್ರಮ್ । ಯೋಜನಾನಾಂ ಶತಸಹಸ್ರಂ ಯೋಜನಶತಸಹಸ್ರಮ್ । ಯೋಜನಶತಸಹಸ್ರಂ ವಿಷ್ಕಂಭೋ ಯಸ್ಯ

ಸೋಽಯಂ ಯೋಜನಶತಸಹಸ್ರವಿಷ್ಕಂಭಃ । ಕೋಽಸೌ? ಜಂಬೂದ್ವೀಪಃ । ಕಥಂ ಜಂಬೂದ್ವೀಪಃ? ಜಂಬೂವೃಕ್ಷೋಪ ಲಕ್ಷಿತತ್ವಾತ್ । ಉತ್ತರಕುರೂಣಾಂ ಮಧ್ಯೇ ಜಂಬೂವೃಕ್ಷೋಽನಾದಿನಿಧನಃ ಪೃಥಿವೀಪರಿಣಾಮೋಽಕೃತ್ರಿಮಃ ಸಪರಿವಾರ ಸ್ತದುಪಲಕ್ಷಿತೋಽಯಂ ದ್ವೀಪಃ ।


ಗಾಥಾರ್ಥ: 'ತನ್ಮಧ್ಯೇ' ಎಂಬುದಕ್ಕೆ 'ಅವುಗಳ ಮಧ್ಯದಲ್ಲಿ' ಎಂದು ಅರ್ಥವಾಗುತ್ತದೆ. **ಪ್ರಶ್ನೆ:** ಯಾವುದರ ಮಧ್ಯದಲ್ಲಿ? **ಉತ್ತರ:** ಹಿಂದೆ ಹೇಳಿದ ದ್ವೀಪಸಮುದ್ರಗಳ ಮಧ್ಯದಲ್ಲಿ. ನಾಭಿಸ್ಥಾನದಲ್ಲಿರುವುದರಿಂದ ನಾಭಿ ಎಂದು ಹೇಳಿದ್ದಾರೆ. ಅದಕ್ಕೆ 'ಮಧ್ಯ'ವೆಂದು ಅರ್ಥವಾಗುತ್ತದೆ. ಇದರ ಅಭಿಪ್ರಾಯವೆಂದರೆ ಯಾವುದು ಮಧ್ಯದಲ್ಲಿ ಮೇರುಪರ್ವತವಿರುವುದೂ, ಸೂರ್ಯಮಂಡಲದಂತೆ ಗುಂಡಾಗಿರುವುದೂ ಮತ್ತು ಒಂದುಲಕ್ಷ ಯೋಜನ ವಿಸ್ತಾರವುಳ್ಳುದೂ ಅದು ಜಂಬೂದ್ವೀಪವೆನಿಸಿದೆ. **ಪ್ರಶ್ನೆ:** ಇದಕ್ಕೆ ಜಂಬೂದ್ವೀಪ ವೆಂದು ಏಕೆ ಹೇಳುತ್ತಾರೆ? **ಉತ್ತರ:** ಜಂಬೂವೃಕ್ಷದಿಂದ ಗುರುತಿಸುವುದರಿಂದ ಇದಕ್ಕೆ ಜಂಬೂದ್ವೀಪವೆಂದು ಹೇಳುತ್ತಾರೆ. ಉತ್ತರಕುರುವಿನ ಮಧ್ಯದಲ್ಲಿ ಅನಾದಿನಿಧನವೂ, ಪೃಥ್ವಿಯಿಂದ ಮಾಡಿರತಕ್ಕುದೂ, ಅಕೃತ್ರಿಮ ಮತ್ತು ಪರಿವಾರವೃಕ್ಷಗಳಿಂದ ಕೂಡಿರುವುದೂ ಆದ ಜಂಬೂವೃಕ್ಷವಿದೆ. ಇದರ ಕಾರಣದಿಂದ ಇದನ್ನು ಜಂಬೂದ್ವೀಪವೆಂದು ಹೇಳುತ್ತಾರೆ.

ಮಾಣುಸ ಜಗ ಬಹುಮಜ್ಝೇ ವಿಕ್ಖಾದೋ ಹೋದಿ ಜಂಬೂದೀಓ ತ್ತಿ ।
ಎಕ್ಕ ಜ್ಜೋಯಣ ಲಕ್ಖಂ ವಿಕ್ಖಂಭ ಜುದೋ ಸರಿಸ ಮಟ್ಟೋ ॥ (ತಿಲೋಯಪಣ್ಣತ್ತೀ, ೪–೧೧)

ಅರ್ಥ: ಮನುಷ್ಯ ಕ್ಷೇತ್ರದ ಬಹುಮಧ್ಯ ಭಾಗದಲ್ಲಿ ಒಂದು ಲಕ್ಷ ವಿಸ್ತಾರವುಳ್ಳ ವೃತ್ತದಂತೆ ಹಾಗೂ ವಿಖ್ಯಾತ ಜಂಬೂದ್ವೀಪವಿದೆ.

'ಆದಿಪುರಾಣ'ದ ಪ್ರಥಮಾಶ್ವಾಸವು, ಕರಣಾನುಯೋಗ ಮತ್ತು ದ್ರವ್ಯಾನುಯೋಗದ ಜೀವಕಾಂಡಕ್ಕೆ ಸಂಬಂಧಿಸಿದ ವಿಷಯಗಳನ್ನು ಹೆಚ್ಚು ಒಳಗೊಂಡಿರುತ್ತದೆ. ಕರಣಾನುಯೋಗವು ಅಂಕಗಣಿತ, ಬೀಜಗಣಿತ, ರೇಖಾಗಣಿತ, ಸಂಖ್ಯಾಸಿದ್ಧಾಂತ, ಕಾಲಮಾಪನ, ಸಮೀಕರಣಗಳಂತಹ ಪ್ರೌಢಗಣಿತಶಾಸ್ತ್ರದ ವಿಷಯಗಳಿಂದ ತುಂಬಿರುತ್ತದೆ. ಕರಣಾನುಯೋಗದಲ್ಲಿ ಚರ್ಚಿತವಾಗಿರುವ ಈ ಪ್ರೌಢಗಣಿತಶಾಸ್ತ್ರಕ್ಕೆ **'ಜೈನ ಗಣಿತಶಾಸ್ತ್ರ'** ಎಂದೇ ಕರೆಯಲಾಗುತ್ತದೆ. ಇದರಲ್ಲಿ ಬಹಳ ಮುಖ್ಯವಾದದ್ದು ರೇಖಾಗಣಿತ. ವಾಚಕರ ಕುತೂಹಲಕ್ಕಾಗಿ, ಜಂಬೂದ್ವೀಪದ ಕ್ಷೇತ್ರಫಲವನ್ನು ಮತ್ತು ಅದನ್ನು ಕಂಡುಹಿಡಿಯುವ ಸೂತ್ರವನ್ನು (ವಿಧಾನವನ್ನು) ವಿವರಿಸುವ ಗಾಥೆಗಳನ್ನು **ಸಂಖ್ಯಾವಿಶಿಷ್ಟ ಪದಗಳ ಪಟ್ಟಿ**ಯಲ್ಲಿ ಅಂತ್ಯದಲ್ಲಿ ನೀಡಲಾಗಿದೆ. ಆದರೆ, ಈ ವಿಷಯಗಳು ಪಂಪನ **'ಆದಿಪುರಾಣ'** ಕಾವ್ಯದ ಭಾಗಗಳಾಗಿರುವುದಿಲ್ಲ.

ಜಂಬೂದ್ವೀಪ ಮತ್ತು ಕುಭೋಗಭೂಮಿ



ವ ॥ ಆ ಜಂಬೂದ್ವೀಪದ ನಟ್ಟನಡುವೆ ನವನವತಿಯೋಜನಸಹಸ್ರೋತ್ಸೇಧಮುಂ ಯೋಜನ ಸಹಸ್ರಾವಗಾಹಮುಂ ಸರ್ವರತ್ನಜಾಂಬೂನದವೈಡೂರ್ಯಮಯಮುಂ ಅಂತರಾಂತರನಿರಂತರಕಾಂತ ಸೋಮಯಮವರುಣಕುಬೇರಪ್ರಮುಖಲೋಕಪಾಲಾಭಿಯೋಗ್ಯದಿಗ್ಗಜೇಂದ್ರದೇವವಿಹಾರ ಪ್ರಾಸಾದಾಭಿರಾಮಮುಂ ಅನೇಕ ನಾಕನಾಯಕಲೋಕಪಾಳಲೀಲಾಭವನಾಧ್ಯಾಸಿತಮುಂ ಪದ್ಮವೇದಿ ಕಾಪರಿವೃತರತ್ನತೋರಣಾಂಚಿತಜಿನಭವನಪರಿವೃತಮುಂ ಪಂಚರತ್ನಮಯ ಸುಶ್ಲಿಷ್ಟಾಷ್ಟಾಧಿಕ[1] ಸಹಸ್ರ ಲಕ್ಷಣವ್ಯಂಜನಾಂಕಿತಾ[2]ಷ್ಟಶತ[3]ಕಳಶಭೃಂಗಾರಾದ್ಯುಪಕರಣೋಪಶೋಭಿತಮುಂ ವೈಡೂರ್ಯದಂಡಮುಕ್ತಾಮಣಿಜಾಳಾಳಂಕೃತರತ್ನಶಲಾಕಾಶತಕಾಂಚನಕುಂಭಬಿಂಬರಜತಚ್ಛದಚ್ಛತ್ರ ವಿಚಿತ್ರ ಜಿನೇಂದ್ರಪ್ರತಿಕೃತಿಪ್ರಕೀರ್ಣಮುಂ ಭದ್ರಸಾಲನಂದನಸೌಮನಸಪಾಂಡುಕವನವಿರಾಜಿತಮುಂ ಪಾಂಡುಕ ಪಾಂಡುಕಂಬಳ ರಕ್ತಕಂಬಳಾತಿರಕ್ತಕಂಬಳ ವಿಶಾಲರತ್ನಶಿಲಾತಳ ಪ್ರತಿಷ್ಠಿತ ಭಗವಜ್ಜನ್ಮಾಭಿಷೇಕ ಸಿಂಹಾಸನಾಳಂಕೃತಮುಮಾಗಿ, **೧–೪೯ (ವ)**

ಮತ್ತೇಭ ವಿಕ್ರೀಡಿತ
ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ ಸಮಂತೆಯ್ದೆ ಸು
ತ್ತಲುಮಿರ್ದಪ್ಪುದು ಮಧ್ಯಲೋಕಮೆಸೆದಿರ್ದಾಚೂಳಿಕಾಭಾಗದಾ
ದಲೆಯೊಳ್ನಿಂದಪುದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ
ದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಮಂದರಂ ॥ **೧–೫೦**

(ವಿ.ಸೂ.: ೧–೫೦ ನೆಯ ಕಂದಪದ್ಯವು, ಹಿಂದಿನ ೧–೪೯ (ವ) ವಚನದ ಮುಂದುವರಿದ ಭಾಗವಾಗಿರುವುದರಿಂದ, ೧–೪೮ (ವ) ಮತ್ತು ೧–೫೦ ನೆಯ ಪದ್ಯ ಈ ಎರಡರ ಪದವಿಭಾಗ, ಅನ್ವಯಾರ್ಥ, ಭಾವಾರ್ಥ, ವಿಶೇಷ ವಿವರಣೆಗಳನ್ನು ಇದರಡಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಆ–ಜಂಬೂದ್ವೀಪದ–ನಟ್ಟನಡುವೆ–ನವನವತಿ–ಯೋಜನ–ಸಹಸ್ರೋತ್ಸೇಧಮುಂ;

---

[1] **(೧)** ಮೂಲಪಾಠ–'ಸುಶ್ಲಿಷ್ಟಾಷ್ಟಾದಶಸಹಸ್ರ', ಕೆಜಿ ಯವರ ಪಾಠ–'ಸುಶ್ಲಿಷ್ಟಾಷ್ಟ ಸಹಸ್ರ', ಈ ಎರಡರಲ್ಲಿಯೂ ಪಾಠಕ್ಲೇಶವಿದೆ. ಮೂಲದಲ್ಲಿರುವ 'ಅಷ್ಟಾದಶಸಹಸ್ರ' ಎಂದರೆ '೧೮೦೦೦' ಎನ್ನುವ ಸಂಖ್ಯೆಯು ಕವಿಯು ವರ್ಣಿಸುವ ವಚನದ ಸಂದರ್ಭಕ್ಕೆ ಸಂಪೂರ್ಣವಾಗಿ ಅನನ್ವಿತವಾಗುತ್ತದೆ. ಹೇಗೆಂದರೆ, '೧೮೦೦೦ ಲಕ್ಷಣಗಳು' ಎಂದರೆ '೧೮೦೦೦ ಶೀಲಗಳು' ಎಂದೂ ಅರ್ಥವಾಗುತ್ತದೆ. ಕವಿಯು ಇಲ್ಲಿ ಹೇಳುವ 'ಲಕ್ಷಣ'ವು ಮುನಿಗಳು ಪಾಲಿಸುವ '೧೮೦೦೦ ಶೀಲ'ಗಳಿಗೆ ಸಂಬಂಧಿಸಿರುವುದಿಲ್ಲ. ಇದು '**ಜಿನೇಂದ್ರಪ್ರತಿಕೃತಿಯ ಲಕ್ಷಣ**'ಗಳಿಗೆ ಸಂಬಂಧಿಸಿದ ಸಂಖ್ಯೆಯಾಗಿರುತ್ತದೆ. ['**೧೮೦೦೦ ಶೀಲ ಮತ್ತು ೮೪ ಲಕ್ಷ ಗುಣ**'ಗಳ ವಿವರಣೆಗಳಿಗೆ ಆರನೆಯ ಆಶ್ವಾಸದ ೬–೨೯(ವ) ಇದಕ್ಕೆ ನೀಡಿರುವ **ವಿಶೇಷ ವಿವರಣೆ**ಯನ್ನು ನೋಡಿರಿ.] ಇನ್ನು ಕೆಜಿ ಯವರ ಪಾಠವಾದ '**ಅಷ್ಟಸಹಸ್ರ**' ಸಂಖ್ಯಾವಾಚಕಪದದ ಅರ್ಥದ ಸಾಮಂಜಸ್ಯತೆಯನ್ನು, ವಚನದ ಸಂದರ್ಭಕ್ಕನುಸರಿಸಿ, ನೋಡೋಣ. '**ಅಷ್ಟಸಹಸ್ರ**' ಎನ್ನುವ ಸಂಖ್ಯಾವಾಚಕಪದವನ್ನು ಅಂಕಿಯಲ್ಲಿ ಬರೆದರೆ '**೮೦೦೦**' ಎಂದಾಗುತ್ತದೆ. ಈ ಸಂಖ್ಯೆಯೂ ವಾಕ್ಯದ ಸಂದರ್ಭಕ್ಕೆ ಸರಿಹೊಂದುವುದಿಲ್ಲ. ತೀರ್ಥಂಕರರ ಶರೀರದ ಮೇಲಿನ ಮಹಾಲಕ್ಷಣಗಳು ಮತ್ತು ವ್ಯಂಜನ ರಂಜಿತ ಲಕ್ಷಣಗಳ ಒಟ್ಟು ಸಂಖ್ಯೆ '**೧೦೦೮ [=೧೦೮+೯೦೦]**' ಎಂದು ಶಾಸ್ತ್ರಗಳಲ್ಲಿ ಹೇಳಿದೆ. [**ಅಟ್ಠಬ್ಬಹಿಯ ಸಹಸ್ಸಪ್ಪಮಾಣ ವಂಜಣ ಸಮೂಹ ಸಹಿದಾಓ । ಅರ್ಥ:** ವಿಶಿಷ್ಟವಾದ ಒಂದು ಸಾವಿರ ಎಂಟು ವ್ಯಂಜನ ಸಮೂಹ ಹೊಂದಿದೆ (ತಿಲೋಯಪಣ್ಣತ್ತೀ, ೪–೧೮೯೮)]. ಆದುದರಿಂದ ಇಲ್ಲಿ ೧೦೦೮ ಎಂಬ ಸಂಖ್ಯೆಗೆ '**ಅಷ್ಟಾಧಿಕಸಹಸ್ರ ಅಥವಾ ಅಷ್ಟೋತ್ತರಸಹಸ್ರ**' ಎನ್ನುವ ಪದಗಳು ಸರಿಯಾದ ಪದಗಳಾಗಿದ್ದು, ಇಲ್ಲಿ '**ಅಷ್ಟಾಧಿಕಸಹಸ್ರ**' ಎಂಬ ಶುದ್ಧಪಾಠವನ್ನು ಸ್ವೀಕರಿಸಿದೆ.

(೨) ಮುಂದುವರೆದು, ವಾಕ್ಯದ ಮುಂದಿನ '**ಅಷ್ಟಶತ ಕಳಶ**' ಪದದಲ್ಲಿರುವ, '**ಅಷ್ಟಶತ**' ಎನ್ನುವ ಸಂಖ್ಯಾವಾಚಕ ಪದಕ್ಕೂ ಅರ್ಥನಿರ್ಣಯ ಮಾಡುವುದರಲ್ಲಿ ಇದೇ ರೀತಿಯ ಸಮಸ್ಯೆ ಎದುರಾಗುತ್ತದೆ. ಆದರೆ ಮೋನಿಯರ್ ವಿಲ್ಲಿಯಮ್ ರವರ '**ಸಂಸ್ಕೃತ–ಇಂಗ್ಲೀಷ್ ನಿಘಂಟು**' (A SANSKRIT-ENGLISH DICTIONARY) ವಿನಲ್ಲಿ '**ಅಷ್ಟಶತ**' ಪದಕ್ಕೆ ಜೈನ ಮತ್ತು ಬೌದ್ಧ ದಾರ್ಶನಿಕರು '**೧೦೮**' ಎಂಬ ಅರ್ಥವನ್ನು ನೀಡಿದ್ದಾರೆಂದೂ, ವೈದಿಕದಾರ್ಶನಿಕರಾದ ಯಾಜ್ಞವಲ್ಕ್ಯರು ಇದನ್ನು '**೮೦೦**' ಎಂದು ಅರ್ಥೈಸಿದ್ದಾರೆಂದೂ, ಆದರೂ 'ಶತಪಥಬ್ರಾಹ್ಮಣ'ದಲ್ಲಿ ಇದನ್ನು (ಅಷ್ಟಾಶತ) '**೧೦೮**' ಎಂದೇ ಅರ್ಥೈಸಿದ್ದಾರೆಂದೂ ದಾಖಲಿಸುತ್ತಾರೆ (ಪುಟ ೧೧೬, ೧೯೬೦ ರ ಮುದ್ರಣ).

[2] 'ಲಕ್ಷಣವ್ಯಂಜನಾಂಕಿತ'=ಹುಟ್ಟಿನಿಂದಲೇ ದೇಹದ ಮೇಲೆ ಮೂಡಿರುವ ಕಪ್ಪು, ಬಿಳಿ ಬಣ್ಣದ ಚುಕ್ಕಿಗಳು, ಸುಳಿಗಳು, ಕಾರೆಳ್ಳು ಇತ್ಯಾದಿ **ಮಚ್ಚೆ**ಗಳನ್ನು ವ್ಯಂಜನ ರಂಜಿತ ಲಕ್ಷಣವೆನ್ನುತ್ತಾರೆ.

[3] 'ಅಷ್ಟಶತ'=(೧) ನೂರೆಂಟು [೧೦೮] (ವರಾಹ ಮಿಹಿರನ ಬೃಹತ್ ಸಂಹಿತೆ, ಜೈನ ಮತ್ತು ಬೌದ್ಧ ಗ್ರಂಥಗಳ ಪ್ರಕಾರ);
(೨) ಎಂಟು ನೂರು [೮೦೦] (ಯಾಜ್ಞವಲ್ಕ್ಯರ ಪ್ರಕಾರ); (೩) 'ಅಷ್ಟಾಶತ' (ಶತಪಥ ಬ್ರಾಹ್ಮಣದಲ್ಲಿ)=ನೂರೆಂಟು [೧೦೮]

ಯೋಜನ–ಸಹಸ್ರಾವಗಾಹಮುಂ; ಸರ್ವ–ರತ್ನ–ಜಾಂಬೂನದ–ವೈಡೂರ್ಯಮಯಮುಂ; ಅಂತರಾಂತರ–ನಿರಂತರ–ಕಾಂತ–ಸೋಮ–ಯಮ–ವರುಣ–ಕುಬೇರ–ಪ್ರಮುಖಲೋಕಪಾಲಾಭಿಯೋಗ್ಯ–ದಿಗ್ಗಜೇಂದ್ರ–ದೇವವಿಹಾರ–ಪ್ರಾಸಾದಾಭಿರಾಮಮುಂ; ಅನೇಕ–ನಾಕನಾಯಕ–ಲೋಕಪಾಳ–ಲೀಲಾಭವನಾಧ್ಯಾಸಿತಮುಂ; ಪದ್ಮವೇದಿಕಾ–ಪರಿವೃತ–ರತ್ನತೋರಣಾಂಚಿತ–ಜಿನಭವನ–ಪರಿವೃತಮುಂ; ಪಂಚರತ್ನಮಯ–ಸು–ಶ್ಲಿಷ್ಟಾಷ್ಟಾಸಹಸ್ರ–ಲಕ್ಷಣ–ವ್ಯಂಜನಾಂಕಿತ, ಅಷ್ಟಶತ–ಕಳಶ–ಭೃಂಗಾರಾದ್ಯುಪಕರಣೋಪಶೋಭಿತಮುಂ; ವೈಡೂರ್ಯ–ದಂಡ, ಮುಕ್ತಾಮಣಿ–ಜಾಳಾಳಂಕೃತ–ರತ್ನ–ಶಲಾಕಾ–ಶತ–ಕಾಂಚನ–ಕುಂಭ–ಬಿಂಬ–ರಜತಚ್ಛದಚ್ಛತ್ರ, ವಿಚಿತ್ರ–ಜಿನೇಂದ್ರ–ಪ್ರತಿಕೃತಿ–ಪ್ರಕೀರ್ಣಮುಂ; ಭದ್ರಸಾಲ–ನಂದನ–ಸೌಮನಸ–ಪಾಂಡುಕ–ವನ–ವಿರಾಜಿತಮುಂ; ಪಾಂಡುಕ–ಪಾಂಡುಕಂಬಳ–ರಕ್ತಕಂಬಳಾತಿರಕ್ತಕಂಬಳ–ವಿಶಾಲ–ರತ್ನಶಿಲಾತಳ–ಪ್ರತಿಷ್ಠಿತ–ಭಗವಜ್ಜನ್ಮಾಭಿಷೇಕ–ಸಿಂಹಾಸನಾಳಂಕೃತಮುಂ–ಆಗಿ ... ೧–೪೯ (ವ)

ಪದ ವಿಭಾಗ: ನೆಲಸಿರ್ದಪ್ಪುದು, ಅಧಸ್ಸ್ಥಳಂ, ಪಿಡಿದಧೋಲೊಕಂ; ಸಮಂತು, ಎಯ್ದೆ,
ಸುತ್ತಲುಂ, ಇರ್ದಪ್ಪುದು, ಮಧ್ಯಲೋಕಂ; ಎಸೆದಿರ್ದ, ಆ, ಚೂಳಿಕಾಭಾಗದ,
ಆದಲೆಯೊಳ್, ನಿಂದಪುದು, ಊರ್ಧ್ವಲೋಕಂ; ಎನೆ, ಮೂಲೋಕಕ್ಕೆ, ಪೆಂಪಿಂದ,
ಅಗುಂದಲೆಯಾಗಿ, ಇರ್ದುದು, ದೇವದಂಪತಿ–ರತಶ್ರೀ–ಸುಂದರಂ–ಮಂದರಂ ॥ ೧–೫೦

ಕವಿಯು ಮೇಲಿನ ವಚನದಲ್ಲಿ [೧–೪೯(ವ)] ಪ್ರಾರಂಭಿಸಿದ ಮಂದರಪರ್ವತದ ವರ್ಣನೆಯು ೧–೫೦ ನೆಯ ವೃತ್ತಪದ್ಯದಲ್ಲಿ ಮುಂದುವರಿದಿರುವುದು. ಮೇಲಿನ ವಚನದಲ್ಲಿ ಕವಿಯು ತಾನು ವರ್ಣಿಸಿರುವ ಪರ್ವತದ ಹೆಸರನ್ನು ಹೇಳಿರುವುದಿಲ್ಲ. ಮುಂದಿನ ವೃತ್ತಪದ್ಯದಲ್ಲಿ ಅದರ ಹೆಸರನ್ನು ಹೇಳಿರುವನು. ಅಲ್ಲದೆ ಮಂದರಪರ್ವತಕ್ಕೆ ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕಗಳು ಪಾರ್ಶ್ವಸ್ಥವಾಗಿರುವುವು ಎಂಬುದನ್ನು ತಿಳಿಸಿರುವನು.

ಅನ್ವಯಾರ್ಥ ವ.ಪಾ. ॥ (೧) (ಆ) ಆ **(ಜಂಬೂದ್ವೀಪದ ನಟ್ಟನಡುವೆ)** ಜಂಬೂದ್ವೀಪದ ನಟ್ಟನಡುವೆ [ಇರುವ ಮಂದರಪರ್ವತವು] **(ನವನವತಿ ಯೋಜನ ಸಹಸ್ರೋತ್ಸೇಧಮುಂ[=ಸಹಸ್ರ+ಉತ್ಸೇಧಮುಂ)** ತೊಂಬತ್ತೊಂಭತ್ತು ಸಾವಿರ ಯೋಜನ ಎತ್ತರವೂ, **(ಯೋಜನ ಸಹಸ್ರಾವಗಾಹಮುಂ[=ಸಹಸ್ರ+ಅವಗಾಹಮುಂ)** ಸಾವಿರ ಯೋಜನ ಅಡಿಪಾಯವುಳ್ಳದ್ದುದೂ [ಭೂಮಿಯ ನೆಲಮಟ್ಟದಿಂದ ಕೆಳಗಡೆ ಆಳದಲ್ಲಿ ಹುದುಗಿಹೋಗಿರುವ ಭಾಗ], **(೨) (ಸರ್ವರತ್ನಜಾಂಬೂನದ ವೈಡೂರ್ಯಮಯಮುಂ)** ಸಮಸ್ತ ಭಾಗವೂ [ಅಂದರೆ, ಮಂದರ ಪರ್ವತದ ಕೆಳಗಿನ ಅಡಿಪಾಯದಿಂದ ಹಿಡಿದು ಮೇಲಿನ ತುತ್ತತುದಿಯ ಚೂಲಿಕೆಯವರೆವಿಗೂ] ರತ್ನಮಯವಾಗಿಯೂ, ಸುವರ್ಣಮಯವಾಗಿಯೂ, ವೈಡೂರ್ಯಮಯವಾಗಿಯೂ, **(೩) (ಅಂತರಾಂತರ=ಅಂತರ+ಅಂತರ)** ನಡು–ನಡುವೆ **(ನಿರಂತರ ಕಾಂತ)** ದಟ್ಟಣಿಸಿರುವ ಸುಂದರವಾದ **(ಸೋಮ ಯಮ ವರುಣ ಕುಬೇರ)** ಸೋಮ, ಯಮ, ವರುಣ, ಕುಬೇರ **(ಪ್ರಮುಖಲೋಕಪಾಲಾಭಿಯೋಗ್ಯದಿಗ್ಗಜೇಂದ್ರ=ಪ್ರಮುಖ ಲೋಕಪಾಲ+ಅಭಿಯೋಗ್ಯ–ದಿಗ್ಗಜೇಂದ್ರ)** ಈ ನಾಲ್ವರು ಪ್ರಮುಖ ಲೋಕಪಾಲರ, ಅಭಿಯೋಗ್ಯ ದೇವತೆಗಳ [ಇಂದ್ರ ಮುಂತಾದ ಸ್ವರ್ಗದ ದೇವತೆಗಳಿಗೆ ವಾಹನಾದಿ ಸೇವೆಗಳನ್ನು ಒದಗಿಸುವ ದಾಸರು] ಮತ್ತು ದಿಗ್ಗಜೇಂದ್ರರ **(ದೇವವಿಹಾರ ಪ್ರಾಸಾದ)** [ಈ] ದೇವತೆಗಳ ನಿವಾಸಗಳ ಮಹಲುಗಳಿಂದ **(ಅಭಿರಾಮಮುಂ)** ಮನೋಹರವಾಗಿಯೂ, **(೪) (ಅನೇಕ ನಾಕನಾಯಕ)** ಅನೇಕ ಸ್ವರ್ಗಗಳ ಇಂದ್ರರ, **(ಲೋಕಪಾಳ)** ಲೋಕಪಾಲ ದೇವತೆಗಳ **(ಲೀಲಾಭವನಾಧ್ಯಾಸಿತಮುಂ= ಲೀಲಾಭವನ+ಅಧ್ಯಾಸಿತಮುಂ)** ಕ್ರೀಡಾವಿನೋದ ವಿಹಾರಸೌಧಗಳಿಂದ ನೆಲೆಗೊಂಡುದುದಾಗಿಯೂ [ಕೂಡಿದುದಾಗಿಯೂ], **(೫) (ಪದ್ಮವೇದಿಕಾ ಪರಿವೃತ)** ಕಮಲಾಕಾರದ ವೇದಿಕೆಗಳಿಂದ ಆವೃತವಾದ [ಸುತ್ತುವರಿದ], [ಹಾಗೂ] **(ರತ್ನತೋರಣಾಂಚಿತ=ರತ್ನತೋರಣ+ಅಂಚಿತ)** ರತ್ನದ ಹೆಬ್ಬಾಗಿಲನ್ನುಳ್ಳ ಮನೋಹರವಾದ **(ಜಿನಭವನ ಪರಿವೃತಮುಂ)** ಜಿನಮಂದಿರಗಳಿಂದ ತುಂಬಿರುವುದೂ [ವ್ಯಾಪಿಸಿರುವುದೂ], **(೬) (i) (ಪಂಚರತ್ನಮಯ)** [ಆ ಜಿನಭವನಗಳು] ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ ಎಂಬ ಪಂಚರತ್ನಗಳಿಂದ ವ್ಯಾಪ್ತವಾದ, **(೬) (ii) (ಸುಶ್ಲಿಷ್ಟಾಷ್ಟಾಧಿಕಸಹಸ್ರಲಕ್ಷಣ ವ್ಯಂಜನಾಂಕಿತ=ಸು–ಶ್ಲಿಷ್ಟ[=ವ್ಯಾಪ್ತವಾದ/ಅಪ್ಪಿಕೊಳ್ಳಲ್ಪಟ್ಟ]+ಅಷ್ಟಾಧಿಕಸಹಸ್ರ–ಲಕ್ಷಣ–ವ್ಯಂಜನ+ಅಂಕಿತ)** ಸಾವಿರದ ಎಂಟು ಮಹಾಲಕ್ಷಣಗಳು [ಹಾಗೂ] ವ್ಯಂಜನ ರಂಜಿತ ಚಿಹ್ನೆಗಳು ಇವುಗಳಿಂದ ವ್ಯಾಪ್ತವಾಗಿ, **(೬) (iii) (ಅಷ್ಟಶತ ಕಳಶ ಭೃಂಗಾರಾದ್ಯುಪಕರಣೋಪಶೋಭಿತಮುಂ=ಭೃಂಗಾರಾದಿ+ಉಪಕರಣ+ಉಪಶೋಭಿತಮುಂ)** ನೂರಾಎಂಟು ಕಳಶಗಳು,

ಸುವರ್ಣಗಿಂಡಿ ಮುಂತಾದ [ಅಷ್ಟ] ಮಂಗಳ ದ್ರವ್ಯಗಳಿಂದ [ಉಪಕರಣಗಳಿಂದ] ಅಲಂಕೃತವಾಗಿರುವುದೂ [ಶೋಭಿಸುತ್ತಿರುವುದೂ], **(೬) (iv) (ವೈಡೂರ್ಯದಂಡ)** ವೈಡೂರ್ಯ ಮಣಿಖಚಿತವಾದ ದಂಡದಿಂದಲೂ, **(ಮುಕ್ತಾಮಣಿಜಾಳಾಳಂಕೃತ=ಮುಕ್ತಾ-ಮಣಿ-ಜಾಳ+ಅಳಂಕೃತ)** ಮುತ್ತು-ರತ್ನಗಳ ಹಾರಗಳಿಂದ [ಗೊಂಚಲುಗಳಿಂದ(?)] ಅಲಂಕೃತವಾದ **(ರತ್ನ ಶಲಾಕಾ ಶತ ಕಾಂಚನ ಕುಂಭ)** ರತ್ನದ ಹಿಡಿಯುಳ್ಳ ನೂರು ಬಂಗಾರದ ಕೊಡಗಳಿಂದಲೂ, **(ಬಿಂಬ ರಜತಚ್ಛದಚ್ಛತ್ರ=ಬಿಂಬ-ರಜತ+ಛದ+ಛತ್ರ)** ಕನ್ನಡಿ, ಬಿಳಿಯ ಬಣ್ಣದ ಮುಸುಕುಳ್ಳ ಕೊಡೆಗಳಿಂದಲೂ [ಬೆಳ್ಗೊಡೆಗಳಿಂದಲೂ] [ಕೂಡಿದ] **(ವಿಚಿತ್ರ ಜಿನೇಂದ್ರ ಪ್ರತಿಕೃತಿ ಪ್ರಕೀರ್ಣಮುಂ)** ಸುಂದರವಾದ ತೀರ್ಥಂಕರ ಪ್ರತಿಮೆಗಳಿಂದ ತುಂಬಿರುವುದೂ [ಕಿಕ್ಕಿರಿದಿರುವುದೂ], **(೭) (ಭದ್ರಸಾಲ ನಂದನ ಸೌಮನಸ ಪಾಂಡುಕ ವನ)** [ಮೇರು ಪರ್ವತದ ತಪ್ಪಲು ಪ್ರದೇಶದಲ್ಲಿ] ಭದ್ರಶಾಲವೆಂಬ ವನದಿಂದಲೂ, [ಅದಕ್ಕಿಂತ ಸ್ವಲ್ಪಮೇಲೆ ಮೊದಲನೆಯ ಮೇಖಲೆಯಲ್ಲಿ] ನಂದನವೆಂಬ ವನದಿಂದಲೂ, [ಅದರ ಮೇಲೆ ಗಿಣಿಯ ಬಣ್ಣದಂತೆ ಹಸಿರು ಬಣ್ಣವುಳ್ಳ] ಸೌಮನಸವೆಂಬ ವನದಿಂದಲೂ, [ಅದರ ಮೇಲೆ ಮೇರು ಪರ್ವತದ ಚೂಲಿಕೆಯ ಸಮೀಪ ಭೂಮಿಯಲ್ಲಿ] ಪಾಂಡುಕವೆಂಬ ವನದಿಂದಲೂ **(ವಿರಾಜಿತಮುಂ)** ಶೋಭಾಯಮಾನವಾಗಿರುವುದೂ, **(೮) (ಪಾಂಡುಕ ಪಾಂಡುಕಂಬಳ ರಕ್ತಕಂಬಳ ಅತಿರಕ್ತಕಂಬಳ)** [ಆ ಪಾಂಡುಕ ವನದಲ್ಲಿ] ಪಾಂಡುಕ, ಪಾಂಡುಕಂಬಳ, ರಕ್ತಕಂಬಳ, ಅತಿರಕ್ತಕಂಬಳಗಳೆಂಬ **(ವಿಶಾಲ ರತ್ನಶಿಲಾತಳ ಪ್ರತಿಷ್ಠಿತ)** ವಿಶಾಲವಾದ ರತ್ನಶಿಲೆಯ ಮೇಲ್ಮೈಮೇಲೆ ಸ್ಥಾಪಿಸಿದ **(ಭಗವಜ್ಜನ್ಮಾಭಿಷೇಕ)** ಭಗವಂತನ [ಜಿನಶಿಶುವಿನ] ಜನ್ಮಾಭಿಷೇಕದ **(ಸಿಂಹಾಸನಾಳಂಕೃತಮುಮಾಗಿ)** ಸಿಂಹಾಸನದಿಂದ ಅಲಂಕೃತವಾದುದಾಗಿ ... ೧-೪೯ (ವ)

ಅನ್ವಯಾರ್ಥ: **(ಎನೆ)** ಎಂದಮೇಲೆ **(ಮೂಲೋಕಕ್ಕೆ)** ಮೂರುಲೋಕಕ್ಕೆ **(ಪೆಂಪಿಂದ)** [ತನ್ನ] ಘನತೆಯಿಂದ **(ಅಗುಂದಲೆಯಾಗಿ)** ಅತಿಶಯವಾಗಿ **(ದೇವದಂಪತಿ)** ದೇವ ದಂಪತಿಗಳ **(ರತಶ್ರೀ)** ಅನುರಕ್ತತೆಯ ಶೋಭೆಯಿಂದ [ಕೂಡಿದ] **(ಸುಂದರಂ)** ಸುಂದರವಾದ **(ಮಂದರಂ)** ಮಂದರಪರ್ವತವು **(ಇರ್ದುದು)** ಇರುವುದು. [ಆ ಮಂದರ ಪರ್ವತದ] **(ಅಧಸ್ಸ್ಥಳಂಬಿಡಿದ=ಅಧಸ್+ಸ್ಥಳಂ+ಪಿಡಿದು)** ಕೆಳಗಿನ ಸ್ಥಳವನ್ನು ಹಿಡಿದುಕೊಂಡು **(ಅಧೋಲೊಕಂ)** ಅಧೋಲೋಕವು **(ನೆಲಸಿರ್ದಪ್ಪುದು)** ದೃಢವಾಗಿ ನೆಲೆಸಿರುವುದು. **(ಸಮಂತು)** ಓರಣವಾಗಿ [ಸೊಗಸಾಗಿ] **(ಎಯ್ದೆ)** ಅತಿಶಯದಿಂದ **(ಸುತ್ತಲುಂ)** [ಮಂದರಪರ್ವತಕ್ಕೆ ಅಂಟಿಕೊಂಡಂತೆ ಅದರ] ಸುತ್ತಲೂ **(ಮಧ್ಯಲೋಕಂ)** ಮಧ್ಯಲೋಕವು **(ಇರ್ದಪ್ಪುದು)** ಹರಡಿಕೊಂಡಿರುವುದು. **(ಎಸೆದಿರ್ದ)** ಶೋಭಾಯಮಾನವಾಗಿರುವ **(ಆ)** ಆ **(ಚೂಳಿಕಾಭಾಗದ)** ಶಿಖರ ಭಾಗದ **(ಆದಲೆಯೊಳ್=ಆ+ತಲೆಯೊಳ್)** ಅತ್ತ ಕಡೆ [ನೆತ್ತಿಯ ಮೇಲೆ] **(ಊರ್ಧ್ವಲೋಕಂ)** ಊರ್ಧ್ವಲೋಕವು **(ನಿಂದಪುದು)** ನಿಂತುಕೊಂಡಿರುವುದು [ಸ್ಥಿತವಾಗಿರುವುದು] ॥ ೧-೫೦

ಭಾವಾರ್ಥ (೧-೪೯ (ವ) ವಚನದ ಭಾವಾರ್ಥ):

೧. ಆ ಜಂಬೂದ್ವೀಪದ ನಟ್ಟನಡುವೆ ಇರುವ ಮಂದರಪರ್ವತವು ತೊಂಬತ್ತೊಂಭತ್ತುಸಾವಿರ ಯೋಜನ ಎತ್ತರವೂ, ಸಾವಿರ ಯೋಜನ ಅಡಿಪಾಯವುಳ್ಳದ್ದೂ [ಭೂಮಿಯ ನೆಲಮಟ್ಟದಿಂದ ಕೆಳಗಡೆ ಆಳದಲ್ಲಿ ಹುದುಗಿಹೋಗಿರುವ ಭಾಗ] ಹೀಗೆ ಒಟ್ಟು ಒಂದು ಲಕ್ಷಯೋಜನ ಎತ್ತರವುಳ್ಳದ್ದಾಗಿದೆ. (ಈ ವಾಕ್ಯದಲ್ಲಿ ಮಂದರಪರ್ವತದ ವಿನ್ಯಾಸವು ವರ್ಣಿತವಾಗಿದೆ)

೨. ಸಮಸ್ತ ಭಾಗವೂ ಅಂದರೆ, ಮಂದರ ಪರ್ವತದ ಕೆಳಗಿನ ಅಡಿಪಾಯದಿಂದ ಹಿಡಿದು ಮೇಲಿನ ತುತ್ತತುದಿಯ ಚೂಲಿಕೆಯವರೆವಿಗೂ ರತ್ನಮಯವಾಗಿಯೂ, ಸುವರ್ಣಮಯವಾಗಿಯೂ, ವೈಡೂರ್ಯಮಯವಾಗಿಯೂ ಇರುತ್ತದೆ. (ಈ ವಾಕ್ಯದಲ್ಲಿ ಮಂದರಪರ್ವತವು ಯಾವ ಶಿಲೆಗಳಿಂದ ರಚನೆಯಾಗಿದೆ ಎಂಬುದನ್ನು ತಿಳಿಸಿದೆ)

೩. ಮಂದರ ಪರ್ವತವು, ನಡು-ನಡುವೆ ದಟ್ಟಣಿಸಿರುವ ಸುಂದರವಾದ, ಸೋಮ, ಯಮ, ವರುಣ, ಕುಬೇರ ಈ ನಾಲ್ವರು ಪ್ರಮುಖ ಲೋಕಪಾಲರ, ಅಭಿಯೋಗ್ಯ ದೇವತೆಗಳ ಮತ್ತು ದಿಗ್ಗಜೇಂದ್ರರ ದೇವತೆಗಳ ನಿವಾಸಗಳ ಮಹಲುಗಳಿಂದ ಮನೋಹರವಾಗಿದೆ. (ಈ ವಾಕ್ಯದಲ್ಲಿ ಯಾವ ಯಾವ ದೇವತೆಗಳ ಮಹಲುಗಳಿವೆಯೆಂಬುದನ್ನು ವಿವರಿಸಿದೆ)

೪. ಅನೇಕ ಸ್ವರ್ಗಗಳ ಇಂದ್ರರ ಮತ್ತು ಲೋಕಪಾಲ ದೇವತೆಗಳ ಕ್ರೀಡಾವಿನೋದ ವಿಹಾರಸೌಧಗಳು ಮಂದರ ಪರ್ವತದಲ್ಲಿ ನೆಲೆಗೊಂಡಿವೆ. (ಈ ವಾಕ್ಯದಲ್ಲಿ ಯಾವ ಯಾವ ದೇವತೆಗಳ ಕ್ರೀಡಾಂಗಣಗಳಿವೆಯೆಂಬುದನ್ನು ತಿಳಿಸಿದೆ)

೫. ಮಂದರ ಪರ್ವತವು, ಕಮಲಾಕಾರದ ವೇದಿಕೆಯ ಮೇಲೆ ನಿರ್ಮಿತವಾದ ಹಾಗೂ ರತ್ನದ ಹೆಬ್ಬಾಗಿಲನ್ನುಳ್ಳ ಮನೋಹರವಾದ ಜಿನಮಂದಿರಗಳಿಂದ ತುಂಬಿದೆ. (ಈ ವಾಕ್ಯದಲ್ಲಿ ಜಿನಮಂದಿರದ ವಿನ್ಯಾಸವನ್ನು ವರ್ಣಿಸಿದೆ)

೬. ಆ ಜಿನಭವನಗಳ ತುಂಬ ಸ್ಥಾಪಿಸಿರುವ ಸುಂದರವಾದ ತೀರ್ಥಂಕರ ಪ್ರತಿಮೆಗಳು: (i) ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ ಎಂಬ ಪಂಚರತ್ನಗಳಿಂದ ಕೂಡಿವೆ [ನಿರ್ಮಿಸಲ್ಪಟ್ಟಿವೆ]; (ii) ಸಾವಿರದ ಎಂಟು ಮಹಾಲಕ್ಷಣಗಳು ಹಾಗೂ ವ್ಯಂಜನ ರಂಜಿತ ಚಿಹ್ನೆಗಳಿಂದ ವ್ಯಾಪ್ತವಾಗಿವೆ; (iii) ನೂರಾಎಂಟು ಕಳಶಗಳು, ಸುವರ್ಣಗಿಂಡಿ ಮುಂತಾದ ಅಷ್ಟ ಮಂಗಳದ್ರವ್ಯಗಳಿಂದ ಶೋಭಿಸುತ್ತಿವೆ; (iv) ವೈಡೂರ್ಯಮಣಿ ಖಚಿತವಾದ ದಂಡದಿಂದಲೂ, ಮುತ್ತು-ರತ್ನಗಳ ಗೊಂಚಲುಗಳಿಂದ ಅಲಂಕೃತವಾದ ರತ್ನದ ಹಿಡಿಯುಳ್ಳ ನೂರು ಬಂಗಾರದ ಕೊಡಗಳಿಂದಲೂ, ಕನ್ನಡಿ ಹಾಗೂ ಬೆಳ್ಗೊಡೆಗಳಿಂದಲೂ ಕೂಡಿವೆ. (ಈ ವಾಕ್ಯದಲ್ಲಿ ಮಂದರ ಪರ್ವತದ ಜಿನಮಂದಿರಗಳಲ್ಲಿರುವ ತೀರ್ಥಂಕರ ಪ್ರತಿಮೆಗಳ ಸೌಂದರ್ಯವನ್ನು ವರ್ಣಿಸಲಾಗಿದೆ)

೭. (೧) [ಮೇರು ಪರ್ವತವು ಅದರ ತಪ್ಪಲು ಪ್ರದೇಶದಲ್ಲಿ] ಭದ್ರಶಾಲವೆಂಬ ವನದಿಂದಲೂ, (೨) [ಅದಕ್ಕಿಂತ ಸ್ವಲ್ಪಮೇಲೆ ಮೊದಲನೆಯ ಮೇಖಲೆಯಲ್ಲಿ] ನಂದನವೆಂಬ ವನದಿಂದಲೂ, (೩) [ಅದರ ಮೇಲೆ ಗಿಣಿಯ ಬಣ್ಣದಂತೆ ಹಸಿರು ಬಣ್ಣವುಳ್ಳ] ಸೌಮನಸವೆಂಬ ವನದಿಂದಲೂ, (೪) [ಅದರ ಮೇಲೆ ಚೂಲಿಕೆಯ ಸಮೀಪ ಭೂಮಿಯಲ್ಲಿ] ಪಾಂಡುಕವೆಂಬ ವನದಿಂದಲೂ ಶೋಭಾಯಮಾನವಾಗಿರುವುದು. (ಈ ವಾಕ್ಯದಲ್ಲಿ ಮೇರುಪರ್ವತ ದಲ್ಲಿರುವ ನಾಲ್ಕು ವನಗಳ ಬಗ್ಗೆ ಹೇಳಿದೆ)

೮. ಆ ಪಾಂಡುಕವನದಲ್ಲಿ (i) ಪಾಂಡುಕ, (ii) ಪಾಂಡುಕಂಬಳ, (iii) ರಕ್ತಕಂಬಳ, (iv) ಅತಿರಕ್ತಕಂಬಳಗಳೆಂಬ ವಿಶಾಲವಾದ ರತ್ನಶಿಲೆಯ ಮೇಲ್ಮೈಮೇಲೆ ಸ್ಥಾಪಿತವಾಗಿರುವ ಭಗವಂತನ [ಜಿನಶಿಶುವಿನ] ಜನ್ಮಾಭಿಷೇಕ ಸಿಂಹಾಸನದಿಂದ ಮಂದರ ಪರ್ವತವು ಅಲಂಕೃತವಾಗಿದೆ. ೧-೪೯ (ವ)
(ಈ ವಾಕ್ಯದಲ್ಲಿ ಜಿನಶಿಶುವಿಗೆ ದೇವತೆಗಳು ಮೇರುಪರ್ವತದ ಮೇಲಿರುವ ಪಾಂಡುಕವನದಲ್ಲಿ ನೆರವೇರಿಸುವ ಜನ್ಮಾಭಿಷೇಕ ಕಲ್ಯಾಣದಲ್ಲಿ, ಜಿನಶಿಶುವನ್ನು ಕುಳ್ಳಿರಿಸುವ ಸಿಂಹಾಸನ ಮತ್ತು ಆ ಸಿಂಹಾಸನವನ್ನು ಸ್ಥಾಪಿಸಿರುವ ನಾಲ್ಕು ರತ್ನಶಿಲೆಗಳನ್ನು ವರ್ಣಿಸಿದೆ)

೧-೫೦ ನೆಯ ವೃತ್ತಪದ್ಯದ ಭಾವಾರ್ಥ:

೯. ಹೀಗೆ ಮೂರುಲೋಕಕ್ಕೆ ಮಂದರಪರ್ವತವು ತನ್ನ ಘನತೆಯಿಂದ ಅತಿಶಯವಾಗಿ ಕಾಣುತ್ತಿರುವುದು.

೧೦. ಆ ಸುಂದರವಾದ ಮಂದರ ಪರ್ವತವು ಅಲ್ಲಿ ವಿಹರಿಸುತ್ತಿರುವ ಪರಸ್ಪರ ಅನುರಕ್ತರಾಗಿರುವ ದೇವದಂಪತಿಗ ಳಿಂದ ಕೂಡಿ ಶೋಭಿಸುತ್ತಿದ್ದಿತು.

೧೧. ಆ ಮಂದರ ಪರ್ವತದ ಕೆಳಗಿನ ಸ್ಥಳವನ್ನು ಹಿಡಿದುಕೊಂಡು ಅಧೋಲೋಕವು ದೃಢವಾಗಿ ನೆಲೆಸಿರುವುದು. ಓರಣವಾಗಿ ಅತಿಶಯದಿಂದ ಮಂದರಪರ್ವತದ ಸುತ್ತಲೂ ಅದಕ್ಕೆ ಅಂಟಿಕೊಂಡಂತೆ ಮಧ್ಯಲೋಕವು ಲವಣಸಮುದ್ರದವರೆಗೂ ಹರಡಿಕೊಂಡಿರುವುದು. ಶೋಭಾಯಮಾನವಾದ ಆ ಮಂದರ ಪರ್ವತದ ಚೂಲಿಕೆಯ ನೆತ್ತಿಯ ಮೇಲೆ ಊರ್ಧ್ವಲೋಕವು ನಿಂತುಕೊಂಡಿರುವುದು. (ಈ ವಾಕ್ಯದಲ್ಲಿ ಮೂರೂ ಲೋಕಗಳು ಮಂದರ ಪರ್ವತಕ್ಕೆ ಯಾವ ಭಾಗಗಳಲ್ಲಿವೆ ಎಂಬುದನ್ನು ಹೇಳಿದೆ) ೧-೫೦

ವಿಶೇಷ ವಿವರಣೆ (೧-೪೯ (ವ)): ಈ ವಚನವನ್ನು ಅರ್ಥೈಸಿಕೊಳ್ಳಲು ಸುಲಭವಾಗುವಂತೆ, ಎಂಟು ಭಾಗಗಳನ್ನಾಗಿ ವಿಭಾಗಿಸಿ, **ತಿಲೋಯಪಣ್ಣತ್ತೀ**ಯ ಗಾಥೆಗಳ ಉಲ್ಲೇಖದೊಂದಿಗೆ ಈ ಕೆಳಗೆ ವಿವರಿಸಲಾಗಿದೆ.

(೧) ಆ ಜಂಬೂದ್ವೀಪದ ನಟ್ಟನಡುವೆ ನವನವತಿಯೋಜನಸಹಸ್ರೋತ್ಸೇಧಮುಂ ಯೋಜನ ಸಹಸ್ರಾವಗಾಹಮುಂ: ಝಲ್ಲರೀ ಅಥವಾ ಮೃದಂಗದಂತೆ ಇರುವ ಮಧ್ಯಲೋಕದ ಮಧ್ಯದಲ್ಲಿರುವ ಮೊದಲನೆಯ ದ್ವೀಪವಾದ ಜಂಬೂದ್ವೀಪದ ವ್ಯಾಸವು ಒಂದು ರಜ್ಜು ಪ್ರಮಾಣವುಳ್ಳದ್ದಾಗಿರುವುದೆಂದು ಮೇಲಿನ ೧-೪೮ ನೆಯ ಪದ್ಯದಲ್ಲಿ ಕವಿಯು ವಿವರಿಸಿರುವನು. '**ಆ ಜಂಬೂದ್ವೀಪದ ನಟ್ಟನಡುವೆ**' ಅಂದರೆ ನಾಭಿಸ್ಥಾನದಲ್ಲಿ '**ಮಂದರಪರ್ವತ**'ವಿರುವುದು. ಆದರೆ ಕವಿಯು ಈ ವಚನಭಾಗದಲ್ಲಿ ಮಂದರಪರ್ವತದ ಹೆಸರನ್ನು ಹೇಳಿರುವುದಿಲ್ಲ. ಈ '**ಮಂದರಪರ್ವತ**'ವು ಜೈನಪುರಾಣಗಳಲ್ಲಿ '**ಸುಮೇರು ಪರ್ವತ**', '**ಮೇರುಪರ್ವತ**', '**ಸುದರ್ಶನಪರ್ವತ**' ಇತ್ಯಾದಿ ಪರ್ಯಾಯ ಹೆಸರುಗಳಿಂದಲೂ ಕರೆಯಲ್ಪಟ್ಟಿದೆ. ಕವಿಯು ಈ ವಚನ ಭಾಗದಲ್ಲಿ ಮಂದರ ಪರ್ವತವು (೧) ತೊಂಬತ್ತೊಂಬತ್ತು ಸಾವಿರ ಯೋಜನ ಎತ್ತರ (ಉತ್ಸೇಧ), (೨) ಒಂದು ಸಾವಿರ ಯೋಜನ ಅಡಿಪಾಯ (ಅವಗಾಹ) ಉಳ್ಳದ್ದು (ಹೀಗೆ ಒಟ್ಟು ಒಂದು ಲಕ್ಷ ಯೋಜನ ಎತ್ತರವುಳ್ಳದ್ದು) ಎಂದು ಆ ಪರ್ವತದ ಎರಡು ಅಳತೆಗಳನ್ನು ಮಾತ್ರ ಹೇಳಿರುವನು. '**ತಿಲೋಯಪಣ್ಣತ್ತೀ**'ಯಲ್ಲಿ ಮಂದರ ಪರ್ವತದ ಎತ್ತರ ಮತ್ತು ಅಡಿಪಾಯದ ಅಳತೆಯನ್ನು ಹೀಗೆ ವಿವರಿಸಿದೆ:

ಜೋಯಣ ಸಹಸ್ಸ ಗಾಢೋ ಣವ ಣವದಿ ಸಹಸ್ಸ ಮೆತ್ತ ಉಚ್ಛೇಹೋ ।
ಬಹುವಿಹ ವಣ ಸಂಡ ಜುದೋ ಣಾಣಾವರ ರಯಣ ರಮಣಿಜ್ಜೋ ॥ (ತಿಲೋಯಪಣ್ಣತ್ತೀ, ೪–೧೮೦೪)

ಅರ್ಥ: ಈ ಸುಮೇರು ಮಹಾಪರ್ವತವು ಒಂದುಸಾವಿರ ಯೋಜನ ಆಳ, ತೊಂಬತ್ತೊಂಬತ್ತು ಸಾವಿರ ಯೋಜನ ಎತ್ತರ, ಅನೇಕ ಪ್ರಕಾರದ ವನ ಖಂಡವುಳ್ಳದ್ದೂ ಹಾಗೂ ಅನೇಕ ಉತ್ತಮ ರತ್ನಗಳಿಂದ ರಮಣೀಯವೂ ಆಗಿದೆ.

ಈ ವಚನದ ಮೊದಲನೆಯ ವಾಕ್ಯವು **ತಿಲೋಯಪಣ್ಣತ್ತೀ** ಗಾಥೆ ಸಂ. ೪–೧೮೦೪ ರ ಭಾಷಾಂತರವೋ ಎನ್ನಿಸುವಂತಿದೆ. ಇದರ ನಂತರ **ತಿಲೋಯಪಣ್ಣತ್ತೀ**ಯಲ್ಲಿ ಪರ್ವತದ ಪಾತಾಳ ತಳದ ವ್ಯಾಸ, ಪೃಥ್ವಿಯ ಮೇಲಿನ ಪದತಲದ ವ್ಯಾಸ ಹೀಗೆ ಹತ್ತು ಹಲವು ಅಳತೆಗಳನ್ನು ಹೇಳಲಾಗಿದೆ. ಪಂಪನು ಅಷ್ಟು ಸೂಕ್ಷ್ಮವಾದ ವಿವರಗಳನ್ನು ನೀಡಲು ಉಪಕ್ರಮಿಸುವುದಿಲ್ಲ. ಹೆಚ್ಚಿನ ವಿವರಗಳಿಗೆ ವಾಚಕರು **ತಿಲೋಯಪಣ್ಣತ್ತೀ** ಗಾಥೆ ಸಂ. ೪–೧೮೦೪ ರಿಂದ ೧೮೨೬ ರ ವರೆಗಿನ ಗಾಥೆಗಳನ್ನು ನೋಡಬಹುದು. ಆದರೂ ಇಲ್ಲಿ ಮಂದರ ಪರ್ವತದ ಪೃಥ್ವಿಯ ಮೇಲಿನ ವಿಸ್ತಾರವನ್ನೂ, ಶಿಖರ ಭೂಮಿಯ ವಿಸ್ತಾರವನ್ನು ತಿಳಿಸುವ ಗಾಥೆಯನ್ನು ಮಾತ್ರ ನೀಡಲಾಗಿದೆ:

ಕಮ ಹಾಣೀಏ ಉವರಿಂ ಧರಣೀ ಪಟ್ಟಮ್ಮಿ ದಸ ಸಹಸ್ಸಾಣಿಂ ।
ಜೋಯಣ ಸಹಸ್ಸಮೆಕ್ಕಂ ವಿತ್ಥಾರೋ ಸಿಹರ ಭೂಮೀಏ ॥ (ತಿಲೋಯಪಣ್ಣತ್ತೀ, ೪–೧೮೦೬)

ಅರ್ಥ: ಅನಂತರ ಅನುಕ್ರಮವಾಗಿ ಹಾನಿರೂಪವಾದುದರಿಂದ ಅದರ ವಿಸ್ತಾರವು ಪೃಥ್ವಿಯ ಮೇಲೆ ಹತ್ತುಸಾವಿರ ಯೋಜನ ಮತ್ತು ಶಿಖರ ಭೂಮಿಯ ಮೇಲೆ ಒಂದು ಸಾವಿರ ಯೋಜನ ಪ್ರಮಾಣವಿದೆ.

(೨) ಸರ್ವರತ್ನಜಾಂಬೂನದವೈಡೂರ್ಯಮಯಮುಂ: ಮಂದರ ಪರ್ವತದ ಸಮಸ್ತ ಭಾಗವೂ ರತ್ನಮಯವಾಗಿಯೂ, ಸ್ವರ್ಣಮಯವಾಗಿಯೂ, ವೈಡೂರ್ಯಮಯವಾಗಿಯೂ ಇರುವುದು ಎಂದು ಕವಿಯು ಹೇಳುತ್ತಾನೆ. **ತಿಲೋಯಪಣ್ಣತ್ತೀ**ಯಲ್ಲಿ ಈ ವಿಷಯವನ್ನು ಹೀಗೆ ವರ್ಣಿಸಲಾಗಿದೆ:

ಸೋ ಮೂಲೇ ವಜ್ಜಮಓ ಎಕ್ಕ ಸಹಸ್ಸಂ ಚ ಜೋಯಣ ಪಮಾಣೋ ।
ಮಜ್ಝೇ ವರ ರಯಣಮಓ ಇಗಿಸಟ್ಠಿ ಸಹಸ್ಸ ಪರಿಮಾಣೋ ॥ (ತಿಲೋಯಪಣ್ಣತ್ತೀ, ೪–೧೮೩೦)

ಅರ್ಥ: [ಆ ಸುಮೇರು ಪರ್ವತವು] ಮೂಲದಲ್ಲಿ ಒಂದು ಸಾವಿರ ಯೋಜನ ಪ್ರಮಾಣ ವಜ್ರಮಯವೂ, ಮಧ್ಯದಲ್ಲಿ ಅರವತ್ತೊಂದು ಸಾವಿರ ಯೋಜನ ಪ್ರಮಾಣ ಉತ್ತಮವಾದ ರತ್ನಮಯವೂ, (೧೦೦೦+೬೧೦೦೦=೬೨೦೦೦)

ಉವರಿಮ್ಮಿ ಕಂಚಣಮಓ ಅಡತೀಸ ಸಹಸ್ಸ ಜೋಯಣಾಣಂ ಪಿ ।
ಮಂದರ ಸೇಲಸ್ಸ ಸಿರೇ ಪಂಡು ವಣಂ ಣಾಮ ರಮಣಿಜ್ಜಂ ॥ (ತಿಲೋಯಪಣ್ಣತ್ತೀ, ೪–೧೮೩೧)

ಅರ್ಥ: ಹಾಗೂ ಮೇಲೆ ಮುವತ್ತೆಂಟು ಸಾವಿರ ಯೋಜನ ಪ್ರಮಾಣ ಸ್ವರ್ಣಮಯವೂ ಆಗಿದೆ. ಈ ಮಂದರಪರ್ವತದ ತುದಿಯ ಮೇಲೆ ರಮಣೀಯವಾದ ಪಾಂಡು ಎಂಬ ವನವಿದೆ. (೬೨೦೦೦+೩೮೦೦೦=೧೦೦೦೦೦)

ಪಂಪನು, ಮಂದರಪರ್ವತವು ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ರತ್ನಮಯವಾಗಿಯೂ, ಸ್ವರ್ಣಮಯವಾಗಿಯೂ, ಹಾಗೂ ವೈಡೂರ್ಯಮಯವಾಗಿಯೂ ಇರುವುದೆಂದು ಹೇಳಿ ಮುಗಿಸುತ್ತಾನೆ. **ತಿಲೋಯಪಣ್ಣತ್ತೀ**ಯಲ್ಲಿನ ವರ್ಣನೆಗೆ ಹೋಲಿಸಿದರೆ ಪಂಪನ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸವಿರುವಂತೆ ಕಾಣುತ್ತದೆ. ಈ ಗಾಥೆಯಲ್ಲಿ, (೧) ಕೆಳಗಿನಿಂದ (ಅಡಿಪಾಯದ ತುದಿಯಿಂದ) ಮೇಲಕ್ಕೆ ಎಂದರೆ ಒಂದು ಸಾವಿರ ಯೋಜನ ಎತ್ತರದಷ್ಟು ಪಾತಾಳದಲ್ಲಿ ಹುದುಗಿ ಹೋಗಿರುವ ಮಂದರ ಪರ್ವತದ ಅಡಿಪಾಯವು **ವಜ್ರಮಯ**ವಾಗಿಯೂ, (೨) ಭೂತಲದ ಎಂದರೆ ನೆಲಮಟ್ಟದಿಂದ ಮೇಲಕ್ಕೆ ಅರವತ್ತೊಂದು ಸಾವಿರ ಯೋಜನ ಪ್ರಮಾಣದಷ್ಟು ಎತ್ತರದವರೆಗೆ **ರತ್ನಮಯ**ವಾಗಿಯೂ, ಹಾಗೂ, (೩) ಭೂತಳದ ಅರವತ್ತೊಂದು ಸಾವಿರ ಯೋಜನ ಎತ್ತರದಲ್ಲಿನ ಭಾಗದಿಂದ ಪರ್ವತದ ತುದಿಯವರೆಗೆ ಇರುವ ಉಳಿದ ಮುವತ್ತೆಂಟು ಸಾವಿರ ಯೋಜನ ಪ್ರಮಾಣದ ಎತ್ತರದ ವರೆಗೆ **ಸ್ವರ್ಣಮಯ**ವಾಗಿಯೂ ಇದೆ ಎಂದು ವರ್ಣಿಸಲ್ಪಟ್ಟಿದೆ.


ಪಂಪನ ವರ್ಣನೆಯಲ್ಲಿ ವಜ್ರದ ಹೆಸರು ಇರುವುದಿಲ್ಲ. ಬದಲಿಗೆ ವೈಡೂರ್ಯಮಯವಾಗಿದೆ ಎನ್ನುತ್ತಾನೆ. ಪರ್ವತದ ಎಷ್ಟೆಷ್ಟು ಭಾಗವು ಯಾವ ರತ್ನದಿಂದ ಆವೃತವಾಗಿದೆ ಎಂದು ನಿರ್ದಿಷ್ಟ ಅಳತೆಯೊಂದಿಗೆ ತಿಳಿಸುವುದಿಲ್ಲ. ಅಲ್ಲದೆ, ಗಾಥೆಯ ಪ್ರಕಾರ ಪರ್ವತದ ತುದಿಯ ಭಾಗವು ಸ್ವರ್ಣಮಯವಾಗಿದೆ. ಪಂಪನ ವರ್ಣನೆಯಂತೆ ಪರ್ವತದ ಮಧ್ಯ ಭಾಗವು ಸ್ವರ್ಣಮಯವಾಗಿದೆ. ಗಾಥೆಯಂತೆ ಪರ್ವತದ ಕೆಳಭಾಗವು ಅಂದರೆ ಅಡಿಪಾಯವು ವಜ್ರಮಯವಾಗಿದೆ ಎಂದು ವರ್ಣಿತವಾಗಿದ್ದರೆ, ಪಂಪನು ಪರ್ವತದ ಕೆಳಭಾಗವನ್ನು (ಈ ಭಾಗವನ್ನು ಪರ್ವತದ ಅಡಿಪಾಯವೆಂದು ಪಂಪನು ತಿಳಿಸುವುದಿಲ್ಲ) ರತ್ನಮಯವೆಂದು ವರ್ಣಿಸುತ್ತಾನೆ

(ರತ್ನವೆಂದರೆ ನವರತ್ನಗಳಲ್ಲಿ ಒಂದಾದ ವಜ್ರವೆಂದು ಭಾವಿಸಬಹುದು).

(೩) ಅಂತರಾಂತರ ನಿರಂತರ ಕಾಂತ ಸೋಮ ಯಮ ವರುಣ ಕುಬೇರ ಪ್ರಮುಖ ಲೋಕಪಾಲಾಭಿಯೋಗ್ಯ ದಿಗ್ಗಜೇಂದ್ರ ದೇವವಿಹಾರ ಪ್ರಾಸಾದಾಭಿರಾಮಮುಂ: (ಈ ವಾಕ್ಯದಲ್ಲಿರುವ ವಿಷಯಗಳು ತಿಲೋಯಪಣ್ಣತ್ತೀ ೪–೧೮೬೦ ರಿಂದ ೧೮೭೪ ರವರೆಗಿನ ಗಾಥೆಗಳಲ್ಲಿ ವರ್ಣಿತವಾಗಿದೆ)

ಅಂತರಾಂತರ ಎಂದರೆ, ನಡುನಡುವೆ ಪಾಂಡುಕ ವನದಲ್ಲಿ ಚೂಲಿಕೆಯ ಹತ್ತಿರ ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ಈ ನಾಲ್ಕೂ ದಿಕ್ಕುಗಳಲ್ಲಿ, ಮುವತ್ತು ಕೋಸ ಪ್ರಮಾಣದ ವಿಸ್ತಾರವುಳ್ಳ, ಭವ್ಯವೂ, ರತ್ನಖಚಿತವೂ ಆದ ನಾನಾ ಪ್ರಕಾರದ ಧೂಪಗಳಿಂದ ವ್ಯಾಪ್ತವಾಗಿ, ಉತ್ತಮ ಪಾರ್ಶ್ವಭಾಗಗಳುಳ್ಳ ಸ್ವಚ್ಛ, ಧೂಳುರಹಿತ ಮತ್ತು ಮೃದುವಾದ ಶಯ್ಯೆ ಹಾಗೂ ಆಸನಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವ, ಕ್ರಮವಾಗಿ (೧) ಲೋಹಿತ, (೨) ಅಂಜನ, (೩) ಹಾರಿದ್ರ ಮತ್ತು (೪) ಪಾಂಡುಕ ಎಂಬ ಹೆಸರುಗಳುಳ್ಳ, **ನಿರಂತರ ಕಾಂತ** ಎಂದರೆ ದಟ್ಟಣೆಸಿರುವ ಸುಂದರವಾದ ನಾಲ್ಕು **ದೇವ ವಿಹಾರ ಪ್ರಾಸಾದ (ಭವನ) ಗಳಿವೆ.** ಈ ಪ್ರತಿಯೊಂದೂ ಪ್ರಾಸಾದಗಳ ಮಧ್ಯ ಭಾಗದಲ್ಲಿ ಅದ್ಭುತವಾದ ರತ್ನಮಯವಾದ ಒಂದೊಂದು ಕ್ರೀಡಾ ಶೈಲವಿದೆ. ಈ ಪ್ರಾಸಾದಗಳಲ್ಲಿ ಕ್ರಮವಾಗಿ ನಾಲ್ಕು ಪ್ರಮುಖ ಲೋಕಪಾಲರಾದ (೧) ಸೋಮ, (೨) ಯಮ, (೩) ವರುಣ, ಮತ್ತು (೪) ಕುಬೇರ ಇವರುಗಳು ಇದ್ದು, ಕಲ್ಪವಾಸಿನಿ ಸ್ತ್ರೀಯರಿಂದಲೂ ಹಾಗೂ ಅಭಿಯೋಗ್ಯ ದಿಗ್ಗಜೇಂದ್ರರಿಂದಲೂ(?) ಸುತ್ತುವರೆದು, ಈ ಕ್ರೀಡಾ ಶೈಲದಲ್ಲಿ ಕ್ರೀಡಿಸುತ್ತಾ ರಮಣಮಾಡುತ್ತಾರೆ.

ಸುಮೇರು ಪರ್ವತದ ಚಿತ್ರ:



(**‘ಪ್ರಮುಖಲೋಕಪಾಲಾಭಿಯೋಗ್ಯ’** ಈ ವಿವರಗಳಿಗೆ ಇದೇ ಆಶ್ವಾಸದ ಮೊದಲನೆಯ ಪದ್ಯದ **ವಿಶೇಷ ವಿವರಣೆ**ಯ ಭಾಗವನ್ನು ನೋಡಿರಿ).

(೪) ಅನೇಕ ನಾಕನಾಯಕ ಲೋಕಪಾಳಲೀಲಾಭವನಾಧ್ಯಾಸಿತಮುಂ:

ಹೀಗೆ ಆ ಮಂದರ ಪರ್ವತವು **ಅನೇಕ ನಾಕನಾಯಕ** ಅಂದರೆ ಸ್ವರ್ಗದ ಅಧಿಪತಿಗಳಾದ ಇಂದ್ರರ, **ಲೋಕಪಾಲರ ಅನೇಕ ಲೀಲಾಭವನ** (ಕ್ರೀಡಾಭವನ) ಗಳಿಂದ **ಅಧ್ಯಾಸಿತಮುಂ** ಅಂದರೆ ಕೂಡಿರುತ್ತದೆ.

(೫) (ಅ) ಪದ್ಮವೇದಿಕಾಪರಿವೃತರತ್ನತೋರಣಾಂಚಿತಜಿನಭವನಪರಿವೃತಮುಂ:

(ಈ ವಾಕ್ಯದಲ್ಲಿರುವ ವಿಷಯಗಳು ತಿಲೋಯಪಣ್ಣತ್ತೀ, ೪–೧೮೦೭ ರಿಂದ ೧೮೫೩ ರವರೆಗಿನ ಗಾಥೆಗಳಲ್ಲಿ ವರ್ಣಿತವಾಗಿದೆ)

ತಿಲೋಯಪಣ್ಣತ್ತೀಯಲ್ಲಿ ಆಚಾರ್ಯ ಯತಿವೃಷಭರು ಪಾಂಡುಕವನದಲ್ಲಿರುವ ಜಿನೇಂದ್ರ ಪ್ರಾಸಾದಗಳ ವರ್ಣನೆಯನ್ನು ಹದಿನೈದು ಗಾಥೆಗಳಲ್ಲಿ ವರ್ಣಿಸಿರುವುದನ್ನು, ಪಂಪನು ಕೇವಲ ಒಂದು ಸಾಲಿಗೆ ಇಳಿಸಿರುವನು.

ಪಾಂಡುಕವನದಲ್ಲಿರುವ ಜಿನಭವನಗಳು ಕಮಲದ ಹೂವಿನ ಆಕಾರದಲ್ಲಿ ನಿರ್ಮಾಣವಾಗಿರುವ ವೇದಿಕೆಯಿಂದ ಸುತ್ತುವರೆದಿದ್ದು, ರತ್ನದ ಶಿಲೆಗಳಿಂದ ರಚಿತವಾದ ಹೆಬ್ಬಾಗಿಲುಗಳನ್ನು ಉಳ್ಳವುಗಳಾಗಿದ್ದು, ಪಾಂಡುಕವನದ ತುಂಬಾ ತುಂಬಿರುತ್ತವೆ. **ತಿಲೋಯಪಣ್ಣತ್ತೀ**ಯಲ್ಲಿ, ಈ ಜಿನೇಂದ್ರ ಪ್ರಾಸಾದಗಳು ಅಕೃತಿಮ ಮತ್ತು ಅವಿನಾಶಿಯಾದವುಗಳು ಎಂದು ಇತ್ಯಾದಿಯಾಗಿ ವರ್ಣಿತವಾಗಿವೆ.

ಪಂಚರತ್ನಮಯ ಸುಶ್ಲಿಷ್ಟಾಷ್ಟಾಧಿಕಸಹಸ್ರಲಕ್ಷಣವ್ಯಂಜನಾಂಕಿತಾಷ್ಟಶತಕಳಶ ಭೃಂಗಾರಾದ್ಯುಪಕರ ಣೋಪಶೋಭಿತಮುಂ:
(ಈ ವಚನಭಾಗದಲ್ಲಿರುವ ವಿಷಯಗಳು ತಿಲೋಯಪಣ್ಣತ್ತೀ ೪–೧೮೫೪ ರಿಂದ ೧೯೧೪ ರವರೆಗಿನ ಗಾಥೆಗಳಲ್ಲಿ ವರ್ಣಿಸಲ್ಪಟ್ಟಿವೆ)

ಈ ವಾಕ್ಯದ ಶಬ್ದಾರ್ಥ ಹೀಗಿದೆ: ‘ಪಂಚರತ್ನಮಯವಾಗಿ, ಸಾವಿರದ ಎಂಟು ಲಕ್ಷಣಗಳಿಂದಲೂ ಹಾಗೂ ವ್ಯಂಜನ ಚಿಹ್ನೆಗಳಿಂದಲೂ ವ್ಯಾಪ್ತವಾಗಿ (ಸೇರಿಕೊಂಡು) ಸುಂದರವಾಗಿಯೂ, ನೂರೆಂಟು ಜೊತೆ ಕಳಶಗಳು, ಸುವರ್ಣಗಿಂಡಿ ಮುಂತಾದ ಅಷ್ಟ ಮಂಗಳದ್ರವ್ಯಗಳಿಂದ (ಉಪಕರಣಗಳಿಂದ) ಅಲಂಕೃತವಾಗಿರುವುದೂ’.

ಈ ವಾಕ್ಯವನ್ನು ಎರಡು ಖಂಡಗಳನ್ನಾಗಿ ವಿಂಗಡಿಸಿ ಈ ಕೆಳಗಿನಂತೆ **ವಿಶೇಷ ವಿವರಣೆ** ನೀಡಲಾಗಿದೆ:

ಪಂಚರತ್ನಮಯ ಸುಶ್ಲಿಷ್ಟಾಷ್ಟಸಹಸ್ರಲಕ್ಷಣವ್ಯಂಜನಾಂಕಿತ: ಅಲ್ಲಿರುವ ಜಿನೇಂದ್ರ ಪ್ರತಿಕೃತಿಗಳು [ಜಿನಬಿಂಬಗಳು] ಪಂಚರತ್ನ ಮಯವಾಗಿಯೂ, ಸಾವಿರದ ಎಂಟು ಲಕ್ಷಣಗಳು ಮತ್ತು ವ್ಯಂಜನ ಚಿಹ್ನೆಗಳನ್ನು ಉಳ್ಳದ್ದಾಗಿವೆ. **ವ್ಯಂಜನಾಂಕಿತ**ಗಳೆಂದರೆ, ತೀರ್ಥಂಕರರ ಶರೀರವು ಜನ್ಮತಃ ಒಟ್ಟು ೧೦೦೮ ಶುಭಲಕ್ಷಣ (ಚಿಹ್ನೆ) ಗಳಿಂದ ಕೂಡಿರುತ್ತದೆಂದೂ (ಜನ್ಮಾತಿಶಯದ ೧೦ ಗುಣಗಳಲ್ಲಿ ಎಂಟನೆಯ ಗುಣವನ್ನು **‘ಸೌಲಕ್ಷಣ್ಯ’**ಗುಣವೆನ್ನುವರು), ಆ **ಸೌಲಕ್ಷಣ್ಯಗುಣ**ಗಳಲ್ಲಿ **೧೦೮ ಲಕ್ಷಣಗಳನ್ನು ಮಹಾಲಕ್ಷಣ**ಗಳೆಂದೂ, ಉಳಿದ **೯೦೦ ಲಕ್ಷಣಗಳನ್ನು ವ್ಯಂಜನ ರಂಜಿತ ಲಕ್ಷಣ**ಗಳೆಂದೂ ಕರೆಯುವರು.

ಕವಿಯು ಮುಂದಿನ ಎಂಟನೆಯ ಆಶ್ವಾಸದ ೪ ನೆಯ ಪದ್ಯದ ನಂತರದ ವಚನದಲ್ಲಿ [೮–೪ (ವ)] **ಸೌಲಕ್ಷಣ್ಯ**ದ ವಿವರವನ್ನು ಈ ರೀತಿ ತಿಳಿಸುತ್ತಾನೆ:

‘ಸ್ವಸ್ತಿಕ ನಂದ್ಯಾವರ್ತಾದಿ ಅಷ್ಟೋತ್ತರಶತಲಕ್ಷಣಲಕ್ಷಿತ ತಿಲಕಮಸೂರಿಕಾ ಪ್ರಭೃತಿ ನವಶತವ್ಯಂಜನರಂಜಿತ...’ ೮–೪ (ವ)

[ಎಂಟನೆಯ ಆಶ್ವಾಸದ ೮–೪ (ವ) ದಿಂದ ಉದ್ಧರಿಸಿರುವ ಈ ವಾಕ್ಯದಲ್ಲಿ, ಕವಿಯು ೧೦೮ ಎನ್ನುವ ಅಂಕಿಯನ್ನು ‘ಅಷ್ಟಶತ’ ಎಂದು ಕರೆಯದೆ ‘ಅಷ್ಟೋತ್ತರಶತ’ ಎನ್ನುತ್ತಾನೆ. ಹಾಗೆಯೇ ಇಲ್ಲಿರುವ ‘ನವಶತ’ವನ್ನು ಇಲ್ಲಿ ೯೦೦ ಎಂದೇ ತಿಳಿಯಬೇಕು. ‘ಅಷ್ಟಶತ’ವನ್ನು ೧೦೮ ಎಂದು ಅರ್ಥೈಸಿದಂತೆ ‘ನವಶತ’ವನ್ನು ೧೯ ಎಂದು ಅರ್ಥೈಸಲಾಗದು.]

ಹಾಗೆಯೇ, **ತಿಲೋಯಪಣ್ಣತ್ತೀ**ಯಲ್ಲಿ ಮಂದರ ಪರ್ವತದಲ್ಲಿರುವ ಜಿನೇಂದ್ರ ಪ್ರಾಸಾದಗಳಲ್ಲಿ ವಿರಾಜಮಾನವಾಗಿರುವ ಜಿನಪ್ರತಿಮೆಗಳು ೧೦೦೮ ವ್ಯಂಜನ ಸಮೂಹಗಳನ್ನೂ, ೩೨ ಲಕ್ಷಣಗಳನ್ನು ಹೊಂದಿವೆ ಎಂದು ಈ ಕೆಳಗಿನ ಗಾಥೆಗಳು ತಿಳಿಸುತ್ತವೆ.

ಭಿಣ್ಣಿಂದ ಣೀಲಮಣಿಮಯ ಕುಂತಲ ಭುವಗ್ಗದಿಣ್ಣ ಸೋಹಾಓ ।
ಫಲಿಹಿಂದ ಣೀಲ ಣಿಮ್ಮಿದ ಧವಲಾಸಿದ ಣೆತ್ತ ಜುಯಲಾಓ ॥ (ತಿಲೋಯಪಣ್ಣತ್ತೀ, ೪–೧೮೫೬)

ಅರ್ಥ: [ಈ ಜಿನಪ್ರತಿಮೆಗಳು] ವಿಭಿನ್ನ ಇಂದ್ರನೀಲಮಣಿಮಯ ಕುಂತಲ ಹಾಗೂ ಭ್ರುಕುಟೀ [ಕೂದಲು ಹಾಗೂ ಹುಬ್ಬು] ಗಳ ಅಗ್ರಭಾಗದಿಂದ ಶೋಭೆಯನ್ನುಂಟುಮಾಡುವ, ಸ್ಫಟಿಕಮಣಿ ಹಾಗೂ ಇಂದ್ರನೀಲ ಮಣಿಗಳಿಂದ ನಿರ್ಮಿತವಾದ–

ವಜ್ಜಮಯ ದಂತಪಂತೀ ಪಹಾಓ ಪಲ್ಲವ ಸರಿಚ್ಛ ಅಧರಾಓ ।
ಹೀರಮಯ ವರ ಣಹಾಓ ಪಉಮಾರುಣ ಪಾಣಿ ಚರಣಾಓ ॥ (ತಿಲೋಯಪಣ್ಣತ್ತೀ, ೪–೧೮೯೭)

ಅರ್ಥ: ವಜ್ರಮಯ ದಂತಪಂಕ್ತಿಯ ಪ್ರಭೆಯುಳ್ಳ ಪಲ್ಲವದಂತೆ ಅಧರೋಷ್ಠದಿಂದ [ಕೆಳತುಟಿಯಿಂದ] ಸುಶೋಭಿತವಾದ ಹೀರಾ [ರತ್ನ] ಮಯವಾದ ಉತ್ತಮವಾದ ಉಗುರುಗಳಿಂದ ವಿಭೂಷಿತವಾದ, ಕಮಲದಂತೆ ಕೆಂಪಾಗಿರುವ ಕೈ ಕಾಲುಗಳಿಂದ–

ಅಟ್ಠಬ್ಭಹಿಯ ಸಹಸ್ಸಪ್ಪಮಾಣ ವಂಜಣ ಸಮೂಹ ಸಹಿದಾಓ ।
ಬತ್ತೀಸ ಲಕ್ಖಣೇಹಿಂ ಜುತ್ತಾಓ ಜಿಣೇಸ ಪಡಿಮಾಓ ॥ (ತಿಲೋಯಪಣ್ಣತ್ತೀ, ೪–೧೮೯೮)

ಅರ್ಥ: ವಿಶಿಷ್ಟವಾದ ಒಂದು ಸಾವಿರ ಎಂಟು ವ್ಯಂಜನ ಸಮೂಹ ಹಾಗೂ ಮುವತ್ತೆರಡು ಲಕ್ಷಣಗಳನ್ನು ಹೊಂದಿವೆ.

ಇದನ್ನನುಸರಿಸಿಯೇ ೧೦೦೮ ಲಕ್ಷಣಗಳುಳ್ಳ ಜಿನಬಿಂಬವೆಂದು ಭಾವಿಸಿ ರಚಿಸಿ, ಬಸದಿಗಳಲ್ಲಿ ತೀರ್ಥಂಕರರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿರುತ್ತಾರೆ (ಉದಾ.: ಶ್ರೀ ೧೦೦೮ ಆದಿನಾಥ ತೀರ್ಥಂಕರ ಜಿನ ಚೈತ್ಯಾಲಯ, ಇತ್ಯಾದಿ).

ಈ ಮೇಲೆ ವಿವರಿಸಿದಂತೆ ತೀರ್ಥಂಕರರಿಗೆ ಜನ್ಮತಃ ಪ್ರಾಪ್ತವಾದ '**೧೦೦೮ ಸೌಲಕ್ಷಣ**'ಗಳಲ್ಲಿ ಎರಡು ಬಗೆ ಎಂದು ಹೇಳಿದೆ. ಅವುಗಳ ವಿವರಗಳು ಕೆಳಗಿನಂತಿವೆ:

(೧) ೧೦೮ ಮಹಾಲಕ್ಷಣಗಳು, (೨) ೯೦೦ ವ್ಯಂಜನ ಲಕ್ಷಣಗಳು.

(೧) ೧೦೮ ಮಹಾಲಕ್ಷಣಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ: ಶ್ರೀವೃಕ್ಷ, ಶಂಖ, ಕಮಲ, ಸ್ವಸ್ತಿಕ, ಅಂಕುಶ, ತೋರಣ, ಚಾಮರ, ಶ್ವೇತಾತಪತ್ರ, ಸಿಂಹಾಸನ, ಧ್ವಜ, ಮತ್ಸ್ಯ, ಕಲಶ, ಕಚ್ಛಪ, ಚಕ್ರ, ಸಮುದ್ರ, ಸರೋವರ, ವಿಮಾನ, ಭವನ, ಗಜ, ನರನಾರೀ, ಸಿಂಹ, ಬಿಲ್ಲುಬಾಣಗಳು, ಮೇರು, ಇಂದ್ರ, ಪರ್ವತ, ನದಿ, ನಗರ, ಗೋಪುರ, ಚಂದ್ರ, ಸೂರ್ಯ, ಜಾತ್ಯಶ್ವ, ವ್ಯಜನ, ಬಿದುರು, ವೀಣೆ, ಮೃದಂಗ, ಎರಡು ಹೂವಿನ ಮಾಲೆ, ಪಟ್ಟದುಕೂಲ, ಹಟ್ಟ (ಮಹಡಿಮನೆ), ಕುಂಡಲಾದಿ ಷೋಡಶಾಭರಣ, ಫಲಭರಿತ ಉದ್ಯಾನ, ಸುಪಕ್ಷ್ವ(ಕ್ವ?) ಕಲಮಕ್ಷೇತ್ರ (ಕಟಾವಿಗೆ ಬಂದ ಬತ್ತದ ಗದ್ದೆ?/ಬತ್ತ ಬೆಳೆಯುವ ಫಲವತ್ತಾದ ಕ್ಷೇತ್ರ ಅಥವಾ ಗದ್ದೆ?), ಮಾಗಿದ ಪೈರುಳ್ಳ ಭತ್ತದ ಗದ್ದೆ, ರತ್ನದೀಪ, ವಜ್ರ, ಭೂಮಿ, ಲಕ್ಷ್ಮೀ, ಸರಸ್ವತಿ, ಕಾಮಧೇನು, ವೃಷಭ (ಬಸವ), ಚೂಡಾರತ್ನ, ಮಹಾನಿಧಿ, ಕಲ್ಪವಲ್ಲೀ, ಹಿರಣ್ಯ, ಜಂಬೂವೃಕ್ಷ, ಗರುಡ, ನಕ್ಷತ್ರ, ತಾರಕ, ರಾಜಸದನ, ಗ್ರಹಗಳು, ಸಿದ್ಧಾರ್ಥಪಾದಪ, ಅಷ್ಟಮಹಾಪ್ರಾತಿ ಹಾರ್ಯ, ಅಷ್ಟಮಂಗಳ ದ್ರವ್ಯಗಳು, ಇತ್ಯಾದಿ.

(೨) ೯೦೦ ವ್ಯಂಜನ ರಂಜಿತ ಲಕ್ಷಣಗಳು: ತಿಲಕ, ಮಸೂರಿಕಾ, ಪ್ರಭೃತಿ, ಇತ್ಯಾದಿ.

[ಹುಟ್ಟಿನಿಂದಲೇ ದೇಹದ ಮೇಲೆ ಮೂಡಿರುವ ಕಪ್ಪು, ಬಿಳಿ ಬಣ್ಣದ ಚುಕ್ಕಿಗಳು, ಸುಳಿಗಳು, ಕಾರೆಳ್ಳು ಇತ್ಯಾದಿ **ಮಚ್ಚೆ**ಗಳನ್ನು ವ್ಯಂಜನ ರಂಜಿತ ಲಕ್ಷಣವೆನ್ನುತ್ತಾರೆ.]

ಅಷ್ಟಶತ ಕಳಶಭೃಂಗಾರಾದ್ಯುಪಕರಣೋಪಶೋಭಿತಮುಂ: ಇದಕ್ಕೆ [ಅಷ್ಟ ಮಂಗಳದ್ರವ್ಯಗಳಿಗೆ] ಸಂವಾದಿಯಾದ ವರ್ಣನೆಯು **ತಿಲೋಯಪಣ್ಣತ್ತೀ**ಯಲ್ಲಿ ಹೀಗಿದೆ:

ಭಿಂಗಾರ ಕಲಸ ದಪ್ಪಣ ಚಾಮರ ಧಯ ವಿಯಣ ಛತ್ತ ಸುಪಇಟ್ಠಾ ।
ಅಟ್ಠುತ್ತರ ಸಯ ಸಂಖಾ ಪತ್ತೆಕ್ಕಂ ಮಂಗಲಾ ತೇಸುಂ ॥ (ತಿಲೋಯಪಣ್ಣತ್ತೀ, ೪–೧೯೦೪)

ಅರ್ಥ: ಭೃಂಗಾರ, ಕಳಶ, ದರ್ಪಣ, ಚಾಮರ, ಧ್ವಜ, ಬೀಸಣಿಕೆ, ಛತ್ರ ಮತ್ತು ಸುಪ್ರತಿಷ್ಠ (ಸ್ವಸ್ತಿಕ) [ಇವು ಎಂಟು ಮಂಗಳ ದ್ರವ್ಯಗಳಾಗಿವೆ]. ಇವುಗಳಲ್ಲಿ ಪ್ರತಿಯೊಂದು ಒಂದು ನೂರಾ ಎಂಟು ಇರುತ್ತವೆ.

ವೈಡೂರ್ಯದಂಡ ಮುಕ್ತಾಮಣಿಜಾಳಾಳಂಕೃತ ರತ್ನಶಲಾಕಾಶತಕಾಂಚನಕುಂಭ ಬಿಂಬ ರಜತಚ್ಛದಚ್ಛತ್ರ ವಿಚಿತ್ರ ಜಿನೇಂದ್ರ ಪ್ರತಿಕೃತಿ ಪ್ರಕೀರ್ಣಮುಂ: ವೈಡೂರ್ಯ ಖಚಿತ ದಂಡಗಳಿಂದಲೂ, ಮುತ್ತಿನ ಮಣಿಯ [ಮುತ್ತುರತ್ನಗಳ] ಹಾರಗಳಿಂದಲೂ (ಗೊಂಚಲುಗಳಿಂದ(?)) ಅಲಂಕೃತವಾದುದೂ, ರತ್ನದ ಹಿಡಿಯುಳ್ಳ ನೂರು ಬಂಗಾರದ ಕೊಡಗಳಿಂದಲೂ, ಕನ್ನಡಿ, ಬಿಳಿಯಬಣ್ಣದ ಮುಸುಕುಳ್ಳ ಕೊಡೆ (ಬೆಳ್ಗೊಡೆ) ಗಳಿಂದಲೂ ಕೂಡಿದ ನಾನಾ ಬಗೆಯ ತೀರ್ಥಂಕರರ ಪ್ರತಿಮೆಗಳಿಂದ [ಆ ಜಿನಭವನಗಳು] ತುಂಬಿರುತ್ತವೆ.

(೬) ಭದ್ರಶಾಲನಂದನಸೌಮನಸಪಾಂಡುಕವನವಿರಾಜಿತಮುಂ: ಈ ಮಂದರ ಪರ್ವತವು: (೧) ಭದ್ರಶಾಲ, (೨) ನಂದನ, (೩) ಸೌಮನಸ, (೪) ಪಾಂಡುಕ ಎಂಬ ನಾಲ್ಕು ವನಗಳಿಂದ ವಿರಾಜಮಾನವಾಗಿರುತ್ತದೆ. ಆದರೆ, '**ತಿಲೋಣಯಪಣ್ಣತ್ತೀ**'ಯಲ್ಲಿ ಈ ನಾಲ್ಕೂ ವನಗಳು ಪರ್ವತದ ಯಾವ ಯಾವ ಭಾಗಗಳಲ್ಲಿ ಸ್ಥಿತವಾಗಿವೆ ಎಂಬುದನ್ನು ವರ್ಣಿಸಲಾಗಿದೆ:

ಉವರಿಮ್ಮಿ ಕಂಚಣಮಓ, ಅಡತೀಸ ಸಹಸ್ಸ ಜೋಯಣಾಣಂ ಪಿ ।
ಮಂದರ ಸೇಲಸ್ಸ ಸಿರೇ ಪಂಡು ವಣಂ ಣಾಮ ರಮಣಿಜ್ಜಂ ॥ (ತಿಲೋಯಪಣ್ಣತ್ತೀ, ೪-೧೮೩೧)

ಅರ್ಥ: ಆ ಸುಮೇರು ಪರ್ವತವು ಮೂಲದಲ್ಲಿ ಒಂದು ಸಾವಿರ ಯೋಜನ ಪ್ರಮಾಣ ವಜ್ರಮಯವೂ, ಮಧ್ಯದಲ್ಲಿ ಅರವತ್ತೊಂದು ಸಾವಿರ ಯೋಜನ ಪ್ರಮಾಣ ಉತ್ತಮವಾದ ರತ್ನಮಯವೂ ಹಾಗೂ ಮೇಲೆ ಮುವತ್ತೆಂಟು ಸಾವಿರ ಯೋಜನ ಪ್ರಮಾಣ ಸ್ವರ್ಣಮಯವೂ ಆಗಿದೆ. **ಈ ಮಂದರ ಪರ್ವತದ ತುದಿಯ ಮೇಲೆ ರಮಣೀಯವಾದ ಪಾಂಡು ಎಂಬ ವನವಿದೆ.**

ಸೋಮಣಸಂ ಣಾಮ ವಣಂ ಸಾಣುಪದೇಸೇಸು ಣಂದಣಂ ತಹ ಯ ।
ತತ್ಥ ಚಉತ್ಥಂ ಚೆಟ್ಠದಿ ಭೂಮೀಏ ಭದ್ದಸಾಲ ವಣಂ ॥ (ತಿಲೋಯಪಣ್ಣತ್ತೀ, ೪-೧೮೩೨)

ಅರ್ಥ: ಸೌಮನಸ ಹಾಗೂ ನಂದನ ವನಗಳು ಮೇರು ಪರ್ವತದ ಸಾನು ಪ್ರದೇಶಗಳಲ್ಲಿ ಹಾಗೂ ನಾಲ್ಕನೇ ಭದ್ರಶಾಲ ವನವು ಭೂಮಿಯ ಮೇಲಿದೆ.

(೭) ಪಾಂಡುಕ ಪಾಂಡುಕಂಬಳ ರಕ್ತಕಂಬಳ ಅತಿರಕ್ತಕಂಬಳ ವಿಶಾಲ ರತ್ನಶಿಲಾತಳ ಪ್ರತಿಷ್ಠಿತ ಭಗವಜ್ಜನ್ಮಾಭಿಷೇಕ ಸಿಂಹಾಸನಾಳಂಕೃತಮುಂ: [ಮಂದರ ಪರ್ವತದ ತುದಿಯ ಮೇಲಿರುವ ಪಾಂಡುಕ ವನದಲ್ಲಿ] ಪಾಂಡುಕ, ಪಾಂಡುಕಂಬಳ, ರಕ್ತಕಂಬಳ, ಅತಿರಕ್ತಕಂಬಳ ಎಂಬ ನಾಲ್ಕು ಬಗೆಯ [ಪಟ್ಟಕದಂತೆ] ಸಮತಟ್ಟಾದ ರತ್ನದ ದೊಡ್ಡ ಹರಳುಗಳಿದ್ದು, ಅವುಗಳು ಭಗವಂತನ [ಜಿನಶಿಶುವಿನ] ಜನ್ಮಾಭಿಷೇಕ ಕಲ್ಯಾಣ ನೆರವೇರಿಸುವುದಕ್ಕೆ ಪ್ರತಿಷ್ಠಾಪಿತವಾಗಿರುವ ಸಿಂಹಾಸನದಿಂದ ಆಲಂಕೃತವಾಗಿ ರುತ್ತವೆ. ಈ ನಾಲ್ಕೂ ಶಿಲೆಗಳ ಆಕಾರ, ಗಾತ್ರ ಇತ್ಯಾದಿಗಳ ವರ್ಣನೆಗಳು **ತಿಲೋಯಪಣ್ಣತ್ತೀ**ಯಲ್ಲಿ ಈ ಕೆಳಗಿನಂತೆ ಇರುತ್ತವೆ. ಮಂದರಪರ್ವತದ ಪಾಂಡುವನದೊಳಗೆ ಈ ಶಿಲೆಗಳು ಇದ್ದು, ಇವು ನೂರು ಯೋಜನ ಉದ್ದ ಹಾಗೂ ಐವತ್ತು ಯೋಜನ ಅಗಲವುಳ್ಳವುಗಳಾಗಿಯೂ, ಅರ್ಧಚಂದ್ರಾಕಾರವುಳ್ಳವುಗಳಾಗಿಯೂ, ಅದರ ಮೇಲೆ ಅದ್ಭುತವೂ ಶೋಭಾಯಮಾನವೂ ಆದ ಉನ್ನತ ಸಿಂಹಾಸನಗಳಿವೆ. ಇದರ ಮೇಲೆ ಜಿನಶಿಶುವನ್ನು ಭಕ್ತಿಪೂರ್ವಕ ಕೂಡಿಸಿ ಜನ್ಮಾಭಿಷೇಕ ಕಲ್ಯಾಣವನ್ನು ಸೌಧರ್ಮೇಂದ್ರ ಮತ್ತು ಈಶಾನೇಂದ್ರ ಹಾಗೂ ಇತರ ದೇವತೆಗಳು ನಡೆಸುತ್ತಾರೆ.

ಪಾಂಡುಕ ಶಿಲೆಯ ವರ್ಣನೆ_

ಪಂಡು ವಣಬ್ಭಂತರಏ ಈಸಾಣ ದಿಸಾಏ ಹೋದಿ ಪಂಡು ಸಿಲಾ ।
ತಡ ವಣ ವೇದೀ ಜುತ್ತಾ ಅದ್ಧೇಂದು ಸರಿಚ್ಛ ಸಂಠಾಣಾ ॥ (ತಿಲೋಯಪಣ್ಣತ್ತೀ, ೪-೧೮೪೨)

ಅರ್ಥ: ಪಾಂಡು ವನದೊಳಗೆ ಈಶಾನ್ಯ ದಿಕ್ಕಿನಲ್ಲಿ ತಟವನ ವೇದಿಯಿಂದ ಕೂಡಿದ ಮತ್ತು ಅರ್ಧಚಂದ್ರದಂತೆ ಆಕಾರವುಳ್ಳ ಪಾಂಡುಕ ಶಿಲೆಯಿದೆ.

ಪುವ್ವಾವರೇಸು ಜೋಯಣ ಸದ ದೀಹಾ ದಕ್ಖಿಣುತ್ತರಂಸೇಸುಂ ।
ಪಣ್ಣಾಸಾ ಬಹುಮಜ್ಝೇ, ಕಮ ಹಾಣೀ ತೀಏ ಉಭಯ ಪಾಸೇಸು ॥ (ತಿಲೋಯಪಣ್ಣತ್ತೀ, ೪-೧೮೪೩)

ಅರ್ಥ: (ಈ ಪಾಂಡುಕಶಿಲೆ) ಪೂರ್ವ-ಪಶ್ಚಿಮದಲ್ಲಿ ಒಂದು ನೂರು ಯೋಜನ ಉದ್ದ ಹಾಗೂ ದಕ್ಷಿಣೋತ್ತರ ದಿಶಾಗತ ಬಹು-ಮಧ್ಯಭಾಗದಲ್ಲಿ ಐವತ್ತು ಯೋಜನ ವಿಸ್ತಾರವುಳ್ಳದ್ದಾಗಿದೆ. (ಅರ್ಧಚಂದ್ರಾಕಾರವಾಗಿರುವುದರಿಂದ) ಇದರ ಮಧ್ಯಭಾಗದಿಂದ ಎರಡೂ ಪಾರ್ಶ್ವಗಳು ಅನುಕ್ರಮವಾಗಿ ಹಾನಿಯನ್ನು ಹೊಂದಿವೆ.

ಜೋಯಣ ಅಟ್ಠುಚ್ಛೇಹೋ ಸವ್ವತ್ಥಂ ಹೋದಿ ಕಣಯಮಇಯಾ ಸಾ ।
ಸಮ ವಟ್ಟಾ ಉವರಿಮ್ಮಿ ಯ, ವಣ ವೇದೀ ಪಹುದಿ ಸಂಜುತ್ತಾ ॥ (ತಿಲೋಯಪಣ್ಣತ್ತೀ, ೪-೧೮೪೪)

ಅರ್ಥ: ಎಲ್ಲೆಡೆ ಸ್ವರ್ಣಮಯೀ ಆ ಪಾಂಡುಕಶಿಲೆಯು ಎಂಟು ಯೋಜನ ಎತ್ತರ, ಮೇಲೆ ಸಮವೃತ್ತಾಕಾರ ಹಾಗೂ ವನ-ವೇದಿ ಮುಂತಾದವುಗಳನ್ನು ಹೊಂದಿದೆ.

ಚಉ ಜೋಯಣ ಉಚ್ಛೇಹಂ, ಪಣ ಸಯ ದೀಹಂ ತದದ್ಧ ವಿತ್ಥಾರಂ ।
ಸಗ್ಗಾಯಣಿ ಆಇರಿಯಾ, ಏವಂ ಭಾಸಂತಿ ಪಂಡುಸಿಲಂ ॥ (ತಿಲೋಯಪಣ್ಣತ್ತೀ, ೪-೧೮೪೫)

[ಪಾಠಾಂತರಮ್]

ಅರ್ಥ: ಈ ಪಾಂಡುಕಶಿಲೆಯು ನಾಲ್ಕು ಯೋಜನ ಎತ್ತರವೂ, ಐದುನೂರು ಯೋಜನ ಉದ್ದ ಮತ್ತು ಇದರ ಅರ್ಧ (ಎರಡುನೂರಾ ಐವತ್ತು) ಯೋಜನ ವಿಸ್ತಾರವುಳ್ಳದ್ದಾಗಿದೆ. ಹೀಗೆ **ಸಗ್ಗಾಯಣೀ** ಎಂಬ ಹೆಸರಿನ **ಆಚಾರ್ಯರು** ನಿರೂಪಿಸುತ್ತಾರೆ.

[ಪಾಠಾಂತರಮ್]

ತೀಏ ಬಹುಮಜ್ಝ ದೇಸೇ, ತುಂಗಂ ಸೀಹಾಸಣಂ ವಿವಿಹ ಸೋಹಂ ।
ಸರಸಮಯ ತರಣಿ ಮಂಡಲ ಸಂಕಾಸ ಫುರಂತ ಕಿರಣೋಘಂ ॥ (ತಿಲೋಯಪಣ್ಣತ್ತೀ, ೪–೧೮೪೬)

ಅರ್ಥ: ಪಾಂಡುಕ ಶಿಲೆಯ ಬಹುಮಧ್ಯ ಸ್ಥಳದಲ್ಲಿ ಶರತ್ಕಾಲೀನ ಸೂರ್ಯಮಂಡಲದಂತೆ ಹರಡುತ್ತಿರುವ ಕಿರಣಗಳ ಸಮೂಹದಿಂದ ಅದ್ಭುತ ಶೋಭಾಯಮಾನವಾದ ಉನ್ನತ ಸಿಂಹಾಸನವಿದೆ.


ಸಿಂಹಾಸಣಸ್ಸ ದೋಸುಂ, ಪಾಸೇಸುಂ ದಿವ್ವ ರಯಣ ರಇದಾಇಂ ।
ಭದ್ದಾಸಣಾಇ ಣಿಬ್ಭರ ಫುರಂತ ವರ ಕಿರಣ ಣಿವಹಾಣಿಂ ॥ (ತಿಲೋಯಪಣ್ಣತ್ತೀ, ೪–೧೮೪೭)

ಅರ್ಥ: ಸಿಂಹಾಸನದ ಎರಡೂ ಪಾರ್ಶ್ವ ಭಾಗಗಳಲ್ಲಿ ಅತ್ಯಂತ ಪ್ರಕಾಶಮಾನವಾದ ಉತ್ತಮವಾದ ಕಿರಣ ಸಮೂಹದಿಂದ ಕೂಡಿದ ಹಾಗೂ ದಿವ್ಯ ಸಿಂಹಾಸನಗಳಿಂದ ರಚಿಸಲಾದ ಭದ್ರಾಸನಗಳಿವೆ.

ಪುಹ ಪುಹ ಪೀಢ ತಯಸ್ಸ ಯ, ಉಚ್ಛೇಹಾ ಪಣ ಸಯಾಣಿ ಕೋದಂಡಾ ।
ತೆತ್ತಿಯ ಮೆತ್ತೋ ಮೂಲೋ, ವಾಸೋ ಸಿಹರೇ ಅ ತಸ್ಸದ್ಧಂ ॥ (ತಿಲೋಯಪಣ್ಣತ್ತೀ, ೪–೧೮೪೮)

ಅರ್ಥ: ಮೂರೂ ಪೀಠಗಳ ಪ್ರತ್ಯೇಕ ಎತ್ತರ ಐದು ನೂರು ಧನುಸ್ಸು ಆಗಿದೆ. ಮೂಲ ವಿಸ್ತಾರವೂ ಸಹ ಇಷ್ಟೇ (೫೦೦) ಧನುಸ್ಸು ಆಗಿದೆ ಮತ್ತು ಶಿಖರಗಳ ಮೇಲೆ ಪೀಠಗಳ ವಿಸ್ತಾರ ಇದರ ಅರ್ಧ (೨೫೦ ಧನುಸ್ಸು) ಇದೆ.

ಪಾಂಡುಕ ಪಾಂಡುಕಂಬಳ ರಕ್ತಕಂಬಳ ಅತಿರಕ್ತಕಂಬಳ ವಿಶಾಲ ರತ್ನಶಿಲಾತಳಗಳು:



ಧವಲಾದವತ್ತ ಜುತ್ತಾ, ತೇ ಪೀಢಾ ಪಾಯಪೀಢ ಸೋಹಿಲ್ಲಾ ।
ಮಂಗಲ ದವ್ವೇಹಿ ಜುದಾ, ಚಾಮರ ಘಂಟಾ ಪಯಾರೇಹಿಂ ॥ (ತಿಲೋಯಪಣ್ಣತ್ತೀ, ೪–೧೮೪೯)

ಅರ್ಥ: ಪಾದಪೀಠಗಳಿಂದ ಶೋಭಾಯಮಾನವಾದ ಆ ಪೀಠಗಳು ಧವಳಛತ್ರ ಹಾಗೂ ಚಾಮರ, ಘಂಟೆ ಮೊದಲಾದ ಅನೇಕ ಪ್ರಕಾರದ ಮಂಗಳ ದ್ರವ್ಯಗಳನ್ನು ಹೊಂದಿದೆ.

ಸವ್ವೇ ಪುವ್ವಾಹಿಮುಹಾ, ಪೀಢ ವರಾ ತಿಹುವಣಸ್ಸ ವಿಮ್ಹಯರಾ ।
ಎಕ್ಕ-ಮುಹ ಎಕ್ಕ-ಜೀಹೋ, ಕೋ ಸಕ್ಕಇ ವಣ್ಣಿದುಂ ತಾಣಿಂ ॥ (ತಿಲೋಯಪಣ್ಣತ್ತೀ, ೪-೧೮೫೦)

ಅರ್ಥ: ಪೂರ್ವಾಭಿಮುಖವಾಗಿರುವ ಆ ಎಲ್ಲ ಉತ್ತಮವಾದ ಪೀಠಗಳು ಮೂರೂ ಲೋಕಗಳನ್ನು ವಿಸ್ಮಿತಗೊಳಿಸುವಂತ ಹವಾಗಿವೆ. ಈ ಪೀಠಗಳ ವರ್ಣನೆ ಮಾಡಲು ಒಂದು ಮುಖ ಹಾಗೂ ನಾಲಿಗೆಯುಳ್ಳವರಲ್ಲಿ ಯಾರು ಸಮರ್ಥರಿರುವರು?

ಬಾಲ ತೀರ್ಥಂಕರರ ಜನ್ಮಾಭಿಷೇಕದ ವರ್ಣನೆ–

ಭರಹಕ್ಖೆತ್ತೇ ಜಾದಂ, ತಿತ್ಥಯರ ಕುಮಾರಕಂ ಗಹೇದೂಣಂ ।
ಸಕ್ಕಪ್ಪಹುದೀ ಇಂದಾ, ಣೇಂತಿ ವಿಭೂದೀಏ ವಿವಿಹಾಏ ॥ (ತಿಲೋಯಪಣ್ಣತ್ತೀ, ೪-೧೮೫೧)

ಅರ್ಥ: ಸೌಧರ್ಮ ಮೊದಲಾದ ಇಂದ್ರರು ಭರತಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರ ಕುಮಾರರನ್ನು ತೆಗೆದುಕೊಂಡು ವಿವಿಧ ಪ್ರಕಾರದ ವಿಭೂತಿಯೊಂದಿಗೆ ಮೇರು ಪರ್ವತದ ಮೇಲೆ ಒಯ್ಯುತ್ತಾರೆ.

ಮೇರು ಪ್ಪದಾಹಿಣೇಣಂ, ಗಚ್ಚಿಯ ಪಂಡೂ ಸಿಲಾಏ ಉವರಿಮ್ಮಿ ।
ಮಜ್ಝಿಯ ಸಿಂಹಾಸಣಏ, ವಣಸಾವಿಯ ಭತ್ತಿ ರಾಏಣ ॥ (ತಿಲೋಯಪಣ್ಣತ್ತೀ, ೪-೧೮೫೨)

ಅರ್ಥ: (ಆ ಇಂದ್ರರು) ಮೇರುವಿನ ಪ್ರದಕ್ಷಿಣೆ ಹಾಕುತ್ತ ಪಾಂಡುಕಶಿಲೆಯ ಮೇಲೆ ಹೋಗಿ ಮಧ್ಯದ ಸಿಂಹಾಸನದ ಮೇಲೆ ಭಕ್ತಿರಾಗಪೂರ್ವಕ (ಅವರನ್ನು) ಕೂಡಿಸುತ್ತಾರೆ.

ದಕ್ಖಿಣ ಪೀಢೇ ಸಕ್ಕೋ, ಈ ಸಾಣಿಂದೋ ವಿ ಉತ್ತರಾ ಪೀಢೇ ।
ಬಇಸಿಯ ಅಭಿಸೇಯಾಇಂ, ಕುವ್ವಂತಿ ಮಹಾವಿಸೋಹೀಏ ॥ (ತಿಲೋಯಪಣ್ಣತ್ತೀ, ೪-೧೮೫೩)

ಅರ್ಥ: ಸೌಧರ್ಮೇಂದ್ರನು ದಕ್ಷಿಣ ಪೀಠದ ಮೇಲೆ ಹಾಗೂ ಈಶಾನೇಂದ್ರನು ಉತ್ತರ ಪೀಠದ ಮೇಲೆ ಕುಳಿತುಕೊಂಡು ಅತ್ಯಂತ ವಿಶುದ್ಧಿಯಿಂದ ಅಭಿಷೇಕ ಮಾಡುತ್ತಾರೆ.

ತಾತ್ಪರ್ಯ: ಪಾಂಡುಕವನದ **ಈಶಾನ್ಯ** ದಿಕ್ಕಿನಲ್ಲಿರುವ **ಪಾಂಡುಕಶಿಲೆಯು** ಮೇಲೆ **ಭರತ ಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರ ಕುಮಾರರಿಗೆ** ಜನ್ಮಾಭಿಷೇಕ ಮಾಡುತ್ತಾರೆ.

ಪಾಂಡುಕಂಬಳ ಶಿಲೆಯ ವರ್ಣನೆ–

ಪಂಡೂಕಂಬಲ ಣಾಮಾ ರಜದಮಈ ಸಿಹಿ ದಿಸಾ ಮುಹಮ್ಮಿ ಸಿಲಾ ।
ಉತ್ತರ-ದಕ್ಖಿಣ ದೀಹಾ ಪುವ್ವಾವರ ಭಾಯ ವಿತ್ಥಿಣ್ಣಾ ॥ (ತಿಲೋಯಪಣ್ಣತ್ತೀ, ೪-೧೮೫೪)

ಅರ್ಥ: ಆಗ್ನೇಯ ದಿಕ್ಕಿನಲ್ಲಿ ಉತ್ತರ-ದಕ್ಷಿಣ ದೀರ್ಘ (ಉದ್ದ) ಹಾಗೂ ಪೂರ್ವ-ಪಶ್ಚಿಮ ಭಾಗದಲ್ಲಿ ವಿಸ್ತೀರ್ಣ (ಅಗಲ) ವಾದ ರಜತಮಯಿ ಪಾಂಡುಕಂಬಲಾ ಎಂಬ ಹೆಸರಿನ ಶಿಲೆಯಿದೆ.

ಉಚ್ಛೇಹ ವಾಸ ಪಹುದೀ, ಪಂಡುಸಿಲಾಏ ಜಹಾ ತಹಾ ತೀಏ ।
ಅವರ ವಿದೇಹ ಜಿಣಾಣಂ, ಅಭಿಸೇಯಂ ತತ್ಥ ಕುವ್ವಂತಿ ॥ (ತಿಲೋಯಪಣ್ಣತ್ತೀ, ೪-೧೮೫೫)

ಅರ್ಥ: ಪಾಂಡುಕಶಿಲೆಯ ಎತ್ತರ ಹಾಗೂ ವಿಸ್ತಾರ ಮುಂತಾದವುಗಳಂತೆಯೇ ಆ ಪಾಂಡುಕಂಬಲಾ ಶಿಲೆಯದ್ದೂ ಇದೆ. ಈ ಶಿಲೆಯ ಮೇಲೆ ಇಂದ್ರರು ಪಶ್ಚಿಮ-ವಿದೇಹದ ತೀರ್ಥಂಕರರ ಅಭಿಷೇಕ ಮಾಡುತ್ತಾರೆ.

ತಾತ್ಪರ್ಯ: ಪಾಂಡುಕವನದ **ಆಗ್ನೇಯ** ದಿಕ್ಕಿನಲ್ಲಿರುವ **ಪಾಂಡುಕಂಬಳಶಿಲೆಯ** ಮೇಲೆ **ಪಶ್ಚಿಮ ವಿದೇಹ ಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರ ಕುಮಾರರಿಗೆ** ಜನ್ಮಾಭಿಷೇಕ ಮಾಡುತ್ತಾರೆ.

ರಕ್ತಕಂಬಳ ಶಿಲೆಯ ವರ್ಣನೆ–

ಪವಣದಿಸಾಏ ಹೋದಿ ಹು ರುಹಿರಮಈ ರತ್ತಕಂಬಲಾ ಣಾಮ ।
ಉತ್ತರ-ದಕ್ಖಿಣ ದೀಹಾ ಪುವ್ವಾವರ ಭಾಗ ವಿತ್ಥಿಣ್ಣಾ ॥ (ತಿಲೋಯಪಣ್ಣತ್ತೀ, ೪-೧೮೫೬)

ಅರ್ಥ: ವಾಯುವ್ಯ ದಿಕ್ಕಿನಲ್ಲಿ ಉತ್ತರ-ದಕ್ಷಿಣ ದೀರ್ಘ ಹಾಗೂ ಪೂರ್ವ-ಪಶ್ಚಿಮ ಭಾಗದಲ್ಲಿ ವಿಸ್ತೀರ್ಣವಾದ ರಕ್ತಕಂಬಳಾ ಎಂಬ ಹೆಸರಿನ ರುಧಿರಮಯವಾದ (ರಕ್ತಕೆಂಪುಮಯವಾದ) ಶಿಲೆಯಿದೆ.

ಪಂಡುಸಿಲಾಅ ಸಮಾಣಾ, ವಿತ್ಥಾರುಚ್ಛೇಹ ಪಹುದಿಯಾ ತೀಏ ।
ಪುವ್ವ ವಿದೇಹ ಜಿಣಾಣಂ, ಅಭಿಸೇಯಂ ತತ್ಥ ಕುವ್ವಂತಿ ॥ (ತಿಲೋಯಪಣ್ಣತ್ತೀ, ೪-೧೮೨೫)

ಅರ್ಥ: ಇದರ ವಿಸ್ತಾರ ಹಾಗೂ ಇತ್ಯಾದಿಗಳು ಪಾಂಡುಕಶಿಲೆಯ ಸಮಾನವಾಗಿವೆ. ಇಲ್ಲಿ ಇಂದ್ರರು ಪೂರ್ವ-ವಿದೇಹದಲ್ಲಿ ಜನಿಸಿದ ತೀರ್ಥಂಕರರ ಅಭಿಷೇಕ ಮಾಡುತ್ತಾರೆ.

ತಾತ್ಪರ್ಯ: ಪಾಂಡುಕವನದ **ವಾಯುವ್ಯ** ದಿಕ್ಕಿನಲ್ಲಿರುವ **ರಕ್ತಕಂಬಳಶಿಲೆಯ** ಮೇಲೆ **ಪೂರ್ವ ವಿದೇಹ ಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರ ಕುಮಾರರಿಗೆ** ಜನ್ಮಾಭಿಷೇಕ ಮಾಡುತ್ತಾರೆ.

ಅತಿರಕ್ತಕಂಬಳ ಶಿಲೆಯ ವರ್ಣನೆ_

ಣಇರಿದಿ ದಿಸಾ ವಿಭಾಗೇ ರತ್ತಸಿಲಾ ಣಾಮ ಹೋದಿ ಕಣಯಮಈ ।
ಪುವ್ವಾವರೇಸು ದೀಹಂ ವಿತ್ಥಾರೋ ದಕ್ಖಿಣುತ್ತರೇ ತೀಏ ॥ (ತಿಲೋಯಪಣ್ಣತ್ತೀ, ೪-೧೮೫೬)

ಅರ್ಥ: ನೈಋುತ್ಯ ದಿಕ್ಕಿನಲ್ಲಿ ಪೂರ್ವ-ಪಶ್ಚಿಮ ದೀರ್ಘವಾದ ಹಾಗೂ ಉತ್ತರ-ದಕ್ಷಿಣ ವಿಸ್ತೃತವಾದ ರಕ್ತಶಿಲಾ [ಅತಿರಕ್ತಕಂಬಳ] ಎಂಬ ಹೆಸರಿನ ಸ್ವರ್ಣಮಯವಾದ ಶಿಲೆಯಿದೆ.

ಪಂಡುಸಿಲಾ ಸಾರಿಚ್ಛಾ, ತೀಏ ವಿತ್ಥಾರ ಉದಯ ಪಹುದೀಓ ।
ಏರಾವದಯ ಜಿಣಾಣಂ, ಅಭಿಸೇಯಂ ತತ್ಥ ಕುವ್ವಂತಿ ॥ (ತಿಲೋಯಪಣ್ಣತ್ತೀ, ೪-೧೮೫೭)

ಅರ್ಥ: ಇದರ ವಿಸ್ತಾರ ಹಾಗೂ ಎತ್ತರ ಇತ್ಯಾದಿಗಳು ಪಾಂಡುಕಶಿಲೆಯಂತಿವೆ. ಇಲ್ಲಿ ಇಂದ್ರರು ಐರಾವತಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರರ ಅಭಿಷೇಕ ಮಾಡುತ್ತಾರೆ.

ತಾತ್ಪರ್ಯ: ಪಾಂಡುಕವನದ **ನೈಋುತ್ಯ** ದಿಕ್ಕಿನಲ್ಲಿರುವ **ಅತಿರಕ್ತಕಂಬಳಶಿಲೆಯ** ಮೇಲೆ **ಐರಾವತ ಕ್ಷೇತ್ರದಲ್ಲಿ ಜನಿಸಿದ ತೀರ್ಥಂಕರ ಕುಮಾರರಿಗೆ** ಜನ್ಮಾಭಿಷೇಕ ಮಾಡುತ್ತಾರೆ.

ಮುಂದಿನ ಏಳನೆಯ ಆಶ್ವಾಸದಲ್ಲಿ ವಿವರ್ಣಿತವಾಗಿರುವ, ಸೌಧಮೇಂದ್ರ-ಈಶಾನೇಂದ್ರಾದಿ ದೇವತೆಗಳು ಜಿನಶಿಶುವಿಗೆ ಜನ್ಮಾಭಿಷೇಕ ಕಲ್ಯಾಣವನ್ನು ನಡೆಸುವ ಸ್ಥಳವಾದ ಸುಮೇರು ಪರ್ವತ, ಅದರ ಮೇಲಿರುವ ನಾಲ್ಕೂ ವನಗಳು, ಆ ನಾಲ್ಕೂ ವನಗಳಲ್ಲಿ ಪರ್ವತದ ಶಿಖರದಲ್ಲಿರುವ ಪಾಂಡುಕವನ, ಅಲ್ಲಿರುವ ದೇವತೆಗಳ ಭವನಗಳು, ಜಿನಭವನಗಳು, ಇವುಗಳ ವೈಭವ, ಜಿನಪ್ರತಿಮೆಗಳ ವರ್ಣನೆ, ಜಿನಶಿಶುವನ್ನು ಕುಳ್ಳಿರಿಸಿ ಜನ್ಮಾಭಿಷೇಕ ನಡೆಸುವ ಸಿಂಹಾಸನದಿಂದಲಂಕೃತವಾದ ಪಾಂಡುಕಶಿಲೆ, ಇತ್ಯಾದಿಗಳ ಬಗ್ಗೆ ಕವಿಯು ಪರಿಚಯಾತ್ಮಕವಾದ ಪೂರ್ವ ಪೀಠಿಕೆಯನ್ನು ಬಹು ಸುಂದರವಾಗಿ ಈ ಮೇಲಿನ ಗದ್ಯದಲ್ಲಿ ನೀಡಿದ್ದಾನೆ.

(ಈ ಎಲ್ಲಾ ವರ್ಣನೆಗಳನ್ನು ಅಂದರೆ, ಅಧೋಲೋಕ, ಮಧ್ಯಲೋಕ (ತಿರ್ಯಗ್ಲೋಕ), ಊರ್ಧ್ವಲೋಕ, ಮೇರುಪರ್ವತ, ಜಂಬೂದ್ವೀಪ, ಇವುಗಳ ಪೂರ್ಣ ವರ್ಣನೆಗಳನ್ನು ಅರ್ಥೈಸಿಕೊಳ್ಳಲು ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ತ್ರಿಲೋಕಸಾರವನ್ನೋ ಅಥವಾ ಶ್ರೀ ಯತಿವೃಷಭರ ತಿಲೋಯಪಣ್ಣತ್ತೀಯನ್ನೋ ಆಳವಾಗಿ ಅಭ್ಯಸಿಸಬೇಕಾಗಬಹುದು.)

ವಿಶೇಷ ವಿವರಣೆ (೧-೫೦): ಈ ಪದ್ಯದ ಕೊನೆಯ ಪಾದವು, ಹಿಂದಿನ ೧-೪೯ (ವ) ವಚನದ ಮುಂದುವರೆದ ಭಾಗವಾಗಿರುತ್ತದೆ. ಶಾಸ್ತ್ರಗಳಲ್ಲಿ ಮಂದರ ಪರ್ವತವನ್ನು ಸುದರ್ಶನಮೇರು, ಸುಮೇರು ಪರ್ವತವೆಂದೂ ಕರೆದಿರುತ್ತಾರೆ. ಈ ಪದ್ಯದಲ್ಲಿ ಕವಿಯು ಮಂದರ ಪರ್ವತವನ್ನು ಕೇಂದ್ರವಾಗಿರಿಸಿಕೊಂಡು ಅಧೋಲೋಕ, ಮಧ್ಯಲೋಕ ಮತ್ತು ಊರ್ಧ್ವಲೋಕದ [ಲೋಕತ್ರಯದ] ಅಸ್ತಿತ್ವವನ್ನು, ಪರಿಚಯಿಸಿದ್ದಾನೆ.

ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ: ಈ ವಾಕ್ಯದ ಅರ್ಥವು, '[ಮಂದರಪರ್ವತದ] ಕೆಳಗಿನ ಸ್ಥಳವನ್ನು ಹಿಡಿದು ಕೊಂಡು ದೃಢವಾಗಿ ನೆಲೆಸಿರುವುದು ಅಧೋಲೋಕ' ಎಂಬುದಾಗಿದೆ. ನಾವು ಈಗಾಗಲೇ ತಿಳಿದಿರುವಂತೆ, ಮಂದರಪರ್ವತವು ಮಧ್ಯಲೋಕದ (ತಿರ್ಯಕ್‌ಲೋಕದ) ನಾಭಿಸ್ಥಾನದಲ್ಲಿರುವ ಜಂಬೂದ್ವೀಪದ ನಟ್ಟನಡುವೆ ಸ್ಥಿತವಾಗಿರುವುದು. ಅಂದರೆ, ಮಂದರಪರ್ವತವು, ಸೂರ್ಯಬಿಂಬದಂತೆ ಗುಂಡಾಗಿರುವ ಜಂಬೂದ್ವೀಪದ ಮಧ್ಯದಲ್ಲಿರುವುದು. ಹಾಗಾದರೆ ಈ ವಾಕ್ಯದ ಅರ್ಥದಂತೆ ಅಧೋಲೋಕವು ಮಂದರಪರ್ವತದ ತಳಭಾಗಕ್ಕೆ ಮಾತ್ರ ಹಿಡಿದುಕೊಂಡಿರುವುದೇ? ಎಂಬ ವಿಚಾರ ಮನದಲ್ಲಿ ಮೂಡುವುದು. ಈ ವಾಕ್ಯದಲ್ಲಿ ಅಧೋಲೋಕವು ಮಂದರಪರ್ವತದ ಕೆಳಭಾಗವನ್ನು ಹಿಡಿದುಕೊಂಡು ನೆಲೆಸಿರುವುದು ಎಂದು

ಹೇಳಿರುವ ಮಾತುಗಳು ಉಪಲಕ್ಷಣ ಮಾತ್ರದ್ದು. ವಾಸ್ತವವಾಗಿ ಅಧೋಲೋಕವು ಮಂದರಪರ್ವತದ ಕೆಳಗಿನ ಸ್ಥಳವನ್ನು ಮಾತ್ರವಲ್ಲ, ಜಂಬೂದ್ವೀಪದ ಕೆಳಗಿನ ಸ್ಥಳವನ್ನು ಮಾತ್ರವಲ್ಲ, ಇಡೀ ಮಧ್ಯಲೋಕದ (ತಿರ್ಯಕ್‌ಲೋಕದ) ಕೆಳಗಿನ ಸ್ಥಳವನ್ನು ಹಿಡಿದುಕೊಂಡು ದೃಢವಾಗಿ ನೆಲೆಸಿದೆ ಎಂದು ಅರ್ಥೈಸಿಕೊಳ್ಳಬೇಕು. ಆ ಅಧೋಲೋಕವು ಮಧ್ಯಲೋಕದ ಮೇಲ್ಮೈ ಸಮತಲದಿಂದ ಹತ್ತುಸಾವಿರ ಯೋಜನ ಕೆಳಗೆ ಸ್ಥಿತವಾಗಿರುತ್ತದೆ.

ವ ॥ ಆ ಮಂದರರದ ಪೂರ್ವಾಪರ ದಿಗ್ವಿಭಾಗಂಗಳೊಳ್ ವಿದೇಹಂಗಳಿರ್ದುವಲ್ಲಿ, ೧-೫೦ (ವ)

ಪದ ವಿಭಾಗ: ವ.ಪಾ. ॥ ಆ, ಮಂದರರದ-ಪೂರ್ವಾಪರ-ದಿಗ್ವಿಭಾಗಂಗಳೊಳ್, ವಿದೇಹಂಗಳ್, ಇರ್ದುವು; ಅಲ್ಲಿ, ೧-೫೦ (ವ)

ಅನ್ವಯಾರ್ಥ: **(ಆ ಮಂದರರದ ಪೂರ್ವಾಪರ[=ಪೂರ್ವ+ಅಪರ])** ಆ ಮಂದರಪರ್ವತದ ಪೂರ್ವ-ಪಶ್ಚಿಮ **(ದಿಗ್ವಿಭಾಗಂಗಳೊಳ್=ದಿಕ್+ವಿಭಾಗಂಗಳೊಳ್)** ದಿಕ್ಕಿನ ಎರಡೂ ಕಡೆಗೆ **(ವಿದೇಹಂಗಳ್)** ವಿದೇಹಕ್ಷೇತ್ರಗಳು **(ಇರ್ದುವಲ್ಲಿ= ಇರ್ದುವು+ಅಲ್ಲಿ)** ಹರಡಿದ್ದುವು. ಅಲ್ಲಿ ಅಂದರೆ ಆ ವಿದೇಹಕ್ಷೇತ್ರಗಳಲ್ಲಿ ... ೧-೫೦ (ವ)

ಭಾವಾರ್ಥ: ಆ ಮಂದರಪರ್ವತದ ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಎರಡೂ ಕಡೆಗಳಲ್ಲಿ ವಿದೇಹಕ್ಷೇತ್ರಗಳು ಹರಡಿದ್ದುವು. ಅಲ್ಲಿ ಅಂದರೆ ಆ ವಿದೇಹಕ್ಷೇತ್ರಗಳಲ್ಲಿ ... ೧-೫೦ (ವ)

ವಿಶೇಷ ವಿವರಣೆ: ತಿರ್ಯಗ್‌ಲೋಕದ (ಮಧ್ಯಲೋಕದ) ಮಧ್ಯದಲ್ಲಿರುವ ಜಂಬೂದ್ವೀಪದ ನಾಭಿಸ್ಥಾನದಲ್ಲಿರುವ, ಮೇಲಿನ ೧-೪೯ (ವ) ಮತ್ತು ೧-೫೦ ನೆಯ ಪದ್ಯದಲ್ಲಿ ವರ್ಣಿತವಾಗಿರುವ, ಮಂದರ ಪರ್ವತದ ಪೂರ್ವ ಮತ್ತು ಪಶ್ಚಿಮದ ಎರಡೂ ಕಡೆಗಳಲ್ಲಿ ಲವಣಸಮುದ್ರದವರೆಗೆ ಹರಡಿರುವ ಭೂಪ್ರದೇಶಕ್ಕೆ '**ಮಹಾವಿದೇಹಕ್ಷೇತ್ರ**'ವೆಂದು **ಕರಣಾನುಯೋಗ**ದ ಗ್ರಂಥಗಳಲ್ಲಿ ಹೇಳಲಾಗಿದೆ. ಈ **ಮಹಾವಿದೇಹಕ್ಷೇತ್ರ**ದ ಪೂರ್ವ ಮತ್ತು ಪಶ್ಚಿಮಕ್ಕೆ ಲವಣಸಮುದ್ರವೂ, ಉತ್ತರಕ್ಕೆ ನೀಲ ಪರ್ವತವೂ, ದಕ್ಷಿಣಕ್ಕೆ ನಿಷಧ ಪರ್ವತವೂ ಇರುತ್ತವೆ. ಮಂದರ ಪರ್ವತದ ಪೂರ್ವಕ್ಕಿರುವ ವಿದೇಹಕ್ಕೆ **ಪೂರ್ವ ವಿದೇಹಕ್ಷೇತ್ರ**ವೆಂದೂ, ಪಶ್ಚಿಮಕ್ಕೆ ಇರುವ ವಿದೇಹವನ್ನು **ಪಶ್ಚಿಮ ವಿದೇಹಕ್ಷೇತ್ರ**ವೆಂದೂ ಕರೆಯುತ್ತಾರೆ. ಕವಿಯು ಇಲ್ಲಿ **ಮಹಾವಿದೇಹಕ್ಷೇತ್ರ**ದ ಉದ್ದ ಮತ್ತು ಅಗಲದ ಅಳತೆಗಳನ್ನು ತಿಳಿಸಿರುವುದಿಲ್ಲ. ಆಚಾರ್ಯ ಶ್ರೀ ಯತಿವೃಷಭರು **ತಿಲೋಯಪಣ್ಣತ್ತೀ** ಗ್ರಂಥದಲ್ಲಿ **ಮಹಾವಿದೇಹ ಕ್ಷೇತ್ರ**ದ ಭೌಗೋಳಿಕ ನೆಲೆಯನ್ನು ಮತ್ತು ಅದರ ಉದ್ದಗಲಗಳನ್ನು ಹೀಗೆ ವರ್ಣಿಸಿದ್ದಾರೆ:

ಣಿಸಹಸ್ಸುತ್ತರ ಭಾಗೇ ದಖ್ಖಿಣ ಭಾಗಮ್ಮಿ ಣೀಲವಂತಸ್ಸ ।
ವರಿಸೋ ಮಹಾವಿದೇಹೋ ಮಂದರ ಸೇಲೇಣ ಪವಿಹತ್ತೂ ॥ತಿಲೋಯಪಣ್ಣತ್ತೀ, ೪-೧೭೯೭॥

ಅರ್ಥ: ನಿಷದ ಪರ್ವತದ ಉತ್ತರಭಾಗದಲ್ಲಿ ಹಾಗೂ ನೀಲ ಪರ್ವತದ ದಕ್ಷಿಣ ಭಾಗದಲ್ಲಿ ಮಂದರ ಮೇರುವಿನಿಂದ ವಿಭಕ್ತವಾದ ಮಹಾವಿದೇಹ ಕ್ಷೇತ್ರವಿದೆ.

ತೆತ್ತೀಸ ಸಹಸ್ಸಾಣಂ ಛ ಸಯಾ ಚಉಸೀದಿಅ ಯ ಚಉ ಅಂಸಾ ।
ತೋ ಮಹಾವಿದೇಹ ರುಂದಂ ಜೋಯಣ ಲಕ್ಖಂ ಮಜ್ಝಗದ ಜೀವಾ ॥ತಿ.ಪ. ೪-೧೭೯೮॥

ಅರ್ಥ: ಆ ಮಹಾವಿದೇಹ ಕ್ಷೇತ್ರದ ವಿಸ್ತಾರವು [ಅಗಲ] ಮೂವತ್ತೂಮೂರು ಸಾವಿರ ಆರುನೂರಾ ಎಂಬತ್ನಾಲ್ಕು (೩೩೬೮೪) ಯೋಜನ ಮತ್ತು ನಾಲ್ಕುಭಾಗ ಪ್ರಮಾಣ ಮತ್ತು ಮಧ್ಯಗತ ಜೀವಾ [ಜಂಬೂದ್ವೀಪದ ವ್ಯಾಸ/ಉದ್ದ] ಒಂದು ಲಕ್ಷ (೧೦೦೦೦೦) ಯೋಜನವಿದೆ.

ಮಹಾವಿದೇಹಕ್ಷೇತ್ರದಲ್ಲಿ ಸ್ಥಿತವಾಗಿರುವ ಪರ್ವತ, ನದಿ, ಭೋಗಭೂಮಿ, ಕರ್ಮಭೂಮಿ ಇವುಗಳ ಬಗ್ಗೆ ತಿಳಿಯುವ ಸಂದರ್ಭದಲ್ಲಿ, ಇದರ ಉದ್ದಳತೆಗಳ ಈ ಅಂಕಿಅಂಶಗಳು ನೆರವಿಗೆ ಬರುತ್ತವೆ. ಆದುದರಿಂದ ಈ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಮತ್ತೇಭ **ಪದನಂ ಕಾಣಿಸಿಕೊಳ್ವುವಲ್ಲಿ ಮಟಿಗಳ್ ಷಡ್ಭಾಗಮಂ ಕೊಂಡು ತ**
ವಿಕ್ರೀಡಿತ **ಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ಶ್ರೀಜೈನಧರ್ಮಂ ಪೊದ**
ಱೆಪ್ಪೊದವುತ್ತಿರ್ಪುದು ಮತ್ತಿನನ್ಯಸಮಯಕ್ಕುತ್ಪತ್ತಿಯಿಲ್ಲೊಂದಱೊಳ್
ಪದಿನಾಱಾಗಿ ನಿರಂತರಂ ಸೊಗಯಿಕುಂ ಮೂವತ್ತೆರಟ್ನಾಡುಗಳ್ ॥ ೧-೫೧

ಪದ ವಿಭಾಗ: ಪದನಂ-ಕಾಣಿಸಿಕೊಳ್ವುವು, ಅಲ್ಲಿ, ಮಟಿಗಳ್; ಷಡ್ಭಾಗಮಂ, ಕೊಂಡು,

ತಪ್ಪದೆ, ಭೂಪರ್, ಪ್ರತಿಪಾಳಿಪರ್, ಪ್ರಜೆಗಳಂ; ಶ್ರೀಜೈನಧರ್ಮಂ, ಪೊದಟ್ದು,
ಒದವುತ್ತಿರ್ಪುದು; ಮತ್ತಿನನ್ಯ-ಸಮಯಕ್ಕುತ್ಪತ್ತಿಯಿಲ್ಲ; ಒಂದಱೊಳ್,
ಪದಿನಾಱಾಗಿ, ನಿರಂತರಂ, ಸೊಗಯಿಕುಂ, ಮೂವತ್ತೆರಟ್, ನಾಡುಗಳ್ ॥ ೧-೫೧

ಅನ್ವಯಾರ್ಥ: **(ಅಲ್ಲಿ)** ಆ ವಿದೇಹ ಕ್ಷೇತ್ರಗಳಲ್ಲಿ **(ಮಟೆಗಳ್)** ಮಳೆಗಳು **(ಪದನಂ ಕಾಣಿಸಿಕೊಳ್ವುವು)** ಕಾಲಕಾಲಕ್ಕೆ ಹದವಾಗಿ ಕಾಣಿಸಿಕೊಳ್ಳುವುವು [ಉಂಟಾಗುವುವು]; **(ಭೂಪರ್)** ರಾಜರುಗಳು, **(ಷಡ್ಭಾಗಮಂ=ಷಡ್+ಭಾಗಮಂ)** [ಉತ್ಪತ್ತಿಯ] ಆರನೆಯ ಒಂದು ಭಾಗವನ್ನು **(ಕೊಂಡು)** [ಪ್ರಜೆಗಳಿಂದ ತೆರಿಗೆಯಾಗಿ] ಪಡೆದು, **(ತಪ್ಪದೆ)** ಕರ್ತವ್ಯ ಲೋಪವಿಲ್ಲದಂತೆ [ಧರ್ಮದಿಂದ] **(ಪ್ರತಿಪಾಳಿಪರ್ ಪ್ರಜೆಗಳಂ)** ಪ್ರಜೆಗಳನ್ನು ರಕ್ಷಿಸುವರು. **(ಶ್ರೀ ಜೈನಧರ್ಮಂ)** ಶ್ರೇಷ್ಠವಾದ ಜೈನಧರ್ಮವು **(ಪೊದಟ್ದೊದವುತ್ತಿರ್ಪುದು=ಪೊದಟ್ದು+ಒದವುತ್ತಿರ್ಪುದು)** ವ್ಯಾಪಕವಾಗಿ ವರ್ಧಿಸುತ್ತಿರುವುದು; **(ಮತ್ತಿನನ್ಯ=ಮತ್ತಿನ+ಅನ್ಯ)** ಮತ್ತಿತರೆ **(ಸಮಯಕ್ಕುತ್ಪತ್ತಿಯಿಲ್ಲ=ಸಮಯಕ್ಕೆ+ಉತ್ಪತ್ತಿಯಿಲ್ಲ)** ಧರ್ಮಗಳು ಹುಟ್ಟುವ ಸಂದರ್ಭವಿಲ್ಲ; **(ಒಂದಱೊಳ್)** ಒಂದೊಂದರಲ್ಲಿಯೂ [ಪೂರ್ವ ಮತ್ತು ಪಶ್ಚಿಮ ವಿದೇಹಕ್ಷೇತ್ರದ ಒಂದೊಂದು ಕಡೆಯೂ] **(ಪದಿನಾಱಾಗಿ)** ಹದಿನಾರರಂತೆ **(ಮೂವತ್ತೆರಟ್ನಾಡುಗಳ್=ಮೂವತ್ತೆರಟ್+ನಾಡುಗಳ್)** [ಒಟ್ಟು] ಮೂವತ್ತೆರಡು ನಾಡುಗಳು **(ನಿರಂತರಂ)** ಸದಾಕಾಲವೂ **(ಸೊಗಯಿಕುಂ)** ಸೊಗಯಿಸುತ್ತಿರುವುವು ॥ ೧-೫೧

ಭಾವಾರ್ಥ: ವಿದೇಹಕ್ಷೇತ್ರಗಳಲ್ಲಿ ಮಳೆಗಳು ಕಾಲಕಾಲಕ್ಕೆ ಹದವಾಗಿ ಬೀಳುವುವು. ರಾಜರುಗಳು, ಉತ್ಪತ್ತಿಯ ಆರನೆಯ ಒಂದು ಭಾಗವನ್ನು ಪ್ರಜೆಗಳಿಂದ ತೆರಿಗೆಯಾಗಿ ಪಡೆದು, ಕರ್ತವ್ಯ ಲೋಪವಿಲ್ಲದಂತೆ ಧರ್ಮದಿಂದ ಪ್ರಜೆಗಳನ್ನು ರಕ್ಷಿಸುವರು. ಶ್ರೇಷ್ಠವಾದ ಜೈನಧರ್ಮವು ವ್ಯಾಪಕವಾಗಿ ವರ್ಧಿಸುತ್ತಿರುವುದರಿಂದ ಇತರೆ ಧರ್ಮಗಳು ಹುಟ್ಟುವ ಸಂದರ್ಭವಿಲ್ಲ. ಪೂರ್ವ ಮತ್ತು ಪಶ್ಚಿಮ ವಿದೇಹಕ್ಷೇತ್ರದ ಒಂದೊಂದು ಕಡೆಯಲ್ಲಿಯೂ ಹದಿನಾರರಂತೆ ಒಟ್ಟು ಮೂವತ್ತೆರಡು ನಾಡುಗಳು ಶೋಭಿಸುತ್ತಿರುವುವು. ೧-೫೧

ವಿಶೇಷ ವಿವರಣೆ: ಶ್ರೀಜೈನಧರ್ಮಂ ಪೊದಟ್ದೊದವುತ್ತಿರ್ಪುದು ಮತ್ತಿನನ್ಯಸಮಯಕ್ಕುತ್ಪತ್ತಿಯಿಲ್ಲ: ವಿದೇಹ ಕ್ಷೇತ್ರದ ಎರಡೂ ಕಡೆಗಳಲ್ಲಿ ಸುಭಿಕ್ಷತೆಯಿದ್ದು, ರಾಜ್ಯಾಡಳಿತವು ನ್ಯಾಯ, ನೀತಿ ಧರ್ಮಪರವಾಗಿದ್ದು, ಪ್ರಕೃತಿ ಪ್ರಕೋಪಗಳಿಲ್ಲದೆ, ಅಂದರೆ ಯಾವಾಗಲೂ ಕಾಲ-ಋತು ಪರಿವರ್ತನೆಯು ನಿಯಮಿತವಾಗಿ ಆಗುತ್ತಿದ್ದುದರಿಂದ ಈತಿಬಾಧೆಗಳಿಲ್ಲದೆ (ಅತಿವೃಷ್ಟಿ, ಅನಾವೃಷ್ಟಿ, ಇಲಿ-ಹೆಗ್ಗಣಗಳ ಕಾಟ, ಮಿಡತೆಗಳ ಹಾವಳಿ, ಗಿಳಿಗಳ ಹಾವಳಿ, ರಾಜರ ದಂಡಯಾತ್ರೆ ಎಂಬ ಆರು ಈತಿಬಾಧೆಗಳು ಪ್ರಸಿದ್ಧವಾದವು), ಜನತೆಯಲ್ಲಿ ಸಾತ್ವಿಕ ಸ್ವಭಾವವಿದ್ದು, ಅವರು ಸುಖ ಸಂತೋಷ ಹಾಗೂ ಸಂಮೃದ್ಧಿಯ ಜೀವನವನ್ನು ನಡೆಸುತ್ತಿದ್ದರು. ಅಂತಹ ವಿದೇಹ ಕ್ಷೇತ್ರದಲ್ಲಿದ್ದ ದೇಶಗಳಲ್ಲಿನ ಜನರಿಗೆ ಸ್ವಧರ್ಮದಲ್ಲಿಯೇ ಅಂದರೆ ದೇಶದಲ್ಲಿ ಪ್ರಸ್ತುತ ಇರುವ ಜೈನ ಧರ್ಮದಲ್ಲಿಯೇ ಶ್ರದ್ಧೆ ಹೆಚ್ಚಾಗಿ, ಅವರಿಗೆ ಪರ್ಯಾಯ ಮತದ ಬಗ್ಗೆ ಯೋಚಿಸುವ ಅಗತ್ಯ ತೋರಿರುವುದಿಲ್ಲ. ಆದುದರಿಂದ ವಿದೇಹ ಕ್ಷೇತ್ರದಲ್ಲಿ ಪರ್ಯಾಯ ಧರ್ಮವು ಸ್ಥಾಪನೆಯಾಗುವ ಸಂದರ್ಭವೇ ಇರಲಿಲ್ಲವೆಂದು ತಿಳಿಯಬೇಕು. ಇದಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ನ ಯತ್ರ ಪರಲಿಂಗಾನಾಮಸ್ತಿ ಜಾತು ಚಿದುದ್ಭವಃ ।
ಸದೋದಯಾಜ್ಜಿನಾರ್ಕಸ್ಯ ಖದ್ಯೋತಾನಾಮಿವಾಹನಿ ॥ಪೂ.ಪು., ೪-೫೮॥

ಅರ್ಥ: ಹಗಲಿನಲ್ಲಿ ಸೂರ್ಯನ ಎದುರಿಗೆ ಹೇಗೆ ಮಿಣುಕುಹುಳುಗಳ ಆವಿರ್ಭಾವವಿಲ್ಲವೋ ಹಾಗೆ ಆ ದೇಶದಲ್ಲಿ ಜಿನೇಶ್ವರನ ಉದಯ (ಅಸ್ತಿತ್ವ) ವು ಯಾವಾಗಲೂ ಇರುವುದರಿಂದ ಎಂದೂ ಮಿಥ್ಯಾದೃಷ್ಟಿಗಳ ಆವಿರ್ಭಾವವಿಲ್ಲವು.

ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ: ಈ ವಾಕ್ಯಕ್ಕೆ ಸಂವಾದಿಯಾದ **ಪೂರ್ವಪುರಾಣ**ದ ಶ್ಲೋಕವು ಹೀಗಿದೆ:

ನಸ್ಪೃಶಂತಿ ಕರಾಬಾಧಾ ಯತ್ರ ರಾಜನ್ವತೀಃ ಪ್ರಜಾಃ ।
ಸದಾ ಸುಕಾಲಸಾನ್ನಿಧ್ಯಾನ್ನೇತಯೋ ನಾಪ್ಯನೀತಯಃ ॥ಪೂ.ಪು., ೪-೮೦॥

ಅರ್ಥ: ಆ ದೇಶದ ರಾಜನು ನೀತಿಪರಾಯಣನಾಗಿದ್ದುದರಿಂದ ಅಲ್ಲಿಯ ಪ್ರಜೆಗಳಿಗೆ ಕಂದಾಯದ ಬಾಧೆಯಿರಲಿಲ್ಲ. ಯಾವಾಗಲೂ ಕಾಲ-ಋತುಪರಿವರ್ತನೆಯು ಸರಿಯಾಗಿ ಆಗುತ್ತಿದ್ದುದರಿಂದ ಅತಿವೃಷ್ಟಿ ಮುಂತಾದ ಈತಿಬಾಧೆಗಳಾಗಲಿ, ಅನೀತಿ-ಅನ್ಯಾಯಗಳಾಗಲಿ ನಡೆಯುತ್ತಿರಲಿಲ್ಲ.

ಈ ವಿಷಯಕ್ಕೆ ಸಂಬಂದಿಸಿದಂತೆ ಹೆಚ್ಚಿನ ವಿವರಗಳಿಗೆ ಈ ಆಶ್ವಾಸದ ಕೊನೆಯಲ್ಲಿ ನೀಡಿರುವ **ಇತರೆ ಕಾವ್ಯ/ಶಾಸ್ತ್ರಗ್ರಂಥ/ ಶಾಸನಗಳ ಉಲ್ಲೇಖಗಳು** ವಿಭಾಗವನ್ನು ನೋಡಿರಿ.

ಚಂಪಕಮಾಲೆ **ತೊಲಗದು ಪುಬ್ಬಕೋಟಿಪರಿಸಂಖ್ಯೆವರಂ ಪರಮಾಯು ಕಳ್ಳರಾ**
ಯಿಲಮಱಿಯೇಱು ಮಾರಿ ಪಸವಿಟ್ಟಿ ಬಱಂ ಪೆಱವುಂ
ಕುಲಿತೆಗಳಿಲ್ಲ ಧಾತ್ರಿ ಪುಸಿವೋಗದು ಪಂಚಧನುಶ್ಶತಂ ಪವ
ಣ್ಣೆಲೆ ನರರ್ಗೆಂದೊಡಿನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ ॥ ೧-೫೨

ಪದ ವಿಭಾಗ: ತೊಲಗದು-ಪುಬ್ಬ-ಕೋಟಿ-ಪರಿಸಂಖ್ಯೆ-ವರಂ-ಪರಮಾಯು; ಕಳ್ಳರಾಯಿಲಮ್,
ಅಱಿಯೇಱು, ಮಾರಿ, ಪಸವಿಟ್ಟಿ, ಬಱಂ, ಪೆಱವುಂ, ಭಯಂಗಳ್,
ಆಕುಲಿತೆಗಳಿಲ್ಲ; ಧಾತ್ರಿ-ಪುಸಿವೋಗದು; ಪಂಚ-ಧನುಶ್ಶತಂ-ಪವಣ್ಣೆಲೆ-
ನರರ್ಗೆ; ಎಂದೊಡೆ, ಇನ್ನಿಮಿರೆ, ಬಣ್ಣಿಸಲ್, ಆನ್, ಅಱಿಯೆಂ, ವಿದೇಹಮಂ ॥ ೧-೫೨

ಅನ್ವಯಾರ್ಥ: (ಪುಬ್ಬಕೋಟಿ ಪರಿಸಂಖ್ಯೆ ವರಂ) ಪೂರ್ವ ಕೋಟಿ [ಎಪ್ಪತ್ತುಲಕ್ಷ ಐವತ್ತಾರುಸಾವಿರಕೋಟಿ ವರ್ಷಗಳಷ್ಟು] ಮೊತ್ತದ [ಅವಧಿಯ] ವರೆಗಿನ **(ಪರಮಾಯು)** [ಜನರ] ದೀರ್ಘಜೀವಿತಾವಧಿಯು [ದೀರ್ಘಾಯುಷ್ಯವು] **(ತೊಲಗದು)** ಕಡಿಮೆಯಾಗುವುದಿಲ್ಲ; **(ಕಳ್ಳರಾಯಿಲಮಱಿಯೇಱುಮಾರಿಪಸವಿಟ್ಟಿಬಱಂ=ಕಳ್ಳರ+ಆಯಿಲಮ್+ಅಱಿ+ಏಱು-ಮಾರಿ-ಪಸವು+ ಇಟ್ಟಿ-ಬಱಂ)** ಕಳ್ಳರ, ರೋಗದ, ವ್ರಣ ಅಥವಾ ಹುಣ್ಣಿನಿಂದ ರೂಪುಗೆಡುವುದು [ಸಿಡುಬು?], ಸಾಂಕ್ರಾಮಿಕ ರೋಗ, ಅತ್ಯಾಸೆ [ಹಸಿವು?], ಸುಲಿಗೆ, ಕ್ಷಾಮ [ಮತ್ತು] **(ಪೆಱವುಂ)** ಇತರೆ ಯಾವುದೇ ರೀತಿಯ **(ಭಯಂಗಳಾಕುಲಿತೆಗಳಿಲ್ಲ= ಭಯಂಗಳ್+ಆಕುಲಿತೆಗಳ್+ಇಲ್ಲ)** ಭಯಗಳಾಗಲೀ, ವ್ಯಥೆಗಳಾಗಲೀ ಇರುವುದಿಲ್ಲ; **(ಧಾತ್ರಿ ಪುಸಿವೋಗದು)** ಭೂಮಿ ಬರಡಾಗದು; **(ನರರ್ಗೆ)** [ಅಲ್ಲಿನ] ಮನುಷ್ಯರಿಗೆ **(ಪಂಚಧನುಶ್ಶತಂ ಪವಣ್ಣೆಲೆ=ಪವಣ್+ಎಲೆ)** ಐದುನೂರು ಬಿಲ್ಲಿನಷ್ಟು ಎತ್ತರದ [ದೇಹ] ಪ್ರಮಾಣವು **(ಎಂದೊಡೆ)** ಎಂದು ಹೇಳಿದಮೇಲೆ **(ವಿದೇಹಮಂ)** ವಿದೇಹ ಕ್ಷೇತ್ರವನ್ನು **(ಇನ್ನಿಮಿರೆ= ಇನ್+ನಿಮಿರೆ)** ಇನ್ನೂ ಹೆಚ್ಚಿಗೆ **(ಬಣ್ಣಿಸಲ್)** ವರ್ಣಿಸಲು **(ಆನ್)** ನಾನು **(ಅಱಿಯೆಂ)** ತಿಳಿಯೆನು ॥ ೧-೫೨

ಈ ವೃತ್ತಪದ್ಯದಲ್ಲಿ ಕವಿಯು ವಿದೇಹಕ್ಷೇತ್ರದ ನಿತ್ಯದ ಜನಜೀವನವನ್ನು, ಅಲ್ಲಿನ ಜನರ ಆಯುಷ್ಯ, ಆರೋಗ್ಯ, ಎತ್ತರ ಇತ್ಯಾದಿಗಳನ್ನು ವರ್ಣಿಸಿರುವನು.

ಭಾವಾರ್ಥ: ಅಲ್ಲಿನ ಜನರು ಪೂರ್ವಕೋಟಿಯಷ್ಟು ದೀರ್ಘಾಯುಷ್ಯವಂತರು. ಅಲ್ಲಿನ ಜನರಿಗೆ ಕಳ್ಳಕಾಕರ ಭಯವಾಗಲೀ, ರೋಗರುಜಿನಗಳ ವ್ಯಾಕುಲತೆಯಾಗಲೀ, ಅತ್ಯಾಸೆ, ಸುಲಿಗೆ, ಕ್ಷಾಮ ಇತ್ಯಾದಿ ಪಿಡುಗುಗಳಾಗಲೀ ಇರಲಿಲ್ಲ. ಅಲ್ಲಿನ ಭೂಮಿ ಬರಡಾಗುವುದಿಲ್ಲ. ಅಲ್ಲಿನ ಜನರ ಎತ್ತರ ಐದುನೂರು ಬಿಲ್ಲಿನ ಪ್ರಮಾಣ. ಎಂದಮೇಲೆ ವಿದೇಹಕ್ಷೇತ್ರವನ್ನು ವರ್ಣಿಸಲು ನನಗೆ ತಿಳಿಯದು ಎಂದು ಕವಿಯೇ ಆಶ್ಚರ್ಯಗೊಂಡು ಹೇಳಿದ್ದಾನೆ. ೧-೫೨

ವಿಶೇಷ ವಿವರಣೆ: ಪುಬ್ಬಕೋಟಿ ಪರಿಸಂಖ್ಯೆ: ಜೈನದಾರ್ಶನಿಕರು ಕಾಲವನ್ನು ಕರಾರುವಾಕ್ಕಾಗಿ ಅಳೆಯುವ ಕಾಲಮಾಪನ ಪದ್ಧತಿಯನ್ನು ಆವಿಷ್ಕರಿಸಿಕೊಂಡಿದ್ದರು. **ಮುಖ್ಯಕಾಲ**ದ ನಿರ್ವರ್ತಿತ ('ವರ್ತನಾ' ಉಪಯೋಗವನ್ನು ಆಗಮಾಡಿಸುವ ಅಥವಾ ನೆರವೇರಿಸುವ) ಕ್ರಿಯಾರೂಪವೇ **'ವ್ಯವಹಾರ ಕಾಲ'**. ಅಂದರೆ **ಮುಖ್ಯಕಾಲ**ವು **'ತತ್ತ್ವರೂಪ'**ದ್ದಾಗಿದ್ದರೆ, ವ್ಯವಹಾರ ಕಾಲವು ಅದರ **'ಕ್ರಿಯಾರೂಪ'**ವಾಗಿರುತ್ತದೆ. ಆಚಾರ್ಯ ಶ್ರೀ ಯತಿವೃಷಭರು **ತಿಲೋಯಪಣ್ಣತ್ತೀ**ಯಲ್ಲಿ ಗಾಹೆ ಸಂ. ೪-೨೮೦ ರಿಂದ ೪-೨೮೬ ರವರೆಗಿನ ಗಾಹೆಗಳಲ್ಲಿ ಕಾಲದ ಬಗ್ಗೆ ವಿವರಿಸಿರುವರು. **ವ್ಯವಹಾರಕಾಲ**ದ ಎಣಿಕೆಯ ಕೋಷ್ಠಕಕ್ಕೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ಎರಡು (೨)-ಕಾಲದ ಎರಡು ಭೇದಗಳು'** ಇದನ್ನು ನೋಡಿರಿ.

ಕಳ್ಳರಾಯಿಲಮಱಿಯೇಱು: ಈ ಪದದ ವಿವರಗಳಿಗೆ ಆಶ್ವಾಸದ ಕೊನೆಯಲ್ಲಿ ನೀಡಿರುವ **ಪಾಠಭೇದ ವಿಚಾರ** ಇದರಡಿಯಲ್ಲಿ ನೀಡಿರುವ ಟಿಪ್ಪಣಿಯನ್ನು ನೋಡಿರಿ.

ವಿದೇಹಕ್ಷೇತ್ರದ ಜನರ ದೇಹಲಕ್ಷಣ, ಜನಜೀವನ ಇವುಗಳನ್ನು **ಪೂರ್ವಪುರಾಣ**ದಲ್ಲಿ ಹೀಗೆ ವರ್ಣಿಸಿದೆ:

ನಿರ್ವ್ಯಾಯಾಮಾ ನಿರಾತಂಕಾ ನಿರ್ನೀಹಾರಾ ನಿರಾಧಯಃ ।
ನಿಃಸ್ವೇದಾಸ್ತೇ ನಿರಾಬಾಧಾ ಜೀವಂತಿ ಪುರುಷಾಯುಷಮ್ ॥ಪೂ.ಪು., ೩-೩೧॥

ಅರ್ಥ: ಅವರು ಶ್ರಮವನ್ನುಂಟುಮಾಡುವ ಗಮನಾದಿವ್ಯಾಪಾರರಹಿತರೂ, ರೋಗಬಾಧೆಯಿಲ್ಲದವರೂ, ಮಲಮೂತ್ರಾದಿ ಬಾಧೆಯಿಲ್ಲದವರೂ, ಮನೋವ್ಯಥೆಯಿಲ್ಲದಿರುವವರೂ, ಬೆವರು ಇಲ್ಲದವರೂ, ಬೇರೆಯವರ ಬಾಧೆಯಿಲ್ಲದವರೂ ಆಗಿ, ಅಕಾಲಮರಣವಿಲ್ಲದೆ ತಮ್ಮ ಆಯುಷ್ಯಪೂರ್ತಿಯಾಗುವವರೆಗೂ ಬದುಕುತ್ತಾರೆ.

ಕಂದ **ಉತ್ತಮತಪಂಗಳಿಂದ**
ತ್ಯುತ್ತಮದೇಹರ್ ವಿದೇಹರಪ್ಪುದಱಿಂ ಮೆ
ಯ್ವೆತ್ತನ್ವರ್ಥತೆಯಂ ತಾ
ಳ್ದಿತ್ತು ವಿದೇಹಂ ವಿದೇಹಮೆಂಬೀಪೆಸರಂ ॥ **೧-೫೩**

ಪದ ವಿಭಾಗ: ಉತ್ತಮ-ತಪಂಗಳಿಂದ,
ಅತ್ಯುತ್ತಮದೇಹರ್, ವಿದೇಹರಪ್ಪುದಱಿಂ,
ಮೆಯ್ವೆತ್ತ, ಅನ್ವರ್ಥತೆಯಂ, ತಾಳ್ದಿತ್ತು,
ವಿದೇಹಂ, ವಿದೇಹಂ, ಎಂಬ, ಈ, ಪೆಸರಂ ॥ ೧-೫೩

ಅನ್ವಯಾರ್ಥ: **(ಉತ್ತಮ ತಪಂಗಳಿಂದ)** ಶ್ರೇಷ್ಠವಾದ ತಪಸ್ಸುಗಳಿಂದ **(ಅತ್ಯುತ್ತಮ ದೇಹರ್)** ಅತ್ಯುತ್ಕೃಷ್ಟ ದೇಹಧಾರಿಗಳಾದ [ಮುನಿಗಳು], **(ವಿದೇಹರಪ್ಪುದಱಿಂ=ವಿದೇಹರ್+ಅಪ್ಪುದಱಿಂ)** ದೇಹರಹಿತ ಸ್ಥಿತಿಯನ್ನು ಅಂದರೆ, ಮೋಕ್ಷಪದವನ್ನು ಹೊಂದುವುದರಿಂದ, **(ವಿದೇಹಂ)** ವಿದೇಹ [ಕ್ಷೇತ್ರವು] **(ಮೆಯ್ವೆತ್ತ)** [ಆ ಹೆಸರೇ] ಸಾಕಾರಗೊಂಡಂತೆ **(ಅನ್ವರ್ಥತೆಯಂ)** ಅನ್ವರ್ಥವಾಗಿ **(ವಿದೇಹಮೆಂಬೀಪೆಸರಂ=ವಿದೇಹಂ+ಎಂಬ+ಈ+ಪೆಸರಂ)** ವಿದೇಹವೆಂಬ ಈ ಹೆಸರನ್ನು **(ತಾಳ್ದಿತ್ತು)** ಪಡೆದುಕೊಂಡಿತ್ತು ॥ ೧-೫೩

ಈ ಪದ್ಯದಲ್ಲಿ ವಿದೇಹಕ್ಷೇತ್ರಕ್ಕೆ ಆ ಹೆಸರು ಬಂದುದರ ಕಾರಣವನ್ನು ತಿಳಿಸಿರುವನು.

ಭಾವಾರ್ಥ: ಶ್ರೇಷ್ಠವಾದ ತಪಸ್ಸುಗಳಿಂದ, ಅತ್ಯುತ್ಕೃಷ್ಟ ದೇಹಧಾರಿಗಳಾದ ಮುನಿಗಳು, ದೇಹವನ್ನು ತ್ಯಜಿಸಿ ವಿದೇಹರಾಗುವುದರಿಂದ ಅಂದರೆ ಮೋಕ್ಷಪದವನ್ನು ಹೊಂದುವುದರಿಂದ, ವಿದೇಹ ಎಂಬ ಹೆಸರೇ ಸಾಕಾರಗೊಂಡಂತೆ ಅನ್ವರ್ಥವಾಗಿ ವಿದೇಹಕ್ಷೇತ್ರವೆಂಬ ಈ ಹೆಸರನ್ನು ಪಡೆದುಕೊಂಡಿತ್ತು. ೧-೫೩

ವಿಶೇಷ ವಿವರಣೆ: ಉತ್ತಮತಪಂಗಳಿಂದತ್ಯುತ್ತಮದೇಹರ್ ವಿದೇಹರಪ್ಪುದಱಿಂ: ವಿದೇಹ ಕ್ಷೇತ್ರದಲ್ಲಿ '**ಅತ್ಯುತ್ತಮದೇಹರ್**' ಅಂದರೆ, ಸಂಹನನ ಷಟ್ಕಗಳಲ್ಲಿ ಮೊದಲನೆಯದಾದ **ವಜ್ರವೃಷಭ ನಾರಾಚ ಸಂಹನನ ದೇಹಧಾರಿ**ಗಳಾದ ಮತ್ತು **ಉತ್ತಮತಪಂಗಳಿಂದ** ಅಂದರೆ ಆರು ಬಾಹ್ಯತಪ ಮತ್ತು ಆರು ಅಭ್ಯಂತರತಪಗಳನ್ನು ಅತಿಚಾರವಿಲ್ಲದೆ ಆಚರಿಸುವ '**ಮುನಿಗಳು**' ಸದಾಕಾಲವೂ ಕರ್ಮಮಲವನ್ನು ಹೋಗಲಾಡಿಸಿ '**ವಿದೇಹರಪ್ಪುದಱಿಂ**' ಎಂದರೆ 'ದೇಹವಿಲ್ಲದ ಅವಸ್ಥೆಯನ್ನು (ಸಿದ್ಧ ಪದವಿಯನ್ನು) ಹೊಂದುವುದರಿಂದ' ಎಂದರೆ ಹುಟ್ಟು-ಸಾವುಗಳೆಂಬ ಸಂಸಾರ ಚಕ್ರದಿಂದ ಬಿಡುಗಡೆ ಹೊಂದಿ, ಮೋಕ್ಷಪದವನ್ನು ಪ್ರಾಪ್ತಿಮಾಡಿಕೊಳ್ಳುವುದರಿಂದ, '**ವಿದೇಹಕ್ಷೇತ್ರ**'ವು ಅತಿಶಯದಿಂದ '**ವಿದೇಹ**'ವೆಂಬ ಈ ಹೆಸರನ್ನು ಅನ್ವರ್ಥವಾಗಿ ಪಡೆದು ಕೊಂಡಿತ್ತು ಎಂದು ವಿದೇಹಕ್ಷೇತ್ರದ ಹೆಸರಿನ ವೈಶಿಷ್ಟ್ಯವನ್ನು ಕವಿಯು ಈ ಪದ್ಯದಲ್ಲಿ ಹೇಳಿದ್ದಾನೆ. (ಈ ಪದ್ಯದಲ್ಲಿನ **ವಿದೇಹ** ಶಬ್ದಕ್ಕೆ ನೀಡಿರುವ **ದೇಹರಹಿತ** ಎಂಬ ಅರ್ಥವನ್ನೇ, ಮುಂದೆ ೧-೬೨ ನೆಯ ಪದ್ಯದ ನಾಲ್ಕನೆಯ ಪಾದದ ಕೊನೆಯ ಶಬ್ದ **ವಿದೇಹಾನಿಳಂ** (=ವಿದೇಹ+ಅನಿಳಂ=ದೇಹರಹಿತಗಾಳಿ) ಎಂಬಲ್ಲಿ ಬರುವ **ವಿದೇಹ** ಶಬ್ದಕ್ಕೂ ನೀಡಬೇಕು).

ಆದುದರಿಂದ, ತಿರ್ಯಗ್ಲೋಕದ ನಟ್ಟನಡುವೆಯಿರುವ ಜಂಬೂದ್ವೀಪದ ಮೇರುಪರ್ವತದ ಪೂರ್ವ ಮತ್ತು ಪಶ್ಚಿಮ ಎರಡೂ ಕಡೆಗಳಲ್ಲಿ ಹರಡಿರುವ ವಿದೇಹ ಕ್ಷೇತ್ರದಲ್ಲಿ ಸದಾಕಾಲವೂ ಕನಿಷ್ಠ ೨೦ ಮತ್ತು ಎರಡೂವರೆ ದ್ವೀಪದ ಪಂಚ ವಿದೇಹ ಸಂಬಂಧಿ ೧೬೦ ವಿದೇಹ ಕ್ಷೇತ್ರಗಳಲ್ಲಿ ಹಾಗೂ ಪಂಚ ಭರತ, ಪಂಚ ಐರಾವತಗಳಲ್ಲಿ ಏಕಕಾಲದಲ್ಲಿ ಗರಿಷ್ಠ ೧೭೦ ತೀರ್ಥಂಕರರು ಆಗಬಹುದು ಎಂದು **ಕರಣಾನುಯೋಗದ** ಶಾಸ್ತ್ರಗಳು ಹೇಳುತ್ತವೆ. ವಿದೇಹ ಕ್ಷೇತ್ರದಲ್ಲಿ ವರ್ತಮಾನದಲ್ಲಿ ೨೦ ತೀರ್ಥಂಕರರು ವಿರಾಜಮಾನರಾಗಿದ್ದಾರೆ. ಅವರ ಹೆಸರುಗಳು ಹೀಗಿವೆ. ಎರಡುವರೆ ದ್ವೀಪದ ಐದು ವಿದೇಹಕ್ಷೇತ್ರ ಸಂಬಂಧಿ, ಐದು ಮೇರುವಿನ ೨೦ ತೀರ್ಥಂಕರರು:

೧. ಸುದರ್ಶನಮೇರು ಸಂಬಂಧಿ-೪ ತೀರ್ಥಂಕರರು

(೧) ಸೀಮಂಧರ-ಪೂರ್ವ ವಿದೇಹದ ಸೀತಾನದಿಯ ಉತ್ತರ ತಟದಲ್ಲಿ

(೨) ಯುಗಮಂಧರ–ಪೂರ್ವ ವಿದೇಹದ ಸೀತಾನದಿಯ ದಕ್ಷಿಣ ತಟದಲ್ಲಿ
(೩) ಬಾಹು–ಪಶ್ಚಿಮ ವಿದೇಹದ ಸೀತೋದಾನದಿಯ ಉತ್ತರ ತಟದಲ್ಲಿ
(೪) ಸುಬಾಹು–ಪಶ್ಚಿಮ ವಿದೇಹದ ಸೀತೋದಾನದಿಯ ದಕ್ಷಿಣ ತಟದಲ್ಲಿ

೨. ವಿಜಯಮೇರು ಸಂಬಂಧಿ–೪ ತೀರ್ಥಂಕರರು

(೫) ಸುಜಾತ, (೬) ಸ್ವಯಂಪ್ರಭ, (೭) ವೃಷಭಾನನ, (೮) ಅನಂತವೀರ್ಯ,

೩. ಅಚಲಮೇರು ಸಂಬಂಧಿ–೪ ತೀರ್ಥಂಕರರು

(೯) ಸೂರ್ಯಪ್ರಭ, (೧೦) ವಿಶಾಲಕೀರ್ತಿ, (೧೧) ವಜ್ರಧರ, (೧೨) ಚಂದ್ರಾನನ,

೪. ಮಂದರಮೇರು ಸಂಬಂಧಿ–೪ ತೀರ್ಥಂಕರರು

(೧೩) ಭದ್ರಬಾಹು, (೧೪) ಭುಜಂಗಮ, (೧೫) ಈಶ್ವರ, (೧೬) ನೇಮಪ್ರಭ,

೫. ವಿದ್ಯುನ್ಮಾಲಿಮೇರು ಸಂಬಂಧಿ–೪ ತೀರ್ಥಂಕರರು

(೧೭) ವೀರಸೇನ, (೧೮) ಮಹಾಭದ್ರ, (೧೯) ದೇವಯಶ, (೨೦) ಅಜಿತವೀರ್ಯ.

ಆದುದರಿಂದ ವಿದೇಹ ಕ್ಷೇತ್ರದಲ್ಲಿ ಯಾವಾಗಲೂ ತೀರ್ಥಂಕರರ **ಸಮವಸರಣ** ನಡೆಯುತ್ತಲೇ ಇರುತ್ತದೆ. ಇದರಿಂದಾಗಿಯೇ ಜೈನಧರ್ಮವನ್ನು ಶಾಶ್ವತಧರ್ಮ, ವಿಶ್ವಧರ್ಮ, ವಿಶ್ವಗುರು ಎಂದು ಜೈನಶಾಸ್ತ್ರಗಳು ಪ್ರತಿಪಾದಿಸುತ್ತವೆ.

ಈ ಪದ್ಯಕ್ಕೆ ಸಂವಾದಿಯಾದ ಶ್ಲೋಕವು **ಪೂರ್ವಪುರಾಣ**ದಲ್ಲಿ ಹೀಗಿದೆ:

ಯತ್ರ ಕರ್ಮಮಲಾಪಾಯಾದ್ವಿದೇಹಾ ಮುನಯಃ ಸದಾ ।
ನಿರ್ವಾಂತೀತಿ ಗತಾ ರೂಢಿಂ ವಿದೇಹಾಖ್ಯಾರ್ಥಭಾಗಿಯಮ್ ॥ಪೂ.ಪು., ೩–೫೩॥

ಅರ್ಥ: ವಿದೇಹಕ್ಷೇತ್ರದಲ್ಲಿ ಮುನಿಗಳು ಯಾವಾಗಲೂ ಕರ್ಮಮಲವನ್ನು ಹೋಗಲಾಡಿಸಿ ದೇಹತ್ಯಾಗವನ್ನು ಮಾಡಿ ಮೋಕ್ಷವನ್ನು ಹೊಂದುತ್ತಿರುವುದರಿಂದ ಆ ಕ್ಷೇತ್ರಕ್ಕೆ ವಿದೇಹವೆಂಬ ಈ ಹೆಸರು ಸಾರ್ಥಕವಾಗಿ ರೂಢಿಯಲ್ಲಿ ಬಂದಿದೆ.

ಶ್ರೀ ನೇಮಿಚಂದ್ರ ಸಿದ್ಧಾಂತಿ ದೇವ ವಿರಚಿತ **ಬೃಹದ್ದ್ರವ್ಯಸಂಗ್ರಹ** ಗ್ರಂಥಕ್ಕೆ ಶ್ರೀ ಬ್ರಹ್ಮದೇವಕೃತ ಸಂಸ್ಕೃತ ವ್ಯಾಖ್ಯೆಯಲ್ಲಿ **ವಿದೇಹಕ್ಷೇತ್ರ**ವನ್ನು ಹೀಗೆ ವರ್ಣಿಸಿದ್ದಾರೆ:

ಅಥ ದೇಹಮಮತ್ವಮೂಲಭೂತಮಿಥ್ಯಾತ್ವರಾಗಾದಿವಿಭಾವರಹಿತೇ ಕೇವಲಜ್ಞಾನದರ್ಶನಸುಖಾದ್ಯನಂತಗುಣ ಸಹಿತೇ ಚ ನಿಜಪರಮಾತ್ಮದ್ರವ್ಯೇ ಯಥಾ ಸಮ್ಯಗ್ದರ್ಶನಜ್ಞಾನಚಾರಿತ್ರಭಾವನಯಾ ಕೃತ್ವಾ ವಿಗತದೇಹಾ ದೇಹರಹಿತಾಃ ಸಂತೋ ಮುನಯಃ ಪ್ರಾಚುರ್ಯೇಣ ಯತ್ರ ಮೋಕ್ಷಂ ಗಚ್ಛಂತಿ ಸ ವಿದೇಹೋ ಭಣ್ಯತೇ ।

(ಬೃಹದ್ದ್ರವ್ಯಸಂಗ್ರಹ, ಸಪ್ತತತ್ತ್ವ ನವಪದಾರ್ಥ ವರ್ಣನಂ, ೨–೩೫ ಈ ಗಾಥೆಗೆ ರಚಿಸಿರುವ ಟೀಕೆ)

ಟೀಕಾರ್ಥ: ಈಗ ದೇಹದ ಮಮತ್ವಕ್ಕೆ ಮೂಲಕಾರಣವಾದ ಮಿಥ್ಯಾತ್ವ ಮತ್ತು ರಾಗ ಮೊದಲಾದ ವಿಭಾವಗಳಿಂದ ರಹಿತ ಹಾಗೂ ಕೇವಲಜ್ಞಾನ, ಕೇವಲದರ್ಶನ, ಸುಖ ಮೊದಲಾದ ಅನಂತಗುಣ ಸಹಿತವಿರುವ ನಿಜಪರಮಾತ್ಮ ದ್ರವ್ಯದಲ್ಲಿ ಸಮ್ಯಗ್ದರ್ಶನ–ಜ್ಞಾನ–ಚಾರಿತ್ರದ ಭಾವನೆ ಮಾಡಿ ಮುನಿಗಳು ಎಲ್ಲಿಂದ ವಿಗತದೇಹ ಅಂದರೆ ದೇಹರಹಿತರಾಗಿ ಪ್ರಚುರರೂಪದಿಂದ (ಅಧಿಕ ಸಂಖ್ಯೆಯಲ್ಲಿ) ಮೋಕ್ಷ ಪ್ರಾಪ್ತಮಾಡಿಕೊಳ್ಳುತ್ತಾರೋ, ಆ ಕ್ಷೇತ್ರಕ್ಕೆ ವಿದೇಹಕ್ಷೇತ್ರವೆಂದು ಹೇಳುತ್ತಾರೆ.

ಉತ್ತಮತಪದ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ಮೂವತ್ತಆರು (೩೬)–ಆಚಾರ್ಯಪರಮೇಷ್ಠಿಗಳ ಮೂಲಗುಣಗಳು'** ನೋಡಿರಿ ಮತ್ತು **ಸಂಹನನ ಷಟ್ಕ**ಗಳ ವಿವರಣೆಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ತೊಂಬತ್ತಮೂರು (೯೩)–ನಾಮಕರ್ಮಮಂ'** ಇದರಲ್ಲಿ **'೮. ಸಂಹನನ ನಾಮಕರ್ಮ'** ವಿಭಾಗವನ್ನು ನೋಡಿರಿ.

ವ ॥ ಅಲ್ಲಿ ಪಶ್ಚಿಮವಿದೇಹಮಧ್ಯಭೂಭಾಗಕ್ಕಳಂಕಾರ[1]ಮಾಗಿಪಂಚಶತಯೋಜನಪ್ರಮಾಣ ವಿಸ್ತೀರ್ಣಮುಮಪ್ಪ, ೧–೫೩ (ವ)

[1] ಮೂಲಪಾಠ–'ಮಧ್ಯಭೂಭಾಗಕ್ಕಳಂಕಾರ', ಕೆಜಿ ಯವರ ಪಾಠ–'ಮಧ್ಯಮಭೂಮಿಭಾಗಕ್ಕಲಂಕಾರ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಮತ್ತೇಭ ವಿಕ್ರೀಡಿತ

ಪ್ರಿಯಹಂಸೀಯುತಹಂಸನಾದೆಯ ಮಹಾಕುತ್ಕೀಲಕೂಟಪ್ರಭೇ
ದೆಯ ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತಾ
ಲಿಯು[1]ತೋನ್ಮಾದೆಯ ತದ್ವಿದೇಹಜನತಾಸ್ವಾಂತಾರ್ಪಿತೋದ್ಯತ್ಪ್ರಮೋ
ದೆಯ ಸೀತೋದೆಯ ಪೋಲ್ವೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ ॥೧-೫೪

(ವಿ.ಸೂ.: ೧-೫೪ ನೆಯ ಕಂದಪದ್ಯವು, ಹಿಂದಿನ ೧-೫೩ (ವ) ವಚನದ ಮುಂದುವರಿದ ಭಾಗವಾಗಿರುವುದರಿಂದ, ೧-೫೩ (ವ) ಮತ್ತು ೧-೫೪ ನೆಯ ಪದ್ಯ ಈ ಎರಡರ ಪದವಿಭಾಗ, ಅನ್ವಯಾರ್ಥ, ಭಾವಾರ್ಥ, ವಿಶೇಷ ವಿವರಣೆಗಳನ್ನು ಇದರಡಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಅಲ್ಲಿ-ಪಶ್ಚಿಮವಿದೇಹ-ಮಧ್ಯ-ಭೂ-ಭಾಗಕ್ಕೆ, ಅಳಂಕಾರಮಾಗಿ, ಪಂಚಶತ-ಯೋಜನ, ಪ್ರಮಾಣ, ವಿಸ್ತೀರ್ಣಮುಮಪ್ಪ, ೧-೫೩ (ವ)

ಪದ ವಿಭಾಗ: ಪ್ರಿಯ-ಹಂಸೀಯುತ-ಹಂಸನಾದೆಯ; ಮಹಾಕುತ್ಕೀಲ-ಕೂಟ-ಪ್ರಭೇದೆಯ;
ತೀರಸ್ಥ-ಲವಂಗ-ಚೂತ-ಲವಲೀ-ಪುಷ್ಪಾಸವಾಸ್ವಾದಿತ, ಉದಯುತ,
ಉನ್ಮಾದೆಯ, ತದ್ವಿದೇಹ-ಜನತಾ-ಸ್ವಾಂತಾರ್ಪಿತ, ಉದ್ಯತ್ಪ್ರಮೋದೆಯ,
ಸೀತೋದೆಯ, ಪೋಲ್ವೆಗೆ, ಇಲ್ಲ, ತೊಱೆಗಳ್, ವಿಶ್ವಂಭರಾ-ಭಾಗದೊಳ್ ॥ ೧-೫೪

ಅನ್ವಯಾರ್ಥ: (ಅಲ್ಲಿ) ಅಲ್ಲಿ **(ಪಶ್ಚಿಮವಿದೇಹ)** ಪಶ್ಚಿಮ ವಿದೇಹಕ್ಷೇತ್ರದ **(ಮಧ್ಯಭೂಭಾಗಕ್ಕೆ)** ಮಧ್ಯದ ಭೂಪ್ರದೇಶದ ಭಾಗಕ್ಕೆ **(ಅಳಂಕಾರಮಾಗಿ)** ಭೂಷಣಪ್ರಾಯವಾಗಿ **(ಪಂಚಶತ ಯೋಜನ ಪ್ರಮಾಣ)** ಐದುನೂರು ಯೋಜನ ಪ್ರಮಾಣ ಅಗಲವುಳ್ಳ ... [ಸೀತೋದಾ ನದಿಯು] ೧-೫೩ (ವ)

ಅನ್ವಯಾರ್ಥ: (ಪ್ರಿಯ ಹಂಸೀಯುತ) ಪ್ರಿಯವಾದ ಹಂಸಗಳಿಂದ ತುಂಬಿ **(ಹಂಸ ನಾದೆಯ)** ಹಂಸ ನಿನದೆಯಾದ [ಹಂಸಧ್ವನಿಯನ್ನು ಹೊರಡಿಸುವವಳಾದ]; **(ಮಹಾಕುತ್ಕೀಲ ಕೂಟ)** ಮಹಾಕುತ್ಕೀಲ [ಪರ್ವತದ] ನೆತ್ತಿಯನ್ನು [ಶಿಖರದ ತುದಿಯನ್ನು] **(ಪ್ರಭೇದೆಯ)** ಭೇದಿಸಿ ಹರಿಯುವವಳಾದ, **(ತೀರಸ್ಥ)** [ಅವಳ] ತೀರಗಳಲ್ಲಿರುವ **(ಲವಂಗ ಚೂತ ಲವಲೀ ಪುಷ್ಪಾಸವಾಸ್ವಾದಿತಾಲಿಯುತ[=ಪುಷ್ಪ+ಆಸವ+ಆಸ್ವಾದಿತ+ಆಲಿ-ಯುತ])** ಲವಂಗ, ಮಾವು, ಅರನೆಲ್ಲಿ ಹೂಗಳ ಮಕರಂದ ವನ್ನು ಸವಿದ ದುಂಬಿಗಳಿಂದೊಡಗೂಡಿ **(ಉನ್ಮಾದೆಯ)** ಮತ್ತಳಾದ; **(ತದ್ವಿದೇಹ=ತತ್+ವಿದೇಹ)** ಆ ವಿದೇಹ [ಕ್ಷೇತ್ರದ] **(ಜನತಾ)** ಜನಸಮೂಹದ **(ಸ್ವಾಂತಾರ್ಪಿತೋದ್ಯತ್ಪ್ರಮೋದೆಯ=ಸ್ವಾಂತ+ಅರ್ಪಿತ[=ಕೊಡಲ್ಪಡುವ]+ಉದ್ಯತ್+ಪ್ರಮೋದೆಯ)** ಮನಸ್ಸಿಗೆ ಉಕ್ಕೇಳುವ ಆನಂದವನ್ನು ಕೊಡುವವಳಾದ **(ಸೀತೋದೆಯ)** ಸೀತೋದಾನದಿಯ **(ಪೋಲ್ವೆಗೆ)** ಹೋಲಿಕೆಗೆ, **(ವಿಶ್ವಂಭರಾ ಭಾಗದೊಳ್)** ಈ ಭೂ ಭಾಗದಲ್ಲಿ **(ತೊಱೆಗಳ್)** ಯಾವ ನದಿಗಳೂ **(ಇಲ್ಲ)** ಇಲ್ಲ ॥ ೧-೫೪

ಕವಿಯು ಈ ವಚನದಲ್ಲಿ ಪಶ್ಚಿಮವಿದೇಹಕ್ಷೇತ್ರದಲ್ಲಿ ಹರಿಯುವ ಸೀತೋದಾನದಿಯನ್ನು ಪರಿಚಯಿಸಿ ಮುಂದಿನ ಪದ್ಯದಲ್ಲಿ ನದಿಯನ್ನು ವರ್ಣಿಸುತ್ತಾನೆ.

ಭಾವಾರ್ಥ: ಅಲ್ಲಿ ಪಶ್ಚಿಮ ವಿದೇಹಕ್ಷೇತ್ರದ ಮಧ್ಯದ ಭೂಭಾಗಕ್ಕೆ ಭೂಷಣಪ್ರಾಯವಾಗಿ ಐದುನೂರು ಯೋಜನ ಪ್ರಮಾಣ ಅಗಲವುಳ್ಳ ... ೧-೫೩ (ವ)

ಭಾವಾರ್ಥ: ಪ್ರಿಯ ಹಂಸಗಳಿಂದ ತುಂಬಿರುವ, ಹಂಸ ನಿನದೆಯಾದ, ಮಹಾಕುತ್ಕೀಲ ಪರ್ವತದ ಶಿಖರವನ್ನು ಭೇದಿಸಿ ಹರಿಯುವ, ಆ ನದಿಯ ತೀರಗಳಲ್ಲಿರುವ ಲವಂಗ, ಮಾವು, ಅರನೆಲ್ಲಿ ಗಿಡಗಳ ಹೂಗಳ ಮಕರಂದವನ್ನು ಆಸ್ವಾದಿಸುತ್ತಿರುವ ದುಂಬಿಗಳಿಂದೊಡಗೂಡಿ, ಆ ವಿದೇಹ ಕ್ಷೇತ್ರದ ಜನಸಮೂಹದ ಮನಸ್ಸಿಗೆ ಉಕ್ಕೇಳುವ ಆನಂದವನ್ನು ನೀಡುವ ಸೀತೋದಾನದಿಯು ಪಶ್ಚಿಮ ವಿದೇಹ ಕ್ಷೇತ್ರದಲ್ಲಿ ಹರಿಯುತ್ತಿದ್ದು, ಇದಕ್ಕೆ ಹೋಲಿಕೆಯಾಗುವ ಬೇರಾವ ನದಿಗಳೂ ಆ ಭೂಪ್ರದೇಶದಲ್ಲಿ ಇಲ್ಲ. ೧-೫೪

ವಿಶೇಷ ವಿವರಣೆ [೧-೫೩ (ವ)]: ಪಶ್ಚಿಮ ವಿದೇಹದ ಭೂಪ್ರದೇಶದ ಮಧ್ಯದ ಭಾಗಕ್ಕೆ ಭೂಷಣಪ್ರಾಯವಾಗಿರುವ ಐದುನೂರು ಯೋಜನ ಪ್ರಮಾಣ ವಿಸ್ತೀರ್ಣವುಳ್ಳದ್ದು, ಅದು ಸೀತೋದಾನದಿಯೆಂದು ಕವಿಯು ೧-೫೪ ನೆಯ ಪದ್ಯದಲ್ಲಿ ತಿಳಿಸುತ್ತಾನೆ. ನದಿಯ

[1] ಮೂಲಪಾಠ-'ಸ್ವಾದಿತೋದಯು', ಕೆಜಿ ಯವರ ಪಾಠ-'ಸ್ವಾದಿತಾಲಿಯು', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

ವಿಸ್ತೀರ್ಣ ಎಂದರೆ ನದಿಯ ಅಗಲ ಐದುನೂರು ಯೋಜನ ಎಂದು ಕವಿಯು ಹೇಳುತ್ತಾನೆ.

ಮಹಾಕುತ್ಕೀಲಕೂಟಪ್ರಭೇದೆಯ (೧–೫೪): ಈ ಪದ್ಯದಲ್ಲಿ ಸೀತೋದಾನದಿಯು, 'ಮಹಾಕುತ್ಕೀಲ ಪರ್ವತದ ಶಿಖರದ ತುದಿಯನ್ನು ಭೇದಿಸುವವಳಾದ' ಎನ್ನುವ ವಿವರಣೆಯೊಂದನ್ನು ಹೊರತುಪಡಿಸಿ, ಸೀತೋದಾನದಿಯ ಉಗಮ ಸ್ಥಾನವನ್ನಾಗಲೀ, ನದಿ ಹರಿಯುವ ಪಾತ್ರವನ್ನಾಗಲೀ, ಕೊನೆಗೆ ಆ ನದಿಯು ಯಾವ ಸಮುದ್ರವನ್ನು ಸೇರುತ್ತದೆ ಎನ್ನುವ ಬಗ್ಗೆಯಾಗಲೀ ಹೇಳದೆ, ಕವಿಯು ನೇರವಾಗಿ ಆ ನದಿಯ ಹಿರಿಮೆಯನ್ನು ವರ್ಣಿಸಲು ತೊಡಗುತ್ತಾನೆ. ಸೀತೋದಾನದಿಯ ಈ ಎಲ್ಲ ವಿವರಗಳಿಗೆ **ತಿಲೋಯಪಣ್ಣತ್ತೀ**ಯ ೪–೨೦೯೦ ರಿಂದ ೪–೨೦೯೮ ರವರೆಗಿನ ಗಾಥೆಗಳನ್ನು ನೋಡಿರಿ.

ಪ್ರಿಯಹಂಸೀಯುತಹಂಸನಾದೆಯ: ಇದರ ವಿವರಣೆಗೆ ಈ ಆಶ್ವಾಸದ ಕೊನೆಯಲ್ಲಿ ನೀಡಿರುವ **ಅಲಂಕಾರ ವಿಚಾರ (ಕವಿಸಮಯ)**ವನ್ನು ನೋಡಿರಿ.

> **ಅದು ನೀರೇಭ[1]ಕರಾಭಿಘಾತವಿಚಳದ್ವಾರಾಶಿಯೊಳ್ ಪೋಗಿ ಕೂ**
> **ಡಿದೊಡಾವಾರ್ಧಿಯ ಪೆಂಪುಮಾತೊಱೆಯೊಳಾಯ್ತಿಂತಾದಪೆಂಪಿಂದಮು**
> **ರ್ಬಿದ[2] ಗುಣ್ಪಿಂದಮಿದಬ್ಧಿಗಗ್ಗಳಮೆನಲ್ ಕುಂದೊಂ[3]ದು ಕಣ್ಗೆತ್ತಿದಂ**
> **ತಿದುದಲ್[4]ನೇರ್ಗಿಱಿದೆಂದೊಡಾವ ತೊಱೆಯುಂಸೀತೋದೆಯಂಪೋಲ್ಗುಮೇ ॥೧–೫೫**

ಪದ ವಿಭಾಗ: ಅದು, ನೀರೇಭ, ಕರಾಭಿಘಾತ, ವಿಚಳತ್, ವಾರಾಶಿಯೊಳ್, ಪೋಗಿ,
ಕೂಡಿದೊಡೆ, ಆ, ವಾರ್ಧಿಯ, ಪೆಂಪುಂ, ಆ, ತೊಱೆಯೊಳಾಯ್ತು; ಇಂತು, ಆದ, ಪೆಂಪಿಂದಂ,
ಉರ್ಬಿದ, ಗುಣ್ಪಿಂದಂ, ಇದು, ಅಬ್ಧಿಗೆ, ಅಗ್ಗಳಂ, ಎನಲ್, ಕುಂದೊಂದು, ಕಣ್ಗೆತ್ತಿದಂತೆ, ಇದು,
ದಲ್, ನೇರ್ಗಿಱಿದಂ, ಎಂದೊಡೆ, ಆವ, ತೊಱೆಯುಂ, ಸೀತೋದೆಯಂ, ಪೋಲ್ಗುಮೇ ॥ ೧–೫೫

ಅನ್ವಯಾರ್ಥ: **(ಅದು)** ಆ ಸೀತೋದಾನದಿಯು **(ನೀರೇಭ=ನೀರ+ಇಭ)** ನೀರಾನೆಯ **(ಕರಾಭಿಘಾತ=ಕರ+ಅಭಿಘಾತ)** ಸೊಂಡಿಲಿನ ಹೊಡೆತದಿಂದ **(ವಿಚಳತ್)** ಅಲ್ಲೋಲ–ಕಲ್ಲೋಲವಾಗಿ, **(ವಾರಾಶಿಯೊಳ್)** [ಲವಣ] ಸಮುದ್ರದೊಳಗೆ **(ಪೋಗಿ ಕೂಡಿದೊಡೆ)** ಹೋಗಿ ಸೇರಿದೊಡನೆಯೆ, **(ಆ ವಾರ್ಧಿಯ ಪೆಂಪುಂ)** ಆ [ಲವಣ] ಸಮುದ್ರದ ಘನತೆಯು **(ಆ ತೊಱೆಯೊಳಾಯ್ತು)** ಆ ಸೀತೋದಾನದಿಯಲ್ಲಿವುಂಟಾಯಿತು; **(ಇಂತಾದ=ಇಂತು+ಆದ)** ಹೀಗೆ ಉಂಟಾದ **(ಪೆಂಪಿಂದಂ)** ಘನತೆಯಿಂದ **(ಉರ್ಬಿದ ಗುಣ್ಪಿಂದಂ)** ಹೆಚ್ಚಿದ ಗಾಂಭೀರ್ಯದಿಂದ **(ಇದು)** ಈ ಸೀತೋದೆಯು **(ಅಬ್ಧಿಗಗ್ಗಳಮೆನಲ್= ಅಬ್ಧಿಗೆ+ಅಗ್ಗಳಂ+ಎನಲ್)** ಸಮುದ್ರಕ್ಕೂ ಅಧಿಕವೆನಿಸಲು, **(ಕುಂದೊಂದು)** [ಸಮುದ್ರದ] ನ್ಯೂನತೆಯೊಂದು **(ಕಣ್ಗೆತ್ತಿದಂತಿದುದಲ್=ಕಣ್+ಕೆತ್ತಿದಂತೆ+ಇದು+ದಲ್)** ಕಣ್ಣಿಗೆ ಎತ್ತಿ ತೋರಿದಂತೆ ಈ ಸಮುದ್ರವೇ, **(ದಲ್)** ನಿಸ್ಸಂದೇಹವಾಗಿ **(ನೇರ್ಗಿಱಿದಂ)** [ಸೀತೋದಾನದಿಗಿಂತ] ನಸು ಕಿರಿದಾಯಿತು **(ಎಂದೊಡೆ)** ಎಂದು ಹೇಳಿದಮೇಲೆ, **(ಆವ)** ಯಾವ **(ತೊಱೆಯುಂ)** ನದಿಯಾದರೂ **(ಸೀತೋದೆಯಂ)** ಸೀತೋದೆಯನ್ನು **(ಪೋಲ್ಗುಮೇ)** ಹೋಲುವುದೇ? ॥ ೧–೫೫

ಈ ವೃತ್ತಪದ್ಯದಲ್ಲಿ ಕವಿಯು ಮತ್ತೊಮ್ಮೆ ಸೀತೋದಾನದಿಯ ಅಧಿಕತೆಯನ್ನು ವರ್ಣಿಸಿರುವನು.

ಭಾವಾರ್ಥ: ಆ ಸೀತೋದಾನದಿಯು ನೀರಾನೆಯ ಸೊಂಡಿಲಿನ ಹೊಡೆತದಿಂದ ಅಲ್ಲೋಲ–ಕಲ್ಲೋಲವಾಗಿ,

---

[1] **'ನೀರೇಭ (ನೀರಾನೆ)'**–ನೀರೇಭ (ಸಂಸ್ಕೃತ) ಅಥವಾ ನೀರಾನೆ (ಕನ್ನಡ) ಎಂಬುದು ನಮ್ಮ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ, ಗಂಗಾನದಿಯಲ್ಲಿ ಇರುವುವುಗಳೆಂದೂ ಹಾಗೂ ಅವು ಆನೆಗಳ ರೂಪವನ್ನು ಹೋಲುವಂತೆಯೂ ವರ್ಣಿಸಿರುವ ಒಂದು ಕಾಲ್ಪನಿಕ ಪ್ರಾಣಿ. ನಮ್ಮ ಕವಿಗಳು ಸೃಷ್ಟಿಸಿಕೊಂಡಿರುವ ಈ ನೀರಾನೆಯನ್ನು, ಈಗ ನೀರಾನೆ ಎಂದು ಕರೆಯಲ್ಪಡುವ ಆಫ್ರಿಕಾ ಮೂಲದ **'ಹಿಪ್ಪೊಪೊಟಮಸ್'** (**'HIPPOPOTAMUS'** [a Latin word derived from the ancient Greek, means 'Horse of the River']) ಎಂಬ ಪ್ರಾಣಿಯೊಂದಿಗೆ ಸಮೀಕರಿಸಿಕೊಂಡು ವಾಚಕರು ಭ್ರಾಂತಿಗೊಳಗಾಗಬಾರದು. ಹೆಚ್ಚಿನ ವಿವರಗಳಿಗೆ ಈ ವೃತ್ತಕ್ಕೆ ನೀಡಿರುವ **ಅಲಂಕಾರ ವಿಚಾರ (ಕವಿಸಮಯ)**ವನ್ನು ನೋಡಿರಿ.

[2] ಮೂಲಪಾಠ–'ಮುರ್ಬಿದ', ಕೆಜಿ ಯವರ ಪಾಠ–'ಮುರ್ವ್ವಿದ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.


[3] ಮೂಲಪಾಠ–'ಕುಂದೊಂದು', ಕೆಜಿ ಯವರ ಪಾಠ–'ಕುಂದೆಂದು', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[4] ಮೂಲಪಾಠ–'ಕಣ್ಗೆತ್ತಿದಂತಿದುದಲ್', ಕೆಜಿ ಯವರ ಪಾಠ–'ಕಣ್ಕೆತ್ತಿದಂತದಕಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಲವಣಸಮುದ್ರದೊಳಗೆ ಹೋಗಿ ಸೇರಿದಾಗ, ಆ ಲವಣಸಮುದ್ರದ ಘನತೆಯು ಆ ಸೀತೋದಾನದಿಯಲ್ಲಿವುಂಟಾಯಿತು. ಹೀಗೆ ಸೀತೋದಾನದಿಯಲ್ಲಿ ಉಂಟಾದ ಘನತೆಯಿಂದಾಗಿ, ಅದರಲ್ಲಿ ಹೆಚ್ಚಿದ ಗಾಂಭೀರ್ಯದಿಂದಾಗಿ ಈ ಸೀತೋದೆಯು ಲವಣಸಮುದ್ರಕ್ಕಿಂತ ಅಧಿಕವೆನಿಸಿತು. ಎಂದಮೇಲೆ, ಸಮುದ್ರದ ನ್ಯೂನತೆಯೊಂದು ಕಣ್ಣಿಗೆ ಎತ್ತಿ ತೋರಿದಂತೆ, ನಿಸ್ಸಂದೇಹವಾಗಿ ಈ ಸಮುದ್ರವೇ ಸೀತೋದಾನದಿಗಿಂತ ನಸು ಕಿರಿದಾಯಿತು ಎಂದು ಹೇಳಿದಮೇಲೆ, ಇನ್ನು ಯಾವ ನದಿಯಾದರೂ ಸೀತೋದೆಯನ್ನು ಹೋಲುವುದೇ? ಎಂದು ಆಶ್ಚರ್ಯ ವ್ಯಕ್ತಪಡಿಸಿರುವನು. ೧-೫೫

ವಿಶೇಷ ವಿವರಣೆ: ಲವಣಸಮುದ್ರದಲ್ಲಿ, ಮೀನು, ಮೊಸಳೆ, ಶಿಶುಮಾರ, ಆಮೆ ಹಾಗೂ ಕಪ್ಪೆ ಮೊದಲಾದ ಇತರ ಜಲಜಂತುಗಳಿರುವ ಬಗ್ಗೆ ವಿವರಣೆಯಿರುತ್ತದೆ (ತಿಲೋಯಪಣ್ಣತ್ತೀ ೪-೨೫೫೪). ಆದರೆ, ಸೀತೋದಾನದಿಯು ಹೋಗಿ ಸೇರುವ ಲವಣಸಮುದ್ರದಲ್ಲಿ ನೀರಾನೆಗಳಿರುವ ಬಗ್ಗೆ **ತಿಲೋಯಪಣ್ಣತ್ತೀ**ಯಲ್ಲಿ ಉಲ್ಲೇಖವಿರುವುದಿಲ್ಲ. ಆದುದರಿಂದ ನೀರಾನೆಗಳಿದ್ದದ್ದು ಸೀತೋದಾನದಿಯಲ್ಲಿ ಮತ್ತು ಆ ನದಿಯಲ್ಲಿನ ನೀರು ನೀರಾನೆಗಳ ಸೊಂಡಿಲಿನ ಹೊಡೆತದಿಂದ ಅಲ್ಲೋಲ-ಕಲ್ಲೋಲವಾಗಿ ಸಮುದ್ರವನ್ನು ಸೇರುತ್ತದೆ ಎಂದು ಅರ್ಥೈಸಲಾಗಿದೆ.

ವಿದೇಹಕ್ಷೇತ್ರ ಮತ್ತು ಸೀತೋದಾನದಿಯ ನಕ್ಷೆ:



ವ ॥ ಆ ಸೀತೋದಾನದಿಯತೆಂಕಣಬಡಗಣತಡಿವಿಡಿದಿರ್ದುವೆಂಟುನಾಟ್ಕಿಳ್, ಅಲ್ಲಿ–೧-೫೫ (ವ)

ಕಂದ **ಬಡಗಣ ತಡಿಯೊಳಮೇಟಿನೆ**
ಯೆಡೆಯದು ನೀಳಾಚಳಕ್ಕೆ ತೆಂಕಣದು ಬೆಡಂ
ಗೊಡರಿಪ ವಕ್ಷಾರಾದ್ರಿಗೆ
ಪಡುವಣದದು ಸುಜನನಿಳಯಮಪಗತವಿಳಯಂ ॥ **೧-೫೬**

ಕಂದ **ಅಳಿಕುಳರುತಿಗಳಿನವನತ**
ಫಳತರುಗಳಿನುಚಿತಕುಸುಮಗಂಧದಿನಬಳಾ
ವಿಳಸನದಿಂದೀವುದು ಗಂ
ಧಿಳವಿಷಯಂ ಸಕಳವಿಷಯರಸರಸಿಕತೆಯಂ ॥ **೧-೫೭**

(**ವಿ.ಸೂ.:** ೧-೫೬ ನೆಯ ಮತ್ತು ೧-೫೭ ನೆಯ ಕಂದಪದ್ಯಗಳು ೧-೫೫ (ವ) ವಚನದ ಮುಂದುವರಿದ ಭಾಗಗಳಾಗಿರುವುದರಿಂದ ಈ ಮೂರರ **ಪದವಿಭಾಗ, ಅನ್ವಯಾರ್ಥ, ಭಾವಾರ್ಥ** ಮತ್ತು **ವಿಶೇಷ ವಿವರಣೆ**ಗಳನ್ನು ಇದರಡಿ ಒಂದೆಡೆಯಲ್ಲಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಆ–ಸೀತೋದಾನದಿಯ–ತೆಂಕಣ–ಬಡಗಣ–ತಡಿವಿಡಿದು, ಇರ್ದುವು, ಎಂಟುನಾಟ್ಕಳ್, ಅಲ್ಲಿ_ ೧–೫೫ (ವ)

ಪದ ವಿಭಾಗ: ಬಡಗಣ–ತಡಿಯೊಳಂ, ಏೞನೆಯೆಡೆಯದು,
ನೀಳಾಚಳಕ್ಕೆ, ತೆಂಕಣದು;
ಬೆಡಂಗೊಡರಿಪ, ವಕ್ಷಾರಾದ್ರಿಗೆ,
ಪಡುವಣದದು (ಪಡುವಣದ+ಅದು), ಸುಜನ–ನಿಳಯಂ, ಅಪಗತ, ವಿಳಯಂ ॥ ೧–೫೬

ಪದ ವಿಭಾಗ: ಅಳಿ–ಕುಳ–ರುತಿಗಳಿಂ, ಅವನತ–
ಫಳ–ತರುಗಳಿಂ, ಉಚಿತ–ಕುಸುಮ–ಗಂಧದಿಂ, ಅಬಳಾ–
ವಿಳಸನದಿಂದ, ಈವುದು, ಗಂಧಿಳ–
ವಿಷಯಂ, ಸಕಳ–ವಿಷಯ–ರಸ–ರಸಿಕತೆಯಂ ॥ ೧–೫೭

ಅನ್ವಯಾರ್ಥ: **(ಆ)** ಆ **(ಸೀತೋದಾನದಿಯ)** ಸೀತೋದಾನದಿಯ **(ತೆಂಕಣ ಬಡಗಣ ತಡಿವಿಡಿದು)** ದಕ್ಷಿಣ ಮತ್ತು ಉತ್ತರದ [ಒಂದೊಂದು] ತೀರದಗುಂಟ **(ಎಂಟು ನಾಟ್ಕಳ್)** ಎಂಟು ನಾಡುಗಳು **(ಇರ್ದುವು)** ಇದ್ದುವು, **(ಅಲ್ಲಿ)** ಅವುಗಳಲ್ಲಿ_ ೧–೫೫ (ವ)

ಅನ್ವಯಾರ್ಥ: **(ಬಡಗಣ ತಡಿಯೊಳಂ)** [ಸೀತೋದಾನದಿಯ] ಉತ್ತರ ತೀರದಗುಂಟ ಇರುವ, [ಎಂಟು ನಾಡುಗಳಲ್ಲಿ ಪಶ್ಚಿಮದಿಂದ ಪೂರ್ವದ ಕಡೆಗೆ] **(ಏೞನೆಯೆಡೆಯದು)** ಏಳನೆಯ ಸ್ಥಾನದಲ್ಲಿರುವುದು [ಹಾಗೂ] **(ನೀಳಾಚಳಕ್ಕೆ ತೆಂಕಣದು)** ನೀಲಪರ್ವತಕ್ಕೆ ದಕ್ಷಿಣಕ್ಕಿರುವುದು, **(ಬೆಡಂಗೊಡರಿಪ=ಬೆಡಂಗು+ಒಡರಿಪ)** ಅಂದವನ್ನು ಸೂಸುವ [ಉಂಟುಮಾಡುವ] **(ವಕ್ಷಾರಾದ್ರಿಗೆ)** ವಕ್ಷಾರಾಪರ್ವತಕ್ಕೆ **(ಪಡುವಣದದು)** ಪಶ್ಚಿಮಕ್ಕಿರುವ ಆ ನಾಡು **(ಸುಜನ ನಿಳಯಂ)** ಸಜ್ಜನರ ಬೀಡಾಗಿದ್ದು, **(ವಿಳಯಂ)** ಪ್ರಳಯದಿಂದ **(ಅಪಗತ)** ದೂರಾದದ್ದು [ಆಗಿ] ... ॥ ೧–೫೬

ಅನ್ವಯಾರ್ಥ: **(ಅಳಿಕುಳ ರುತಿಗಳಿಂ)** ದುಂಬಿವಿಂಡಿನ ಝೇಂಕಾರದಿಂದಲೂ, **(ಅವನತ)** [ಹಣ್ಣುಗಳ ಭಾರಕ್ಕೆ] ಬಾಗಿರುವ **(ಫಳತರುಗಳಿಂ)** ಫಲ [ಭರಿತ] ವೃಕ್ಷಗಳಿಂದಲೂ, **(ಉಚಿತ)** ಅಹ್ಲಾದಕರವಾದ **(ಕುಸುಮ)** ಪುಷ್ಪಗಳ **(ಗಂಧದಿಂ)** ಸುವಾಸನೆಯಿಂದಲೂ, **(ಅಬಳಾ)** ಸ್ತ್ರೀಯರ **(ವಿಳಸನದಿಂದ)** ಸೊಬಗಿನಿಂದಲೂ [ಕೂಡಿದ] **(ಗಂಧಿಳ ವಿಷಯಂ)** ಗಂಧಿಳ ನಾಡು **(ಸಕಳ)** ಸಮಗ್ರ **(ವಿಷಯ)** ಇಂದ್ರಿಯಾನುಭವದ **(ರಸ)** ಸವಿಯನ್ನನುಭವಿಸುವ **(ರಸಿಕತೆಯಂ)** ರಸಿಕತನವನ್ನು [ರಸಭಾವವನ್ನು] **(ಈವುದು)** ನೀಡುವುದು ॥ ೧–೫೭

ಭಾವಾರ್ಥ: ಆ ಸೀತೋದಾನದಿಯ ದಕ್ಷಿಣ ಮತ್ತು ಉತ್ತರದ ಒಂದೊಂದು ತೀರದಗುಂಟ ಎಂಟು ನಾಡುಗಳು ಇದ್ದುವು, ಅವುಗಳಲ್ಲಿ_ ೧–೫೫ (ವ)

ಭಾವಾರ್ಥ: ಸೀತೋದಾನದಿಯ ಉತ್ತರ ತೀರದಗುಂಟ ಇರುವ, ಎಂಟು ನಾಡುಗಳಲ್ಲಿ ಪಶ್ಚಿಮದಿಂದ ಪೂರ್ವದ ಕಡೆಗೆ ಏಳನೆಯ ಸ್ಥಾನದಲ್ಲಿರುವುದು ಹಾಗೂ ನೀಲಪರ್ವತಕ್ಕೆ ದಕ್ಷಿಣಕ್ಕಿರುವುದು, ವಕ್ಷಾರಾಪರ್ವತಕ್ಕೆ ಪಶ್ಚಿಮದ ಕಡೆಗಿರುವ ಆ ನಾಡು ಸಜ್ಜನರ ಬೀಡಾಗಿದ್ದು, ಪ್ರಳಯ ರಹಿತವಾದದ್ದಾಗಿ, ೧–೫೬

ಹಿಂದಿನ ೧–೫೬ ನೆಯ ಪದ್ಯದಲ್ಲಿ **'ಏಳನೆಯೆಡೆಯ'** ನಾಡು ಎಂದು ಸೂಚಿಸಿರುವ ನಾಡಿನ ಹೆಸರನ್ನು ೧–೫೭ ನೆಯ ಪದ್ಯದಲ್ಲಿ **'ಗಂಧಿಳ ವಿಷಯಂ'** ಎಂದು ಕವಿಯು ತಿಳಿಸಿರುವನು.

ಭಾವಾರ್ಥ: ದುಂಬಿವಿಂಡಿನ ಝೇಂಕಾರದಿಂದಲೂ, ಹಣ್ಣುಗಳ ಭಾರಕ್ಕೆ ಬಾಗಿರುವ ಫಲಭರಿತ ವೃಕ್ಷಗಳಿಂದಲೂ, ಅಹ್ಲಾದಕರವಾದ ಪುಷ್ಪಗಳ ಸುವಾಸನೆಯಿಂದಲೂ, ಸ್ತ್ರೀಯರ ಸೊಬಗಿನಿಂದಲೂ ಕೂಡಿದ ಗಂಧಿಳ ನಾಡು, ಸಮಗ್ರ ಇಂದ್ರಿಯಾನುಭವದ ಸವಿಯನ್ನನುಭವಿಸುವ ರಸಿಕತನವನ್ನು [ರಸಭಾವವನ್ನು] ನೀಡುವುದು ॥ ೧–೫೭

ವಿಶೇಷ ವಿವರಣೆ: ಸೀತೋದಾನದಿಯ ದಕ್ಷಿಣ ತೀರದ ಕಡೆ ಎಂಟು ನಾಡುಗಳು ಮತ್ತು ಉತ್ತರ ತೀರದ ಕಡೆ ಎಂಟು ನಾಡುಗಳು, ಹೀಗೆ ಒಟ್ಟು ಹದಿನಾರು ನಾಡುಗಳು ಎಂದು ಅರ್ಥೈಸಬೇಕು. ಹೇಗೆಂದರೆ ಈ ಮೇಲಿನ ೧–೫೧ ನೆಯ ಪದ್ಯದಲ್ಲಿ ಕವಿಯು,

ಪೂರ್ವ ವಿದೇಹದಲ್ಲಿ ಹದಿನಾರು ನಾಡುಗಳು ಮತ್ತು ಪಶ್ಚಿಮ ವಿದೇಹದಲ್ಲಿ ಹದಿನಾರು ನಾಡುಗಳಿರುವುವೆಂದು ವರ್ಣಿಸಿರುತ್ತಾನೆ. ಈ ವಿದೇಹ ಕ್ಷೇತ್ರವು ವಲಯಾಕಾರದಲ್ಲಿರುವ ಜಂಬೂದ್ವೀಪದಲ್ಲಿ, ಲವಣಸಮುದ್ರದ ಪೂರ್ವತೀರದಿಂದ ಪಶ್ಚಿಮತೀರದವರಗೆ ಹರಡಿದ್ದು, ಇದರ ನಟ್ಟನಡುವೆ ಮಂದರ ಪರ್ವತವಿದ್ದು, ಇದು ವಿದೇಹವನ್ನು (೧) ಪೂರ್ವವಿದೇಹ ಮತ್ತು (೨) ಪಶ್ಚಿಮ ವಿದೇಹವೆಂದು ಎರಡು ವಿಭಾಗ ಮಾಡಿರುತ್ತದೆ. ಪೂರ್ವ ವಿದೇಹದಲ್ಲಿ **ಸೀತಾನದಿಯೂ,** ಪಶ್ಚಿಮ ವಿದೇಹದಲ್ಲಿ **ಸೀತೋದಾ ನದಿಯೂ** ಹರಿಯುತ್ತಿವೆ. ಈ ಎರಡೂ ನದಿಗಳು ವಿದೇಹವನ್ನು ಅಡ್ಡವಾಗಿ ಸೀಳುತ್ತವೆ. ಈ ಎರಡೂ ನದಿಗಳ ಉತ್ತರ ತೀರ ಮತ್ತು ದಕ್ಷಿಣ ತೀರದಲ್ಲಿ ಎಂಟೆಂಟು ನಾಡುಗಳಿದ್ದು, ವಿದೇಹದಲ್ಲಿ (ಪೂರ್ವ ವಿದೇಹ ಮತ್ತು ಪಶ್ಚಿಮ ವಿದೇಹ ಎರಡೂ ಸೇರಿ) ಒಟ್ಟು ೩೨ ನಾಡುಗಳಿರುತ್ತವೆಂದು ಮೇಲಿನ ೧–೫೧ ನೆಯ ಪದ್ಯದಲ್ಲಿ ವರ್ಣಿಸಿದೆ. ಆ ಮೂವತ್ತೆರಡು ನಾಡುಗಳ ಹೆಸರುಗಳು ಈ ರೀತಿ ಇವೆ:

೧. ಪಶ್ಚಿಮ ವಿದೇಹ ಕ್ಷೇತ್ರದಲ್ಲಿ **ಸೀತೋದಾನದಿಯ ಉತ್ತರ ತೀರದ** ಕಡೆ ಇರುವ ಎಂಟು ನಾಡುಗಳು (ಪಶ್ಚಿಮ ದಿಕ್ಕಿನಿಂದ ಪೂರ್ವದ ಕಡೆಗೆ) ಕ್ರಮವಾಗಿ: (೧) ವಪ್ರಾ, (೨) ಸುವಪ್ರಾ, (೩) ಮಹಾವಪ್ರಾ, (೪) ವಪ್ರಕಾವತಿ, (೫) ಗಂಧಾ, (೬) ಸುಗಂಧಾ, **(೭) ಗಂಧಿಲಾ,** (೮) ಗಂಧಮಾಲಿನೀ. (ತಿಲೋಯಪಣ್ಣತ್ತೀ, ೪–೨೨೩೫)

೨. ಪಶ್ಚಿಮ ವಿದೇಹ ಕ್ಷೇತ್ರದಲ್ಲಿ **ಸೀತೋದಾನದಿಯ ದಕ್ಷಿಣ ತೀರದ** ಕಡೆ ಇರುವ ಎಂಟು ನಾಡುಗಳು (ಪಶ್ಚಿಮ ದಿಕ್ಕಿನಿಂದ ಪೂರ್ವದ ಕಡೆಗೆ) ಕ್ರಮವಾಗಿ: (೧) ಸರಿತಾ, (೨) ಕುಮುದಾ, (೩) ನಳಿನೀ, (೪) ಶಂಖಾ, (೫) ಪದ್ಮಕಾವತಿ, (೬) ಮಹಾಪದ್ಮಾ, (೭) ಸುಪದ್ಮಾ, (೮) ಪದ್ಮಾ. (ತಿಲೋಯಪಣ್ಣತ್ತೀ, ೪–೨೨೩೪)

೩. ಪೂರ್ವ ವಿದೇಹ ಕ್ಷೇತ್ರದಲ್ಲಿ **ಸೀತಾನದಿಯ ಉತ್ತರ ತೀರದ** ಕಡೆ ಇರುವ ಎಂಟು ನಾಡುಗಳು (ಪಶ್ಚಿಮ ದಿಕ್ಕಿನಿಂದ ಪೂರ್ವದ ಕಡೆಗೆ) ಕ್ರಮವಾಗಿ: (೧) ಕಚ್ಛಾ, (೨) ಸುಕಚ್ಛಾ, (೩) ಮಹಾ ಕಚ್ಛಾ, (೪) ಕಚ್ಛಕಾವತೀ, (೫) ಆವರ್ತಾ, (೬) ಲಾಂಗಲಾವರ್ತಾ, (೭) ಪುಷ್ಕಲಾ, (೮) ಪುಷ್ಕಲಾವತೀ. (ತಿಲೋಯಪಣ್ಣತ್ತೀ, ೪–೨೨೩೨)

೪. ಪೂರ್ವ ವಿದೇಹ ಕ್ಷೇತ್ರದಲ್ಲಿ **ಸೀತಾನದಿಯ ದಕ್ಷಿಣ ತೀರದ** ಕಡೆ ಇರುವ ಎಂಟು ನಾಡುಗಳು (ಪಶ್ಚಿಮ ದಿಕ್ಕಿನಿಂದ ಪೂರ್ವದ ಕಡೆಗೆ) ಕ್ರಮವಾಗಿ: (೧) ಮಂಗಲಾವತಿ, (೨) ರಮಣೀಯ, (೩) ಸುರಮ್ಯಾ, (೪) ರಮ್ಯಾ, (೫) ವತ್ಸಕಾವತಿ, (೬) ಮಹಾವತ್ಸಾ, (೭) ಸುವತ್ಸಾ, (೮) ವತ್ಸಾ. (ತಿಲೋಯಪಣ್ಣತ್ತೀ, ೪–೨೨೩೩)

ಏಟನೆಯೆಡೆಯದು (೧–೫೬): ಈ ಪದ್ಯದಲ್ಲಿ ಕವಿಯು ಆ 'ಏಟನೆಯೆಡೆಯದು' ಆದ ನಾಡಿನ ಹೆಸರನ್ನು ತಿಳಿಸದೆ, ಆ ನಾಡಿನ ಎಲ್ಲೆಗಳನ್ನು ವಿವರಿಸಿದ್ದಾನೆ. ವಿದೇಹ ಕ್ಷೇತ್ರದ ಉತ್ತರಕ್ಕೆ, ಪೂರ್ವ–ಪಶ್ಚಿಮವಾಗಿ ಉದ್ದಕ್ಕೂ ನೀಲಪರ್ವತ ಶ್ರೇಣಿಯೂ; ವಿದೇಹ ಕ್ಷೇತ್ರದ ದಕ್ಷಿಣಕ್ಕೆ, ಪೂರ್ವ ಪಶ್ಚಿಮವಾಗಿ ಉದ್ದಕ್ಕೂ ನಿಷದ ಪರ್ವತ ಶ್ರೇಣಿಯೂ ಹರಡಿರುತ್ತವೆ. ಆ ಏಳನೆಯೆಡೆಯ ನಾಡಿನ ಎಲ್ಲೆಯನ್ನು ಪದ್ಯದಲ್ಲಿ ವರ್ಣಿಸಿರುವಂತೆ ಈ ಕೆಳಗಿನಂತೆ ಗುರುತಿಸಬಹುದು:

೧. ಆ ಏಳನೆಯೆಡೆಯ ನಾಡಿನ ದಕ್ಷಿಣಕ್ಕೆ: ಸೀತೋದಾ ನದಿ (ಅಂದರೆ ಸೀತೋದಾ ನದಿಯ ಉತ್ತರ ತೀರದ ಕಡೆಯಲ್ಲಿ ಇರುವ ಏಳನೆಯದಾದ ನಾಡು)

೨. ಆ ಏಳನೆಯೆಡೆಯ ನಾಡಿನ ಉತ್ತರಕ್ಕೆ: ನೀಲಾಚಲ (ಅಂದರೆ ನೀಲಾಚಳದ ದಕ್ಷಿಣಕ್ಕಿರುವ ಏಳನೆಯದಾದ ನಾಡು)

೩. ಆ ಏಳನೆಯೆಡೆಯ ನಾಡಿನ ಪೂರ್ವಕ್ಕೆ: [ದೇವಮಾಲವವೆಂಬ] ವಕ್ಷರಾದ್ರಿ ಇರುತ್ತದೆ (ಅಂದರೆ ವಕ್ಷರಾದ್ರಿಯ ಪಶ್ಚಿಮಕ್ಕೆ ಏಳನೆಯದಾದ ನಾಡು) ವಾಸ್ತವವಾಗಿ ಆ ಏಳನೇ ನಾಡಿನ ಪೂರ್ವಕ್ಕೆ ಗಂಧಮಾಲಿನೀ ಎಂಬ ನಾಡಿದ್ದು, ಈ ಎರಡು ನಾಡುಗಳ ಗಡಿ ಪ್ರದೇಶದ ಉದ್ದಕ್ಕೂ ದಕ್ಷಿಣೋತ್ತರವಾಗಿ [ದೇವಮಾಲವವೆಂಬ] ವಕ್ಷರಾದ್ರಿ [ಪರ್ವತ] ಹರಡಿದೆ ಎಂದು ತಿಳಿಯಬೇಕು.

ಹೀಗೆ ಕವಿಯು ಮೇಲಿನ ಕಂದಪದ್ಯದಲ್ಲಿ ಆ ಏಳನೆಯೆಡೆಯ ನಾಡಿನ ಎಲ್ಲೆಗಳಲ್ಲಿ, ಪೂರ್ವಕ್ಕೆ ವಕ್ಷರಾದ್ರಿಯೂ, ಉತ್ತರಕ್ಕೆ ನೀಲಾಚಲವೂ ಮತ್ತು ದಕ್ಷಿಣಕ್ಕೆ ಸೀತೋದಾನದಿಯೂ, ಇರುವುವೆಂದು ಮೂರು ಎಲ್ಲೆಗಳನ್ನು ಮಾತ್ರ ವಿವರಿಸಿರುವನು. ಆದರೆ ಪಶ್ಚಿಮ ದಿಕ್ಕಿನ ಎಲ್ಲೆಯನ್ನು ಕೈಬಿಟ್ಟಿರುವನು. ಶಾಸ್ತ್ರಗಳ ಪ್ರಕಾರ ಆ ಏಳನೆಡೆಯ ನಾಡಿನ ಪಶ್ಚಿಮಕ್ಕೆ 'ಸುಗಂಧಾ' ಎಂಬ ನಾಡಿದ್ದು ಈ ಎರಡೂ ನಾಡುಗಳ ಅಂದರೆ ಆ ಏಳನೇ ನಾಡಿನ ಮತ್ತು ಸುಗಂಧ ನಾಡುಗಳ ಗಡಿಯುದ್ದಕ್ಕೂ ದಕ್ಷಿಣೋತ್ತರವಾಗಿ **'ಊರ್ಮಿಮಾಲಿನೀ'** ಎಂಬ ವಿಭಂಗ ನದಿಯು ಹರಿಯುತ್ತಿದೆ.

೪. ಆ ಏಳನೆಯೆಡೆಯ ನಾಡಿನ ಪಶ್ಚಿಮಕ್ಕೆ: ಊರ್ಮಿಮಾಲಿನೀ ನದಿ (ಅಂದರೆ ಊರ್ಮಿಮಾಲಿನೀ ನದಿಯ ಪೂರ್ವಕ್ಕಿರುವ ಏಳನೆಯೆಡೆಯದಾದ ನಾಡು).

ಈ **ಊರ್ಮಿಮಾಲಿನೀ** ಎಂಬ ನದಿಯ ಉಲ್ಲೇಖ ಈ ಪದ್ಯದಲ್ಲಿಲ್ಲ. ಕವಿಯು ಇದೇ ಆಶ್ವಾಸದ ೧–೬೧ ನೆಯ ಪದ್ಯದಲ್ಲಿ ಈ ನದಿಯ ಹೆಸರನ್ನು ಉಲ್ಲೇಖಿಸಿ ಅದರ ಸೌಂದರ್ಯವನ್ನು ವರ್ಣಿಸಿದ್ದಾನೆ. ಆದರೆ **ಪೂರ್ವಪುರಾಣ**ದ ಈ ಕೆಳಗಿನ ಶ್ಲೋಕದಲ್ಲಿ

ಆ ಗಂಧಿಲ ದೇಶದ (ಪದ್ಯದಲ್ಲಿ ಹೇಳುವ ಆ ವಿಳನೆಯೆಡೆಯ ನಾಡಿನ) ನಾಲ್ಕೂ ದಿಕ್ಕುಗಳ ಎಲ್ಲೆಗಳನ್ನು ವಿವರಿಸಿರುವರು:

ಇಹ ಜಂಬೂಮತಿ ದ್ವೀಪೇ ಮೇರೋಃ ಪ್ರತ್ಯಗ್ದಿಗಾಶ್ರಿತಃ ।
ವಿಷಯೋ ಗಂಧಿಲಾಭಿಖ್ಯೋ ಭಾತಿ ಸ್ವರ್ಗೈಕಖಂಡವತ್ ॥ಪೂ.ಪು., ೪–೫೧॥

ಅರ್ಥ: ಈ ಜಂಬೂದ್ವೀಪದಲ್ಲಿ ಮಹಾಮೇರು ಪರ್ವತದ ಪಶ್ಚಿಮ ಭಾಗದಲ್ಲಿ ಗಂಧಿಲವೆಂದು ಹೆಸರುಳ್ಳ ದೇಶವು, ಸ್ವರ್ಗದ ಒಂದು ಭಾಗದಂತೆ, ಪ್ರಕಾಶಿಸುತ್ತಿದೆ.

ಪೂರ್ವಾಪರಾವಧೀ ತಸ್ಯ ದೇವಾದ್ರಿಶ್ಚೋರ್ಮಿಮಾಲಿನೀ ।
ದಕ್ಷಿಣೋತ್ತರಪರ್ಯಂತೌ ಸೀತೋದಾ ನೀಲ ಏವ ಚ ॥ಪೂ.ಪು., ೪–೫೨॥

ಅರ್ಥ: [ಆ ಗಂಧಿಲದೇಶಕ್ಕೆ] ಪೂರ್ವದಿಕ್ಕಿನಲ್ಲಿ ದೇವಮಾಲವೆಂಬ ವಕ್ಷರಾ ಪರ್ವತವೂ, ಪಶ್ಚಿಮದಿಕ್ಕಿನಲ್ಲಿ ಊರ್ಮಿಮಾಲಿನೀ ಯೆಂಬ ವಿಭಂಗನದಿಯೂ, ದಕ್ಷಿಣದಿಕ್ಕಿನಲ್ಲಿ ಸೀತೋದಾನದಿಯೂ, ಉತ್ತರದಿಕ್ಕಿನಲ್ಲಿ ನೀಲಪರ್ವತವೂ ಎಲ್ಲೆಯಾಗಿವೆ. ಇವುಗಳ ಮಧ್ಯದಲ್ಲಿ ಗಂಧಿಲದೇಶವಿದೆಯೆಂದು ಭಾವವು.

ಅಪಗತವಿಳಯಂ: ಎಂದರೆ ಪ್ರಳಯದಿಂದ ದೂರಾದದ್ದು, ನೈಸರ್ಗಿಕ ವಿಪತ್ತುಗಳಿಲ್ಲದಿರುವುದು ಎಂದೂ, ಶಾಶ್ವತವಾಗಿರುವುದು ಎಂದೂ ಅರ್ಥವಾಗುತ್ತದೆ.

ಕಂದ **ಬಕಕುರರ[1]ಪಕ್ಷ ವಿಕ್ಷಿ**
ಪ್ತಕಂಜಕಿಂಜಲ್ಕಪುಂಜಪಿಂಜರಿತಾಚ್ಛೋ
ದಕಪರಿಪೂರ್ಣತಟಾಕ
ಪ್ರಕರಸರೋನಿಕರರಂಜಿತಾಶಾವಳಯಂ ॥ ೧–೫೮

ಪದ ವಿಭಾಗ: ಬಕ, ಕುರರ, ಪಕ್ಷ, ವಿಕ್ಷಿಪ್ತ,
ಕಂಜ, ಕಿಂಜಲ್ಕ, ಪುಂಜ, ಪಿಂಜರಿತ,
ಅಚ್ಛೋದಕ, ಪರಿಪೂರ್ಣ, ತಟಾಕ,
ಪ್ರಕರ, ಸರೋನಿಕರ, ರಂಜಿತ, ಆಶಾವಳಯಂ ॥ ೧–೫೮

ಅನ್ವಯಾರ್ಥ: **(ಬಕ ಕುರರ)** ಕೊಕ್ಕರೆ, ಮರಕೂಟವಕ್ಕಿಗಳ [ಕುರರ ಪಕ್ಷಿಗಳ] **(ಪಕ್ಷ)** ರೆಕ್ಕೆಗಳಿಂದ **(ವಿಕ್ಷಿಪ್ತ)** ಚೆಲ್ಲಾಡಿದ **(ಕಂಜ)** ಕಮಲದ **(ಕಿಂಜಲ್ಕ)** ಕೇಸರಗಳ **(ಪುಂಜ)** ರಾಶಿಯಿಂದ **(ಪಿಂಜರಿತ)** ಹೊಂಬಣ್ಣಕ್ಕೆ ತಿರುಗಿದ **(ಅಚ್ಛೋದಕ= ಅಚ್ಛ+ಉದಕ)** ಸ್ವಚ್ಛವಾದ ನೀರಿನಿಂದ **(ಪರಿಪೂರ್ಣ)** ಭರ್ತಿಯಾಗಿರುವ **(ತಟಾಕ)** ಕೆರೆಗಳ **(ಪ್ರಕರ)** ಸಮೂಹ, **(ಸರೋನಿಕರ?)** ಸರೋವರಗಳ ಸಮೂಹ [ಇವುಗಳಿಂದ ಕೂಡಿ] **(ರಂಜಿತ ಆಶಾವಳಯಂ)** [ಗಂಧಿಳ ನಾಡಿನ] ದಿಙ್ಮಂಡಲವು ಮನೋಹರವಾಗಿದ್ದಿತು ॥ ೧–೫೮

ಭಾವಾರ್ಥ: ಕೊಕ್ಕರೆ, ಮರಕೂಟವಕ್ಕಿಗಳ [ಕುರರ ಪಕ್ಷಿಗಳ] ರೆಕ್ಕೆಗಳಿಂದ ಚೆಲ್ಲಾಡಿದ ಕಮಲದ ಕೇಸರಗಳಿಂದ ಹೊಂಬಣ್ಣಕ್ಕೆ ತಿರುಗಿದ ಸ್ವಚ್ಛವಾದ ನೀರಿನಿಂದ ತುಂಬಿರುವ ಕೆರೆಗಳ ಸಮೂಹ ಮತ್ತು ಸರೋವರಗಳ ಸಮೂಹಗಳಿಂದ ಕೂಡಿ ಗಂಧಿಳ ನಾಡು ಮನೋಹರವಾದ ದಿಙ್ಮಂಡಲವಾಗಿದ್ದಿತು (ನಾಡಾಗಿದ್ದಿತು). ೧–೫೮

ಕಂದ **ಪಸರಿಸಿ ದುಗ್ಧಾಬ್ಧಿಜಳ**
ಪ್ರಸರಮನೊಡವೇಱ ಬಂದು ಕಱೆವುವು ಮೇಘ
ಪ್ರಸರಂಗಳಲ್ಲಿಯೆನೆ ರಸ
ಮೊಸರ್ವುವು ಪುಂಡ್ರೇಕ್ಷುವಾಟಕೋಟಿಗಳದಱೊಳ್ ॥ ೧–೫೯

ಪದ ವಿಭಾಗ: ಪಸರಿಸಿ, ದುಗ್ಧಾಬ್ಧಿ, ಜಳಪ್ರಸರಮನ್,

[1] ಕುರರ–ಉತ್ಕ್ರೋಶಃ, ಕುರರಃ–ಈ ಎರಡು ಮರಕೂಟವಕ್ಕಿ (ಅಭಿಧಾನರತ್ನಮಾಲ ಕರ್ಣಾಟಕ ಟೀಕೆ, ಭೂಮಿಕಾಂಡ, ೨–೯೬, ಪು. ೪೨)

ಒಡವೇಱಿ, ಬಂದು, ಕಱಿವುವು,
ಮೇಘಪ್ರಸರಂಗಳ್, ಅಲ್ಲಿ, ಎನೆ; ರಸಂ,
ಒಸರ್ವುವು, ಪುಂಡ್ರೇಕ್ಷು–ವಾಟಿ–ಕೋಟಿಗಳ್, ಅದಱೊಳ್ ॥ ೧–೫೯

ಅನ್ವಯಾರ್ಥ: **(ದುಗ್ಧಾಬ್ಧಿ=ದುಗ್ಧ+ಅಬ್ಧಿ)** ಕ್ಷೀರಸಮುದ್ರದ **(ಜಳಪ್ರಸರಮನ್)** ಜಲರಾಶಿಯನ್ನು [ನೀರನ್ನು] **(ಮೇಘ ಪ್ರಸರಂಗಳ್)** ಮೋಡಗಳ ಸಮೂಹವು **(ಒಡವೇಱಿ)** ತಮ್ಮೊಡನೆ ಹೇರಿಕೊಂಡು **(ಬಂದು)** ಬಂದು **(ಅಲ್ಲಿ)** ಆ ಗಂಧಿಲ ನಾಡಿನೆಲ್ಲೆಡೆ **(ಪಸರಿಸಿ)** ವ್ಯಾಪಕವಾಗಿ **(ಕಱಿವುವು)** ಮಳೆಗರೆಯುತ್ತಿರುವುವೋ **(ಎನೆ)** ಎನ್ನುವಂತೆ, **(ಅದಱೊಳ್)** ಆ ಗಂಧಿಲ ನಾಡಿನಲ್ಲಿ **(ಪುಂಡ್ರೇಕ್ಷು=ರಸದಾಳಿ ಕಬ್ಬು)** ಪಟಾವಳಿ ಕಬ್ಬಿನ **(ವಾಟಿ ಕೋಟಿಗಳ್)** ಅಸಂಖ್ಯಾತ ತೋಟದ ಬಯಲುಗಳು **(ರಸವೊಸರ್ವುವು=ರಸಂ+ಒಸರ್ವುವು)** ರಸವನ್ನು ಸ್ರವಿಸುತ್ತಿರುವುವು ॥ ೧–೫೯

ಕವಿಯು ಈ ಕಂದಪದ್ಯದಲ್ಲಿ ಗಂಧಿಳನಾಡಿನಲ್ಲಿರುವ ಸಮೃದ್ಧವಾದ ರಸಪೂರಿತ ಪಟಾವಳಿ ಕಬ್ಬಿನ ತೋಟದ ಹಾಗೂ ಮುಂದಿನ ೧–೬೦ ನೆಯ ಕಂದಪದ್ಯದಲ್ಲಿ ಫಸಲಿಗೆ ಬಂದಿರುವ ಬತ್ತದ ಗದ್ದೆಯ ವರ್ಣನೆಯನ್ನು ಮಾಡಿ, ತನ್ಮೂಲಕ ಅಲ್ಲಿನ ಶ್ರೇಷ್ಠಗುಣಮಟ್ಟದ ಕೃಷಿಭೂಮಿಯ ಫಲವತ್ತತೆಯನ್ನು ವರ್ಣಿಸಿ, ೧–೫೨ ನೆಯ ವೃತ್ತಪದ್ಯದ ನಾಲ್ಕನೆಯ ಪಾದದಲ್ಲಿ ಹೇಳಿರುವ 'ಧಾತ್ರಿ ಪುಸಿವೋಗದು' ಎನ್ನುವ ತನ್ನ ಮಾತನ್ನು ಪುಷ್ಟೀಕರಿಸುವನು.

ಭಾವಾರ್ಥ: ಕ್ಷೀರಸಮುದ್ರದ ನೀರನ್ನು ಮೋಡಗಳ ಸಮೂಹವು ತಮ್ಮೊಡನೆ ಹೇರಿಕೊಂಡು ಬಂದು ಆ ಗಂಧಿಲ ನಾಡಿನೆಲ್ಲೆಡೆ ವ್ಯಾಪಿಸಿ ಮಳೆಗರೆಯುತ್ತಿರುವುವೋ ಎನ್ನುವಂತೆ, ಆ ಗಂಧಿಲ ನಾಡಿನಲ್ಲಿ ಪಟಾವಳಿ ಕಬ್ಬಿನ ಅಸಂಖ್ಯಾತ ತೋಟದ ಬಯಲುಗಳು ರಸವನ್ನು ಸ್ರವಿಸುತ್ತಿರುವುವು. ೧–೫೯

ಕಂದ **ಮಡು[1]ಗಳೊಳಗಲರ್ದ ನೆಯ್ದಿಲ**
ಕಡುಗಂಪುಮನಿವಱ ಕಂಪೆ[2] ಗೆಲ್ದುವು ಸಾಸಿ
ರ್ಮಡಿಯೆನೆ ಪೊಂಬಣ್ಣದ ಕೆಂ
ಪಿಡಿದಿರೆ ಸೊಗಯಿಪುವು ಗಂಧಶಾಳಿವನಂಗಳ್ ॥ ೧–೬೦

ಪದ ವಿಭಾಗ: ಮಡುಗಳೊಳಗೆ, ಅಲರ್ದ, ನೆಯ್ದಿಲ,
ಕಡುಗಂಪುಮನ್, ಇವಱ, ಕಂಪೆ, ಗೆಲ್ದುವು,
ಸಾಸಿರ್ಮಡಿ, ಎನೆ, ಪೊಂಬಣ್ಣದ,
ಕೆಂಪಿಡಿದಿರೆ, ಸೊಗಯಿಪುವು, ಗಂಧಶಾಳಿ–ವನಂಗಳ್ ॥ ೧–೬೦

ಅನ್ವಯಾರ್ಥ: **(ಮಡುಗಳೊಳಗಲರ್ದ=ಮಡುಗಳೊಳಗೆ+ಅಲರ್ದ)** ಸರೋವರಗಳಲ್ಲಿ ಅರಳಿರುವ **(ನೆಯ್ದಿಲ)** ನೈದಿಲೆ ಹೂವುಗಳ **(ಕಡುಗಂಪುಮನಿವಱ=ಕಡುಗಂಪುಮನ್+ಇವಱ)** ಗಾಢವಾದ ಪರಿಮಳವನ್ನು, ಇವುಗಳ [ಬತ್ತದ ಗದ್ದೆಗಳ] **(ಕಂಪೆ)** ಪರಿಮಳವೇ **(ಸಾಸಿರ್ಮಡಿ=ಸಾಸಿರ+ಮಡಿ)** ಸಾವಿರಮಡಿಯಾಗಿ [ಸಾವಿರಪಟ್ಟು] **(ಗೆಲ್ದುವು)** ಮೀರಿಸಿದವೋ **(ಎನೆ)** ಎನ್ನುವಂತೆ, **(ಪೊಂಬಣ್ಣದ ಕೆಂಪಿಡಿದಿರೆ)** ಹೊಂಬಣ್ಣದ ಕೆಂಪನ್ನು ತುಂಬಿಕೊಂಡಿರುವ **(ಗಂಧಶಾಳಿ ವನಂಗಳ್)** ಗಂಧಶಾಳಿ ಬತ್ತದ ಗದ್ದೆಗಳು **(ಸೊಗಯಿಪುವು)** ಸೊಗಸಾಗಿ ಕಾಣುತ್ತಿರುವುವು ॥ ೧–೬೦

ಭಾವಾರ್ಥ: ಗಂಧಿಳನಾಡಿನ ಸರೋವರಗಳಲ್ಲಿ ಅರಳಿರುವ ನೈದಿಲೆ ಹೂವುಗಳ ಗಾಢವಾದ ಪರಿಮಳವನ್ನು, ಅಲ್ಲಿನ ಬತ್ತದ ಗದ್ದೆಗಳ ಪರಿಮಳವೇ ಸಾವಿರಪಟ್ಟು ಮೀರಿಸಿದವೋ ಎನ್ನುವಂತೆ, ಹೊಂಬಣ್ಣದ ಕೆಂಪನ್ನು ತುಂಬಿಕೊಂಡಿರುವ ಗಂಧಶಾಳಿ ಬತ್ತದ ಗದ್ದೆಗಳು ಸೊಗಸಾಗಿ ಕಾಣುತ್ತಿರುವುವು. ೧–೬೦

ವಿಶೇಷ ವಿವರಣೆ: ಗಂಧಶಾಳಿ ಅಥವಾ **ಗಂಧಶಾಲಿ** ಅಥವಾ **ಗಂಧಸಾಲೆ:** ಎನ್ನುವುದು ಒಂದು ಜಾತಿಯ ಸುವಾಸನಾಯುಕ್ತ

[1] ಮೂಲಪಾಠ–'ಮಡಿಗಳೊಳ', ಕೆಜಿ ಯವರ ಪಾಠ–'ಮಡುಗಳೊಳ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಕಂಪು', ನಾಗವರ್ಮನ ಕಾವ್ಯಾವಲೋಕನಂ (ಸೂತ್ರಂ ೧೨೧, ಪದ್ಯ ಸಂ. ೫೧೩) ಪಾಠ–'ಕಂಪೆ', ಇಲ್ಲಿ ಕಾವ್ಯಾವಲೋಕನದ ಪಾಠವನ್ನು ಸ್ವೀಕರಿಸಿದೆ.

ಬತ್ತದ ಹೆಸರು (ಶಾಲಿ=ಬತ್ತ). ಇದೇ ಆಶ್ವಾಸದ ೧–೭ ಮತ್ತು ೧–೮ ನೆಯ ಪದ್ಯಗಳ **ವಿಶೇಷ ವಿವರಣೆ**ಗಳಲ್ಲಿ ಹೆಸರಿಸಿರುವ ಸ್ಥಳನಾಮವಾದ **'ಸಾಲಿಗ್ರಾಮ'** ಎಂಬುದು **'ಶಾಲಿ'** ಶಬ್ದದಿಂದಲೇ ಬಂದದ್ದು. **ಸಾಲಿಗ್ರಾಮ** ಶಬ್ದದ ಶುದ್ಧರೂಪ **ಶಾಲಿಗ್ರಾಮ** ಎಂಬುದಾಗಿದ್ದು, ಅದರ ಅರ್ಥ **ಬತ್ತಬೆಳೆಯುವ ಗ್ರಾಮ** ಎಂದಾಗಿರುತ್ತದೆ. (ಇಲ್ಲಿ ಸಾಲಿಗ್ರಾಮವೆಂದರೆ ಸಾಲಿಗ್ರಾಮಶಿಲೆಯಲ್ಲ.)

ವ ॥ ಮತ್ತಮಲ್ಲಿ– **೧–೬೦ (ವ)**

ಪದ ವಿಭಾಗ: ವ.ಪಾ. ॥ ಮತ್ತಂ+ಅಲ್ಲಿ ೧–೬೦ (ವ)

ಅನ್ವಯಾರ್ಥ: (ಮತ್ತಂ) ಅಲ್ಲದೇ **(ಅಲ್ಲಿ)** ಆ ಗಂಧಿಲ ನಾಡಿನಲ್ಲಿ, ೧–೬೦ (ವ)

ಭಾವಾರ್ಥ: ಇಷ್ಟೇ ಅಲ್ಲದೆ ಆ ಗಂಧಿಲನಾಡಿನಲ್ಲಿ, ೧–೬೦ (ವ)

ಉತ್ಪಲಮಾಲೆ **ಕೊಂಕಿದ ಕೊಂಕು ತದ್ವಿಷಯಕಾಂತೆಯ ಪುರ್ವಿನ ಕೊಂಕಿನಂತೆ ಚೆ**
ಲ್ವಂ ಕುಡೆ ತಳ್ತೆರಟ್ಟಡಿಯ ಪೂಮರದಿಂ ಕಳಿವೂ[1]ಗಳತ್ತಮಿ
ತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ
ನೂಂಕುವುವೂರ್ಮಿಮಾಳಿನಿಯ ತುಂಗತರತ್ತರಳೋರ್ಮಿಮಾಲೆಗಳ್ ॥ ೧–೬೧

ಪದ ವಿಭಾಗ: ಕೊಂಕಿದ–ಕೊಂಕು, ತದ್ವಿಷಯ, ಕಾಂತೆಯ, ಪುರ್ವಿನ, ಕೊಂಕಿನಂತೆ,
ಚೆಲ್ವಂ, ಕುಡೆ; ತಳ್ತ, ಎರಟ್ಟಡಿಯ, ಪೂಮರದಿಂ, ಕಳಿವೂಗಳ್, ಅತ್ತಮಿತ್ತಂ,
ಕವಿದು, ಅಲ್ಲಿ, ಮೆಲ್ಲನೆ, ಉಗೆ, ತೇಂಕುವ, ಪೂವಿನ, ಸಂಕರಂಗಳಂ,
ನೂಂಕುವುವು, ಊರ್ಮಿಮಾಳಿನಿಯ, ತುಂಗ, ತರತ್ತರಳ, ಊರ್ಮಿ–ಮಾಲೆಗಳ್ ॥ ೧–೬೧

ಅನ್ವಯಾರ್ಥ: (ಕೊಂಕಿದ ಕೊಂಕು) ಅಂಕುಡೊಂಕಾಗಿ [ಹರಿಯುವ ಊರ್ಮಿಮಾಳಿನೀನದಿಯು] **(ತದ್ವಿಷಯಕಾಂತೆಯ= ತತ್+ವಿಷಯ+ಕಾಂತೆಯ)** ಆ [ಗಂಧಿಲ] ನಾಡಿನ ಹೆಣ್ಣಿನ **(ಪುರ್ವಿನ ಕೊಂಕಿನಂತೆ)** ಕಣ್ಣುಬ್ಬಿನ ವಕ್ರತೆಯಂತೆ [ಕಣ್ಣುಬ್ಬಿನ ವಕ್ರತೆಯು ಆ ಹೆಣ್ಣಿಗೆ ಚೆಲುವನ್ನು ನೀಡುವಂತೆ] **(ಚೆಲ್ವಂ ಕುಡೆ)** [ಗಂಧಿಲ ನಾಡಿಗೆ] ಚೆಲುವನ್ನು ನೀಡಿರಲು, **(ತಳ್ತೆರಟ್ಟಡಿಯ=ತಳ್ತ+ಎರಟು್+ತಡಿಯ)** ದಟ್ಟೈಸಿ [ಬೆಳೆದು ನಿಂತಿರುವ ನದಿಯ] ಎರಡೂ ತೀರಗಳ **(ಪೂಮರದಿಂ)** ಹೂವಿನ ಮರಗಳಿಂದ, **(ಕಳಿವೂಗಳತ್ತಮಿತ್ತಂ=ಕಳಿವೂಗಳ್+ಅತ್ತಂ+ಇತ್ತಂ)** [ಪೂರ್ತಿ ಅರಳಿ] ಪಕ್ವವಾದ ಹೂಗಳು ಆ ಕಡೆಯ [ತೀರದಿಂದಲೂ] ಈ ಕಡೆಯ [ತೀರದಿಂದಲೂ] **(ಕವಿದಲ್ಲಿ=ಕವಿದು+ಅಲ್ಲಿ)** [ನದಿಯನ್ನು] ಮುಸುಕಿ ನದಿಯಲ್ಲಿ **(ಮೆಲ್ಲನುಗೆ=ಮೆಲ್ಲನೆ+ಉಗೆ)** ಮೆಲ್ಲಗೆ ಕಳಚಿ ಬೀಳಲು, [ಹಾಗೆ ನದಿಯೊಳಗೆ ಉದುರಿ] **(ತೇಂಕುವ)** ತೇಲುತ್ತಿರುವ, **(ಪೂವಿನ)** [ಆ ವಿವಿಧ ಜಾತಿಯ] ಹೂವಿನ **(ಸಂಕರಂಗಳಂ)** ಕಲಬೆರಕೆಯ ರಾಶಿಯನ್ನು **(ಊರ್ಮಿಮಾಳಿನಿಯ)** ಊರ್ಮಿಮಾಳಿನಿ ನದಿಯ **(ತುಂಗತರತ್ತರಳೋರ್ಮಿಮಾಲೆಗಳ್=ತುಂಗ–ತರತ್ತರಳ+ಊರ್ಮಿಮಾಲೆಗಳ್)** ಉನ್ನತವೂ ಚಂಚಲವೂ ಆದ ತರಂಗ ಮಾಲೆಗಳು [ಅಲೆಗಳ ಸಾಲುಗಳು] **(ನೂಂಕುವುವು)** ನೂಕುತ್ತಿರುವುವು ॥ ೧–೬೧

ಈ ಮೇಲೆ ೧–೫೬ ನೆಯ ಪದ್ಯದ **ವಿಶೇಷ ವಿವರಣೆ**ಯಲ್ಲಿ ತಿಳಿಸಿರುವಂತೆ, ಗಂಧಿಲನಾಡಿನ ಪಶ್ಚಿಮದಲ್ಲಿ ಹರಿಯುತ್ತಿರುವ ಊರ್ಮಿಮಾಲಿನೀ ನದಿಯ ಸೌಂದರ್ಯವನ್ನು ಈ ಪದ್ಯದಲ್ಲಿ ಕವಿಯು ವರ್ಣಿಸಿದ್ದಾನೆ.

ಭಾವಾರ್ಥ: ಆ ಗಂಧಿಲ ನಾಡಿನ ಹೆಣ್ಣಿನ ಕಣ್ಣುಬ್ಬಿನ ವಕ್ರತೆಯಂತೆ ಅಂದರೆ ಕಣ್ಣುಬ್ಬಿನ ವಕ್ರತೆಯು ಆ ಹೆಣ್ಣಿಗೆ ಚೆಲುವನ್ನು ನೀಡುವಂತೆ, ಅಂಕುಡೊಂಕಾಗಿ ಹರಿಯುವ ಊರ್ಮಿಮಾಳಿನೀನದಿಯು ಗಂಧಿಲ ನಾಡಿಗೆ ಚೆಲುವನ್ನು ನೀಡಿದೆ. ಆ ನದಿಯ ಎರಡೂ ತೀರಗಳಲ್ಲಿ ದಟ್ಟೈಸಿ ಬೆಳೆದು ನಿಂತಿರುವ ಹೂವಿನ ಮರಗಳಿಂದ, ಪೂರ್ತಿ ಅರಳಿ ಪಕ್ವವಾದ ಹೂಗಳು ನದಿಯೊಳಕ್ಕೆ ಮೆಲ್ಲನೆ ಉದುರಿ ಆ ಕಡೆಯ ತೀರದಿಂದಲೂ ಈ ಕಡೆಯ ತೀರದಿಂದಲೂ ನದಿಯನ್ನು ಮುಸುಕಿವೆ. ನದಿಯಲ್ಲಿ ತೇಲುತ್ತಿರುವ ಆ ವಿವಿಧ ಜಾತಿಯ ಹೂಗಳ ರಾಶಿಯನ್ನು ಊರ್ಮಿಮಾಳಿನಿನದಿಯ ಉನ್ನತವಾದ ಅಲೆಗಳು

---

[1] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಕಱುವೂ', ಸ್ವೀಕರಿಸಿದ ಪಾಠ–'ಕಳಿವೂ', ವಿವರಣೆಗೆ ಆಶ್ವಾಸದ ಅಂತ್ಯದಲ್ಲಿರುವ **'ಪಾಠಭೇದ ವಿಚಾರ:'** ಅನ್ನು ನೋಡಿರಿ.

ನೂಕುತ್ತಿರುವುವು. ೧–೬೧

ವಿಶೇಷ ವಿವರಣೆ: ಈ ಗಂಧಿಲ ನಾಡಿನ ಪಶ್ಚಿಮದ ಗಡಿ ಭಾಗದಲ್ಲಿ ಊರ್ಮಿಮಾಳಿನೀ ಎಂಬ ನದಿಯು ಹರಿಯುತ್ತಿರುವುದು. ಕವಿಯು ಈ ನದಿಯ ಬಗ್ಗೆ ಯಾವುದೇ ಪರಿಚಯಾತ್ಮಕ ಪೀಠಿಕೆಯನ್ನು ನೀಡದೆ ಇದರ ಹೆಸರನ್ನು ಇಲ್ಲಿ ನೇರವಾಗಿ ಉಲ್ಲೇಖಿಸಿ ಅದನ್ನು ವರ್ಣಿಸುತ್ತಿರುವನು. ಇಲ್ಲಿ ಕವಿಯು ನೀರಿನ ತರಂಗಗಳನ್ನು '**ಮಾಲೆ**'ಗಳಿಗೆ ಹೋಲಿಸಿರುತ್ತಾನೆ. ಈ ಪದ್ಯದಲ್ಲಿ ಕವಿಯು '**ಊರ್ಮಿಮಾಳಿನಿ**' ಎಂಬ ನದಿಯ ಹೆಸರಿಗೂ, ಹಾಗೆಯೇ '**ಊರ್ಮಿಮಾಲೆ**' ಎಂದರೆ '**[ನೀರಿನ] ತರಂಗಗಳ ಹಾರ**' ಎಂಬ ಅರ್ಥಕ್ಕೂ, ಶ್ಲೇಷಾಲಂಕಾರವನ್ನು ಇಟ್ಟಿರುತ್ತಾನೆ. ಹೆಚ್ಚಿನ ವಿವರಗಳಿಗೆ ಮೇಲಿನ ೧–೫೬ ನೆಯ ಕಂದಪದ್ಯಕ್ಕೆ ಕೊಟ್ಟಿರುವ **ವಿಶೇಷ ವಿವರಣೆ**ಯನ್ನು ನೋಡಿರಿ.

ಮತ್ತೇಭ ವಿಕ್ರೀಡಿತ

ಕನಕಾಂಭೋಜರಜಂ ನಿಜಾಂಗರುಚಿಯಂ ಕನ್ನೆಯ್ದಿಲಿಂದಂ ಕಟಿ
ಲ್ದಿನಿಸಂ ತೂಳ್ದಿ ತೆರಳ್ದೆಸಳ್ನಯನಮಂ ಕಂಪಂ ಕೊಳಲ್ಬರ್ಪ ಭೃಂ
ಗನಿಕಾಯಂ ನಿಜಕೇಶಪಾಶರುಚಿಯಂ ಕೈಕೊಳ್ವಿನಂ[1] ಮೆಲ್ಲಮೆ
ಲ್ಲನೆ ನೋಟಕ್ಕೆ ಸದೇಹಮಾಗಿ ಸುೞಿಯುತ್ತಿರ್ಕುಂ ವಿದೇಹಾನಿಳಂ ॥ ೧–೬೨

ಪದ ವಿಭಾಗ: ಕನಕಾಂಭೋಜರಜಂ–ನಿಜಾಂಗರುಚಿಯಂ; ಕನ್ನೆಯ್ದಿಲಿಂದಂ,
ಕಟಿಲ್ದು, ಇನಿಸಂ, ತೂಳ್ದಿ, ತೆರಳ್ದ, ಎಸಳ್, ನಯನಮಂ; ಕಂಪಂ, ಕೊಳಲ್ಬರ್ಪ,
ಭೃಂಗನಿಕಾಯಂ, ನಿಜ, ಕೇಶಪಾಶ, ರುಚಿಯಂ; ಕೈಕೊಳ್ವಿನಂ, ಮೆಲ್ಲಮೆಲ್ಲನೆ–
ನೋಟಕ್ಕೆ–ಸದೇಹಮಾಗಿ–ಸುೞಿಯುತ್ತಿರ್ಕುಂ–ವಿದೇಹ, ಅನಿಳಂ ॥ ೧–೬೨

ಅನ್ವಯಾರ್ಥ: **(ಕನಕಾಂಭೋಜರಜಂ=ಕನಕ+ಅಂಭೋಜ–ರಜಂ)** [ಗಂಧಿಳನಾಡಿನಲ್ಲಿ, ಗಾಳಿಯಲ್ಲಿ ಹಾರಿದ] ಹೊಂದಾವರೆಗಳ ಪರಾಗರೇಣುಗಳು **(ನಿಜಾಂಗರುಚಿಯಂ=ನಿಜ+ಅಂಗ–ರುಚಿಯಂ)** ತನ್ನ ದೇಹದ ಕಾಂತಿಯನ್ನೂ [ಅಂದರೆ, ಆ ಗಾಳಿಯು ದೇಹದ ರೂಪವನ್ನೂ]; **(ಕನ್ನೆಯ್ದಿಲಿಂದಂ=ಕನ್ನೆಯ್ದಿಲೆ+ಇಂದಂ)** ಕನ್ನೈದಿಲೆಯಿಂದ **(ಕಟಿಲ್ದಿನಿಸಂತೂಳ್ದಿ=ಕಟಿಲ್ದು+ಇನಿಸಂ–ತೂಳ್ದಿ)** ಕಳಚಿಕೊಂಡು ಸ್ವಲ್ಪ ಕೆಳಗಿಳಿದು [ನಂತರ] **(ತೆರಳ್ದೆಸಳ್ನಯನಮಂ=ತೆರಳ್ದ+ಎಸಳ್+ನಯನಮಂ)** [ಗಾಳಿಯಲ್ಲಿ] ಮೇಲೇರಿದ ಹೂವಿನ ದಳವು ಕಣ್ಣುಗಳನ್ನೂ [ಗಾಳಿಯಲ್ಲಿ ಕಣ್ಣುಗಳ ರೂಪವನ್ನೂ]; **(ಕಂಪಂ)** ಪರಿಮಳವನ್ನು **(ಕೊಳಲ್ಬರ್ಪ=ಕೊಳಲ್+ಬರ್ಪ)** ಹೀರಲು ಬರುವ **(ಭೃಂಗನಿಕಾಯಂ)** ದುಂಬಿಗಳ ಸಮೂಹವು **(ನಿಜ)** ತನ್ನ **(ಕೇಶಪಾಶ ರುಚಿಯಂ)** ಸಮೃದ್ಧವಾದ ತಲೆಗೂದಲ ಕಾಂತಿಯನ್ನೂ [ಗಾಳಿಯಲ್ಲಿ ತಲೆಗೂದಲ ರೂಪವನ್ನೂ] **(ಕೈಕೊಳ್ವಿನಂ=ಕೈಕೊಳ್+ಇನಂ[>ಇನ್ನಂ])** ತಳೆದಿರಲು, **(ವಿದೇಹಾನಿಳಂ=ವಿದೇಹ+ಅನಿಳಂ)** ದೇಹರಹಿತವಾದ ಗಾಳಿಯು **(ನೋಟಕ್ಕೆ)** ನೋಡುವುದಕ್ಕೆ **(ಸದೇಹಮಾಗಿ)** ದೇಹಸಹಿತವಾಗಿ **(ಮೆಲ್ಲಮೆಲ್ಲನೆ)** ಮೆಲ್ಲಮೆಲ್ಲಗೆ [ಮಂದಗತಿಯಲ್ಲಿ] **(ಸುಳಿಯುತ್ತಿರ್ಕುಂ)** ಸುಳಿದಾಡುತ್ತಿರುವುದು ॥ ೧–೬೨

ಭಾವಾರ್ಥ: ಹೊಂದಾವರೆಗಳ ಪರಾಗರೇಣುಗಳು ಗಾಳಿಯಲ್ಲಿ ಹಾರಿ, ಗಾಳಿಯು ದೇಹದ ರೂಪವನ್ನೂ; ಕನ್ನೈದಿಲೆಯ ಹೂವಿನಿಂದ ಕಳಚಿಕೊಂಡು ಗಾಳಿಯಲ್ಲಿ ಮೇಲೇರಿದ ಅದರ ದಳವು ಕಣ್ಣುಗಳ ರೂಪವನ್ನೂ; ಪರಿಮಳವನ್ನು ಹೀರಲು ಬರುವ ದುಂಬಿಗಳ ಸಮೂಹವು ಗಾಳಿಯ ಸಮೃದ್ಧವಾದ ತಲೆಗೂದಲ ರೂಪವನ್ನೂ ತಳೆದು, ಗಂಧಿಳನಾಡಿನಲ್ಲಿ, ದೇಹರಹಿತವಾದ ಗಾಳಿಯೂ ಕೂಡ ನೋಡುವುದಕ್ಕೆ ದೇಹಸಹಿತವಾಗಿ ಮೆಲ್ಲಮೆಲ್ಲಗೆ [ಮಂದಗತಿಯಲ್ಲಿ] ಸುಳಿದಾಡುತ್ತಿರುವುದೋ ಎನ್ನುವಂತೆ ತೋರುತ್ತಿರುವುದು. ೧–೬೨

ವಿಶೇಷ ವಿವರಣೆ: ಕವಿಗೆ ಗಂಧಿಲ ನಾಡಿನಲ್ಲಿ ಬೀಸುತ್ತಿರುವ ತಂಗಾಳಿಯು ದೇಹಧಾರಣೆ ಮಾಡಿದಂತೆ ತೋರುತ್ತಿದೆ !! ಹೊಂದಾವರೆಯ ಕೇಸರಗಳು ಗಾಳಿಯಲ್ಲಿ ಬೆರತು ತಂಗಾಳಿಗೆ ಬಂಗಾರದ ಬಣ್ಣವನ್ನು ನೀಡಿವೆ. ಹೀಗೆ, ಮೊದಲು ತಂಗಾಳಿಯು ಬಂಗಾರದ ಬಣ್ಣಹೊಂದಿರುವ ಭೌತಿಕ ದೇಹವನ್ನು ಪಡೆದುಕೊಂಡಿತು. ನಂತರ ನೈದಿಲೆಯ ದಳವು ಹೂವಿನಿಂದ ಕಳಚಿ ಬೀಳಲಾಗಿ, ಅದು ತಂಗಾಳಿಯಲ್ಲಿ ತೇಲಿ ಮೇಲೇರಿ ಹೋದಾಗ ಅದು ತಂಗಾಳಿಯ ದೇಹದ ಕಣ್ಣುಗಳ ರೂಪವನ್ನು ಪಡೆದವು. ಪುಷ್ಪಗಳಲ್ಲಿರುವ ಕಂಪನ್ನು ಹೀರಲು ಹಾರಿ ಬರುತ್ತಿರುವ ದುಂಬಿಯ ಹಿಂಡುಗಳು ಸಮೃದ್ಧವಾದ ತಲೆಗೂದಲರಾಶಿಯಂತೆ

---

[1] ಕೈಕೊಳ್ವಿನಂ=ಕೈಕೊಳ್+ಇನಂ[>ಇನ್ನಂ], **ಇನಂ>ಇನ್ನಂ** ಎನ್ನುವುದು ಸತಿಸಪ್ತಮಿಯ ಪ್ರತ್ಯಯ, ಇದರ ಅರ್ಥ **ಇರಲು, ಇರುತ್ತಿರಲು.**

ಕಂಗೊಳಿಸಿದವು. ಹೀಗೆ ಗಂಧಿಲ ನಾಡಿನಲ್ಲಿ **ವಿದೇಹಾನಿಳ** ಅಂದರೆ **ದೇಹರಹಿತವಾದ ತಂಗಾಳಿಯು ಕನಕಾಂಭೋಜರಜ** ದಿಂದಲೂ, **ಕನ್ನೆಯ್ದಿಲೆ ಎಸಳು**ಗಳಿಂದಲೂ, **ದುಂಬಿವಿಂಡಿ**ನಿಂದಲೂ **ಸದೇಹಮಾಗಿ** ಅಂದರೆ **ದೇಹಸಹಿತವಾಗಿ** ಅಂದರೆ **ದೇಹವನ್ನು ತಳೆದು,** ನೋಡುವುದಕ್ಕೆ ದೇಹಸಹಿತವಾಗಿ ಮಂದಗತಿಯಲ್ಲಿ ಸುಳಿದಾಡುತ್ತಿರುವುದೋ ಎನ್ನುವಂತೆ ತೋರುತ್ತಿರುವುದು. ಉತ್ಪ್ರೇಕ್ಷಾಲಂಕಾರಕ್ಕೆ ಇದು ಒಳ್ಳೆಯ ಉದಾಹರಣೆಯಾದೀತು.

ಕವಿಯು ಈ ಆಶ್ವಾಸದ ೧–೫೬ ನೆಯ ಪದ್ಯದಿಂದ ೧–೬೨ ನೆಯ ಪದ್ಯದವರೆಗೆ ಗಂಧಿಲನಾಡಿನ ವರ್ಣನೆಯನ್ನು ಮಾಡಿರುವನು. (೧) ೧–೫೬ ನೆಯ ಪದ್ಯದಲ್ಲಿ ಗಂಧಿಲ ನಾಡಿನ ಗಡಿಗಳನ್ನು ವಿವರಿಸಿರುವನು; (೨) ೧–೫೭ ನೆಯ ಪದ್ಯದಲ್ಲಿ ನಾಡಿನ ಸಸ್ಯಸಮೃದ್ಧಿಯನ್ನು, ದುಂಬಿಯಾದಿಯಾಗಿ ಮನುಷ್ಯರವರೆಗಿನ ಎಲ್ಲ ಜೀವಿಗಳ ಸುಖ–ಸೌಖ್ಯಗಳನ್ನು ವರ್ಣಿಸಿರುವನು; (೩) ೧–೫೮ ನೆಯ ಪದ್ಯದಲ್ಲಿ ನಾಡಿನ ಜಲಮೂಲ ಸಮೃದ್ಧಿಯನ್ನು ವರ್ಣಿಸಿರುವನು; (೪) ೧–೫೯ ನೆಯ ಪದ್ಯದಲ್ಲಿ ಆ ನಾಡಿನ ಶ್ರೇಷ್ಠ ವಾಣಿಜ್ಯ ಬೆಳೆಯಾದ ಸಮೃದ್ಧ ಪಟಾವಳಿ ಕಬ್ಬಿನ (ಪುಂಡ್ರೇಕ್ಷು) ಬೆಳೆಯ ಬಗ್ಗೆ ವರ್ಣಿಸಿರುವನು; (೫) ೧–೬೦ ನೆಯ ಪದ್ಯದಲ್ಲಿ ಆ ನಾಡಿನ ಮುಖ್ಯ ಆಹಾರ ಬೆಳೆಯಾಗಿರಬಹುದಾದ ಗಂಧಶಾಳಿ ಬತ್ತದ ಬೆಳೆಯ ಬಗ್ಗೆ ವರ್ಣಿಸಿರುವನು, ತನ್ಮೂಲಕ ಆ ನಾಡಿನ ಕೃಷಿಭೂಮಿಯ ಫಲವತ್ತತೆಯನ್ನು ತಿಳಿಸುವನು; (೬) ೧–೬೧ ನೆಯ ಪದ್ಯದಲ್ಲಿ ನಾಡಿನ ಮುಖ್ಯನದಿಯಾದ(?) ಊರ್ಮಿಮಾಳಿನೀ ನದಿಯನ್ನು ಅದರ ಸೌಂದರ್ಯವನ್ನು ವರ್ಣಿಸಿರುವನು; (೭) ೧–೬೨ ನೆಯ ಪದ್ಯದಲ್ಲಿ ಗಂಧಿಲ ನಾಡಿನಲ್ಲಿ ಅಹ್ಲಾದಕರವಾಗಿ ಬೀಸುವ ತಂಗಾಳಿಯ ವರ್ಣನೆಯನ್ನು ಮಾಡಿರುವನು. ಪಂಪನು ಈ ಏಳು ಪದ್ಯಗಳಲ್ಲಿ ವರ್ಣಿಸಿರುವ ಗಂಧಿಲನಾಡಿನ ವರ್ಣನೆಯನ್ನು, ಶ್ರೀ ಜಿನಸೇನಾಚಾರ್ಯರು **ಪೂರ್ವಪುರಾಣ**ದ ೪ ನೆಯ ಪರ್ವದ ೫೧ ನೆಯ ಶ್ಲೋಕದಿಂದ ೮೧ ನೆಯ ಶ್ಲೋಕದವರೆಗಿನ ೩೧ ಶ್ಲೋಕಗಳಲ್ಲಿ ವರ್ಣಿಸಿರುವರು. ಪಂಪನ ಈ ಏಳೂ ಪದ್ಯಗಳೂ **ಪೂರ್ವಪುರಾಣ**ದಲ್ಲಿ ವರ್ಣಿತವಾಗಿರುವ ಧಾಟಿಯಲ್ಲಿದ್ದರೂ, ಇವು ಸಂಪೂರ್ಣವಾಗಿ ಪಂಪನ ಸ್ವತಂತ್ರ ವಿಷಯ ವರ್ಣನೆಯುಳ್ಳವಾಗಿರುತ್ತವೆ.

ವ ॥ ಅಂತನೇಕನದ್ಯುದ್ಯಾನನಾನಾಜನಪದಜನಾನುರಾಗರಸರಮಣೀಯಮಪ್ಪ ಗಂಧಿಳವಿಷಯುದ ನಡುವೆ ತನ್ಮಹೀವಿಳಾಸಿನಿಯ ಮೇಲ್ಗೊಂಡ ದುಕೂಲಮುಮಂ ಅರ್ಹತ್ಪರಮೇಶ್ವರನ ವಿಶದಯಶಃ ಪುಂಜಮುಮಂ ಅನುಕರಿಸಿ ವಿವಿಧವಿದಗ್ಧವಿದ್ಯಾಧರಜನಕ್ರೀಡಾನೀಡಂಗಳಾಗಿ ದಕ್ಷಿಣೋತ್ತರ ಶ್ರೇಢಿ[1] ಗಳ್ಗೆರಾಜಧಾನಿಗಳಾಗಿರ್ದರಥನೂಪುರಚಕ್ರವಾಳಗಗನವಲ್ಲಭಾದಿಗಳಪ್ಪನೂಱು[2]ಪತ್ತುಂ ಪೊೞಲ್ಗಳ ನೊಳಕೊಂಡು ಸಪಾದಷಡ್ಯೋಜನಾವಗಾಹದೊಳಂ ಪಂಚಾಶದ್ಯೋಜನಾಧೋ[3]ವಿಸ್ತಾರದೊಳಂ ತದರ್ಧಯೋಜನೋತ್ಸೇಧದೊಳಂ ದಶಯೋಜನೋಪರಿಮತಳಸಮಾನವಿಸ್ತಾರದೊಳಂ ವಿದ್ಯಾಧ ರಾಭಿಯೋಗ್ಯ[4]ವಿಜಯಾರ್ಧಕುಮಾರನಿವಾಸಾದಿಮೇಖಳಾತ್ರಯದೊಳಂ ಸಿದ್ಧಾಯತನ ಪ್ರಭೃತಿ ನವಕೂಟಂಗಳೊಳಂ ನೆಱೆದು, ೧–೬೨ (ವ)

[1] ಮೂಲಪಾಠ–'ಶ್ರೇಢಿ', ಕೆಜಿ ಯವರ ಪಾಠ–'ಶ್ರೇಣಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ನೂಱು', ಕೆಜಿ ಯವರ ಪಾಠ–'ನೂಱ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಪಂಚಷಡ್ಯೋಜನಾಧೋ', ಇದರ ಶುದ್ಧರೂಪ–'ಪಂಚಾಶದ್ಯೋಜನಾಧೋ'[=ಪಂಚಾಶತ್+ ಯೋಜನ+ಅಧೋ=ಐವತ್ತುಯೋಜನ ಅಧೋ] (ಜಶ್ತ್ವಸಂಧಿ–ಪೂರ್ವಶಬ್ದದ ಕೊನೆಯಲ್ಲಿರುವ ಕ್, ಚ್, ಟ್, **ತ್**, ಪ್ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಗ್, ಜ್, ಡ್, **ದ್**, ಬ್ ಗಳು ಆದೇಶವಾಗುವುದು). ಆದುದರಿಂದ ಇಲ್ಲಿ ಶುದ್ಧರೂಪವನ್ನು ಸ್ವೀಕರಿಸಿದೆ

[4] ಮೂಲಪಾಠ–'ಯೋಗ್ಯದಿಗ್ಗಜೇಂದ್ರ ವಿಜಯಾರ್ಧ', ಕೆಜಿ ಯವರ ಪಾಠ–'ಯೋಗ್ಯವಿಜಯಾರ್ದ್ಧ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

ಉತ್ಪಲಮಾಲೆ **ಉತ್ಕಶಿಖಂಡಿತಾಣ್ಡವಮನೋಹರಮುಜ್ಜ್ವಳರತ್ನರಾಜಿ ರಾ**
ಜ[1]ತ್ಕಟಕಂ ಸರಃ[2]ಕನಕಪದ್ಮಪರಾಗಪಿಶಂಗಿತಾಂಗರಂ
ಗ[3]ತ್ಕಳಹಂಸನಾದರಮಣೀಯತರಂ ಮದದಂತಿದಾನಗಂ
ಧೋ[4]ತ್ಕಟಮೊಪ್ಪುಗುಂ ಕುಮುದಪಾಂಡುರಮಾವಿಜಯಾರ್ಧಪರ್ವತಂ ॥ ೧–೬೩

(**ವಿ.ಸೂ.:** ೧–೬೩ ನೆಯ ವೃತ್ತಪದ್ಯವು ೧–೬೨ (ವ) ದ ಮುಂದುವರಿದ ಭಾಗವಾಗಿರುವುದರಿಂದ ಇವೆರಡರ **ಪದವಿಭಾಗ, ಅನ್ವಯಾರ್ಥ, ಭಾವಾರ್ಥ** ಮತ್ತು **ವಿಶೇಷ ವಿವರಣೆ**ಗಳನ್ನು ಇದರಡಿ ಒಂದೆಡೆಯಲ್ಲಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಅಂತು, ಅನೇಕ, ನದ್ಯುದ್ಯಾನನಾನಾಜನಪದಜನಾನುರಾಗರಸರಮಣೀಯಮಪ್ಪ (ನದಿ+ಉದ್ಯಾನ–ನಾನಾ–ಜನಪದ–ಜನಾನುರಾಗರಸ–ರಮಣೀಯಂ+ಅಪ್ಪ), ಗಂಧಿಳ–ವಿಷಯದ, ನಡುವೆ, ತನ್ಮಹೀ–ವಿಳಾಸಿನಿಯ, ಮೇಲ್ಗೊಂಡ–ದುಕೂಲಮುಮಂ, ಅರ್ಹತ್ಪರಮೇಶ್ವರನ, ವಿಶದ, ಯಶಃಪುಂಜಮುಮಂ, ಅನುಕರಿಸಿ, ವಿವಿಧ–ವಿದಗ್ಧ–ವಿದ್ಯಾಧರ–ಜನ–ಕ್ರೀಡಾ–ನೀಡಂಗಳಾಗಿ, ದಕ್ಷಿಣೋತ್ತರ–ಶ್ರೇಢಿಗಳ್ಗೆ, ರಾಜಧಾನಿಗಳಾಗಿರ್ದ, ರಥನೂಪುರ–ಚಕ್ರವಾಳ–ಗಗನವಲ್ಲಭಾದಿಗಳಪ್ಪ, ನೂಱುಪತ್ತುಂ–ಪೊಟಲ್ಗಳನೊಳಕೊಂಡು, ಸ–ಪಾದ–ಷಡ್ಯೋಜನಾವಗಾಹದೊಳಂ, ಪಂಚಾಶದ್ಯೋಜನಾಧೋ–ವಿಸ್ತಾರದೊಳಂ, ತದರ್ಧಯೋಜನೋತ್ಸೇಧದೊಳಂ, ದಶಯೋಜನೋಪರಿಮತಳ–ಸಮಾನ–ವಿಸ್ತಾರದೊಳಂ, ವಿದ್ಯಾಧರಭಿಯೋಗ್ಯ–ವಿಜಯಾರ್ಧ–ಕುಮಾರ–ನಿವಾಸಾದಿ–ಮೇಖಳಾತ್ರಯದೊಳಂ, ಸಿದ್ಧಾಯತನ–ಪ್ರಭೃತಿ–ನವಕೂಟಂಗಳೊಳಂ, ನೆಱೆದು, ೧–೬೨ (ವ)

ಪದ ವಿಭಾಗ: ಉತ್ಕ–ಶಿಖಂಡಿ–ತಾಣ್ಡವ–ಮನೋಹರಂ; ಉಜ್ಜ್ವಳ–ರತ್ನರಾಜಿ–
ರಾಜತ್ಕಟಕಂ; ಸರಃ–ಕನಕಪದ್ಮ–ಪರಾಗ–ಪಿಶಂಗಿತಾಂಗ–
ರಂಗತ್ಕಳಹಂಸ–ನಾದ–ರಮಣೀಯತರಂ; ಮದದಂತಿ–ದಾನ–
ಗಂಧೋತ್ಕಟಂ; ಒಪ್ಪುಗುಂ, ಕುಮುದ–ಪಾಂಡುರಂ; ಆ, ವಿಜಯಾರ್ಧಪರ್ವತಂ ॥ ೧–೬೩

ಮೇಲಿನ ವಚನ ಮತ್ತು ಪದ್ಯಗಳಲ್ಲಿ ಕವಿಯು ಗಂಧಿಳ ವಿಷಯದ ಮಧ್ಯದಲ್ಲಿ ಸ್ಥಿತವಾಗಿರುವ ವಿಜಯಾರ್ಧಪರ್ವತವನ್ನು ವರ್ಣಿಸಿರುವನು.

ಅನ್ವಯಾರ್ಥ: **(ಅಂತು)** ಹಾಗೆ, **(ಅನೇಕ)** ಅನೇಕ **(ನದ್ಯುದ್ಯಾನನಾನಾಜನಪದಜನಾನುರಾಗರಸರಮಣೀಯಮಪ್ಪ=ನದಿ+ಉದ್ಯಾನ–ನಾನಾಜನಪದ–ಜನಾನುರಾಗರಸ–ರಮಣೀಯಂ+ಅಪ್ಪ)** ನದಿಗಳಿಂದಲೂ, ಉದ್ಯಾನಗಳಿಂದಲೂ, ಹಲವು ದೇಶಗಳ ಜನರ ಆದರಾತಿಶಯದಿಂದ ಕೂಡಿ ಮನೋಹರವಾಗಿದ್ದ, **(ಗಂಧಿಳ ವಿಷಯದ)** ಗಂಧಿಳ ನಾಡಿನ **(ನಡುವೆ)** ಮಧ್ಯದಲ್ಲಿ **(ತನ್ಮಹೀವಿಳಾಸಿನಿಯ=ತತ್+ಮಹೀ–ವಿಳಾಸಿನಿಯ)** ಆ ಭೂದೇವಿಯೆಂಬ ಲಾವಣ್ಯವತಿಯ **(ಮೇಲ್ಗೊಂಡ ದುಕೂಲಮುಮಂ)** ಮೇಲುಭಾಗದಲ್ಲಿ ಧರಿಸುವ ದುಕೂಲವನ್ನೂ [ರೇಶ್ಮೆವಸ್ತ್ರವನ್ನು], **(ಅರ್ಹತ್ಪರಮೇಶ್ವರನ)** ಅರಹಂತ ಪರಮೇಷ್ಠಿಯ **(ವಿಶದ)** ಶುಭ್ರವಾದ **(ಯಶಃಪುಂಜಮುಮಂ)** ಕೀರ್ತಿರಾಶಿಯನ್ನು [ಅತಿಶಯವಾದ ಕೀರ್ತಿಯನ್ನು] **(ಅನುಕರಿಸಿ)** ಹೋಲುವಂತೆ **(ವಿವಿಧ)** ನಾನಾ ಪ್ರಕಾರದ **(ವಿದಗ್ಧ)** ಪಾಂಡಿತ್ಯವುಳ್ಳ **(ವಿದ್ಯಾಧರ ಜನ)** ವಿದ್ಯಾಧರ ಜನರ **(ಕ್ರೀಡಾನೀಡಂಗಳಾಗಿ)** ಆಶ್ರಯಸ್ಥಾನಗಳಾಗಿ **(ದಕ್ಷಿಣೋತ್ತರ ಶ್ರೇಢಿಗಳ್ಗೆ)** ದಕ್ಷಿಣದಿಂದ ಉತ್ತರ ದಿಕ್ಕಿನೆಡೆಗಿರುವ ಸಾಲುಗಳಿಗೆ **(ರಾಜಧಾನಿಗಳಾಗಿರ್ದ)** ರಾಜಧಾನಿಗಳಾಗಿದ್ದ **(ರಥನೂಪುರ ಚಕ್ರವಾಳ ಗಗನವಲ್ಲಭಾದಿಗಳಪ್ಪ)** ರಥನೂಪುರ ಚಕ್ರವಾಳ, ಗಗನವಲ್ಲಭ ಮೊದಲಾದುವುಗಳಾದ **(ನೂಱುಪತ್ತುಂ ಪೊಳಲ್ಗಳನ್)** ನೂರಾಹತ್ತು ಪಟ್ಟಣಗಳನ್ನು **(ಒಳಕೊಂಡು)** ಒಳಗೊಂಡು; [ಜೊತೆಗೆ] **(ಸ ಪಾದ ಷಟ್ ಯೋಜನ [=**ಇಲ್ಲಿ **'ಪಾದ'** ಎಂದರೆ ನಾಲ್ಕನೇ ಒಂದು ಭಾಗ ಅಥವ ಕಾಲುಭಾಗ ಎಂದು ಅರ್ಥ]**)** [ಪರ್ವತವು ಅದರ ಬುಡದಿಂದ ಕೆಳಗೆ] ಆರೂಕಾಲು ಯೋಜನಗಳಷ್ಟು **(ಅವಗಾಹದೊಳಂ)** ಆಳದಿಂದಲೂ [ಅಂದರೆ ಪರ್ವತದ ಅಡಿಪಾಯವು ಆರೂಕಾಲು ಯೋಜನಗಳಷ್ಟು ಆಳದವರೆಗೆ ಭೂಮಿಯಡಿಯಲ್ಲಿ ಹುದುಗಿರುವುದು],

---

[1] ಮೂಲಪಾಠ–'ರಾಜ', ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವಂ (೩–೫) ಪಾಠ–'ರಂಜ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಸರಃ', ಕೆಜಿ ಯವರ ಪಾಠ–'ಕನತ್', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ–'ರಂಗ', ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವಂ (೩–೫) ಪಾಠ–'ರಂಜ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[4] ಮೂಲಪಾಠ–'ಗಂಧೋ', ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವಂ (೩–೫) ಪಾಠ–'ಧಾರೋ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

(ಪಂಚಾಶದ್ಯೋಜನಾಧೋವಿಸ್ತಾರದೊಳಂ=ಪಂಚಾಶತ್+ಯೋಜನ+ಅಧೋ–ವಿಸ್ತಾರದೊಳಂ) ಕೆಳಗಿನ ಭಾಗವು ಐವತ್ತು ಯೋಜನ ವಿಸ್ತಾರದಿಂದಲೂ [ಅಂದರೆ, ಅಗಲವುಳ್ಳದ್ದೂ], **(ತದರ್ಧಯೋಜನ=ತತ್+ಅರ್ಧಯೋಜನ)** ಅದರ ವಿಸ್ತಾರದ ಅರ್ಧದಷ್ಟು ಯೋಜನ [ಐವತ್ತು ಯೋಜನದಲ್ಲಿ ಅರ್ಧದಷ್ಟು ಅಂದರೆ ಇಪ್ಪತ್ತೈದು ಯೋಜನದಷ್ಟು] **(ಉತ್ಸೇಧದೊಳಂ)** ಎತ್ತರದಿಂದಲೂ, **(ದಶಯೋಜನೋಪರಿಮತಳ[=ದಶಯೋಜನ+ಉಪರಿಮತಳ]–ಸಮಾನವಿಸ್ತಾರದೊಳಂ)** ಹತ್ತುಯೋಜನ ವಿಸ್ತಾರವುಳ್ಳ [ಅಂದರೆ ಅಗಲವುಳ್ಳ] ಪರ್ವತದ ಮೇಲ್ಭಾಗದ ಸಮತಟ್ಟಾದ ಸಾನು ಪ್ರದೇಶದಿಂದಲೂ, **(ವಿದ್ಯಾಧರಭಿಯೋಗ್ಯ[=ವಿದ್ಯಾಧರ+ಅಭಿಯೋಗ್ಯ]–ವಿಜಯಾರ್ಧಕುಮಾರ–ನಿವಾಸಾದಿ)** ವಿದ್ಯಾಧರ, ಅಭಿಯೋಗ್ಯ [ಮತ್ತು] ವಿಜಯಾರ್ಧಕುಮಾರ [ಇವರ] **(ನಿವಾಸಾದಿ)** ಭವನ ಮೊದಲಾದವುಗಳಿರುವ **(ಮೇಖಳಾತ್ರಯದೊಳಂ)** ಮೂರು ಹಂತಗಳಲ್ಲಿರುವ ಸಾನುಪ್ರದೇಶಗಳಿಂದಲೂ, **(ಸಿದ್ಧಾಯತನ)** ಸಿದ್ಧಾಯತನ[ಕೂಟ] ಅಂದರೆ ಅಕೃತ್ರಿಮಜಿನಚೈತ್ಯಾಲಯ **(ಪ್ರಭೃತಿ)** ಮೊದಲ್ಗೊಂಡು **(ನವಕೂಟಂಗಳೊಳಂ)** ಒಂಬತ್ತುಶಿಖರಗಳಿಂದಲೂ **(ನೆಱೆದು)** ಕೂಡಿದ್ದು... ೧–೬೨ (ವ)

ಅನ್ವಯಾರ್ಥ: **(ಉತ್ಕ ಶಿಖಂಡಿ ತಾಣ್ಡವ ಮನೋಹರಂ)** ಉತ್ಸುಕವಾದ ನವಿಲಿನ ತಾಂಡವನೃತ್ಯದಿಂದ ಮನೋಹರವೂ; **(ಉಜ್ಜ್ವಳ ರತ್ನರಾಜಿ)** ಪ್ರಕಾಶಮಾನವಾದ ರತ್ನಪಂಜ್ತಿಗಳಿಂದ **(ರಾಜತ್)** ರಾರಾಜಿಸುತ್ತಿರುವ [ಹೊಳೆಯುತ್ತಿರುವ] **(ಕಟಕಂ)** ತಪ್ಪಲಿನಿಂದಲೂ; **(ಸರಃ ಕನಕಪದ್ಮಪರಾಗ)** ಸರೋವರದ ಹೊಂದಾವರೆಯ ಪರಾಗದ [ಧೂಳಿನ] **(ಪಿಶಂಗಿತಾಂಗರಂಗತ್ಕಳ ಹಂಸನಾದರಮಣೀಯತರಂ=ಪಿಶಂಗಿತ+ಅಂಗ+ರಂಗತ್+ಕಳಹಂಸ–ನಾದ–ರಮಣೀಯತರಂ)** ಹೊಂಬಣ್ಣದಿಂದ ದೇಹವು ವರ್ಣಮಯವಾಗಿದ್ದ ರಾಜಹಂಸಗಳ [ಕಂದು ಬಣ್ಣದ ರೆಕ್ಕೆಯುಳ್ಳ ಹಂಸಗಳ] ಧ್ವನಿಯಿಂದ ಅಹ್ಲಾದಕರವಾಗಿಯೂ; **(ಮದದಂತಿ)** ಮದಿಸಿದಾನೆಯ **(ದಾನಗಂಧೋತ್ಕಟಂ=ದಾನಗಂಧ+ಉತ್ಕಟಂ)** ಮದೋದಕದ ಕಂಪಿನ [ವಾಸನೆಯ] ತೀವ್ರತೆಯಿಂದಲೂ; **(ಕುಮುದ ಪಾಂಡುರಂ)** ಬಿಳಿಯ ನೈದಿಲೆಯಂತೆ ಬೆಳ್ಳಗಿರುವ **(ಆ)** ಆ **(ವಿಜಯಾರ್ಧ ಪರ್ವತಂ)** ವಿಜಯಾರ್ಧ ಪರ್ವತವು [ರಜತ ಪರ್ವತವು] **(ಒಪ್ಪುಗುಂ)** ಶೋಭಿಸುತ್ತಿದೆ. ೧–೬೩


ಭಾವಾರ್ಥ: ಅನೇಕ ನದಿಗಳಿಂದಲೂ, ಉದ್ಯಾನಗಳಿಂದಲೂ ಹಾಗೂ ಹಲವು ದೇಶಗಳ ಜನರ ಆದರಾತಿಶಯದಿಂದ ಕೂಡಿ ಮನೋಹರವಾಗಿದ್ದ ಗಂಧಿಳ ನಾಡಿನ ಮಧ್ಯದಲ್ಲಿ ಪೂರ್ವ–ಪಶ್ಚಿಮವಾಗಿ ವಿಜಯಾರ್ಧಪರ್ವತವಿದ್ದಿತು. ಆ ಪರ್ವತದ ಅಡಿಪಾಯವು ಆರೂಕಾಲು ಯೋಜನಗಳಷ್ಟು ಆಳದವರೆಗೆ ಭೂಮಿಯಡಿಯಲ್ಲಿ ಹುದುಗಿರುವುದು. ಪರ್ವತದ ತಳಭಾಗವು ಐವತ್ತು ಯೋಜನ ವಿಸ್ತಾರವೂ [ಅಂದರೆ ಅಗಲವೂ] ಮತ್ತು ಇಪ್ಪತ್ತೈದು ಯೋಜನದಷ್ಟು ಎತ್ತರವೂ ಇರುವುದು. ಅದರ ಉತ್ತರ ಮತ್ತು ದಕ್ಷಿಣದ ಎರಡೂ ಕಡೆಗಳು ಮೂರು ಮೇಖಲೆಗಳಿಂದ ಕೂಡಿದ್ದು, ಹತ್ತು ಯೋಜನ ವಿಸ್ತಾರವುಳ್ಳ [ಅಂದರೆ ಅಗಲವುಳ್ಳ] ಪರ್ವತದ ಮೇಲ್ಭಾಗದ ಸಮತಟ್ಟಾದ ಸಾನು ಪ್ರದೇಶದಲ್ಲಿ ಸಿದ್ಧಾಯತನ ಕೂಟ ಅಂದರೆ ಅಕೃತ್ರಿಮಜಿನಚೈತ್ಯಾಲಯ ಮೊದಲ್ಗೊಂಡು ಒಂಬತ್ತು ಕೂಟಗಳಿರುವುವು. ಮಧ್ಯದ ಮೇಖಲೆಯಲ್ಲಿ ಅಭಿಯೋಗ್ಯ ದೇವತೆಗಳ ಶ್ರೇಣಿಯಿಂದಲೂ, ಕೆಳಗಡೆಯ ಮೇಖಲೆಯು ದಕ್ಷಿಣ ಮತ್ತು ಉತ್ತರ ದಿಕ್ಕಿನ ವಿದ್ಯಾಧರ ಶ್ರೇಣಿಗಳಿಗಳಿಗೆ ರಾಜಧಾನಿಗಳಾಗಿದ್ದ ರಥನೂಪುರ ಚಕ್ರವಾಳ, ಗಗನವಲ್ಲಭ ಮೊದಲಾದುವುಗಳಾದ ನೂರಾಹತ್ತು ಪಟ್ಟಣಗಳನ್ನು ಒಳಗೊಂಡಿರುವುದು. ೧–೬೨ (ವ)

ಭಾವಾರ್ಥ: ಉತ್ಸುಕವಾದ ನವಿಲಿನ ತಾಂಡವನೃತ್ಯದಿಂದ ಮನೋಹರವೂ; ಪ್ರಕಾಶಮಾನವಾದ ರತ್ನಪಂಜ್ತಿಗಳಿಂದ ರಾರಾಜಿಸುತ್ತಿರುವ ತಪ್ಪಲಿನಿಂದಲೂ; ಸರೋವರದ ಹೊಂದಾವರೆಯ ಪರಾಗದ ಹೊಂಬಣ್ಣದಿಂದ ದೇಹವು ವರ್ಣಮಯವಾಗಿದ್ದ ರಾಜಹಂಸಗಳ [ಕಂದು ಬಣ್ಣದ ರೆಕ್ಕೆಯುಳ್ಳ ಹಂಸಗಳ] ಧ್ವನಿಯಿಂದ ಅಹ್ಲಾದಕರವಾಗಿಯೂ; ಮದಿಸಿದಾನೆಯ ಮದೋದಕದ ವಾಸನೆಯ ತೀವ್ರತೆಯಿಂದಲೂ; ಬಿಳಿಯ ನೈದಿಲೆಯಂತೆ ಬೆಳ್ಳಗಿರುವ ಆ ವಿಜಯಾರ್ಧಪರ್ವತವು [ರಜತ ಪರ್ವತವು] ಶೋಭಿಸುತ್ತಿದೆ. ೧–೬೩

ವಿಶೇಷ ವಿವರಣೆ: ವಿಜಯಾರ್ಧಪರ್ವತದ ಸಾಮಾನ್ಯ ವಿವರಣೆ: ಜೈನಪುರಾಣಗಳಲ್ಲಿ ಹೆಸರಿಸಿರುವ ಪರ್ವತಗಳಲ್ಲಿ ಅತಿಶಯವಾಗಿ ವರ್ಣಿತವಾಗಿರುವುದು ಸುಮೇರುಪರ್ವತ. ಅದನ್ನು ಹೊರತುಪಡಿಸಿದರೆ, ನಂತರ ಅತಿ ಹೆಚ್ಚು ವರ್ಣಿತವಾಗಿರುವುದು ರಜತಪರ್ವತವೆಂದು ಕರೆಯುವ ವಿಜಯಾರ್ಧಪರ್ವತವೇ ಆಗಿದೆ. ಮಧ್ಯಲೋಕದ ಎರಡೂವರೆ ದ್ವೀಪಗಳಲ್ಲಿ ಒಟ್ಟು **ನೂರ ಎಪ್ಪತ್ತು ವಿಜಯಾರ್ಧಪರ್ವತ**ಗಳಿವೆ ಎಂದು ಜೈನಪುರಾಣಗಳಲ್ಲಿ ಹೇಳಿದೆ. ಅವುಗಳ ಸಂಖ್ಯೆ ಹೀಗಿದೆ:

ದ್ವೀಪ	ವಿದೇಹ ಕ್ಷೇತ್ರ	ಭರತ ಕ್ಷೇತ್ರ	ಐರಾವತ ಕ್ಷೇತ್ರ	ಒಟ್ಟು
ಜಂಬೂದ್ವೀಪ	೩೨	೧	೧	೩೪
ಧಾತಕೀ ಖಂಡ*	೬೪	೨	೨	೬೮
ಪುಷ್ಕರಾರ್ಧ ದ್ವೀಪ*	೬೪	೨	೨	೬೮
ಒಟ್ಟು	**೧೬೦**	**೫**	**೫**	**೧೭೦**

(*ಧಾತಕೀ ಖಂಡ ಮತ್ತು ಪುಷ್ಕರಾರ್ಧ ಈ ಎರಡೂ ದ್ವೀಪಗಳಲ್ಲಿ ಎರಡು ವಿದೇಹ ಕ್ಷೇತ್ರಗಳು, ಎರಡು ಭರತ ಕ್ಷೇತ್ರಗಳು ಹಾಗೂ ಎರಡು ಐರಾವತ ಕ್ಷೇತ್ರಗಳಿರುತ್ತವೆ.)



(ತಿಲೋಯಪಣ್ಣತ್ತೀ ೪–೧೧೧ ರಿಂದ ೪–೧೨೮ ರವರೆಗಿನ ಗಾಥೆಗಳನ್ನು ನೋಡಿರಿ)

ಒಂದನೆಯ ಮೇಖಲೆ: ವಿದ್ಯಾಧರ ಶ್ರೇಣಿಗಳಿಗಳಿಗೆ ರಾಜಧಾನಿಗಳಾಗಿದ್ದ ರಥನೂಪುರ ಚಕ್ರವಾಳ, ಗಗನವಲ್ಲಭ ಮೊದಲಾದುವುಗಳಾದ ಒಟ್ಟು ನೂರಾಹತ್ತು ಪಟ್ಟಣಗಳು.

ಎರಡನೆಯ ಮೇಖಲೆ: ಅಭಿಯೋಗ್ಯ ಮತ್ತು ವಿಜಯಾರ್ಧಕುಮಾರರ ಭವನಗಳು.

ಮೂರನೆಯ ಮೇಖಲೆ: ಮೇಲ್ಭಾಗದ ಸಮತಟ್ಟಾದ ಸಾನು ಪ್ರದೇಶದಲ್ಲಿ ಸಿದ್ಧಾಯತನ ಕೂಟ ಅಂದರೆ ಅಕೃತ್ರಿಮಜಿನಚೈತ್ಯಾಲಯ ಮೊದಲ್ಗೊಂಡು ಒಂಬತ್ತು ಕೂಟಗಳಿರುವುವು,

ಈ ಎರಡೂವರೆ ದ್ವೀಪಗಳಲ್ಲಿರುವ ಎಲ್ಲಾ ವಿದೇಹ ಕ್ಷೇತ್ರಗಳಲ್ಲಿರುವ ವಿಜಯಾರ್ಧಪರ್ವತಗಳು, ಆಯಾ ಕ್ಷೇತ್ರಗಳಲ್ಲಿರುವ ೩೨ ಜನಪದಗಳಲ್ಲಿ, ಪ್ರತಿಯೊಂದರ ಮಧ್ಯೆ ಪೂರ್ವಾಪರ ಲಂಬಾಯಮಾನವಾಗಿ (ಉದ್ದವಾಗಿ) ಹರಡಿಕೊಂಡಿವೆ. ಈ ವಿಜಯಾರ್ಧ ಪರ್ವತಗಳ ಒಂದು ತುದಿಯಲ್ಲಿ ವಕ್ಷಾರಪರ್ವತಗಳೂ, ಇನ್ನೊಂದು ತುದಿಯಲ್ಲಿ ವಿಭಂಗನದಿಗಳಿವೆ. ಇನ್ನು ಜಂಬೂದ್ವೀಪದ ಭರತ ಮತ್ತು ಐರಾವತಕ್ಷೇತ್ರಗಳಲ್ಲಿರುವ ವಿಜಯಾರ್ಧಪರ್ವತಗಳ ಪೂರ್ವ ಮತ್ತು ಪಶ್ಚಿಮದ ತುದಿಗಳಲ್ಲಿ ಲವಣಸಮುದ್ರ ವಿದ್ದು, ಭರತಕ್ಷೇತ್ರದಲ್ಲಿರುವ ವಿಜಯಾರ್ಧಪರ್ವತದ ಉತ್ತರದಲ್ಲಿ ಮ್ಲೇಚ್ಛಖಂಡವೂ, ದಕ್ಷಿಣದಲ್ಲಿ ಆರ್ಯಖಂಡವೂ ಇರುತ್ತವೆ. ಹಾಗೆಯೇ, ಐರಾವತಕ್ಷೇತ್ರದಲ್ಲಿರುವ ವಿಜಯಾರ್ಧಪರ್ವತದ ಉತ್ತರದಲ್ಲಿ ಆರ್ಯಖಂಡವೂ, ದಕ್ಷಿಣದಲ್ಲಿ ಮ್ಲೇಚ್ಛಖಂಡವೂ ಇರುತ್ತವೆ.

ಈ ಎಲ್ಲಾ ನೂರ ಎಪ್ಪತ್ತು ವಿಜಯಾರ್ಧಪರ್ವತಗಳ ಲಕ್ಷಣಗಳು ಒಂದೇರೀತಿಯಾಗಿವೆ. ಮೊದಲಿಗೆ ಈ ಎಲ್ಲಾ ನೂರ ಎಪ್ಪತ್ತು ಪರ್ವತಗಳು ಪೂರ್ವ–ಪಶ್ಚಿಮ ೯೭೪೮ ಯೋಜನ ಲಂಬಾಯಮಾನ (ಉದ್ದ) ವುಳ್ಳವಾಗಿದ್ದು, ೨೫ ಯೋಜನ ಎತ್ತರವುಳ್ಳವೂ, ೫೦ ಯೋಜನ ವಿಶಾಲ (ಅಗಲ) ವುಳ್ಳವೂ ಆಗಿರುತ್ತವೆ. ಈ ಪರ್ವತದ ಮೇಲೆ ಮೂರು ಹಂತಗಳಲ್ಲಿ ಐದು ತಪ್ಪಲು (ಮೇಖಲಾ) ಪ್ರದೇಶಗಳಿವೆ. ಮೊದಲನೆಯ ಹಂತದಲ್ಲಿ, ನೆಲದಿಂದ ೧೦ ಯೋಜನ ಎತ್ತರದಲ್ಲಿ, ಪರ್ವತದ ಉತ್ತರದಿಕ್ಕಿನ ಮತ್ತು ದಕ್ಷಿಣದಿಕ್ಕಿನ ಎರಡೂ ಪಾರ್ಶ್ವಗಳಲ್ಲಿ ತಲಾ ೧೦ ಯೋಜನ ವಿಸ್ತಾರ (ಅಗಲ) ವುಳ್ಳ ಎರಡು ವಿದ್ಯಾಧರ ಶ್ರೇಣಿಗಳಿವೆ. ಉತ್ತರದಿಕ್ಕಿನ ವಿದ್ಯಾಧರ

ಶ್ರೇಣಿಯಲ್ಲಿ ಅರವತ್ತು ನಗರಗಳೂ, ದಕ್ಷಿಣದಿಕ್ಕಿನ ವಿದ್ಯಾಧರ ಶ್ರೇಣಿಯಲ್ಲಿ ಐವತ್ತು ನಗರಗಳೂ, ಹೀಗೆ ಎರಡೂ ವಿದ್ಯಾಧರ ಶ್ರೇಣಿಗಳಿಂದ ಒಟ್ಟು ನೂರಹತ್ತು ನಗರಗಳಿರುತ್ತವೆ. ಈ ಎಲ್ಲಾ ನಗರಗಳ ಸಂಖ್ಯೆಗಳು ಹಾಗೂ ಹೆಸರುಗಳು, ಎಲ್ಲಾ ನೂರ ಎಪ್ಪತ್ತು ಪರ್ವತಗಳಲ್ಲಿಯೂ ಒಂದೇ ರೀತಿ ಆಗಿರುತ್ತವೆ. ಎರಡನೆಯ ಹಂತದಲ್ಲಿ ಅಂದರೆ ನೆಲದಿಂದ ೨೦ ಯೋಜನ ಎತ್ತರದಲ್ಲಿ (ವಿದ್ಯಾಧರ ಶ್ರೇಣಿಗಳಿಂದ ೧೦ ಯೋಜನ ಎತ್ತರದಲ್ಲಿ), ಮತ್ತೆ ಉತ್ತರದಿಕ್ಕಿನ ಮತ್ತು ದಕ್ಷಿಣದಿಕ್ಕಿನ ಎರಡೂ ಪಾರ್ಶ್ವಗಳಲ್ಲಿ ತಲಾ ಹತ್ತು ಯೋಜನ ವಿಸ್ತಾರ (ಅಗಲ) ವುಳ್ಳ ಅಭಿಯೋಗ್ಯ ದೇವತೆಯರ ಎರಡು ಶ್ರೇಣಿಗಳಿವೆ. ನಂತರ ಪರ್ವತದ ಶಿಖರದ ಸಾನುಪ್ರದೇಶವು ೧೦ ಯೋಜನ ವಿಸ್ತಾರ (ಅಗಲ) ವುಳ್ಳದ್ದಾಗಿರುತ್ತದೆ. ಶಿಖರದ ಪೂರ್ವದಿಕ್ಕಿನ ಕೊನೆಯಲ್ಲಿರುವ ಸಿದ್ಧಕೂಟ ಸೇರಿ ದಿವ್ಯ ಒಂಬತ್ತು ಕೂಟಗಳಿವೆ. ಈ ಕೂಟಗಳ ಎತ್ತರಗಳು ಬೇರೆ ಬೇರೆಯಾಗಿದ್ದು, ಹೆಸರುಗಳೂ ಬೇರೆಬೇರೆಯಾಗಿರುತ್ತವೆ. **ತಿಲೋಯಪಣ್ಣತ್ತೀ** ಗ್ರಂಥದಲ್ಲಿ (ಗಾಥಾ ಸಂ. ೪-೧೫೦, ೧೫೧) ಭರತಕ್ಷೇತ್ರದಲ್ಲಿರುವ ವಿಜಯಾರ್ಧಪರ್ವತದ ಶಿಖರದಲ್ಲಿರುವ ಈ ಒಂಬತ್ತು ಕೂಟಗಳ ಹೆಸರುಗಳನ್ನು ಮಾತ್ರ ಹೆಸರಿಸಿದ್ದಾರೆ. ಈ ವಿಜಯಾರ್ಧಪರ್ವತಗಳ ಮನೋಹರವಾದ ತಪ್ಪಲು ಪ್ರದೇಶಗಳಿಗೆ ಕಿನ್ನರರೆಂಬ ವ್ಯಂತರದೇವತೆಗಳೂ, ಪನ್ನಗರೆಂಬ ಭವನವಾಸಿದೇವತೆಗಳೂ ಬಂದು ಬಹುಕಾಲದವರೆಗೂ, ತಮ್ಮ ವಾಸಸ್ಥಾನಗಳನ್ನು ಮರೆತುಬಿಟ್ಟವರಂತೆ ಕ್ರೀಡಿಸುತ್ತಿರುತ್ತಾರೆ. ಈ **ಆದಿಪುರಾಣ** ಕಾವ್ಯದಲ್ಲಿ ಪ್ರಸ್ತುತ ಪ್ರಥಮಾಶ್ವಾಸದ ೧-೬೨ (ವ) ದಲ್ಲಿ ಕವಿಯು ಜಂಬೂದ್ವೀಪದ ಪಶ್ಚಿಮವಿದೇಹದ ಗಂಧಿಲ ನಾಡಿನ ಮಧ್ಯದಲ್ಲಿ ಸ್ಥಿತವಾಗಿರುವ ವಿಜಯಾರ್ಧಪರ್ವತದ ವರ್ಣನೆಯನ್ನು ಮಾಡಿರುತ್ತಾನೆ. ಹಾಗೆಯೇ ಕವಿಯು ಒಂಬತ್ತನೆಯ ಆಶ್ವಾಸದ ೯-೧೧೩ ರಿಂದ ೯-೧೨೧ (ವ) ವರೆಗಿನ ಕಾವ್ಯಭಾಗದಲ್ಲಿ ಜಂಬೂದ್ವೀಪದ ಭರತಕ್ಷೇತ್ರದ ಮಧ್ಯದಲ್ಲಿ ಸ್ಥಿತವಾಗಿರುವ ವಿಜಯಾರ್ಧಪರ್ವತದ ವರ್ಣನೆಯನ್ನು ಮಾಡಿರುತ್ತಾನೆ.

ಮೇಲಿನ ವಚನದಲ್ಲಿ ಕವಿಯು ವರ್ಣಿಸಿರುವಂತೆ, ವಿಜಯಾರ್ಧಪರ್ವತದ ವರ್ಣನೆ: ಕವಿಯು ಮೇಲಿನ ವಚನದಲ್ಲಿ ವರ್ಣಿಸಿರುವಂತೆ, ಗಂಧಿಲ ದೇಶದ ಮಧ್ಯ ಭಾಗದಲ್ಲಿ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿರುವ ಪರ್ವತ ಶ್ರೇಢಿಗಳು ನಾನಾ ಜನಪದದಿಂದಲೂ, ಪಾಂಡಿತ್ಯವುಳ್ಳ ವಿದ್ಯಾಧರರಿಂದಲೂ (ಖೇಚರರಿಂದಲೂ) ಸೇವಿಸಲ್ಪಡುವಂತಹದ್ದಾಗಿದೆ. ಅಂದರೆ ಇವು ಖೇಚರರ ವಾಸಸ್ಥಾನಗಳಾಗಿವೆ. ಆ ಶ್ರೇಢಿಗಳಲ್ಲಿ, ಅವುಗಳಿಗೆ ರಾಜಧಾನಿಗಳಾದ ರಥನೂಪುರಚಕ್ರವಾಳ ಮತ್ತು ಗಗನವಲ್ಲಭ ಮೊದಲಾಗಿ ನೂರಾಹತ್ತು ನಗರಗಳಿವೆ (ಉತ್ತರಶ್ರೇಢಿಯಲ್ಲಿ ಅರವತ್ತು ನಗರಗಳು ಮತ್ತು ದಕ್ಷಿಣಶ್ರೇಢಿಯಲ್ಲಿ ಐವತ್ತು ನಗರಗಳು ಒಟ್ಟು ನೂರಾಹತ್ತು ನಗರಗಳಿವೆ). **ನಗರಗಳ ಹೆಸರಿನ** ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **'ನೂರಾಹತ್ತು (೧೧೦)-ವಿಜಯಾರ್ಧಪರ್ವತ ಶ್ರೇಣಿಯಲ್ಲಿರುವ ನಗರ'** ಅನ್ನು ನೋಡಿರಿ. ಈ ಉತ್ತರ ಮತ್ತು ದಕ್ಷಿಣ ಶ್ರೇಢಿಗಳನ್ನು ಕವಿಯು, ಭೂದೇವಿಯೆಂಬ ಬೆಡಗಿಯು ಧರಿಸಿರುವ ದುಕೂಲಕ್ಕೂ, ಅರ್ಹತ್ಪರಮೇಶ್ವರನ ಶುಭ್ರವಾದ ಕೀರ್ತಿಶಿಖರಕ್ಕೂ ಹೋಲಿಸಿದ್ದಾನೆ. ಇಂತಹ ವಿದ್ಯಾಧರ ಶ್ರೇಢಿಗಳನ್ನೊಳಗೊಂಡಿರುವ ಪರ್ವತದ ಅವಗಾಹ (ಅಡಿಪಾಯದ ಆಳ), ಅಧೋವಿಸ್ತಾರ (ಬುಡದ ವ್ಯಾಸ), ಉತ್ಸೇಧ (ಎತ್ತರ), ಉಪರಿಮತಳ ವಿಸ್ತಾರ (ಮೇಲ್ಭಾಗದ ಸಾನುಪ್ರದೇಶದ ವ್ಯಾಸ) ಇವುಗಳ ಅಳತೆಗಳನ್ನು ಈ ವಚನದಲ್ಲಿ ಹೇಳಿದ್ದಾನೆ. ಈ ಪರ್ವತವು ಕಲ್ಪವಾಸಿ ಮತ್ತು ಭವನವಾಸಿ ದೇವತೆಗಳು ವಾಸಿಸುವ ನಿವಾಸಗಳಿರುವ ಶಿಖರಗಳಿಂದಲೂ, ಸಿದ್ಧಾಯತನಕೂಟ (ಅಕೃತ್ರಿಮ ಜಿನಚೈತ್ಯಾಲಯ) ಮೊದಲ್ಗೊಂಡು ಒಂಬತ್ತು ಕೂಟಗಳಿಂದ ಕೂಡಿದೆ ಎಂದು ಈ ವಚನದಲ್ಲಿ ಕವಿಯು ವರ್ಣಿಸಿದ್ದಾನೆ. ಮುಂದೆ ಎರಡನೆಯ ಆಶ್ವಾಸದ ೨-೫೦ (ವ) ವಚನದಲ್ಲಿ, **'... ಪೊಲಲಂ ಪೊಱಮಟ್ಟನೇಕ <u>ಹಾಟಕ ಕೂಟಕೋಟಿ ಘಟಿತ ಸಿದ್ಧಕೂಟಮಂ</u> ತ್ರಿಪ್ರದಕ್ಷಿಣಂಗೆಯ್ದು ಜಿನೇಂದ್ರಾರ್ಚನಾ ಪುರಸ್ಸರಂ ವಾಚನಾಗ್ರಹಣ ಸಮೇತಮಾರಾಧನೆಯಿನರ್ಚಿಸಿ ವೀರಸಂಸ್ಥರಾರೂಢನಾದಾಗಳ್, ೨-೫೦ (ವ)'** ಎಂದು ಆ ವಚನದಲ್ಲಿ ವರ್ಣಿಸಿರುವ **'ಸಿದ್ಧಕೂಟ'**ವು, ಪಂಪನು ಈ ಮೇಲಿನ ವಚನದಲ್ಲಿ ವರ್ಣಿಸಿರುವ ಇದೇ ಪರ್ವತದ ಶಿಖರಪ್ರದೇಶದಲ್ಲಿರುವ ಸಿದ್ಧಾಯತನ ಕೂಟವಾಗಿದ್ದು, ಮಹಾಬಳನು ಇಲ್ಲಿಯೇ ವೀರಸಂಸ್ಥರಾರೂಢನಾಗಿ ಸಮಾಧಿಮರಣವನ್ನು ಹೊಂದುತ್ತಾನೆ. ಹೀಗೆ ವರ್ಣಿತವಾಗಿರುವ ಪರ್ವತದ ಪ್ರಾಕೃತಿಕ ಸೌಂದರ್ಯವನ್ನು ಮುಂದಿನ ೧-೬೩ ನೆಯ ಪದ್ಯದಲ್ಲಿ ವರ್ಣಿಸಿ, ಅದರ ಹೆಸರನ್ನು **ವಿಜಯಾರ್ಧಪರ್ವತ (ರಜತಪರ್ವತ)** ವೆಂದು ಆ ಪದ್ಯದಲ್ಲಿ ತಿಳಿಸಿದ್ದಾನೆ. ಈ **ವಿಜಯಾರ್ಧಪರ್ವತ**ದ ವರ್ಣನೆಯನ್ನು **ಪೂರ್ವಪುರಾಣ**ದಲ್ಲಿ, ೪-೮೧ ನೆಯ ಶ್ಲೋಕದಿಂದ ೪-೯೬ ನೆಯ ಶ್ಲೋಕದವರೆಗಿನ ಒಟ್ಟು ಹದಿನಾರು ಶ್ಲೋಕಗಳಲ್ಲಿ ವರ್ಣಿಸಲಾಗಿದೆ.

ಸಪಾದಷಡ್ಯೋಜನಾವಗಾಹದೊಳಂ ಪಂಚಾಶದ್ಯೋಜನಾಧೋವಿಸ್ತಾರದೊಳಂ ತದರ್ಧಯೋಜ ನೋತ್ಸೇಧದೊಳಂ ದಶಯೋಜನೋಪರಿಮತಳಸಮಾನವಿಸ್ತಾರದೊಳಂ: ಪಂಪನು ಇಲ್ಲಿ ವಿವರಿಸಿರುವಂತೆ, ವಿಜಯಾರ್ಧಪರ್ವತದ ಅಡಿಪಾಯವು ಆರೂಕಾಲು ಯೋಜನದಷ್ಟು ಆಳದಲ್ಲಿ ಭೂಮಿಯ ಒಳಗೆ ಹುದುಗಿಕೊಂಡಿದ್ದು, ಭೂತಳದಲ್ಲಿ ಪರ್ವತವು ಐವತ್ತು ಯೋಜನ ವಿಸ್ತಾರವುಳ್ಳದ್ದಾಗಿದ್ದು ಅಂದರೆ ಅಗಲವುಳ್ಳದ್ದಾಗಿದ್ದು, ಆ ಪರ್ವತದ ಎತ್ತರವು, ಅದರ ವಿಸ್ತಾರದಲ್ಲಿ (ಅಗಲದ) ಅರ್ಧದಷ್ಟು ಎಂದರೆ ಇಪ್ಪತ್ತೈದು ಯೋಜನ (೫೦/೨) ಎತ್ತರವಾಗಿದ್ದು, ಆ ವಿಜಯಾರ್ಧಪರ್ವತದ ತುದಿಯಲ್ಲಿ (ಮೇಲ್ಭಾಗದಲ್ಲಿ) ಸಮತಟ್ಟಾಗಿರುವ ಪ್ರದೇಶವು ಹತ್ತು ಯೋಜನ ವಿಸ್ತಾರ (ಅಗಲ) ವುಳ್ಳದ್ದಾಗಿರುತ್ತದೆ. ಆದರೆ ಕವಿಯು ಈ

ಪರ್ವತದ ಉದ್ದವನ್ನು ತಿಳಿಸಿರುವುದಿಲ್ಲ. ಬೆಟ್ಟದ ಮೇಲೆ ವಿದ್ಯಾಧರರ, ಅಭಿಯೋಗ್ಯ ದೇವತೆಗಳ, ವಿಜಯಾರ್ಧಕುಮಾರನ ನಿವಾಸಗಳು ಇದ್ದು, ಸಿದ್ಧಾಯತನಕೂಟ ಅಂದರೆ ಅಕೃತ್ರಿಮ ಚೈತ್ಯಾಲಯ ಮೊದಲ್ಗೊಂಡು ನವಕೂಟಗಳಿಂದ ಕೂಡಿದುದಾಗಿದೆ. **ಅಭಿಯೋಗ್ಯ** ಮತ್ತು **ವಿಜಯಾರ್ಧ ಕುಮಾರ** ದೇವತೆಗಳ ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಪದ ಸಂಖ್ಯೆ **ನಾಲ್ಕು (೪)–ದೇವ ನಿಕಾಯ (ದೇವತೆಗಳ ಭೇದಗಳು)** ಅನ್ನು ನೋಡಿರಿ. ಈ ವಚನ ಭಾಗದಲ್ಲಿ ವಿವರಿಸಿರುವ ವಿಜಯಾರ್ಧಪರ್ವತದ ಎತ್ತರ, ಅಗಲ ಇತ್ಯಾದಿ ಅಳತೆಗಳ ವಿವರಗಳನ್ನು, **'ಪೂರ್ವಪುರಾಣ'**ದಲ್ಲಿ ಬೇರೊಂದು ರೀತಿಯಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ:

ಯೋ ಯೋಜನಾನಾಂ ಪಂಚಾಗ್ರಾಂ ವಿಂಶತಿಂ ಧರಣೀತಲಾತ್ ।
ಉಚ್ಛ್ರಿತಃ ಶಿಖರೈಸ್ತುಂಗೈರ್ದಿವಂ ಸ್ಪ್ರಷ್ಟುಮಿವೋದ್ಯತಃ ॥ಪೂ.ಪು., ೪–೮೨॥

ಅರ್ಥ: ಆ ವಿಜಯಾರ್ದ್ಧಪರ್ವತವು ಭೂಮಿತಲದಿಂದ ಇಪ್ಪತ್ತೈದುಯೋಜನ ಎತ್ತರವಾಗಿದೆ. ಎತ್ತರವಾದ ಶಿಖರಗಳಿಂದ ಸ್ವರ್ಗವನ್ನು ಮುಟ್ಟುವುದಕ್ಕೋಸ್ಕರ ಪ್ರಯತ್ನಪಡುತ್ತಿದೆಯೋ ಎಂಬಂತಿದೆ.

ದಿಶೌತ್ತುಂಗ್ಯಾದ್ವಿಸ್ತೃತೋ ಮೂಲಾತ್ಪ್ರಭೃತ್ಯಾ ದಶಯೋಜನಮ್ ।
ಮಧ್ಯೇ ತ್ರಿಂಶತ್ಪೃಥುರ್ಯೋಽಗ್ರೇ ದಶಯೋಜನವಿಸ್ತೃತಿಃ ॥ಪೂ.ಪು., ೪–೮೩॥

ಅರ್ಥ: ಆ ಬೆಟ್ಟವು ಬುಡದಿಂದ ಹತ್ತು ಯೋಜನಗಳವರೆಗೆ ಎತ್ತರದ ಎರಡರಷ್ಟು (೫೦ ಯೋಜನ) ಅಗಲವಾಗಿದೆ. ಮಧ್ಯದಲ್ಲಿ ಮೂವತ್ತು ಯೋಜನ ಅಗಲವಾಗಿದೆ. ತುದಿಯಲ್ಲಿ ಹತ್ತು ಯೋಜನ ಅಗಲವಾಗಿದೆ.

ಉಚ್ಛ್ರಾಯಸ್ಯ ತುರೀಯಾಂಶಮವಗಾಢಶ್ಚ ಯಃ ಕ್ಷಿತೌ ।
ಗಂಧಿಲಾದೇಶವಿಷ್ಕಂಭಮಾನದಂಡ ಇವಾಯತಃ ॥ಪೂ.ಪು., ೪–೮೪॥

ಅರ್ಥ: ಆ ಪರ್ವತವು ಭೂಮಿಯೊಳಗೆ ಎತ್ತರದ ನಾಲ್ಕನೆಯ ಒಂದು ಭಾಗ (೨೫ ರಹದಾರಿ) ಆಳವಾಗಿದೆ. ಆ ಗಂಧಿಲ ದೇಶವನ್ನು ಅಳತೆಮಾಡುವ ಅಳತೆಯ ಕೋಲಿನಂತೆ ಉದ್ದವಾಗಿದೆ.

ದಶಯೋಜನವಿಸ್ತೀರ್ಣಶ್ರೇಣೀದ್ವಯಸಮಾಶ್ರಯಾನ್ ।
ಯೋ ಧತ್ತೇ ಖೇಚರಾವಾಸಾನ್ಸುರೇಶ್ಮೋಪಹಾಸಿನಃ ॥ಪೂ.ಪು., ೪–೮೫॥

ಅರ್ಥ: ಆ ಪರ್ವತದ ಮಧ್ಯಭಾಗದಲ್ಲಿ ಹತ್ತು–ಹತ್ತು ಯೋಜನ ಅಗಲವಾದ ಉತ್ತರಶ್ರೇಣಿ, ದಕ್ಷಿಣಶ್ರೇಣಿಗಳೆಂಬ ಖೇಚರರ ವಾಸಸ್ಥಾನಗಳಿವೆ. ಆ ಸ್ಥಾನಗಳು ದೇವತೆಗಳ ವಾಸಸ್ಥಾನಗಳನ್ನು ಪರಿಹಾಸ್ಯ ಮಾಡುವಂತಿವೆ.

ಯಸ್ಯ ಸಾನುಷುರಮ್ಯೇಷು ಕಿನ್ನರಾಃ ಸುರಪನ್ನಗಾಃ ।
ರಂರಮ್ಯಮಾಣಾಃ ಸುಚಿರಂ ವಿಸ್ಮರಂತಿ ನಿಜಾಲಯಾನ್ ॥ಪೂ.ಪು., ೪–೯೨॥

ಅರ್ಥ: ಆ ಪರ್ವತದ ಮನೋಹರವಾದ ತಪ್ಪಲು ಪ್ರದೇಶಗಳಲ್ಲಿ ಕಿನ್ನರರೆಂಬ ವ್ಯಂತರ ದೇವತೆಗಳೂ ಪನ್ನಗರೆಂಬ ಭವನವಾಸಿ ದೇವತೆಗಳೂ ಬಹುಕಾಲದವರೆಗೂ ಕ್ರೀಡಿಸುವವರಾಗಿ ತಮ್ಮ ವಾಸಸ್ಥಾನಗಳನ್ನು ಮರೆತುಬಿಡುತ್ತಾರೆ.

ಯಸ್ತುಂಗೈಃ ಶಿಖರೈರ್ಧತ್ತೇ ದೇವಾವಾಸಾನ್ ಸ್ಫುರನ್ಮಣೀನ್ ।
ಚೂಡಾಮಣೀನಿವೋದಗ್ರಾನ್ಸಿದ್ಧಾಯತನಪೂರ್ವಕಾನ್ ॥ಪೂ.ಪು., ೪–೯೪॥

ಅರ್ಥ: ಆ ವಿಜಯಾರ್ಧಪರ್ವತದ ಉನ್ನತವಾದ ಶಿಖರಗಳಲ್ಲಿ ಪ್ರಕಾಶಮಾನವಾದ ರತ್ನಗಳುಳ್ಳ ದೇವತೆಗಳ ವಾಸಸ್ಥಾನಗಳಿವೆ. ಅವುಗಳಲ್ಲಿ ಚೂಡಾರತ್ನಗಳಂತೆ ಉನ್ನತವಾದ ಸಿದ್ಧಾಯತನ–ಅಕೃತ್ರಿಮಚೈತ್ಯಾಲಯಗಳಿವೆ.

ದಧಾತ್ಯುಚ್ಚೈಃ ಸ್ವಕೂಟಾನಿ ಮುಕುಟಾನೀವ ಭೂಮಿಭೃತ್ ।
ಪರಾರ್ಧ್ಯರತ್ನಚಿತ್ರಾಣಿ ಯಃ ಶ್ಲಾಘ್ಯಾನಿ ಸುರಾಸುರೈಃ ॥ಪೂ.ಪು., ೪–೯೫॥

ಅರ್ಥ: ರಾಜನು ನಾನಾ ರತ್ನಗಳುಳ್ಳ ಕಿರೀಟವನ್ನು ಧರಿಸುವಂತೆ, ಆ ಪರ್ವತವು ಕಲ್ಪವಾಸಿದೇವತೆಗಳಿಂದಲೂ ಭವನವಾಸಿ ದೇವತೆಗಳಿಂದಲೂ ಶ್ಲಾಘಿಸುವುದಕ್ಕೆ ಯೋಗ್ಯಗಳೂ ಬಹಳ ಬೆಲೆಬಾಳುವ ನಾನಾರತ್ನಗಳುಳ್ಳವೂ ಉನ್ನತವೂ ಆದ ಕೂಟ (ಶಿಖರ) ಗಳನ್ನು ಧರಿಸಿರುತ್ತದೆ.

ಸಿದ್ಧಾಯತನ: ಇದು **ಸಿದ್ಧ+ಆಯತನ** ಎಂಬ ಎರಡು ಪದಗಳಿಂದ ಕೂಡಿದೆ. ಮೊದಲು **ಆಯತನ** ಶಬ್ದದ ಅರ್ಥವನ್ನು ತಿಳಿಯೋಣ. ಶ್ರೀ ನೇಮಿಚಂದ್ರ ಸಿದ್ಧಾಂತಿದೇವ ವಿರಚಿತ **ಬೃಹದ್ದ್ರವ್ಯ ಸಂಗ್ರಹ**ದ ೪೧ ನೆಯ ಗಾಥೆಗೆ ಶ್ರೀ ಬ್ರಹ್ಮದೇವ ಕೃತ

ಸಂಸ್ಕೃತ ಟೀಕೆಯಲ್ಲಿ ಹೀಗೆ ಹೇಳಿದೆ:

ಸಮ್ಯಕ್ತ್ವಾದಿಗುಣಾನಾಮಾಯತನಂ ಗೃಹಮಾವಾಸ ಆಶ್ರಯ ಆಧಾರಕರಣಂ ನಿಮಿತ್ತಮಾಯತನಂ ಭಣ್ಯತೇ ತದ್ವಿಪಕ್ಷಭೂತಮನಾಯತನಮಿತಿ ।

ಅರ್ಥ: ಸಮ್ಯಕ್ತ್ವ ಮೊದಲಾದ ಆತ್ಮಗುಣಗಳಿಗೆ ಮನೆ, ಆವಾಸ, ಆಶ್ರಯ ಅಥವಾ ಆಧಾರವಾಗಿರುವುದಕ್ಕೆ **ಆಯತನ** ಎಂದು ಹೇಳುತ್ತಾರೆ.

ಶ್ರೀ ಕುಂದಕುಂದಾಚಾರ್ಯ ವಿರಚಿತ **ಅಷ್ಟಪಾಹುಡ**ದ **ಬೋಧಪಾಹುಡ**ದ ೫ ಮತ್ತು ೬ ನೆಯ ಗಾಥೆಯಲ್ಲಿ **ಆಯತನ**ವನ್ನು ಹಾಗೂ ೭ ನೆಯ ಗಾಥೆಯಲ್ಲಿ **ಸಿದ್ಧಾಯತನ**ವನ್ನು ಹೀಗೆ ವರ್ಣಿಸಿದೆ:

ಮಣವಯಣಕಾಯದವ್ವಾ ಆಯತ್ತಾ [ಪಾಠಾಂತರ: **ಆಸತ್ತಾ**] **ಜಸ್ಸ ಇಂದಿಯಾ ವಿಸಯಾ ।**
ಆಯದಣಂ ಜಿಣಮಗ್ಗೇ ಣಿದ್ದಿಟ್ಠಂ ಸಂಜಯಂ ರೂವಂ ॥ (ಬೋಧಪಾಹುಡ, ೫)

ಗಾಥಾರ್ಥ: ಜಿನಮಾರ್ಗದಲ್ಲಿ ಸಂಯಮಸಹಿತ ಮುನಿರೂಪಕ್ಕೆ **ಆಯತನ**ವೆಂದು ಹೇಳಲಾಗಿದೆ. ಮುನಿರೂಪ ಹೇಗಿದೆಯೆಂದರೆ– ಮನ, ವಚನ, ಕಾಯಗಳನ್ನು ಹಾಗೂ ಪಂಚೇಂದ್ರಿಯ ವಿಷಯಗಳು ಅವರ **ಆಯತ್ತಾ** ಎಂದರೆ ಅಧೀನದಲ್ಲಿರುತ್ತವೆ. ಅಂದರೆ, ಅವರು ಅವುಗಳ ವಶದಲ್ಲಿರುವುದಿಲ್ಲ.

ಮಯ ರಾಯ ದೋಸ ಮೋಹೋ ಕೋಹೋ ಲೋಹೋ ಯ ಜಸ್ಸ ಆಯತ್ತಾ ।
ಪಂಚಮಹವ್ವಯಧರಾ ಆಯದಣಂ ಮಹರಿಸೀ ಭಣಿಯಂ ॥ (ಬೋಧಪಾಹುಡ, ೬)

ಅರ್ಥ: ಮದ, ರಾಗ, ದ್ವೇಷ, ಮೋಹ, ಕ್ರೋಧ ಮತ್ತು ಮಾಯೆ ಇವೆಲ್ಲವನ್ನೂ **ಆಯತ್ತಾ** ಎಂದರೆ ನಿಗ್ರಹಿಸುವವರಾಗಿರುತ್ತಾರೆ. ಅವರು ಐದು ಮಹಾವ್ರತಗಳನ್ನು ಧಾರಣೆ ಮಾಡಿರುವವರಾಗಿರುತ್ತಾರೆ. [ಇಂತಹ ಮಹಾಮುನಿ ಋಷೀಶ್ವರನು **ಆಯತನ** ಎನಿಸುತ್ತಾನೆ.]

ಮುಂದಿನ ಗಾಥೆಯಲ್ಲಿ **ಸಿದ್ಧಾಯತನ**ದ ಬಗ್ಗೆ ಹೇಳಿದ್ದಾರೆ:

ಸಿದ್ಧಂ ಜಸ್ಸ ಸದತ್ಥಂ ವಿಸುದ್ಧಝಾಣಸ್ಸ ಣಾಣಜುತ್ತಸ್ಸ ।
ಸಿದ್ಧಾಯದಣಂ ಸಿದ್ಧಂ ಮುಣಿವರವಸಹಸ್ಸ ಮುಣಿದತ್ಥಂ ॥ (ಬೋಧಪಾಹುಡ, ೭)

ಅರ್ಥ: ಶುದ್ಧಾತ್ಮ ಸಿದ್ಧರಾಗಿರುತ್ತಾರೆ; ವಿಶುದ್ಧವಾದ ಶುಕ್ಲಧ್ಯಾನವುಳ್ಳವರಾಗಿರುತ್ತಾರೆ. ಕೇವಲಜ್ಞಾನ ಪ್ರಾಪ್ತವಾಗಿರುವ ಮುನಿವರ ವೃಷಭರು ಅಂದರೆ ಮುನಿಗಳಲ್ಲಿ ಪ್ರಧಾನರಾದ ಭಗವಂತರೂ **ಸಿದ್ಧಾಯತನ**ರಾಗಿದ್ದಾರೆ.

ವಿಶೇಷ ವಿವರಣೆ (೧–೬೩): ಈ ಪದ್ಯದಲ್ಲಿ ಕವಿಯು ಪರ್ವತದ ಹೆಸರನ್ನು **ವಿಜಯಾರ್ಧಪರ್ವತ**ವೆಂದೂ ಅದು ಕುಮುದ ಪುಷ್ಪದಂತೆ **ಬಿಳಿಯಬಣ್ಣ**ದ್ದಾಗಿದೆ ಎಂದೂ ವರ್ಣಿಸಿದ್ದಾನೆ.

ಕನಕಪದ್ಮಪರಾಗ: ಇದೇ ರೀತಿಯ ವಾಕ್ಯವು **ಕನಕಾಂಭೋಜರಜಂ** ಹಿಂದಿನ ೧–೬೨ ನೆಯ ಪದ್ಯದಲ್ಲಿದ್ದು, ಅಲ್ಲಿ ನೀಡಿರುವ **ವಿಶೇಷ ವಿವರಣೆ**ಯನ್ನು ನೋಡಿರಿ.

ಮತ್ತೇಭ **ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ಸಾಂದ್ರೇಂದುಕಾಂತೋಪಳೋ**
ವಿಕ್ರೀಡಿತ **ಚ್ಚಳಿತಾಚ್ಛಾಚ್ಛಜಲಪ್ರವಾಹಭರದೊಳ್ ಮಂದಾನಿಳಾಂದೋಳನಾ**
ಕುಳಿತಾರಾಮಫಲಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ
ಬೆಳೆದೋರಂತೊಱಗಿರ್ದ ಶಾಳಿವನದಿಂ ಸೇವ್ಯಂ ನಗೋಪತ್ಯಕಂ ॥ **೧–೬೪**

ಪದ ವಿಭಾಗ: ಎಳನೀರೊತ್ತಿನೊಳ್; ಒತ್ತಿ–ಬರ್ಪ, ಪೊನಲೊಳ್; ಸಾಂದ್ರೇಂದುಕಾಂತೋಪಳ,
ಉಚ್ಚಳಿತಾಚ್ಛಾಚ್ಛ–ಜಲಪ್ರವಾಹ–ಭರದೊಳ್; ಮಂದಾನಿಳಾಂದೋಳನ,
ಆಕುಳಿತ, ಆರಾಮ–ಫಲಾಮೃತೋಪಮ–ರಸ–ಸ್ರೋತಂಗಳೊಳ್; ಸಾಲ್ವಿನಂ,
ಬೆಳೆದೋರಂತೆ, ಒಱಗಿರ್ದ, ಶಾಳಿವನದಿಂ; ಸೇವ್ಯಂ–ನಗೋಪತ್ಯಕಂ ॥ ೧–೬೪

ಅನ್ವಯಾರ್ಥ: **(ಎಳನೀರೊತ್ತಿನೊಳ್=ಎಳನೀರ್+ಒತ್ತಿನೊಳ್)** ಎಳನೀರಿನಂತಹ ಸಿಹಿನೀರಿನ ನೀರೊತ್ತುಪ್ರದೇಶಗಳಲ್ಲಿ

(ಒತ್ತಿ ಬರ್ಪ ಪೊನಲೊಳ್) ಬುಗ್ಗೆಯಾಗಿ ಹರಿದು ಬರುವ ತೊರೆಗಳಲ್ಲಿ; **(ಸಾಂದ್ರೇಂದುಕಾಂತೋಪಳ=ಸಾಂದ್ರ+ಇಂದುಕಾಂತ+ಉಪಳ)** ಒತ್ತಾದ ಚಂದ್ರಕಾಂತ ಶಿಲೆಯ [ಪದರುಗಳಿಂದ] **(ಉಚ್ಚಳಿತಾಚ್ಛಾಚ್ಛ=ಉಚ್ಚಳಿತ+ಅಚ್ಛಾಚ್ಛ[=ಅಚ್ಛ+ಅಚ್ಛ])** ಚಿಮ್ಮುವ [ಒಸರುವ] ಅತ್ಯಂತ ಸ್ವಚ್ಛವಾದ **(ಜಲಪ್ರವಾಹ ಭರದೊಳ್)** ನೀರಿನ ಪ್ರವಾಹದ ರಭಸದಲ್ಲಿ; **(ಮಂದಾನಿಳಾಂದೋಳನ=ಮಂದಾನಿಳ+ಆಂದೋಳನ)** ಮಂದಮಾರುತದ ಬೀಸುವಿಕೆಯಿಂದ **(ಆಕುಳಿತ)** ಅಸ್ತವ್ಯಸ್ತವಾಗಿ [ಉದುರಿದ] **(ಆರಾಮ)** ಉದ್ಯಾನದ **(ಫಲಾಮೃತೋಪಮ=ಫಲ+ಅಮೃತೋಪಮ)** ಹಣ್ಣುಗಳ ಅಮೃತಕ್ಕೆಣೆಯಾದ **(ರಸಸ್ರೋತಂಗಳೊಳ್)** ರಸ ಪ್ರವಾಹದಿಂದಲೂ; **(ಸಾಲ್ವಿನಂ)** ಸಾಲುಗಳಲ್ಲಿ **(ಬೆಳೆದೋರಂತೊಱಗಿರ್ದ=ಬೆಳೆದು+ಓರಂತೆ+ಒಱಗಿರ್ದ)** ಬೆಳೆದು ಹಾಗೆಯೇ ಒಂದೇ ಸಮನಾಗಿ ಒರಗಿರುವ **(ಶಾಳಿವನದಿಂ)** ಬತ್ತದ ಗದ್ದೆಗಳಿಂದಲೂ [ಕೂಡಿದ] **(ನಗೋಪತ್ಯಕಂ=ನಗ+ಉಪತ್ಯಕಂ)** ವಿಜಯಾರ್ಧಪರ್ವತದ ತಪ್ಪಲು **(ಸೇವ್ಯಂ)** ಅನುಭವಿಸಲು ತಕ್ಕುದಾಗಿತ್ತು ॥೧-೬೪

ಭಾವಾರ್ಥ: ಎಳನೀರಿನಂತಹ ಸಿಹಿನೀರಿನ ನೀರೊತ್ತುಪ್ರದೇಶಗಳಿಂದ ಬುಗ್ಗೆಯಾಗಿ ಹರಿದು ಬರುವ ತೊರೆಗಳಿಂದಲೂ; ಒತ್ತಾದ ಚಂದ್ರಕಾಂತ ಶಿಲೆಯ [ಪದರುಗಳಿಂದ] ಒಸರುವ ಅತ್ಯಂತ ಸ್ವಚ್ಛವಾದ ನೀರಿನ ಪ್ರವಾಹದ ರಭಸದಿಂದಲೂ; ಮಂದಮಾರುತದ ಬೀಸುವಿಕೆಯಿಂದ ಅಸ್ತವ್ಯಸ್ತವಾಗಿ ಉದುರಿದ ಉದ್ಯಾನದ ಹಣ್ಣುಗಳ ಅಮೃತಕ್ಕೆಣೆಯಾದ ರಸ ಪ್ರವಾಹದಿಂದಲೂ; ಸಾಲುಗಳಲ್ಲಿ ಬೆಳೆದು ಹಾಗೆಯೇ ಒಂದೇ ಸಮನಾಗಿ ಒರಗಿರುವ ಬತ್ತದ ಗದ್ದೆಗಳಿಂದಲೂ ಕೂಡಿದ ವಿಜಯಾರ್ಧಪರ್ವತದ ತಪ್ಪಲು ಅನುಭವಿಸಲು ತಕ್ಕುದಾಗಿತ್ತು. ೧-೬೪

ವಿಶೇಷ ವಿವರಣೆ: ನೀರೊತ್ತಿನೊಳ್: ನದೀಮುಖದಲ್ಲಿ ಅಥವಾ ಸಮುದ್ರದ ಒತ್ತಡದಿಂದ ಅಂತರ್ಜಲ ಒತ್ತಿಕೊಂಡು ಬರುವ ಪ್ರದೇಶಗಳು.

ಚಂಪಕಮಾಲೆ **ನನೆಯನೆ ಪೇಱಿ ಕೆಂದಳಿರೊಳೆಯ್ದೆ ಬಟಿಲ್ದೆಳಮಾವು ಬಂದ ಮಾ**
ವನೆ ಮಱಿಗೊಂಡು ಬಗ್ಗಿಸುವ ಕೋಗಿಲೆ ಕೋಗಿಲೆಯಿರ್ಕೆದಾಣದೊಳ್
ಜಿನುಗುವ ತುಂಬಿ ತುಂಬಿಯೊಳರಲ್ದಲರೆಂಬಿವಱಿಂ ಬಸಂತರಾ
ಜನ ಮನೆಯಂತೆ ಕಣ್ಗೆಸೆದು ತೋಱುಗುಮು[1]ಲ್ಲಿಯ ನಂದನಾಳಿಗಳ್ ॥ ೧-೬೫

ಪದ ವಿಭಾಗ: ನನೆಯನೆ, ಪೇಱಿ, ಕೆಂದಳಿರೊಳ್, ಎಯ್ದೆ, ಬಟಿಲ್ದ, ಎಳಮಾವು; ಬಂದ-ಮಾವನೆ, ಮಱಿಗೊಂಡು, ಬಗ್ಗಿಸುವ, ಕೋಗಿಲೆ; ಕೋಗಿಲೆಯ, ಇರ್ಕೆದಾಣದೊಳ್, ಜಿನುಗುವ, ತುಂಬಿ; ತುಂಬಿಯೊಳ್, ಅರಲ್ದ, ಅಲರ್; ಎಂಬ, ಇವಱಿಂ, ಬಸಂತರಾಜನ, ಮನೆಯಂತೆ, ಕಣ್ಗೆಸೆದು, ತೋಱುಗುಂ, ಅಲ್ಲಿಯ, ನಂದನಾಳಿಗಳ್ ॥ ೧-೬೫

ಅನ್ವಯಾರ್ಥ: (ಕೆಂದಳಿರೊಳ್=ಕೆಂಪು+ತಳಿರೊಳ್) ಕೆಂಪು ಚಿಗುರಿನ ನಡುವೆ **(ಎಯ್ದೆ)** ಸೊಂಪಾಗಿಬಿಟ್ಟಿರುವ [ಚೆನ್ನಾಗಿ ಬಿಟ್ಟಿರುವ] **(ನನೆಯನೆ)** ಹೂವುಗಳನ್ನು **(ಪೇಱಿ)** ಹೇರಿಕೊಂಡು **(ಬಟಿಲ್ದೆಳಮಾವು=ಬಟಿಲ್ದ+ಎಳಮಾವು)** ಜೋಲುಬಿದ್ದಿರುವ ಎಳೆಯ ಮಾವಿನ ಮರಗಳು; **(ಬಂದ ಮಾವನೆ)** [ಹಾಗೆ] ಫಲಪುಷ್ಪಗಳಿಂದ ತುಂಬಿಕೊಂಡಿರುವ ಮಾವಿನ ಮರದ **(ಮಱಿಗೊಂಡು)** ಆಸರೆಯನ್ನು ಪಡೆದು **(ಬಗ್ಗಿಸುವ)** ಉಲಿಯುವ **(ಕೋಗಿಲೆ)** ಕೋಗಿಲೆ; **(ಕೋಗಿಲೆಯ)** [ಆ] ಕೋಗಿಲೆಯ **(ಇರ್ಕೆದಾಣದೊಳ್=ಇರ್ಕೆ+ತಾಣದೊಳ್)** ಆಶ್ರಯಸ್ಥಾನದಲ್ಲಿ **(ಜಿನುಗುವ ತುಂಬಿ)** ಮೊರೆಯುವ [ಝೇಂಕರಿಸುವ] ದುಂಬಿ; **(ತುಂಬಿಯೊಳರಲ್ದಲರ್=ತುಂಬಿಯೊಳ್+ಅರಲ್ದ+ಅಲರ್)** [ಅಂತಹ] ದುಂಬಿಗಳಿರುವೆಡೆಯಲ್ಲಿ ಬಿರಿದ ಹೂಗಳು, **(ಎಂಬ)** ಎನ್ನುವಂತೆ, **(ಇವಱಿಂ)** ಇವರುಗಳಿಂದ **(ಅಲ್ಲಿಯ)** ಅಲ್ಲಿನ [ವಿಜಯಾರ್ಧಪರ್ವತದ ತಪ್ಪಲಿನಲ್ಲಿರುವ] **(ನಂದನಾಳಿಗಳ್=ನಂದನ+ಆಳಿಗಳ್)** ವನ ಸಮೂಹಗಳು [ಸಾಲು ಉದ್ಯಾನಗಳು] **(ಬಸಂತರಾಜನ ಮನೆಯಂತೆ)** ವಸಂತರಾಜನ [ಅರ]ಮನೆಯಂತೆ **(ಕಣ್ಗೆಸೆದು=ಕಣ್ಗೆ+ಎಸೆದು)** [ನೋಡುಗರ] ಕಣ್ಣುಗಳಿಗೆ ಶೋಭಾಯಮಾನವಾಗಿ **(ತೋಱುಗುಂ)** ತೋರುತ್ತಿವೆ ॥ ೧-೬೫

[1] ಮೂಲಪಾಠ-'ತೋಱುಗುಮಲ್ಲಿಯ', ಕೆಜಿ ಯವರ ಪಾಠ-'ತೋಱುವುವಲ್ಲಿಯ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಈ ಪದ್ಯದಲ್ಲಿ ಕವಿಯು ವಿಜಯಾರ್ಧಪರ್ವತದ ತಪ್ಪಲಿನಲ್ಲಿರುವ ವನಗಳಲ್ಲಿ ಉಂಟಾದ ವಸಂತಋತುವಿನ ಆಗಮನವನ್ನು ವರ್ಣಿಸಿರುವನು.

ಭಾವಾರ್ಥ: ಕೆಂದಳಿರು ಮತ್ತು ಸೊಂಪಾಗಿಬಿಟ್ಟಿರುವ ಹೂವುಗಳಿಂದ ಜೋಲುಬಿದ್ದಿರುವ ಎಳೆಯ ಮಾವಿನ ಮರಗಳು; ಹಾಗೆ ಫಲಪುಷ್ಪಗಳಿಂದ ತುಂಬಿಕೊಂಡಿರುವ ಮಾವಿನ ಮರದ ಎಲೆಗಳ ನಡುವೆ ಉಲಿಯುವ ಕೋಗಿಲೆ; ಆ ಕೋಗಿಲೆಯ ಆಶ್ರಯಸ್ಥಾನದಲ್ಲಿ ಮೊರೆಯುವ ದುಂಬಿ; ಆ ದುಂಬಿಗಳಿರುವೆಡೆಯಲ್ಲಿ ಬಿರಿದ ಹೂಗಳು ಎನ್ನುವಂತೆ, ಇವುಗಳಿಂದ ಕೂಡಿರುವ ವಿಜಯಾರ್ಧಪರ್ವತದ ತಪ್ಪಲಿನಲ್ಲಿರುವ ಸಾಲು ಉದ್ಯಾನಗಳು ವಸಂತರಾಜನ ಅರಮನೆಯಂತೆ ನೋಡುಗರ ಕಣ್ಣುಗಳಿಗೆ ಶೋಭಾಯಮಾನವಾಗಿ ತೋರುತ್ತಿವೆ. ೧–೬೫

ಚಂಪಕಮಾಲೆ **ಪೊಸನನೆಯೊಳ್ ಪಸುರ್ಪಲರೊಳಂಚಿರಮಲ್ಲದ ಬೆಳ್ಪು ಪಲ್ಲವ**
ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್
ಮಿಸುಗುವ ಕರ್ಪ್ಪುಬರ್ಚಿಸಿದವೊಲ್ ಬಗೆಗೊಳ್ವನೆಗಂ ಬಸಂತದೊಳ್
ಬಸದಿಯ ಬಾಗಿಲಂ ತೆಱೆದ ಮಾಟಿಕೆಯೊಳಿರ್ದುವು ಬಂದ ಮಾವುಗಳ್[1] **॥೧–೬೬**

ಪದ ವಿಭಾಗ: ಪೊಸ, ನನೆಯೊಳ್, ಪಸುರ್ಪು; ಅಲರೊಳ್, ಅಂಚಿರಮಲ್ಲದ, ಬೆಳ್ಪು;
ಪಲ್ಲವ–ಪ್ರಸರದೊಳ್, ಎಯ್ದೆ, ಕಣ್ಗೆ, ಪಸರಂಬಡೆದೊಪ್ಪುವ, ಕೆಂಪು; ತುಂಬಿಯೊಳ್,
ಮಿಸುಗುವ, ಕರ್ಪ್ಪು; ಬರ್ಚಿಸಿದ–ವೊಲ್, ಬಗೆಗೊಳ್ವನೆಗಂ, ಬಸಂತದೊಳ್,
ಬಸದಿಯ, ಬಾಗಿಲಂ, ತೆಱೆದ, ಮಾಟಿಕೆಯೊಳ್, ಇರ್ದುವು, ಬಂದ, ಮಾವುಗಳ್ ॥ ೧–೬೬

ಅನ್ವಯಾರ್ಥ: **(ಪೊಸ ನನೆಯೊಳ್ ಪಸುರ್ಪು)** ಎಳೆಯ ಮೊಗ್ಗಿನಲ್ಲಿರುವ ಹಸಿರು; **(ಅಲರೊಳಂಚಿರಮಲ್ಲದ=ಅಲರೊಳ್+ ಅಂಚಿರಂ+ಅಲ್ಲದ[=ಅಸ್ಥಿರವಲ್ಲದ])** ಹೂವಿನಲ್ಲಿ ಬಹುಕಾಲವಿರುವ **(ಬೆಳ್ಪು)** ಬಿಳುಪು; **(ಪಲ್ಲವಪ್ರಸರದೊಳೆಯ್ದೆ [=ಪಲ್ಲವ–ಪ್ರಸರದೊಳ್+ಎಯ್ದೆ)** ಚಿಗುರಿನ ಸಮೂಹದಲ್ಲಿ ಅತಿಶಯವಾಗಿ **(ಕಣ್ಗೆ)** ಕಣ್ಣಿಗೆ **(ಪಸರಂಬಡೆದೊಪ್ಪುವ=ಪಸರಂಬಡೆದು+ ಒಪ್ಪುವ)** ಹರವಿಕೊಂಡು [ತುಂಬಿಕೊಂಡು] ಶೋಭಿಸುವ **(ಕೆಂಪು)** ಕೆಂಪು; **(ತುಂಬಿಯೊಳ್ ಮಿಸುಗುವ)** ದುಂಬಿಯಲ್ಲಿ ಹೊಳೆಯುವ [ಕಂಗೊಳಿಸುವ] **(ಕರ್ಪು)** ಕಪ್ಪು; **(ಬರ್ಚಿಸಿದವೊಲ್)** [ಈ ಬಣ್ಣಗಳನ್ನು ಅವುಗಳ ಮೇಲೆ] ಲೇಪಿಸಿದೆಯೋ ಎಂಬಂತೆ **(ಬಗೆಗೊಳ್ವನೆಗಂ=ಬಗೆಗೊಳ್ವ+ಇನೆಗಂ)** ಮನಸ್ಸನ್ನು ಸೆಳೆಯುತ್ತಿರಲು **(ಬಸಂತದೊಳ್)** ವಸಂತಕಾಲದಲ್ಲಿನ **(ಬಂದ ಮಾವುಗಳ್)** ಫಲಪುಷ್ಪಭರಿತವಾಗಿದ್ದ ಆ ಮಾವಿನ ಮರಗಳು, **(ಬಸದಿಯ ಬಾಗಿಲಂ)** ಬಸದಿಯ ಬಾಗಿಲನ್ನು **(ತೆಱೆದ ಮಾಟಿಕೆಯೊಳಿರ್ದುವು=ತೆಱೆದ–ಮಾಟಿಕೆಯೊಳ್+ಇರ್ದುವು)** ತೆರೆದ ರೀತಿಯಲ್ಲಿ ತೋರುತ್ತಿದ್ದವು ॥ ೧–೬೬

ಭಾವಾರ್ಥ: ಮಾವಿನ ಎಳೆಯ ಮೊಗ್ಗಿನಲ್ಲಿರುವ ಹಸಿರು; ಬಿರಿದ ಮಾವಿನಹೂವಿನಲ್ಲಿ ಬಹುಕಾಲವಿರುವ ಬಿಳುಪು; ಮಾವಿನ ಚಿಗುರಿನ ಸಮೂಹದಲ್ಲಿ ಅತಿಶಯವಾಗಿ ಕಣ್ಣುಗಳಲ್ಲಿ ತುಂಬಿಕೊಂಡು ಶೋಭಿಸುವ ಕೆಂಪು; ದುಂಬಿಯಲ್ಲಿ ಕಂಗೊಳಿಸುವ ಕಪ್ಪು; ಈ ಬಣ್ಣಗಳನ್ನು ಅವುಗಳ ಮೇಲೆ ಲೇಪಿಸಿದೆಯೋ ಎನ್ನುವಂತೆ ಮನಸ್ಸನ್ನು ಸೆಳೆಯುತ್ತಿರಲಾಗಿ, ವಸಂತಕಾಲದಲ್ಲಿ ಫಲಪುಷ್ಪಭರಿತವಾಗಿದ್ದ ಮಾವಿನ ಮರಗಳು, ಬಸದಿಯ ಬಾಗಿಲನ್ನು ತೆರೆದ ರೀತಿಯಲ್ಲಿ ತೋರುತ್ತಿದ್ದುವು. ೧–೬೬

ವಿಶೇಷ ವಿವರಣೆ: ಈ ಕಾವ್ಯದಲ್ಲಿ ಕವಿಯು, ತನಗೆ ಅತ್ಯಂತ ಪ್ರಿಯವಾದ ಮಾವಿನಮರವನ್ನು, ಸಂದರ್ಭೋಚಿತವಾಗಿ ಅದರ ವಿವಿಧ ಅಂಗಗಳನ್ನು ಗುರಿಯಾಗಿಸಿಕೊಂಡು, ವೈವಿಧ್ಯಮಯವಾಗಿ ಕಾವ್ಯದ ತುಂಬೆಲ್ಲಾ ವರ್ಣಿಸಿರುವುದು ಸರಿಯಷ್ಟೆ. ಹಾಗೆಯೇ ಕವಿಯು ಈ ವೃತ್ತಪದ್ಯದಲ್ಲಿಯೂ ವಸಂತಕಾಲದಲ್ಲಿನ ಮಾವಿನ ಎಳೆಯ ಮೊಗ್ಗಿನ ಕವಚದ ಗಿಳಿಹಸಿರು ಬಣ್ಣವನ್ನೂ, ಆ ಮೊಗ್ಗಿನ ಕವಚವು ಬಿರಿದು ಹೊರಹೊಮ್ಮುವ ಹೂವಿನ, ದೀರ್ಘಕಾಲದವರೆಗೆ ಮಾಸದ ಅದರ ಬಿಳಿಯ ಬಣ್ಣವನ್ನೂ, ಮಾವಿನ ಎಳೆಯ ಚಿಗುರಿನ ಸಮೂಹಗಳಲ್ಲಿ ಹರವಿಕೊಂಡು ಕಂಗೊಳಿಸುವ ಕೆಂಪು ಬಣ್ಣವನ್ನೂ, ಹೂವುಗಳಿಗೆ ಲಗ್ಗೆಯಿಟ್ಟಿರುವ ದುಂಬಿಗಳ ಮೈಮೇಲೆ ಮಿರುಗುವ ಕಪ್ಪುಬಣ್ಣವನ್ನೂ, ಹೀಗೆ ವರ್ಣರಂಜಿತವಾದ ಎಳೆಯ ಮೊಗ್ಗು ಹೂವು ಚಿಗುರು ಹಾಗೂ ದುಂಬಿಗಳಲ್ಲಿ ತುಂಬಿಕೊಂಡಿರುವ ಬಣ್ಣಗಳ ಮೇಲ್ಮೆಯನ್ನು ಲಕ್ಷ್ಯಮಾಡಿಕೊಂಡು ಮನೋಹರವಾಗಿ ವರ್ಣಿಸಿರುವನು. ಆದರೆ, ಅಂತಹ

[1] ಮೂಲಪಾಠ–'ರ್ದುವು ಬಂದ ಮಾವುಗಳ್', ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವಂ (೧೦–೨೯) ಪಾಠ–'ರ್ದುದು ಬಂದ ಮಾಮರಂ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ವಸಂತಕಾಲದ ವರ್ಣಭರಿತ ಮಾವಿನ ಮರಕ್ಕೆ ಉಪಮಾನವನ್ನು ಕೊಟ್ಟಿರುವುದು ಮಾತ್ರ ಬಹಳ ವಿಶಿಷ್ಟವಾದದ್ದು. ವಿವಿಧ ಬಣ್ಣಗಳಿಂದ ಕೂಡಿದ ಆ ವರ್ಣರಂಜಿತವಾದ ಫಲಭರಿತ ಮಾವಿನ ಮರವನ್ನು, ಬಸದಿಯ ಬಾಗಿಲನ್ನು ತೆರೆದ ರೀತಿಗೆ ಹೋಲಿಸುತ್ತಾನೆ !!! ಇವೆರಡಕ್ಕೂ ಇರುವ ಸಾಮ್ಯತೆ ಹೇಗೆಂದರೆ, ಬಸದಿಯ ಬಾಗಿಲನ್ನು ತೆರೆಯುತ್ತಿದ್ದಂತೆಯೇ, ಬಸದಿಯೆಡೆಗೆ ನೋಟಬೀರಿದರೆ ಮೊದಲಿಗೆ, ಮರಕತಮಣಿ ತೋರಣ ಕಾಣುತ್ತದೆ. ನಂತರ, ಬಸದಿಯೊಳಗೆಲ್ಲ ಅಲಂಕರಿಸಿರುವ ವರ್ಣವೈವಿಧ್ಯತೆಯಿಂದ ಕೂಡಿ ಹೊಳೆಯುತ್ತಿರುವ ಮುತ್ತು, ಮಾಣಿಕ್ಯ ಮತ್ತು ಇಂದ್ರನೀಲ ರತ್ನಗಳು ಕಾಣುತ್ತಿವೆ. ಬಸದಿಯ ಒಳಗೆಲ್ಲಾ ಚೆಲ್ಲಿರುವ ದೇದೀಪ್ಯಮಾನವಾದ ಪ್ರದೀಪಗಳ ಬೆಳಕು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿವೆ. ಬಸದಿಯಲ್ಲಿರುವ ಶ್ರೇಷ್ಠವಾದ ಬಗೆಬಗೆಯ ರತ್ನಗಳಿಂದ ರಚಿತವಾದ ಭೃಂಗಾರ, ಕಳಶ, ದರ್ಪಣಾದಿ ಅಷ್ಟಮಂಗಳ ದ್ರವ್ಯಗಳು ವರ್ಣರಂಜಿತವಾಗಿ ಹೊಳೆಯುತ್ತಿವೆ. ಹೀಗೆ ವರ್ಣರಂಜಿತವಾಗಿ ಬೆಳಗುತ್ತಿರುವ ಬಸದಿಯಲ್ಲಿ, ಭಾಮಂಡಲಾದಿ ಅಷ್ಟಮಹಾಪ್ರಾತಿಹಾರ್ಯಗಳಿಂದ ಪರಿವೃತವಾಗಿ ಪ್ರಕಾಶಿಸುತ್ತಿರುವ ಜಿನಚೈತ್ಯದ (ತೀರ್ಥಂಕರ ಪ್ರತಿಮೆಯ) ದರ್ಶನದಿಂದ ಭವ್ಯರ ಮನಸ್ಸಿನಲ್ಲಿ ಯಾವ ಆನಂದದ ಅನುಭೂತಿಯುಂಟಾಗುತ್ತದೆಯೋ, ಅಂತಹದೇ ಅನುಭವವು ವಸಂತಕಾಲದಲ್ಲಿನ, ವಿವಿಧ ವರ್ಣಯುಕ್ತವಾದ ಆ ಫಲಪುಷ್ಪಭರಿತ ಮಾವಿನ ಮರವನ್ನು ನೋಡಿದಾಗ ಉಂಟಾಗುತ್ತದೆ. ಹಾಗೆ ವಸಂತಕಾಲದ ಫಲಪುಷ್ಪಭರಿತ ಮಾವಿನಮರದಲ್ಲಿ ಮೇಳೈಸಿರುವ ಈ ವರ್ಣವೈವಿಧ್ಯವು ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತದೆ ಎಂಬುದು ಈ ವೃತ್ತಪದ್ಯದ ತಾತ್ಪರ್ಯ.

ಮತ್ತೇಭ **ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೆಯ್ದಿಲ್ಗೊಳಂ ತೂಗಿ ಪ**
ವಿಕ್ರೀಡಿತ **ಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱುಗಲಂ ಪೇಱಿರ್ದಚೆಂದೆಂಗು ಕ**
ಟ್ಟಲಿಸುತ್ತಿರ್ಪೆಲೆವಳ್ಳಿ ಪಣ್ತೊಲೆವ ನಾರಂಗಂ ಫಲವ್ರಾತದಿಂ
ನೆಲನಂ ಮೋದುವ ಮಾತುಳುಂಗಮೆಸೆಗುಂ ವಿದ್ಯಾಧರೋದ್ಯಾನದೊಳ್ ॥ ೧–೬೭

ಪದ ವಿಭಾಗ: ಅಲರ್ದ, ಅಂಭೋರುಹ–ಷಂಡಂ; ಉಳ್ಳಲರ್ದ, ಚೆನ್ನೆಯ್ದಿಲ್ಗೊಳಂ; ತೂಗಿ,
ಪಣ್ಗೊಲೆಯಿಂ, ಬಳ್ಕುವ, ಕೌಂಗು; ಕಾಯ್ದುಱುಗಲಂ, ಪೇಱಿರ್ದ, ಚೆಂದೆಂಗು;
ಕಟ್ಟಲಿಸುತ್ತ, ಇರ್ಪ, ಎಲೆವಳ್ಳಿ; ಪಣ್ತೊಲೆವ, ನಾರಂಗಂ; ಫಲವ್ರಾತದಿಂ,
ನೆಲನಂ, ಮೋದುವ, ಮಾತುಳುಂಗಂ; ಎಸೆಗುಂ, ವಿದ್ಯಾಧರ, ಉದ್ಯಾನದೊಳ್ ॥ ೧–೬೭

ಅನ್ವಯಾರ್ಥ: **(ಅಲರ್ದ ಅಂಭೋರುಹ ಷಂಡಂ)** ಅರಳಿದ ಕಮಲಗಳ ಸಮೂಹವೂ; **(ಉಳ್ಳಲರ್ದ)** ಚೆನ್ನಾಗಿ ಬಿರಿದ [ಪೂರ್ಣ ಅರಳಿದ] **(ಚೆನ್ನೆಯ್ದಿಲ್ಗೊಳಂ=ಚೆನ್ನೆಯ್ದಿಲೆ+ಕೊಳಂ)** ಕೆಂಪುನೈದಿಲೆಗಳ ಸರೋವರವೂ; **(ತೂಗಿ)** ತೂಗಾಡುವ **(ಪಣ್ಗೊಲೆಯಿಂ=ಪಣ್+ಗೊಲೆಯಿಂ)** ಬಲಿತು ಹಣ್ಣಾದ ಗೊನೆಗಳಿಂದ **(ಬಳ್ಕುವ)** ಬಳುಕುವ **(ಕೌಂಗು)** ಅಡಕೆ ಮರಗಳೂ; **(ಕಾಯ್ದುಱುಗಲಂ=ಕಾಯ್+ತುಱುಗಲಂ)** ಕಾಯಿಗಳ ಗೊನೆಗಳನ್ನು **(ಪೇಱಿರ್ದ=ಪೇಱು+ಇರ್ದ)** ಹೇರಿಕೊಂಡಿರುವ **(ಚೆಂದೆಂಗು)** ಕೆಂಪುಬಣ್ಣದ ಕಾಯಿ ಬಿಡುವ ತೆಂಗಿನಮರಗಳೂ; **(ಕಟ್ಟಲಿಸುತ್ತಿರ್ಪೆಲೆವಳ್ಳಿ=ಕಟ್ಟಲಿಸುತ್ತ+ಇರ್ಪ+ಎಲೆಬಳ್ಳಿ)** ಕತ್ತಲೆ ಕವಿಯಿಸುವಂತೆ ಹಬ್ಬಿರುವ ವೀಳೆಯದೆಲೆಯ ಬಳ್ಳಿಗಳೂ; **(ಪಣ್ತೊಲೆವ=ಪಣ್ತು+ಒಲೆವ)** ಹಣ್ಣುಬಿಟ್ಟು ತೊನೆದಾಡುವ **(ನಾರಂಗಂ)** ಕಿತ್ತಳೆಗಿಡಗಳೂ; **(ಫಲ ವ್ರಾತದಿಂ)** ಹಣ್ಣುಗಳ ಗೊಂಚಲಿನ [ಭಾರಕ್ಕೆ] **(ನೆಲನಂ ಮೋದುವ)** ನೆಲವನ್ನು ಮುಟ್ಟುವ **(ಮಾತುಳುಂಗಂ)** ಮಾದಳದ ಹಣ್ಣಿನ ಮರಗಳೂ; **(ವಿದ್ಯಾಧರೋದ್ಯಾನದೊಳ್=ವಿದ್ಯಾಧರ+ಉದ್ಯಾನದೊಳ್)** ವಿದ್ಯಾಧರರ ಉದ್ಯಾನದಲ್ಲಿ **(ಎಸೆಗುಂ)** ಶೋಭಿಸುತ್ತಿರುವುವು ॥ ೧–೬೭

ಭಾವಾರ್ಥ: ಅರಳಿದ ಕಮಲಗಳ ಸಮೂಹವೂ; ಚೆನ್ನಾಗಿ ಬಿರಿದ ಕೆಂಪುನೈದಿಲೆಗಳನ್ನುಳ್ಳ ಕೊಳವೂ; ತೂಗಾಡುವ ಬಲಿತ ಗೊನೆಗಳಿಂದ ಬಳುಕುವ ಅಡಕೆ ಮರಗಳೂ; ಕಾಯಿಗಳ ಗೊನೆಗಳನ್ನು ಹೇರಿಕೊಂಡಿರುವ ಚೆಂದೆಂಗಿನ (ತೆಂಗಿನ) ಮರಗಳೂ; ಕತ್ತಲೆ ಕವಿಯಿಸುವಂತೆ ಹಬ್ಬಿರುವ ವೀಳೆಯದೆಲೆಯ ಬಳ್ಳಿಗಳೂ; ಹಣ್ಣುಬಿಟ್ಟು ತೊನೆದಾಡುವ ಕಿತ್ತಳೆಗಿಡಗಳೂ; ಹಣ್ಣುಗಳ ಗೊಂಚಲಿನಿಂದ ತುಂಬಿರುವ ಮಾದಳದ ಹಣ್ಣಿನ ಮರಗಳೂ; ವಿದ್ಯಾಧರರ ಉದ್ಯಾನದಲ್ಲಿ ಶೋಭಿಸುತ್ತಿರುವುವು. ೧–೬೭

ಕಂದ **ಮಲರ್ದಲರ್ದನಾಗಸಂಪಗೆ**
ಯಲರ್ಗಳೊಳಗ್ಗಳಿ[1]ಸಿ ಬಿರಿವ ಪೊಂಬಾಟಿಯ ತ
ಣ್ಮಲೆವ ಪೊಸಗಂಪಿನೊಳ್ ಪುದಿ
ದಲೆವೆಲರಾಱಿಪುದು ಖಚರದಂಪತಿಶತಮಂ ॥ ೧–೬೮

ಪದ ವಿಭಾಗ: ಮಲದು, ಅಲರ್ದ, ನಾಗಸಂಪಗೆಯ;
ಅಲರ್ಗಳೊಳ್, ಅಗ್ಗಳಿಸಿ, ಬಿರಿವ, ಪೊಂಬಾಟಿಯ;
ತಣ್ಮಲೆವ, ಪೊಸಗಂಪಿನೊಳ್, ಪುದಿದು,
ಅಲೆವ, ಎಲರ್; ಆಱಿಪುದು, ಖಚರದಂಪತಿ, ಶತಮಂ ॥ ೧–೬೮

ಅನ್ವಯಾರ್ಥ: [ಆ ವಿದ್ಯಾಧರರ ಉದ್ಯಾನದಲ್ಲಿ] **(ಮಲರ್ದಲರ್ದ=ಮಲರ್ದು+ಅಲರ್ದ)** ಹೂವಾಗಿ ಅರಳಿದ **(ನಾಗಸಂಪಗೆಯ)** ನಾಗಸಂಪಗೆಯ, [ಹಾಗೂ] **(ಅಲರ್ಗಳೊಳಗ್ಗಳಿಸಿ=ಅಲರ್ಗಳೊಳ್+ಅಗ್ಗಳಿಸಿ)** ಹೂಗಳಲ್ಲೇ ದೊಡ್ಡದಾಗಿ **(ಬಿರಿವ ಪೊಂಬಾಟಿಯ)** ಅರಳುವ ಹೊಂಬಾಳೆಯ, **(ತಣ್ಮಲೆವ)** ಹಿತವಾಗಿ ಪಸರಿಸುವ [ಹರಡುವ] **(ಪೊಸಗಂಪಿನೊಳ್= ಪೊಸ+ಕಂಪಿನೊಳ್)** ಹೊಸದಾದ ಪರಿಮಳಗಳೊಂದಿಗೆ [ಆಗತಾನೆ ಬಿರಿದು ಸೂಸುವ ಸುವಾಸನೆಯೊಂದಿಗೆ] **(ಪುದಿದಲೆವೆಲರ್=ಪುದಿದು+ಅಲೆವ+ಎಲರ್)** ಬೆರೆತು ಬೀಸುವ ಗಾಳಿಯು, **(ಖಚರದಂಪತಿ ಶತಮಂ)** ನೂರಾರು ವಿದ್ಯಾಧರದಂಪತಿಗಳಿಗೆ **(ಆಱಿಪುದು)** ತಂಪೆರೆವುದು ॥ ೧–೬೮

ಭಾವಾರ್ಥ: ಆ ವಿದ್ಯಾಧರರ ಉದ್ಯಾನದಲ್ಲಿ, ಅರಳಿದ ನಾಗಸಂಪಗೆಯ ಹೂಗಳ ಸುವಾಸನೆಯಿಂದಲೂ ಹಾಗೂ ಹೂಗಳಲ್ಲೇ ದೊಡ್ಡದಾಗಿ ಅರಳುವ ಹೊಂಬಾಳೆಯ, ಹಿತವಾಗಿ ಹರಡುವ ಹೊಸಕಂಪಿನೊಂದಿಗೆ ಬೆರೆತು ಬೀಸುವ ಗಾಳಿಯು, ನೂರಾರು ಖಚರ ದಂಪತಿಗಳಿಗೆ ತಂಪೆರೆವುದು. ೧–೬೮

ಮತ್ತೇಭ ವಿಕ್ರೀಡಿತ **ಬೆಸನಂ ಪಾರ್ವುವು ಮನ್ತ್ರದೇವತೆಗಳಾದೇಬಾರ್ತೆಗಂ ಬೇಗಮಾ**
ಗಸದೊಳ್ ವಿದ್ಯೆಗಳೆಯ್ದೆ ಬರ್ಪುವು ಜಗಕ್ಕಾಶ್ಚರ್ಯಮೈಶ್ವರ್ಯಮಾ
ವಸಥಂ ರೂಪ್ಯಮಹೀಧರೇಂದ್ರಮೆನೆ [2]ಪೂಣ್ದಾವಂಗಮಂತೆಯ್ದೆ ಬ
ಣ್ಣಿಸಲೇಂ ಬರ್ಕುಮೆ ಬಾರದಂಬರಚರಶ್ರೀಯಂ ಪುರಶ್ರೀಯುಮಂ ॥ ೧–೬೯

ಪದ ವಿಭಾಗ: ಬೆಸನಂ, ಪಾರ್ವುವು, ಮನ್ತ್ರದೇವತೆಗಳ್, ಅದು, ಏ, ಬಾರ್ತೆಗಂ; ಬೇಗಂ,
ಆಗಸದೊಳ್, ವಿದ್ಯೆಗಳ್, ಎಯ್ದೆ, ಬರ್ಪುವು; ಜಗಕ್ಕೆ, ಆಶ್ಚರ್ಯಂ; ಐಶ್ವರ್ಯಂ,
ಆವಸಥಂ, ರೂಪ್ಯಮಹೀಧರೇಂದ್ರಂ; ಎನೆ, ಪೂಣ್ದು, ಆವಂಗಂ, ಅಂತು, ಎಯ್ದೆ,
ಬಣ್ಣಿಸಲ್, ಏಂ, ಬರ್ಕುಮೆ, ಬಾರದು, ಅಂಬರಚರ, ಶ್ರೀಯಂ, ಪುರಶ್ರೀಯುಮಂ ॥ ೧–೬೯

ಅನ್ವಯಾರ್ಥ: **(ಮನ್ತ್ರ ದೇವತೆಗಳ್)** ಮಂತ್ರಾಭಿಮಾನಿಯಾದ ದೇವತೆಗಳು **(ಅದು)** ಅದು [ಎಂದರೆ, ಖೇಚರರು ಅಪೇಕ್ಷಿಸುವ] **(ಏ)** ಏನೊಂದು **(ಬಾರ್ತೆಗಂ)** ಕೆಲಸವನ್ನಾದರೂ ಮಾಡಿಕೊಡಲು [ಸೇವೆ ಸಲ್ಲಿಸಲು] **(ಬೆಸನಂ ಪಾರ್ವುವು)** ಅವರ ಆಜ್ಞೆಯನ್ನು ಎದುರುನೋಡುತ್ತಿರುತ್ತವೆ; **(ಬೇಗಮಾಗಸದೊಳ್=ಬೇಗಂ+ಆಗಸದೊಳ್)** [ಆಜ್ಞೆ ನೀಡುತ್ತಿದ್ದಂತೆಯೇ] ತಕ್ಷಣವೇ ಆಕಾಶಮಾರ್ಗದಲ್ಲಿ **(ವಿದ್ಯೆಗಳೆಯ್ದೆಬರ್ಪುವು=ವಿದ್ಯೆಗಳ್+ಎಯ್ದೆಬರ್ಪುವು)** [ವಿದ್ಯಾಧರ]ವಿದ್ಯೆಗಳು ಸಮೀಪಿಸಿ ಬರುವುವು; **(ಜಗಕ್ಕಾಶ್ಚರ್ಯಂ=ಜಗಕ್ಕೆ+ಆಶ್ಚರ್ಯಂ)** [ಇದು] ಜಗತ್ತಿಗೆ ಆಶ್ಚರ್ಯಕರವಾದದ್ದು; **(ರೂಪ್ಯಮಹೀಧರೇಂದ್ರಂ=ರೂಪ್ಯ**

---

[1] ಮೂಲಪಾಠ–'ಗ್ಗಳಿಸಿ', ಕೆಜಿ ಯವರ ಪಾಠ–'ಗ್ಗಲಿಸಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಪೂಣ್ದಾವಂಗಂ=ಪೂಣ್ದು+**ಆವಂಗಂ; ಆವಂಗಂ**=ಆವಂ+ಗೆ+ಅಂ–ಇಲ್ಲಿ **'ಆವಂ'** ಶಬ್ದದ ಧಾತುರೂಪ **'ಆವುದು'; 'ಆವುದು'** ಶಬ್ದದ ಪುಲ್ಲಿಂಗ ಏಕವಚನ ರೂಪಗಳು–**'ಆವಂ'**, ಆವನ್, ಆವನು, ಆವೊಂ, ಆವೊನ್; ಇಲ್ಲಿ **'ಗೆ'** ಎಂಬುದು ಚತುರ್ಥೀವಿಭಕ್ತಿಪ್ರತ್ಯಯವಾಗಿದ್ದು, **'ಅಂ'** ಎಂಬುದು ಸಮುಚ್ಚಯವಾಚಕವಾಗಿದೆ. **'ಆವಂಗಂ=ಯಾವನಿಗೇ ಆದರೂ/ಯಾವನಿಗಾದರೂ'.**

[=ಬೆಳ್ಳಿ/ರಜತ]–ಮಹೀಧರ[=ಪರ್ವತ]+ಇಂದ್ರ[=ಶ್ರೇಷ್ಠವಾದ]) [ಇನ್ನು ಈ] ಶ್ರೇಷ್ಠವಾದ ರಜತಪರ್ವತವಾದರೋ **(ಐಶ್ವರ್ಯಮಾವಸಥಂ=ಐಶ್ವರ್ಯಂ+ಆವಸಥಂ)** ಸಂಪತ್ತಿನ ಆವಾಸಸ್ಥಾನ; **(ಎನೆ)** ಎಂದಮೇಲೆ **(ಪೂಣ್ದು)** [ವರ್ಣಿಸುವೆನೆಂದು] ಶಪಥ ಮಾಡಿದ **(ಆವಂಗಂ=ಆವಂಗೆ+ಅಂ)** ಯಾವನಿಗಾದರೂ **(ಅಂತೆಯ್ದೆ=ಅಂತು+ಎಯ್ದೆ)** ಹಾಗೆ ಅತಿಶಯವಾದ **(ಅಂಬರಚರ ಶ್ರೀಯಂ)** ವಿದ್ಯಾಧರ ವೈಭವವನ್ನೂ [ಮತ್ತು] **(ಪುರಶ್ರೀಯುಮಂ)** ಆ ಪುರದ ವೈಭವವನ್ನೂ **(ಬಣ್ಣಿಸಲೇಂ)** ವರ್ಣಿಸಲೇನು **(ಬರ್ಕುಮೆ)** ಸಾಧ್ಯವಾಗುತ್ತದೆಯೇ? **(ಬಾರದು)** ಸಾಧ್ಯವಾಗದು !! ॥ ೧–೬೯

ಈ ವೃತ್ತಪದ್ಯದಲ್ಲಿ ಕವಿಯು ವಿದ್ಯಾಧರರು ಅನುಭವಿಸುವ ಸುಖ–ಸಂಪತ್ತನ್ನು ವರ್ಣಿಸಿದ್ದಾನೆ.

ಭಾವಾರ್ಥ: ಖೇಚರರು ಅಪೇಕ್ಷಿಸುವ ಏನೊಂದು ಕೆಲಸವನ್ನಾದರೂ ಮಾಡಿಕೊಡಲು ಅಥವಾ ಯಾವುದೇ ಸೇವೆ ಸಲ್ಲಿಸಲು ಮಂತ್ರ ದೇವತೆಗಳು ಅವರ ಆಜ್ಞೆಯನ್ನು ಎದುರು ನೋಡುತ್ತಿರುತ್ತವೆ; ಆಜ್ಞೆ ನೀಡುತ್ತಿದ್ದಂತೆಯೇ ತಕ್ಷಣವೇ ಆಕಾಶಮಾರ್ಗದಲ್ಲಿ ವಿದ್ಯಾಧರ ವಿದ್ಯೆಗಳು ಸಮೀಪಿಸಿ ಬರುವುವು; ಇದು ಜಗತ್ತಿಗೆ ವಿಸ್ಮಯವನ್ನುಂಟುಮಾಡುವುದು; ಇನ್ನು ಈ ಶ್ರೇಷ್ಠವಾದ ರಜತಪರ್ವತವಾದರೋ ಸಂಪತ್ತಿಗೆ ಆವಾಸಸ್ಥಾನ; ಎಂದಮೇಲೆ ವರ್ಣಿಸುವೆನೆಂದು ಶಪಥ ಮಾಡಿದ ಯಾರಿಗಾದರೂ, ಈ ಅತಿಶಯವಾದ ಖೇಚರರ ವೈಭವವನ್ನೂ ಮತ್ತು ಆ ಪುರದ ವೈಭವವನ್ನೂ ವರ್ಣಿಸಲೇನು ಸಾಧ್ಯವಾಗುತ್ತದೆಯೇ? ಸಾಧ್ಯವಾಗದು !! ಎಂದು ಕವಿಯು ಹೇಳುತ್ತಾನೆ. ೧–೬೯

ಮತ್ತೇಭ ವಿಕ್ರೀಡಿತ

ಜಿನಪೂಜೋತ್ಸವಮಂಗಳಾನಕಮೃದುಪ್ರಧ್ವಾನದೊಳ್ ಗಾಯಕೀ
ಜನಗೀತಾನ್ವಿತವಲ್ಲಕೀಕ್ವಣಿತದೊಳ್ ವಿದ್ಯಾಧರೀರಮ್ಯನ
ರ್ತನರಾಗೋತ್ಥಿತಪಾರಿಹಾರ್ಯರಶನಾಮಂಜೀರಿಕೋದ್ದಾಮನಿ
ಸ್ವನದೊಳ್ ಪೊಂಪುಳಿವೋಗುತಿರ್ಪುವೆರಡುಂ ವಿದ್ಯಾಧರಶ್ರೇಢಿಗಳ್ ॥ ೧–೭೦

ಪದ ವಿಭಾಗ: ಜಿನಪೂಜೋತ್ಸವ–ಮಂಗಳಾನಕ–ಮೃದು–ಪ್ರಧ್ವಾನದೊಳ್, ಗಾಯಕೀಜನ–
ಗೀತಾನ್ವಿತ–ವಲ್ಲಕೀ–ಕ್ವಣಿತದೊಳ್, ವಿದ್ಯಾಧರೀ–ರಮ್ಯ–
ನರ್ತನ–ರಾಗ, ಉತ್ಥಿತ, ಪಾರಿಹಾರ್ಯ–ರಶನಾ–ಮಂಜೀರಿಕೋದ್ದಾಮ–
ನಿಸ್ವನದೊಳ್, ಪೊಂಪುಳಿವೋಗುತಿರ್ಪುವು, ಎರಡುಂ, ವಿದ್ಯಾಧರಶ್ರೇಢಿಗಳ್ ॥ ೧–೭೦

ಅನ್ವಯಾರ್ಥ: (ಜಿನಪೂಜೋತ್ಸವ=ಜಿನಪೂಜೆ+ಉತ್ಸವ) ಜಿನಪೂಜೆಯ ಸಂಭ್ರಮದ **(ಮಂಗಳಾನಕ=ಮಂಗಳ+ಆನಕ)** ಮಂಗಳಭೇರಿಯ **(ಮೃದು ಪ್ರಧ್ವಾನದೊಳ್)** ಮಧುರವಾದ ಮೊಳಗುವಿಕೆಯಲ್ಲಿ, **(ಗಾಯಕೀಜನ)** ಗಾಯಕಿಯರ ವೃಂದದ **(ಗೀತಾನ್ವಿತ=ಗೀತ+ಅನ್ವಿತ)** ಹಾಡುಗಾರಿಕೆಯೊಂದಿಗೆ ಸಮಾವಿಷ್ಟವಾದ **(ವಲ್ಲಕೀ ಕ್ವಣಿತದೊಳ್)** ವೀಣಾನಾದದಲ್ಲಿ, **(ವಿದ್ಯಾಧರೀ)** ವಿದ್ಯಾಧರ ಸ್ತ್ರೀಯರ **(ರಮ್ಯ)** ಮನೋಹರವಾದ **(ನರ್ತನರಾಗೋತ್ಥಿತ=ನರ್ತನರಾಗ+ಉತ್ಥಿತ)** ತಾಳಬದ್ಧಸ್ವರ ಮೇಳೈಸಿದ ಕುಣಿತದಿಂದ ಹುಟ್ಟಿದ **(ಪಾರಿಹಾರ್ಯ ರಶನಾ ಮಂಜೀರಿಕ)** ಕಡಗ ಒಡ್ಯಾಣ ಕಾಲ್ಗೆಜ್ಜೆಗಳ **(ಉದ್ದಾಮ ನಿಸ್ವನದೊಳ್)** ಘನವಾದ ಧ್ವನಿಗಳಲ್ಲಿ **(ಎರಡುಂ)** ಆ ಎರಡೂ [ಅಂದರೆ ವಿಜಯಾರ್ಧಪರ್ವತದ ದಕ್ಷಿಣೋತ್ತರದ] **(ವಿದ್ಯಾಧರಶ್ರೇಢಿಗಳ್)** ವಿದ್ಯಾಧರ ಶ್ರೇಢಿಗಳು **(ಪೊಂಪುಳಿವೋಗುತಿರ್ಪುವು)** ಸಂತೋಷಪಡುತ್ತಿದ್ದವು ॥ ೧–೭೦

ಈ ವೃತ್ತಪದ್ಯದಲ್ಲಿ ಕವಿಯು, ವಿದ್ಯಾಧರರು ಆಚರಿಸುವ ಧರ್ಮಾಚರಣೆಗಳಾದ ಜಿನಪೂಜೋತ್ಸವಗಳ ಸಂಭ್ರಮವನ್ನು ವರ್ಣಿಸಿರುವನು.

ಭಾವಾರ್ಥ: ಜಿನಪೂಜೋತ್ಸವದಲ್ಲಿ ಮಂಗಳಭೇರಿಯನ್ನು ಮೊಳಗಿಸುವುದರಲ್ಲಿ, ಗಾಯಕಿ ವೃಂದದವರ ಗಾಯನ, ವೀಣಾವಾದನ, ವಿದ್ಯಾಧರ ಸ್ತ್ರೀಯರ ಮನೋಹರವಾದ ನರ್ತನ ಇವುಗಳಲ್ಲಿ ತಲ್ಲೀನವಾಗಿ ವಿಜಯಾರ್ಧಪರ್ವತದ ದಕ್ಷಿಣ ಮತ್ತು ಉತ್ತರದ ಎರಡೂ ವಿದ್ಯಾಧರ ಶ್ರೇಢಿಗಳು ಸಂತೋಷಪಡುತ್ತಿದ್ದವು. ೧–೭೦

ವ ॥ ಅವಱೊಳುತ್ತರಶ್ರೇಢಿ[1]ಯೊಳುದಗ್ರಹಿಮಶಿಖರಿಶಿಖರ[2]ಶಾರದನೀರದಾಕಾರಸುಧಾಧವಳಿತೋತ್ತುಂಗ ಪ್ರಾಸಾದಕೂಟಕೋಟಿಸಂಕೀರ್ಣಮುಂ ಆತ್ಮೀಯಜಾತ್ಯನುರೂಪಾಚರಣಪರಿಣತಚತುರಜನ ಪರಿಪೂರ್ಣಮುಂ ಆನೇಕವಿದ್ಯಾಧರರಾಜರಾಜದ್ರಾಜವೀಧೀವಿಸ್ತೀರ್ಣಮುಮಾಗಿ, ೧–೭೦ (ವ)

ಚಂಪಕಮಾಲೆ **ಬಳಸಿದ ಪೊನ್ನಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್**
ಬಳಸಿದ ಪೊನ್ನ ಕಾಂಡಪಟದಂತಿರೆ[3] ರುಂದ್ರನರೇಂದ್ರಗೇಹಮಾ
ಲಳಿತೆಯ[4] ವಕ್ತ್ರಪಂಕಜವಿಳಾಸಮನಾಂತಿರೆ ರಮ್ಯರಾಜತಾ
ಚಳತಿಳಕೋಪಮಾನಮೆನೆ ಸಂದಳಕಾಪುರವೊಪ್ಪಿ ತೋಱುಗುಂ ॥ ೧–೭೧

(ವಿ.ಸೂ.: ೧–೭೧ ನೆಯ ವೃತ್ತಪದ್ಯವು ೧–೭೦ (ವ) ದ ಮುಂದುವರಿದ ಭಾಗವಾಗಿರುವುದರಿಂದ ಇವೆರಡರ **ಪದವಿಭಾಗ, ಅನ್ವಯಾರ್ಥ, ಭಾವಾರ್ಥ** ಮತ್ತು **ವಿಶೇಷ ವಿವರಣೆ**ಗಳನ್ನು ಇದರಡಿ ಒಂದೆಡೆಯಲ್ಲಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಅವಱೊಳ್, ಉತ್ತರ–ಶ್ರೇಢಿಯೊಳ್, ಉದಗ್ರ–ಹಿಮಶಿಖರಿ–ಶಿಖರ–ಶಾರದನೀರದಾಕಾರ–ಸುಧಾಧವಳಿತ–ಉತ್ತುಂಗ–ಪ್ರಾಸಾದ–ಕೂಟ–ಕೋಟಿ–ಸಂಕೀರ್ಣಮುಂ; ಆತ್ಮೀಯ–ಜಾತ್ಯನುರೂಪಾಚರಣ–ಪರಿಣತ–ಚತುರ–ಜನ–ಪರಿಪೂರ್ಣಮುಂ; ಆನೇಕ, ವಿದ್ಯಾಧರರಾಜ–ರಾಜದ್ರಾಜವೀಧೀ–ವಿಸ್ತೀರ್ಣಮುಂ, ಆಗಿ, ೧–೭೦ (ವ)

ಪದ ವಿಭಾಗ: ಬಳಸಿದ, ಪೊನ್ನಕೋಂಟೆ, ಪುರಲಕ್ಷ್ಮಿಯ, ಕೈಗೆಯಲಿರ್ದ, ತಾಣದೊಳ್,
ಬಳಸಿದ, ಪೊನ್ನಕಾಂಡಪಟದಂತೆ, ಇರೆ; ರುಂದ್ರ, ನರೇಂದ್ರಗೇಹಂ, ಆ,
ಲಳಿತೆಯ, ವಕ್ತ್ರಪಂಕಜ–ವಿಳಾಸಮನ್, ಆಂತಿರೆ; ರಮ್ಯ–ರಾಜತಾಚಳ,
ತಿಳಕ, ಉಪಮಾನಂ, ಎನೆ; ಸಂದ–ಅಳಕಾಪುರಂ, ಒಪ್ಪಿ, ತೋಱುಗುಂ ॥ ೧–೭೧

ಅನ್ವಯಾರ್ಥ: (ಅವಱೊಳುತ್ತರಶ್ರೇಢಿಯೊಳುದಗ್ರ=ಅವಱೊಳ್+ಉತ್ತರಶ್ರೇಢಿಯೊಳ್+ಉದಗ್ರ) ಅವುಗಳಲ್ಲಿ ಅಂದರೆ ವಿಜಯಾರ್ಧಪರ್ವತದ ದಕ್ಷಿಣೋತ್ತರದ ಶ್ರೇಢಿಗಳಲ್ಲಿ, ಉತ್ತರದ ಶ್ರೇಢಿಯಲ್ಲಿ [ಸಾಲಿನಲ್ಲಿ] ಉನ್ನತವಾದ **(ಹಿಮಶಿಖರಿ ಶಿಖರ)** ಹಿಮವತ್ಪರ್ವತದ ಶಿಖರದಂತೆ, **(ಶಾರದನೀರದಾಕಾರ=ಶಾರದನೀರದ+ಆಕಾರ)** ಶರತ್ಕಾಲದ ಶುಭ್ರವಾದ ಬಿಳಿಮುಗಿಲ ಆಕೃತಿಯಂತೆ **(ಸುಧಾಧವಳಿತೋತ್ತುಂಗ=ಸುಧಾಧವಳಿತ+ಉತ್ತುಂಗ)** ಸುಣ್ಣಬಳಿದು ಬಿಳುಪಾಗಿಸಿರುವ ಎತ್ತರವಾದ **(ಪ್ರಾಸಾದ ಕೂಟಕೋಟಿ ಸಂಕೀರ್ಣಮುಂ)** ಮಹಲುಗಳ ಅಸಂಖ್ಯಾತ ಕೂಟಗಳಿಂದ ನಿಬಿಡವಾದುದೂ; **(ಆತ್ಮೀಯ)** ತಮ್ಮ **(ಜಾತ್ಯನುರೂಪಾಚರಣ=ಜಾತಿ+ಅನುರೂಪ+ಆಚರಣ)** ಜಾತಿಗನುಗುಣವಾದ ಆಚರಣೆಗಳಲ್ಲಿ [ವರ್ಣಧರ್ಮದ ಆಚರಣೆಗಳಲ್ಲಿ] **(ಪರಿಣತ ಚತುರ ಜನ)** ನೈಪುಣ್ಯತೆಯುಳ್ಳ ಬುದ್ಧಿವಂತರಾದ ಪ್ರಜೆಗಳಿಂದ **(ಪರಿಪೂರ್ಣಮುಂ)** ಪೂರ್ಣತುಂಬಿದುದೂ, **(ಆನೇಕ)** ಅನೇಕ **(ವಿದ್ಯಾಧರ ರಾಜ ರಾಜದ್ರಾಜವೀಧೀ[=ರಾಜತ್+ರಾಜವೀಧೀ])** ವಿದ್ಯಾಧರ ರಾಜರಿಂದ ಪ್ರಕಾಶಿಸುತ್ತಿರುವ ರಾಜಬೀದಿಗಳು **(ವಿಸ್ತೀರ್ಣಮುಮಾಗಿ=ವಿಸ್ತೀರ್ಣಮುಂ+ಆಗಿ)** ಅಗಲವಾಗಿದ್ದವುಗಳೂ ಆಗಿ ... ೧–೭೦ (ವ)

ಅನ್ವಯಾರ್ಥ: (ಬಳಸಿದ) [ಆ ಪುರವನ್ನು] ಸುತ್ತುವರಿದಿರುವ **(ಪೊನ್ನಕೋಂಟೆ)** ಬಂಗಾರದ ಕೋಟೆಯು, **(ಪುರಲಕ್ಷ್ಮಿಯ)** ಪುರಲಕ್ಷ್ಮಿಯು **(ಕೈಗೆಯಲಿರ್ದ=ಕೈಗೆಯಲ್+ಇರ್ದ)** ಸಿಂಗರಿಸಿಕೊಳ್ಳುತ್ತಿದ್ದ **(ತಾಣದೊಳ್)** ಎಡೆಯಲ್ಲಿ [ಮರೆಮಾಡಲು] **(ಬಳಸಿದ)** ಸುತ್ತುವರಿದಿರುವ **(ಪೊನ್ನ ಕಾಂಡಪಟದಂತಿರೆ)** ಬಂಗಾರದ ತೆರೆಯಂತಿರಲು, **(ರುಂದ್ರ)** ವಿಶಾಲವಾದ **(ನರೇಂದ್ರಗೇಹಮಾಲಳಿತೆಯ=ನರೇಂದ್ರಗೇಹಂ+ಆ+ಲಳಿತೆಯ[<ಲಲಿತಯ])** ಅರಮನೆಯು ಆ [ಪುರಲಕ್ಷ್ಮಿಯೆಂಬ]

[1] ಮೂಲಪಾಠ–'ಶ್ರೇಢಿ', ಕೆಜಿ ಯವರ ಪಾಠ–'ಶ್ರೇಣಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಶಿಖರ', ಕೆಜಿ ಯವರ ಪಾಠ–'ಶೇಖರ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಕಾಂಡಪಟದಂತಿರೆ', ಈ ಇಬ್ಬರೂ ಸಂಪಾದಕರು ಬಳಸಿಕೊಂಡಿರುವ ಖ ಮತ್ತು ಗ ಹಸ್ತಪ್ರತಿಗಳಲ್ಲಿ 'ಕನ್ನವಡದಂತಿರುವ' ಎಂಬ ಪಾಠಾಂತರವಿರುವುದನ್ನು ಸೂಚಿಸಿರುತ್ತಾರೆ.

[4] ಮೂಲಪಾಠ–'ಲಳಿತೆಯ', ಕೆಜಿ ಯವರ ಪಾಠ–'ಲಲನೆಯ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಚೆಲುವೆಯ **(ವಕ್ತ್ರಪಂಕಜ)** ಮುಖಕಮಲದ **(ವಿಳಾಸಮನಾಂತಿರೆ=ವಿಳಾಸಮನ್+ಆಂತಿರೆ)** ಸೊಬಗನ್ನು ತಳೆದಿರಲಾಗಿ, [ಆ ಪುರವು] **(ರಮ್ಯ ರಾಜತಾಚಳ)** ಮನೋಹರವಾದ ರಜತಪರ್ವತದ [ವಿಜಯಾರ್ಧಪರ್ವತದ] **(ತಿಳಕೋಪಮಾನಮೆನೆ= ತಿಳಕ+ಉಪಮಾನಂ+ಎನೆ)** ತಿಲಕವನ್ನು ಹೋಲುತ್ತಿದೆ ಎನ್ನುವಂತಿರಲಾಗಿ, **(ಸಂದಳಕಾಪುರವೊಪ್ಪಿ=ಸಂದ+ಅಳಕಾಪುರಂ+ ಒಪ್ಪಿ)** ಆ ಪ್ರಸಿದ್ಧವಾದ ಅಳಕಾಪುರವು ಶೋಭಾಯಮಾನವಾಗಿ **(ತೋಱುಗುಂ)** ತೋರುತ್ತಿದ್ದಿತು ॥ ೧-೭೧

ಕವಿಯು ಈ ವಚನ ಮತ್ತು ಮುಂದಿನ ವೃತ್ತಪದ್ಯದಲ್ಲಿ ವಿಜಯಾರ್ಧಪರ್ವತದ ಉತ್ತರ ಶ್ರೇಢಿಯಲ್ಲಿರುವ ಅಳಕಾಪುರದ ವರ್ಣನೆಯನ್ನು ಮಾಡಿರುವನು.

ಭಾವಾರ್ಥ: ವಿಜಯಾರ್ಧಪರ್ವತದ ಉತ್ತರದ ಶ್ರೇಢಿಯಲ್ಲಿ, ಎತ್ತರವಾದ ಬಿಳಿಯಬಣ್ಣದ ಮಹಲುಗಳಿಂದಲೂ, ತಮ್ಮ ಜಾತಿಗನುಗುಣವಾದ (ವರ್ಣಧರ್ಮದ) ಆಚರಣೆಗಳಲ್ಲಿ ನಿಷ್ಣಾತರಾದ ಪ್ರಜೆಗಳಿಂದಲೂ ತುಂಬಿರುವ ಆ ಪುರದಲ್ಲಿ ವಿದ್ಯಾಧರ ರಾಜರು ಓಡಾಡುವ ರಾಜಬೀದಿಗಳು ಅಗಲವಾಗಿದ್ದವುಗಳೂ ಆಗಿ ... ೧-೭೦ (ವ)

ಭಾವಾರ್ಥ: ಆ ಪುರವನ್ನು ಸುತ್ತುವರಿದಿರುವ ಬಂಗಾರದ ಕೋಟೆಯು, ಪುರಲಕ್ಷ್ಮಿಯು ಸಿಂಗರಿಸಿಕೊಳ್ಳುವ ಎಡೆಯಲ್ಲಿ ಮರೆಮಾಡಲು ಸುತ್ತುವರಿದಿರುವ ಬಂಗಾರದ ತೆರೆಯಂತಿದ್ದು, ಅಲ್ಲಿರುವ ವಿಶಾಲವಾದ ಅರಮನೆಯು ಆ ಪುರಲಕ್ಷ್ಮಿ ಯೆಂಬ ಚೆಲುವೆಯ ಮುಖಕಮಲದ ಸೊಬಗನ್ನು ತಳೆದಿರಲಾಗಿ, ಆ ಪುರವು ಮನೋಹರವಾದ ರಜತಪರ್ವತದ [ವಿಜಯಾರ್ಧಪರ್ವತದ] ತಿಲಕವೋ ಎನ್ನುವಂತಿರಲಾಗಿ, ಆ ಪ್ರಸಿದ್ಧವಾದ ಅಳಕಾಪುರವು ಶೋಭಾಯಮಾನವಾಗಿ ತೋರುತ್ತಿದ್ದಿತು. ೧-೭೧

ಪೂರ್ವಪುರಾಣದಲ್ಲಿ ಈ ಕೆಳಗಿನ ಶ್ಲೋಕದಲ್ಲಿ ಅಳಕಾಪುರದ ವರ್ಣನೆಯನ್ನು ಮಾಡಿರುವರು:

ಇತಿ ಪ್ರತೀತಮಾಹಾತ್ಮ್ಯ ವಿಜಯಾರ್ದ್ಧಮಹೀಭೃತಃ ।
ಸದ್ವೃತ್ತವರ್ಣಸಂಕೀರ್ಣಾ ಸಾ ಪುರೀ ತಿಲಕಾಯತೇ ॥ಪೂ.ಪು., ೪-೧೨೧॥

ಅರ್ಥ: [ಈ ಪ್ರಕಾರವಾಗಿ] ಪ್ರಸಿದ್ಧವಾದ ಮಹಿಮೆಯುಳ್ಳುದೂ ಸದಾಚಾರವುಳ್ಳ ಬ್ರಾಹ್ಮಣ ಮೊದಲಾದ ವರ್ಣದವರೊಡನೆ ಕೂಡಿಕೊಂಡಿರುವುದೂ ಆದ ಆ ಅಲಕಾಪುರಿಯು, ವಿಜಯಾರ್ದ್ಧಪರ್ವತವೆಂಬ ರಾಜನಿಗೆ ವರ್ತುಲಾಕಾರವೂ ಬಣ್ಣವುಳ್ಳುದೂ ಆದ ತಿಲಕದಂತೆ ಶೋಭಿಸುತ್ತದೆ.

ಪಾಠಭೇದ ವಿಚಾರ: ಬಳಸಿದ ಪೊನ್ನಕಾಂಡಪಟದಂತಿರೆ: ಇಲ್ಲಿ 'ಕಾಂಡಪಟ' ಎಂಬುದಕ್ಕೆ 'ಕನ್ನವಡ' ಎಂಬ ಪಾಠಾಂತರವಿರುವುದನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿರುವುದು ಸರಿಯಷ್ಟೆ. ಇದಕ್ಕೆ ಸಂಬಂಧಿಸಿದ ವಿವರಣೆಯನ್ನು ಆಶ್ವಾಸದ ಕೊನೆಯಲ್ಲಿ ನೀಡಿರುವ **ಪಾಠಭೇದ ವಿಚಾರ** ವಿಭಾಗದಲ್ಲಿ ನೋಡಿರಿ.

ವ ॥ ಅದನಾಳ್ವನಖಿಳಖಚರಪತಿಮಕುಟಮಣಿಗಣಕಿರಣರಾಗರಂಜಿತಚರಣನಳಿನಯುಗಳಂ ಉದಿತೋದಿತನಿಜಕುಲಮಂದರಾಚಳಮಂದಾರಪಾದಪಂ ಅನೇಕಸಮರಸಮ್ಮರ್ದನನಿರ್ಜಿತೋರ್ಜಿತಾರಾತಿಬಳಂ ಅತಿಬಳನೆಂಬಂ; ಆತನಮಹಾದೇವಿ ನಯನಮನೋಹರಿ ಮನೋಹರಿಯೆಂಬಳ್.
೧-೭೧ (ವ)

ಪದ ವಿಭಾಗ: ವ.ಪಾ. ॥ ಅದನ್, ಆಳ್ವನ್, ಅಖಿಳ-ಖಚರಪತಿ, ಮಕುಟಮಣಿ-ಗಣ-ಕಿರಣ-ರಾಗ-ರಂಜಿತ, ಚರಣನಳಿನಯುಗಳಂ; ಉದಿತೋದಿತ-ನಿಜ-ಕುಲ-ಮಂದರಾಚಳ-ಮಂದಾರ-ಪಾದಪಂ; ಅನೇಕ, ಸಮರ, ಸಮ್ಮರ್ದನ, ನಿರ್ಜಿತೋರ್ಜಿತ, ಅರಾತಿಬಳಂ; ಅತಿಬಳನೆಂಬಂ-ಆತನ-ಮಹಾದೇವಿ-ನಯನ-ಮನೋಹರಿ-ಮನೋಹರಿಯೆಂಬಳ್, ೧-೭೧ (ವ)

ಅನ್ವಯಾರ್ಥ: **(ಅದನಾಳ್ವನಖಿಳಖಚರಪತಿ=ಅದನ್+ಆಳ್ವನ್+ಅಖಿಳ-ಖಚರಪತಿ)** ಅದನ್ನು [ಆ ಅಳಕಾಪುರವನ್ನು] ಆಳುತ್ತಿರುವವನು, ಸಮಸ್ತ ವಿದ್ಯಾಧರ ರಾಜರ **(ಮಕುಟಮಣಿ ಗಣ ಕಿರಣ ರಾಗ ರಂಜಿತ)** ಕಿರೀಟದ ರತ್ನಗಳ ಸಮೂಹದ ಕಿರಣಗಳ ವರ್ಣ [ಪ್ರಭೆಯಿಂದ] ಬೆಳಗುವ **(ಚರಣ-ನಳಿನ-ಯುಗಳಂ)** ಪಾದಕಮಲದ್ವಯಗಳುಳ್ಳವನೂ; **(ಉದಿತೋದಿತ= ಉದಿತ+ಉದಿತ)** ನಿರಂತರವಾದ ಅಭಿವೃದ್ಧಿಯುಳ್ಳ **(ನಿಜ ಕುಲ)** ತನ್ನ ಕುಲವೆಂಬ **(ಮಂದರಾಚಳ ಮಂದಾರ ಪಾದಪಂ)**

ಮಂದರಪರ್ವತದಲ್ಲಿನ ಮಂದಾರವೃಕ್ಷದಂತಿರುವವನೂ; **(ಅನೇಕಸಮರಸಮ್ಮರ್ದನನಿರ್ಜಿತೋರ್ಜಿತಾರಾತಿಬಳಂ=ಅನೇಕ-ಸಮರ-ಸಮ್ಮರ್ದನ-ನಿರ್ಜಿತ+ಊರ್ಜಿತ+ಅರಾತಿ-ಬಳಂ[>ಅನೇಕ-ಸಮರ-ಅರಾತಿ-ಬಳಂ-ಸಮ್ಮರ್ದನ-ನಿರ್ಜಿತ+ಊರ್ಜಿತ)** ಅನೇಕ ಯುದ್ಧಗಳಲ್ಲಿ ಶತ್ರು ಸೈನ್ಯವನ್ನು ಮೆಟ್ಟಿ ಜಯಿಸಿದ ಬಲಶಾಲಿಯೂ [ಪರಾಕ್ರಮಿಯೂ] [ಆದ] **(ಅತಿಬಳನೆಂಬಂ)** ಅತಿಬಳನೆಂಬುವನು; **(ಆತನ)** ಆತನ **(ಮಹಾದೇವಿ)** ಪಟ್ಟದರಸಿ **(ನಯನಮನೋಹರಿ)** ಕಣ್ಮನಗಳನ್ನು ತಣಿಸುವಷ್ಟು ಸುಂದರಿಯಾದ **(ಮನೋಹರಿಯೆಂಬಳ್)** ಮನೋಹರಿಯೆಂಬುವಳು. ೧-೭೧ (ವ)

ಈ ವಚನದಲ್ಲಿ ಕವಿಯು ಅಳಕಾಪುರವನ್ನು ಆಳುವ ರಾಜ ಮತ್ತು ಅವನ ಪಟ್ಟದರಸಿಯನ್ನು ಪರಿಚಯಿಸುವನು.

ಭಾವಾರ್ಥ: ಸಮಸ್ತ ವಿದ್ಯಾಧರ ರಾಜರನ್ನು ತನ್ನ ಅಧೀನದಲ್ಲಿರಿಸಿಕೊಂಡಿರುವವನೂ, ಉತ್ತರೋತ್ತರ ಅಭಿವೃದ್ಧಿಯುಳ್ಳ ತನ್ನ ಕುಲವೆಂಬ ಮಂದರಪರ್ವತದಲ್ಲಿನ ಮಂದಾರ ವೃಕ್ಷದಂತಿರುವವನೂ, ಅನೇಕ ಯುದ್ಧಗಳಲ್ಲಿ ಶತ್ರು ಸೈನ್ಯವನ್ನು ಮೆಟ್ಟಿ ಜಯಿಸಿದ ಬಲಶಾಲಿಯೂ ಆದ ಅತಿಬಳನೆಂಬುವನು ಅಳಕಾಪುರವನ್ನು ಆಳುತ್ತಿರುವನು. ನಯನಮನೋಹರಿ ಯಾದ ಮನೋಹರಿಯೆಂಬುವಳು ಆತನ ಪಟ್ಟದರಸಿಯಾಗಿದ್ದಳು. ೧-೭೧ (ವ)

ವಿಶೇಷ ವಿವರಣೆ: ಲೋಕಾಕಾಶದಲ್ಲಿ ಸ್ಥಿತವಾಗಿರುವುದು 'ತ್ರಿಲೋಕ'. ಆ ತ್ರಿಲೋಕದ ಮಧ್ಯದಲ್ಲಿ ಇರುವುದು 'ಮಧ್ಯಲೋಕ' ಅಥವಾ 'ತಿರ್ಯಕ್‌ಲೋಕ'. ಆ ಮಧ್ಯಲೋಕದ ಮಧ್ಯದಲ್ಲಿರುವುದು 'ಜಂಬೂದ್ವೀಪ'. ಆ ಜಂಬೂದ್ವೀಪದ ನಟ್ಟನಡುವೆ ಇರುವುದು 'ಸುಮೇರುಪರ್ವತ'. ಆ ಸುಮೇರುಪರ್ವತದ ಇಕ್ಕೆಡೆಗಳಲ್ಲಿ (ಪೂರ್ವ-ಪಶ್ಚಿಮವಾಗಿ) ಹರಡಿರುವುದು 'ವಿದೇಹ ಕ್ಷೇತ್ರ'. ಆ ಸುಮೇರುಪರ್ವತದ ಪೂರ್ವಕ್ಕಿರುವುದು ಪೂರ್ವವಿದೇಹ ಕ್ಷೇತ್ರ ಮತ್ತು ಪಶ್ಚಿಮಕ್ಕಿರುವುದು ಪಶ್ಚಿಮವಿದೇಹ ಕ್ಷೇತ್ರ. 'ಪಶ್ಚಿಮವಿದೇಹಕ್ಷೇತ್ರ'ದ ಮಧ್ಯದಲ್ಲಿ 'ಸೀತೋದಾನದಿ'ಯು ಹರಿಯುತ್ತಿದ್ದು, ಅದರ ಉತ್ತರತೀರದಗುಂಟ ಇರುವ, ಎಂಟು ನಾಡುಗಳಲ್ಲಿ, ಏಳನೆಯೆಡೆಯ ನಾಡು 'ಗಂಧಿಳ ನಾಡು'. ಆ ಗಂಧಿಳ ನಾಡಿನ ಮಧ್ಯದಲ್ಲಿರುವುದು 'ವಿಜಯಾರ್ಧಪರ್ವತ', ಆ 'ವಿಜಯಾರ್ಧಪರ್ವತ'ದ (ರಜತಪರ್ವತದ), ಉತ್ತರ-ದಕ್ಷಿಣ ದಿಕ್ಕಿನ ಇಕ್ಕೆಡೆಗಳಲ್ಲಿ 'ವಿದ್ಯಾಧರ ಶ್ರೇಢಿ'ಗಳು ಹರಡಿರುವುವು. ವಿಜಯಾರ್ಧಪರ್ವತದ ಉತ್ತರಕ್ಕಿರುವುದು ಉತ್ತರಶ್ರೇಢಿ ಮತ್ತು ದಕ್ಷಿಣಕ್ಕಿರುವುದು ದಕ್ಷಿಣಶ್ರೇಢಿ. ಆ 'ಉತ್ತರಶ್ರೇಢಿ'ಯಲ್ಲಿ 'ಅಳಕಾಪುರ' ಎಂಬ ಒಂದು ಸುಂದರ ನಗರ ಇರುವುದು. (ಪದ್ಯ ೧-೪೩ ರಿಂದ ೧-೭೧ ರ ವರೆಗಿನ ಕಥಾಸಾರಾಂಶ)

ಅಖಿಳ ಖಚರಪತಿ ಮಕುಟಮಣಿಗಣ ಕಿರಣ ರಾಗರಂಜಿತ ಚರಣನಳಿನಯುಗಳಂ: ಅಳಕಾಪುರವನ್ನು 'ಅತಿಬಳ'ನೆಂಬ ವಿದ್ಯಾಧರ ಚಕ್ರವರ್ತಿಯು ಆಳುತ್ತಿರುವನು. ಆ ವಿದ್ಯಾಧರ ಚಕ್ರವರ್ತಿಯ ಪಾದಕಮಲಗಳೆರಡೂ ಆ ವಿದ್ಯಾಧರ ಶ್ರೇಢಿಗಳಲ್ಲಿರುವ ಉಳಿದ ಸಮಸ್ತ ವಿದ್ಯಾಧರ ರಾಜರುಗಳ [ಖೇಚರ ರಾಜರುಗಳ] ಕಿರೀಟದಲ್ಲಿರುವ ರತ್ನಗಳ ಸಮೂಹದ ಕಿರಣಗಳ ಪ್ರಭೆಯಿಂದ ಬೆಳಗುತ್ತಿದ್ದವು, ಎಂದರೆ, ಆ ಎಲ್ಲಾ ವಿದ್ಯಾಧರ ರಾಜರುಗಳು ಈ ಖಚರಪತಿಗೆ ಅಧೀನ ರಾಜರಂತೆ ಇವನ ಪಾದಗಳಿಗೆ ಎರಗಿ ವಿಧೇಯರಾಗಿದ್ದರು ಎಂದು ಈ ವಚನದಲ್ಲಿ ಆಲಂಕಾರಿಕವಾಗಿ ವರ್ಣಿಸಲಾಗಿದೆ. ಆತನು ಶತ್ರುಬಲವನ್ನು ಜಯಿಸಿದ ಪರಾಕ್ರಮಿ. ಈತನ ಪಟ್ಟದರಸಿ ಕಣ್ಮನಗಳನ್ನು ತಣಿಸುವಷ್ಟು ಸುಂದರಿಯಾದ 'ಮನೋಹರಿ' ಎಂಬುವಳು. ಅತಿಬಳ ಮತ್ತು ಮನೋಹರಿ ಈ ದಂಪತಿಗಳು ಈ **ಆದಿಪುರಾಣ ಕಾವ್ಯ**ದ ಮುಖ್ಯ ಕಥಾ ಹಂದರವು ಪ್ರಾರಂಭವಾಗುವಲ್ಲಿನ ಮೊದಲ ವ್ಯಕ್ತಿಗಳು. ಅತಿಬಳ ಮತ್ತು ಮನೋಹರಿ ದಂಪತಿಗಳು, ಭವಿಷ್ಯದಲ್ಲಿ ತೀರ್ಥಂಕರರಾಗುವ ವೃಷಭನಾಥರ ಹಿಂದಿನ ಹತ್ತು ಭವಗಳಲ್ಲಿ ಎರಡನೆಯದಾದ ಮಹಾಬಳನೆಂಬ ಹೆಸರುಳ್ಳ ಭವದ ತಂದೆ-ತಾಯಿಗಳು. **ಮಹಾಪುರಾಣ**ದಲ್ಲಿ ಅತಿಬಳನ ವರ್ಣನೆಯನ್ನು ೪-೧೨೨ ರಿಂದ ೧೩೨ ರ ವರೆಗಿನ ಹನ್ನೊಂದು ಶ್ಲೋಕಗಳಲ್ಲಿ ವರ್ಣಿಸಿದ್ದಾರೆ.

ಚಂಪಕಮಾಲೆ **ಒಲಿಸುವ ರೂಪುಗಾಡಿಯೊಳೊಡಂಬಡೆ ಗಾಡಿ ವಿಳಾಸದೇೞ್ಗೆಯೊಳ್**
ನೆಲಸೆ ವಿಳಾಸಮಂಬರಚರಾಮರಕಾಂತೆಯರೆಲ್ಲರಂ ಪಳಂ
ಚಲೆಯೆ ನೆಗೞ್ತೆವೆತ್ತ ಪತಿಭಕ್ತಿಯ ಮೈಮೆಯ ಮಾನಸಿಕ್ಕೆಯ
ಗ್ಗಲದ ಪೊಗೞ್ತೆ ತನ್ನದೆನೆ ಪೆಂಪು ಮನೋಹರಿಗಲ್ಲದಕ್ಕುಮೇ ॥ ೧-೭೨

ಪದ ವಿಭಾಗ: ಒಲಿಸುವ, ರೂಪು, ಗಾಡಿಯೊಳ್, ಒಡಂಬಡೆ; ಗಾಡಿ, ವಿಳಾಸದ, ಏೞ್ಗೆಯೊಳ್,
ನೆಲಸೆ; ವಿಳಾಸಂ, ಅಂಬರಚರ, ಅಮರಕಾಂತೆಯರ್, ಎಲ್ಲರಂ, ಪಳಂಚಲೆಯೆ;
ನೆಗೞ್ತೆವೆತ್ತ, ಪತಿಭಕ್ತಿಯ, ಮೈಮೆಯ, ಮಾನಸಿಕ್ಕೆಯ, ಅಗ್ಗಲದ,
ಪೊಗೞ್ತೆ, ತನ್ನದು, ಎನೆ; ಪೆಂಪು, ಮನೋಹರಿಗೆ, ಅಲ್ಲದೆ, ಅಕ್ಕುಮೇ ॥ ೧-೭೨

ಅನ್ವಯಾರ್ಥ: **(ಒಲಿಸುವ ರೂಪು ಗಾಡಿಯೊಳೊಡಂಬಡೆ[=ಗಾಡಿಯೊಳ್+ಒಡಂಬಡೆ])** ಮನವೊಪ್ಪಿಸುವ ಆಕಾರವು [ಅವಳ] ಸೊಬಗಿನಲ್ಲಿ ಒಪ್ಪಿರಲು, **(ಗಾಡಿ)** ಆ ಸೊಬಗು, **(ವಿಳಾಸದೇಟಿಗ್ಗೆಯೊಳ್=ವಿಳಾಸದ+ಏಟಿಗ್ಗೆಯೊಳ್)** [ಅವಳ] ಶೃಂಗಾರ ಭಾವದ ಔನ್ನತ್ಯದಲ್ಲಿ **(ನೆಲಸೆ)** ಮೂಡಿರಲು [ಕಾಣಿಸಿಕೊಂಡಿರಲು], **(ವಿಳಾಸಮಂಬರಚರಾಮರಕಾಂತೆಯರೆಲ್ಲರಂ= ವಿಳಾಸಂ+ಅಂಬರಚರ+ಅಮರಕಾಂತೆಯರೆಲ್ಲರಂ)** ಆ ಶೃಂಗಾರ ಭಾವವು ಖೇಚರ [ಮತ್ತು] ದೇವತಾ ಸ್ತ್ರೀಯರೆಲ್ಲರನ್ನೂ **(ಪಳಂಚಲೆಯೆ)** ಮೀರಿಸಿರಲು, **(ನೆಗಟ್ತೆವೆತ್ತ)** ಖ್ಯಾತಿವೆತ್ತ **(ಪತಿಭಕ್ತಿಯ ಮೈಮೆಯ)** ಪತಿಭಕ್ತಿಯ ಮಹಿಮೆಯ **(ಮಾನಸಿಕ್ಕೆಯಗ್ಗಲದ=ಮಾನಸಿಕ್ಕೆಯ+ಅಗ್ಗಲದ)** ಘನತೆಯ ಅತಿಶಯವಾದ **(ಪೊಗಟ್ತೆ)** ಪ್ರಶಂಸೆಯು **(ತನ್ನದೆನೆ=ತನ್ನದು+ ಎನೆ)** ತನ್ನದೆನ್ನುವ **(ಪೆಂಪು)** ಹಿರಿಮೆಯು **(ಮನೋಹರಿಗಲ್ಲದಕ್ಕುಮೇ=ಮನೋಹರಿಗೆ+ಅಲ್ಲದೆ+ಅಕ್ಕುಮೇ)** ಮನೋಹರಿಗೆ ಅಲ್ಲದೆ [ಬೇರೆಯವರಿಗೆ] ಉಂಟಾಗುತ್ತದೆಯೇ? ॥ ೧–೭೨

ಈ ವೃತ್ತಪದ್ಯದಲ್ಲಿ ಅತಿಬಳ ಚಕ್ರವರ್ತಿಯ ಪಟ್ಟದರಸಿಯಾದ ಮನೋಹರಿಯ ಸೌಂದರ್ಯವನ್ನು ವರ್ಣಿಸಿರುವನು.

ಭಾವಾರ್ಥ: ಮನವೊಪ್ಪಿಸುವ ಮನೋಹರಿಯ ಮೈಮಾಟವು ಅವಳ ಸೊಬಗಿನೊಂದಿಗೆ ಹೊಂದಿಕೆಯಾಗಿರಲು, ಆ ಸೊಬಗು, ಅವಳ ಶೃಂಗಾರ ಭಾವದ ಔನ್ನತ್ಯದಲ್ಲಿ ಕಾಣಿಸಿಕೊಂಡಿರಲು, ಆ ಶೃಂಗಾರ ಭಾವವು ಖೇಚರ ಮತ್ತು ದೇವತಾ ಸ್ತ್ರೀಯರೆಲ್ಲರನ್ನೂ ಮೀರಿಸಿರಲು, ಖ್ಯಾತಿವೆತ್ತ ಪತಿಭಕ್ತಿಯ ಮಹಿಮೆಯಿಂದುಂಟಾದ ಹಿರಿಮೆಯು ಮನೋಹರಿಗಲ್ಲದೆ ಬೇರೆಯವರಿಗೆ ಉಂಟಾಗುತ್ತದೆಯೇ? ೧–೭೨

ಉತ್ಪಲಮಾಲೆ **ಹಾವವಿಳಾಸವಿಭ್ರಮಸಮನ್ವಿತರೂಪಕಳಾಪದಾಮಹಾ**
ದೇವಿಗಮಾವಿಯಚ್ಚರಗಣಾಗ್ರಣಿಗಂ ಗುಣರತ್ನವಾರ್ಧಿ ನಾ
ನಾವಿಧಸೌಖ್ಯಭಾಜನನುಪಾರ್ಜಿತಖೇಚರರಾಜಹೃದ್ಯವಿ
ದ್ಯಾವಿಭವಂ ಮಗಂ ಜಿತವಿರೋಧಿನರೇಂದ್ರಬಳಂ ಮಹಾಬಳಂ ॥ ೧–೭೩

ಪದ ವಿಭಾಗ: ಹಾವ–ವಿಳಾಸ–ವಿಭ್ರಮ–ಸಮನ್ವಿತ–ರೂಪ–ಕಳಾಪದಾ–
ಮಹಾದೇವಿಗಂ; ಆ–ವಿಯಚ್ಚರ–ಗಣಾಗ್ರಣಿಗಂ; ಗುಣ–ರತ್ನ–ವಾರ್ಧಿ–
ನಾನಾವಿಧ–ಸೌಖ್ಯ–ಭಾಜನನ್; ಉಪಾರ್ಜಿತ–ಖೇಚರರಾಜ–ಹೃದ್ಯವಿದ್ಯಾ–
ವಿಭವಂ; ಮಗಂ, ಜಿತ–ವಿರೋಧಿ–ನರೇಂದ್ರ–ಬಳಂ; ಮಹಾಬಳಂ ॥ ೧–೭೩

ಅನ್ವಯಾರ್ಥ: **(ಹಾವ)** [ಅಂಗವಿನ್ಯಾಸದಿಂದ ಸೂಚಿಸುವ] ಶೃಂಗಾರ ಭಾವ **(ವಿಳಾಸ)** ಒಯ್ಯಾರ ಭಾವ [ಮತ್ತು] **(ವಿಭ್ರಮ)** ಸಂಭ್ರಮೋತ್ಸಾಹದ ಒನಪಿನ ಭಾವಗಳು **(ಸಮನ್ವಿತ)** ಬೆರೆತ **(ರೂಪಕಳಾಪದಾಮಹಾದೇವಿಗಮಾ= ರೂಪಕಳಾಪದ+ಆ–ಮಹಾದೇವಿಗಂ+ಆ)** ಸೌಂದರ್ಯರಾಶಿಯಾದ ಆ ಪಟ್ಟದರಸಿಯಾದ [ಮನೋಹರಿಗೂ] [ಮತ್ತು] ಆ **(ವಿಯಚ್ಚರ ಗಣಾಗ್ರಣಿಗಂ[=ಗಣ+ಅಗ್ರಣಿಗಂ])** ಖೇಚರ ಚಕ್ರವರ್ತಿಗೂ [ಖೇಚರ ಗಣನಾಯಕನಾದ ಅತಿಬಳನಿಗೂ], **(ಗುಣ ರತ್ನ ವಾರ್ಧಿ)** ಸದ್ಗುಣಗಳೆಂಬ ರತ್ನಗಳಿಗೆ ಸಮುದ್ರದಂತಿರುವವನು **(ನಾನಾವಿಧ ಸೌಖ್ಯ ಭಾಜನನ್)** ಅನೇಕ ಬಗೆಯ ಸುಖಗಳಿಗೆ ಪಾತ್ರನಾದವನು, **(ಖೇಚರರಾಜ)** ವಿದ್ಯಾಧರರಾಜರ **(ಹೃದ್ಯವಿದ್ಯಾ ವಿಭವಂ)** ಹೃದಯಂಗಮವಾದ ವಿದ್ಯಾಧರವಿದ್ಯೆಗಳ ಬಲ [ಸಾಮರ್ಥ್ಯ] ವನ್ನು **(ಉಪಾರ್ಜಿತ)** ಹುಟ್ಟಿನಿಂದಲೇ ಪಡೆದುಕೊಂಡವನು, **(ವಿರೋಧಿ ನರೇಂದ್ರ ಬಳಂ)** ಶತ್ರು ರಾಜರ ಸೈನ್ಯವನ್ನು **(ಜಿತ)** ಜಯಿಸಿದವನು [ಆದ] **(ಮಹಾಬಳಂ>ಮಹಾಬಳನ್)** ಮಹಾಬಳನು **(ಮಗಂ>ಮಗನ್)** ಮಗನಾಗಿ ಹುಟ್ಟಿದನು ॥ ೧–೭೩

ಭಾವಾರ್ಥ: ಶೃಂಗಾರ ಭಾವಗಳಾದ ಒಯ್ಯಾರ ಮತ್ತು ಸಂಭ್ರಮೋತ್ಸಾಹದ ಒನಪಿನ ಭಾವಗಳು ಬೆರೆತ ಸೌಂದರ್ಯ ರಾಶಿಯಾದ ಆ ಮಹಾರಾಣಿ ಮನೋಹರಿಗೂ ಮತ್ತು ಆ ಖೇಚರ ಚಕ್ರವರ್ತಿ ಅತಿಬಳನಿಗೂ,

(೧) ಸದ್ಗುಣಗಳೆಂಬ ರತ್ನಗಳಿಗೆ ಸಮುದ್ರದಂತಿರುವವನು (ಆಗರನು);
(೨) ಅನೇಕ ಬಗೆಯ ಸುಖಗಳಿಗೆ ಪಾತ್ರನಾದವನು; ಮತ್ತು

(೩) ವಿದ್ಯಾಧರರಾಜರ ಹೃದಯಂಗಮವಾದವಿದ್ಯೆಗಳ ಬಲವನ್ನು ಹುಟ್ಟಿನಿಂದಲೇ ಪಡೆದುಕೊಂಡವನು;
(೪) ಶತ್ರು ರಾಜರ ಸೈನ್ಯವನ್ನು ಜಯಿಸುವವನು ಆದ

ಮಹಾಬಳನು ಮಗನಾಗಿ ಹುಟ್ಟಿದನು. ೧–೭೩

ವಿಶೇಷ ವಿವರಣೆ: ಈ ಪ್ರಥಮಾಶ್ವಾಸವನ್ನು ಕವಿಯು '**ಮಹಾಬಳ ಕುಮಾರೋದಯ ವರ್ಣನಂ**' ಎಂಬ ಶೀರ್ಷಿಕೆಯಿಂದ ಹೆಸರಿಸುತ್ತಾನೆ. ಮಹಾಬಳಕುಮಾರೋದಯದ ವರ್ಣನೆಯನ್ನು ಶ್ರೀ ಜಿನಸೇನಾಚಾರ್ಯರು **ಪೂರ್ವಪುರಾಣ**ದಲ್ಲಿ ಈ ಕೆಳಗಿನ ಶ್ಲೋಕದಲ್ಲಿರುವಂತೆ ವರ್ಣಿಸಿದ್ದಾರೆ:

ತಯೋರ್ಮಹಾಬಲ ಖ್ಯಾತಿರಭೂತ್ಸೂನುರ್ಮಹೋದಯಃ ।
ಯಸ್ಯ ಜಾತವಭೂತ್ಪ್ರೀತಿಃ ಪಿಂಡೀಭೂತೇವ ಬಂಧುಷು ॥ಪೂ.ಪು., ೪–೧೩೩॥

ಅರ್ಥ: ಆ ದಂಪತಿಗಳಿಗೆ [ಅತಿಬಳ ಮತ್ತು ಮನೋಹರಿ] ಮಹಾಭಾಗ್ಯಶಾಲಿಯಾದ ಮಹಾಬಲನೆಂಬ ಮಗನು ಹುಟ್ಟಿದನು. ಅವನು ಜನಿಸಿದಾಗ ಬಂಧುಗಳಿಗೆ ಬಹಳ ಪ್ರೀತಿಯುಂಟಾಯಿತು.

ಹೀಗೆ ಕವಿಯು ಪ್ರಥಮಾಶ್ವಾಸದಲ್ಲಿ ಈ ಪದ್ಯದ ಮೂಲಕ ಕಾವ್ಯವಾಚಕರಿಗೆ, ವೃಷಭ ತೀರ್ಥಂಕರರಾಗುವ ಜೀವಾತ್ಮನ ಭವಗಳಲ್ಲಿ ಪ್ರಮುಖವಾದ ಖೇಚರ ಭವದಲ್ಲಿ ಹುಟ್ಟಿದ ಮಹಾಬಳನೆನ್ನುವ ಖೇಚರ ರಾಜಕುಮಾರನ ಭವವನ್ನು ಪರಿಚಯಿಸುತ್ತಿದ್ದಾನೆ. ಈ ಪದ್ಯದೊಂದಿಗೆ, ಮಹಾಬಳನೆಂಬ ಭವದಿಂದ ವೃಷಭ ತೀರ್ಥಂಕರರಾಗುವವರೆಗಿನ ಮುಂದಿನ ಹತ್ತು ಭವಾವಳಿಯ ಕಥಾ ಹಂದರವು ಪ್ರಾರಂಭವಾಗುತ್ತದೆ. ಆದುದರಿಂದ ಸರತಿಯಂತೆ ಮಹಾಬಳನ ಮುಂದಿನ ಭವಗಳ ತಂತು ಹಿಡಿದು ಕಥೆಯನ್ನು ಆಯಾ ಘಟ್ಟಕ್ಕನುಗುಣವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ.

ವ ॥ ಆ ಮಹಾಬಳಂ ಬಾಲಕಾಲದಿಂ ತಗುಳ್ದಭ್ಯಸ್ತ ಸಮಸ್ತ ವಿದ್ಯಾಧರ ವಿದ್ಯಾಪಾರಗನುಂ ಪರಿಸಮಾಪ್ತ ಸಕಳ ಕಳಾವಿಜ್ಞಾನನುಂ ಅಧಿಗತಾಶೇಷಶಾಸ್ತ್ರನುಂ ಪರಿಣತ ಸಕಳಶಸ್ತ್ರನುಮಾಗಿ ಯೌವನಂ ನೆಱೆಯೆ ನೆಱೆಯೆ, ೧–೭೩ (ವ)

ಪದ ವಿಭಾಗ: ವ.ಪಾ. ॥ ಆ–ಮಹಾಬಳಂ, ಬಾಲಕಾಲದಿಂ, ತಗುಳ್ದಭ್ಯಸ್ತ–ಸಮಸ್ತ–ವಿದ್ಯಾಧರ–ವಿದ್ಯಾಪಾರಗನುಂ; ಪರಿಸಮಾಪ್ತ–ಸಕಳ–ಕಳಾ–ವಿಜ್ಞಾನನುಂ; ಅಧಿಗತಾಶೇಷ–ಶಾಸ್ತ್ರನುಂ; (ಅಧಿಗತ+ಅಶೇಷ–ಶಾಸ್ತ್ರನುಂ) ಪರಿಣತಸಕಳಶಸ್ತ್ರನುಮಾಗಿ (ಪರಿಣತ, ಸಕಳ–ಶಸ್ತ್ರನುಂ+ಆಗಿ)–ಯೌವನಂ–ನೆಱೆಯೆ–ನೆಱೆಯೆ, ೧–೭೩ (ವ)

ಅನ್ವಯಾರ್ಥ: (ಆ) ಆ **(ಮಹಾಬಳಂ)** ಮಹಾಬಳನು **(ಬಾಲ ಕಾಲದಿಂ)** [ತನ್ನ] ಬಾಲ್ಯಾವಸ್ಥೆಯಿಂದಲೇ **(ತಗುಳ್ದಭ್ಯಸ್ತ= ತಗುಳ್ದು+ಅಭ್ಯಸ್ತ)** [ಸ್ವತಃ] ಆಸಕ್ತಿವಹಿಸಿ ಕಲಿತ **(ಸಮಸ್ತ ವಿದ್ಯಾಧರವಿದ್ಯಾ ಪಾರಗನುಂ)** ಸಮಸ್ತ ವಿದ್ಯಾಧರ ವಿದ್ಯೆಗಳಲ್ಲಿ ಪಂಡಿತೋತ್ತಮನೂ; **(ಪರಿಸಮಾಪ್ತ ಸಕಳ ಕಳಾ ವಿಜ್ಞಾನನುಂ)** ಸಕಲ ಕಲೆ ಮತ್ತು ವಿಜ್ಞಾನಗಳನ್ನು ಚೆನ್ನಾಗಿ ಗ್ರಹಿಸಿದವನೂ; **(ಅಧಿಗತಾಶೇಷಶಾಸ್ತ್ರನುಂ=ಅಧಿಗತ+ಅಶೇಷಶಾಸ್ತ್ರನುಂ)** ಸಮಸ್ತ ಶಾಸ್ತ್ರಗಳ ಜ್ಞಾನವನ್ನು ಸಂಪಾದಿಸಿದವನೂ, **(ಪರಿಣತಸಕಳಶಸ್ತ್ರನುಂ=ಪರಿಣತ–ಸಕಳಶಸ್ತ್ರನುಂ)** ಎಲ್ಲಾ ವಿಧದ ಶಸ್ತ್ರಗಳ ಪ್ರಯೋಗದಲ್ಲಿ ನೈಪುಣ್ಯತೆಯುಳ್ಳವನೂ **(ಆಗಿ)** ಆಗಿ, **(ಯೌವನಂ ನೆಱೆಯೆ ನೆಱೆಯೆ)** ಯೌವನವು ತುಂಬಿ ತುಂಬಿ ಬರಲು, ೧–೭೩ (ವ)

ಕವಿಯು ಈ ವಚನದಲ್ಲಿ ಮಹಾಬಳನ ಶಿಕ್ಷಣದ ಬಗ್ಗೆ ಹೇಳಿರುವನು.

ಭಾವಾರ್ಥ: ಆ ಮಹಾಬಳನು ತನ್ನ ಬಾಲ್ಯಾವಸ್ಥೆಯಿಂದಲೇ ಸ್ವತಃ ಆಸಕ್ತಿವಹಿಸಿ ಕಲಿತ ಸಮಸ್ತ ವಿದ್ಯಾಧರ ವಿದ್ಯೆಗಳಲ್ಲಿ ಪಂಡಿತೋತ್ತಮನೂ; ಸಕಲ ಕಲೆ ಮತ್ತು ವಿಜ್ಞಾನಗಳನ್ನು ಚೆನ್ನಾಗಿ ಗ್ರಹಿಸಿದವನೂ; ಸಮಸ್ತ ಶಾಸ್ತ್ರಗಳ ಜ್ಞಾನವನ್ನು ಸಂಪಾದಿಸಿದವನೂ; ಎಲ್ಲಾ ವಿಧದ ಶಸ್ತ್ರಗಳ ಪ್ರಯೋಗದಲ್ಲಿ ನೈಪುಣ್ಯತೆಯುಳ್ಳವನೂ ಆಗಿ, ಯೌವನವು ಉಕ್ಕುತ್ತಿರಲು, ೧–೭೩ (ವ)

ವಿಶೇಷ ವಿವರಣೆ: ಮಹಾಬಳನು ಬಾಲ್ಯದಲ್ಲಿಯೇ ಖೇಚರ ವಿದ್ಯೆಗಳನ್ನು ಸ್ವತಃ ಕರಗತ ಮಾಡಿಕೊಂಡು, ಗುರುಗಳಿಂದ ನಾಲ್ಕು ವಿದ್ಯೆಗಳಾದ ಕಲೆ, ವಿಜ್ಞಾನ, ಶಾಸ್ತ್ರ ಮತ್ತು ಶಸ್ತ್ರ ಇವುಗಳನ್ನು ಕಲಿತನು. ಈ ವರ್ಣನೆಗೆ ಸಂವಾದಿಯಾದ **ಪೂರ್ವಪುರಾಣ**ದ ಶ್ಲೋಕಗಳು ಹೀಗಿವೆ:

ರಾಜವಿದ್ಯಾಶ್ಚತಸ್ರೋಽಪಿ ಸೋಧ್ಯೈಷ್ಟ ಗುರುಸನ್ನಿಧೌ ।
ಸ ತಾಭಿರ್ವಿಬಭೌ ಭಾಭಿಃ ಸ್ವಭಿರುದ್ಯನ್ನಿವಾಂಶುಮಾನ್ ॥ಪೂ.ಪು., ೪–೧೩೬॥

ಅರ್ಥ: ಆ ಮಹಾಬಲನು ಗುರುಸಮೀಪದಲ್ಲಿ ನಾಲ್ಕು ಪ್ರಕಾರವಾದ ರಾಜವಿದ್ಯೆಗಳನ್ನು ಕಲಿತನು. ಉದಯಿಸುತ್ತಿರುವ ಸೂರ್ಯನು ತನ್ನ ಕಿರಣಗಳಿಂದ ಪ್ರಕಾಶಿಸುವಂತೆ, ಮಹಾಬಲನು ಆ ರಾಜವಿದ್ಯೆಗಳಿಂದ ಶೋಭಿಸಿದನು.

ಸೋಧೀಯನ್ನಿಖಿಲಾ ವಿದ್ಯಾ ಗುರುಸಂಸ್ಕಾರಯೋಗತಃ ।
ದಿದೀಪೇಧಿಕಮರ್ಚಿಷ್ಮಾನಿವಾನಿಲಸಮಾಗಮಾತ್ ॥ಪೂ.ಪು., ೪–೧೩೭॥

ಅರ್ಥ: ಪ್ರಬಲವಾದ ಜನ್ಮಾಂತರ ಸಂಸ್ಕಾರದಿಂದ ಆ ಮಹಾಬಲನು ಸಮಸ್ತವಿದ್ಯೆಗಳನ್ನೂ ಕಲಿತು, ಬೆಂಕಿಯು ಗಾಳಿಯ ಸಂಬಂಧದಿಂದ ಹೆಚ್ಚಾಗಿ ಪ್ರಜ್ವಲಿಸುವಂತೆ, ಅಧಿಕವಾಗಿ ಶೋಭಿಸುತ್ತಿದ್ದನು.

ಮತ್ತೇಭ ವಿಕ್ರೀಡಿತ

ಮೊಗಮುತ್ಫುಲ್ಲಸರೋಜಹಾಸಿ ನಯನಂ ನೀಲಾಂಬುಜಸ್ಪರ್ಧಿ ಬಾ
ಹುಗಳಾಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭಶೋ
ಭೆಗಳಂ ಗೆಲ್ದುವು ವಕ್ಷಮಂಬರಚರಶ್ರೀಗೇಹಮೆಂಬೊಂದೆ ರೂ
ಪೆ ಗಡಂ ನೋಡಲೊಡಂ ಮರುಳ್ಗೊಳಿಸುಗುಂ ವಿದ್ಯಾಧರಸ್ತ್ರೀಯರಂ ॥ ೧–೭೪

ಪದ ವಿಭಾಗ: ಮೊಗಮುತ್ಫುಲ್ಲ–ಸರೋಜ–ಹಾಸಿ; ನಯನಂ–ನೀಲಾಂಬುಜ–ಸ್ಪರ್ಧಿ;
ಬಾಹುಗಳ್, ಆಜಾನು–ವಿಳಂಬಿಗಳ್; ತೊಡೆಗಳುಂ–ರಂಭಾ–ಮೃದು–ಸ್ತಂಭ–
ಶೋಭೆಗಳಂ–ಗೆಲ್ದುವು; ವಕ್ಷಮಂಬರಚರಶ್ರೀ–ಗೇಹಂ; ಎಂಬೊಂದೆ, ರೂಪೆ,
ಗಡಂ, ನೋಡಲೊಡಂ, ಮರುಳ್ಗೊಳಿಸುಗುಂ, ವಿದ್ಯಾಧರಸ್ತ್ರೀಯರಂ ॥ ೧–೭೪

ಅನ್ವಯಾರ್ಥ: **(ಮೊಗಮುತ್ಫುಲ್ಲ=ಮೊಗಂ+ಉತ್ಫುಲ್ಲ–ಸರೋಜಹಾಸಿ)** [ಮಹಾಬಳನ] ಮೊಗವು, ಚೆನ್ನಾಗಿ ಅರಳಿದ ಕಮಲವನ್ನು [ನೋಡಿ] ಹಾಸ್ಯಮಾಡುವಂತಿತ್ತು; **(ನಯನಂ ನೀಲಾಂಬುಜ ಸ್ಪರ್ಧಿ)** ಕಣ್ಣುಗಳು ಕನ್ನೈದಿಲೆಯೊಂದಿಗೆ ಸ್ಪರ್ಧಿಸುವಂತಿದ್ದುವು; **(ಬಾಹುಗಳಾಜಾನುವಿಳಂಬಿಗಳ್=ಬಾಹುಗಳ್+ಆಜಾನುವಿಳಂಬಿಗಳ್)** ತೋಳುಗಳು ಮಂಡಿಯವರೆಗೆ ಜೋಲಾಡುತ್ತಿರುವುವು; **(ತೊಡೆಗಳುಂ)** ತೊಡೆಗಳು **(ರಂಭಾ ಮೃದು ಸ್ತಂಭ)** ಬಾಳೆಯ ಕೋಮಲವಾದ ಕಾಂಡದ **(ಶೋಭೆಗಳಂ ಗೆಲ್ದುವು)** ಅಂದಚಂದಗಳನ್ನು ಮೀರಿದ್ದವು; **(ವಕ್ಷಮಂಬರಚರಶ್ರೀಗೇಹ=ವಕ್ಷಂ+ಅಂಬರಚರಶ್ರೀ–ಗೇಹಂ)** ಎದೆಯು ಖೇಚರ ರಾಜ್ಯಲಕ್ಷ್ಮಿಯ ನಿವಾಸವಾಗಿದ್ದಿತು; **(ಎಂಬೊಂದೆ)** ಎನ್ನುವುದೊಂದು **(ರೂಪೆ)** ಆಕಾರವೇ **(ಗಡಂ)** ಖಂಡಿತವಾಗಿಯೂ **(ನೋಡಲೊಡಂ=ನೋಡಲ್+ಒಡಂ)** [ಅವನನ್ನು] ನೋಡಿದಕೂಡಲೆ **(ವಿದ್ಯಾಧರಸ್ತ್ರೀಯರಂ)** ವಿದ್ಯಾಧರ ಸ್ತ್ರೀಯರನ್ನು **(ಮರುಳ್ಗೊಳಿಸುಗುಂ)** ಮೋಹಗೊಳಿಸುತ್ತವೆ ॥ ೧–೭೪

ಈ ವೃತ್ತಪದ್ಯದಲ್ಲಿ ಕವಿಯು ಮಹಾಬಳನ ಸುಂದರ ಆಕಾರವನ್ನು ವರ್ಣಿಸಿದ್ದಾನೆ.

ಭಾವಾರ್ಥ: ಮಹಾಬಳನ ರೂಪವು ಹೇಗಿತ್ತೆಂದರೆ:

(೧) ಮೊಗವು ಚೆನ್ನಾಗಿ ಅರಳಿದ ಕಮಲದಂತಿದ್ದಿತು;
(೨) ಕಣ್ಣುಗಳು ಕನ್ನೈದಿಲೆಯಂತಿದ್ದವು;
(೩) ತೋಳುಗಳು ಮಂಡಿಯನ್ನು ಮುಟ್ಟುವಷ್ಟು ನೀಳವಾಗಿದ್ದವು;
(೪) ತೊಡೆಗಳು, ಬಾಳೆಯ ಕೋಮಲವಾದ ಕಾಂಡದಂತಿದ್ದವು;
(೫) ಎದೆಯು ಖೇಚರ ರಾಜ್ಯಲಕ್ಷ್ಮಿಯ ನಿವಾಸವಾಗಿದ್ದಿತು;

ಅವನ ಈ ರೂಪವು ಅವನನ್ನು ನೋಡಿದಕೂಡಲೆ ವಿದ್ಯಾಧರಸ್ತ್ರೀಯರನ್ನು ಮೋಹಗೊಳಿಸುವಂತಿತ್ತು. ೧–೭೪

ಮತ್ತೇಭ ವಿಕ್ರೀಡಿತ
ಮನವೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂ
ಬಿನ ಕೋಳ್ಗಂ ತಳಿವಾಲಿ[1]ನೀರ್ಗಮಲರ್ವಾಸಿಂಗಂ ಕುಳಿರ್ಕೋೞ್ಟಿ[2] ನಂ
ದನಕಂ ಚಂದನಕಂ ಪಸುರ್ಪೆಸೆವ ಬಾಳ್ಜೊಂಪಕ್ಕಮೊಂದೊಂದೆ ತ
ಣ್ಬನಿಯೊಳ್ಕೋಡಿಸುತಿರ್ಪಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ ॥ ೧–೭೫

ಪದ ವಿಭಾಗ: ಮನವೊಲ್ದಾತನ, ಗಾಡಿಯಂ, ದರವುರಂ, ಕಂಡ, ಆಕೆಗಳ್, ಪೂವಿನಂಬಿನ,
ಕೋಳ್ಗಂ, ತಳಿವ, ಆಲಿನೀರ್ಗಂ, ಅಲರ್ವಾಸಿಂಗಂ, ಕುಳಿರ್ಕೋೞ್ಟಿ,
ನಂದನಕಂ, ಚಂದನಕಂ, ಪಸುರ್ಪು, ಎಸೆವ, ಬಾಳ್ಜೊಂಪಕ್ಕಂ, ಒಂದೊಂದೆ,
ತಣ್ಬನಿಯೊಳ್, ಕೋಡಿಸುತಿರ್ಪ, ಬಿಜ್ಜಣಿಗೆಗಂ, ಪಕ್ಕಾಗದೇಂ, ಪೋಪರೇ ॥ ೧–೭೫

ಅನ್ವಯಾರ್ಥ: **(ಮನವೊಲ್ದಾತನ=ಮನಂ+ಒಲ್ದು+ಆತನ)** ಮನಸ್ಸು ಮೋಹಕ್ಕೊಳಗಾಗುವ ಅವನ [ಮಹಾಬಳನ] **(ಗಾಡಿಯಂ)** ಚೆಲುವನ್ನು **(ದರವುರಂಗಂಡಾಕೆಗಳ್=ದರವುರಂ+ಕಂಡ+ಆಕೆಗಳ್)** ಕಿಂಚಿತ್ತು ಕಂಡ [ಅರೆಕ್ಷಣ ಕಂಡ] ಆ ಹೆಣ್ಣುಗಳು [ವಿದ್ಯಾಧರ ಸ್ತ್ರೀಯರು] **(ಪೂವಿನಂಬಿನ=ಪೂವಿನ+ಅಂಬಿನ)** ಮನ್ಮಥನ ಹೂವಿನ ಬಾಣಗಳ **(ಕೋಳ್ಗಂ)** ಹೊಡೆತಕ್ಕೆ [ಗುರಿಯಾಗಿ], **(ತಳಿವ ಆಲಿನೀರ್ಗಂ)** ಸೇಚನಗೊಂಡ ಮಂಜಿನ ನೀರಿಗೂ, **(ಅಲರ್ವಾಸಿಂಗಂ=ಅಲರ್+ಪಾಸಿಂಗಂ)** ಹೂವಿನ ಹಾಸಿಗೆಗೂ, **(ಕುಳಿರ್ಕೋೞ್ಟಿ[=ಕುಳಿರ್+ಕೋೞ್ಟಿ] ನಂದನಕಂ)** ತಣಿಸುವ ಉದ್ಯಾನಕ್ಕೂ, **(ಚಂದನಕಂ)** ಶ್ರೀಗಂಧಕ್ಕೂ, **(ಪಸುರ್ಪೆಸೆವ=ಪಸುರ್ಪು+ಎಸೆವ)** ಹಸುರಿನಿಂದ ಶೋಭಿಸುವ [ಕಂಗೊಳಿಸುವ] **(ಬಾಳ್ಜೊಂಪಕ್ಕಂ=ಬಾಳ್+ಜೊಂಪಕ್ಕಂ)** ಲತಾಮಂಟಪಕ್ಕೂ, **(ಒಂದೊಂದೆ)** ಒಂದೊಂದೇ **(ತಣ್ಬನಿಯೊಳ್ಕೋಡಿಸುತಿರ್ಪ=ತಣ್ಬನಿಯೊಳ್[=ತಣ್+ಪನಿಯೊಳ್]+ಕೋಡಿಸುತಿರ್ಪ)** ತಣ್ಣನೆಯ ನೀರಿನ ಹನಿಗಳಿಂದ [ಶೀತಲ ಜಲ ಬಿಂದುಗಳಿಂದ] ತಂಪುಗೊಳಿಸುವ **(ಬಿಜ್ಜಣಿಗೆಗಂ)** ಬೀಸಣಿಗೆಗೂ **(ಪಕ್ಕಾಗದೇಂ ಪೋಪರೇ)** ಈಡಾಗದೇ [ಮರೆಹೋಗದೆ] ಹೋಗುತ್ತಾರೆಯೇ !! ॥ ೧–೭೫

ಭಾವಾರ್ಥ: ಮನಸ್ಸು ಮೋಹಕ್ಕೊಳಗಾಗುವ ಮಹಾಬಳನ ಚೆಲುವನ್ನು ಕಿಂಚಿತ್ತು ಕಂಡರೂ ವಿದ್ಯಾಧರಸ್ತ್ರೀಯರು ಮನ್ಮಥನ ಹೂವಿನ ಬಾಣದ ಹೊಡೆತಕ್ಕೆ ಗುರಿಯಾಗಿ, ಅದರಿಂದುಂಟಾದ [ವಿರಹ!] ತಾಪವನ್ನು ತಣಿಸಿಕೊಳ್ಳಲು, ಆಲಿಕಲ್ಲಿನ ನೀರಿನ ಸಿಂಚನಕ್ಕೂ, ಹೂವಿನ ಹಾಸಿಗೆಗೂ, ತಂಪೆರೆವ ಉದ್ಯಾನಕ್ಕೂ, ಶ್ರೀಗಂಧಕ್ಕೂ, ಹಸುರಿನಿಂದ ಕಂಗೊಳಿಸುವ ಲತಾಮಂಟಪಕ್ಕೂ, ಒಂದೊಂದೇ ಶೀತಲ ಜಲಬಿಂದುಗಳಿಂದ ತಂಪಾಗಿಸುವ ಬೀಸಣಿಗೆಗೂ, ಮರೆಹೋಗದೆ ಇರುವರೇ? ಎಂದು ಮಹಾಬಳನ ರೂಪವನ್ನು ಕವಿಯು ವರ್ಣಿಸಿದ್ದಾನೆ. ೧–೭೫

ವ ॥ ಅಂತು ಮಹಾಬಳಕುಮಾರಂ ಕುಮಾರ ಕೇಳೀವಿಳಾಸ ವಿಶ್ರಾಂತಸ್ವಾಂತಂ ಯುವರಾಜಪದವಿಗೆ ಯೋಗ್ಯನಾಗೆ, ೧–೭೫ (ವ)

ಪದ ವಿಭಾಗ: ವ.ಪಾ. ॥ ಅಂತು, ಮಹಾಬಳ–ಕುಮಾರಂ, ಕುಮಾರ–ಕೇಳೀ–ವಿಳಾಸ–ವಿಶ್ರಾಂತ–ಸ್ವಾಂತಂ–
ಯುವರಾಜ–ಪದವಿಗೆ, ಯೋಗ್ಯನಾಗೆ ... ೧–೭೫ (ವ)

ಅನ್ವಯಾರ್ಥ: **(ಅಂತು)** ಹಾಗೆ, **(ಮಹಾಬಳಕುಮಾರಂ)** ಬಾಲಕನಾಗಿದ್ದ ಮಹಾಬಳನು, **(ಕುಮಾರ ಕೇಳೀ ವಿಳಾಸ ವಿಶ್ರಾಂತ ಸ್ವಾಂತಂ)** ಬಾಲಲೀಲಾ ಕ್ರೀಡೆಗಳಿಂದ ವಿರಮಿಸಿದ ಮನಸ್ಸಿನವನಾಗಿ [ಅಂದರೆ ಬಾಲ್ಯವನ್ನು ಕಳೆದು ಯೌವನಸ್ಥನಾಗಿ] **(ಯುವರಾಜ ಪದವಿಗೆ)** ಯುವರಾಜ ಪದವಿಗೆ **(ಯೋಗ್ಯನಾಗೆ)** ಯೋಗ್ಯನಾಗಲು ... ೧–೭೫ (ವ)

ಭಾವಾರ್ಥ: ಹಾಗೆ, ಬಾಲಕನಾಗಿದ್ದ ಮಹಾಬಳನು ಬಾಲ್ಯಾವಸ್ಥೆಯನ್ನು ಕಳೆದು ಯೌವನಾವಸ್ಥೆಯನ್ನು ತಲುಪಿ

---

[1] ಮೂಲಪಾಠ–'ತಳಿವಾಲಿ', ನಾಗವರ್ಮನ ಕಾವ್ಯಾವಲೋಕನಂ (ಸೂತ್ರಂ ೧೮೯, ಪದ್ಯ ಸಂ. ೭೮೩) ಪಾಠ–'ಕುಳಿವಾಲಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[2] ಮೂಲಪಾಠ–'ಕುಳಿರ್ಕೋೞ್ಟಿ', ಕೆಜಿ ಯವರ ಪಾಠ–'ಕುಳಿರ್ಕೋೞ್ಟಿ', ನಾಗವರ್ಮನ ಕಾವ್ಯಾವಲೋಕನಂ (ಸೂತ್ರಂ ೧೮೯, ಪದ್ಯ ಸಂ. ೭೮೩) ಪಾಠ–'ಕುಳಿರ್ಕೋೞ್ಟಿ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಯುವರಾಜ ಪದವಿಗೆ ಯೋಗ್ಯನಾಗಲು ... ೧–೭೫ (ವ)

ಮಹಾ ಸ್ರಗ್ಧರೆ **ಬಳವದ್ವಿದ್ವಿಷ್ಟವಿದ್ಯಾಧರಕರಟಿಶಿರಶ್ಶುಕ್ತಿಸಂಭೂತಮುಕ್ತಾ**
ವಳಿಯೊಳ್ಕಣ್ಣಿಟ್ಟು ತನ್ನೊಳ್ನೆರೆಯಲಿದು ಜಯಶ್ರೀಯೆ[1] ಮುಂದಟ್ಟಿದೆಕ್ಕಾ
ವಳಿಯೆಂಬಂತಿರ್ದುದಂ ಕಂಠಿಕೆಯನುಭಯವಿದ್ಯಾಧರಶ್ರೇಣಿಗಳ್ ಮಂ
ಗಳಗೀತಾತೋದ್ಯನಾದಂಗಳೊಳೆ ಪುದುವಿನಂ ಕಟ್ಟಿದಂ ಖೇಚರೇಂದ್ರಂ ॥ ೧–೭೬

ಪದ ವಿಭಾಗ: ಬಳವದ್ವಿದ್ವಿಷ್ಟ, ವಿದ್ಯಾಧರ, ಕರಟಿ–ಶಿರಶ್ಶುಕ್ತಿ–ಸಂಭೂತ–ಮುಕ್ತಾವಳಿಯೊಳ್, ಕಣ್ಣಿಟ್ಟು, ತನ್ನೊಳ್, ನೆರೆಯಲ್, ಇದು, ಜಯಶ್ರೀಯೆ, ಮುಂದಟ್ಟಿದ, ಎಕ್ಕಾವಳಿ, ಎಂಬಂತೆ, ಇರ್ದುದಂ, ಕಂಠಿಕೆಯನ್, ಉಭಯ, ವಿದ್ಯಾಧರ, ಶ್ರೇಣಿಗಳ್, ಮಂಗಳಗೀತ, ಆತೋದ್ಯ, ನಾದಂಗಳೊಳೆ, ಪುದುವಿನಂ, ಕಟ್ಟಿದಂ, ಖೇಚರೇಂದ್ರಂ ॥ ೧–೭೬

ಅನ್ವಯಾರ್ಥ: (ವಿದ್ಯಾಧರ) ವಿದ್ಯಾಧರರ **(ಬಳವದ್ವಿದ್ವಿಷ್ಟ=ಬಳವತ್+ವಿದ್ವಿಷ್ಟ)** ಪ್ರಬಲ ವೈರಿಗಳ **(ಕರಟಿ)** ಆನೆಯ **(ಶಿರಶ್ಶುಕ್ತಿ=ಶಿರಸ್+ಶುಕ್ತಿ)** ತಲೆಯ ಮುತ್ತಿನಚಿಪ್ಪಿನಿಂದ **(ಸಂಭೂತ)** ಉತ್ಪನ್ನವಾದ **(ಮುಕ್ತಾವಳಿಯೊಳ್ಕಣ್ಣಿಟ್ಟು=ಮುಕ್ತ+ಆವಳಿಯೊಳ್+ಕಣ್ಣಿಟ್ಟು)** ಮುತ್ತಿನ ಹಾರದಲ್ಲಿ ಕಣ್ಣಿಟ್ಟು [ಬಯಸಿ], **(ತನ್ನೊಳ್ನೆರೆಯಲಿದು=ತನ್ನೊಳ್+ನೆರೆಯಲ್+ಇದು)** [ಮಹಾಬಳನು] ತನ್ನಲ್ಲಿ ಕೂಡಲು ಇದನ್ನು **(ಜಯಶ್ರೀಯೆ)** ಜಯಲಕ್ಷ್ಮಿಯೇ **(ಮುಂದಟ್ಟಿದ ಎಕ್ಕಾವಳಿ>ಏಕಾವಳಿ)** ಪೂರ್ವಭಾವಿಯಾಗಿ ಕಳುಹಿಸಿದ ಮುತ್ತಿನ ಒಂದೆಳೆ ಹಾರ **(ಎಂಬಂತಿರ್ದುದಂ=ಎಂಬಂತೆ+ಇರ್ದುದಂ)** ಎನ್ನುವಂತಿದ್ದ **(ಕಂಠಿಕೆಯನ್)** [ಆ] ಎಕ್ಕಾವಳಿಯನ್ನು, **(ಉಭಯ ವಿದ್ಯಾಧರ ಶ್ರೇಣಿಗಳ್)** ದಕ್ಷಿಣ ಮತ್ತು ಉತ್ತರದ ಎರಡೂ ವಿದ್ಯಾಧರ ಶ್ರೇಣಿಗಳು, **(ಮಂಗಳಗೀತಾತೋದ್ಯನಾದಂಗಳೊಳೆ=ಮಂಗಳಗೀತ+ಆತೋದ್ಯನಾದಂಗಳೊಳೆ)** ಮಂಗಳಗೀತೆಗಳು [ಮತ್ತು] ಭೇರಿಯಧ್ವನಿಗಳಲ್ಲಿ **(ಪುದುವಿನಂ)** ಸೇರಿಹೋಗಿರಲು, **(ಖೇಚರೇಂದ್ರಂ)** ಖೇಚರ ಚಕ್ರವರ್ತಿಯಾದ ಅತಿಬಳನು **(ಕಟ್ಟಿದಂ)** [ಮಹಾಬಳನ ಕೊರಳಿಗೆ] ಕಟ್ಟಿದನು ॥ ೧–೭೬

ಭಾವಾರ್ಥ: ವಿದ್ಯಾಧರರ ಪ್ರಬಲ ವೈರಿಗಳ ಆನೆಯ ತಲೆಯ ಮುತ್ತಿನ ಚಿಪ್ಪಿನಿಂದ ಉತ್ಪನ್ನವಾದ ಮುತ್ತಿನ ಹಾರದಲ್ಲಿ ಕಣ್ಣಿಟ್ಟು [ಬಯಸಿ], ಮಹಾಬಳನು ತನ್ನಲ್ಲಿ ಕೂಡಲು ಜಯಲಕ್ಷ್ಮಿಯೇ ಪೂರ್ವಭಾವಿಯಾಗಿ ಕಳುಹಿಸಿದ ಮುತ್ತಿನ ಒಂದೆಳೆ ಹಾರ ಎನ್ನುವಂತಿದ್ದ ಆ ಎಕ್ಕಾವಳಿಯನ್ನು, ದಕ್ಷಿಣ ಮತ್ತು ಉತ್ತರದ ಎರಡೂ ವಿದ್ಯಾಧರಶ್ರೇಣಿಗಳು, ಮಂಗಳಗೀತೆಗಳು ಮತ್ತು ಭೇರಿಯಧ್ವನಿಗಳ ನಡುವೆ, ಖೇಚರ ಚಕ್ರವರ್ತಿಯಾದ ಅತಿಬಳನು ಮಹಾಬಳನ ಕೊರಳಿಗೆ ಕಟ್ಟಿದನು. ೧–೭೬

ವಿಶೇಷ ವಿವರಣೆ: ಬಳವದ್ವಿದ್ವಿಷ್ಟವಿದ್ಯಾಧರಕರಟಿ: ಅತಿಬಳನೂ ವಿದ್ಯಾಧರ ಚಕ್ರವರ್ತಿಯೇ. ವಿಜಯಾರ್ಧಪರ್ವತದ ಉತ್ತರ ದಕ್ಷಿಣ ಶ್ರೇಢಿಗಳಲ್ಲಿ ಅನೇಕ ವಿದ್ಯಾಧರ ರಾಜರು ಅಲ್ಲಿರುವ ಪಟ್ಟಣಗಳ ಆಳ್ವಿಕೆ ನಡೆಸುತ್ತಿದ್ದರು. ಅವರಲ್ಲಿ ಕೆಲವು ವಿದ್ಯಾಧರ ರಾಜರು ಅತಿಬಳನಿಗೆ ವೈರಿಗಳಾಗಿದ್ದರು ಎಂದು ತಿಳಿಯಬೇಕು. ಅಂತಹ ವೈರಿಗಳ ಆನೆಯ ತಲೆಯ ಮುತ್ತಿನಚಿಪ್ಪಿನಿಂದ ಉತ್ಪನ್ನವಾದುದೋ ಎನ್ನುವಂತಿರುವ ಮುತ್ತಿನಹಾರವನ್ನು ಅತಿಬಳನು ತನ್ನ ಮಗನಾದ ಮಹಾಬಳನ ಕೊರಳಿಗೆ ಕಟ್ಟಿದನು.

ತನ್ನೊಳ್ನೆರೆಯಲಿದು ಜಯಶ್ರೀಯೆ ಮುಂದಟ್ಟಿದೆಕ್ಕಾವಳಿಯೆಂಬಂತಿರ್ದುದಂ: ಪರಾಕ್ರಮಿಗಳಾದವರು ಜಯಲಕ್ಷ್ಮಿಯನ್ನು ವರಿಸುವುದು ಸಹಜ. ಆದರೆ, ಶೂರನಾದ ಮಹಾಬಳನನ್ನು ಜಯಲಕ್ಷ್ಮಿಯೇ ವರಿಸಲು ಇಚ್ಛಿಸಿ, ತನ್ನ ಮನದ ಇಂಗಿತವನ್ನು ತೋರ್ಪಡಿಸುವಂತೆ, ಪೂರ್ವಭಾವಿಯಾಗಿ ತಾನೇ ಅವನಿಗೆ ಎಕ್ಕಾವಳಿಯನ್ನು ಕಳುಹಿಸಿರುವಳೋ ಎನ್ನುವಂತಿತ್ತು ಎಂದು ಕವಿಯು ಮಹಾಬಳನ ಪೌರುಷವನ್ನು ವರ್ಣಿಸಿದ್ದಾನೆ.

ವ ॥ ಅಂತುಕಟ್ಟಿದಾಗಳ್, ೧–೭೬ (ವ)

ಪದ ವಿಭಾಗ: ವ.ಪಾ. ॥ ಅಂತು–ಕಟ್ಟಿದಾಗಳ್ ... ೧–೭೬ (ವ)

---

[1] ಮೂಲಪಾಠ–'ಜಯಶ್ರೀಯ', ಕೆಜಿ ಯವರ ಪಾಠ–'ಜಯಶ್ರೀಯೆ', ಕ.ಸಾ.ಪ. ಕನ್ನಡ ನಿಘಂಟುವಿನ (ಏಳನೆಯ ಸಂಪುಟ, ಪುಟ ೭೧೪೯, ಪಂಕ್ತಿ ೮) ಪಾಠ–'ಜಯಶ್ರೀಯೆ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

ಅನ್ವಯಾರ್ಥ: **(ಅಂತು)** ಹಾಗೆ **(ಕಟ್ಟಿದಾಗಳ್)** [ಯುವರಾಜ ಪಟ್ಟವನ್ನು] ಕಟ್ಟಿದಾಗ ... ೧-೭೬ (ವ)

ಭಾವಾರ್ಥ: ಹಾಗೆ ಅತಿಬಳನು ತನ್ನ ಮಗನಾದ ಮಹಾಬಳನಿಗೆ ಯುವರಾಜ ಪಟ್ಟವನ್ನು ಕಟ್ಟಿದಾಗ ... ೧-೭೬ (ವ)

ಕಂದ **ಹಿಮಶೈಳದೊಳಂ ಜಳಧಿಯೊ**
ಳವೆಂತಭಿನ್ನಾಂಗಿ ಗಂಗೆ ಸಂಗತೆ ಖಚರೋ
ತ್ತಮನೊಳವಾವಿದ್ಯಾಧರ
ಕುಮಾರನೊಳಮಂತೆ ಲಕ್ಷ್ಮಿಸಂಗತೆಯಾದಳ್ ॥ **೧-೭೭**

ಪದ ವಿಭಾಗ: ಹಿಮಶೈಳದೊಳಂ, ಜಳಧಿಯೊಳಂ,
ಎಂತು, ಅಭಿನ್ನಾಂಗಿ, ಗಂಗೆ, ಸಂಗತೆ,
ಖಚರೋತ್ತಮನೊಳಂ, ಆ, ವಿದ್ಯಾಧರ-
ಕುಮಾರನೊಳಂ, ಅಂತೆ, ಲಕ್ಷ್ಮಿ, ಸಂಗತೆಯಾದಳ್ ॥ ೧-೭೭

ಅನ್ವಯಾರ್ಥ: **(ಹಿಮಶೈಳದೊಳಂ)** ಹಿಮಾಚಲದಲ್ಲಿಯೂ, **(ಜಳಧಿಯೊಳವೆಂತಭಿನ್ನಾಂಗಿ=ಜಳಧಿಯೊಳಂ+ಎಂತು+ಅಭಿನ್ನಾಂಗಿ)** ಸಮುದ್ರದಲ್ಲಿಯೂ ಹೇಗೆ ಏಕರೂಪಳಾಗಿ **(ಗಂಗೆ ಸಂಗತೆ)** ಗಂಗೆಯು ಸೇರಿರುವಳೋ, **(ಅಂತೆ)** ಹಾಗೆ, **(ಖಚರೋತ್ತಮನೊಳವಾ=ಖಚರೋತ್ತಮನೊಳಂ+ಆ)** ಖೇಚರ ಶ್ರೇಷ್ಠನಲ್ಲಿಯೂ [ಅತಿಬಳನಲ್ಲಿಯೂ], ಆ **(ವಿದ್ಯಾಧರ ಕುಮಾರನೊಳಂ)** ವಿದ್ಯಾಧರ ಕುಮಾರನಲ್ಲಿಯೂ [ಮಹಾಬಳನಲ್ಲಿಯೂ] **(ಲಕ್ಷ್ಮಿ)** [ರಾಜ್ಯ]ಲಕ್ಷ್ಮಿಯು **(ಸಂಗತೆಯಾದಳ್)** [ಸಮಾನವಾಗಿ] ಸೇರಿದವಳಾದಳು ॥ ೧-೭೭

ಭಾವಾರ್ಥ: ಹಿಮಾಚಲದಲ್ಲಿಯೂ, ಸಮುದ್ರದಲ್ಲಿಯೂ ಹೇಗೆ ಏಕರೂಪಳಾಗಿ ಗಂಗೆಯು ಸೇರಿರುವಳೋ, ಹಾಗೆ, ಖೇಚರ ಶ್ರೇಷ್ಠನಾದ ಅತಿಬಳನಲ್ಲಿಯೂ, ವಿದ್ಯಾಧರಕುಮಾರನಾದ ಮಹಾಬಳನಲ್ಲಿಯೂ ರಾಜ್ಯಲಕ್ಷ್ಮಿಯು ಸೇರಿದವಳಾದಳು. ೧-೭೭

ಮತ್ತೇಭ ವಿಕ್ರೀಡಿತ **ಪೆಸರ್ಗಳ್ಕಿತ್ತು ಸಮಸ್ತಖೇಚರಬಲಂ ತೇಜಕ್ಕೆ ಬೆರ್ಚಿತ್ತುಮುಂ**
ಪೊಸಪೊಚ್ಚಂ ಬೆರಸಿರ್ಪ ಭೂಚರಬಲಂ ಮೆಲ್ಪಂಗೆ ಮೆಚ್ಚಿತ್ತು ತ
ನ್ನ ಸಮಸ್ತಂ ಪರಿವಾರಮೆಂಬ ಗುಣಸಂಘಾತಂಗಳಂ ತಾಳ್ದಿ ಪೆಂ
ಪೆಸಕಂಬೆತ್ತಿರೆ ಸಂತನಿಂತತಿಬಳಂ ರಾಜ್ಯಂಗೆಯುತ್ತಿರ್ಪಿನಂ ॥ **೧-೭೮**

ಪದ ವಿಭಾಗ: ಪೆಸರ್ಗೆ, ಅಳ್ಕಿತ್ತು, ಸಮಸ್ತ, ಖೇಚರ, ಬಲಂ; ತೇಜಕ್ಕೆ, ಬೆರ್ಚಿತ್ತು, ಮುಂ,
ಪೊಸಪೊಚ್ಚಂ, ಬೆರಸಿರ್ಪ, ಭೂಚರ, ಬಲಂ; ಮೆಲ್ಪಂಗೆ, ಮೆಚ್ಚಿತ್ತು, ತನ್ನ,
ಸಮಸ್ತಂ, ಪರಿವಾರಂ, ಎಂಬ, ಗುಣಸಂಘಾತಂಗಳಂ, ತಾಳ್ದಿ, ಪೆಂಪು,
ಎಸಕಂ, ಪೆತ್ತಿರೆ, ಸಂತಂ, ಇಂತು, ಅತಿಬಳಂ, ರಾಜ್ಯಂಗೆಯುತ್ತ, ಇರ್ಪಿನಂ ॥ ೧-೭೮

ಅನ್ವಯಾರ್ಥ: **(ಸಮಸ್ತ ಖೇಚರ ಬಲಂ)** ಸಮಸ್ತ ಖೇಚರ ಸೈನ್ಯವು **(ಪೆಸರ್ಗಳ್ಕಿತ್ತು=ಪೆಸರ್ಗೆ+ಅಳ್ಕಿತ್ತು)** ಅತಿಬಳನ ಹೆಸರಿಗೆ [ಅವನ ಹೆಸರನ್ನು ಕೇಳಿದರೇ] ಅಂಜುತ್ತಿತ್ತು; **(ಮುಂ)** ಈ ಮೊದಲೇ **(ಪೊಸಪೊಚ್ಚಂ ಬೆರಸಿರ್ಪ)** ಹೊಚ್ಚಹೊಸದಾಗಿ ಸೇರಿರುವ [ಅಂದರೆ ಯುವಕರಾದ] [?] **(ಭೂಚರಬಲಂ)** ಕಾಲಾಳು ಪಡೆಯು **(ತೇಜಕ್ಕೆ)** [ಅವನ] ಪೌರುಷಕ್ಕೆ **(ಬೆರ್ಚಿತ್ತು)** ಬೆದರಿತ್ತು; **(ಮೆಲ್ಪಂಗೆ)** [ಅವನ] ಮಾರ್ದವತೆಗೆ [ಮೃದು ಸ್ವಭಾವಕ್ಕೆ] **(ತನ್ನ)** ಆತನ **(ಸಮಸ್ತಂ)** ಸಕಲ **(ಪರಿವಾರಂ)** ಪರಿವಾರವು [ಅವನನ್ನು] **(ಮೆಚ್ಚಿತ್ತು)** ಕೊಂಡಾಡುತ್ತಿತ್ತು, **(ಎಂಬ)** ಎನ್ನುವ [ಈ ಎಲ್ಲಾ] **(ಗುಣ)** ಸದ್ಗುಣಗಳ **(ಸಂಘಾತಂಗಳಂ)** ರಾಶಿಯನ್ನು **(ತಾಳ್ದಿ)** ತಳೆದವನಾಗಿ **(ಪೆಂಪು)** [ಅವನ] ಕೀರ್ತಿಯು **(ಎಸಕಂ)** ಕಾಂತಿಯನ್ನು **(ಪೆತ್ತಿರೆ)** ಪಡೆದಿರಲಾಗಿ, **(ಇಂತು)** ಈ ಪ್ರಕಾರವಾಗಿ **(ಸಂತಂ)** ಸುಖವಾಗಿ [ಶಾಂತವಾಗಿ] **(ಅತಿಬಳಂ)** ಅತಿಬಳನು **(ರಾಜ್ಯಂಗೆಯುತ್ತ)** ರಾಜ್ಯಭಾರ ಮಾಡುತ್ತಾ **(ಇರ್ಪಿನಂ)** ಇರಲಾಗಿ ... ॥ ೧-೭೮

ಈ ವೃತ್ತಪದ್ಯದಲ್ಲಿ ಕವಿಯು ಅತಿಬಳನ ರಾಜ್ಯಭಾರವನ್ನೂ, ಅವನ ಶೌರ್ಯವನ್ನೂ ವರ್ಣಿಸಿರುವನು.

ಭಾವಾರ್ಥ: ಸಮಸ್ತ ಖೇಚರ ಸೈನ್ಯವು ಅತಿಬಳನ ಹೆಸರನ್ನು ಕೇಳಿದರೇ ಅಂಜುತ್ತಿತ್ತು. ಈ ಮೊದಲೇ **(ಪೊಸಪೊಚ್ಚಂ ಬೆರಸಿರ್ಪ)** ....?....?.... ಕಾಲಾಳು ಪಡೆಯು ಅವನ ಪೌರುಷಕ್ಕೆ ಬೆದರಿತ್ತು. ಅವನ ಮೃದು ಸ್ವಭಾವಕ್ಕೆ ಆತನ ಸಕಲ ಪರಿವಾರವೂ ಅವನನ್ನು ಕೊಂಡಾಡುತ್ತಿತ್ತು; ಈ ಎಲ್ಲಾ ಸದ್ಗುಣಗಳ ರಾಶಿಯನ್ನು ತಳೆದ ಅವನ ಕೀರ್ತಿಯು ಕಾಂತಿಯನ್ನು ಪಡೆದಿರಲಾಗಿ, ಅತಿಬಳನು ಸುಖವಾಗಿ ರಾಜ್ಯಭಾರ ಮಾಡುತ್ತಿರಲಾಗಿ ... ೧-೭೮

ಮತ್ತೇಭ ವಿಕ್ರೀಡಿತ
ತೊಡರ್ದೀಪುತ್ರಕಳತ್ರಮೋಹದೊಳಿದೇಕಟ್ಟುರ್ದಪೈ ನಿನ್ನ ಮೆ
ಳ್ಪಡಿದೇಕಾರಣಮಂತಕಂ ಕಡುಪಿನಿಂ ಕಂಠಗ್ರಹಂಗೆಯ್ಯದಿಂ
ತಡೆಯಂ ಚೇತರಿಸೆಂದು ಬಂದು ಕಿವಿಯೊಳ್ಪೇಟ್ವಂತೆವೊಲ್ಕೆಂನೆಯಿಂ
ದೊಡೆದೋರೊಂದೊಗೆತಂದುವಂದು ನರೆಗಳ್ ವಿದ್ಯಾಧರಾಧೀಶನಾ ॥ ೧-೭೯

ಪದ ವಿಭಾಗ: ತೊಡರ್ದ, ಈ, ಪುತ್ರ, ಕಳತ್ರ, ಮೋಹದೊಳ್, ಇದೇಕೆ, ಅಟ್ಟುರ್ದಪೈ; ನಿನ್ನ,
ಮೆಳ್ಪಡಿದು, ಏ, ಕಾರಣಂ; ಅಂತಕಂ, ಕಡುಪಿನಿಂ, ಕಂಠಗ್ರಹಂ, ಗೆಯ್ಯದೆ, ಇಂ, ತಡೆಯಂ;
ಚೇತರಿಸು, ಎಂದು, ಬಂದು, ಕಿವಿಯೊಳ್, ಪೇಟ್ವಂತೆವೊಲ್, ಕೆಂನೆಯಿಂದ (ಕೆನ್ನೆಯಿಂದ),
ಒಡೆದು, ಓರೊಂದು, ಒಗೆತಂದುವು, ಅಂದು, ನರೆಗಳ್, ವಿದ್ಯಾಧರಾಧೀಶನಾ ॥ ೧-೭೯

ಅನ್ವಯಾರ್ಥ: **(ತೊಡರ್ದೀಪುತ್ರಕಳತ್ರ=ತೊಡರ್ದ+ಈ+ಪತ್ರ-ಕಳತ್ರ)** ಸುತ್ತಿಕೊಂಡಿರುವ ಈ ಮಗ ಮಡದಿಯೆಂಬ **(ಮೋಹದೊಳಿದೇಕಟ್ಟುರ್ದಪೈ=ಮೋಹದೊಳ್+ಇದೇಕೆ+ಅಟ್ಟುರ್ದಪೈ)** ಮೋಹದಲ್ಲಿ ಇದೇಕೆ ಮುಳುಗಿಹೋಗಿರುವೆಯೋ?; **(ನಿನ್ನ)** ನಿನ್ನ **(ಮೆಳ್ಪಡಿದೇಕಾರಣಮಂ=ಮೆಳ್ಪಡು+ಇದು+ಏಕಾರಣಂ)** ಈ ಮೈಮರೆವಿಗೆ [ಬ್ರಾಂತಿಗೆ] ಏನು ಕಾರಣ? **(ಅಂತಕಂ)** ಯಮನು **(ಕಡುಪಿನಿಂ)** ದರ್ಪದಿಂದ **(ಕಂಠಗ್ರಹಂಗೆಯ್ಯದಿಂತಡೆಯಂ=ಕಂಠಗ್ರಹಂಗೆಯ್ಯದೆ+ಇಂ+ತಡೆಯಂ)** ಕತ್ತು ಹಿಸುಕದೆ ಇನ್ನು ನಿಧಾನಿಸುವುದಿಲ್ಲ; **(ಚೇತರಿಸೆಂದು=ಚೇತರಿಸು+ಎಂದು)** ಎಚ್ಚತ್ತುಕೋ ಎಂದು **(ವಿದ್ಯಾಧರಾಧೀಶನಾ)** ವಿದ್ಯಾಧರ ರಾಜನಾದ [ಅತಿಬಳನ] **(ಕಿವಿಯೊಳ್)** ಕಿವಿಯಲ್ಲಿ **(ಬಂದು)** ಬಂದು **(ಪೇಟ್ವಂತೆವೊಲ್)** ಹೇಳುತ್ತಿರುವುವೋ ಎನ್ನುವಂತೆ **(ಕೆಂನೆಯಿಂದ>ಕೆನ್ನೆಯಿಂದ)** ಕೆನ್ನೆಯಿಂದ **(ಒಡೆದು)** ಸೀಳಿ ಹೊರಬಂದ [ಮೂಡಿದ] **(ಓರೊಂದು)** ಒಂದೊಂದು **(ನರೆಗಳ್)** ನರೆಗೂದಲುಗಳು **(ಅಂದು)** ಅಂದು [ಒಂದುದಿನ] **(ಒಗೆತಂದುವು)** ಕಾಣಿಸಿಕೊಂಡವು ॥ ೧-೭೯

ಭಾವಾರ್ಥ: ಈ ಮಗ ಮಡದಿಯೆಂಬ ಸಂಸಾರ ಮೋಹದಲ್ಲಿ ಇದೇಕೆ ಮುಳುಗಿಹೋಗಿರುವೆಯೋ? ನಿನ್ನ ಈ ಮೈಮರೆವಿಗೆ ಏನು ಕಾರಣ? ಸಾವು ಸನ್ನಿಹಿತವಾಗಿದೆ, ಎಚ್ಚತ್ತುಕೋ ಎಂದು ಅತಿಬಳನ ಕಿವಿಯಲ್ಲಿ ಬಂದು ಹೇಳುತ್ತಿರುವುವೋ ಎನ್ನುವಂತೆ ಕೆನ್ನೆಯಲ್ಲಿ ಮೂಡಿದ ಒಂದೊಂದು ನರೆಗೂದಲುಗಳು ಒಂದುದಿನ ಕಾಣಿಸಿಕೊಂಡವು.೧-೭೯

ವ ॥ ಅಂತು ಮೇಲೆ ಬಂದ ಕೃತಾಂತರಾಜವಾಹಿನಿಯ ಸಿತಪತಾಕೆಗಳನನುಕರಿಸುವ ಪಳಿತಂಗಳಂ ದರ್ಪಣದೊಳ್ನೋಡಿಕಂಡು ಪರಪತಾಕಿನೀಪತಾಕೆಯಂ ಕಂಡು ಸೆರಗಿಲ್ಲದ ಗಂಡನಂತಿನಿಸಪ್ಪೊಡಂ ಮಾಣದದುವೆ ಸಂಸಾರನಿರ್ವೇಗಕಾರಣಮಾಗೆ; ೧-೭೯ (ವ)

ಮತ್ತೇಭ ವಿಕ್ರೀಡಿತ
ಕರೆದಾಗಳ್ನಿಜಮನ್ತ್ರಿಮಂಡಳಮಹಾಸಾಮಂತಶುದ್ಧಾಂತಮು
ಖ್ಯರನಾವೃತ್ತಕಮೆಲ್ಲಮಂ ತಿಳಿಯೆ ಪೇೞ್ದಾಶಾಂತಮಂ ತಾಗಿ[1] **ತೂ**
ರ್ಯರವಂ ಪೊಣ್ಮೆ ಮಹಾಬಳಂಗತಿಬಳಂ ಕೊಟ್ಟಂ ಸಿತಚ್ಛತ್ರಚಾ
ಮರಸಿಂಹಾಸನಚಿಹ್ನಭಾಸುರವಿಯದ್ಗಾಮೀಶ್ವರೈಶ್ವರ್ಯಮಂ ॥ ೧-೮೦

(**ವಿ.ಸೂ.:** ೧-೮೦ ನೆಯ ವೃತ್ತಪದ್ಯವು, ಹಿಂದಿನ ೧-೭೯ (ವ) ನೆಯ ವಚನದ ಮುಂದುವರಿದ ಭಾಗವಾಗಿರುವುದರಿಂದ ಇವೆರಡರ

[1] ಮೂಲಪಾಠ-'ತಾಗಿ', ಕೆಜಿ ಯವರ ಪಾಠ-'ತಾಗೆ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಪದವಿಭಾಗ, ಅನ್ವಯಾರ್ಥ, ಭಾವಾರ್ಥ ಮತ್ತು **ವಿಶೇಷ ವಿವರಣೆ**ಗಳನ್ನು ಇದರಡಿ ಒಂದೆಡೆಯಲ್ಲಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಅಂತು, ಮೇಲೆಬಂದ, ಕೃತಾಂತರಾಜ–ವಾಹಿನಿಯ, ಸಿತ–ಪತಾಕೆಗಳನ್, ಅನುಕರಿಸುವ, ಪಳಿತಂಗಳಂ, ದರ್ಪಣದೊಳ್, ನೋಡಿ, ಕಂಡು, ಪರಪತಾಕಿನೀ–ಪತಾಕೆಯಂ, ಕಂಡು, ಸೆರಗಿಲ್ಲದ, ಗಂಡನಂತೆ, ಇನಿಸಪ್ಪೊಡಂ, ಮಾಣದೆ, ಅದುವೆ, ಸಂಸಾರ–ನಿರ್ವೇಗ–ಕಾರಣಮಾಗೆ ... ೧–೭೯ (ವ)

ಪದ ವಿಭಾಗ: ಕರೆದು, ಆಗಳ್, ನಿಜ, ಮನ್ತ್ರಿಮಂಡಳ, ಮಹಾಸಾಮಂತ, ಶುದ್ಧಾಂತ,
ಮುಖ್ಯರನ್; ಆ, ವೃತ್ತಕಂ, ಎಲ್ಲಮಂ, ತಿಳಿಯೆ, ಪೇೞ್ದು, ಆಶಾಂತಮಂ, ತಾಗಿ,
ತೂರ್ಯರವಂ, ಪೊಣ್ಮೆ, ಮಹಾಬಳಂಗೆ, ಅತಿಬಳಂ, ಕೊಟ್ಟಂ, ಸಿತಚ್ಛತ್ರ–ಚಾಮರ–
ಸಿಂಹಾಸನ–ಚಿಹ್ನ, ಭಾಸುರ, ವಿಯದ್ಗಾಮೀಶ್ವರ, ಐಶ್ವರ್ಯಮಂ ॥ ೧–೮೦

ಅನ್ವಯಾರ್ಥ: **(ಅಂತು)** ಹಾಗೆ, **(ಮೇಲೆಬಂದ)** ಮೇಲೆರಗಿದ [ದಾಳಿಮಾಡಿದ] **(ಕೃತಾಂತರಾಜ ವಾಹಿನಿಯ)** ಯಮರಾಜನ ಸೈನ್ಯದ **(ಸಿತಪತಾಕೆಗಳನನುಕರಿಸುವ=ಸಿತಪತಾಕೆಗಳನ್+ಅನುಕರಿಸುವ)** ಶ್ವೇತ ಧ್ವಜಗಳನ್ನು ಹೋಲುತ್ತಿರುವ **(ಪಳಿತಂಗಳಂ)** ನರೆಗೂದಲುಗಳನ್ನು **(ದರ್ಪಣದೊಳ್ನೋಡಿಕಂಡು=ದರ್ಪಣದೊಳ್+ನೋಡಿ)** ಕನ್ನಡಿಯಲ್ಲಿ ನೋಡಿ **(ಕಂಡು)** ಗುರುತಿಸಿ **(ಪರಪತಾಕಿನೀ)** [ಅವುಗಳನ್ನು] ಶತ್ರು ಸೈನ್ಯದ **(ಪತಾಕೆಯಂ)** ಧ್ವಜವೆಂದು **(ಕಂಡು)** ಭಾವಿಸಿ [ಎಣಿಸಿ], **(ಅದುವೆ)** ಆ [ನರೆಗೂದಲುಗಳೇ ಅತಿಬಳನ] **(ಸಂಸಾರ ನಿರ್ವೇಗ ಕಾರಣಮಾಗೆ)** ಸಂಸಾರದ ವಿರಕ್ತಿಗೆ ನಿಮಿತ್ತವಾಗಲು, **(ಸೆರಗಿಲ್ಲದ)** ಅಪಾಯದ ಭೀತಿಯಿಲ್ಲದ **(ಗಂಡನಂತಿನಿಸಪ್ಪೊಡಂ=ಗಂಡನಂತೆ+ಇನಿಸಪ್ಪೊಡಂ[=ಇನಿಸು+ಅಪ್ಪೊಡಂ])** ವೀರನಂತೆ, ಸ್ವಲ್ಪ ಸಮಯವೂ **(ಮಾಣದೆ)** ತಡಮಾಡದೆ ... ೧–೭೯ (ವ)

ಅನ್ವಯಾರ್ಥ: **(ನಿಜ)** [ಅತಿಬಳನು] ತನ್ನ **(ಮನ್ತ್ರಿಮಂಡಳ)** ಮಂತ್ರಿಮಂಡಳವನ್ನು, **(ಮಹಾಸಾಮಂತ)** ಮಹಾಸಾಮಂತ ರಾಜರನ್ನು, **(ಶುದ್ಧಾಂತಮುಖ್ಯರಂ**=ರಾಜನ ಅಂತಃಪುರದ ಸ್ತ್ರೀವರ್ಗದ ಮುಖ್ಯರು**)** ಅಂತಃಪುರದ [ರಾಣಿವಾಸದ] ಮುಖ್ಯರನ್ನು **(ಕರೆದಾಗಳ್=ಕರೆದು+ಆಗಳ್)** ಆಮಂತ್ರಿಸಿ [ಸಭೆಸೇರಿಸಿ], ಆ ಗಳಿಗೆಯಲ್ಲೇ **(ಆ)** ಆ [ಸಂಸಾರ ವಿರಕ್ತಿಗೆ ಕಾರಣವಾದ ನರೆಗೂದಲ] **(ವೃತ್ತಕಮೆಲ್ಲಮಂ)** ಸಮಾಚಾರವೆಲ್ಲವನ್ನೂ **(ತಿಳಿಯೆ)** ತಿಳಿಯುವಂತೆ [ಸ್ಪಷ್ಟವಾಗಿ] **(ಪೇೞ್ದು)** ಹೇಳಲು, **(ಆಶಾಂತಮಂ ತಾಗಿ)** ದಿಗಂತವನ್ನು ಮುಟ್ಟುವಂತೆ **(ತೂರ್ಯರವಂ)** ದಿವ್ಯವಾದ್ಯಗಳ ಧ್ವನಿಯು **(ಪೊಣ್ಮೆ)** ಹೊಮ್ಮಲು, **(ಮಹಾಬಳಂಗತಿಬಳಂ=ಮಹಾಬಳಂಗೆ+ಅತಿಬಳಂ)** ಮಹಾಬಳನಿಗೆ ಅತಿಬಳನು, **(ಸಿತಚ್ಛತ್ರ ಚಾಮರ ಸಿಂಹಾಸನ ಚಿಹ್ನ)** ಶ್ವೇತಛತ್ರ, ಚಾಮರ, ಸಿಂಹಾಸನ, ರಾಜಮುದ್ರೆ [ಮೊದಲಾದ ರಾಜಗೌರವಗಳೊಂದಿಗೆ] **(ಭಾಸುರ)** ಭವ್ಯವಾದ **(ವಿಯದ್ಗಾಮೀಶ್ವರ=ವಿಯತ್+ಗಾಮಿ+ಈಶ್ವರ)** ವಿದ್ಯಾಧರಚಕ್ರವರ್ತಿಯ **(ಐಶ್ವರ್ಯಮಂ)** ಪರಮಾಧಿಕಾರವನ್ನು [ರಾಜ್ಯಾಧಿ ಕಾರವನ್ನು] **(ಕೊಟ್ಟಂ)** ಹಸ್ತಾಂತರ ಮಾಡಿದನು [ನೀಡಿದನು] ॥ ೧–೮೦

ಭಾವಾರ್ಥ: ಹಾಗೆ, ನರೆಗೂದಲುಗಳನ್ನು ಕನ್ನಡಿಯಲ್ಲಿ ನೋಡಿ ತನ್ನ ಕಾಲ ಸನ್ನಿಹಿತವಾಗಿರುವುದನ್ನು ಅರಿತು, ಅವುಗಳೇ ಅತಿಬಳನ ಸಂಸಾರದ ವಿರಕ್ತಿಗೆ ನಿಮಿತ್ತವಾಗಲು, ಇನ್ನು ಸ್ವಲ್ಪವೂ ತಡಮಾಡದೆ ... ೧–೭೯ (ವ)

ಕವಿಯು ಈ ವೃತ್ತಪದ್ಯದಲ್ಲಿ ಅತಿಬಳನು ತನ್ನ ಮಗನಾದ ಮಹಾಬಳನಿಗೆ ಅಳಕಾಪುರದ ರಾಜ್ಯಭಾರವನ್ನು ವಹಿಸಿಕೊಟ್ಟುದುದನ್ನು ವರ್ಣಿಸಿದ್ದಾನೆ.

ಭಾವಾರ್ಥ: ಅತಿಬಳನು ತನ್ನ ಮಂತ್ರಿಮಂಡಳವನ್ನು, ಮಹಾಸಾಮಂತರನ್ನು, ಅಂತಃಪುರದ ರಾಣಿವಾಸದ ಮುಖ್ಯರನ್ನು ಆ ಗಳಿಗೆಯಲ್ಲೇ ಆಮಂತ್ರಿಸಿ [ಸಭೆಸೇರಿಸಿ], ತನ್ನ ಕೆನ್ನೆಯ ಮೇಲೆ ಮೂಡಿದ ನರೆಗೂದಲನ್ನು ಕಂಡು ತನಗೆ ಸಂಸಾರದಲ್ಲಿ ವಿರಕ್ತಿಯುಂಟಾಗಿದೆಯೆಂಬ ಸಮಾಚಾರವೆಲ್ಲವನ್ನೂ ಸ್ಪಷ್ಟವಾಗಿ ಹೇಳಿ ರಾಜ್ಯಭಾರವನ್ನು ತನ್ನ ಮಗನಾದ ಮಹಾಬಳನಿಗೆ ವಹಿಸಿಕೊಡುವ ತೀರ್ಮಾನವನ್ನು ತಿಳಿಸಿದನು. ಅಲ್ಲಿದ್ದ ಆಮಂತ್ರಿತರೆಲ್ಲರೂ ಅತಿಬಳನ ನಿರ್ಧಾರವನ್ನು ಒಪ್ಪಿದರು. ನಂತರ ಅತಿಬಳನು ಮಹಾಬಳನ ಪಟ್ಟಾಭಿಷೇಕದ ಮಂಗಳಕಾರ್ಯವನ್ನು ಆಯೋಜಿಸಿದನು. ಆಗ, ದಿಗಂತವನ್ನು ಮುಟ್ಟುವಂತೆ ದಿವ್ಯವಾದ್ಯಗಳ ಧ್ವನಿಯು ಹೊಮ್ಮುತ್ತಿರಲು, ಮಹಾಬಳನಿಗೆ ಅತಿಬಳನು, ಶ್ವೇತಛತ್ರ, ಚಾಮರ, ಸಿಂಹಾಸನ, ರಾಜಮುದ್ರೆ ಮೊದಲಾದ ರಾಜಗೌರವಗಳನ್ನು, ಭವ್ಯವಾದ ವಿದ್ಯಾಧರ ಚಕ್ರವರ್ತಿಯ ರಾಜ್ಯದ ಪರಮಾಧಿಕಾರವನ್ನು ಹಸ್ತಾಂತರ ಮಾಡಿದನು. ೧–೮೦

ವಿಶೇಷ ವಿವರಣೆ: ಸಂಸಾರನಿರ್ವೇಗಕಾರಣಂ (೧-೭೯ (ವ)): ಜೈನಕಥೆಗಳಲ್ಲಿ, ಜೈನಪುರಾಣಗಳಲ್ಲಿ **ಸಂಸಾರದ ವಿರಕ್ತಿಯ ನಿಮಿತ್ತದ** ಬಗ್ಗೆ ಅಂದರೆ **ವೈರಾಗ್ಯವುಂಟಾಗುವ ಹೇತು** ಅಥವಾ **ಕಾರಣದ** ಬಗ್ಗೆ ಅತಿಶಯವಾದ ಉಲ್ಲೇಖಗಳನ್ನು ಮಾಡುತ್ತಾರೆ. ಈ **ಆದಿಪುರಾಣ**ದಲ್ಲಿ ನಮಗೆ ಪರಿಚಯವಾಗುವ ಮೊದಲನೆಯ ವ್ಯಕ್ತಿ ಅತಿಬಳನು ಒಬ್ಬ ಭವ್ಯಜೀವನಾಗಿದ್ದು, ಒಂದು ಸಣ್ಣ ನಿಮಿತ್ತದಿಂದ ಎಂದರೆ ತನ್ನ ಕೆನ್ನೆಯ ಮೇಲೆ ಕಾಣಿಸಿದ ಒಂದು ಬಿಳಿಯ ಕೂದಲಿನ ಕಾರಣದಿಂದ ಸಂಸಾರದ ನಶ್ವರತೆಯನ್ನು ಮನಗಂಡು ದೀಕ್ಷೆಯನ್ನು ಸ್ವೀಕರಿಸಿ ಆತ್ಮಕಲ್ಯಾಣ ಮಾಡಿಕೊಳ್ಳಲು ತಪಸ್ಸಿಗೆ ತೆರಳುತ್ತಾನೆ. ಈ ಕಾವ್ಯವು ಹೀಗೆ ಪ್ರಥಮದಿಂದಲೇ ನಮ್ಮ ಮನಸ್ಸು ಆತ್ಮಕಲ್ಯಾಣದೆಡೆಗೆ ಇರುವಂತೆ ಪ್ರೇರೇಪಿಸುತ್ತದೆ. ಹಾಗೆಯೇ ಪುರಾಣಗಳಲ್ಲಿ ವರ್ತಮಾನ ಕಾಲದ ಇಪ್ಪತ್ತನಾಲ್ಕು ತೀರ್ಥಂಕರರ ವೈರಾಗ್ಯ ಉತ್ಪತ್ತಿಯ ಕಾರಣಗಳನ್ನು (ನಿಮಿತ್ತಗಳನ್ನು) **ತಿಲೋಯಪಣ್ಣತ್ತೀ** ಗ್ರಂಥದಲ್ಲಿನ ಈ ಕೆಳಗಿನ ಗಾಥೆಗಳಲ್ಲಿ ತಿಳಿಸಿರುತ್ತಾರೆ.

ಸಂತಿ ದುಗ ವಾಸುಪುಜ್ಜಾ ಸುಮಈ ದುಗಂ ಸುವ್ವದಾದಿ ಪಂಚ ಜಿಣಾ।
ಣಿಯ ಪಚ್ಛಿಮ ಜಮ್ಮಾಣಂ ಉವಓಗಾ ಜಾದ ವೇರಗ್ಗಾ ॥ (ತಿಲೋಯಪಣ್ಣತ್ತೀ, ೪-೬೧೪)

ಅರ್ಥ: ಶಾಂತಿನಾಥ, ಕುಂಥುನಾಥ, ವಾಸುಪೂಜ್ಯ, ಸುಮತಿನಾಥ ಹಾಗೂ ಪದ್ಮಪ್ರಭ, ಈ ಐವರು ಮತ್ತು ಸುವ್ರತ ಮೊದಲಾದ (ಮುನಿಸುವ್ರತ, ನಮಿನಾಥ, ನೇಮಿನಾಥ ಮತ್ತು ವರ್ಧಮಾನ) ಐವರು, ಹೀಗೆ ಒಟ್ಟು ಹತ್ತು ತೀರ್ಥಂಕರರು ತಮ್ಮ ಪೂರ್ವ (ಹಿಂದಿನ) ಜನ್ಮಗಳ ಸ್ಮರಣೆಯಿಂದ ವೈರಾಗ್ಯವನ್ನು ತಳೆದರು.

ಅಜಿಯ ಜಿಣ ಪುಪ್ಫದಂತಾ ಅಣಂತದೇಓ ಯ ಧಮ್ಮ ಸಾಮೀ ಯ ।
ದಟ್ಠೂಣ ಉಕ್ಕ ಪಡಣಂ ಸಂಸಾರ-ಸರೀರ-ಭೋಗ ಣಿವ್ವಿಣ್ಣಾ ॥ (ತಿಲೋಯಪಣ್ಣತ್ತೀ, ೪-೬೧೫)

ಅರ್ಥ: ಅಜಿತ ಜಿನ, ಪುಷ್ಪದಂತ, ಅನಂತದೇವ ಮತ್ತು ಧರ್ಮನಾಥ ಸ್ವಾಮಿಯವರು ಉಲ್ಕಾಪಾತವನ್ನು ಕಂಡು ಸಂಸಾರ, ಶರೀರ ಹಾಗೂ ಭೋಗಗಳಿಂದ ವಿರಕ್ತರಾದರು.

ಅರ ಸಂಭವ ವಿಮಲ ಜಿಣಾ ಅಬ್ಭ ವಿಣಾಸೇಣ ಜಾದ ವೇರಗ್ಗಾ ।
ಸೇಯಂಸ ಸುಪಾಸ ಜಿಣಾ ವಸಂತ ವಣಲಚ್ಛಿ ಣಾಸೇಣ ॥ (ತಿಲೋಯಪಣ್ಣತ್ತೀ, ೪-೬೧೬)

ಅರ್ಥ: ಅರನಾಥ, ಸಂಭವನಾಥ ಮತ್ತು ವಿಮಲ ಜಿನೇಂದ್ರರು ಮೇಘ ವಿನಾಶದಿಂದ ಭಗವಾನ ಶ್ರೇಯಾಂಸ ಮತ್ತು ಸುಪಾರ್ಶ್ವ ಜಿನೇಂದ್ರರು ವಸಂತ ಋತುವಿನ ವನಲಕ್ಷ್ಮಿಯ ವಿನಾಶವನ್ನು ಕಂಡು ವೈರಾಗ್ಯವನ್ನು ಹೊಂದಿದರು.

ಚಂದಪ್ಪಹ ಮಲ್ಲಿ ಜಿಣಾ ಅದ್ಧುವ ಪಹುದೀಹಿ ಜಾದ ವೇರಗ್ಗಾ ।
ಸೀಯಲಓ ಹಿಮ ಣಾಸೇ ಉಸಹೋ ಣೀಲಂಜಣಾಏ ಮರಣಾಓ ॥ (ತಿಲೋಯಪಣ್ಣತ್ತೀ, ೪-೬೧೭)

ಅರ್ಥ: ಚಂದ್ರಪ್ರಭ ಮತ್ತು ಮಲ್ಲಿ ಜಿನೇಂದ್ರರು ಅಧ್ರುವ (ಮಿಂಚು) ಮುಂತಾದವುಗಳಿಂದ, ಶೀತಲನಾಥರು ಹಿಮನಾಶದಿಂದ ಮತ್ತು ಋಷಭದೇವ ನೀಲಾಂಜನೆಯ ಮರಣದಿಂದ ವೈರಾಗ್ಯವನ್ನು ಹೊಂದಿದರು.

ಗಂಧವ್ವ ಣಯರ ಣಾಸೇ ಣಂದಣದೇವೋ ವಿ ಜಾದ ವೇರಗ್ಗೋ ।
ಇಯ ಬಾಹಿರ ಹೇದೂಹಿಂ ಜಿಣಾ ವಿರಾಗೇಣ ಚಿಂತಂತಿ ॥ (ತಿಲೋಯಪಣ್ಣತ್ತೀ, ೪-೬೧೮)

ಅರ್ಥ: ಅಭಿನಂದನ ಸ್ವಾಮಿಯವರು ಗಂಧರ್ವನಗರದ ನಾಶವನ್ನು ಕಂಡು ವಿರಕ್ತರಾದರು. ಈ ಬಾಹ್ಯ ಕಾರಣಗಳಿಂದ (ಹೇತುಗಳಿಂದ/ನಿಮಿತ್ತಗಳಿಂದ) ವಿರಕ್ತರಾಗಿ ಆ ತೀರ್ಥಂಕರರು ಈ ಪ್ರಕಾರ ಚಿಂತಿಸುತ್ತಾರೆ.

ಹೀಗೆ ತೀರ್ಥಂಕರರು ವೈರಾಗ್ಯ ತಳೆದ ನಿಮಿತ್ತಗಳನ್ನು ಜೈನಪುರಾಣಗಳಲ್ಲಿ ಅತಿಶಯದಿಂದ ನಿರೂಪಿಸುತ್ತಾರೆ.

ಈ ರೀತಿಯಾಗಿ ಅತಿಬಳನು ಸಂಸಾರವನ್ನು ತ್ಯಜಿಸಿ ಶಾಶ್ವತ ಸುಖ ಹೊಂದಲು ದೀಕ್ಷೆಯನ್ನು ಹೊಂದಿ ತಪಸ್ಸಿಗೆ ತೆರಳಿದನು ಎಂಬುದರಿಂದ ಕಥಾಹಂದರ ಪ್ರಾರಂಭವಾಗಿ ಋಷಭನಾಥರು ತಪಸ್ಸನ್ನಾಚರಿಸಿ ಹುಟ್ಟು-ಸಾವುಗಳೆಂಬ ಭವಬಂಧನದಿಂದ ಪಾರಾಗಿ ಮೋಕ್ಷವನ್ನಡರಿ ಸಿದ್ಧಾತ್ಮರಾದರು ಎನ್ನುವುದರೊಂದಿಗೆ ಹದಿನಾರು ಆಶ್ವಾಸಗಳ ಈ **ಆದಿಪುರಾಣ** ಮಹಾಕಾವ್ಯವು ಸಂಪೂರ್ಣವಾಗುತ್ತದೆ.

ವ ॥ ಅಂತು ಮಹಾಬಳಂಗೆ ಮಹಾವಿಭೂತಿಯಿಂದಮಂಬರಚರಶ್ರೀಯನಿತ್ತುಭವ್ಯಸಾರ್ಥಪ್ರಾರ್ಥನೀಯಮುಕ್ತಿಶ್ರೀಯನಾಸೆವಟ್ಟುಸಕಳಮಳನಿರ್ಜರಣಕರಣಕಾರಣಮಂ ತಪಶ್ರೀಯಂಕೈಕೊಳಲ್ಬಗೆದು ಸಾಸಿರ್ವರರಸುಮಕ್ಕಳುಮಯ್ನೂರ್ವರರಸಿಯರುಂ ಬೆರಸು ಗಣಧರಕೇವಳಿಗಳ ಪಾದಪದ್ಮಮೂಲ

ದೊಳ್, ೧–೮೦ (ವ)

ಮತ್ತೇಭ ವಿಕ್ರೀಡಿತ

ಅತಿತೃಷ್ಣಾಪರನಾಗಿ ಮುನ್ನೆ ತೊಡರ್ದಿರ್ದಾಗಾಂಪೆ ಸಾಲ್ಗುಂ ಮದಾ
ಕೃತಿಯಂ ಮಾಸಿಸಿ ಮುಪ್ಪುಚಪ್ಪರಿಸೆಯುಂ ಚಿಃ ಕೆಮ್ಮಿನೊಳ್ಕುಂಮಿ ಸಂ
ಸೃತಿಯೊಳ್ಮತ್ತೆಗಡಂ ಕಡಂಗಿ ತೊಡರ್ದಾಂ ಮಾಣ್ದಿರ್ಪೆನೆಂದಣ್ಮಿ ಘೋ
ರತಪೋವೃತ್ತಿಯನಾಂತ ಪೆಂಪತಿಬಳಂಗಕ್ಕುಂ ಪೆಱರ್ಗಕ್ಕುಮೇ ॥ ೧–೮೧

(**ವಿ.ಸೂ.:** ೧–೮೧ ನೆಯ ವೃತ್ತಪದ್ಯವು, ಹಿಂದಿನ ೧–೮೦ (ವ) ನೆಯ ವಚನದ ಮುಂದುವರಿದ ಭಾಗವಾಗಿರುವುದರಿಂದ ಇವೆರಡರ **ಪದವಿಭಾಗ, ಅನ್ವಯಾರ್ಥ, ಭಾವಾರ್ಥ** ಮತ್ತು **ವಿಶೇಷ ವಿವರಣೆ**ಗಳನ್ನು ಇದರಡಿ ಒಂದೆಡೆಯಲ್ಲಿಯೇ ನೀಡಲಾಗಿದೆ.)

ಪದ ವಿಭಾಗ: ವ.ಪಾ. ॥ ಅಂತು, ಮಹಾಬಳಂಗೆ, ಮಹಾವಿಭೂತಿಯಿಂದಂ, ಅಂಬರಚರಶ್ರೀಯನಿತ್ತು, ಭವ್ಯ, ಸಾರ್ಥ, ಪ್ರಾರ್ಥನೀಯ, ಮುಕ್ತಿಶ್ರೀಯನ್, ಆಸೆವಟ್ಟು, ಸಕಳ, ಮಳ, ನಿರ್ಜರಣ, ಕರಣ, ಕಾರಣಮಂ, ತಪಶ್ರೀಯಂ, ಕೈಕೊಳಲ್, ಬಗೆದು, ಸಾಸಿರ್ವರ್, ಅರಸು, ಮಕ್ಕಳುಂ, ಅಯ್ನೂರ್ವರ್, ಅರಸಿಯರುಂ, ಬೆರಸು, ಗಣಧರ, ಕೇವಳಿಗಳ, ಪಾದಪದ್ಮ, ಮೂಲದೊಳ್ ... ೧–೮೦ (ವ)

ಪದ ವಿಭಾಗ: ಅತಿ, ತೃಷ್ಣಾಪರನಾಗಿ, ಮುನ್ನೆ, ತೊಡರ್ದಿರ್ದ, ಆ, ಗಾಂಪೆ, ಸಾಲ್ಗುಂ; ಮದಾಆಕೃತಿಯಂ, ಮಾಸಿಸಿ, ಮುಪ್ಪು, ಚಪ್ಪರಿಸೆಯುಂ, ಚಿಃ, ಕೆಮ್ಮಿನೊಳ್ಕುಂಮಿ, ಸಂಸೃತಿಯೊಳ್, ಮತ್ತೆ, ಗಡಂ, ಕಡಂಗಿ, ತೊಡರ್ದು, ಆಂ, ಮಾಣ್ದಿರ್ಪೆನ್, ಎಂದು, ಅಣ್ಮಿ, ಘೋರ, ತಪೋವೃತ್ತಿಯನ್, ಆಂತ, ಪೆಂಪು, ಅತಿಬಳಂಗೆ, ಅಕ್ಕುಂ, ಪೆಱರ್ಗೆ, ಅಕ್ಕುಮೇ ॥ ೧–೮೧

ಅನ್ವಯಾರ್ಥ: **(ಅಂತು)** ಹಾಗೆ **(ಮಹಾಬಳಂಗೆ)** ಮಹಾಬಳನಿಗೆ **(ಮಹಾವಿಭೂತಿಯಿಂದಮಂಬರಚರಶ್ರೀಯನಿತ್ತು= ಮಹಾವಿಭೂತಿಯಿಂದಂ+ಅಂಬರಚರಶ್ರೀಯನ್+ಇತ್ತು)** ಅತಿಶಯ ವೈಭವದಿಂದ ವಿದ್ಯಾಧರ ರಾಜ್ಯಲಕ್ಷ್ಮಿಯನ್ನು [ಖೇಚರ ರಾಜ್ಯಲಕ್ಷ್ಮಿಯನ್ನು] ಕೊಟ್ಟು **(ಭವ್ಯಸಾರ್ಥ)** ಭವ್ಯ ಸಮೂಹದವರಿಂದ [ಮುಮುಕ್ಷುಗಳಿಂದ] **(ಪ್ರಾರ್ಥನೀಯ)** ಬೇಡಲ್ಪಡುವ **(ಮುಕ್ತಿಶ್ರೀಯನಾಸೆವಟ್ಟು=ಮುಕ್ತಿಶ್ರೀಯನ್+ಆಸೆವಟ್ಟು)** ಮೋಕ್ಷಲಕ್ಷ್ಮಿಯನ್ನು ಬಯಸಿ **(ಸಕಳ ಮಳ)** ಸಕಲ ಕರ್ಮಕಳಂಕಗಳನ್ನು **(ನಿರ್ಜರಣಕರಣ)** ಕ್ಷಯಿಸುವಂತೆ ಮಾಡುವ **(ಕಾರಣಮಂ)** ಸಾಧನವಾದ **(ತಪಶ್ರೀಯಂ)** ತಪೋಲಕ್ಷ್ಮಿಯನ್ನು **(ಕೈಕೊಳಲ್ಬಗೆದು=ಕೈಕೊಳಲ್+ಬಗೆದು)** ಸ್ವೀಕರಿಸಲು ಮನಸ್ಸುಮಾಡಿ **(ಸಾಸಿರ್ವರರಸುಮಕ್ಕಳುಮಯ್ನೂರ್ವರರಸಿಯರುಂ=ಸಾಸಿರ್ವರ್+ಅರಸುಮಕ್ಕಳುಂ+ಅಯ್ನೂರ್ವರ್+ಅರಸಿಯರುಂ)** ಸಾವಿರಜನ ಅರಸು ಕುಮಾರರೂ, ಐದುನೂರುಜನ ರಾಣಿಯರೂ **(ಬೆರಸು)** ಸಹಿತ **(ಗಣಧರಕೇವಳಿಗಳ)** ಗಣಧರ ಕೇವಲಿಗಳ **(ಪಾದಪದ್ಮ ಮೂಲದೊಳ್)** ಚರಣಕಮಲಗಳ ಅಡಿಯಲ್ಲಿ [ಕುಳಿತು] ... ೧–೮೦ (ವ)

ಅನ್ವಯಾರ್ಥ: "**(ಅತಿ ತೃಷ್ಣಾಪರನಾಗಿ)** ಅತ್ಯಂತ ಲೋಭಿಯಾಗಿ **(ಮುನ್ನೆ)** ಈ ಮುಂಚೆ **(ತೊಡರ್ದಿರ್ದಾಗಾಂಪೆ= ತೊಡರ್ದಿರ್ದ+ಆ–ಗಾಂಪೆ)** [ಸಂಸಾರದಲ್ಲಿ] ಸಿಲುಕಿಕೊಂಡಿದ್ದ ಆ ಒಂದು ಮೌಢ್ಯವೇ [ಅಜ್ಞಾನವೇ] **(ಸಾಲ್ಗುಂ)** ಸಾಕು; **(ಮದಾಕೃತಿಯಂ=ಮತ್+ಆಕೃತಿಯಂ)** ನನ್ನ ದೇಹವನ್ನು **(ಮಾಸಿಸಿ)** ಕಾಂತಿಗೆಡಿಸಿ **(ಮುಪ್ಪುಚಪ್ಪರಿಸೆಯುಂ)** ವೃದ್ಧಾಪ್ಯವು [ದೇಹಕ್ಕೆ] ಆವರಿಸಿದ್ದರೂ [ಆಕ್ರಮಿಸಿದ್ದರೂ], **(ಚಿಃ)** ಚಿಃ **(ಕೆಮ್ಮಿನೊಳ್ಕುಂಮಿ=ಕೆಮ್ಮಿನೊಳ್+ಕುಂಮಿ>ಕುಮ್ಮಿ)** ಕೆಮ್ಮಿನಿಂದಾಗಿ [ನಿಶ್ಶಕ್ತಿಯಿಂದ] ಕುಕ್ಕರಿಸಿಬಿದ್ದರೂ **(ಸಂಸೃತಿಯೊಳ್ಮತ್ತೆ=ಸಂಸೃತಿಯೊಳ್+ಮತ್ತೆ)** ಸಂಸಾರದಲ್ಲಿ ಪುನಃ **(ಗಡಂ)** ಇನ್ನೂ **(ಕಡಂಗಿ)** ಉತ್ಸಾಹಗೊಂಡು [ಮೋಹಪರವಶನಾಗಿ] **(ತೊಡರ್ದಾಂ=ತೊಡರ್ದು+ಆಂ>ಆನ್)** ಸಿಲುಕಿರುವ ನಾನು [ಅದರಿಂದ] **(ಮಾಣ್ದಿರ್ಪೆನ್=ಮಾಣ್ದು+ಇರ್ಪೆನ್)** ಪಾರಾಗುವೆ" **(ಎಂದಣ್ಮಿ=ಎಂದು+ಅಣ್ಮಿ)** ಎಂದು [ಯೋಚಿಸಿ] ಧೈರ್ಯದಿಂದ [ತಪಶ್ಚರಣವೇ ಸರಿಯಾದ ಮಾರ್ಗ ಎಂದು ದೃಢ ನಿಶ್ಚಯ ಮಾಡಿ] **(ಘೋರತಪೋವೃತ್ತಿಯನಾಂತ= ಘೋರತಪೋವೃತ್ತಿಯನ್+ಆಂತ)** ಕಠಿಣವಾದ ತಪಸ್ಸಿನ ಆಚರಣೆಯನ್ನು ಕೈಕೊಂಡ [ದೀಕ್ಷೆಯನ್ನು ಕೈಕೊಂಡ]

(ಪೆಂಪತಿಬಳಂಗಕ್ಕುಂ=ಪೆಂಪು+ಅತಿಬಳಂಗೆ+ಅಕ್ಕುಂ) ಹಿರಿಮೆಯು ಅತಿಬಳನಿಗೆ ಉಂಟಾಗುತ್ತದೆಯೇ [ಹೊರತು] **(ಪೆಱರ್ಗಕ್ಕುಮೇ=ಪೆಱರ್ಗೆ+ಅಕ್ಕುಮೇ)** ಬೇರೆಯವರಿಗೆ ಉಂಟಾಗುತ್ತದೆಯೇ ॥ ೧–೮೧

ಭಾವಾರ್ಥ: ಹಾಗೆ ಮಹಾಬಳನಿಗೆ ಅತಿಶಯ ವೈಭವದಿಂದ ವಿದ್ಯಾಧರರಾಜ್ಯವನ್ನು ಕೊಟ್ಟು, ಭವ್ಯ ಸಮೂಹದವರಿಂದ ಬೇಡಲ್ಪಡುವ ಮೋಕ್ಷಪದವಿಗೆ ಆಸೆಪಟ್ಟು ಸಕಲ ಕರ್ಮಕಳಂಕಗಳನ್ನು ಕ್ಷಯಿಸುವಂತೆ ಮಾಡುವ ಸಾಧನವಾದ ತಪಸ್ಸನ್ನು ಸ್ವೀಕರಿಸಲು ಮನಸ್ಸು ಮಾಡಿ ಸಾವಿರಜನ ಅರಸು ಕುಮಾರರು ಹಾಗೂ ಐದುನೂರುಜನ ರಾಣಿಯರ ಸಹಿತ ಗಣಧರಕೇವಲಿಗಳ ಚರಣಕಮಲಗಳ ತಳದಲ್ಲಿ [ಕುಳಿತು] ... ೧–೮೦ (ವ)

ಭಾವಾರ್ಥ: "ಅತ್ಯಂತ ಲೋಭಿಯಾಗಿ ಈ ಮುಂಚೆ ಸಂಸಾರದಲ್ಲಿ ಸಿಲುಕಿಕೊಂಡಿದ್ದ ಆ ಒಂದು ಮೌಢ್ಯವೇ ಸಾಕು; ನನ್ನ ದೇಹವನ್ನು ಕಾಂತಿಗೆಡಿಸಿ ವೃದ್ಧಾಪ್ಯವು ದೇಹವನ್ನು ಆಕ್ರಮಿಸಿದ್ದರೂ, ಚೀ! ಕೆಮ್ಮಿನಿಂದಾಗಿ ನಿಶ್ಶಕ್ತಿಯಿಂದ ಕುಕ್ಕರಿಸಿಬಿದ್ದರೂ, ಸಂಸಾರದಲ್ಲಿ ಇನ್ನೂ ಉತ್ಸಾಹದಿಂದ ಸಿಲುಕಿದ್ದು, ನಾನು ಅದರಿಂದ ಪಾರಾಗುವೆ" ಎಂದು ಯೋಚಿಸಿ, ಇದಕ್ಕೆ ದೀಕ್ಷಾಗ್ರಹಣವೇ ಸರಿಯಾದ ಮಾರ್ಗ ಎಂದು ಧೈರ್ಯದಿಂದ ದೃಢನಿಶ್ಚಯಮಾಡಿ ಕಠಿಣವಾದ ತಪಸ್ಸಿನ ಆಚರಣೆಯನ್ನು ಅಂದರೆ ದೀಕ್ಷೆಯನ್ನು ಕೈಕೊಂಡ ಹಿರಿಮೆಯು ಅತಿಬಳನಿಗೆ ಉಂಟಾಗುತ್ತದೆಯೇ ಹೊರತು ಬೇರೆಯವರಿಗೆ ಉಂಟಾಗುತ್ತದೆಯೇ? ಎಂದು ಅತಿಬಳನಲ್ಲಿರುವ ಶ್ರೇಷ್ಠತೆಯನ್ನು ಕವಿಯು ಕೊಂಡಾಡಿದ್ದಾನೆ. ೧–೮೧

ವಿಶೇಷ ವಿವರಣೆ: ಸಕಳ ಮಳ ನಿರ್ಜರಣಕರಣ ಕಾರಣಮಂ ತಪಶ್ರೀಯಂ ಕೈಕೊಳಲ್ಬಗೆದು (೧–೮೦ (ವ)): ಜೀವ ಮತ್ತು ಅಜೀವಗಳ (ಸಕಲ ಮಲರೂಪಿ ಕರ್ಮಗಳ) ಸಂಬಂಧವನ್ನು ಬಿಡಿಸುವ (ನಿರ್ಜರೆ) **ಅಧಃಪ್ರವೃತ್ತೀಕರಣ** ಪರಿಣಾಮವಾದ **ಸಾತಿಶಯ ಅಪ್ರಮತ್ತ ವಿರತ ಕ್ಷಪಕಶ್ರೇಣಿ**ಯಲ್ಲಿ, **ಅಪೂರ್ವಕರಣ** ಮತ್ತು **ಅನಿವೃತ್ತೀಕರಣ** ಶ್ರೇಣಿ ಆರೋಹಣ ಮಾಡುವ ಉದ್ದೇಶದಿಂದ ತಪೋಲಕ್ಷ್ಮಿಯನ್ನು ಸ್ವೀಕರಿಸಲು ಮನಸ್ಸು ಮಾಡಿದನು. **ನಿರ್ಜರ ತತ್ತ್ವದ** ವಿವರಣೆಗೆ ಸಂಖ್ಯಾ ವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಏಳು (೭)–ಸಪ್ತತತ್ತ್ವಗಳು** ಅನ್ನು ನೋಡಿರಿ. **ಕರಣಗಳ** ವಿವರಣೆಗೆ ಸಂಖ್ಯಾ ವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ **ಹದಿನಾಲ್ಕು (೧೪)–ಗುಣಸ್ಥಾನಗಳು** ಅನ್ನು ನೋಡಿರಿ.

ವ ॥ ಮತ್ತಿತ್ತ ಮಹಾಬಳ ಖಚರಪತಿಯುಮಾತ್ಮೀಯಗುರು ನಿರೂಪಿತ ಗಗನಚರರಾಜ್ಯಭಾರಮನಾ ಶೈಶವ ಪ್ರಭೃತಿ ಪ್ರರೂಢ ನಿರ್ಭರ ಪ್ರೇಮರಸರುಮನೇಕಾರ್ಥ ಶಾಸ್ತ್ರ ಪ್ರಯೋಗ ಕುಶಲರುಂ ಸಕಳಕಳಾವಗಾಹನ ಸಮಾಹಿತಮತಿಗಳುಮಾಗಿ ನಾಲ್ಕುಮುಪಧೆ[1]ಗಳೊಳಂ ಶುದ್ಧರಾಗಿ ನಾಲ್ಕುಮುಪಾಯಂಗಳಿರ್ಪಂತಿರ್ದ ಜಗತ್ಪ್ರಸಿದ್ಧ ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿಗಳೆಂಬ ನಾಲ್ವರುಮಮಾತ್ಯರ ಮೆಯ್ಯೊಳ್ನಿಱಿಸಿ ನಿರಾಕುಳ ಸ್ವಾಂತನಪಗತ ರಾಜ್ಯಚಿಂತನಮರಸೌಂದರೀ ವಿಳಾಸೋಪಹಾಸಿ ಗಗನಚರಸೌಂ[2]ದರೀ ಮನೋನಯನಸೌಂ[3]ದರನಾಗಿ ವಿದ್ಯಾಧರಶ್ರೀಯನನುಭವಿಸಿ, ೧–೮೧ (ವ)

ಪದ ವಿಭಾಗ: ವ.ಪಾ. ॥ ಮತ್ತೆ, ಇತ್ತ, ಮಹಾಬಳಖಚರಪತಿಯುಂ, ಆತ್ಮೀಯ–ಗುರು–ನಿರೂಪಿತ–ಗಗನಚರ–ರಾಜ್ಯಭಾರಮನ್, ಆಶೈಶವ–ಪ್ರಭೃತಿ–ಪ್ರರೂಢ–ನಿರ್ಭರ–ಪ್ರೇಮರಸರುಂ, ಅನೇಕಾರ್ಥ–ಶಾಸ್ತ್ರಪ್ರಯೋಗ–ಕುಶಲರುಂ, ಸಕಳ–ಕಳಾವಗಾಹನ–ಸಮಾಹಿತ–ಮತಿಗಳುಂ, ಆಗಿ, ನಾಲ್ಕುಂ, ಉಪಧೆಗಳೊಳಂ, ಶುದ್ಧರಾಗಿ, ನಾಲ್ಕುಂ, ಉಪಾಯಂಗಳ್, ಇರ್ಪಂತೆ, ಇರ್ದ, ಜಗತ್ಪ್ರಸಿದ್ಧ–ಸ್ವಯಂಬುದ್ಧ–ಮಹಾಮತಿ–ಸಂಭಿನ್ನಮತಿ–ಶತಮತಿಗಳೆಂಬ–ನಾಲ್ವರುಂ, ಅಮಾತ್ಯರ–ಮೆಯ್ಯೊಳ್ನಿಱಿಸಿ, ನಿರಾಕುಳ–ಸ್ವಾಂತನ್, ಅಪಗತ–ರಾಜ್ಯ–ಚಿಂತನ್, ಅಮರಸೌಂದರೀ–ವಿಳಾಸೋಪಹಾಸಿ–ಗಗನಚರಸೌಂದರೀ–ಮನೋನಯನಸೌಂದರನ್, ಆಗಿ, ವಿದ್ಯಾಧರಶ್ರೀಯನ್, ಅನುಭವಿಸಿ, ೧–೮೧ (ವ)

[1] 'ಉಪಧೆ'–ವುಪಧಾ ಧರ್ಮಾದ್ಯೈರ್ಯತ್ಪರೀಕ್ಷಣಮ್ ।೪೮೬। (ಧಮ, ಅರ್ಥ, ಕಾಮ, ಧೈರ್ಯಗಳ ನೆವದಿಂದ ಅರಸು ತನ್ನ ಮಂತ್ರಿ ಮುಂತಾದವರ ಗುಣಗಳನ್ನು ಪರೀಕ್ಷಿಸುವುದು)_ ಅಮರಕೋಶ, ದ್ವಿತೀಯಕಾಂಡ, ೮. ಕ್ಷತ್ರಿಯವರ್ಗ, ಶ್ಲೋ.ಸಂ. ೪೮೬.

[2] ಮೂಲಪಾಠ–'ಸೌಂದರೀ', ಕೆಜಿ ಯವರ ಪಾಠ–'ಸುಂದರೀ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

[3] ಮೂಲಪಾಠ–'ಸೌಂದರ', ಕೆಜಿ ಯವರ ಪಾಠ–'ಸುಂದರ', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಅನ್ವಯಾರ್ಥ: (ಮತ್ತಿತ್ತ=ಮತ್ತೆ+ಇತ್ತ) ನಂತರ ಇತ್ತ ಅಳಕಾಪುರದಲ್ಲಿ, **(ಮಹಾಬಳಖಚರಪತಿಯುಮಾತ್ಮೀಯಗುರು= ಮಹಾಬಳ–ಖಚರಪತಿಯುಂ+ಆತ್ಮೀಯ–ಗುರು)** ಮಹಾಬಳ ಖೇಚರಚಕ್ರವರ್ತಿಯೂ, ತನ್ನ ತಂದೆಯಾದ [ಅತಿಬಳನು] **(ನಿರೂಪಿತ)** ನಿಯುಕ್ತ ಮಾಡಲಾದ **(ಗಗನಚರ ರಾಜ್ಯಭಾರಮನ್)** ಖೇಚರ ರಾಜ್ಯಭಾರವನ್ನು, **(ಆಶೈಶವ ಪ್ರಭೃತಿ ಪ್ರರೂಢ)** ಮಕ್ಕಳಾದಾಗಿನಿಂದ ಮೊದಲ್ಗೊಂಡು [ಸಹಪಾಠಿಗಳಾಗಿ ಆಡಿಬೆಳೆದು] ದೊಡ್ಡವರಾದಮೇಲೂ, **(ನಿರ್ಭರ ಪ್ರೇಮರಸರುಂ)** ಅತಿಶಯವಾದ ಸ್ನೇಹಸುಧೆಯಲ್ಲಿ ಮಿಂದವರೂ, **(ಅನೇಕಾರ್ಥ ಶಾಸ್ತ್ರ ಪ್ರಯೋಗ ಕುಶಲರುಂ)** ಹೆಚ್ಚು ಪ್ರಯೋಜನವುಳ್ಳ ಪ್ರಮಾಣಗ್ರಂಥಗಳ [ತಾತ್ತ್ವಿಕ ವಿಷಯಗಳನ್ನು] ಕಾರ್ಯತಃ ಮಾಡಿ ತೋರಿಸುವುದರಲ್ಲಿ ನಿಪುಣರೂ, **(ಸಕಳ ಕಳಾವಗಾಹನ[=ಕಳಾ+ಅವಗಾಹನ] ಸಮಾಹಿತ ಮತಿಗಳುಮಾಗಿ[=ಮತಿಗಳುಂ+ಆಗಿ])** ಸಮಸ್ತ ಕಲೆಗಳ ಆಳವಾದ ಮತ್ತು ಸಮಗ್ರವಾದ ಜ್ಞಾನವುಳ್ಳವರೂ ಆಗಿ, **(ನಾಲ್ಕುಮುಪಧೆಗಳೊಳಂ=ನಾಲ್ಕುಂ+ಉಪಧೆಗಳೊಳಂ)** ನಾಲ್ಕೂ ಉಪಧೆಗಳಲ್ಲಿ, ಎಂದರೆ, ರಾಜಭಕ್ತಿ, ಸ್ವಾರ್ಥರಾಹಿತ್ಯ, ಇಂದ್ರಿಯಜಯ, ಧೈರ್ಯ ಎಂಬ ಗುಣ ಪರೀಕ್ಷೆಯಲ್ಲಿ **(ಶುದ್ಧರಾಗಿ)** ಶುದ್ಧರಾಗಿ [ಶುದ್ಧರೆಂದು ನಿರ್ಣಯಿಸಲ್ಪಟ್ಟವರಾಗಿ], **(ನಾಲ್ಕುಮುಪಾಯಂಗಳಿರ್ಪಂತಿರ್ದ=ನಾಲ್ಕುಂ+ಉಪಾಯಂಗಳ್+ಇರ್ಪಂತೆ+ಇದ್ದ)** [ಕಾರ್ಯಸಾಧನೆಗೆ ಪ್ರಯೋಗಿಸಲಾಗುವ ಸಾಮ, ದಾನ, ಭೇದ, ದಂಡಗಳೆಂಬ] ನಾಲ್ಕು ಉಪಾಯಗಳಂತೆ ಇದ್ದ, **(ಜಗತ್ಪ್ರಸಿದ್ಧ)** ಲೋಕಪ್ರಖ್ಯಾತರಾದ **(ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿಗಳೆಂಬ)** ಸ್ವಯಂಬುದ್ಧ, ಮಹಾಮತಿ, ಸಂಭಿನ್ನಮತಿ ಮತ್ತು ಶತಮತಿಗಳೆಂಬ **(ನಾಲ್ವರುಮಮಾತ್ಯರ=ನಾಲ್ವರುಂ+ಅಮಾತ್ಯರ)** ನಾಲ್ಕು ಮಂದಿ ಮಂತ್ರಿಗಳ **(ಮೆಯ್ಯೊಳ್ನಿಱಿಸಿ=ಮೆಯ್ಯೊಳ್+ನಿಱಿಸಿ)** ಮೈಮೇಲೆಹಾಕಿ [ಹೆಗಲಮೇಲೆ ಹೊರಿಸಿ], **(ನಿರಾಕುಳ ಸ್ವಾಂತನ್)** ನೆಮ್ಮದಿಯ ಮನಸ್ಸುಳ್ಳವನಾಗಿಯೂ, **(ಅಪಗತ ರಾಜ್ಯ ಚಿಂತನ್)** ರಾಜ್ಯಾಡಳಿತದ ಚಿಂತೆಯಿಲ್ಲದವನಾಗಿ, **(ಅಮರ ಸೌಂದರೀ ವಿಳಾಸ)** ದೇವಲೋಕದ ಸುಂದರಿಯರ ಬೆಡಗನ್ನೂ **(ಉಪಹಾಸಿ)** ಹಾಸ್ಯಮಾಡುವಂತಿರುವ **(ಗಗನಚರ ಸೌಂದರೀ)** ಖೇಚರ ಸುಂದರಿಯರ **(ಮನೋನಯನ ಸೌಂದರನಾಗಿ)** ಕಣ್ಮನಗಳಿಗೆ ಸೊಗಸುಗಾರನಾಗಿ [ಚೆಲುವನಾಗಿಯೂ], **(ವಿದ್ಯಾಧರ ಶ್ರೀಯನ್)** ವಿದ್ಯಾಧರ ಸಂಪತ್ತಿನ [ಸುಖವನ್ನು] **(ಅನುಭವಿಸಿ)** ಅನುಭವಿಸುತ್ತಿದ್ದನು. ೧–೮೧ (ವ)

ಭಾವಾರ್ಥ: ನಂತರ ಇತ್ತ ಅಳಕಾಪುರದಲ್ಲಿ, ಖೇಚರರಾಜನಾದ ಮಹಾಬಳನೂ ತನ್ನ ತಂದೆಯಿಂದ ಬಂದ ಖೇಚರ ರಾಜ್ಯಭಾರವನ್ನು,

೧. ಬಾಲ್ಯಸ್ನೇಹಿತರೂ, ಸಹಪಾಠಿಗಳೂ, ದೊಡ್ಡವರಾದ ಮೇಲೂ ಅತಿಶಯವಾದ ಸ್ನೇಹವುಳ್ಳವರೂ;
೨. ಅನೇಕಾರ್ಥ ಶಾಸ್ತ್ರಗಳ ತಾತ್ತ್ವಿಕ ವಿಷಯಗಳನ್ನು ಕಾರ್ಯತಃ ಮಾಡಿ ತೋರಿಸುವುದರಲ್ಲಿ ನಿಪುಣರೂ;
೩. ಸಮಸ್ತ ಕಲೆಗಳ ಆಳವಾದ ಮತ್ತು ಸಮಗ್ರವಾದ ಜ್ಞಾನವುಳ್ಳವರೂ;
೪. ನಾಲ್ಕೂ ಉಪಧೆಗಳಲ್ಲಿ, ಎಂದರೆ, ರಾಜಭಕ್ತಿ, ಸ್ವಾರ್ಥರಾಹಿತ್ಯ, ಇಂದ್ರಿಯಜಯ, ಧೈರ್ಯ ಎಂಬ ಗುಣ ಪರೀಕ್ಷೆಯಲ್ಲಿ ಶುದ್ಧರೆಂದು ನಿರ್ಣಯಿಸಲ್ಪಟ್ಟವರೂ ಆಗಿರುವ;
೫. ಕಾರ್ಯಸಾಧನೆಯ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳಂತೆ ಇದ್ದ;

ಲೋಕಪ್ರಖ್ಯಾತರೂ ಆದ ಸ್ವಯಂಬುದ್ಧ, ಮಹಾಮತಿ, ಸಂಭಿನ್ನಮತಿ ಮತ್ತು ಶತಮತಿಗಳೆಂಬ ನಾಲ್ಕು ಮಂದಿ ಮಂತ್ರಿಗಳ ಮೈಮೇಲೆಹಾಕಿ [ಹೆಗಲಮೇಲೆ ಹೊರಿಸಿ], ನೆಮ್ಮದಿಯ ಮನಸ್ಸುಳ್ಳವನಾಗಿಯೂ, ರಾಜ್ಯಾಡಳಿತದ ಚಿಂತೆಯಿಲ್ಲದವನಾಗಿ, ದೇವಲೋಕದ ಸುಂದರಿಯರ ಬೆಡಗನ್ನೂ ಹಾಸ್ಯಮಾಡುವಂತಿರುವ ಖೇಚರ ಸುಂದರಿಯರ ಕಣ್ಮನಗಳಿಗೆ ಸೊಗಸುಗಾರ ನಾಗಿ, ವಿದ್ಯಾಧರ ಸಂಪತ್ತಿನ ಸುಖವನ್ನು ಅನುಭವಿಸುತ್ತಿದ್ದನು. ೧–೮೧ (ವ)

ವಿಶೇಷ ವಿವರಣೆ: ಆಶೈಶವ ಪ್ರಭೃತಿ ಪ್ರರೂಢ . . . . . ನಾಲ್ಕು ಉಪಧೆಗಳೊಳಂ ಶುದ್ಧರಾಗಿ (೧–೮೧ (ವ)): ನಾಲ್ಕೂ ಜನ ಅಮಾತ್ಯರು ಮಹಾಬಳನಿಗೆ ಬಾಲ್ಯದಿಂದಲೂ ಸಹಪಾಠಿಗಳಾಗಿದ್ದವರು. ಆದರೂ ಈ ನಾಲ್ವರೂ ನಾಲ್ಕು ಉಪಧೆಗಳಿಂದ ಶೌಚಾಶೌಚ ಪರೀಕ್ಷೆಯಲ್ಲಿ **ಶುದ್ಧ**ರೆನಿಸಿಕೊಂಡವರು. ಆದರೆ **ಪೂರ್ವಪುರಾಣ**ದಲ್ಲಿ ಈ ಅಮಾತ್ಯರ ಬಾಲ್ಯ ಮತ್ತು ಉಪಧೆಗಳ ಬಗ್ಗೆ ಉಲ್ಲೇಖವಿರುವುದಿಲ್ಲ ಅಲ್ಲದೆ ಅವರ ಅರ್ಹತೆ/ಸಾಮರ್ಥ್ಯಗಳ ಬಗ್ಗೆ, ಪಂಪನು ವರ್ಣಿಸಿರುವಂತೆ, ವಿಶೇಷವಾದ ವಿವರಣೆಗಳಿರುವುದಿಲ್ಲ. **ಪೂರ್ವಪುರಾಣ**ದಲ್ಲಿ ಇದಕ್ಕೆ ಸಂವಾದಿಯಾದ ಸರಳವಾದ ಎರಡು ಶ್ಲೋಕಗಳು ಹೀಗಿವೆ:

ತಸ್ಯಾಭೂವನ್ಮಹಾಪ್ರಜ್ಞಾಶ್ಚತ್ವಾರೋ ಮಂತ್ರಿಪುಂಗವಾಃ ।
ಬಹಿಶ್ಚರಾ ಇವ ಪ್ರಾಣಾಃ ಸುಸ್ನಿಗ್ಧಾ ದೀರ್ಘದರ್ಶಿನಃ ॥ಪೂ.ಪು., ೪-೧೯೦॥

ಅರ್ಥ: ಆ ಮಹಾಬಲನಿಗೆ ಹೊರಗಿನ ಪ್ರಾಣಗಳಂತಿರುವವರೂ ಬಹಳ ಬುದ್ಧಿಶಾಲಿಗಳೂ ಪ್ರೀತಿಪಾತ್ರರೂ ವಿದ್ವಾಂಸರೂ ಆದ ನಾಲ್ಕು ಜನ ಮಂತ್ರಿಶ್ರೇಷ್ಠರಿದ್ದರು.

ಮಹಾಮತಿ ಸಂಭಿನ್ನಮತಿಃ ಶತಮತಿಸ್ತಥಾ ।
ಸ್ವಯಂಬುದ್ಧಶ್ಚ ರಾಜ್ಯಸ್ಯ ಮೂಲಸ್ತಂಭಾ ಇವ ಸ್ಥಿರಾಃ ॥ಪೂ.ಪು., ೪-೧೯೧॥

ಅರ್ಥ: ಮಹಾಮತಿ, ಸಂಭಿನ್ನಮತಿ, ಶತಮತಿ, ಸ್ವಯಂಬುದ್ಧ ಈ ನಾಲ್ಕುಜನ ಮಂತ್ರಿಗಳು ರಾಜ್ಯಕ್ಕೆ ಮೂಲಸ್ತಂಭಗಳಂತೆ, ದೃಢರಾಗಿದ್ದರು.

ಆದರೆ ಪಂಪನು ಅಮಾತ್ಯರ ಬಾಲ್ಯದ ಬಗ್ಗೆಯೂ, ಉಪಧೆಗಳ ಬಗ್ಗೆಯೂ ಹೇಳುತ್ತಾನೆ. ಕವಿಯು ಏಕೆ ಈ ಎರಡು ವಿಷಯಗಳನ್ನು ಕಾವ್ಯದಲ್ಲಿ ಉಲ್ಲೇಖಿಸಿದ? ಈ ಬಗೆಗಿನ ವಿವರಗಳಿಗೆ ಆಶ್ವಾಸದ ಅಂತ್ಯದಲ್ಲಿ ನೀಡಿರುವ **ಇತರೆ ಕಾವ್ಯ/ಶಾಸ್ತ್ರಗ್ರಂಥ/ಶಾಸನಗಳ ಉಲ್ಲೇಖಗಳು** ಈ ವಿಭಾಗದಲ್ಲಿ ನೋಡಿರಿ.

ನಾಲ್ಕೂ ಮಂದಿ ಅಮಾತ್ಯರೂ ಅನ್ವರ್ಥನಾಮವುಳ್ಳವರು. **ಸ್ವಯಂಬುದ್ಧ** (ತಾನಾಗಿಯೇ ತಿಳಿದವನು, ಸ್ವತಃ ಜ್ಞಾನಿಯಾದವನು), **ಮಹಾಮತಿ** (ಶ್ರೇಷ್ಠಜ್ಞಾನವುಳ್ಳವನು), **ಸಂಭಿನ್ನಮತಿ** (ಸಂಪೂರ್ಣವಾಗಿ ವಿಕಸನಗೊಂಡ ಜ್ಞಾನವುಳ್ಳವನು, ಸಂಭಿನ್ನ ವಿದ್ಯೆಯನ್ನು ಕೈವಶಮಾಡಿಕೊಂಡವನು) ಮತ್ತು **ಶತಮತಿ** (ಅತ್ಯಂತ ಜ್ಞಾನಿಯಾದವನು).

ಪಂಪನು ಈ ವಚನದಲ್ಲಿ ಮತ್ತು ಮುಂದಿನ ಮೂರು ಪದ್ಯಗಳಲ್ಲಿ, ಮಹಾಬಳನು ತನ್ನ ಮಂತ್ರಿಗಳಲ್ಲಿ ರಾಜ್ಯಭಾರವನ್ನಿರಿಸಿ, ವಿದ್ಯಾಧರರಿಗೆ ಯೋಗ್ಯವಾದ ಭೋಗೋಪಭೋಗಗಳನ್ನು ಸ್ತ್ರೀಯರೊಂದಿಗೆ ಅನುಭವಿಸಿಕೊಂಡಿರುವವನಂತೆ ಹೇಳಿದ್ದಾನೆ. ಆದರೆ ಮಹಾಬಳನ ಆಡಳಿತ ವೈಖರಿಯ ಬಗ್ಗೆ ಏನನ್ನೂ ಹೇಳಿರುವುದಿಲ್ಲ. ಶ್ರೀ ಜಿನಸೇನಾಚಾರ್ಯರು **ಪೂರ್ವಪುರಾಣ**ದಲ್ಲಿ ೪-೧೯೦ ರಿಂದ ೧೯೬ ರವರೆಗಿನ ಏಳು ಪದ್ಯಗಳಲ್ಲಿ ಅವನ ರಾಜ್ಯಭಾರ ಕ್ರಮವನ್ನು ವರ್ಣಿಸಿರುವರು. ಅವುಗಳಲ್ಲಿ ೧೯೨ ರಿಂದ ೧೯೬ ರ ವರೆಗಿನ ಐದು ಶ್ಲೋಕಗಳನ್ನು ಇಲ್ಲಿ ನೀಡಲಾಗಿದೆ:

ಸ್ವಯಂಬುದ್ಧೋಽಭವತ್ತೇಷು ಸಮ್ಯಗ್ದರ್ಶನಶುದ್ಧಧೀಃ ।
ಶೇಷಾ ಮಿಥ್ಯಾದೃಶಸ್ತೇಮೀ ಸರ್ವೇ ಸ್ವಾಮಿಹಿತೋದ್ಯತಾಃ ॥ಪೂ.ಪು., ೪-೧೯೨॥

ಅರ್ಥ: ಆ ನಾಲ್ಕುಜನ ಮಂತ್ರಿಗಳಲ್ಲಿ ಸ್ವಯಂಬುದ್ಧನು ಸಮ್ಯಗ್ದರ್ಶನದಿಂದ ಶುದ್ಧವಾದ ಬುದ್ಧಿಯುಳ್ಳವನಾಗಿದ್ದನು. ಮಿಕ್ಕ ಮೂರು ಮಂದಿಗಳು ಮಿಥ್ಯಾದೃಷ್ಟಿಗಳಾಗಿದ್ದರು. ಅವರೆಲ್ಲರು ರಾಜನಿಗೆ ಹಿತವನ್ನು ಮಾಡುವುದರಲ್ಲಿ ಪ್ರಯತ್ನಶೀಲರಾಗಿದ್ದರು.

ಚತುರ್ಭಿಃ ಸ್ವೈರಮಾತ್ಯೈಸ್ತೈಃ ಪಾದೈರಿವ ಸುಯೋಜಿತೈಃ ।
ಮಹಾಬಲಸ್ಯ ತದ್ರಾಜ್ಯಂ ಪಪ್ರಥೇ ಸಮವೃತ್ತವತ್ ॥ಪೂ.ಪು., ೪-೧೯೩॥

ಅರ್ಥ: ಮಹಾಬಲನ ರಾಜ್ಯವು, ಸರಿಯಾಗಿ ಸೇರಿದ ನಾಲ್ಕು ಪಾದಗಳಿಂದ ಸಮಾನವಾದ ವೃತ್ತವುಳ್ಳ ಶ್ಲೋಕವು ಪ್ರಸಿದ್ಧವಾಗಿರುವಂತೆ ಸರಿಯಾಗಿ ಸೇರಿದ ನಾಲ್ಕು ಕಾಲುಗಳಂತಿರುವ ಆ ನಾಲ್ಕು ಜನ ಮಂತ್ರಿಗಳಿಂದ ಪ್ರಸಿದ್ಧವಾಗಿದ್ದಿತು.

ಸ ಮಂತ್ರಿಭಿಶ್ಚತುರ್ಭಿಸ್ತೈಃ ಕದಾಚಿಚ್ಚ ಸಮಂ ತ್ರಿಭಿಃ ।
ದ್ವಾಭ್ಯಾಮೇಕೇನ ವಾ ಮಂತ್ರಮವಿಸಂವಾದಿನಾಽಭಜತ್ ॥ಪೂ.ಪು., ೪-೧೯೪॥

ಅರ್ಥ: ಆ ಮಹಾಬಲನು ಕೆಲವು ವೇಳೆಯಲ್ಲಿ ನಾಲ್ಕುಜನ ಮಂತ್ರಿಗಳೊಡನೆಯೂ, ಕೆಲವು ವೇಳೆಯಲ್ಲಿ ಮೂರು ಜನರೊಡನೆಯೂ, ಕೆಲವು ವೇಳೆಯಲ್ಲಿ ಇಬ್ಬರೊಡನೆಯೂ ಕೆಲವು ವೇಳೆಯಲ್ಲಿ ಯಥಾರ್ಥವನ್ನು ಹೇಳುವ ಒಬ್ಬನೊಡನೆಯೂ ರಾಜ್ಯಕಾರ್ಯವನ್ನು ಆಲೋಚಿಸುತ್ತಿದ್ದನು.

ಸ್ವಯಂ ನಿಶ್ಚಿತಕಾರ್ಯಸ್ಯ ಮಂತ್ರಿಣೋಽಸ್ಯಾನುಶಾಸನಮ್ ।
ಚಕ್ರುಃ ಸ್ವಯಂ ಪ್ರಬುದ್ಧಸ್ಯ ಜಿನಸ್ಯೇವಾ ಮರೋತ್ತಮಾಃ ॥ಪೂ.ಪು., ೪-೧೯೫॥

ಅರ್ಥ: ತಾನಾಗಿಯೇ ವೈರಾಗ್ಯವನ್ನು ಹೊಂದಿದ ಜಿನೇಶ್ವರನಿಗೆ ಅನಂತರ ಲೌಕಾಂತಿಕ ದೇವತೆಗಳು ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸುವಂತೆ, ತಾನಾಗಿಯೇ ಮಹಾಬಲನು ರಾಜ್ಯಕಾರ್ಯವನ್ನು ನಿಶ್ಚಯಿಸಿದ ಮೇಲೆ ಮಂತ್ರಿಗಳು ಅದಕ್ಕನುಸಾರವಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸುತ್ತಿದ್ದರು. ಮಹಾಬಲನು ದೃಢವಾದ ಉತ್ತಮ ವಿಚಾರವುಳ್ಳವನಾಗಿದ್ದನೆಂದು ಭಾವವು.

ನ್ಯಸ್ತರಾಜ್ಯಭರಸ್ತೇಷು ಸಃ ಸ್ತ್ರೀಭಿಃ ಖಚರೋಚಿತಾನ್ ।
ಬುಭುಜೇ ಸುಚಿರಂ ಭೋಗಾನ್ನಭೋಗಾನಾಮಧೀಶಿತಾ ॥ಪೂ.ಪು., ೪–೧೯೬॥

ಅರ್ಥ: ಆ ವಿದ್ಯಾಧರಾಧಿಪತಿಯಾದ ಮಹಾಬಲನು ಮಂತ್ರಿಗಳಲ್ಲಿ ರಾಜ್ಯಭಾರವನ್ನಿರಿಸಿ ವಿದ್ಯಾಧರರಿಗೆ ಯೋಗ್ಯವಾದ ಭೋಗಗಳನ್ನು ಸ್ತ್ರೀಯರೊಡನೆ ಬಹುಕಾಲದವರೆಗೆ ಅನುಭವಿಸಿದನು.

ಮಹಾ ಸ್ರಗ್ಧರೆ **ಪೊಸತಂ ಸ್ತ್ರೀರಾಜ್ಯಮಂ ಮೇಣ್ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ**
ಪೊಸತೀಗಳ್ಬಂದು ಬೆಳ್ಳಂಗೆಡೆದುದೊ ಗಣಿಕಾಸೃಷ್ಟಿಯಂ ಪುಷ್ಪಚಾಪಂ
ಪೊಸತಂ ಮಾಡಿಟ್ಟನೋ ನಿಪ್ಪೊಸತು ದಲಿದಱೊಂದಂದಮೆಂಬಂತದೇಂ ರಂ
ಜಿಸಿತೋ ವಿದ್ಯಾಧರಾಧೀಶ್ವರನ ಕೆಲದ ವಿದ್ಯಾಧರಸ್ತ್ರೀಸಮೂಹಂ ॥ ೧–೮೨

ಪದ ವಿಭಾಗ: ಪೊಸತಂ, ಸ್ತ್ರೀರಾಜ್ಯಮಂ, ಮೇಣ್, ಪಡೆದನೊ, ಬಿದಿ; ಲಾವಣ್ಯ–ಸಿಂಧು–ಪ್ರವಾಹಂ,
ಪೊಸತು, ಈಗಳ್, ಬಂದು, ಬೆಳ್ಳಂಗೆಡೆದುದೊ; ಗಣಿಕಾ, ಸೃಷ್ಟಿಯಂ, ಪುಷ್ಪಚಾಪಂ,
ಪೊಸತಂ, ಮಾಡಿಟ್ಟನೋ; ನಿಪ್ಪೊಸತು, ದಲ್, ಇದಱ, ಒಂದು, ಅಂದಂ, ಎಂಬಂತೆ, ಅದೇಂ,
ರಂಜಿಸಿತೋ, ವಿದ್ಯಾಧರಾಧೀಶ್ವರನ, ಕೆಲದ, ವಿದ್ಯಾಧರಸ್ತ್ರೀ, ಸಮೂಹಂ ॥ ೧–೮೨

ಅನ್ವಯಾರ್ಥ: **(ಪೊಸತಂ)** ಹೊಸತೊಂದು **(ಸ್ತ್ರೀರಾಜ್ಯಮಂ)** ಸ್ತ್ರೀರಾಜ್ಯವನ್ನೇ **(ಮೇಣ್ಪಡೆದನೊ=ಮೇಣ್+ಪಡೆದನೊ)** ನಿಶ್ಚಯವಾಗಿಯೂ ರಚಿಸಿದನೋ **(ಬಿದಿ)** [ಆ] ಬ್ರಹ್ಮ !! [ಅಥವಾ] **(ಲಾವಣ್ಯ ಸಿಂಧು ಪ್ರವಾಹಂ)** ಚೆಲುವೆಂಬ ನದಿಯ ಹೊನಲು **(ಪೊಸತೀಗಳ್ಬಂದು=ಪೊಸತು+ಈಗಳ್+ಬಂದು)** ಹೊಸತಾಗಿ ಈಗತಾನೆ ಬಂದು **(ಬೆಳ್ಳಂಗೆಡೆದುದೊ)** ಬಿಳಿಯ ಜಲಪಾತದಂತೆ ಧುಮ್ಮಿಕ್ಕತೊಡಗಿತೋ !! [ಅಥವಾ] **(ಗಣಿಕಾ ಸೃಷ್ಟಿಯಂ)** ಗಣಿಕೆಯರ ಸೃಷ್ಟಿಯನ್ನೇ **(ಪುಷ್ಪಚಾಪಂ)** ಮನ್ಮಥನು **(ಪೊಸತಂ)** ಹೊಸದಾಗಿ **(ಮಾಡಿಟ್ಟನೋ)** ಮಾಡಿ ಇರಿಸಿದನೋ !! **(ನಿಪ್ಪೊಸತು ದಲ್[=ಅಲ್ಲವೇ])** ಹೊಚ್ಚಹೊಸತಲ್ಲವೇ **(ಇದಱೊಂದಂದಮೆಂಬಂತೆ=ಇದಱ+ಒಂದು+ಅಂದಂ+ಎಂಬಂತೆ)** ಇವುಗಳ ಒಂದೊಂದು ಬಗೆಯೂ ಎನ್ನುವಂತೆ, **(ವಿದ್ಯಾಧರಾಧೀಶ್ವರನ)** ವಿದ್ಯಾಧರ ಚಕ್ರವರ್ತಿಯಾದ [ಮಹಾಬಳನ] **(ಕೆಲದ)** ಪಕ್ಕದಲ್ಲಿರುವ **(ವಿದ್ಯಾಧರಸ್ತ್ರೀ ಸಮೂಹಂ)** ವಿದ್ಯಾಧರ ಸ್ತ್ರೀ ಸಮೂಹವು **(ಅದೇಂ=ಅದು+ಏಂ)** ಅದೇನು **(ರಂಜಿಸಿತೋ)** ಶೋಭಿಸಿತೋ!! ॥೧–೮೨

ಈ ವೃತ್ತಪದ್ಯದಲ್ಲಿ ಕವಿಯು ಮಹಾಬಳನನ್ನು ಸುತ್ತುವರಿದಿರುತ್ತಿದ್ದ ವಿದ್ಯಾಧರ ಸ್ತ್ರೀಯರ ಸೌಂದರ್ಯವನ್ನು ವರ್ಣಿಸಿರುವನು.

ಭಾವಾರ್ಥ: ಆ ವಿದ್ಯಾಧರ ಸ್ತ್ರೀಯರ ಸಮೂಹವು:

(೧) ಹೊಸತಾದ ಇನ್ನೊಂದು ಸ್ತ್ರೀರಾಜ್ಯವನ್ನೇ ಆ ಬ್ರಹ್ಮನು ರಚಿಸಿದನೋ !! [ಅಥವಾ]
(೨) ಚೆಲುವೆಂಬ ನದಿಯ ಜಲಧಾರೆಯು ಹೊಸತಾಗಿ ಈಗತಾನೆ ಬಂದು ಬಿಳಿಯ ಜಲಪಾತದಂತೆ ಧುಮ್ಮಿಕ್ಕತೊಡಗಿತೋ !! [ಅಥವಾ]
(೩) ಮನ್ಮಥನು ಹೊಸದಾಗಿ ಗಣಿಕೆಯರ ಸೃಷ್ಟಿಯನ್ನು ಮಾಡಿ ಇರಿಸಿದನೋ !! [ಎನ್ನುವಂತೆ ತೋರುತ್ತಿದೆ]

ಹೊಚ್ಚಹೊಸತಲ್ಲವೇ ಇವುಗಳ ಒಂದೊಂದು ಬಗೆಯೂ ಎನ್ನುವಂತೆ, ವಿದ್ಯಾಧರ ಚಕ್ರವರ್ತಿಯಾದ ಮಹಾಬಳನ ಪಕ್ಕದಲ್ಲಿರುವ ವಿದ್ಯಾಧರ ಸ್ತ್ರೀಯರ ಸಮೂಹವು ಶೋಭಿಸುತ್ತಿದೆ !! ೧–೮೨

ಮಹಾ ಸ್ರಗ್ಧರೆ **ವನರಾಜಿಕ್ರೀಡೆಯಂ ಯೌವನವನದೊಳೆ ತೋಱಿಲ್ಜಲಕ್ರೀಡೆಯಂ ನೂ**
ತನಲಾವಣ್ಯಾಚ್ಛತೋಯಾಶಯದೊಳೆ ಮೆಱೆಯಲ್ ನರ್ತನಕ್ರೀಡೆಯಂ ನ
ಚ್ಚಿನ ನಾನಾಭಾವರತ್ಯುತ್ಸವದೊಳೆ ಪಡೆಯಲ್ ಬಲ್ಲ ವಿದ್ಯಾಧರಸ್ತ್ರೀ
ಜನದಿಂದಂ ಕಣ್ಗೆವಂದಂ ಸುಕವಿಜನಮನೋಮಾನಸೋತ್ತಂಸಹಂಸಂ ॥ ೧–೮೩

ಪದ ವಿಭಾಗ: ವನರಾಜಿಕ್ರೀಡೆಯಂ, ಯೌವನವನದೊಳೆ, ತೋಱಿಲ್; ಜಲಕ್ರೀಡೆಯಂ,
ನೂತನ, ಲಾವಣ್ಯ, ಅಚ್ಛತೋಯ, ಆಶಯದೊಳೆ, ಮೆಱೆಯಲ್; ನರ್ತನಕ್ರೀಡೆಯಂ–

ನಚ್ಚಿನ, ನಾನಾ, ಭಾವ, ರತ್ಯುತ್ಸವದೊಳೆ, ಪಡೆಯಲ್; ಬಲ್ಲ, ವಿದ್ಯಾಧರಸ್ತ್ರೀ,
ಜನದಿಂದಂ, ಕಣ್ಗೆವಂದಂ, ಸುಕವಿಜನ–ಮನೋ–ಮಾನಸೋತ್ತಂಸ–ಹಂಸಂ ॥ ೧–೮೩

ಅನ್ವಯಾರ್ಥ: (ವನರಾಜಿಕ್ರೀಡೆಯಂ ಯೌವನವನದೊಳೆ ತೋಱಲ್) ವನವಿಹಾರವನ್ನು [ಕಾಡಿನಲ್ಲಿ ವಿಹರಿಸುವಿಕೆಯ ಸುಖಾನುಭವವನ್ನು ತಮ್ಮ ತುಂಬು] ತಾರುಣ್ಯವೆಂಬ ವನದದಲ್ಲಿಯೇ ತೋರಿಸಲು; **(ಜಲಕ್ರೀಡೆಯಂ)** ಜಲಕ್ರೀಡೆಯನ್ನು **(ನೂತನ)** ಹೊಸದಾದ [ತಮ್ಮ ಯೌವನದ ದೆಸೆಯಿಂದ ಅರಳಿದ] **(ಲಾವಣ್ಯಾಚ್ಛತೋಯಾಶಯದೊಳೆ=ಲಾವಣ್ಯ+ಅಚ್ಛತೋಯ+ಆಶಯದೊಳೆ)** [ಸೊಗಸು, ಒನಪು, ಒಯ್ಯಾರ, ಲಜ್ಜೆಗಳಿಂದೊಡಗೂಡಿದ] ಲಾವಣ್ಯವೆಂಬ ನಿರ್ಮಲವಾದ ನೀರಿನ ಆಶ್ರಯದಲ್ಲಿ [ಸರೋವರದಲ್ಲಿ] **(ಮೆಱೆಯಲ್)** ಪ್ರದರ್ಶಿಸಲು; **(ನರ್ತನಕ್ರೀಡೆಯಂ)** ನರ್ತನಕ್ರೀಡೆಯನ್ನು [ನರ್ತನ ಕ್ರೀಡೆಯ ರಸಿಕತೆಯನ್ನು] **(ನಚ್ಚಿನ ನಾನಾ ಭಾವ)** ನಾಟ್ಯದ ವಿವಿಧ ಆಂಗಿಕ ಚಲನೆಗಳನ್ನು **(ರತ್ಯುತ್ಸವದೊಳೆ)** ರತಿಕ್ರೀಡೆಯ ಸಂಭ್ರಮದಲ್ಲಿ **(ಪಡೆಯಲ್)** ದೂರಕಿಸಿಕೊಡಲು **(ಬಲ್ಲ)** ತಿಳಿದ [ಚತುರೆಯರಾದ] **(ವಿದ್ಯಾಧರಸ್ತ್ರೀಜನದಿಂದಂ)** ವಿದ್ಯಾಧರ ಸ್ತ್ರೀಸಮೂಹದಿಂದ [ಪರಿವೃತನಾಗಿ] **(ಸುಕವಿ ಜನ)** ಒಳ್ಳೆಯ ಕವಿಗಳ **(ಮನೋಮಾನಸ)** ಮನಸ್ಸೆಂಬ ಮಾನಸ ಸರೋವರದಲ್ಲಿ [ಕ್ರೀಡಿಸುವ] **(ಉತ್ತಂಸ ಹಂಸಂ)** ಶ್ರೇಷ್ಠ ಹಂಸನಂತೆ **(ಕಣ್ಗೆವಂದಂ)** [ಮಹಾಬಳನು] ಕಂಗೊಳಿಸುತ್ತಿದ್ದನು ॥ ೧–೮೩

ಕವಿಯು ಈ ವೃತ್ತಪದ್ಯದಲ್ಲಿ ವಿದ್ಯಾಧರಸ್ತ್ರೀಯರ ಶೃಂಗಾರಕಲೆಯ ಚಾತುರ್ಯವನ್ನು ವರ್ಣಿಸಿರುವನು.

ಭಾವಾರ್ಥ: ವನವಿಹಾರದ ಸುಖಾನುಭವವನ್ನು ತಮ್ಮ ತುಂಬು ತಾರುಣ್ಯವೆಂಬ ವನದಲ್ಲಿಯೇ ತೋರಿಸಲು; ಜಲಕ್ರೀಡೆಯ ಆನಂದವನ್ನು ಹೊಸದಾದ [ತಮ್ಮ ಯೌವನದ ದೆಸೆಯಿಂದ ಅರಳಿದ] ಸೊಗಸು, ಒನಪು, ಒಯ್ಯಾರ, ಲಜ್ಜೆಗಳಿಂದೊಡಗೂಡಿದ ಲಾವಣ್ಯವೆಂಬ ನಿರ್ಮಲವಾದ ನೀರಿನ ಸರೋವರದಲ್ಲಿ ಪ್ರದರ್ಶಿಸಲು; ನರ್ತನ ಕ್ರೀಡೆಯ ರಸಿಕತೆಯನ್ನು ನಾಟ್ಯದ ವಿವಿಧ ಆಂಗಿಕ ಚಲನೆಗಳನ್ನುಳ್ಳ ರತಿಕ್ರೀಡೆಯ ಸಂಭ್ರಮದಲ್ಲಿ ದೂರಕಿಸಿಕೊಡಲು ತಿಳಿದ ಚತುರೆಯರಾದ ವಿದ್ಯಾಧರ ಸ್ತ್ರೀಸಮೂಹದಿಂದ ಪರಿವೃತನಾಗಿ, ಒಳ್ಳೆಯ ಕವಿಗಳ ಮನಸ್ಸೆಂಬ ಮಾನಸ ಸರೋವರದಲ್ಲಿ ಕ್ರೀಡಿಸುವ ಶ್ರೇಷ್ಠ ಹಂಸನಂತೆ ಮಹಾಬಳನು ಕಂಗೊಳಿಸುತ್ತಿದ್ದನು. ೧–೮೩

ವಿಶೇಷ ವಿವರಣೆ: ಕವಿಯು, ತಾನು ಹೊಂದಿದ್ದ **ಸುಕವಿಜನಮನೋಮಾನಸೋತ್ತಂಸಹಂಸಂ** ಎಂಬ ಬಿರುದನ್ನು ಈ ಪದ್ಯದಲ್ಲಿ, ಪ್ರಥಮಾಶ್ವಾಸದ ನಾಯಕನೆನಿಸುವ ಮಹಾಬಳನಿಗೆ ಅನ್ವಯಿಸಿದ್ದಾನೆ.

ಮತ್ತೇಭ ವಿಕ್ರೀಡಿತ

ಲಲಿತಾ[1]ಲಂಕರಣಪ್ರಸನ್ನರಸವದ್ಗೇಯಂಗಳೊಳ್ ಮೂಡುತುಂ
ಮುಳುಗುತ್ತುಂ ಖಚರೀಜನಾನನನವಾಂಭೋಜಂಗಳೊಳ್ ಕಂಪನೀ
ಟಿಸ್ಕೊಳುತುಂ ನಂದನರಾಜಿಯೊಳ್ನಲಿಯುತುಂ ತದ್ರಾಜಹಂಸಂ ನಿರಾ
ಕುಳಮೀಮಾಟ್ಕೆಗಳಿಂದೆ ಪೊೞ್ತುಗಳೆವಂ ಸಂಸಾರಸಾರೋದಯಂ ॥ ೧–೮೪

ಪದ ವಿಭಾಗ: ಲಲಿತಾಲಂಕರಣ–ಪ್ರಸನ್ನ–ರಸವದ್ಗೇಯಂಗಳೊಳ್, ಮೂಡುತುಂ–
ಮುಳುಗುತ್ತುಂ; ಖಚರೀಜನ, ಆನನ, ನವ, ಅಂಭೋಜಂಗಳೊಳ್, ಕಂಪನ್,
ಈಟಿಸ್ಕೊಳುತುಂ; ನಂದನ–ರಾಜಿಯೊಳ್, ನಲಿಯುತುಂ, ತದ್ರಾಜಹಂಸಂ,
ನಿರಾಕುಳಂ, ಈ, ಮಾಟ್ಕೆಗಳಿಂದೆ, ಪೊೞ್ತುಗಳೆವಂ, ಸಂಸಾರಸಾರೋದಯಂ ॥ ೧–೮೪

ಅನ್ವಯಾರ್ಥ: (ಲಲಿತಾಲಂಕರಣ=ಲಲಿತ+ಅಲಂಕರಣ) [ಮಹಾಬಳನು] ಸೊಗಸಾಗಿ ಸಿಂಗರಿಸಿಕೊಳ್ಳುದರಲ್ಲಿಯೂ, **(ಪ್ರಸನ್ನ ರಸವದ್ಗೇಯಂಗಳೊಳ್[=ರಸವತ್+ಗೇಯಂಗಳೊಳ್])** ತಿಳಿಯಾದ ರಸವತ್ತಾದ ಗಾಯನಗಳಲ್ಲಿಯೂ **(ಮೂಡುತುಂ ಮುಳುಗುತ್ತುಂ)** ಏಳುತ್ತಲೂ–ಮುಳುಗುತ್ತಲೂ [ತನ್ಮಯನಾಗಿರುತ್ತಲೂ]; **(ಖಚರೀಜನಾನನ ನವಾಂಭೋಜಂಗಳೊಳ್=ಖಚರೀಜನ+ಆನನ–ನವ+ಅಂಭೋಜಗಳೊಳ್)** ವಿದ್ಯಾಧರ ಸ್ತ್ರೀಯರ ಮುಖವೆಂಬ ನಳನಳಿಸುವ ಕಮಲಗಳಲ್ಲಿ

[1] ಮೂಲಪಾಠ–'ಲಳಿತಾಳಂಕರಣ', ಕೆಜಿ ಯವರ ಪಾಠ–'ಲಲಿತಾಲಂಕರಣ', ಇಲ್ಲಿ ಕೆಜಿ ಯವರ ಪಾಠವನ್ನು ಸ್ವೀಕರಿಸಿದೆ.

[ಹೊಸದಾಗಿ ಅರಳಿದ ಕಮಲಗಳಲ್ಲಿ] **(ಕಂಪನ್)** [ಸೌಂದರ್ಯವೆಂಬ] ಸುವಾಸನೆಯನ್ನು **(ಈಟಿಕ್ಕೊಳುತುಂ)** ಸೆಳೆದುಕೊಳ್ಳು ತ್ತಲೂ; **(ನಂದನ ರಾಜಿಯೊಳ್)** ವನಗಳ ಸಾಲುಗಳಲ್ಲಿ **(ನಲಿಯುತುಂ)** ಸಂತೋಷದಿಂದ ಸುಳಿದಾಡುತ್ತಲೂ; **(ತತ್)** ಆ **(ರಾಜಹಂಸಂ)** ನೃಪೋತ್ತಮನಾದ [ಮಹಾಬಳನು] **(ನಿರಾಕುಳಂ)** ವ್ಯಾಕುಲತೆ ಇಲ್ಲದವನಾಗಿದ್ದನು [ನೆಮ್ಮದಿಯಿಂದಿದ್ದನು]; **(ಈ ಮಾಟಿಕ್ಕೆಗಳಿಂದೆ)** ಈ ಪ್ರಕಾರದಿಂದ [ದಿನನಿತ್ಯವೂ ಈ ರೀತಿಯ ಆಚರಣೆಗಳಿಂದ] **(ಸಂಸಾರ)** ಸಾಂಸಾರಿಕ ಜೀವನದಲ್ಲಿ **(ಸಾರೋದಯಂ=ಸಾರ+ಉದಯಂ)** ಸಾರಸರ್ವಸ್ವವನ್ನು ಉಂಟುಮಾಡುವವನಂತೆ [ಮಹಾಬಳನು] **(ಪೊಟ್ತುಗಳೆವಂ)** ಹೊತ್ತು ಕಳೆಯುತ್ತಿದ್ದನು [ಕಾಲ ಕಳೆಯುತ್ತಿದ್ದನು] ॥ ೧-೮೪

ಭಾವಾರ್ಥ: ಮಹಾಬಳನು ಸೊಗಸಾಗಿ ಸಿಂಗರಿಸಿಕೊಳ್ಳುವುದರಲ್ಲಿಯೂ, ತಿಳಿಯಾದ ಹಾಗೂ ರಸವತ್ತಾದ ಗಾಯನಗಳ ಲ್ಲಿಯೂ ಏಳುತ್ತಲೂ-ಮುಳುಗುತ್ತಲೂ [ತನ್ಮಯನಾಗಿರುತ್ತಲೂ]; ವಿದ್ಯಾಧರ ಸ್ತ್ರೀಯರ ಮುಖವೆಂಬ ನಳನಳಿಸುವ ಕಮಲಗಳಲ್ಲಿ [ಹೊಸದಾಗಿ ಅರಳಿದ ಕಮಲಗಳಲ್ಲಿ] ಸೌಂದರ್ಯವೆಂಬ ಸುವಾಸನೆಯನ್ನು ಸೆಳೆದುಕೊಳ್ಳುತ್ತಲೂ; ವನಗಳ ಸಾಲುಗಳಲ್ಲಿ ಸಂತೋಷದಿಂದ ಸುಳಿದಾಡುತ್ತಲೂ; ಆ ನೃಪೋತ್ತಮನಾದ ಮಹಾಬಳನು ವ್ಯಾಕುಲತೆ ಇಲ್ಲದವನಾಗಿ ದ್ದನು [ನೆಮ್ಮದಿಯಿಂದಿದ್ದನು]; ಈ ಪ್ರಕಾರ ದಿನನಿತ್ಯದ ಆಚರಣೆಗಳಿಂದ ಸಾಂಸಾರಿಕ ಜೀವನದಲ್ಲಿ ಸಾರಸರ್ವಸ್ವವನ್ನು ಉಂಟುಮಾಡುವವನಂತೆ ಮಹಾಬಳನು ಹೊತ್ತುಗಳೆಯುತ್ತಿದ್ದನು [ಕಾಲ ಕಳೆಯುತ್ತಿದ್ದನು]. ೧-೮೪

ವಿಶೇಷ ವಿವರಣೆ: ಜೈನಧರ್ಮದ '**ಕರ್ಮಸಿದ್ಧಾಂತ**'ದಲ್ಲಿ ಪ್ರತಿಯೊಂದು ಕ್ರಿಯೆ ಹಾಗೂ ಪರಿಣಾಮಗಳಿಗೆ **ಕಾರ್ಯಕಾರಣ** ಸಂಬಂಧವಿರುತ್ತದೆ ಎಂದು ಹೇಳಲಾಗಿದೆ. ಹೇಗೆಂದರೆ, ಜೀವನು ತನ್ನ ಹಿಂದಿನ ಭವಗಳಲ್ಲಿ ಅರ್ಜಿಸಿದ (ಗಳಿಸಿದ) ಪುಣ್ಯದ ಉದಯದಿಂದ (ಪರಿಪಾಕದಿಂದ), ಆತನಿಗೆ ಐಹಿಕ ಭೋಗ-ಭಾಗ್ಯಗಳೂ, ದೇವಲೋಕದ ಸುಖ-ಸಂಪತ್ತುಗಳು ಪ್ರಾಪ್ತವಾಗುತ್ತ ವೆಂದೂ, ಪಾಪದ ಉದಯದಿಂದ ತಿರ್ಯಕ್, ನಾರಕ ಅಥವ ಮನುಷ್ಯ ಗತಿಯಲ್ಲಿ ಜನ್ಮತಳೆದು ಅನೇಕ ನೋವು ದುಃಖಗಳನ್ನು ಅನುಭವಿಸಬೇಕಾಗುವುದೆಂದೂ ಹೇಳುತ್ತದೆ. ಆದರೆ ಪಾಪ-ಪುಣ್ಯಗಳ ಉದಯದಿಂದ ಉಂಟಾಗುವ ಈ ಸುಖ-ದುಃಖಗಳು ಶಾಶ್ವತವಲ್ಲವೆಂಬುದು ಜೈನ ತತ್ತ್ವಗಳ ಉಪದೇಶ. ಈ ಎಲ್ಲಾ ಪಾಪ ಮತ್ತು ಪುಣ್ಯ ರೂಪಿ ಕರ್ಮಗಳನ್ನು ನಾಶಗೊಳಿಸಿ, ಶಾಶ್ವತ ಸುಖವನ್ನು ಹೊಂದುವುದು ಅಂದರೆ **ಸಿದ್ಧಪದವಿ**ಯನ್ನು ಪ್ರಾಪ್ತ ಮಾಡಿಕೊಳ್ಳುವುದು ಜೀವದ ಅಂತಿಮ ಗುರಿ. ವೃಷಭ ತೀರ್ಥಂಕರರಾಗುವ ಜೀವನು, ತಾನು ಅರ್ಜಿಸಿದ ಪುಣ್ಯೋದಯದಿಂದ ವಿದ್ಯಾಧರರ ನಾಡಾದ ಗಂಧಿಲ ದೇಶದಲ್ಲಿ ಮಹಾಬಳ ನೆಂಬ ಖೇಚರ ಚಕ್ರವರ್ತಿಯಾಗಿ ಜನ್ಮತಳೆದು, ಆ ಜೀವನು ಯಾವ ರೀತಿಯ ಭೋಗ-ಭಾಗ್ಯಗಳನ್ನು ಅನುಭವಿಸುತ್ತಿದ್ದಾನೆ ಎಂದು ದೃಷ್ಟಾಂತಗಳ ಮೂಲಕ ತಿಳಿಸುವುದು, ೧-೮೧ ನೆಯ ಪದ್ಯದ ನಂತರದ ವಚನದಲ್ಲಿ ಮತ್ತು ೧-೮೨, ೧-೮೩, ಮತ್ತು ೧-೮೪ ನೆಯ ಪದ್ಯಗಳಲ್ಲಿರುವ ಕಥಾನಕದ ಉದ್ದೇಶ. ಜೀವನ ಪುಣ್ಯದ ಅಂಶ ಇರುವವರೆಗೆ ಈ ಸುಖಗಳು ಉಪಲಬ್ಧವಿರುತ್ತವೆ. ಒಮ್ಮೆ ಈ ಪುಣ್ಯದ ಭಂಡಾರವು ಖಾಲಿಯಾದ ತಕ್ಷಣ ಈ ಎಲ್ಲಾ ಭೋಗಗಳಿಂದ ಜೀವನು ಚ್ಯುತನಾಗುತ್ತಾನೆ.

ಆದರೆ, ಮಹಾಬಳನು ರಾಜಪದವಿ ಪಡೆದ ನಂತರ ಇಂದ್ರಿಯ ಲಾಲಸೆಗೆ ಬಿದ್ದು, ಐಹಿಕ ಸುಖದ ಬೆನ್ನಟ್ಟಿ, ರಾಜ್ಯಭಾರದ ಜವಾಬ್ದಾರಿಯನ್ನು ಯಾರೋ ನಾಲ್ಕುಜನ ಮಂತ್ರಿಗಳ ಹೆಗಲಿಗೆ ಹೊರಿಸಿ, ರಾಜ್ಯಭಾರದ ಕರ್ತವ್ಯಗಳನ್ನು ಕಡೆಗಾಣಿಸಿ, ಕರ್ತವ್ಯಭ್ರಷ್ಟನಾಗಿ, ತನ್ನ ಸುಖಕ್ಕಾಗಿ ರಾಜಬೊಕ್ಕಸವನ್ನು ವ್ಯಯಮಾಡುತ್ತಾ, ತಾನು ಸ್ತ್ರೀಲೋಲುಪತೆಯಿಂದ ಯಾವಾಗಲೂ ರತಿಕ್ರೀಡೆಯಲ್ಲಿ ತೊಡಗಿಕೊಂಡಿರುವ ಲಂಪಟನಾಗಿ, ವ್ಯಸನಗಳಿಗೆ ದಾಸನಾಗಿ, ತನ್ನ ರಾಜಪರಿವಾರವನ್ನೂ, ಪ್ರಜೆಗಳನ್ನೂ ಹಾಗೂ ಇತರೆ ಜೀವಿಗಳನ್ನು ಹಿಂಸಿಸುತ್ತಾ, ಇಂದ್ರಿಯ ಸುಖಗಳನ್ನು ತಣಿಸುವುದರಲ್ಲಿ ಮುಳುಗಿಹೋಗಿದ್ದನು ಎನ್ನುವುದು ಈ ಪದ್ಯಗಳ ತಾತ್ಪರ್ಯ ಎಂದು ತಿಳಿಯತಕ್ಕದ್ದಲ್ಲ. ಒಂದು ವೇಳೆ ಜೀವನು ಈ ರೀತಿಯ ವರ್ತನೆಗಳಲ್ಲಿ ತೊಡಗಿರುವನೆಂದರೆ, ಆ ಜೀವನು ಧರ್ಮಮಾರ್ಗದಿಂದ ಚ್ಯುತನಾಗಿ, ಸಮ್ಯಕ್ತ್ವವನ್ನು ನಾಶಪಡಿಸಿಕೊಂಡು, ಮಿಥ್ಯಾದೃಷ್ಟಿಯಾಗಿ, ತೀವ್ರ ಕಷಾಯಗಳ ಪರಿಣಾಮ ದಿಂದ ಎಲ್ಲೆ ಮೀರಿದ ಪರಿಗ್ರಹಗಳಿಂದ ಪರಿವೃತನಾಗಿ, ಮನಃವಚನಕಾಯಪೂರ್ವಕ ಪಂಚಪಾಪಗಳಲ್ಲಿ ನಿರತನಾಗಿ, ಬಹ್ವಾರಂಭ, ಸಂರಂಭ ಆರ್ತ-ರೌದ್ರಧ್ಯಾನಗಳಿಂದ ತನ್ನ ಆತ್ಮನಿಗೆ ಘಾತ ಮಾಡಿಕೊಳ್ಳುತ್ತಿರುವುದಲ್ಲದೆ, ತನ್ನ ಪರಿಸರಕ್ಕೂ ಕೆಡಕನ್ನುಂಟುಮಾಡು ತ್ತಿರುತ್ತಾನೆಂದು ತಿಳಿಯಬೇಕಾಗುತ್ತದೆ. ಇಂತಹ ಪಾಪಜೀವಗಳಿಗೆ ದೃಷ್ಟಾಂತವಾಗಿ ಎರಡನೆಯ ಆಶ್ವಾಸದ, ಅರವಿಂದೋಪಾ ಖ್ಯಾನ ಮತ್ತು ದಂಡಕೋಪಾಖ್ಯಾನಗಳನ್ನು ಕವಿಯು ನೀಡಿರುವನು. [೨-೧೧ (ವ) ದಿಂದ ೨-೧೭ ನೆಯ ಪದ್ಯದರವರೆಗಿನ ಕಾವ್ಯಭಾಗವನ್ನು ನೋಡಿರಿ]. ಆದರೆ ಇಲ್ಲಿ **ಪುಣ್ಯಕರ್ಮ**ಗಳ ಉದಯದ ನಿಮಿತ್ತದಿಂದಾಗಿ [ಕಾರಣದಿಂದಾಗಿ] ಜೀವನು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಾನೆ, ಹಾಗೆಯೇ **ಪಾಪಕರ್ಮ**ಗಳನ್ನು ಯಾವ ಮಟ್ಟಿಗೆ ಸಂಚಯಿಸಿಕೊಳ್ಳುತ್ತಾನೆ ಎಂದು ತಿಳಿಸುವುದಷ್ಟೇ ಇದರ ಉದ್ದೇಶ. ಈ ಕಾವ್ಯದಲ್ಲಿ ಇನ್ನು ಮುಂದೆ ಬರಬಹುದಾದ ಈ ರೀತಿಯ ಭೋಗೋಪಭೋಗ ವರ್ಣನೆಗಳಿರುವೆಡೆಯಲ್ಲಿ ಪುಣ್ಯ-ಪಾಪಗಳ ವಿಚಾರಮಾಡಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಇಲ್ಲಿ ಮಹಾಬಳನು ಎಷ್ಟೇ

ಭೋಗೋಪಭೋಗ ವಿಷಯಗಳಲ್ಲಿ ಮುಳುಗಿದ್ದರೂ, ಅವನಲ್ಲಿ ಎಂದೂ **ಸಮ್ಯಕ್ತ್ವಗುಣದ ಅಭಾವ ಉಂಟಾಗಿರಲಿಲ್ಲ** ಎನ್ನುವ ಅಂಶವನ್ನು ಬಹಳವಾಗಿ ಗಮನಿಸಬೇಕು.

ಹಾಗಾದರೆ, ಮಹಾಬಳನಿಗೆ ಪ್ರಾಪ್ತವಾಗಿರುವ ಈ ವಿದ್ಯಾಧರ ಚಕ್ರವರ್ತಿಯ ಪದವಿ, ಸುಖಭೋಗಗಳ ಪ್ರಾಪ್ತಿಗೆ ಕಾರಣವೇನು? ಇದನ್ನೇ ಕವಿಯು, ಮಹಾಬಳನ ಹಿಂದಿನ ಭವವಾದ ಜಯವರ್ಮನ ವೃತ್ತಾಂತವನ್ನು ಹೇಳುವ, ಎರಡನೇ ಆಶ್ವಾಸದ ೩೫ ನೆಯ ಪದ್ಯದ ಅನಂತರದ ವಚನ ಭಾಗದಿಂದ ೪೨ ನೆಯ ಪದ್ಯದ ವರೆಗಿನ ಕಾವ್ಯಭಾಗದಲ್ಲಿ ವರ್ಣಿಸಿರುವನು. [೨-೩೫ (ವ) ದಿಂದ ೨-೪೨ ರ ಕಾವ್ಯಭಾಗವನ್ನು ನೋಡಿರಿ]

ಮೂಡುತುಂ ಮುಳುಗುತ್ತುಂ: ಮೂಡುತುಂ ಎಂದರೆ ಮೂಡುವುದು, ಹುಟ್ಟುವುದು ಅಥವಾ ಏಳುವುದು ಎಂದರ್ಥ. ಮುಳುಗುತುಂ-ಮುಳುಗಿರುವುದು. ಮುಳುಗೇಳುವುದು ಎಂದರೆ ಅಲಂಕಾರಿಕವಾಗಿ ತಲ್ಲೀನ, ತನ್ಮಯ ಅಥವ ಮಗ್ನವಾಗಿರುವುದು ಎಂದರ್ಥ. ಮುಂದೆ ೭ನೆಯ ಆಶ್ವಾಸದ ೧೧೫ನೆಯ ಕಂದಪದ್ಯದ ನಂತರದ ವಚನದಲ್ಲಿ [೭-೧೧೫ (ವ)], **ಮೂಡುತುಂ ಮುಳುಗುತ್ತುಂ** ಪದಕ್ಕೆ ಸಮಾನಾರ್ಥಕವಾದ **'ಮೂಡಿ ಮುೞ್ಕಾಡುವುದಂ'** ಎಂಬ ಪದಪ್ರಯೋಗವನ್ನು ಮಾಡಿದ್ದಾನೆ.

ಶ್ರೀಮದ್ಭಗವಜ್ಜಿನಸೇನಾಚಾರ್ಯರ **ಪೂರ್ವಪುರಾಣ**ದ ಮೊದಲ ನಾಲ್ಕು ಪರ್ವಗಳಲ್ಲಿನ ಕಥಾವಿಷಯಗಳನ್ನು ಪಂಪನು ತನ್ನ ಈ **ಆದಿಪುರಾಣ**ದ ಪ್ರಥಮಾಶ್ವಾಸದಲ್ಲಿ ಅಡಕಗೊಳಿಸಿದ್ದಾನೆ.

ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖ
ಚಂದ್ರವಾಕ್ಚಂದ್ರಿಕಾ ಪ್ರಸರಪ್ರಸಾದೋದೀರ್ಣಸೂಕ್ತಿ
ಕಲ್ಲೋಲಮಾಲಾಕೀರ್ಣ ಕವಿತಾಗುಣಾರ್ಣವ
ಪ್ರಣೀತಮಪ್ಪಾದಿಪುರಾಣದೊಳ್
ಮಹಾಬಳ ಕುಮಾರೋದಯ
ವರ್ಣನಂ ಪ್ರಥಮಾಶ್ವಾಸಂ.

ಇದು-ದೇವೇಂದ್ರ-ಮುನೀಂದ್ರ-ವಂದ್ಯ-ಪರಮಜಿನೇಂದ್ರ-ಮುಖ-
ಚಂದ್ರ-ವಾಕ್+ಚಂದ್ರಿಕಾ-ಪ್ರಸರ-ಪ್ರಸಾದ+ಉದೀರ್ಣ-ಸೂಕ್ತಿ-
ಕಲ್ಲೋಲ-ಮಾಲ+ಆಕೀರ್ಣ-ಕವಿತಾಗುಣ+ಅರ್ಣವ-
ಪ್ರಣೀತಂ+ಅಪ್ಪ-ಆದಿಪುರಾಣದೊಳ್-
ಮಹಾಬಳ ಕುಮಾರೋದಯ-
ವರ್ಣನಂ ಪ್ರಥಮ+ಆಶ್ವಾಸಂ.

(ಇದು) ಇದು **(ದೇವೇಂದ್ರ)** ದೇವೇಂದ್ರರಿಂದಲೂ
(ಮುನೀಂದ್ರ ವಂದ್ಯ) ಗಣಧರರಿಂದಲೂ ವಂದಿಸಲ್ಪಡುವ
(ಪರಮಜಿನೇಂದ್ರ) ತೀರ್ಥಂಕರರ **(ಮುಖ ಚಂದ್ರ)** ಮುಖಚಂದ್ರದಿಂದ [ಬಂದ]
(ವಾಕ್ ಚಂದ್ರಿಕಾ ಪ್ರಸರ) ಮಾತೆಂಬ ಬೆಳದಿಂಗಳ ಪ್ರವಾಹದಿಂದ **(ಪ್ರಸಾದ)** ಪಡೆದ
(ಉದೀರ್ಣ) ಉದಾತ್ತವಾದ **(ಸೂಕ್ತಿ ಕಲ್ಲೋಲಮಾಲ)** ಹಿತವಚನವೆಂಬ ಅಲೆಗಳ ಪಂಕ್ತಿಗಳಿಂದ
(ಆಕೀರ್ಣ) ತುಂಬಿದ **(ಕವಿತಾಗುಣಾರ್ಣವ)** ಕವಿತೆಯ ಗುಣಗಳ ಸಮುದ್ರದಂತಿರುವ [ಪಂಪನಿಂದ]
(ಪ್ರಣೀತಂಅಪ್ಪ) ರಚನೆಯಾಗುತ್ತಿರುವ **(ಆದಿಪುರಾಣದೊಳ್)** ಆದಿಪುರಾಣದಲ್ಲಿ
(ಮಹಾಬಳ ಕುಮಾರೋದಯ) ಮಹಾಬಳ ಕುಮಾರನ ಜನನ
(ವರ್ಣನಂ) ವರ್ಣನೆಯೆಂಬ **(ಪ್ರಥಮ)** ಮೊದಲನೆಯ
(ಆಶ್ವಾಸಂ) ಆಶ್ವಾಸ.

ವ್ಯಾಕರಣ ವಿಚಾರ:

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರಸಂಸಾರ ವಿ
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧–೧

ಅನುಸ್ವಾರ (ಂ) ವಿಚಾರ: ಈ ವೃತ್ತಪದ್ಯದಲ್ಲಿರುವ ಅನುಸ್ವಾರಯುಕ್ತ ಶಬ್ದಗಳು–'ಗುಣವ್ರಾತಂ, ನಿಳಯಂ, ಮಾರ್ಗಾ ಗ್ರೇಸರಂ, ಪಾದಾಬ್ಜಂ' (ಪದ್ಯ/ವಚನ ಸಂ. ೧–೧):

ಹವ್ಯಾಸಿ ಹಳಗನ್ನಡ ಕಾವ್ಯಗಳ ಓದುಗರಿಗೆ ಪದಾಂತ್ಯದಲ್ಲಿ ಬರುವ **ಅನುಸ್ವಾರವು (ಂ)** ಹೆಚ್ಚು ಭ್ರಮೆಯನ್ನುಂಟು ಮಾಡುತ್ತದೆ. ಆದುದರಿಂದ ಇದರ ಬಗ್ಗೆ ಸಂಕ್ಷಿಪ್ತವಾದ ಈ ಟಿಪ್ಪಣಿಯನ್ನು ನೀಡಲಾಗಿದೆ. ಹಳಗನ್ನಡದಲ್ಲಿ, ಪದಾಂತ್ಯದಲ್ಲಿ **ಅನುಸ್ವಾರಗಳುಳ್ಳ (ಂ)** ಪದಗಳು ಎರಡು ರೀತಿಯ ಉಚ್ಚಾರಗಳನ್ನು ಹೊಂದಿವೆ. ಎಂದರೆ, ಸಂದರ್ಭೋಚಿತವಾಗಿ ಅದು **'ಮ್'** ಮತ್ತು **'ನ್'** ಎಂಬುದಾಗಿರುತ್ತದೆ. ಹೇಗೆಂದರೆ, "ಅಕಾರಾಂತ ಶಬ್ದಗಳಿಗೆ **ಮ್, ನ್,** ಎಂಬ ಪ್ರತ್ಯಯಗಳು ಸೇರುತ್ತವೆ. ಅಷ್ಟೇ ಅಲ್ಲ, **ಮ್** ಎಂಬುದು ಎಲ್ಲ ಅಕಾರಾಂತ ಶಬ್ದಗಳಿಗೂ ಹತ್ತುವುದಿಲ್ಲ. ಸಂಸ್ಕೃತ ಅಕಾರಾಂತ ನಪುಂಸಕ ಶಬ್ದಗಳೆಲ್ಲಕ್ಕೂ ಹಾಗೂ ಕನ್ನಡದ ಅಕಾರಾಂತ ನಪುಂಸಕಶಬ್ದಗಳಲ್ಲಿ ಬಹುಭಾಗಕ್ಕೂ **ಮ್** ಪ್ರತ್ಯವು ಸೇರುವುದು ನಿಜ. ಆದರೆ **ಕೊಳ** ಮೊದಲಾದ ಕೆಲವು ಕನ್ನಡ ಅಕಾರಾಂತ ನಪುಂಸಕ ಶಬ್ದಗಳಿಗೂ, ಎಲ್ಲ ಪುಲ್ಲಿಂಗ ಅಕಾರಾಂತಗಳಿಗೂ, **ಅಕ್ಕ** ಮೊದಲಾದ ಸ್ತ್ರೀಲಿಂಗ ನಾಮವಾಚಕಗಳಿಗೂ ಸೇರುವ ಪ್ರತ್ಯಯವು **ಮ್** ಅಲ್ಲ, **ನ್** ಎಂಬುದು." (ಕನ್ನಡ ಕೈಪಿಡಿ, ಸಂಪುಟ–೧, ಮುದ್ರಣ ೧೯೩೬, ೪ ನೆಯ ಭಾಗ–ಕನ್ನಡ ಭಾಷೆಯ ಚರಿತ್ರೆ, VII. ನಾಮಪದಗಳು. ೨. ವಿಭಕ್ತಿ, (೨) ಪ್ರಥಮಾವಿಭಕ್ತಿಗೆ ಪ್ರತ್ಯೇಕವಾದ ವಿಭಕ್ತಿಪ್ರತ್ಯಯವಾವುದೂ ಇಲ್ಲ; ಪ್ರಕೃತಿಯೇ ಪ್ರಥಮಾವಿಭಕ್ತ್ಯರ್ಥದಲ್ಲಿ ಪ್ರಯೋಗವಾಗುತ್ತದೆ, ಪುಟ ೪೦೭). ಈ ವಿಚಾರದಲ್ಲಿ ವಿದ್ವಾಂಸರು, **'ಮೊದಲು ಅಕಾರಾಂತ ಪುಲ್ಲಿಂಗಗಳು ನಾಂತವಾಗಿದ್ದುವೆಂಬುದರಲ್ಲಿ ಯಾವ ಸಂದೇಹವೂ ಕಾಣುವುದಿಲ್ಲ. ಆದರೆ ಈ ಕಡೆಯ ನಕಾರವನ್ನು ಬಿಂದುವಾಗಿ ಬರೆಯುತ್ತ ಬಂದು, ನಕಾರೋಚ್ಚಾರಣೆ ನಿಂತುಹೋದಮೇಲೆ ಇದು ಮಕಾರವೆಂದು ಭ್ರಮಿಸಿರಬಹುದೇ, ಅಥವಾ ಹಳಗನ್ನಡದ ಕಾಲದಲ್ಲಿ ನಕಾರವು ಮಕಾರವಾಗಿ ಪರಿಣಾಮಹೊಂದಿತೇ ವಿಚಾರಮಾಡತಕ್ಕದ್ದಾಗಿದೆ. ಹೊಸಗನ್ನಡವನ್ನು ನೋಡಿದರೆ, ಮೊದಲ ಊಹೆಯೇ ಸರಿಯೆಂದು ತೋರುತ್ತದೆ'** (ಕನ್ನಡ ಕೈಪಿಡಿ, ಸಂಪುಟ–೧, ಮುದ್ರಣ ೧೯೩೬, ಅಡಿಟಪ್ಪಣಿ, ಪುಟ ೪೦೮) ಎಂದು ಅಭಿಪ್ರಾಯಪಡುತ್ತಾರೆ. ಅಷ್ಟೇ ಅಲ್ಲದೇ ವಿದ್ವಾಂಸರು, **ಮ್** ಮತ್ತು **ನ್** ಇವು ವಿಭಕ್ತಿಪ್ರತ್ಯಯಗಳಲ್ಲ ಎಂಬುದನ್ನು ವ್ಯಾಕರಣದ ವಿಭಕ್ತಿಪ್ರತ್ಯಯ ನಿಯಮಗಳ ಆಧಾರದಿಂದಲೇ ನಿರೂಪಿಸುತ್ತಾರೆ. ಹಾಗೆಯೇ, ಕನ್ನಡ ಕೈಪಿಡಿಯಲ್ಲಿ ಹೇಳಿರುವಂತೆ, ಪ್ರಥಮಾವಿಭಕ್ತಿಯ ಪ್ರತ್ಯಯವು ಕಾಲಕ್ರಮದಲ್ಲಿ ಹೇಗೆ ವ್ಯತ್ಯಾಸ ಹೊಂದಿದೆ ಎಂಬುದನ್ನು ತಿಳಿಯುವುದು ಇಲ್ಲಿ ಸೂಕ್ತವೆನಿಸುತ್ತದೆ:

–ಪ್ರಥಮಾವಿಭಕ್ತಿ–

ಪ್ರಕೃತಿ ಪ್ರಯೋಗ: ಕನ್ನಡದಲ್ಲಿ ಪ್ರಥಮಾ ವಿಭಕ್ತಿಗೆ ಪ್ರತ್ಯಯವಾವುದೂ ಇಲ್ಲ; ಏಕವಚನದಲ್ಲಿ ಪ್ರಕೃತಿಯೂ ಬಹುವಚನದಲ್ಲಿ ಬಹುವಚನಪ್ರತ್ಯಯದಿಂದ ಕೂಡಿದ ಪ್ರಕೃತಿಯೂ ಪ್ರಥಮಾ ವಿಭಕ್ತಿಯ ಅರ್ಥವನ್ನು ಸೂಚಿಸುತ್ತವೆ. ಏಕವಚನದಲ್ಲಿ ನ್, ಮ್, ಎಂಬಿವು ಕೆಲವು ಶಬ್ದಗಳ ಕೊನೆಯಲ್ಲಿರುತ್ತವೆ; (ಇದನ್ನು ಬಿಂದುವಾಗಿ (ಂ) ಬರೆಯುವುದು ಬರವಣಿಗೆಯ ವಿಷಯ) ಇವು ವಿಭಕ್ತಿಪ್ರತ್ಯಯಗಳಲ್ಲ ಎಂಬುದನ್ನು ಹಿಂದೆಯೇ ಸಕಾರಣವಾಗಿ ವಿವರಿಸಿದೆ.* ಈ ಬಗೆಯ ಶಬ್ದಗಳನ್ನು ಬಿಂದುವಿಲ್ಲದೆಯೇ ಪ್ರಯೋಗಿಸುವುದು ತಪ್ಪೆಂದು ಹಳಗನ್ನಡ ವ್ಯಾಕರಣಗಳಲ್ಲಿ ಹೇಳಿದೆ. ಆ ವಿಧವಾದ ಪ್ರಯೋಗವು ಹಳಗನ್ನಡ ಗ್ರಂಥಗಳಲ್ಲಿ ಕಂಡುಬರುವುದು ಅಪೂರ್ವ. ಆದರೆ ಆ ಕಾಲದಲ್ಲಿ ಅಂಥ ಪ್ರಯೋಗವು ಜನರಾಡುವ ಮಾತಿನಲ್ಲಿ ಬಳಕೆಗೆ ಬಂದಿತ್ತೆಂದು ತೋರುತ್ತದೆ. ಏಕೆಂದರೆ ಆ ಪ್ರಯೋಗವು ಹಳಗನ್ನಡ ಗ್ರಂಥಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ನಡುಗನ್ನಡದಲ್ಲಿ ಇನ್ನೂ ಹೆಚ್ಚಾಗಿ ಕಂಡುಬರುತ್ತದೆ; ಹೊಸಗನ್ನಡದ ಮಾತನಾಡುವ ಭಾಷೆಯಲ್ಲಿ ವಿಶೇಷವಾಗಿ ಬಳಕೆಯಲ್ಲಿದೆ. [*ಅಕ್ಕನ್, ಅಣ್ಣನ್, ನೆಲನ್, ನೆಲಮ್, ಆಟಮ್ ಮುಂತಾದ ಶಬ್ದಗಳಲ್ಲಿ ನ್, ಮ್ ಎಂಬಿವು ಪ್ರಕೃತಿಗೇ ಸೇರಿದುವೇ ಅಥವಾ ಅಕಾರಾಂತ ಪ್ರಕೃತಿಯ ಮೇಲೆ ಹತ್ತಿದ ವಿಭಕ್ತಿಪ್ರತ್ಯಯಗಳೇ ಎಂಬ ವಿಷಯವನ್ನು ವಿಚಾರಮಾಡಿ ವಾಚಕರು ನಿಶ್ಚಯಿಸಿಕೊಳ್ಳಬೇಕು.]

ನಡುಗನ್ನಡದಲ್ಲಿಯೂ ನ್, ಮ್ ಕೂಡಿದ ಪ್ರಕೃತಿಗಳುಂಟು. ಅಲ್ಲದೆ ಅವಕ್ಕೆ ಉಕಾರ ಸೇರಿ ನು ವು ಎಂಬ ರೂಪಗಳೂ ಬಳಕೆಗೆ ಬರುತ್ತವೆ. ಮ್ ಎಂಬುದಕ್ಕೆ ಉಕಾರವು ಸೇರುವಾಗ ಮಕಾರಕ್ಕೆ ವಕಾರಾದೇಶವೂ ಆಗುತ್ತದೆ. ವೃಕ್ಷಂ ಎಂಬ ಹಳಗನ್ನಡ ಪದವು ವೃಕ್ಷವು ಎಂದು ನಡುಗನ್ನಡದಲ್ಲಿ ಕಾಣುತ್ತದೆಯೇ ಹೊರತು ವೃಕ್ಷಮು ಎಂದು ಎಲ್ಲಿಯೂ ಕಂಡುಬರುವುದಿಲ್ಲ.

ನಡುಗನ್ನಡದ ಉಕಾರ ಸೇರಿದ ರೂಪಗಳಲ್ಲದೆ, ಹಳಗನ್ನಡದ ಅನುನಾಸಿಕ ವ್ಯಂಜನವು ಲೋಪವಾದ ರೂಪಗಳೂ ಹೊಸಗನ್ನಡದಲ್ಲಿ ರೂಢಿಯಾಗಿವೆ. ನೆಲನು ಮುಂತಾದ ವಿಕಲ್ಪ ರೂಪಗಳಿಲ್ಲ. ಹಳಗನ್ನಡ, ನಡುಗನ್ನಡಗಳಲ್ಲಿ ಇಲ್ಲದೆ ಇದ್ದ ಒಂದು ವಿಶೇಷ ಪ್ರಯೋಗವು–ಅಕಾರಾಂತಗಳಲ್ಲದ ಶಬ್ದಗಳಿಗೂ ಉ ಪ್ರತ್ಯಯವನ್ನು ಸೇರಿಸುವುದು–ಹೊಸಗನ್ನಡದಲ್ಲಿ ಗ್ರಾಂಥಿಕಭಾಷೆಯಲ್ಲಿ ಮಾತ್ರ ಕಂಡುಬರುತ್ತದೆ. ಇದಕ್ಕೆ ಉ ಎಂಬುದು ಪ್ರಥಮಾ ವಿಭಕ್ತಿ ಪ್ರತ್ಯಯವೆಂಬ ಭ್ರಮೆಯೇ ಕಾರಣ. ಹಳಗನ್ನಡದಲ್ಲಿನ ವ್ಯಂಜನಾಂತಗಳೆಲ್ಲವೂ ಸ್ವರಾಂತಗಳಾಗುವುದರಿಂದ, ಅದರಲ್ಲಿಯೂ ಮುಖ್ಯವಾಗಿ ಉಕಾರಾಂತಗಳಾಗುವುದರಿಂದ, ಉ ಎಂಬುದನ್ನು ಪ್ರಥಮಾ ವಿಭಕ್ತಿ ಪ್ರತ್ಯಯವೆಂದು ಭಾವಿಸುವುದು ತಪ್ಪು. (ಕನ್ನಡ ಕೈಪಿಡಿ, ಸಂಪುಟ–೧, ಮುದ್ರಣ ೧೯೩೬, ಪುಟ ೪೧೨, ೪೧೩)

ಈ ವೃತ್ತಪದ್ಯದಲ್ಲಿ ಅಂತ್ಯದಲ್ಲಿ ಅನುಸ್ವಾರಗಳನ್ನುಳ್ಳ ನಾಮಪದಗಳನ್ನು ಪರಿಶೀಲಿಸೋಣ. ಈ ಪದ್ಯದ ಮೊದಲನೆಯ ಪಾದದಲ್ಲಿರುವ '**ಗುಣವ್ರಾತಂ**' ಎಂಬುದನ್ನು '**ಗುಣವ್ರಾತಮ್**' ಎಂದು '**ಮ**'ಕಾರಾಂತವಾಗಿ ಉಚ್ಚರಿಸಿದರೆ ಅದು ನಪುಂಸಕಲಿಂಗ ಶಬ್ದದಂತೆ '**ಗುಣವ್ರಾತವು**' ಅಥವಾ '**ಗುಣಗಳ ರಾಶಿಯು**' ಎಂದಾಗುತ್ತದೆ. ಆದರೆ ಈ ವೃತ್ತಪದ್ಯದಲ್ಲಿ ಅದು **ಪುಲ್ಲಿಂಗವಾಚಕ (ವ್ಯಕ್ತಿವಾಚಕ)** ವಾಗಿದೆ. ಆದುದರಿಂದ ಅದನ್ನು '**ಗುಣವ್ರಾತನ್**' ಎಂದೇ ಉಚ್ಚರಿಸಬೇಕು. ಆಗ ಇದು '**ಗುಣಗಳ ರಾಶಿಯಾದವನೂ**' ಅಥವಾ '**ಗುಣಗಳ ರಾಶಿಯುಳ್ಳವನೂ**' ಎಂದಾಗುತ್ತದೆ. ಹಾಗೆಯೇ **ನಿಳಯಂ, ಮಾರ್ಗಾಗ್ರೇಸರಂ, ಪಾದಾಬ್ಜಂ** ಎಂಬಲ್ಲಿನ ಮೂರು ಅನುಸ್ವಾರಾಂತ ಪದಗಳೂ ಸಹ ನಾಂತವಾಗಿಯೇ (**ನ್**) ಉಚ್ಚರಿಸಲ್ಪಡಬೇಕು. ಆದ್ದರಿಂದ **ಪದವಿಭಾಗ** ಮತ್ತು **ಅರ್ಥವಿಭಾಗ**ಗಳಲ್ಲಿ ಅವುಗಳನ್ನು '>**ಗುಣವ್ರಾತನ್**', '>**ನಿಳಯನ್**', '>**ಮಾರ್ಗಾಗ್ರೇಸರನ್**', '>**ಪಾದಾಬ್ಜನ್**' ಎಂದು ಅವುಗಳ ನಕಾರಾಂತ ರೂಪಗಳನ್ನು ಸೂಚಿಸಿದೆ. ಇಡೀ ಕಾವ್ಯದಲ್ಲಿ ಈ ಬಗೆಯ ಪ್ರಯೋಗವಿರುವೆಡೆಗಳಲ್ಲಿ ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಸೂಕ್ತವಾಗಿ ಅರ್ಥೈಸಿಕೊಳ್ಳಬೇಕು. ತಾತ್ಪರ್ಯವೇನೆಂದರೆ, ಕನ್ನಡದಲ್ಲಿ ಪ್ರಥಮಾವಿಭಕ್ತಿಗೆ ಪ್ರತ್ಯಯವಾವುದೂ ಇಲ್ಲ; ಏಕವಚನದಲ್ಲಿ **ನ್, ಮ್,** ಎಂಬಿವು ಕೆಲವು ಶಬ್ದಗಳ ಕೊನೆಯಲ್ಲಿರುತ್ತವೆ; ಇವನ್ನು ಬರವಣಿಗೆಯಲ್ಲಿ ಬಿಂದು (ಅನುಸ್ವಾರ [ಂ]) ವಾಗಿ ಬರೆಯುತ್ತಾರೆ. (ಶಬ್ದಮಣಿದರ್ಪಣ, ೩. ನಾಮಪ್ರಕರಣ, ಸೂ. ೧೧೪, ೧೧೫, ೧೭೨)

ಈ ಸಂದರ್ಭದಲ್ಲಿಯೇ, ಅಂತ್ಯದಲ್ಲಿ ಬಿಂದುವನ್ನುಳ್ಳ ಇತರೆ ಶಬ್ದಗಳ ನಡುವೆ ಭ್ರಾಂತಿಯುಂಟಾಗದಿರಲು ಅಂತಹ ಮುಖ್ಯವಾದ ನಾಲ್ಕು ಶಬ್ದಗಳ ಬಗ್ಗೆ ತಿಳಿಯುವುದು ಅವಶ್ಯವಾಗಿದೆ.

ಪದ	ಪದದ ಅಂತ್ಯದಲ್ಲಿರುವ ಬಿಂದುವು ಪಡೆಯುವ ರೂಪ
೧. ಗುಣವ್ರಾತಂ [ಂ = **ನ್** ಅಥವಾ **ಮ್**]*	ಇದರಲ್ಲಿರುವ ಬಿಂದುವು **ನ್, ಮ್** ಗಳ ಬರಹರೂಪ. ಇವು ವಿಭಕ್ತಿ ಪ್ರತ್ಯಯಗಳಲ್ಲ. ಇದನ್ನು ಮೇಲೆ ವಿವರಿಸಿದೆ.

* ಅಕ್ಕನ್, ಅಣ್ಣನ್, ನೆಲನ್, ನೆಲಮ್, ಅಟಮ್ ಮುಂತಾದ ಶಬ್ದಗಳಲ್ಲಿ ನ್, ಮ್ ಎಂಬಿವು ಪ್ರಕೃತಿಗೇ ಸೇರಿದುವೇ ಅಥವಾ ಅಕಾರಾಂತ ಪ್ರಕೃತಿಯ ಮೇಲೆ ಹತ್ತಿದ ವಿಭಕ್ತಿಪ್ರತ್ಯಯಗಳೇ ಎಂಬ ವಿಷಯವನ್ನು ವಿಚಾರಮಾಡಿ ವಾಚಕರು ನಿಶ್ಚಯಿಸಿಕೊಳ್ಳಬೇಕು.

೨. ಸುಖಾವಾಪ್ತಿಯಂ (ಸುಖಾವಾಪ್ತಿ+ಯ+**ಅಂ**)	ಈ ಶಬ್ದದಲ್ಲಿರುವ ಬಿಂದುವು ದ್ವಿತೀಯಾ ವಿಭಕ್ತಿಪ್ರತ್ಯಯ **ಅಂ** ಎಂಬುದಕ್ಕೆ ಸೇರಿರುವುದು. ಇದರ ಹೊಸಗನ್ನಡ ವಿಭಕ್ತಿಪ್ರತ್ಯಯವು **ಅನ್ನು** ಎಂಬುದಾಗಿದೆ. (ಹೊಸಗನ್ನಡ: ಸುಖಾವಾಪ್ತಿಯನ್ನು=ಸುಖಪ್ರಾಪ್ತಿಯನ್ನು)
೩. ರಾಮನಿಂ (ರಾಮ+ನ+**ಇಂ**)	ಇದರಲ್ಲಿರುವ ಬಿಂದುವು ತೃತೀಯಾ ವಿಭಕ್ತಿಪ್ರತ್ಯಯ **ಇಂ** ಎಂಬುದಕ್ಕೆ ಸೇರಿರುವುದು. ಇದರ ಹೊಸಗನ್ನಡ ವಿಭಕ್ತಿಪ್ರತ್ಯಯವು **ಇಂದ**. (ಹೊಸಗನ್ನಡ: ರಾಮನಿಂದ)

(ಗಮನಿಸಬೇಕಾದ ಅಂಶ: ಹಳಗನ್ನಡದಲ್ಲಿ ದ್ವಿತೀಯಾ ಮತ್ತು ತೃತೀಯಾ ವಿಭಕ್ತಿ ಪ್ರತ್ಯಯಗಳಾದ ಅಂ ಮತ್ತು ಇಂ ಗಳು ಪ್ರಕೃತಿಗಳ ಮೇಲೆ ಸೇರುವಾಗ ಸಾಮಾನ್ಯವಾಗಿ ಪ್ರಕೃತಿ ಮತ್ತು ಪ್ರತ್ಯಯಗಳ ಮಧ್ಯದಲ್ಲಿ ಹೊಸದಾಗಿ ನ, ಮ, ಯ, ವ ಹೀಗೆ ವ್ಯಂಜನಗಳು ಆಗಮಾಕ್ಷರಗಳಾಗಿ ಬರುತ್ತವೆ. ಇದನ್ನು ಗಮನದಲ್ಲಿರಿಸಿಕೊಂಡರೆ, ಪ್ರಥಮಾ ವಿಭಕ್ತಿಯಲ್ಲಿ ಪ್ರಕೃತಿಗೆ ಸೇರುವ ಬಿಂದುವಿಗೂ (ಂ), ದ್ವಿತೀಯಾ ಮತ್ತು ತೃತೀಯಾ ವಿಭಕ್ತಿಗಳಲ್ಲಿ ಪ್ರಕೃತಿಗಳಿಗೆ ಸೇರುವ ಬಿಂದುಯುಕ್ತವಾದ ಪ್ರತ್ಯಯಗಳಿಗೂ ವ್ಯತ್ಯಾಸವನ್ನು ತಿಳಿಯಬಹುದು. ಉದಾ.: ದ್ವಿ.ವಿ.– ಸುಖಾವಾಪ್ತಿ+ಯ+ಅಂ=ಸುಖಾವಾಪ್ತಿಯಂ, ತೃ.ವಿ.–ರಾಮ+ನ+ಇಂ=ರಾಮನಿಂ)

೪. ಆವಂಗಂ (೧–೬೯) (ಆವಂಗೆ+**ಅಂ**)	ಇಲ್ಲಿರುವ ಬಿಂದುವು **ನ್, ಮ್** ಗಳ ಬಿಂದುರೂಪವಾಗಲೀ, ದ್ವಿತೀಯಪ್ರತ್ಯಯವಾದ **ಅಂ** ಆಗಲೀ ಆಗಿರುವುದಿಲ್ಲ. ಇಲ್ಲಿರುವ ಬಿಂದುವು ಹಳಗನ್ನಡದ ವಿಭಕ್ತಿಸಮುಚ್ಚಯವಾಚಕವಾದ **ಅಂ** ಎಂಬುದಕ್ಕೆ ಸೇರಿದುದಾಗಿದೆ. ಇಲ್ಲಿರುವ **ಅಂ** ಎಂಬುದು ದ್ವಿತೀಯಾ ವಿಭಕ್ತಿಯ ನಡುವೆ ಬರುವ **ಸಮುಚ್ಚಯವಾಚಕ**ವಾಗಿದೆ. ಹಾಗೆಯೇ **ಉಂ** ಎನ್ನುವುದೂ ಒಂದು ಪ್ರಥಮಾ ವಿಭಕ್ತಿಯ ಸಮುಚ್ಚಯವಾಚಕವಾಗಿದೆ. ಆದರೆ ಷಷ್ಠಿ ವಿಭಕ್ತಿಗೆ ಸಮುಚ್ಚಯವಾಚಕವು ಹತ್ತುವುದಿಲ್ಲ. ಹೀಗೆ ಎರಡು ಪದಗಳನ್ನಾಗಲಿ ಅಥವಾ ಹಲವು ಪದಸಮುಚ್ಚಯಗಳನ್ನಾಗಲಿ ಜೋಡಿಸುವಂಥ ಮತ್ತು ಸಂಬಂಧಗೊಳಿಸುವಂಥ ಶಬ್ದಗಳನ್ನು **ಸಂಬಂಧಾರ್ಥಕಾವ್ಯಯ**ಗಳೆನ್ನುವರು. ಉದಾ.: ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ. ಇಂಗ್ಲೀಷ್ ಭಾಷೆಯಲ್ಲಿ 'ಸಮುಚ್ಚಯ ವಾಚಕ'ವನ್ನು '**Conjunction**' ಎನ್ನುವರು. ವಿವರಣೆಗೆ **ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ** ವ್ಯಾಕರಣ ಗ್ರಂಥದ, ನಾಮಪ್ರಕರಣಂ (ಸಮುಚ್ಚಯ ಪ್ರಯೋಗ ವಿಚಾರಂ): **ಅಮುಮೆಂದುಸಿರ್ವ ಸಮುಚ್ಚಯ ।** **ದುಮುವಿಧಿ ನಿರುತಂ ದ್ವಿತೀಯೆಯೊ(ಳ್)ಳ ಪೊಕ್ಕಿರ್ಕುಂ ॥** **ಸಮನಿಸವೆಂದುಂ ಷಷ್ಠಿಯೊ ।** **ಳಮುಮವು ಮಿಕ್ಕಿನ ವಿಭಕ್ತಿಗಳ ಮೇಲಿರ್ಕುಂ ॥** (ಸೂತ್ರಂ ೧೨೨, ಸಂ.: ಕ.ಸಾ.ಪ.)/(ಸೂತ್ರಂ ೧೩೩, ಸಂ.: ಡಿ.ಎಲ್.ಎಸ್.) ಅನ್ನು ನೋಡಿರಿ

ಇದರ ಬಗ್ಗೆ ಹೆಚ್ಚಿನ ವಿವರಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ **ಕನ್ನಡ ಕೈಪಿಡಿ** ಗ್ರಂಥವನ್ನು ನೋಡಿರಿ. (ಕನ್ನಡ ಕೈಪಿಡಿ, ಸಂಪುಟ–೧, ಮುದ್ರಣ: ೧೯೩೬, ೧ ನೆಯ ಭಾಗ–ಹಳಗನ್ನಡದ ವ್ಯಾಕರಣ, VI. ನಾಮಪದಪ್ರಕರಣ, ಇದರಲ್ಲಿ, ವಿಭಕ್ತಿ, ಇದರ ಅಡಿಟಿಪ್ಪಣಿ, ಪುಟ ೪೩–೪೫, ಹಾಗೂ, ೪ನೆಯ ಭಾಗ–ಕನ್ನಡ ಭಾಷೆಯ ಚರಿತ್ರೆ, VII. ನಾಮಪದಗಳು, ಇದರಲ್ಲಿ, ೨. ವಿಭಕ್ತಿ–ಪ್ರಾಚೀನ ಆಧುನಿಕ ಮತಗಳು; (೧) ಪಂಚಮೀವಿಭಕ್ತಿ ಕನ್ನಡದಲ್ಲಿ ಸಹಜವಾಗಿಲ್ಲ; (೨) ಪ್ರಥಮಾವಿಭಕ್ತಿಗೆ ಪ್ರತ್ಯೇಕವಾದ ವಿಭಕ್ತಿಪ್ರತ್ಯಯವಾವುದೂ ಇಲ್ಲ, ಪ್ರಕೃತಿಯೇ ಪ್ರಥಮಾವಿಭಕ್ತ್ಯರ್ಥದಲ್ಲಿ ಪ್ರಯೋಗವಾಗುತ್ತದೆ. ಅಕಾರಂತ ಶಬ್ದಗಳಿಗೆ ಮ್, ನ್ ಎಂಬ ಪ್ರತ್ಯಯಗಳು ಸೇರುತ್ತವೆ. ಮ್, ನ್–ಇವು ವಿಭಕ್ತಿಪ್ರತ್ಯಯಗಳಲ್ಲ, ಅವು ಲಿಂಗಗಳನ್ನು ಸೂಚಿಸುವಂತೆ ತೋರುತ್ತದೆ. ವಿಭಕ್ತಿಪ್ರತ್ಯಯಗಳು ಸ್ವತಂತ್ರ ಶಬ್ದಗಳೇ?, ಪುಟ ೪೦೬–೪೧೫)

ಕಾವ್ಯದ ಪದ್ಯ/ವಚನಗಳ (ವಾಕ್ಯಗಳ) ಪದಚ್ಛೇದ ಕ್ರಮ:

ಹವ್ಯಾಸಿ ಹಳಗನ್ನಡ ಕಾವ್ಯವಾಚಕರು ಅದರಲ್ಲಿನ ಪದ್ಯ/ವಚನಗಳ (ವಾಕ್ಯಗಳ) ಪದಚ್ಛೇದ ಮಾಡುವ ಕ್ರಮವನ್ನು ಸ್ಥೂಲವಾಗಿಯಾದರೂ ತಿಳಿಯುವುದು ಅವಶ್ಯವಿದೆ. ಮೊದಲು ಶಬ್ದಗಳ ಬಗ್ಗೆ ತಿಳಿಯೋಣ. ದೇಶ್ಯಶಬ್ದಗಳನ್ನು, (೧) **ಮೂಲಶಬ್ದಗಳು,** (೨) **ನಿಷ್ಪನ್ನ (Derivative) ಶಬ್ದಗಳು,** ಮತ್ತು (೩) **ಸಮಾಸ ಶಬ್ದಗಳು** ಎಂದು ಮೂರು ಪಂಗಡಗಳಾಗಿ ವಿಭಾಗಿಸಬಹುದು. ಕಣ್, ಉಸಿರ್, ಕಲ್, ಪೊನ್, ತಿನ್ ಮೊದಲಾದುವು ಮೂಲ ಶಬ್ದಗಳು. ಒಳ್ಪು, ಮಾಟ್ಕೆ, ಪಡೆವಳಂ, ಕೈದುಕಾರಂ, ಕಲ್ಕುಟಿಗಂ, ಪೂವಡಿಗಂ ಮೊದಲಾದುವು ನಿಷ್ಪನ್ನ ಶಬ್ದಗಳು. ಬೆಳ್ದಿಂಗಳ್, ಚೆಂಬೊನ್, ನಿಡುಮೂಗಿ, ಅಂಗಯ್ ಮೊದಲಾದುವು ಸಮಾಸ ಶಬ್ದಗಳು. (ಹೆಚ್ಚಿನ ಅಧ್ಯಯನಕ್ಕೆ ಕನ್ನಡ ಕೈಪಿಡಿ, ಸಂಪುಟ–೧, ಮುದ್ರಣ: ೧೯೩೬, ೧ ನೆಯ ಭಾಗ, VI. ದೇಶ್ಯಶಬ್ದ ಪ್ರಕರಣ, ಪುಟ ೧೬–೧೭ ನೋಡಿರಿ)

ಒಂದು ಶಬ್ದದ ಮೂಲರೂಪಕ್ಕೆ **'ಪ್ರಕೃತಿ'** ಎಂದು ಹೆಸರು. ನಾಮಸೂಚಕ ಪ್ರಕೃತಿಗಳಿಗೆ **'ನಾಮಪ್ರಕೃತಿ'**ಗಳೆನ್ನುವರು. ಕ್ರಿಯಾರ್ಥಕವಾದ ಪ್ರಕೃತಿಗಳಿಗೆ **'ಧಾತು'** ಎನ್ನುವರು. **ಈ ಪ್ರಕೃತಿಗಳಿಗೆ ವಿಭಕ್ತಿಪ್ರತ್ಯಯಗಳು ಹತ್ತಿ ಪದವೆನ್ನಿಸಿ ಕೊಳ್ಳುವುವು (ಪ್ರಕೃತಿ+ಪ್ರತ್ಯಯ=ಪದ).**

ಈಗ ನಾವು ವಾಕ್ಯಗಳ ಬಗ್ಗೆ ವ್ಯಾಕರಣದ ದೃಷ್ಟಿಯಿಂದ ಸ್ವಲ್ಪ ಪ್ರಾಥಮಿಕ ಜ್ಞಾನವನ್ನು ಪಡೆಯಬೇಕಾಗಿದೆ. ಅದಕ್ಕಾಗಿ ಡಾ. ಶಿ.ಚ. ನಂದಿಮಠ, ಶ್ರೀ ಸಿ.ಎಂ. ಎರೇಸೀಮೆ, ಶ್ರೀ ಡಿ. ರೇವಣ್ಣಪ್ಪ ಇವರನ್ನುಳ್ಳ ಸಮಿತಿಯಿಂದ ವಿರಚಿತವಾದ **ಕನ್ನಡ ವ್ಯಾಕರಣ ದರ್ಪಣ** ಗ್ರಂಥದ ೯ ನೆಯ ಅಧ್ಯಾಯವನ್ನು ಈ ಕೆಳಗೆ ಸೂಕ್ತಬದಲಾಣೆಗಳೊಂದಿಗೆ ನೀಡಲಾಗಿದೆ.

ಅಧ್ಯಾಯ ೯

ವಾಕ್ಯಗಳು

ನಾವು ನಮ್ಮ ಮನಸ್ಸಿನ ಅಭಿಪ್ರಾಯಗಳನ್ನು ಇತರರಿಗೆ ಮಾತುಗಳ ಮೂಲಕ ತಿಳಿಯಪಡಿಸುತ್ತೇವೆ. ಅಥವಾ ಬರೆವಣಿಗೆಯಿಂದ ತಿಳಿಯಪಡಿಸುತ್ತೇವೆ.

(೧) **ಮಗುವು ಓಡಿತು.**
(೨) **ದೇವರು ಲೋಕವನ್ನು ಕಾಪಾಡುವನು.**
(೩) **ಭೀಮನಿಂದ ಬಕಾಸುರನು ಕೊಲ್ಲಲ್ಪಟ್ಟನು.**

ಹೀಗೆ ಮೇಲೆ ಹೇಳಿರುವ ವಾಕ್ಯಗಳೆಲ್ಲ ಒಂದು ಸಂಪೂರ್ಣಾರ್ಥವನ್ನು ಕೊಡತಕ್ಕವುಗಳು. ಈ ವಾಕ್ಯಗಳಲ್ಲಿ ಒಂದೊಂದು ಪದವು ಇಲ್ಲದಿದ್ದರೂ ಅರ್ಥವು ಪೂರ್ಣವಾಗದೆ ಪುನಃ ಪ್ರಶ್ನೆ ಮಾಡಬೇಕಾಗುತ್ತದೆ.

(೧) **ಓಡಿತು:–** ಹೀಗೆ ಒಂದೇ ಕ್ರಿಯಾಪದ ಹೇಳಿದಾಗ ಓಡಿದುದು ಯಾವುದು? ಎಂಬ ಪ್ರಶ್ನೆ ಬಂದೇ ಬರುತ್ತದೆ. ಪೂರ್ಣಾರ್ಥವು ಈ ಒಂದೇ ಪದದಿಂದ ಆಗದು. ಆದ್ದರಿಂದ ಅದನ್ನು ವಾಕ್ಯವೆನ್ನಲಾಗುವುದಿಲ್ಲ.

(೨) **ದೇವರು ಲೋಕವನ್ನು:–** ಹೀಗೆ ಕರ್ತೃ ಕರ್ಮ ಎರಡನ್ನೇ ಹೇಳಿದಾಗ, ದೇವರು ಲೋಕವನ್ನು ಏನು ಮಾಡಿದನು? ಎಂಬ ಪ್ರಶ್ನೆ ಏಳುವುದು. ಆಗ ಕ್ರಿಯಾಪದ ಬೇಕೇ ಬೇಕಾಗುವುದು.

(೩) **ಭೀಮನಿಂದ ಕೊಲ್ಲಲ್ಪಟ್ಟನು:–** ಎಂದಾಗ ಕೊಲ್ಲಲ್ಪಟ್ಟವನಾರು? ಎಂಬ ಕರ್ಮಪದದ ಬಗೆಗೆ ಪ್ರಶ್ನೆ ಎದ್ದೇ ಏಳುತ್ತದೆ. ಹಾಗಾದರೆ ವಾಕ್ಯವೆಂದರೆ, ಕರ್ತೃ, ಕರ್ಮ, ಕ್ರಿಯಾಪದಗಳಿಂದ ಕೂಡಿದ ಪದ ಸಮೂಹವೆಂದಹಾಗಾಯಿತು. ಆದರೆ ಕೆಲವು ವಾಕ್ಯಗಳಲ್ಲಿ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಕ್ರಿಯಾ ಪದವೇ ಕರ್ಮವನ್ನು ಅಪೇಕ್ಷಿಸುವುದಿಲ್ಲ. 'ಮಗು ಓಡಿತು'ಎಂಬಲ್ಲಿ ಕರ್ಮಪದದ ಅರ್ಥವಿಲ್ಲ.

(೧) ಚಿಕ್ಕಮಗುವು ಹಾಡುತ್ತಾ ಕುಣಿಯುತ್ತಾ ಓಡಿತು.
(೨) ಮಹಾಶಕ್ತನಾದ ದೇವರು ಸಮಸ್ತ ಲೋಕಗಳನ್ನು ಪ್ರೀತಿಯಿಂದ ಕಾಪಾಡುವನು.
(೩) ಮಹಾಶೂರನಾದ ಭೀಮನಿಂದ ದುಷ್ಟನಾದ ಬಕನು ಪೂರ್ವಕಾಲದಲ್ಲಿ ಕೊಲ್ಲಲ್ಪಟ್ಟನು.

ಮೊದಲು ಹೇಳಿದ ಮೂರು ವಾಕ್ಯಗಳಲ್ಲಿ ಇನ್ನೂ ಕೆಲವು ಹೊಸಪದ ಸೇರಿಸಿ ವಾಕ್ಯ ಮಾಡಲಾಗಿದೆ. ಮೊದಲ ಸಲ–

'ಮಗು ಓಡಿತು' ಇಷ್ಟೇ ಹೇಳಿತ್ತು. ಈಗ ಚಿಕ್ಕ ಮಗುವು ಹಾಡುತ್ತ ಕುಣಿಯುತ್ತ ಓಡಿತು.

ಇಲ್ಲಿ– (i) **ಮಗುವು–ಚಿಕ್ಕಮಗು**
(ii) **ಓಡಿದುದು–ಹಾಡುತ್ತ, ಕುಣಿಯುತ್ತ.**

ಹಾಗಾದರೆ ಮಗು ಎಂಬ ಕರ್ತೃಪದಕ್ಕೆ 'ಚಿಕ್ಕಮಗು' ಎಂಬುದೂ, 'ಓಡಿತು' ಎಂಬುದಕ್ಕೆ ಹಾಡುತ್ತ, ಕುಣಿಯುತ್ತ, ಎಂಬುವೂ ವಿಶೇಷಣಗಳು.

(95) ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಂದ ಅವುಗಳ ವಿಶೇಷಣಗಳಿಂದ ಕ್ರಮವಾಗಿ ಬರೆದ ಪದಸಮೂಹವೇ ವಾಕ್ಯವೆನಿಸುವುದು.

ಅನೇಕ ವಾಕ್ಯಗಳನ್ನು ಪರಸ್ಪರ ಸಂಬಂಧವುಂಟಾಗುವಂತೆ ಜೋಡಿಸುವುದೇ ವಾಕ್ಯರಚನೆ ಎನಿಸುವುದು.

I – ಅನ್ವಯಾನುಕ್ರಮ

ವಾಕ್ಯದಲ್ಲಿ ಕರ್ತೃಪದ ಮೊದಲು, ಕರ್ಮಪದ ಆನಂತರ, ಕ್ರಿಯಾಪದ ಕೊನೆಯಲ್ಲಿ ಬರುತ್ತದೆ. ವಿಶೇಷಣಗಳು ಆಯಾಯ ಪದಗಳ ಹಿಂದೆ ಇರುತ್ತವೆ. ಇದು ಸಾಮಾನ್ಯ ನಿಯಮ.

ಉದಾಹರಣೆಗೆ:

"ಮಹಾಶೂರನಾದ ಶ್ರೀ ರಾಮಚಂದ್ರನು ದುಷ್ಟನಾದ ರಾವಣನನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದನು".

ಇಲ್ಲಿ– ಶ್ರೀರಾಮಚಂದ್ರನು – **ಕರ್ತೃ**
ರಾವಣನನ್ನು – **ಕರ್ಮ**
ಕೊಂದನು – **ಕ್ರಿಯಾಪದ**

ಮೊದಲು ಕರ್ತೃಪದ; ಅದರ ಹಿಂದೆ ಆ ಕರ್ತೃಪದಕ್ಕೆ ವಿಶೇಷಣವಾದ 'ಮಹಾಶೂರನಾದ' ಎಂಬ ವಿಶೇಷಣ, ಅನಂತರ ಕರ್ಮಪದ, ಅದರ ಹಿಂದೆ ಅದರ ವಿಶೇಷಣವಾದ 'ದುಷ್ಟನಾದ' ಎಂಬ ವಿಶೇಷಣ[1]. ಅನಂತರ ಕ್ರಿಯಾಪದ; ಅದರ ಹಿಂದೆ ಯಾವ ಸಾಧನದಿಂದ ಕೊಂದನೋ ಆ ಸಾಧನವೇ ಕ್ರಿಯಾವಿಶೇಷಣವಾಗಿ ಕ್ರಿಯಾಪದದ ಹಿಂದೆ ಬಂದಿದೆ.

ಈ ಅನ್ವಯಾನುಕ್ರಮವೂ ವ್ಯತ್ಯಾಸವಾಗಿ ಹೀಗೆಯೂ ಆಗಬಹುದು–

"ದುಷ್ಟನಾದ ರಾವಣನನ್ನು, ತೀಕ್ಷ್ಣವಾದ ಬಾಣಗಳಿಂದ ಮಹಾಶೂರನಾದ, ಶ್ರೀರಾಮಚಂದ್ರನು ಕೊಂದನು".

ಇಲ್ಲಿ ಮೊದಲು ಕರ್ಮಪದ ಮತ್ತು ಅದರ ವಿಶೇಷಣ, ಅನಂತರ ಕ್ರಿಯೆಗೆ ಸಾಧನವಾದ ಬಾಣಗಳಿಂದ ಎಂಬ ಪದ; ಅನಂತರ ಮಹಾಶೂರನಾದ ರಾಮನು ಎಂಬ ಕರ್ತೃಪದ ಮತ್ತು ಅದರ ವಿಶೇಷಣ; ಕೊನೆಯಲ್ಲಿ ಕ್ರಿಯಾಪದ. ಹೀಗೆ ಅನನ್ವಯವಾಗಿಯೂ ಇರುವುದುಂಟು. ಪದ್ಯಗಳಲ್ಲಿ ಈ ರೀತಿಯು ವಿಶೇಷವಾಗಿ ಬರುತ್ತದೆ. ಏಕೆಂದರೆ ಅವರು (ಪದ್ಯ ಬರೆಯುವವರು) ಪ್ರಾಸ, ಛಂದಸ್ಸು, ಗಣ– ಇತ್ಯಾದಿಗಳನ್ನು ಪಾಲಿಸುವುದಕ್ಕೋಸುಗ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಕ್ರಮವಾಗಿ ಬರೆದಿರುವುದಿಲ್ಲ. ನಾವು ಆ ಪದ್ಯಕ್ಕೆ ಅರ್ಥ ಹೇಳುವಾಗ ಅನ್ವಯಕ್ರಮದಲ್ಲಿಯೇ ಹೇಳಬೇಕಾಗುವುದು. ಅಂದರೆ ಮೊದಲು ಕರ್ತೃಪದವನ್ನು ಆ ಪದ್ಯದಲ್ಲಿ ಹುಡುಕಿ, ಅನಂತರ ಕರ್ಮಪದ ಹುಡುಕಿ, ಕೊನೆಗೆ ಕ್ರಿಯಾಪದದ ಅರ್ಥ ಹೇಳಬೇಕು. ಹೀಗೆ ಪದ್ಯಕ್ಕೆ ಅರ್ಥ ಹೇಳುವುದನ್ನೇ ಅನ್ವಯಾನುಕ್ರಮದಲ್ಲಿ ಅರ್ಥ ವಿವರಣೆ ಮಾಡುವುದು ಎಂದು ಹೆಸರು. ಉದಾಹರಣೆಗೆ–

"ಮಾಡಿಕೊಂಡನು ಪರಮ ಪುರುಷನಕೂಡ ತೋಟಿಯ ಸಿದ್ಧರಾಮನು"

ಇಲ್ಲಿ ಕ್ರಿಯಾಪದ 'ಮಾಡಿಕೊಂಡನು' ಎಂಬುದು. ಇದು ಮೊದಲೇ ಬಂದಿದೆ. 'ಮಾಡಿಕೊಂಡನು' ಎಂಬುದಕ್ಕೆ 'ಯಾರು'ಎಂದು ಪ್ರಶ್ನೆಮಾಡಿದರೆ 'ಸಿದ್ಧರಾಮನು' ಎಂಬ ಕರ್ತೃಪದ ಬರುವುದು. 'ಏನನ್ನು ಮಾಡಿಕೊಂಡನು' ಎಂದು ಪ್ರಶ್ನಿಸಿದಾಗ 'ತೋಟಿಯನು[2]'ಎಂಬ ಕರ್ಮಪದ ಬರುವುದು. ಹಾಗಾದರೆ ವಾಕ್ಯದಲ್ಲಿ–

'ಸಿದ್ಧರಾಮನು ತೋಟಿಯನ್ನು ಮಾಡಿಕೊಂಡನು' ಹೀಗೆ ಕರ್ತೃ ಕರ್ಮ ಕ್ರಿಯಾಪದಗಳು ಕ್ರಮವಾಗಿ ಬರುವಂತೆ ಅರ್ಥ ಹೇಳುವುದೇ ಅನ್ವಯಾನುಕ್ರಮವೆನಿಸುವುದು. ಇವುಗಳಿಗೆ ವಿಶೇಷಣಗಳೇನಾದರೂ ಇವೆಯೇ ನೋಡಬೇಕು. ಕರ್ತೃವಿಗಾಗಲೀ ಕರ್ಮಕ್ಕಾಗಲಿ ಇಲ್ಲಿ ವಿಶೇಷಣಗಳು ಇಲ್ಲ. **'ಮಾಡಿಕೊಂಡನು'** ಎಂಬ ಕ್ರಿಯಾಪದಕ್ಕೆ **'ಪರಮಪುರುಷನಕೂಡ'** ಎಂಬ ಪದಸಮುಚ್ಚಯವು ವಿಶೇಷಣವಾಗಿದೆ. ಹೀಗೆ ಅನನ್ವಯವಾಗಿರುವ ವಾಕ್ಯಗಳನ್ನು ಅನ್ವಯಾನುಕ್ರಮದಲ್ಲಿ ಅರ್ಥ ಹೇಳಬೇಕಾದುದನ್ನು ಮುಖ್ಯವಾಗಿ ಗಮನಿಸಬೇಕಾಗುವುದು.

ಸೇರ್ಪಡೆ:

ಇಲ್ಲಿಯೇ ನಾವು ಹಳಗನ್ನಡ ಪದ್ಯ ರಚನೆಯಲ್ಲಿನ ಒಂದು ಮುಖ್ಯವಾದ ಲಕ್ಷಣವನ್ನು ತಿಳಿಯುವುದು ಸೂಕ್ತವಾಗಿದೆ. ಹಳಗನ್ನಡದ ಕವಿಗಳು ಪದ್ಯ ರಚನೆ ಮಾಡುವಾಗ ಪ್ರಾಸ, ಛಂದಸ್ಸು ಮತ್ತು ಅನ್ವಯಗಳ ನಿಯಮಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಇದರಿಂದ ಪದ್ಯದಲ್ಲಿನ ಪದಗಳು [ಅತ್ತಿತ್ತ] ಪಲ್ಲಟವಾಗುತ್ತಿದ್ದವು. ಅದನ್ನು ಕೇಶಿರಾಜನು ತನ್ನ **ಶಬ್ದಮಣಿದರ್ಪಣ**ಕ್ಕೆ ಸ್ವವೃತ್ತಿ ವಿರಚನೆಗೆ ಕಾರಣವನ್ನು ನೀಡುವ ಈ ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾನೆ:

ಪ್ರಾಸಚ್ಛಂದೋನ್ವಯವಿ ।
ನ್ಯಾಸದಿನಂತಿಂತು ಶಬ್ದಮಿರ್ಕುಂ ವೃತ್ತಿ ॥
ವ್ಯಾಸಂ ತದ್ವ್ಯಾಕುಳಮೆಂ ।

---

[1] ಕೆಲವು ಸಂದರ್ಭದಲ್ಲಿ, ಈ ವಿಶೇಷಣಗಳು ವಿಶೇಷ್ಯದ ಮುಂದೆಯೂ ಬರುವುದುಂಟು.

[2] 'ತೋಟಿಯನು' ಎಂಬ ಪ್ರಯೋಗವನ್ನು 'ತೋಟಿಯನ್ನು' ಎಂಬ ಪದಕ್ಕೆ ಪ್ರತಿಯಾಗಿ ನಡುಗನ್ನಡದಲ್ಲಿ ಉಪಯೋಗಿಸುವುದುಂಟು. ಇಲ್ಲಿ ದ್ವಿತೀಯಾ ವಿಭಕ್ತಿ 'ಅನು' ಎಂದು ತಿಳಿಯಬೇಕು.

ದಾಸೂತ್ರಕ್ಕರ್ಥವೃತ್ತಿ ವರ್ತಿಸೆ ಬರೆದೆಂ ॥ (ಶಬ್ದಮಣಿದರ್ಪಣ, ೬)

ಭಾವಾರ್ಥ: ಷಟ್ಪ್ರಾಸಗಳ, ಛಂದಸ್ಸಿನ, ಅನ್ವಯದ ಕ್ರಮದಿಂದಾಗಿ (ವಿನ್ಯಾಸದಿಂ–ನಿಜಾಗೆಯಿಂ), ಪದಗಳು [ಅತ್ತಿತ್ತ] ಪಲ್ಲಟವಾಗಿರುವುವು (ವ್ಯತ್ಯಯಮಾಗಿರ್ಪುವು). ಇದು ಸಂದೇಹಗಳನ್ನುಂಟುಮಾಡುವುದರಿಂದ (ವ್ಯಾಕುಳಮೆಂದು), ಇದನ್ನು ನಿವಾರಿಸಲು ವೃತ್ತಿಯನ್ನು ಬರೆದಿದ್ದೇನೆ.

ಆದುದರಿಂದ, ಪದ್ಯಗಳಿಗೆ ಅನ್ವಯಾರ್ಥವನ್ನು ನೀಡುವಾಗ, ಇಂತಹ ಪದಗಳನ್ನು ಸಾಂದರ್ಭಿಕವಾಗಿ ಕರ್ತೃ, ಕರ್ಮ, ಕ್ರಿಯಾ ಪದಗಳಾಗಿ ವಿಂಗಡಿಸಿ, ಪದ್ಯದಲ್ಲಿ ಕವಿಯ ಭಾವವನ್ನು ಅಥವಾ ಅವನು ಹೇಳುವ ವಿಷಯವನ್ನು ಸರಿಯಾಗಿ ಗ್ರಹಿಸಿ, ಪದಗಳಿಗೆ ಅನ್ವಯಾರ್ಥವನ್ನು ನೀಡಬೇಕಾಗುತ್ತದೆ.

II – ಆಧ್ಯಾಹಾರ

ವಾಕ್ಯ ಅರ್ಥವತ್ತಾಗಿರಬೇಕಾದರೆ ಕರ್ತೃ ಕರ್ಮ ಕ್ರಿಯಾಪದಗಳಿರಬೇಕೆಂದೂ ಕೆಲವು ಕಡೆ ಕರ್ಮಪದವಿರುವುದಿಲ್ಲವೆಂದೂ ಈ ಹಿಂದೆ ತಿಳಿದಿದ್ದೀರಿ. ಆದರೆ ಕೆಲವು ಕಡೆ ಕ್ರಿಯಾಪದ ಮತ್ತು ಕರ್ತೃಪದಗಳಿಲ್ಲದೆಯೇ ವಾಕ್ಯಗಳಿರುವುದುಂಟು. ಉದಾಹರಣೆಗೆ:

(i) X[1] **ಈಗ ಬಂದನು** (ಇಲ್ಲಿ ಕರ್ತೃಪದವಿಲ್ಲ)

ಎಂಬಲ್ಲಿ '**ಬಂದನು**' ಎಂಬ ಒಂದು ಕ್ರಿಯಾಪದ ಮಾತ್ರ ಇದೆ. '**ಯಾರು?**'ಎಂದು ಪ್ರಶ್ನಿಸಿದಾಗ ಬಂದನು ಎಂಬುದು ಪುಲ್ಲಿಂಗವಾಗಿರುವುದ ರಿಂದ '**ಅವನು**' – '**ಆತನು**' ಎಂಬ ಯಾವುದಾದರೂ ಒಂದು ಪದವನ್ನು '**ಆಧ್ಯಾಹಾರ**' ಮಾಡಬೇಕಾಗುವುದು.

(ii) **ಹುಡುಗನು ಬುದ್ಧಿವಂತ** X

ಇಲ್ಲಿ ಕ್ರಿಯಾಪದವೇ ಇಲ್ಲ. ಹುಡುಗನು, ಬದ್ಧಿವಂತ, ಈ ಎರಡು ಪದಗಳ ಆಧಾರದ ಮೇಲೆ ಪುಲ್ಲಿಂಗವನ್ನು ಹೇಳುವ ಕ್ರಿಯಾಪದವಿರ ಬೇಕೆಂದು ಊಹಿಸಿ 'ಆಗಿದ್ದಾನೆ, ಆಗುತ್ತಾನೆ, ಆದನು'–ಎಂಬ ಏಕವಚನಾಂತವಾದ ಕ್ರಿಯಾಪದವನ್ನು ಆಯಾ ಸಂದರ್ಭಕ್ಕೆ ಅನುಗುಣವಾಗಿ 'ಆಧ್ಯಾಹಾರ' ಮಾಡಬೇಕು.

(iii) **ಅವನು** X **ತಿಂದನು**

ಇಲ್ಲಿ ಕರ್ತೃಪದವಿದೆ, ಕ್ರಿಯಾಪದವಿದೆ. ತಿಂದನು ಎಂಬ ಕ್ರಿಯಾಪದ ಸಕರ್ಮಕವಾದ್ದರಿಂದ ಕರ್ಮಪದ ಬೇಕೇಬೇಕು. ಆಗ ಈ ವಾಕ್ಯ ಬಂದ ಸಂದರ್ಭವನ್ನು ತಿಳಿದು ಅನ್ನವನ್ನು, ತಿಂಡಿಯನ್ನು, ಹಣ್ಣನ್ನು ...... ಇತ್ಯಾದಿಯಾದ ಒಂದು ಪದವನ್ನು ಊಹಿಸಿ ಹೇಳಲೇಬೇಕಾಗುವುದು. ಆದರೆ ಕರ್ಮಪದಗಳ ಆಧ್ಯಾಹಾರ ತೀರ ಕಡಿಮೆ. ಕರ್ತೃಪದ ಕ್ರಿಯಾಪದಗಳ ಆಧ್ಯಾಹಾರದ ಸಂದರ್ಭ ವಿಶೇಷವಾಗಿ ಬರುತ್ತದೆ.

(96) ವಾಕ್ಯದಲ್ಲಿ ಬಿಟ್ಟುಹೋಗಿರುವ ಪದಗಳನ್ನು ವಾಕ್ಯಾರ್ಥದ ಪೂರ್ತಿಗಾಗಿ ಇರುವ ಪದಗಳ ಆಧಾರದಿಂದ ಊಹಿಸಿಕೊಂಡು ಸೇರಿಸುವುದೇ 'ಆಧ್ಯಾಹಾರ' ವೆನಿಸುವುದು.

ಉದಾಹರಣೆಗೆ:

(i) **ಕರ್ತೃಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

(೧) X ಈಗ ಹೋದನು (**ಅವನು**)
(೨) X ನಾಳೆ ಬರುತ್ತೇನೆ (**ನಾನು**)
(೩) X ಮೊನ್ನೆ ಬಂದನು (**ಅವನು**)
(೪) X ಒಂದು ತಿಂಗಳ ನಂತರ ಹೋಗೋಣ (**ನಾವು**)

(ii) **ಕರ್ಮಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

ಈಗತಾನೆ X ಅವನು ತಿಂದನು

(ಇಲ್ಲಿ **ಹಣ್ಣನ್ನು, ತಿಂಡಿಯನ್ನು**–ಇತ್ಯಾದಿ ಸಂದರ್ಭಕ್ಕೆ ಅನುಗುಣವಾಗಿ ಆಧ್ಯಾಹಾರ ಪದವನ್ನು ಊಹಿಸಬೇಕು)

(iii) **ಕ್ರಿಯಾಪದಗಳ ಆಧ್ಯಾಹಾರಕ್ಕೆ ಉದಾಹರಣೆ–**

(೧) ಅವರ ಮನೆ ಎಲ್ಲಿ X ? (**ಇದೆ**)
(೨) ನಿನ್ನೆ ಕೊಟ್ಟ ಪುಸ್ತಕವೆಲ್ಲಿ X ? (**ಇದೆ**)
(೩) ನಾನು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿ X (**ಆಗಿದ್ದೇನೆ**)

---

[1] ಇಲ್ಲದಿರುವ ಪದದ ಸ್ಥಳದಲ್ಲಿ X ಗುರುತು ಮಾಡಲಾಗಿದೆ. ಅಲ್ಲಿ ವಾಕ್ಯದಲ್ಲಿರುವ ಇತರ ಪದಗಳ ಆಧಾರದ ಮೇಲೆ ಇರಬೇಕಾದ ಪದವನ್ನು ಊಹಿಸಿ ಹೇಳಬೇಕು.

(೪) ಅದು ಬಹು ದೊಡ್ಡ ವಿಚಾರ X (**ಆಗಿದೆ**)
(೫) ಎಲ್ಲವೂ ತನಗೇ X ಎಂದನು (**ಬೇಕು**)
(೬) ನನಗೆ ಐವರು ಪುತ್ರರು X (**ಇರುವರು**)
(೭) ಈತನೇ ಹಿರಿಯಮಗ X (**ಆಗಿದ್ದಾನೆ**)
(೮) ಅಲ್ಲಿ ಆಡುವವಳೇ ನನ್ನ ಮಗಳು X (**ಆಗಿದ್ದಾಳೆ**)
(೯) ರಾಮ ಬಂದನು, ಭೀಮನೂ ಕೂಡ X (**ಬಂದನು**)

ಹೀಗೆ ವಾಕ್ಯಗಳಲ್ಲಿ ಬಿಟ್ಟು ಹೋಗಿರುವ ಪದಗಳನ್ನು ಅಲ್ಲಿರುವ **ಇತರ ಪದಗಳ ಸಹಾಯದಿಂದ ಊಹಿಸಿ ಹೇಳುವುದೇ ಆಧ್ಯಾಹಾರವೆಂದ ಹಾಗಾಯಿತು.**

III – ವಾಕ್ಯಗಳ ಪ್ರಕಾರಗಳು

ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಮಿಶ್ರವಾಕ್ಯಗಳು

ಇದುವರೆಗೆ ವಾಕ್ಯವೆಂದರೇನು? ವಾಕ್ಯದಲ್ಲಿ ಅನ್ವಯಾನುಕ್ರಮ, ಆಧ್ಯಾಹಾರಗಳೆಂದರೇನು? ಎಂಬ ಬಗೆಗೆ ಸ್ಥೂಲವಾಗಿ ಕೆಲವು ವಿಷಯ ತಿಳಿದಿರುವಿರಿ. ಈಗ ವಾಕ್ಯಗಳಲ್ಲಿ ಮೂರು ರೀತಿಯ ಪ್ರಧಾನವಾದ ಭೇದಗಳನ್ನು ಮಾತ್ರ ತಿಳಿದರೆ ಸಾಕು.

(೧) ಸಾಮಾನ್ಯ ವಾಕ್ಯ

ಈ ಕೆಳಗಿನ ವಾಕ್ಯಗಳನ್ನು ನೋಡಿರಿ.

(ಅ) ಖಾನದೇಶವು ಮಲೇರಿಯಾದ ತವರೂರಾಗಿತ್ತು.
(ಆ) ಖಾನದೇಶದಲ್ಲಿ ವಿಶ್ವೇಶ್ವರಯ್ಯನವರು ಮಲೇರಿಯಾ ಬೇನೆಯಿಂದ ಬಳಲಿದರು.
(ಇ) ವಿಶ್ವೇಶ್ವರಯ್ಯನವರು ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ವರ್ಗಕ್ಕೆ ಅರ್ಜಿ ಹಾಕಿದರು.
(ಈ) ವಿಶ್ವೇಶ್ವರಯ್ಯನವರನ್ನು ರಸ್ತೆ ಮತ್ತು ಕಟ್ಟಡಗಳ ಮೇಲ್ವಿಚಾರಣೆಯ ವಿಭಾಗಕ್ಕೆ ವರ್ಗ ಮಾಡಿದರು.

ಈ ನಾಲ್ಕೂ ವಾಕ್ಯಗಳೂ ಒಂದೊಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರ ವಾಕ್ಯಗಳಾಗಿವೆ.

(97) ಒಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳೆನಿಸುವುವು.
ಸಾಮಾನ್ಯ ವಾಕ್ಯದಲ್ಲಿ ಕ್ರಿಯಾಪದವು ಒಂದು ಮಾತ್ರ ಇರಬೇಕು. ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು. ಈ ಕೆಳಗೆ ಸಾಪೇಕ್ಷ ಕ್ರಿಯಾರೂಪಗಳಿಂದ ಕೂಡಿ, ಒಂದೇ ಕ್ರಿಯಾಪದದಿಂದ ಪೂರ್ಣಗೊಂಡ ಸಾಮಾನ್ಯ ವಾಕ್ಯ ನೋಡಿರಿ.

"ಖಾನದೇಶವು ಮಲೇರಿಯಾದಿಂದ ಕೂಡಿ, ವಿಶ್ವೇಶ್ವರಯ್ಯನವರ ಆರೋಗ್ಯದ ಮೇಲೆ ದುಷ್ಪರಿಣಾಮ ಮಾಡಿ, ಅವರು ಅಲ್ಲಿಂದ ವರ್ಗವಾಗುವಂತೆ ಮಾಡಿತು".

ಇಲ್ಲಿ '**ಮಾಡಿತು**' ಎಂಬ ಒಂದೇ ಕ್ರಿಯಾಪದವಿದ್ದು '**ಕೂಡಿ, ಮಾಡಿ**' ಎಂಬ ಸಾಪೇಕ್ಷ ಕ್ರಿಯೆಗಳು ಮಧ್ಯದಲ್ಲಿ ಬಂದಿವೆ.

(೨) ಸಂಯೋಜಿತ ವಾಕ್ಯ

"ಖಾನದೇಶವು ಮಲೇರಿಯಾದ ತವರೂರೆನಿಸಿತ್ತು; ಆದ್ದರಿಂದ ವಿಶ್ವೇಶ್ವರಯ್ಯನವರೂ ಅಲ್ಲಿ ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದಲೇ ಅವರು ಅಲ್ಲಿಂದ ವರ್ಗ ಮಾಡಿಸಿಕೊಂಡರು".

ಮೇಲಿನ ಈ ವಾಕ್ಯ ಸಮೂಹದಲ್ಲಿ ಬೇರೆ ಬೇರೆ ಮೂರು ವಾಕ್ಯಗಳಿವೆ. ಆದರೆ ಆ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. ಹೀಗೆ–

(98) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ, ಅದು ಸಂಯೋಜಿತ ವಾಕ್ಯವೆನಿಸಿಕೊಳ್ಳುವುದು.

ಉದಾಹರಣೆಗೆ:
ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನವನ್ನು ಹೊಕ್ಕಿತು; ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು.
ಇಲ್ಲಿ –

(i) ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನವನ್ನು ಹೊಕ್ಕಿತು.
(ii) ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು.

(iii) ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು.

ಈ ಮೂರು ಸ್ವತಂತ್ರ ಕ್ರಿಯಾಪದವುಳ್ಳ ವಾಕ್ಯಗಳು ಒಂದಕ್ಕೊಂದು **'ಆಗ' 'ಆದ್ದರಿಂದ'** –ಎಂಬ ಶಬ್ದಗಳ ಸಂಬಂಧದಿಂದ ಒಂದು ಅಭಿಪ್ರಾಯವನ್ನು ಪೂರ್ಣ ಹೇಳುವ **ಸಂಯೋಜಿತ** ವಾಕ್ಯವೆನಿಸಿದೆ.

(ಇ) ಮಿಶ್ರವಾಕ್ಯ

(ಅ) ನಮ್ಮ ಪರೀಕ್ಷೆ ಮುಗಿಯಿತೆಂದು, ತಂದೆಗೆ ಮಗನು ತಿಳಿಸಿದನು.

ಇಲ್ಲಿ ಪ್ರಧಾನ ಕ್ರಿಯಾಪದ 'ತಿಳಿಸಿದನು' ಎಂಬುದು, 'ನಮ್ಮ ಪರೀಕ್ಷೆ ಮುಗಿಯಿತು ಎಂದು' ಎಂಬ ಈ ಉಪವಾಕ್ಯವೇ 'ತಿಳಿಸಿದನು' ಎಂಬ ಕ್ರಿಯಾಪದದ ಕರ್ಮವಾಯಿತು.

(ಆ) ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತೆಂಬುದನ್ನು ಅವನಿಂದಲೇ ಕೇಳಿದೆನು.

ಇಲ್ಲಿ 'ಕೇಳಿದೆನು' ಎಂಬ ಕ್ರಿಯಾಪದವು ಪ್ರಧಾನ ಕ್ರಿಯಾಪದ. ಈ ಕ್ರಿಯಾಪದಕ್ಕೆ ಮೊದಲನೆಯ ವಾಕ್ಯವಾದ 'ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತು ಎಂಬುದನ್ನು' ಎಂಬುದು ಕರ್ಮವಾಗಿ ಅಧೀನ ವಾಕ್ಯವೆನಿಸಿದೆ. 'ಕೇಳಿದೆನು' ಎಂಬ ಕ್ರಿಯಾಪದದ ಕರ್ತೃವು ಇಲ್ಲಿ ಹೇಳಲ್ಪಟ್ಟಿಲ್ಲ. 'ನಾನು' ಎಂದು ಆಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಇಂಥ–

(99) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯವೆನ್ನುತ್ತೇವೆ.

ಉದಾಹರಣೆಗೆ:

ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ, ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಬಹುವಾಗಿ ಮರುಗಿದರು.

ಇಲ್ಲಿ 'ಬಹುವಾಗಿ ಮರುಗಿದರು' ಎಂಬ ಪ್ರಧಾನ ವಾಕ್ಯಕ್ಕೆ – (೧) ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರು. (೨) ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ. ಎಂಬ ವಾಕ್ಯಗಳು ಉಪವಾಕ್ಯಗಳೆನಿಸಿ ಇದು ಮಿಶ್ರವಾಕ್ಯವೆನಿಸಿದೆ.

IV – ವಾಕ್ಯವಿಭಜನೆ

ಇದುವರೆಗೆ–ಸಾಮಾನ್ಯವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯಗಳ ಸಾಮಾನ್ಯ ಪರಿಚಯ ಮಾಡಿಕೊಂಡಿರಿ. ಒಂದೊಂದು ವಾಕ್ಯದಲ್ಲೂ ಕರ್ತೃ, ಕರ್ಮ (ಸಕರ್ಮಕ ಧಾತುವಾಗಿದ್ದರೆ ಮಾತ್ರ), ಕ್ರಿಯಾಪದಗಳು ಮುಖ್ಯವಾಗಿರಬೇಕು. ಒಮ್ಮೊಮ್ಮೆ ವಾಕ್ಯದಲ್ಲಿ ಈ ಪದಗಳಲ್ಲಿ ಯಾವುದಾದರೂ ಒಂದು ಪದವಿರದಿದ್ದರೆ, ಸಂದರ್ಭ ಮತ್ತು ಇರುವ ಪದಗಳ ಅರ್ಥದ ಸಹಾಯದಿಂದ ಇರಬೇಕಾದ ಪದದ ಆಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಹೀಗಿರುವ ಕರ್ತೃ, ಕರ್ಮ, ಕ್ರಿಯೆಗಳಿಂದ ಕೂಡಿದ ವಾಕ್ಯದಲ್ಲಿ ಕರ್ತೃವಿಗೂ ಕರ್ಮಕ್ಕೂ, ಕ್ರಿಯಾಪದಕ್ಕೂ ವಿಶೇಷಣ ಪದಗಳೂ ಇರುತ್ತವೆ. ಉದಾಹರಣೆಗೆ–

ದೊಡ್ಡ ದೊಡ್ಡ ಮಕ್ಕಳು ತಂದೆ ತಾಯಿಗಳ ಕಾರ್ಯದಲ್ಲಿ ತಮ್ಮ ಕೈಲಾದ ಸಹಾಯವನ್ನು ಅವಶ್ಯವಾಗಿ ಮಾಡಲೇಬೇಕು.

ಈ ವಾಕ್ಯದಲ್ಲಿ 'ಮಾಡಲೇಬೇಕು'–ಎಂಬುದೇ ಕ್ರಿಯಾಪದ. 'ಮಕ್ಕಳು'–ಕರ್ತೃ, 'ಸಹಾಯವನ್ನು'–ಕರ್ಮ. ಅಂದರೆ 'ಮಕ್ಕಳು ಸಹಾಯವನ್ನು ಮಾಡಲೇಬೇಕು' ಎಂಬ ಈ ಮೂರು ಪದಗಳು ಕ್ರಮವಾಗಿ ಕರ್ತೃ, ಕರ್ಮ, ಕ್ರಿಯೆಗಳಾದರೆ–ಇವುಗಳಿಗೆ ಒಂದೊಂದಕ್ಕೂ ವಿಶೇಷಣ ಪದಗಳಿವೆ.

(i) **ಮಕ್ಕಳು**–ಎಂಬುದಕ್ಕೆ 'ದೊಡ್ಡ ದೊಡ್ಡ' ಎಂಬಿವು ವಿಶೇಷಣಗಳು.

(ii) **ಸಹಾಯವನ್ನು**–ಎಂಬುದಕ್ಕೆ ತಂದೆ ತಾಯಿಗಳ ಕಾರ್ಯದಲ್ಲಿ ಎಂಬ ಪದಗಳೂ,

(iii) **ಮಾಡಲೇಬೇಕು**[1]–ಎಂಬ ಕ್ರಿಯಾಪದಕ್ಕೆ 'ಅವಶ್ಯವಾಗಿ' ಎಂಬುದೂ ವಿಶೇಷಣಗಳು.

ಹೀಗೆ ಕರ್ತೃ, ಕರ್ಮ, ಕ್ರಿಯಾಪದ ಇತ್ಯಾದಿ ಪ್ರಧಾನ ಪದಗಳಿಗೆ ಇರುವ ಕರ್ತೃ ವಿಶೇಷಣಗಳು, ಕರ್ಮವಿಶೇಷಣಗಳು, ಕ್ರಿಯಾವಿಶೇಷಣಗಳೇ ಮೊದಲಾದುವನ್ನು ಅವುಗಳ ಸಂಬಂಧವನ್ನು ಬೇರ್ಪಡಿಸಿ ಹೇಳುವ ವಿಧಾನವೇ ವಾಕ್ಯವಿಭಜನೆಯೆನಿಸುವುದು. ಈ ಕ್ರಮದಿಂದ ನಮಗೆ ವಾಕ್ಯ ರಚನೆ ಸ್ಪಷ್ಟವಾಗುವುದು.

ಸೇರ್ಪಡೆ: ಪದಚ್ಛೇದ ಮಾಡುವಾಗ ಗಮನಿಸಬೇಕಾದ ಅಂಶಗಳು: ಪದ್ಯ/ವಚನಗಳಲ್ಲಿ ಪದಚ್ಛೇದ (ಪದವಿಭಾಗ) ವನ್ನು ಪ್ರತ್ಯಯವಿರುವೆಡೆಗಳಲ್ಲಿ ಮಾತ್ರ ಮಾಡಬೇಕು. ಪ್ರಕೃತಿ–ಪ್ರಕೃತಿಗಳ ನಡುವೆ ಪದಚ್ಛೇದ ಮಾಡಬಾರದು. ಅಂದರೆ, ಸಮಾಸ ಪದಗಳಲ್ಲಿ

---

[1] 'ಮಾಡಲೇಬೇಕು' ಎಂಬಲ್ಲಿ 'ಬೇಕು' ಎಂಬುದಿಷ್ಟೇ ಅವ್ಯಯಕ್ರಿಯಾಪದ. (ಕ್ರಿಯಾರ್ಥಕಾವ್ಯಯ) 'ಮಾಡಲೇಬೇಕು' ಎಂದು ಕ್ರಿಯಾಪದವಾಗಿ ತೋರಿಸುವುದು ಕೇವಲ ಸ್ಪಷ್ಟತೆಗೋಸ್ಕರ ಮಾತ್ರ.

ಪ್ರತ್ಯಯದಿಂದ ಕೊನೆಗೊಳ್ಳುವೆಡೆಗಳಲ್ಲಿ ಮಾತ್ರ ಪದಚ್ಛೇದ ಮಾಡಬೇಕು. ಸಮಾಸ ಪದಗಳಲ್ಲಿರುವ ಪ್ರಕೃತಿ/ವಿಶೇಷಣಗಳ ನಡುವೆ ಸಂಧಿಕಾರ್ಯ ನಡೆದಿದ್ದರೆ ಅಲ್ಲಿ ಸಂಧಿಯನ್ನು ಬಿಡಿಸಬಾರದು. ಬೇರೆಡೆಗಳಲ್ಲಿ, ಎರಡು ಪದಗಳ ನಡುವೆ ಸಂಧಿಕಾರ್ಯ ನಡೆದಿದ್ದರೆ, ಸಂಧಿಯನ್ನು ಬಿಡಿಸಿ ಸ್ವತಂತ್ರಪದಗಳನ್ನಾಗಿ ವಿಂಗಡಿಸಬೇಕು. ಪದಚ್ಛೇದ ಮಾಡಿದನಂತರ ಪ್ರತಿಪದಕ್ಕೂ ಅಲ್ಪವಿರಾಮ (,) ಹಾಕಬೇಕು. ಸಮಾಸ ಪದದಲ್ಲಿರುವ ಪ್ರಕೃತಿ ಅಥವಾ ವಿಶೇಷಣಗಳನ್ನು ವಿಂಗಡಿಸಲು ಕೂಡುಗೆರೆ ('–' Hyphen) ಯನ್ನು ಹಾಕಬೇಕು. ಸಮಾಸ ಪದದಲ್ಲಿರುವ ನಾಮಪದ ಅಥವಾ ಕ್ರಿಯಾಪದಗಳ ವಿಶೇಷಣಗಳನ್ನು ಆಯಾ ಪದಕ್ಕೆ ಮಾತ್ರ ಅನ್ವಯಿಸಬೇಕು. ಆ ವಿಶೇಷಣಗಳನ್ನು ಸ್ವತಂತ್ರ ಪದಗಳಂತೆ ತೆಗೆದು ಆ ಪದ್ಯದ ಅಥವಾ ಆ ವಚನದ ಬೇರೆ ವಾಕ್ಯಗಳಿಗೆ ಅನ್ವಯಿಸಬಾರದು. ಹಾಗೆಯೇ, ಕರ್ತೃ, ಕರ್ಮ, ಕ್ರಿಯಾಪದ ಇತ್ಯಾದಿ ಪ್ರಧಾನ ಪದಗಳಿಗೆ ಇರುವ ಕರ್ತೃ ವಿಶೇಷಣಗಳು, ಕರ್ಮವಿಶೇಷಣಗಳು, ಕ್ರಿಯಾವಿಶೇಷಣಗಳನ್ನು ಆಯಾ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಅನ್ವಯಿಸಬೇಕು. ಉದಾಹರಣೆಯಾಗಿ ೧-೧ ನೆಯ ಪದ್ಯಕ್ಕೆ ಪದವಿಭಾಗ ಮಾಡಿರುವುದನ್ನು ಗಮನಿಸಿ:

ಶಾರ್ದೂಲ **ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ**
ವಿಕ್ರೀಡಿತ **ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರಸಂಸಾರ ವಿ**
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧-೧

ಪದ ವಿಭಾಗ: ಈ ವೃತ್ತಪದ್ಯದಲ್ಲಿ ಪ್ರಥಮಪಾದದಲ್ಲಿರುವ '**ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ**' ಎಂಬುದಿಷ್ಟೂ ಒಂದು ಸಮಾಸ ಪದ.

ಸಮಾಸ ಪದದ ಪದಚ್ಛೇದ ಕ್ರಮ: 'ಶ್ರೀ-ದೇವೇಂದ್ರ-ಮುನೀಂದ್ರ-ವಂದಿತ-ಗುಣ-ವ್ರಾತಂ(>ವ್ರಾತನ್),'

ಈ ಸಮಸ್ತಪದವನ್ನು ವಿಗ್ರಹವಾಕ್ಯ ಮಾಡಿದಾಗ: 'ಶ್ರೀ ದೇವೇಂದ್ರರಿಂದಲೂ ಮುನೀಂದ್ರರಿಂದಲೂ ವಂದಿಸಲ್ಪಡುವ ಗುಣವ್ರಾತನು' ಎಂದಾಗುವುದು. ಇದಕ್ಕೆ ಅನ್ವಯಾರ್ಥವನ್ನು ನೀಡಿದಾಗ, 'ಶ್ರೀ=ಶ್ರೇಷ್ಠರಾದ, ದೇವೇಂದ್ರ=ದೇವೇಂದ್ರರಿಂದಲೂ, ಮುನೀಂದ್ರ=ಗಣಧರ ರಿಂದಲೂ, ವಂದಿತ=ಕೊಂಡಾಡಲ್ಪಡುವ, ಗುಣ=ಗುಣಗಳ, ವ್ರಾತಂ(>ವ್ರಾತನ್)=ರಾಶಿಯುಳ್ಳವನು,' ಅಂದರೆ, '**ಶ್ರೇಷ್ಠರಾದ ದೇವೇಂದ್ರ ರಿಂದಲೂ ಗಣಧರರಿಂದಲೂ ಕೊಂಡಾಡಲ್ಪಡುವ ಗುಣಗಳ ರಾಶಿಯುಳ್ಳವನು**' _ಎಂದಾಗುವುದು.

ಈ ಸಮಸ್ತಪದದ ಮಧ್ಯದಲ್ಲಿ ಎಲ್ಲಿಯೂ ವಿಭಕ್ತಿಪ್ರತ್ಯಯಗಳಿಲ್ಲದಿರುವುದನ್ನೂ ಹಾಗೂ ಈ ಸಮಸ್ತಪದದ ಅಂತ್ಯದಲ್ಲಿ ಮಾತ್ರ '**ಂ > ನ್**' ಎಂಬ ಪ್ರಥಮಾ ವಿಭಕ್ತಿಯ ಪುಲ್ಲಿಂಗ ಏಕವಚನದ ಪ್ರಕೃತಿಗೇ ಸೇರಿದ ಪ್ರತ್ಯಯವಿರುವುದನ್ನು ಗಮನಿಸಿ. ಇಂತಹ ಪ್ರತ್ಯಯವಿರುವೆಡೆಯಲ್ಲಿ ಮಾತ್ರ ಪದ ಅಂತ್ಯವಾಗುತ್ತದೆ. ಈ ಸಮಾಸ ಪದದಲ್ಲಿರುವ ಪ್ರಕೃತಿ/ವಿಶೇಷಣಗಳನ್ನು ವಿಂಗಡಿಸಿ, ಅವುಗಳ ಮಧ್ಯದಲ್ಲಿ ಕೂಡುಗೆರೆ (-) ಹಾಕಬೇಕು, ಹಾಗೂ ಪದದ ಅಂತ್ಯದಲ್ಲಿ ಅಲ್ಪವಿರಾಮ (,) ಚಿಹ್ನೆಯನ್ನು ಹಾಕಬೇಕು. ಈ ಸಮಸ್ತಪದದಲ್ಲಿರುವ ಎಲ್ಲ ಪ್ರಕೃತಿ/ವಿಶೇಷಣಗ ಳಿಂದ ಒಂದೇ ವಿಗ್ರಹವಾಕ್ಯ ಮಾಡಬೇಕು. ಎರಡು ವಾಕ್ಯಗಳನ್ನಾಗಿ ಒಡೆಯಬಾರದು. ಉದಾಹರಣೆಗೆ, ಮೇಲಿನ ಸಮಸ್ತಪದವನ್ನು: (೧) 'ಶ್ರೇಷ್ಠರಾದ ದೇವೇಂದ್ರರಿಂದಲೂ ನಮಸ್ಕರಿಸಲ್ಪಡುವವನೂ, (೨) ಗುಣಗಳ ರಾಶಿಯೂ' ಹೀಗೆ ಎರಡು ವಾಕ್ಯಗಳನ್ನಾಗಿ ಒಡೆಯಬಾರದು. ಹಾಗೆಯೇ ಈ ಸಮಸ್ತಪದದಲ್ಲಿರುವ ಯಾವುದೇ ಪ್ರಕೃತಿ/ವಿಶೇಷಣಗಳನ್ನು, ಉದಾಹರಣೆಗೆ **ವಂದಿತ** ಎನ್ನುವ ವಿಶೇಷಣವನ್ನು, ಮುಂದಿನ **ಜಗತ್ಸ್ವಾಮಿ ಸಂದಾದಿಬ್ರಹ್ಮನ್** ಎಂಬ ವಾಕ್ಯಕ್ಕೆ ಅಥವಾ ಈ ಪದ್ಯದ ಇನ್ನಾವುದೇ ವಾಕ್ಯಕ್ಕೆ ಅನ್ವಯಿಸಿ ಅರ್ಥೈಸಬಾರದು.

ಹಾಗೆಯೇ ಮುಂದಿನ, '**ಜಗತ್ಸ್ವಾಮಿ ಸಂದಾದಿಬ್ರಹ್ಮನ್**' ಎಂಬುದೂ ಒಂದು ಸಮಾಸ ಪದ.

ಪದಚ್ಛೇದ ಕ್ರಮ: ಜಗತ್ಸ್ವಾಮಿ-ಸಂದಾದಿಬ್ರಹ್ಮನ್,

ಈ ಸಮಾಸ ಪದದಲ್ಲಿರುವ '**ಸಂದಾದಿಬ್ರಹ್ಮನ್**' ಎಂಬಲ್ಲಿ ಸಂಧಿಕಾರ್ಯ ನಡೆದಿದ್ದು ಅದನ್ನು ಬಿಡಿಸಿದರೆ, **ಸಂದ+ಆದಿಬ್ರಹ್ಮನ್** ಎಂದಾಗುತ್ತದೆ. ಆದರೆ ಸಮಾಸ ಪದಗಳನ್ನು ವಿಂಗಡಿಸಿಕೊಳ್ಳುವಾಗ '**ಸಂದ+ಆದಿಬ್ರಹ್ಮನ್**' ಎಂದು ಸಂಧಿಬಿಡಿಸಿ ಬರೆಯಬಾರದು. ಅನ್ವಯಾರ್ಥ ಮಾಡುವಾಗ ಮಾತ್ರ ಸಂಧಿ ಬಿಡಿಸಿ ಅರ್ಥೈಸಬೇಕು.

ಅಗಾಧ-ಬೋಧ-ನಿಳಯಂ(>ನಿಳಯನ್),
ದುರ್ವಾರ-ಸಂಸಾರ-ವಿಚ್ಛೇದೋಪಾಯ-ನಿಯುಕ್ತ-ಸೂಕ್ತಿ-ವೃಷಮಾರ್ಗಾಗ್ರೇಸರಂ(>ವೃಷಮಾರ್ಗಾಗ್ರೇಸರನ್),
ಪಾಪಹೃತ್ಪಾದಾಬ್ಜಂ(>ಪಾಪಹೃತ್ಪಾದಾಬ್ಜನ್),
ಮುಕ್ತಿಶ್ರೀ-ಸುಖಾವಾಪ್ತಿಯಂ, _ಇವಿಷ್ಟೂ ಈ ವೃತ್ತಪದ್ಯದಲ್ಲಿರುವ ಮಿಕ್ಕ ಸಮಸ್ತಪದಗಳಾಗಿವೆ.

ಉಳಿದ: '**ದಯೆಗೆಯ್ವನಕ್ಕೆಮಗೆ**' _ಈ ಪದವು ಸಮಾಸ ಪದವಾಗಿರುವುದಿಲ್ಲ. ಇದರಲ್ಲಿ ಸ್ವತಂತ್ರ ಪದಗಳ ನಡುವೆ ಸಂಧಿಕಾರ್ಯ ನಡೆದಿದ್ದು, ಅವುಗಳನ್ನು ಬಿಡಿಸಿಕೊಳ್ಳಬೇಕಾಗಿದೆ. ಈ ಸಂಧಿಪದವನ್ನು ಬಿಡಿಸುವಿಕೆಯ ಕ್ರಮವು ಹೀಗಿದೆ:
ದಯೆಗೆಯ್ವನಕ್ಕೆ+ಎಮಗೆ ... ಇದನ್ನು ಪದವಿಭಾಗ ಮಾಡಿದಾಗ .... **ದಯೆಗೆಯ್ವನಕ್ಕೆ, ಎಮಗೆ,** ಎಂಬ ಸ್ವತಂತ್ರ ಪದಗಳಾಗುತ್ತವೆ. ಏಕೆಂದರೆ ಈ ಪದಗಳಿಗೆ ಅಂತ್ಯದಲ್ಲಿ ಕ್ರಮವಾಗಿ, **ಕೆ, ಗೆ** ಎಂಬ ವಿಭಕ್ತಿಪ್ರತ್ಯಯಗಳು ಹತ್ತಿವೆ. ಒಂದುವೇಳೆ ಸಮಾಸಪದ ಬೇರೊಂದು ಸಮಾಸಪದ ಅಥವಾ ಸ್ವತಂತ್ರಪದದ ನಡುವೆ ಸಂಧಿಕಾರ್ಯ ನಡೆದಿದ್ದರೆ, ಇದೇ ರೀತಿಯಲ್ಲಿ ಸಂಧಿಯನ್ನು ಬಿಡಿಸಿಕೊಳ್ಳಬೇಕು. ಇಲ್ಲಿ ಪದಚ್ಛೇದಕ್ರಮವನ್ನು ಮಾತ್ರ, ಪ್ರಾಥಮಿಕ ಹಂತದ ವಾಚಕರ ಅನುಕೂಲಕ್ಕಾಗಿ, ಅತ್ಯಂತ ಸ್ಥೂಲವಾಗಿ ವಿವರಿಸಿದೆ.

V – ರೂಪನಿಷ್ಪತ್ತಿ

(100) ಭಾಷೆಯಲ್ಲಿ ನಾವು ಮಾತನಾಡುವ ಮತ್ತು ಬರೆಯುವ, ಕಾವ್ಯಗಳಲ್ಲಿ ಬರುವ ಶಬ್ದಗಳು ವ್ಯಾಕರಣದ ಯಾವ ನಿಯಮಕ್ಕನುಗುಣವಾಗಿ ಸಿದ್ಧವಾಗಿವೆ? ಅವುಗಳ ಕಾರ್ಯ ಮತ್ತು ಪ್ರಯೋಜನಗಳೇನು? ಸಂಬಂಧವೇನು? ಎಂಬುದನ್ನು ತಿಳಿಸುವುದೇ ರೂಪನಿಷ್ಪತ್ತಿಯೆನಿಸುವುದು.

ಉದಾಹರಣೆಗೆ ಈ ವಾಕ್ಯವನ್ನು ನೋಡಿರಿ.

(i) **ರಾಜನು ರಾಜ್ಯವನ್ನು ಆಳುತ್ತಾನೆ.**

ಈ ವಾಕ್ಯದಲ್ಲಿ ಮೂರು ಪದಗಳಿವೆ. ರಾಜನು ಎಂಬುದು ಕರ್ತೃಪದ, ರಾಜ್ಯವನ್ನು ಕರ್ಮಪದ, ಆಳುತ್ತಾನೆ ಎಂಬುದು ಕ್ರಿಯಾಪದ. ಒಂದೊಂದು ಪದವೂ ಹೇಗೆ ರೂಪ ಸಿದ್ಧಿಯನ್ನು ವ್ಯಾಕರಣ ದೃಷ್ಟಿಯಿಂದ ಪಡೆದಿದೆ, ಎಂಬುದನ್ನು ನೋಡಿರಿ.

(೧) **ರಾಜನು** –'ರಾಜ' ಎಂಬ ಅಕಾರಾಂತ ಪುಲ್ಲಿಂಗ ಪ್ರಕೃತಿಯ ಮೇಲೆ 'ಉ' ಎಂಬ ಪ್ರಥಮಾವಿಭಕ್ತಿಪ್ರತ್ಯಯ ಬಂದು, ನಡುವೆ ನಕಾರಾಗಮವಾಗಿ 'ರಾಜನು' ಎಂಬ ರೂಪವೊಂದಿ, 'ಆಳುತ್ತಾನೆ' ಎಂಬ ಕ್ರಿಯೆಗೆ ಕರ್ತೃವಾಯಿತು.

(೨) **ರಾಜ್ಯವನ್ನು**–'ರಾಜ್ಯ' ಎಂಬ ಅಕಾರಾಂತ ನಪುಂಸಕಲಿಂಗ ಪ್ರಕೃತಿಯು ದ್ವಿತೀಯಾವಿಭಕ್ತಿ ಏಕವಚನವನ್ನು ಹೊಂದಿ 'ರಾಜ್ಯವನ್ನು' ಎಂಬ ಪದವಾಗಿ 'ಆಳುತ್ತಾನೆ' ಎಂಬ ಕ್ರಿಯೆಗೆ ಕರ್ಮವಾಯಿತು (ಕರ್ಮಪದವಾಯಿತು).

(೩) **ಆಳುತ್ತಾನೆ**–'ಆಳು' ಎಂಬ ಉಕಾರಾಂತ ಧಾತುವಿಗೆ ವರ್ತಮಾನಕಾಲದ ಪ್ರಥಮಪುರುಷ ಪುಲ್ಲಿಂಗ ಏಕವಚನದ ಆಖ್ಯಾತ ಪ್ರತ್ಯಯ ಬಂದು 'ಆಳುತ್ತಾನೆ' ಎಂಬ ಕ್ರಿಯಾಪದ ರೂಪಸಿದ್ಧಿ ಪಡೆಯಿತು.

ಹೀಗೆ ವಾಕ್ಯದಲ್ಲಿರುವ ಪ್ರತಿ ಶಬ್ದದ ರೂಪಸಿದ್ಧಿಯು ವ್ಯಾಕರಣ ನಿಯಮದಂತೆ ಹೇಗಾಯಿತೆಂದು ಹೇಳುವುದೇ ರೂಪನಿಷ್ಪತ್ತಿಯೆನಿಸುವುದು.

ಕೆಳಗಿನ ವಾಕ್ಯದಲ್ಲಿ ಬಂದಿರುವ ಶಬ್ದಗಳ ರೂಪನಿಷ್ಪತ್ತಿಯನ್ನು ಗಮನಿಸಿರಿ.

(ii) ವಿಶ್ವೇಶ್ವರಯ್ಯನವರು ಉದ್ಯೋಗವನ್ನು ಹುಡುಕಿಕೊಂಡು ಹೋಗಲಿಲ್ಲ; ಉದ್ಯೋಗವೇ ಅವರನ್ನು ಹುಡುಕಿಕೊಂಡು ಬಂದಿತು.

(೧) **ವಿಶ್ವೇಶ್ವರಯ್ಯನವರು**–'ವಿಶ್ವೇಶ್ವರಯ್ಯ' ಎಂಬ ಅಕಾರಾಂತಪುಲ್ಲಿಂಗನಾಮಪ್ರಕೃತಿಗೆ ಗೌರವಾರ್ಥದಲ್ಲಿ ಪ್ರಥಮಾ ಬಹುವಚನ. 'ಹೋಗಲಿಲ್ಲ[1]' ಎಂಬ ಕ್ರಿಯೆಗೆ ಕರ್ತೃಪದ.

(೨) **ಉದ್ಯೋಗವನ್ನು**–'ಉದ್ಯೋಗ' ಎಂಬ ಅಕಾರಾಂತ ನಪುಂಸಕಲಿಂಗ ನಾಮಪ್ರಕೃತಿ. 'ಅನ್ನು' ಎಂಬ ದ್ವಿತೀಯಾವಿಭಕ್ತಿ ಏಕವಚನ. 'ಹೋಗಲಿಲ್ಲ' ಎಂಬ ಕ್ರಿಯಾಪದಕ್ಕೆ ಕರ್ಮಪದ.

(೩) **ಹುಡುಕಿಕೊಂಡು**–'ಹುಡುಕಿಕೊಳ್ಳು' ಎಂಬ ಸಂಯುಕ್ತ ಧಾತುವಿನ ಭೂತ ನ್ಯೂನ. 'ಹುಡುಕಿಕೊಳ್ಳು' ಧಾತುವಿನ ಮೇಲೆ 'ದು' ಪ್ರತ್ಯಯ ಬಂದು 'ಹುಡುಕಿಕೊಂಡು' ಎಂಬ ಕೃದಂತಾವ್ಯಯವಾಗಿದೆ. ಇದು 'ಹೋಗಲಿಲ್ಲ' ಎಂಬ ಕ್ರಿಯೆಗೆ ವಿಶೇಷಣವಾಗಿ ಬಂದಿದೆ.

(೪) **ಹೋಗಲಿಲ್ಲ**[2]–'ಹೋಗಲು' 'ಇಲ್ಲ', ಎಂಬ ಎರಡು ಪದಗಳಿವೆ. 'ಹೋಗಲು' ಎಂಬುದು 'ಹೋಗು' ಧಾತುವಿನ ಮೇಲೆ 'ಅಲು' ಎಂಬ ಪ್ರತ್ಯಯ ಬಂದು 'ಹೋಗಲು' ಎಂಬ ಕೃದಂತಾವ್ಯಯವಾಗಿದೆ. 'ಇಲ್ಲ' ಎಂಬುದು ನಿಷೇಧಾರ್ಥಕ ಕ್ರಿಯಾರ್ಥಕಾವ್ಯಯ.

(೫) **ಉದ್ಯೋಗವು**–'ಉದ್ಯೋಗ' ಎಂಬ ಅಕಾರಾಂತ ನಪುಂಸಕಲಿಂಗ ನಾಮ ಪ್ರಕೃತಿ. ಪ್ರಥಮಾವಿಭಕ್ತಿ ಏಕವಚನ, 'ಬಂದಿತು' ಎಂಬ ಕ್ರಿಯೆಗೆ ಕರ್ತೃಪದ.

(೬) **'ಏ' ಅವಧಾರಣಾರ್ಥಕ ಅವ್ಯಯ.**

(೭) **ಅವರನ್ನು**–'ಅವನು' ಉಕಾರಾಂತ ಪುಲ್ಲಿಂಗ. ಪುರುಷಾರ್ಥಕ ಸರ್ವನಾಮ (ಪ್ರಥಮಪುರುಷಪುಲ್ಲಿಂಗ) ದ ಮೇಲೆ ಗೌರವಾರ್ಥದಲ್ಲಿ ದ್ವಿತೀಯಾ ಬಹುವಚನದ ನಾಮವಿಭಕ್ತಿಪ್ರತ್ಯಯ ಬಂದು 'ಅವರನ್ನು' ಎಂಬ ರೂಪವಾಗಿದೆ.

(೮) **ಹುಡುಕಿಕೊಂಡು**–'ಹುಡುಕಿಕೊಳ್ಳು' ಎಂಬ ಸಂಯುಕ್ತ ಧಾತುವಿನ ಭೂತ ನ್ಯೂನ. 'ಹುಡುಕಿಕೊಳ್ಳು' ಧಾತುವಿನ ಮೇಲೆ 'ದು' ಪ್ರತ್ಯಯ ಬಂದು, 'ಹುಡುಕಿಕೊಂಡು' ಎಂಬ ಕೃದಂತಾವ್ಯಯವಾಗಿದೆ. ಇದು 'ಅವರನ್ನು' ಎಂಬ ಪದದೊಡನೆ 'ಬಂದಿತು' ಎಂಬ ಕ್ರಿಯೆಗೆ ವಿಶೇಷಣವಾಗಿದೆ.

---

[1] ಹೋಗಲು 'ಇಲ್ಲ'. 'ಇಲ್ಲ' ಎಂಬ ಅವ್ಯಯ ಕ್ರಿಯಾಪದ (ಕ್ರಿಯಾರ್ಥಕಾವ್ಯಯ) ಬರುವಾಗ 'ಹೋಗಲು' ಎಂಬ ಕೃದಂತಾವ್ಯಯದ ಜೊತೆಗೆ ಬಂದಿದೆ. 'ಹೋಗಲು' ಎಂಬುದು 'ಹೋಗು' ಧಾತುವಿನ ಮೇಲೆ 'ಅಲು' ಪ್ರತ್ಯಯ ಸೇರಿ ಕೃದಂತಾವ್ಯಯವಾಗಿದೆ.

[2] 'ಇಲ್ಲ' ಎಂಬ ನಿಷೇಧಾರ್ಥಕ ಕ್ರಿಯಾರ್ಥಕಾವ್ಯಯವು ಕೆಲವು ಕಡೆ, 'ಅಲು' ಪ್ರತ್ಯಯಾಂತ ಕೃದಂತಾವ್ಯಯದ ಜೊತೆಗೆ ಪ್ರಯೋಗವಾಗುವುದು–ಉದಾಹರಣೆಗೆ: ಮಾಡಲಿಲ್ಲ, ತಿನ್ನಲಿಲ್ಲ, ನೋಡಲಿಲ್ಲ–ಇತ್ಯಾದಿ. ಕೆಲವು ಕಡೆ ಸ್ವತಂತ್ರವಾಗಿಯೂ ಇರುವುದುಂಟು. ನನ್ನಲ್ಲಿ ಅದು ಇಲ್ಲ, ಆತನು ಮನೆಯಲ್ಲಿ ಇಲ್ಲ–ಇತ್ಯಾದಿ.

(೯) **ಬಂದಿತು–** 'ಬರು' ಧಾತು, ಭೂತಕಾಲ, ಪ್ರಥಮ ಪುರುಷ, ನಪುಂಸಕಲಿಂಗ, ಏಕವಚನ ಕ್ರಿಯಾಪದ.

ಈ ರೀತಿ ಮೇಲೆ ಹೇಳಿದ ಹಾಗೆ ವಾಕ್ಯಗಳಲ್ಲಿ ಬರುವ ಪ್ರತಿ ಪದಕ್ಕೂ ರೂಪನಿಷ್ಪತ್ತಿಯನ್ನು ಹೇಳಬೇಕು.

ಹೀಗೆ ವಾಕ್ಯದ ಬಗೆಗಿನ ವಿಷಯಗಳನ್ನು ಗ್ರಹಿಸಿ, ಪದ್ಯ/ವಚನಗಳ ಪದಚ್ಛೇದ ಮಾಡುವಾಗ ಆ ನಿಯಮಗಳನ್ನು ಅನ್ವಯಿಸಿ ಪದಗಳನ್ನು ವಿಂಗಡಿಸಿಕೊಳ್ಳಬೇಕು.

ಶಾರ್ದೂಲ ವಿಕ್ರೀಡಿತ

ಹೇಯಂಗಳ್ ಖಳಕರ್ಮಬಂಧನಕರಕ್ರೋಧಾದಿಗಳ್ ಮತ್ತುಪಾ
ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ
ಪಾಯಂಗಳ್ಗಡಿಮೆಂದು[1] ಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪುಪಾ
ಧ್ಯಾಯಜ್ಯೋತಿಸುಗೆಮ್ಮ ಚಿತ್ತಗೃಹದೊಳ್ರತ್ನತ್ರಯಜ್ಯೋತಿಯಂ ॥ ೧–೪

ಸುಖೋಪಾಯಂಗಳ್ಗಡಿಮೆಂದು [ಗಡಿಮೆಂದು]: ಹಳಗನ್ನಡ ಕಾವ್ಯಗಳಲ್ಲಿ ವ್ಯಾಪಕವಾಗಿ ಪ್ರಯೋಗವಾಗುವ **ಗಡ, ಗಡಂ, ಗಡಾ, ಗಡಿಂ** ಈ ಪದಗಳನ್ನು ಸಂದರ್ಭೋಚಿತವಾಗಿ ಅರ್ಥೈಸಿಕೊಳ್ಳುವುದು ಸಾಮಾನ್ಯವಾಚಕರಿಗೆ ಕಷ್ಟಸಾಧ್ಯವಾಗಿರುತ್ತದೆ. ಈ ವೃತ್ತಪದ್ಯದ ಮೂರನೆಯ ಪಾದದಲ್ಲಿರುವ ಸಂಧಿಪದದಲ್ಲಿ ಬರುವ **'ಗಡಿಂ'** ಪದವು ಬಹುವಚನ ಸೂಚಕ ಅವ್ಯಯವೆಂದು ಪ್ರೊ. ತಿ.ನಂ. ಶ್ರೀಕಂಠಯ್ಯನವರು **ಪ್ರಬುದ್ಧ ಕರ್ಣಾಟಕ**ದ ೨೮–೩ ನೆಯ ಸಂಚಿಕೆಯಲ್ಲಿ **'ಏನಿ–ಗಡಿಂ–ರೀ'** ಎಂಬ ತಮ್ಮ ಲೇಖನದಲ್ಲಿ ಸೂಚಿಸಿರುತ್ತಾರೆ. ಅವರು ಈ ಪದಗಳ ಅರ್ಥ ನಿಷ್ಕರ್ಷೆ ಮಾಡುವಲ್ಲಿ **ಗಡಿಂ** ಪದದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ಆದುದರಿಂದ ಈ ಪದಕ್ಕೆ ಸಂಬಂಧಿಸಿದ, ಆ ಲೇಖನದಲ್ಲಿನ ಆಯ್ದ ಭಾಗಗಳನ್ನು ವಾಚಕರ ಅನುಕೂಲಕ್ಕಾಗಿ ಇಲ್ಲಿ ನೀಡಲಾಗಿದೆ:

"... ಈ ರೂಪದ (ಮೇಲಿನ ಪ್ಯಾರಾದಲ್ಲಿ ಚರ್ಚಿಸಿರುವ ಎನ್+ಇಂ=ಏನಿಂ>ಏನಿ) ಕುರಿತು ವಿಚಾರ ಮಾಡುವ ಮೊದಲು ಇದೇ ರೀತಿಯ ಇನ್ನೊಂದರ ಕಡೆಗೆ ಗಮನವೆಳೆಯುವುದು ಅವಶ್ಯಕ. **'ಗಡಿಂ'** ಎಂಬುದೇ ಆ ಪ್ರಯೋಗ. ದೃಷ್ಟಿಗೆ ಬಿದ್ದ ಕೆಲವು ಉದಾಹರಣೆಗಳನ್ನು ಈ ಕೆಳಗೆ ಸಂಗ್ರಹಿಸಿದೆ. ಎಲ್ಲವೂ ಹಳಗನ್ನಡದವು.

(೧) ಇದು ಪಂಪನ 'ಆದಿಪುರಾಣ'ದ ಆರಂಭದ ಪದ್ಯಗಳಲ್ಲಿ ಒಂದು–

ಹೇಯಂಗಳ್ ಖಳಕರ್ಮಬಂಧನಕರಕ್ರೋಧಾದಿಗಳ್ ಮತ್ತುಪಾ
ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ
ಪಾಯಂಗಳ್ಗಡಿಮೆಂದುಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪುಪಾ
ಧ್ಯಾಯಜ್ಯೋತಿಸುಗೆಮ್ಮ ಚಿತ್ತಗೃಹದೊಳ್ರತ್ನತ್ರಯಜ್ಯೋತಿಯಂ ॥ (೧–೪)

(೨) ಮತ್ತೆ 'ಆದಿಪುರಾಣ'ದಲ್ಲಿ ಗರ್ಭಿಣಿಯಾದ ಯಶಸ್ವತೀ ಮಹಾದೇವಿಯನ್ನು ವರ್ಣಿಸುವ ಒಂದು ಪದ್ಯ ಹೀಗಿದೆ–

ಚತುರಂತಕ್ಷಿತಿ ಗರ್ಭ
ಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶ
ಸ್ವತಿಯ ಪದನ್ಯಾಸಂ ವಿಳ
ಸಿತಲಾಕ್ಷಾರಸಮಪೂರ್ವಮಣಿಕುಟ್ಟಿಮದೊಳ್ ॥ (೮–೩೨)

(೩) 'ಪಂಪಭಾರತ'ದಲ್ಲಿ, ನೆಲಮುಟ್ಟದ ಶರಪಂಜರದ ಮೇಲೆ ಬಿದ್ದಿದ್ದ ಭೀಷ್ಮನನ್ನು ಕವಿ ಹೀಗೆ ಶ್ಲಾಘಿಸುತ್ತಾನೆ–

ಗಡಿಪುದೆ ಮುಟ್ಟೆ ನಾಂ ನೆಲನನೇಕದು ಪೆಣ್ ಗಡಿಮೆಂದು ಮೆಯ್ಯೊಳ । (೧೧–೪೭)

(ಇಲ್ಲಿ **'ಗಡಿ–'** ಎಂಬುದಕ್ಕೆ ಕ ಪ್ರತಿಯಲ್ಲಿ **'ಗಡ–'** ಎಂದು ಪಾಠಾಂತರವುಂಟು.)

(೪) ರನ್ನನ 'ಗದಾಯುದ್ಧ'ದಲ್ಲಿ, ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿರುವಾಗ, ಅವನ ನೆಲೆಯನ್ನು ಇನ್ನೂ ಕಾಣದ ಭೀಮನು ಹೀಗೆ ಪ್ರತಿಜ್ಞೆ ತೊಡುತ್ತಾನೆ–

---

[1] ಮೂಲಪಾಠ–'ಸುಖೋಪಾಯಂಗಳ್ಗ**ಡಿ**ಮೆಂದು', ಕೆಜಿ ಯವರ ಪಾಠ–'ಸುಖೋಪಾಯಂಗಳ್ಗ**ಡ**ಮೆಂದು', ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ. ಆದರೆ, ಮೂಲಪಾಠದಲ್ಲಿರುವ 'ಸುಖೋಪಾಯಂಗಳ್ಗಡಿಮೆಂದು' ಪದದ ಅಂತ್ಯದಲ್ಲಿರುವ '[ಳ್ಗಡಿ]**ಮೆಂ**ದು' ಎಂದು ಅಚ್ಚಾಗಿರು ವುದು **ಅಶುದ್ಧ**ವೆಂದೂ, '[ಳ್ಗಡಿ]**ವೆಂ**ದು' ಎಂಬುದು **ಶುದ್ಧ**ವೆಂದೂ ತೋರಿಸಿ, ಇದನ್ನು ತಿದ್ದಿಕೊಳ್ಳಲು **ಶೋಧನಪತ್ರಿಕೆ**ಯಲ್ಲಿ ಸೂಚಿಸಿರು ತ್ತಾರೆ. ಆದರೆ, ಮುಂದೆ ಎಂಟನೆಯ ಆಶ್ವಾಸದ ೩೨ನೆಯ ಕಂದಪದ್ಯದ ಎರಡನೆಯ ಪಾದದಲ್ಲಿ (ಮೂಲ ಕೃತಿಯ ಪುಟ ಸಂ. ೨೦೦) 'ಗಡಿ**ಮೆಂ**ದು' ಎಂದೇ ಅಚ್ಚಾಗಿರುತ್ತದೆ. ಸಂಪಾದಕರು ಇದಕ್ಕೆ ಶೋಧನಪತ್ರಿಕೆಯಲ್ಲಿ ಶುದ್ಧ–ಅಶುದ್ಧವನ್ನು ಸೂಚಿಸಿರುವುದಿಲ್ಲ. ಆದುದರಿಂದ, ೮ ನೆಯ ಆಶ್ವಾಸದ ೩೨ನೆಯ ಪದ್ಯದಲ್ಲಿರುವಂತೆಯೇ (೮–೩೨), ಈ ವೃತ್ತಪದ್ಯದಲ್ಲಿಯೂ '[ಳ್ಗಡಿ]ಮೆಂದು' ಎಂಬ ರೂಪವನ್ನೇ ಸ್ವೀಕರಿಸಿದೆ.

[ಆ]**ಹುತಿ ಮಾಟ್ಪಿಂ <u>ಗಡಿವೆಂದು</u> ಪೂಣ್ದೊದಱಿದಂ ಕೌರವ್ಯಕೋಳಾಹಳಂ ॥** (ಗದಾ., ೬–೨೩=ಕಾವ್ಯಾವ., ೧೨೭)

(ಗದಾಯುದ್ಧದ ಮುದ್ರಿತ ಪ್ರತಿಯಲ್ಲಿ 'ಗಡವೆಂದು' ಎಂಬ ಪಾಠವಿದೆ. ಮೇಲೆ ಅಂಗೀಕರಿಸಿರುವುದು 'ಕಾವ್ಯಾವಲೋಕನ' ದಲ್ಲಿ ಉದಾಹೃತವಾಗಿರುವ ಪಾಠ.)

(೫–೬) ಮುಂದಿನ ಎರಡು ಪದ್ಯಗಳೂ 'ಕಾವ್ಯಾವಲೋಕನ'ದಲ್ಲಿ ಉದಾಹೃತವಾಗಿ ದೊರೆಯತಕ್ಕವು; ಆಕರ ತಿಳಿಯದು_

ಗಳ ನೀವೆಲ್ಲರುವೆನ್ನ ಬರ್ದುಗೆರ್ಯನಾ ನಲ್ಲಂಗೆ ಪೇೞಿಂ <u>ಗಡಿಂ</u> ॥ (ಪ. ೧೨೯)

(ಇಲ್ಲಿ '**ಗಡಿಂ**' ಎಂಬುದಕ್ಕೆ '**ಗಡಾ**' ಎಂದು ಪಾಠಾಂತರವುಂಟು.)

ಪೊಡವಡಿಂ <u>ಗಡಿವೆಂದು</u> ನೀೞಿರನೂಱು ಸಾಱುವ ಮಾಟ್ಕೆಯಿಂ । ಪ. ೨೨೬)

[ಮೇಲಿನ ೩ ರಿಂದ ೬ ರವರೆಗಿನ ಉದ್ಧೃತ ಪದ್ಯಗಳಲ್ಲಿ ಸ್ಥಳಾವಕಾಶದ ದೃಷ್ಟಿಯಿಂದ 'ಗದಾಯದ್ಧ'ದ ಪದ್ಯಗಳಲ್ಲಿ ಕ್ರಮವಾಗಿ ಎರಡು ಮತ್ತು ನಾಲ್ಕನೆಯ ಪಾದಗಳನ್ನೂ, 'ಕಾವ್ಯವಲೋಕನ'ದ ಪದ್ಯಗಳಲ್ಲಿ ಕ್ರಮವಾಗಿ ನಾಲ್ಕು ಮತ್ತು ಮೂರನೆಯ ಪಾದಗಳನ್ನು ಮಾತ್ರ ನೀಡಿದೆ.]

'**ಏನ್+ಇಂ=ಏನಿಂ**' ಆಗಿರುವಂತೆ '**ಗಡ**' ಎಂಬ ಹಳಗನ್ನಡದ ಅವ್ಯಯಕ್ಕೆ '**–ಇಂ**' ಸೇರಿ ಮೇಲಿನ ಉದಾಹರಣೆಗಳ '**ಗಡಿಂ**' ಆಗಿದೆ. '**ಏನಿ, ಗಡಿಂ**' ಎಂಬ ಪ್ರಯೋಗಗಳು ಕೆಲವು ಮಟ್ಟಿಗೆ ವಿಲಕ್ಷಣವಾಗಿ ತೋರುವುದರಿಂದ, ಪ್ರತಿಕಾರರು ಅನೇಕ ಸಂದರ್ಭಗಳಲ್ಲಿ ಅವಕ್ಕೆ ಹತ್ತರಿ ಹಿಡಿದು '**ಏನು, ಗಡಾ (ಗಡಂ)**' ಎಂದು ಬಳಕೆಯ ರೂಪಗಳಿಗೆ ಮಾರ್ಪಡಿಸಿದ್ದರೆ ಅದೇನೂ ಆಶ್ಚರ್ಯವಲ್ಲ. ಈಗ ಕಣ್ಣಿಗೆ ಬೀಳುವಷ್ಟು ಕಡೆಗಳಲ್ಲಾದರೂ ಈ ಅಸಮಾನ್ಯ ರೂಪಗಳನ್ನು ಉಳಿಸಿಕೊಟ್ಟಿರುವುದಕ್ಕಾಗಿ ನಾವು ಪ್ರತಿಕಾರರಿಗೆ ಕೃತಜ್ಞರಾಗಿರಬೇಕು !

ಈಗ ಈ ರೂಪಗಳು ಬರುವ ಸಂದರ್ಭಗಳನ್ನು ಪರಿಶೀಲಿಸಬಹುದು. ಪ್ರತಿಯೊಂದೂ ಸಂಬೋಧನೆಯ ಸನ್ನಿವೇಶ '**ಏನಿ**' (ಏನಿಂ) ಎಂಬುದಂತೂ ಶ್ರೋತೃಗಳ ಗಮನವನ್ನು ಸೆಳೆಯುವುದಕ್ಕಾಗಿಯೇ ಬಂದಂತಿದೆ; ಇಲ್ಲೆಲ್ಲಾ ಬಹುವಚನದಲ್ಲೇ ಸಂಬೋಧನೆಯಿರುವುದನ್ನೂ[೧] ಮುಖ್ಯವಾಗಿ ಗಮನಿಸಬೇಕು. ಇದು ಹೊಸಗನ್ನಡದಲ್ಲಿ 'ಏನ್ರೀ, ಪಶುಪತಿಭಟ್ಟರೇ!', 'ಏನು ಸ್ವಾಮಿ! ...' ಎಂದ ಹಾಗೆ. '**ಗಡಿಂ**' ಎಂಬ ಪ್ರಯೋಗವೂ ಇಲ್ಲಿಗೇ ಮುಟ್ಟುತ್ತದೆ. '**ಗಡ**' ಎಂಬ ಅವ್ಯಯಕ್ಕೆ ಲಿಂಗವಚನಪುರುಷಗಳ ವಿವಕ್ಷೆಯಿಲ್ಲ. ಆದರೆ, '**ಗಡಿಂ**' ಎಂಬುದು ಅನೇಕ ಶ್ರೋತೃಗಳನ್ನು ನೇರವಾಗಿ ಉದ್ದೇಶಿಸಿ ಹೇಳುವ ಸಂದರ್ಭಗಳಲ್ಲಿ ಬಂದಂತಿದೆ. ಮೇಲಿನ ೪, ೫, ೬ ನೆಯ ಉದಾಹರಣೆಗಳಲ್ಲಿ ಸಂಬೋಧನೆಗೆ ವಿಷಯವಾಗಿರುವವರನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿರುವುದರಿಂದ ಬಹುವಚನ ವಿವಕ್ಷೆ ಎದ್ದು ತೋರುತ್ತದೆ. ೧, ೨, ೩ ನೆಯ ಉದಾಹರಣೆಗಳಲ್ಲಿ ಉಕ್ತಿ ಜನಸಾಮಾನ್ಯವನ್ನು ಕುರಿತದ್ದು (೧ ನೆಯ ಉದಾಹರಣೆಯಲ್ಲಿ **ಭವ್ಯಜನಮಂ** ಎಂಬ ಮಾತೇ ಇದೆ). ಆದಕಾರಣ ಇಲ್ಲಿ ಕೂಡ ಬಹುವಚನಾರ್ಥ ಅಪ್ರಸಕ್ತವಲ್ಲ; ವಿವಕ್ಷಿತವೆಂದೇ ಒಪ್ಪಬಹುದು.

ಅಂತೂ '**ಇಂ (>ಇ)**' ಎಂಬುದು '**ಏನ್ (>ಏನು), ಗಡ**' ಎಂಬ ಶಬ್ದಗಳಿಗೆ ಸೇರಿ, '**ನೀಮ್ (>ನೀವು)**' ಎಂಬ ಮಧ್ಯಮಪುರುಷ ಬಹುವಚನದ ಸರ್ವನಾಮಕ್ಕೆ ಒಂದುವೇಳೆ ಸಂಬೋಧನ ವಿಭಕ್ತಿ ಇದ್ದಿದ್ದರೆ ಹೇಗೋ ಹಾಗೆ ಅರ್ಥ ಕೊಡುತ್ತದೆ. ಇಂಗ್ಲಿಷಿನಲ್ಲಿ 'You ! Hear me' ಎಂದಿರುವಂತೆ ಕನ್ನಡದಲ್ಲಿ ಸರ್ವನಾಮಕ್ಕೆ ಸಂಬೋಧನ ವಿಭಕ್ತಿಯಲ್ಲಿ ಪ್ರಯೋಗವಿಲ್ಲದ ಕಾರಣದಿಂದಲೇ ಈ ಬಗೆಯ ಮಾತಿನ ರೂಢಿ ತಲೆಹಾಕಿತೋ ಏನೋ.

'**ಇಂ (>ಇ)**' ಎಂಬುದಕ್ಕೆ ಹೀಗೆ ಮಧ್ಯಮಪುರುಷ ಬಹುವಚನದ ಅರ್ಥವನ್ನು ಕೊಡುವ ಶಕ್ತಿ ಎಲ್ಲಿಂದ ಬಂದಿತು? ಹಳಗನ್ನಡದಲ್ಲಿ '**–ಇಂ**' ಮಧ್ಯಮಪುರುಷ ಬಹುವಚನದ ಪ್ರತ್ಯಯಗಳಲ್ಲೊಂದು. ವಿಧ್ಯರ್ಥದಲ್ಲಿಯೂ ಇದು ಧಾತುವಿಗೆ ಹತ್ತುತ್ತದೆ. '**ನಂಬಿಂ ನಂಬಲಿಮಿಂದಿಂ । ಗೊಂಬತ್ತುದಿನಂ ದಲೆಮ್ಮ ಬೆನ್ನಲೆ ನಿಂದಿರ್**' ಎಂದು ಯುದ್ಧ ಕಾಲದಲ್ಲಿ ಯುಧಿಷ್ಠರನು ಭೀಷ್ಮನಿಗೆ ಹೇಳುವ ಮಾತನ್ನು 'ಪಂಪಭಾರತ'ದಿಂದ (೧೧–೨೯) ಇದಕ್ಕೆ ನಿದರ್ಶನವಾಗಿ ಎತ್ತಿಕೊಡಬಹುದು. ನಡುಗನ್ನಡದಲ್ಲಿ '**–ಇಂ**' ಎಂಬುದರ ಅಂತ್ಯಬಿಂದು ಲೋಪವಾಗಿ, '**ನಂಬಿ (>ನಂಬಿಂ), ಮಾಡಿ (>ಮಾಡಿಂ), ನುಡಿಯಿ (>ನುಡಿಯಿಂ)**' ಎಂಬಂತೆ ರೂಪಗಳಾಗುತ್ತವೆ. '**ಗಡಿಂ, ಏನಿಂ (>ಏನಿ)**'_ ಎಂಬೆಡೆಗಳಲ್ಲಿರುವ '**–ಇಂ (>ಇ)**' ಈ ಮಧ್ಯಮಪುರುಷ ಬಹುವಚನ ಪ್ರತ್ಯಯವಲ್ಲದೆ ಬೇರೆಯಲ್ಲ. ಹಳಗನ್ನಡದಲ್ಲಿ '**–ಅಯ್, –ಇರ್, –ಎನ್, –ಎವು**' ಮೊದಲಾದ ಆಖ್ಯಾತಪ್ರತ್ಯಯಗಳು ಧಾತುಗಳಿಗೆ ಮಾತ್ರವಲ್ಲದೆ, ಗುಣವಚನ, ಸಂಖ್ಯಾವಾಚಕ, ನಾಮಪದ ಮೊದಲಾದವಕ್ಕೆ ನೇರವಾಗಿ ಸೇರುವ ವಿಷಯ ಪ್ರಸಿದ್ಧವಾಗಿದೆ[೨] (ಶಬ್ದಮಣಿದರ್ಪಣ, ಸೂ. ೧೯೯). '**ಒಳ್ಳಿದನಯ್, ಒರ್ವಿರ್, ಕವಿಕೇಶವನೆಂ, ಉದ್ಧತರೆವು**' _ಹೀಗೆ ಉದಾಹರಣೆಗಳನ್ನು ಕೇಶಿರಾಜನ ಪಟ್ಟಿಯಿಂದಲೇ ಎತ್ತಿಕೊಡಬಹುದು. ಪ್ರಕೃತದಲ್ಲಾದರೆ, '**ಗಡಿಂ**' ಎಂಬಲ್ಲಿ '**ಗಡ**' ಎಂಬ ಅವ್ಯಯಕ್ಕೆ[೩] ಆಖ್ಯಾತಪ್ರತ್ಯಯ ಹತ್ತಿದೆ; ಈ ಬಗೆಯ ಬೇರೆ ವಿದರ್ಶನಗಳು ಗೋಚರವಾಗಿಲ್ಲ. ಅಲ್ಲದೆ ಆ ಧಾತುಗಳಿಗೆ ಮಧ್ಯಮ ಪುರುಷ ಬಹುವಚನದಲ್ಲಿ '**–ಇರ್**' ಎಂಬ ಪ್ರತ್ಯಯ ಹತ್ತುವುದೇ ರೂಢಿ. '**–ಇಂ**' ಎಂಬುದೂ ಅಪೂರ್ವ. ಇದು ನಮ್ಮ ರೂಪಗಳ ಮತ್ತೊಂದು ವೈಲಕ್ಷಣ್ಯ.

... ಆಖ್ಯಾತಪ್ರತ್ಯಯವು ಅಧಾತುಗಳಿಗೂ ಹತ್ತುವುದು ಅಪ್ರಚುರವಲ್ಲವಾದರೂ '**ಗಡಿಂ, ಏನಿ**' _ಎಂಬ ಕಡೆಗಳಲ್ಲಿ ಸೇರಿರುವುದು '**–ಇಮ್ (ಇ)**' ಎಂಬ ಪ್ರತ್ಯಯ; ರೂಢಿಯಾದ '**–ಇರ್**' ಅಲ್ಲ. ಅಲ್ಲದೆ ಇದು ಇಲ್ಲಿ ಅವ್ಯಯಗಳಿಗೆ ಸೇರಿ, ಸಂಬೋಧನ ವಿಭಕ್ತಿಯ ಅರ್ಥವನ್ನು ಕೊಡುವುದು ವಿಶೇಷಾಂಶ. ...."

ಈ ಲೇಖನಕ್ಕೆ ಸಂಬಂಧಿಸಿದ ಅಡಿಟಿಪ್ಪಣಿಗಳು:

[೧] ಸಂಬೋಧನೆಗೆ ಏಕವಚನವು ವಿಷಯವಾದಾಗ '**ಏನು, ಗಡ**' ಎಂಬ ರೂಪಗಳೇ ದೊರೆಯುತ್ತವೆ. ಒಂದೊಂದು ಉದಾಹರಣೆ ಸಾಕು: 'ಏನುಸಾರಥಿ ಸರಳು ಪಾಂಡವ । ಸೇನೆಯನು ಗೆಲಲಹುದೆ ...' (ಕುಮಾರವ್ಯಾಸ ಭಾರತ, ೮–೨೫, ೧೩; ಕೆ–೨೦೫ ಸಂಖ್ಯೆಯ ಓಲೆಯ ಪ್ರತಿಯಲ್ಲೂ 'ಏನು' ಎಂದೇ ಇದೆ); 'ಬಗೆಯೊಳ್ ಬೇಱೊಂದನಣಂ । ಬಗೆಯಲ್ ಗಡ ನಿನಗೆ ಸುಮತಿ ಬೇಱೂಂ ಬೇಱೇ ॥' (ಕಾವ್ಯಾವಲೋಕನ, ೪೧೨)

[೨] .... ಹೀಗೆ ನಾಮಪದ, ಗುಣವಚನ ಮೊದಲಾದವಕ್ಕೆ ಆಖ್ಯಾತಪ್ರತ್ಯಯಗಳು ಹತ್ತಿ ಆಯಾ ಪುರುಷದಲ್ಲಿ ಕ್ರಿಯಾರ್ಥವನ್ನು ಕೊಡುವುವೆಂದೇ ಸಾಮಾನ್ಯ ಭಾವನೆ. '**ಒಳ್ಳಿದನಯ್=(ನೀನು) ಒಳ್ಳೆಯವನಾಗಿರುವೆ; ಉದ್ಧತರೆವು=(ನಾವು) ಉದ್ಧತರಾಗಿದ್ದೇವೆ**' –ಹೀಗೆ ಅರ್ಥ ಹೇಳುವುದು ರೂಢಿಯಾಗಿದೆ. ಆದರೆ '... ಲಲಿತಾಂಗ ದೇವಂಗೆ ದೇವಿಯೆಂ ಸ್ವಯಂಪ್ರಭೆಯೆನಾಗಿ ... ದೇವಾಗಮನಮಂ ಕಂಡು ಜಾತಿ ಸ್ಮರೆಯೆನಾಗಿ ... ಮೂರ್ಛೆಗೆ ಸಂದೆಂ' (ಚಾವುಂಡರಾಯ ಪುರಾಣ–ಆದಿಪುರಾಣ, ಪು. ೨೭); '... ತಂದೆಯ ಶೋಕಮುನಿರ್ವೆಮುಂ ಮುನಿವರಂ ತವೆ ಕೊಂದೊಡನೀಗುವಂ' (ಪಂಪಭಾರತ, ೧೨–೩೬; ಕಾವ್ಯಾವಲೋಕನ, ೧೫೫೭ ಪಾಠ) –ಇಂಥ ಕಡೆಗಳಲ್ಲಿ ಮೇಲಿನ ವಿವರಣೆ ಹೊಂದುವುದಿಲ್ಲ. ಉದಾಹರಣೆಗೆ, 'ಇರ್ವೆಮುಂ' ಎಂಬುದಕ್ಕೆ 'ನಾವಿಬ್ಬರೂ' ಎಂದು ಅರ್ಥ. ಈ ಬಗೆಯ ಪ್ರಯೋಗದಲ್ಲಿ ಕ್ರಿಯಾರ್ಥವಿರಲೇಬೇಕೆ ಹೇಗೆ ಎಂಬುದನ್ನು ಕುರಿತು ಕೇಶಿರಾಜನು ಏನನ್ನು ಹೇಳಿಲ್ಲ. ... ಈ ಪ್ರಶ್ನೆಯ ವಿವೇಚನೆಗೆ ಇಲ್ಲಿ ಅವಕಾಶವಿಲ್ಲ. ...

[೩] ವ್ಯಾಕರಣದ ಹೇಳಿಕೆಯಂತೆ '**ಏನ್**' ಸರ್ವನಾಮ. ಆದರೆ 'ಏನಿಂ (ಏನಿ)' ಎಂಬಲ್ಲಿ ಅದು ಅವ್ಯಯದಂತೆಯೇ ವರ್ತಿಸುತ್ತದೆ.

ಚಂಪಕಮಾಲೆ **ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣರೂಪಮಂ**
ಧರಿಯಿಸಿ[1] ನಿಂದುದಲ್ಲದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆರೆದಪೆನಾಸರಸ್ವತಿಯೆ ಮಾಱ್ಕೆಮಗಿಲ್ಲಿಯೆ ವಾಗ್ವಿಳಾಸಮಂ ॥ ೧–೯

ಸರಸ್ವತಿ...ಅದು...ನಿಂದುದು (ಪದ್ಯ/ವಚನ ೧–೯): ಈ ವೃತ್ತದ ಮೊದಲನೆಯ ಪಾದದಲ್ಲಿರುವ **ಸರಸ್ವತಿ**ಯು ಇಕಾರಾಂತ ಸ್ತ್ರೀಲಿಂಗ ನಾಮಪದವಾಗಿದ್ದು, ಆ **ಸರಸ್ವತಿ**ಯನ್ನು ನಿರ್ದೇಶಿಸುವಾಗ [ಅದರ ಮುಂದಿನ ಪದದಲ್ಲಿ ಸ್ತ್ರೀಲಿಂಗವಾಚಕ ಸರ್ವನಾಮಪದವಾದ **ಅವಳು** ಎಂಬುದರ ಬದಲಿಗೆ] **ಅದು** (ಬೇಱದು=ಬೇರೆ+**ಅದು**) ಎಂಬ ನಪುಂಸಕಲಿಂಗದ ಸರ್ವನಾಮಪದವನ್ನೂ, ಎರಡನೆಯ ಪಾದದಲ್ಲಿ **ನಿಂದುದು** (ನಿಂದುದಲ್ಲದುವೆ=**ನಿಂದುದು**+ ಅಲ್ತು+ಅದುವೆ) ಎಂಬ ನಪುಂಸಕಲಿಂಗ ಪ್ರತ್ಯಯವುಳ್ಳ ಕ್ರಿಯಾಪದವನ್ನೂ ಕವಿಯು ಪ್ರಯೋಗಿಸಿದ್ದಾನೆ. ಆದುದರಿಂದ ಈ ವಾಕ್ಯದಲ್ಲಿ ಕರ್ತೃ ಮತ್ತು ಕ್ರಿಯಾಪದಗಳಲ್ಲಿರುವ ಲಿಂಗಪ್ರತ್ಯಯಗಳು ಒಂದಕ್ಕೊಂದು ಒಡಂಬಡದಿರುವುದು ಸರಿಯಷ್ಟೆ. ವಾಚಕರ ಅನುಕೂಲಕ್ಕಾಗಿ ಕಾವ್ಯದಲ್ಲಿ ಮುಂದೆ ಬರುವ ಇಂತಹ ಪ್ರಯೋಗಗಳಿಗೆ ವ್ಯಾಕರಣ ನಿಯಮಾನುಸಾರವಾದ ಸಮಾಧಾನವನ್ನು ಇಲ್ಲಿಯೇ ನೀಡುವುದು ಯುಕ್ತವೆನಿಸಿ ಈ ಕೆಳಗಿನ ವಿವರಣೆಯನ್ನು ನೀಡಿದೆ. ಈ ಬಗ್ಗೆ, ಕೇಶಿರಾಜನು **ಶಬ್ದಮಣಿದರ್ಪಣಂ** ವ್ಯಾಕರಣ ಗ್ರಂಥದ **ನಾಮಪ್ರಕರಣಂ** ಅಧ್ಯಾಯದಲ್ಲಿ ಸೂತ್ರ ೯೮ ರಲ್ಲಿ (ಕನ್ನಡದಲ್ಲಿಯ ಸ್ತ್ರ್ಯಾದಿಲಿಂಗವಿಭಾಗಂ) ಹೀಗೆ ವಿವರಿಸಿದ್ದಾನೆ:

ನೀನಱ ಕರ್ಣಾಟಕದೊಳ್
ಪೀನಂ ಸ್ತ್ರೀಪುಂನಪುಂಸಕೋಭಯಪುಂಸ್ತ್ರೀ
ಸ್ತ್ರೀನಪ್ಸಮಸ್ತವಾಚ್ಯಾ
ನೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ ॥ (ಶಬ್ದಮಣಿದರ್ಪಣಂ, ನಾಮಪ್ರಕರಣಂ, ಸೂತ್ರಂ ೯೮)

ವೃತ್ತಿ: ಕರ್ಣಾಟಕ ಭಾಷೆಯೊಳ್ ಪಿರಿದುಂ (೧) ಸ್ತ್ರೀಲಿಂಗಮೆಂದುಂ, (೨) ಪುಲ್ಲಿಂಗಮೆಂದುಂ, (೩) ನಪುಂಸಕ ಲಿಂಗಮೆಂದುಂ, (ಉಭಯ) (೪) ಪುಂಸ್ತ್ರೀಲಿಂಗಮೆಂದುಂ, (೫) ಸ್ತ್ರೀನಪುಂಸಕಲಿಂಗಮೆಂದುಂ, (೬) ಪುಂನಪುಂಸಕಲಿಂಗ ಮೆಂದುಂ, (೭) ತ್ರಿವಿಧಲಿಂಗಮೆಂದುಂ, (೮) ವಿಶೇಷ್ಯಾಧೀನಲಿಂಗಮೆಂದುಂ, (೯) ಅವ್ಯಯಲಿಂಗಮೆಂದುಂ ಲಿಂಗಮೊಂಬತ್ತು ತೆಱಂ.

ಪ್ರಯೋಗಂ–ಸ್ತ್ರೀನಪುಂಸಕಕ್ಕೆ: ಆ ಪೆಣ್ ಜಾಣೆ, ಆ ಪೆಣ್ ಬಂದುದು. ಆ ಕನ್ನಿಕೆ ಸಲಕ್ಷಣೆ, ಈ ಕನ್ನಿಕೆ ಪೊಲ್ಲದು. ಸಿರಿ, ಸರಸ್ವತಿ, ದೇವತೆ ಎಂಬಿವುಮಂತೆ.

ಪರಮಜಿನೇಂದ್ರವಾಣಿಯೆ **ಸರಸ್ವತಿ ಬೇಱದು** ಪೆಣ್ಣ ರೂಪಮಂ ಧರಿಯಿಸಿ **ನಿಂದುದಲ್ಲದುವೆ...** (೪)
(ಪಂಪಮಹಾಕವಿವಿರಚಿತ ಆದಿಪುರಾಣಂ, ೧–೯)

---

[1] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಬೇಱದು ಪೆಣ್ಣರೂಪಮಂ ಧರಿಯಿಸಿ', ಎಫ್. ಕಿಟ್ಟೆಲ್ ಸಂಪಾದಿತ ಕೇಶಿರಾಜನ ಶಬ್ದಮಣಿ ದರ್ಪಣಂ, ಸೂತ್ರಂ ೮೮, ಪ್ರಯೋಗಂ: ಸ್ತ್ರೀನಪುಂಸಕಕ್ಕೆ–ನೀಡಿರುವ ನಾಲ್ಕನೆಯ ವೃತ್ತಭಾಗದ ಉದ್ಧೃತವಾಕ್ಯದಲ್ಲಿರುವ ಪಾಠ–'ಬೆರದು ಪೆಣ್ರೂಪಮಮಂ ಧರಿಸಿ', ಕ.ಸಾ.ಪ. ಸಂಪಾದಿತ ಕೃತಿಯಲ್ಲಿ ಇದೇ ಸೂತ್ರಂ ೮೮ ರ ಪ್ರಯೋಗದಲ್ಲಿರುವ ಪಾಠ–'ಬೆಱೆದು ಪೆಣ್ರೂಪಮಂ ಧರಿಯಿಸಿ', ಈ ಎರಡೂ ಸಂಪಾದಿತ ಕೃತಿಗಳಲ್ಲಿ ಉದ್ಧೃತವಾಗಿರುವ ಪಾಠಗಳು ಛಂದೋದೋಷದಿಂದಲೂ ಕೂಡಿರುವುವು. ಆದುದರಿಂದ ಇಲ್ಲಿ ಮೂಲಪಾಠವನ್ನು ಸ್ವೀಕರಿಸಿದೆ.

ಬಾರಿಸಿದುವು ಬಿಡದೆ ಜಡಿದು ವನ**ದೇವತೆಗಳ್...** (ಪಂಪಮಹಾಕವಿವಿರಚಿತ ಆದಿಪುರಾಣಂ, ೯–೯೩) (೬)

ಇಲ್ಲಿ **ಸರಸ್ವತಿ** ಎಂಬ ನಾಮಪದವು, ಕೇಶಿರಾಜನ **ಶಬ್ದಮಣಿದರ್ಪಣಂ**ನ ಈ ಮೇಲಿನ ಸೂತ್ರದ ಪ್ರಕಾರ, ಉಭಯ ಲಿಂಗ ಅಂದರೆ **ಸ್ತ್ರೀನಪುಂಸಕಲಿಂಗ** ನಾಮಪದವಾಗಿರುತ್ತದೆ. ಆದುದರಿಂದ ಇದಕ್ಕೆ ಅನ್ವಯವಾಗುವ ಕ್ರಿಯಾಪದವು ಸ್ತ್ರೀಲಿಂಗ ಪ್ರತ್ಯಯವುಳ್ಳ ಕ್ರಿಯಾಪದವಾಗಿರಬಹುದು ಇಲ್ಲವೇ ನಪುಂಸಕಲಿಂಗ ಪ್ರತ್ಯಯವುಳ್ಳ ಕ್ರಿಯಾಪದವೂ ಆಗಿರಬಹುದು. ಹಾಗೆಯೇ **ಸ್ತ್ರೀನಪುಂಸಕಲಿಂಗ** ನಾಮಪದವಾದ **ಸರಸ್ವತಿ**ಯನ್ನು ನಿರ್ದೇಶಿಸುವ ಸರ್ವನಾಮವು ಸ್ತ್ರೀಲಿಂಗವಾಚಕ ಸರ್ವನಾಮವಾಗಿರಬಹುದು ಇಲ್ಲವೇ ನಪುಂಸಕಲಿಂಗವಾಚಕ ಸರ್ವನಾಮವೂ ಆಗಿರಬಹುದು. ಇಂತಹ ಸಂದರ್ಭಗಳಲ್ಲಿ ವಾಕ್ಯದ ಸಂದರ್ಭಕ್ಕೆ ತಕ್ಕಂತೆ ಕ್ರಿಯಾಪದದ ಲಿಂಗಪ್ರತ್ಯಯವನ್ನು ಮತ್ತು ಸರ್ವನಾಮವನ್ನು ಪ್ರಯೋಗಿಸ ಬಹುದಾಗಿದೆ. ಈ ವೃತ್ತದಲ್ಲಿ **ಸರಸ್ವತಿ** ನಾಮಪದಕ್ಕೆ ಅನ್ವಯವಾಗುವಂತೆ **ಅದು** ಎಂಬ ನಪುಂಸಕಲಿಂಗ ಸರ್ವನಾಮವನ್ನೂ ಹಾಗೂ ನಪುಂಸಕಲಿಂಗದ ಪ್ರತ್ಯಯವನ್ನುಳ್ಳ **ನಿಂದುದು** ಎಂಬ ಕ್ರಿಯಾಪದವನ್ನು ಕವಿಯು ಪ್ರಯೋಗಿಸಿದ್ದಾನೆ. ಈ ಮೇಲಿನ ಸೂತ್ರಕ್ಕೆ ನೀಡಿರುವ **ಪ್ರಯೋಗಂ**ನಲ್ಲಿ ಕೇಶಿರಾಜನು ಕವಿಪ್ರಯೋಗದ ಉದಾಹರಣೆಗೆ ಇದೇ ವೃತ್ತದ ಒಂದು ಮತ್ತು ಎರಡನೆಯ ಪಾದವನ್ನು ಮತ್ತು **ದೇವತೆ** ಎಂಬ ನಾಮಪದಕ್ಕೆ ೯ನೆಯ ಆಶ್ವಾಸದ ೯೩ನೆಯ ಕಂದಪದ್ಯದ ನಾಲ್ಕನೆಯ ಪಾದವನ್ನು ಉದ್ಧರಿಸಿದ್ದಾನೆ. ಹಾಗೆಯೇ ಈ ಕಾವ್ಯದಲ್ಲಿ ಸಾಂದರ್ಭಿಕವಾಗಿ ಕವಿಯು ಪ್ರಯೋಗಿಸಿರುವ **ಮೋಕ್ಷಲಕ್ಷ್ಮಿ** ಎನ್ನುವ ಪದವೂ ಸ್ತ್ರೀನಪುಂಸಕಲಿಂಗ ನಾಮಪದವಾಗಿದೆ. ಈ ಮೇಲಿನ ವ್ಯಾಕರಣ ಸೂತ್ರವನ್ನನುಸರಿಸಿಯೇ ಈ ಪದದ ಅರ್ಥಾನ್ವಯವನ್ನು ಮಾಡಬೇಕಾಗುತ್ತದೆ.

ಪುಂನಪುಂಸಕಲಿಂಗದ ವಿವರಣೆಗೆ ಆರನೆಯ ಆಶ್ವಾಸದ ಎಂಬತ್ತನೆಯ ಕಂದಕ್ಕೆ (೬–೮೦) ನೀಡಿರುವ **ವ್ಯಾಕರಣವಿಶೇಷ**ವನ್ನು ನೋಡಿರಿ. ಹೆಚ್ಚಿನ ವಿವರಣೆಗೆ ಕೇಶಿರಾಜ ವಿರಚಿತ **ಶಬ್ದಮಣಿದರ್ಪಣಂ** ಗ್ರಂಥದ (ಸಂ.: ಡಾ. ಡಿ.ಎಲ್. ನರಸಿಂಹಾಚಾರ್) ೩ ನೆಯ ಸಂಧಿ–**ನಾಮಪ್ರಕರಣಂ**ನ ೯೮ ನೆಯ ಸೂತ್ರ ಮತ್ತು ಅದರಡಿಯಲ್ಲಿರುವ ಟೀಕು, ವೃತ್ತಿ, ಪ್ರಯೋಗಗಳನ್ನು ನೋಡಿರಿ.

ಅಲಂಕಾರ ವಿಚಾರ (ಕವಿಸಮಯ):

ಮತ್ತೇಭ ವಿಕ್ರೀಡಿತ
ಪ್ರಿಯಹಂಸೀಯುತಹಂಸನಾದೆಯ ಮಹಾಕುತ್ಕೀಲಕೂಟಪ್ರಭೇ
ದೆಯ ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತಾ
ಲಿಯುತೋನ್ಮಾದೆಯ ತದ್ವಿದೇಹಜನತಾಸ್ವಾಂತಾರ್ಪಿತೋದ್ಯತ್ಪ್ರಮೋ
ದೆಯ ಸೀತೋದೆಯ ಪೋಲ್ವೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ ॥ ೧-೫೪

ಅದು ನೀರೇಭ[1]ಕರಾಭಿಘಾತವಿಚಳದ್ವಾರಾಶಿಯೊಳ್ ಪೋಗಿ ಕೂ
ಡಿದೊಡಾವಾರ್ಧಿಯ ಪೆಂಪುಮಾತೊಱೆಯೊಳಾಯ್ತಿಂತಾದಪೆಂಪಿಂದಮು
ಬ್ಬಿದ ಗುಣ್ಪಿಂದಮಿದಬ್ಧಿಗಗ್ಗಳಮೆನಲ್ ಕುಂದೊಂದು ಕಣ್ಗೆತ್ತಿದಂ
ತಿದುದಲ್ನೇರ್ಗಿಱಿದೆಂದೊಡಾವ ತೊಱೆಯುಂಸೀತೋದೆಯಂಪೋಲ್ಗುಮೇ ॥ ೧-೫೫

ಪ್ರಿಯಹಂಸೀಯುತಹಂಸನಾದೆಯ (೧-೫೪) ಮತ್ತು ನೀರೇಭಕರಾಭಿಘಾತವಿಚಳತ್ (೧-೫೫):

೧-೫೪ ನೆಯ ವೃತ್ತಪದ್ಯದ ಮೊದಲನೆಯ ಪಾದದಲ್ಲಿ ವರ್ಣಿತವಾಗಿರುವ '**ಪ್ರಿಯಹಂಸೀಯುತಹಂಸನಾದೆಯ**' (ಪ್ರಿಯವಾದ ಹಂಸಗಳಿಂದ ತುಂಬಿ ಹಂಸ ನಿನದೆಯಾದ, ಅಂದರೆ ಹಂಸಧ್ವನಿಯನ್ನು ಹೊರಡಿಸುವವಳಾದ [ಸೀತೋದಾನದಿ]) ಮತ್ತು ೧-೫೫ ನೆಯ ವೃತ್ತಪದ್ಯದ ಮೊದಲನೆಯ ಪಾದದಲ್ಲಿ ವರ್ಣಿತವಾಗಿರುವ '**ನೀರೇಭಕರಾಭಿಘಾತವಿಚಳತ್**' (ನೀರಾನೆಯ ಸೊಂಡಿಲಿನ ಹೊಡೆತದಿಂದ ಅಲ್ಲೋಲ-ಕಲ್ಲೋಲವಾದ [ಸೀತೋದಾನದಿ]), ಈ ಎರಡೂ ವರ್ಣನೆಗಳು **ಕವಿಸಮಯ**ಕ್ಕೆ ಒಳ್ಳೆಯ ಉದಾಹರಣೆಗಳು. **ಕನ್ನಡ ಕೈಪಿಡಿ**ಯಲ್ಲಿ ತಿಳಿಸಿರುವಂತೆ: (ಸಂಪುಟ-೧, ೩ನೆಯ ಭಾಗ-ಅಲಂಕಾರ, ಅಧ್ಯಾಯ ೧೦. ಕವಿ ಸಮಯ, ಪಟ ೨೯೦)

ಕವಿಸಮಯದಲ್ಲಿ-

(೧) **ಅಸದಾಖ್ಯಾತಿ** (ಇಲ್ಲದೆ ಇರುವುದನ್ನು ಇರುವಂತೆ ವರ್ಣಿಸುವುದು),
(೨) **ಸದಕೀರ್ತನ** (ಇರುವುದನ್ನು ಇಲ್ಲದಂತೆ ಹೇಳುವುದು),
(೩) **ನಿಯಮ** (ಅನೇಕ ಕಡೆಗಳಲ್ಲಿ ದೊರಕಬಹುದಾದ್ದನ್ನು ಒಂದೇ ಕಡೆ ದೊರಕುವಂತೆ ಹೇಳುವುದು, ಅಥವಾ ಅನೇಕ ಗುಣಗಳು ಇರುವ ಕಡೆ ಒಂದೇ ಗುಣವಿರುವಂತೆ ಹೇಳುವುದು), ಮತ್ತು
(೪) **ಐಕ್ಯ** (ವಸ್ತುತಃ ಭೇದವಿರತಕ್ಕ ಕಡೆಗಳಲ್ಲಿಯೂ ಭೇದವನ್ನು ಹೇಳದೆ ಎಲ್ಲಾ ಒಂದನ್ನಾಗಿಯೇ ಗಣಿಸುವುದು)

ಎಂಬ ನಾಲ್ಕು ಭಾಗಗಳನ್ನು ಮಾಡಬಹುದಾಗಿದ್ದು, ಇವು ಒಂದೊಂದು, **(i) ಜಾತಿ, (ii) ದ್ರವ್ಯ, (iii) ಕ್ರಿಯೆ, (iv) ಗುಣ**-ಇವುಗಳಲ್ಲಿ ಸಂಭವಿಸಬಹುದು.

ಈ ಮೇಲೆ ಉದ್ಧರಿಸಿರುವ ಕಾವ್ಯದ ಈ ಎರಡೂ ವೃತ್ತಪದ್ಯಗಳಲ್ಲಿ ವರ್ಣಿತವಾಗಿರುವ ಸಂಗತಿಗಳು **ಕವಿಸಮಯ**ದಲ್ಲಿ ಮೊದಲನೆಯದಾದ '**ಅಸದಾಖ್ಯಾತಿ**' ಭಾಗಕ್ಕೆ ಸೇರಿದುದಾಗಿದೆ.

'**ಅಸದಾಖ್ಯಾತಿ**' ಎಂದರೆ, **ಇಲ್ಲದೆ ಇರುವುದನ್ನು ಇರುವಂತೆ ವರ್ಣಿಸುವುದು**: ಅದರಲ್ಲಿ,

(i) ಜಾತಿ-<u>ಕೆರೆ, ಕಟ್ಟೆ, ಕೊಳ ಎಲ್ಲೆಂದರೆ ಅಲ್ಲಿ ಹಂಸಗಳಿವೆ ಎಂದು ಹೇಳುವುದು</u>; ಹೊಳೆಯಲ್ಲಿ ಕಮಲ ಕನ್ನೈದಿಲೆಗಳಿವೆ ಎಂದು ಹೇಳುವುದು; [ಗಂಗಾ]<u>ನದಿಯಲ್ಲಿ ನೀರಾನೆಗಳಿವೆಯೆಂದು ಹೇಳುವುದು</u>; ಬೆಟ್ಟಗುಡ್ಡಗಳಲ್ಲಿ ರತ್ನಗಳು ಸಿಕ್ಕುತ್ತವೆಯೆಂದು ಹೇಳುವುದು.

ಈ ಎರಡೂ ವೃತ್ತಪದ್ಯಗಳಲ್ಲಿ ಕವಿಯು, ಹಂಸಗಳು ಮತ್ತು ನೀರಾನೆಗಳು ಈ ಎರಡೂ ಸೀತೋದಾನದಿಯಲ್ಲಿರುವಂತೆ ವರ್ಣಿಸಿದ್ದಾನೆ. ಸೀತೋದಾನದಿಯೂ ಸೇರಿ ಯಾವುದೇ ಜಲಾವಾರಗಳಲ್ಲಿ ಹಂಸಗಳು ಇರುವುದಿಲ್ಲ ಹಾಗೂ ಸೀತೋದಾನದಿಯೂ ಸೇರಿದಂತೆ ಯಾವುದೇ ನದಿಗಳಲ್ಲಿ ಅಥವಾ ಸಮುದ್ರಗಳಲ್ಲಿ 'ನೀರೇಭ/ನೀರಾನೆ' ಎನ್ನುವ ಪ್ರಾಣಿಗಳೂ ಇರುವುದಿಲ್ಲ. ಆದುದರಿಂದ ಕವಿಯ ಈ ವರ್ಣನೆಗಳು, **ಕವಿಸಮಯ**ದ ಮೊದಲನೆಯ ಭಾಗವಾದ **(೧) ಅಸದಾಖ್ಯಾತಿ**ಯ, **(i) ಜಾತಿ**ಯಲ್ಲಿ ಸಂಭವಿಸಿದೆ ಎನ್ನಬಹುದು.

---

[1] '**ನೀರೇಭ (ನೀರಾನೆ)**'-ನೀರೇಭ (ಸಂಸ್ಕೃತ) ಅಥವಾ ನೀರಾನೆ (ಕನ್ನಡ) ಎಂಬುದು ನಮ್ಮ ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ, ಗಂಗಾನದಿಯಲ್ಲಿ ಇರುವುವುಗಳೆಂದೂ ಹಾಗೂ ಅವು ಆನೆಗಳ ರೂಪವನ್ನು ಹೋಲುವಂತೆಯೂ ವರ್ಣಿಸಿರುವ ಒಂದು ಕಾಲ್ಪನಿಕ ಪ್ರಾಣಿ. ನಮ್ಮ ಕವಿಗಳು ಸೃಷ್ಟಿಸಿಕೊಂಡಿರುವ ಈ ನೀರಾನೆಯನ್ನು, ಈಗ ನೀರಾನೆ ಎಂದು ಕರೆಯಲ್ಪಡುವ ಆಫ್ರಿಕಾ ಮೂಲದ '**ಹಿಪ್ಪೊಪೊಟಮಸ್**' (**'HIPPOPOTAMUS'** [a Latin word derived from the ancient Greek, means 'Horse of the River']) ಎಂಬ ಪ್ರಾಣಿಯೊಂದಿಗೆ ಸಮೀಕರಿಸಿಕೊಂಡು ವಾಚಕರು ಭ್ರಾಂತಿಗೊಳಗಾಗಬಾರದು. ಹೆಚ್ಚಿನ ವಿವರಗಳಿಗೆ ಈ ವೃತ್ತಕ್ಕೆ ನೀಡಿರುವ **ಅಲಂಕಾರ ವಿಚಾರ (ಕವಿಸಮಯ)**ವನ್ನು ನೋಡಿರಿ.

ಛಂದಸ್ಸಿನ ವಿಚಾರ:

ಶಾರ್ದೂಲ ವಿಕ್ರೀಡಿತ

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವ್ವಾರಸಂಸಾರ ವಿ
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ॥ ೧-೧

ದುರ್ವ್ವಾರ>ದುರ್ವ್ವಾರ>ದುರ್ವಾರ: ಈ ಮೂರೂ ರೀತಿಯ ಬರಹಗಳು ರೂಢಿಯಲ್ಲಿವೆ. ಈ ರೀತಿಯ ರೇಫಯುಕ್ತ ಶಬ್ದಗಳಿಗೆ ಸಂಬಂಧಿಸಿದ **ಛಂದಸ್ಸಿನ ವಿಚಾರ**ವನ್ನು ತಿಳಿಯುವುದು ಸೂಕ್ತವಾಗಿದೆ. ಇದು **ಶಿಥಿಲ ದ್ವಿತ್ವ**ಕ್ಕೆ (ಶ.ಮ.ದ. ಪದ್ಯ ಸಂ. ೪೬) ಸಂಬಂಧಿಸಿದ ವಿಷಯವಾಗಿದೆ.

ಶಿಥಿಲ ದ್ವಿತ್ವ: 'ಶಿಥಿಲ ದ್ವಿತ್ವ' ಎಂದರೆ ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವ ಒತ್ತಕ್ಷರ. ಛಂದಸ್ಸಿನಲ್ಲಿ ಒತ್ತಕ್ಷರದ ಹಿಂದಿನ ಅಕ್ಷರವು ಗುರುವಾಗುತ್ತದೆ. ಆದರೆ ಆ ಒತ್ತಕ್ಷರವು ಶಿಥಿಲ ದ್ವಿತ್ವವಾಗಿದ್ದರೆ ಅದು ಗುರುವಾಗುವುದಿಲ್ಲ-ಲಘುವಾಗಿಯೇ ಉಳಿಯುತ್ತದೆ.

(೧) ಕೆಲವು ಶಬ್ದಗಳಲ್ಲಿ ಶೈಥಿಲ್ಯವು ಸಹಜವಾಗಿರುತ್ತದೆ (ಉದಾ.: ಬರ್ದಿಲಂ, ಗರ್ದುಗು, ಅಮರ್ದು, ಅದಿರ್ಮುತ್ತೆ ಇತ್ಯಾದಿ).

(೨) ದ್ವಿಲಘುಯುಕ್ತವಾದ ರಳ ಕುಳ ರೇಫಾಂತ ಶಬ್ದಗಳಿಗೆ ಗ ದ ವ ಜ ಗಳು ಪರವಾದಾಗ ವಿಕಲ್ಪವಾಗಿ ಶಿಥಿಲತೆ ಬರುತ್ತದೆ. ಇದು ಕೆಲವು ನಾಮಪದಗಳಲ್ಲಿಯೂ ಕ್ರಿಯಾಪದಗಳಲ್ಲಿಯೂ ಸಮಾಸಪದಗಳಲ್ಲಿಯೂ ಕಂಡುಬರುತ್ತದೆ.

ಉದಾಹರಣೆಗೆ:

ನಾಮಪದಗಳಲ್ಲಿ-ಬಹುವಚನದ 'ಗಳ್', ಚತುರ್ಥಿಯ 'ಗೆ', ಇವು ಪರವಾದಾಗ: ಅಗಟ್ಗಳ್, ಕನರ್ಗಳ್, ನವಿರ್ಗೆ ಇತ್ಯಾದಿ. ಇದಕ್ಕೆ ಅಪವಾದ ಶಬ್ದ: ಬಾಸುಟ್ಗಳ್.

ಕ್ರಿಯಾಪದಗಳಲ್ಲಿ-ಕಾಲವಾಚಕಗಳಾದ 'ದ', 'ದಪ', 'ವ', 'ಗುಂ', ವಿಧ್ಯರ್ಥದ 'ಗೆ' ಇವು ಪರವಾದಾಗ: ಜಗುಳ್ದಂ, ತೊಡರ್ದಪಂ, ನಿಮಿರ್ವಂ, ಅಮರ್ಗುಂ, ನುಸುಳ್ಗೆ.

ಸಮಾಸ ಶಬ್ದಗಳಲ್ಲಿ: ಪೊಗರ್ವಟ್ಟೆ, ಉಳಿರ್ಗಾಳಿ, ಅಮಳ್ದೊಂಗಲ್, ಇತ್ಯಾದಿ (ಕನ್ನಡ ಕೈಪಿಡಿ, ಸಂಪುಟ-೧, ಮುದ್ರಣ ೧೯೩೬, ಪುಟ ೧೫)

ಈ ನಿಯಮದಂತೆ **'ದುರ್ವಾರ'** ಎಂಬಲ್ಲಿ ಸಂದರ್ಭೋಚಿತವಾಗಿ **'ದು'** ಅಕ್ಷರವು ಗುರುವೂ ಆಗಬಹುದು, ಲಘುವೂ ಆಗಬಹುದು. ಲಘುವಾಗಬೇಕಾದರೆ **'ರ್ವಾ'** ಎಂಬುದನ್ನು ತೇಲಿಸಿ ಉಚ್ಚಾರ ಮಾಡಬೇಕು. ಆಗ ಅದು ಶಿಥಿಲ ದ್ವಿತ್ವವಾಗುತ್ತದೆ. ಆದರೆ ಈ ವೃತ್ತಪದ್ಯವು **ಶಾರ್ದೂಲವಿಕ್ರೀಡಿತವೃತ್ತ** ಛಂದಸ್ಸಿನಲ್ಲಿದ್ದು, ಆ ಛಂದಸ್ಸಿಗನುಗುಣವಾಗಿ **'ದುರ್ವಾರ'** ಶಬ್ದದಲ್ಲಿರುವ **'ದು'** ಅಕ್ಷರವು ಗುರುವೇ ಆಗಬೇಕು (ಏಕೆಂದರೆ, ಇಲ್ಲಿ **ತಗಣ** – – ᴗ ಈ ರೀತಿಯ ಗಣವಾಗಬೇಕು). ಆದುದರಿಂದ **'ರ್ವಾ'** ಅಕ್ಷರದ ಉಚ್ಚಾರಣೆಯಲ್ಲಿ ಶಿಥಿಲ ದ್ವಿತ್ವದಂತೆ ತೇಲಿಸಿ ಉಚ್ಚರಿಸಬೇಕೆ ಅಥವಾ ಬೇಡವೇ ಎಂಬ ಬಗ್ಗೆ ದ್ವಂದ್ವವಿರದಂತೆ ಮಾಡಲು, **'ದುರ್ವಾರ'** ಪದದಲ್ಲಿರುವ ರೇಫಯುಕ್ತಾಕ್ಷರವನ್ನು **'ರ್ವ್ವಾ'** ಎಂದು ದ್ವಿತ್ವಮಾಡಿ, ಆ ಪದವನ್ನು **'ದುರ್ವ್ವಾರ'** ಎಂದು ಬರದರೆ, **'ರ್ವ್ವಾ'** ಎಂಬುದು ಶಿಥಿಲವಾಗಲು ಅಸಾಧ್ಯವಾಗಿ ಅದರ ಹಿಂದಿನ **'ದು'** ಅಕ್ಷರವು ಗುರುವೇ ಆಗುತ್ತದೆ. ಈ ಖಚಿತತೆಗಾಗಿ ಶಬ್ದದಲ್ಲಿರುವ ರೇಫಯುಕ್ತ ಅಕ್ಷರವನ್ನು **'ರ್ವ್ವಾ'** ಎಂದು ದ್ವಿತ್ವದಿಂದಲೇ ಬರೆಯುತ್ತಾರೆ. ಇನ್ನು **'ದುರ್ವ್ವಾರ'** ಶಬ್ದದ **'ರ್ವ್ವಾ'** ಅಕ್ಷರದಲ್ಲಿ ಶೈಥಿಲ್ಯವುಂಟಾಗುವ ಸಾಧ್ಯತೆಯೇ ಇಲ್ಲದಿರುವುದರಿಂದ **'ದು'** ಅಕ್ಷರವು ಗುರುವಾಗಿಯೇ ಇರುತ್ತದೆ.

ಪಾಠಭೇದ ವಿಚಾರ:

ಚಂಪಕಮಾಲೆ **ತೊಲಗದು ಪುಬ್ಬಕೋಟಿಪರಿಸಂಖ್ಯೆವರಂ ಪರಮಾಯು ಕಳ್ಳರಾ**
ಯಿಲಮಱೆಯೇಱು ಮಾರಿ ಪಸವಿಟ್ಟಿ ಬಱಂ ಪೆಱವುಂ
ಕುಲಿತೆಗಳಿಲ್ಲ ಧಾತ್ರಿ ಪುಸಿವೋಗದು ಪಂಚಧನುಶ್ಶತಂ ಪವ
ಣ್ಣಲೆ ನರರ್ಗೆಂದೊಡಿನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ ॥ ೧–೫೨

ಪದ ವಿಭಾಗ: ತೊಲಗದು–ಪುಬ್ಬ–ಕೋಟಿ–ಪರಿಸಂಖ್ಯೆ–ವರಂ–ಪರಮಾಯು; ಕಳ್ಳರಾಯಿಲಮ್,
ಅಱೆಯೇಱು, ಮಾರಿ, ಪಸವಿಟ್ಟಿ, ಬಱಂ, ಪೆಱವುಂ, ಭಯಂಗಳ್,
ಆಕುಲಿತೆಗಳಿಲ್ಲ; ಧಾತ್ರಿ–ಪುಸಿವೋಗದು; ಪಂಚ–ಧನುಶ್ಶತಂ–ಪವಣ್ಣಲೆ–
ನರರ್ಗೆ; ಎಂದೊಡೆ, ಇನ್ನಿಮಿರೆ, ಬಣ್ಣಿಸಲ್, ಆನ್, ಅಱಿಯೆಂ, ವಿದೇಹಮಂ ॥ ೧–೫೨

ಕಳ್ಳರಾಯಿಲಮಱೆಯೇಱು: ಈ ಪದದ ವಿವರಗಳಿಗೆ ಆಶ್ವಾಸದ ಕೊನೆಯಲ್ಲಿ ನೀಡಿರುವ **ಪಾಠಭೇದ ವಿಚಾರ** ಇದರಡಿಯಲ್ಲಿ ನೀಡಿರುವ ಟಿಪ್ಪಣಿಯನ್ನು ನೋಡಿರಿ. ಈ ಭಾಗವನ್ನು: (೧) **'ಕಳ್ಳರ್'**, (೨) **'ಆಯಿಲಮ್'**, (೩) **'ಅಱೆ'**–**'ಏಱು'** ಎಂದು ನಾಲ್ಕು ಪದಗಳನ್ನಾಗಿ ಪದವಿಭಾಗ ಮಾಡಿ, ಆ ಪದಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಕೆಲವು ವಿದ್ವಾಂಸರು ಈ ಭಾಗವನ್ನು (೧) **'ಕಳ್ಳರಾಯಿಲಮ್'** ಮತ್ತು (೨) **'ಅಱೆಯೇಱು'** ಎಂದು ಎರಡು ಪದಗಳನ್ನಾಗಿ ಮಾತ್ರ ವಿಭಾಗಿಸಿ, **'ಕಳ್ಳರಾಯಿಲಮ್'** ಪದಕ್ಕೆ **'ದರೋಡೆ'**, **'ಕಳ್ಳರ ದರೋಡೆ'**, **'ಕಳ್ಳರ ಕಾಟ'** ಎನ್ನುವ ಅರ್ಥವನ್ನು ನೀಡಿರುತ್ತಾರೆ. ಆದರೆ, ಇಲ್ಲಿ **'ಕಳ್ಳರಾಯಿಲಮ್'** ಪದವನ್ನು **'ಕಳ್ಳರ್'** ಮತ್ತು **'ಆಯಿಲಮ್'** ಎಂದು ಎರಡು ಸ್ವತಂತ್ರ ಪದಗಳನ್ನಾಗಿ ವಿಂಗಡಿಸಿಕೊಂಡು **'ಕಳ್ಳರ್'** ಪದಕ್ಕೆ **'ಕಳ್ಳರ'** ಎಂದೂ, **'ಆಯಿಲಮ್'** ಪದಕ್ಕೆ **'ರೋಗದ'** ಎಂಬ ಅರ್ಥವನ್ನು ಕೊಡಲಾಗಿದೆ. ಶ್ರೀ ಕುಂದಣಗಾರರು ತಮ್ಮ ಸಂಪಾದಿತ ಕೃತಿಯ ಅನುಬಂಧ ೩ರಲ್ಲಿ ನೀಡಿರುವ **ಆದಿಪುರಾಣದೊಳಗಿನ ಕಠಿಣಶಬ್ದಗಳ ಕೋಶ**ದಲ್ಲಿ (ಇದನ್ನು ಕ.ಸಾ.ಪ. ನಿಘಂಟುಕಾರರು **'ಆದಿಪುರಾಣ ಕೋಶ'** [ಆದಿಪು.ಕೋಶ] ಎಂದು ಸೂಚಿಸುತ್ತಾರೆ) **'ಆಯಿಲಮ್'** ಪದಕ್ಕೆ **'ರೋಗ'**ವೆಂಬ ಅರ್ಥವನ್ನು ನೀಡಿರುತ್ತಾರೆ. ಆದುದರಿಂದ ಇಲ್ಲಿ **'ಆಯಿಲಮ್'** ಪದಕ್ಕೆ **'ರೋಗ'**ವೆಂಬ ಅರ್ಥವನ್ನೇ ನೀಡಲಾಗಿದೆ [ಆದರೆ, ಮುಂದೆ ೫ನೆಯ ಆಶ್ವಾಸದ ೩೦ನೆಯ ವೃತ್ತಪದ್ಯದ ೩ನೆಯ ಪಾದದಲ್ಲಿ ಬರುವ **ಆಯಿಲಮ್** ಪದಕ್ಕೆ **ದರೋಡೆ (ಕೊಳ್ಳೆ)** ಎನ್ನುವ ಅನ್ವಯಾರ್ಥವನ್ನೇ ನೀಡಿರುವುದನ್ನು ವಾಚಕರು ಗಮನಿಸಬಹುದು]. ಹಾಗೆಯೇ, **'ಅಱೆಯೇಱು'** ಪದಕ್ಕೆ **'ಹೊಡೆತದಿಂದಾದ ಗಾಯ'**, **'ವೋಸದ ಗಾಯ'**, ಹೀಗೆ ಅರ್ಥೈಸಲಾಗಿದೆ. ಕ.ಸಾ.ಪ. ನಿಘಂಟುವೂ ಸಹ ಇದೇ ಅರ್ಥವನ್ನೇ ಇದೇ ವಾಕ್ಯದ ಉದಾಹರಣೆ ಸಹಿತ ವಿವರಿಸುತ್ತದೆ. ('ಅಱೆ$_1$'=ರೂಪಗೆಡು; 'ಅಱೆ$_3$'=ಹೊಡೆತ, ಬಡಿತ, ಪೆಟ್ಟು; 'ಏಱು$_4$'=ಗಾಯ, ಹುಣ್ಣು, ವ್ರಣ–ಕ.ಸಾ.ಪ. ನಿಘಂಟು, ಪುಟ ೧೧೬೭, ಸಾಲು ೪೪). ಶ್ರೀ ಕೆ.ಜಿ. ಕುಂದಣಗಾರರು **'ಆಯಿಲಮ್'** ಪದಕ್ಕೆ **'ರೋಗ'**ವೆಂಬ ಅರ್ಥವನ್ನೂ, **'ಅಱೆ'** ಪದಕ್ಕೆ **'ರೂಪಗೆಡು'** ಎಂಬ ಅರ್ಥವನ್ನು ಕೊಟ್ಟಿರುವುದರಿಂದ, ಇಲ್ಲಿ ಈ ಎರಡೂ ಪದಗಳಿಗೆ ಶ್ರೀ ಕೆ.ಜಿ. ಕುಂದಣಗಾರರವರು ನೀಡಿರುವ ಅರ್ಥವನ್ನೇ ಸ್ವೀಕರಿಸಲಾಗಿದೆ. ಕಾರಣವೇನೆಂದರೆ ಕವಿಯು ಇಲ್ಲಿ ವರ್ಣಿಸಿರುವ ಎಲ್ಲ ಉಪದ್ರವಗಳೂ, ಪ್ರಜೆಗಳನ್ನು ಕಾಡುವ ಬಾಹ್ಯ ಉಪದ್ರವಗಳ ಲಕ್ಷಣಗಳನ್ನು ಹೊಂದಿರುತ್ತವೆ. **'ಅಱೆಯೇಱು'** ಪದಕ್ಕೆ **'ಹೊಡೆತದಿಂದಾದ ಗಾಯ'** ಎಂದು ಅರ್ಥೈಸಿದರೆ, ಯಾರು ಹೊಡೆದದ್ದು, ಯಾಕೆ ಹೊಡೆದದ್ದು? ಎನ್ನುವ ಪ್ರಶ್ನೆಗಳನ್ನು ಕೇಳಿದರೆ, ಪ್ರಜೆಗಳು ಅಧರ್ಮಿಗಳಾಗಿ, ಅಸಂಯಮಿಗಳಾಗಿ ಅವರವರೇ ಹೊಡೆದಾಡಿಕೊಂಡು ಗಾಯಮಾಡಿಕೊಂಡರೆಂದು ಹೇಳಬೇಕಾಗುತ್ತದೆ. ಮುಂದೆ ಕವಿಯು ಈ ಯಾವುದರ **'ಭಯಂಗಳಾಕುಲಿತೆಗಳಿಲ್ಲ'** ಎನ್ನುತ್ತಾನೆ. ಪ್ರಜೆಗಳಿಗೆ ಯಾವುದರ ಬಗ್ಗೆ ಭಯವಾಗಲೀ, ಆಕುಲತೆಯಾಗಲೀ ಇಲ್ಲ ಎಂದರೆ ಬಾಹ್ಯ ಉಪದ್ರವಗಳ ಬಗ್ಗೆ ಭಯ, ಆಕುಲತೆಗಳಿಲ್ಲ ಎಂದು ಹೇಳಬಹುದು. ಈ ಪದ್ಯದಲ್ಲಿ ಕವಿಯು ವಿದೇಹ ಕ್ಷೇತ್ರದ ಪ್ರಜೆಗಳ ಗುಣಗಾನ ಮಾಡುತ್ತಿರುವುದಿಲ್ಲ. ಅಂದರೆ, ಅವರು ಧರ್ಮಿಷ್ಟರು ಇತ್ಯಾದಿ ಹೇಳುತ್ತಿರುವುದಿಲ್ಲ. ಇಲ್ಲಿ ಹೇಳುತ್ತಿರುವುದು ಅಲ್ಲಿನ ಪ್ರಜೆಗಳು ಯಾವ ಯಾವ ಬಾಹ್ಯ ಉಪದ್ರವಗಳಿಂದ ಮುಕ್ತರಾಗಿದ್ದರು ಎಂದು ತಿಳಿಸುವುದು ಈ ಮಾತಿನ ಉದ್ದೇಶವಾಗಿದೆ.

ಕೊಂಕಿದ ಕೊಂಕು ತದ್ವಿಷಯಕಾಂತೆಯ ಪುರ್ವಿನ ಕೊಂಕಿನಂತೆ ಚೆ
ಲ್ವಂ ಕುಡೆ ತಳ್ತೆರಟ್ಟಿಡಿಯ ಪೂಮರದಿಂ **ಕಳಿವೂ**[1]ಗಟಿತ್ತಮಿ
ತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ
ನೂಂಕುವುವೂರ್ಮಿಮಾಳಿನಿಯ ತುಂಗತರತ್ತರಳೋರ್ಮಿಮಾಲೆಗಳ್ ॥ ೧–೬೧

[1] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಕಱಿವೂ', ಸ್ವೀಕರಿಸಿದ ಪಾಠ–'ಕಳಿವೂ', ವಿವರಣೆಗೆ ಮೇಲಿನ ಟಿಪ್ಪಣಿಯನ್ನು ಓದಿರಿ.

ಮೂಲಪಾಠ ಮತ್ತು ಕೆಜಿ ಯವರ ಪಾಠ–'**ಕಱಿವೂಗಳ'; ಸ್ವೀಕೃತ ಪಾಠ– 'ಕಳಿವೂಗಳ' (೧–೬೧):**

ಇಲ್ಲಿನ '**ಕಱಿವೂಗಳ್**' ಪದದ ರೂಪವು ಅಶುದ್ಧವಿರಬಹುದೆಂದು ಈ ಲೇಖಕನು ಅಭಿಪ್ರಾಯಪಡುತ್ತಾನೆ. ಹೇಗೆಂದರೆ, ಅದರಲ್ಲಿರುವ **ರಳ (ಱ)** ಅಕ್ಷರಕ್ಕೆ ಬದಲಾಗಿ ಅಲ್ಲಿ **ಕುಳ (ಳ)** ಅಕ್ಷರವಿದ್ದಿರಬೇಕೆಂದು ತೋರುತ್ತದೆ. ಆದರೆ, ಯಾವ ಗ್ರಂಥ ಸಂಪಾದಕರೂ ಪದ್ಯದ ಈ ಶಬ್ದಕ್ಕೆ ಪಾಠಭೇದವನ್ನು ಸೂಚಿಸಿರುವುದಿಲ್ಲವಾದ್ದರಿಂದ ಈ ಅಡಿಟಪ್ಪಣಿಯ ಸಮರ್ಥನೆಯನ್ನು ನೀಡಿ ಇಲ್ಲಿ 'ಕಳಿವೂಗಳ' ಎಂಬ ಪಾಠವನ್ನು ಸ್ವೀಕರಿಸಿದೆ. ಅಲ್ಲದೆ, ನನ್ನ ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುವಂತೆ ಮುಂದೆ ಏಳನೆಯ ಆಶ್ವಾಸದ ೨೭ ನೆಯ ವೃತ್ತಪದ್ಯವಾದಮೇಲೆ ಇರುವ ವಚನದ [೭–೨೭ (ವ)] ನಂತರ ಬರುವ **ಲಲಿತರಗಳೆ**ಯಲ್ಲಿ ರಚನೆಯಾಗಿರುವ ಪದ್ಯದ ೨೭ ನೆಯ ಪಾದದಲ್ಲಿ ಈ **ಕಳಿ** ಪದದ ಪ್ರಯೋಗವಾಗಿರುವುದನ್ನು ವಾಚಕರ ಗಮನಕ್ಕೆ ತರಲಿಚ್ಛಿಸುತ್ತೇನೆ. ಲಲಿತರಗಳೆಯಲ್ಲಿರುವ ಸಂಬಂಧಿತ ಪದ್ಯದ ಸಾಲನ್ನು ಈ ಕೆಳಗೆ ಉದ್ಧರಿಸಲಾಗಿದೆ (ಆಕರ ಗ್ರಂಥವಾದ ಶ್ರೀ ಎಸ್.ಜಿ. ನರಸಿಂಹಾಚಾರ್ಯರ ಸಂಪಾದಿತ ಕೃತಿಯಲ್ಲಿರುವಂತೆ):

ಕಳಿತ*ಸರಸಿಜ ರಜೋರಂಜಿತಾಚ್ಛಾಂಭಮಂ
ಜಳಜದಳನಯನಯುಗವೊಣರ್ದ ಮಣಿಕುಂಭಮಂ ॥

[* ಆದರೆ, ಶ್ರೀ ಕುಂದಣಗಾರರು ತಮ್ಮ ಸಂಪಾದಿತ ಕೃತಿಯಲ್ಲಿ **'ಕಳಿತ'** ಪದಕ್ಕೆ **'ದಲಿತ'** ಎಂಬ ಪಾಠಾಂತರವನ್ನು ನೀಡಿರುತ್ತಾರೆ]

ಈ ಮೇಲಿನ ಲಲಿತರಗಳೆಯ ಪದ್ಯದಲ್ಲಿರುವ **'ಕಳಿತ ಸರಸಿಜ'** ಪದಕ್ಕೆ **'ಅರಳಿದ ತಾವರೆಹೂವು'** ಎಂದೇ ಅರ್ಥವಾಗುತ್ತದೆ. **ಕನ್ನಡ ಕೈಪಿಡಿ** (ಪ್ರ. ಮೈಸೂರು ವಿಶ್ವವಿದ್ಯಾನಿಲಯ ೧೯೩೬, ಪುಟ ೫) ಗ್ರಂಥದಲ್ಲಿ **ಕಳಿ=ಹಣ್ಣಾಗು, ಕಱಿ=ಸಾಯಿ** ಎಂಬ ಅರ್ಥವನ್ನು ನೀಡಿರುತ್ತಾರೆ. ಹಾಗೆಯೇ ಕ.ಸಾ.ಪ. ನಿಘಂಟುವಿನಲ್ಲಿ (ಸಂಪುಟ ೨, ಪುಟ ೧೬೬೭, ಪಂಙ್ತಿ ೩೭) **ಕಱು, ಕಳಿ** ಈ ಶಬ್ದಗಳಿಗೆ **೧. ಹಣ್ಣಾಗು; ಮಾಗು; ಪಕ್ವವಾಗು** ಎಂಬ ಅರ್ಥಗಳನ್ನು ನೀಡಿರುತ್ತಾರೆ. ಕ.ಸಾ.ಪ. ನಿಘಂಟುವು (ಸಂಪುಟ ೨, ಪುಟ ೧೬೬೯, ಪಂಙ್ತಿ ೩೧–೩೨) **'ಕಱಿವೂ'** ಎಂದರೆ **'ಬಾಡಿದ ಹೂ; ಬಾಡಿ ಕಳಲಾದ ಹೂ'** ಎಂದೂ, ಹಾಗೆಯೇ ಪದ್ಯದ ಮೂರನೆಯ ಪಾದದಲ್ಲಿರುವ **'ಸಂಕರಂಗಳಂ'** ಪದಕ್ಕೆ **'ಸಂಕರ'** ಎಂದರೆ **'೪. ಗುಡಿಸಿಹಾಕುವಂಥದು; ಕಸ** "ಸಂಕರಃ, ಅವಕರಃ–ಈ ೨ ಕಸವು" (ಹಲಾಯು. ೫೦–೧೪೭)' (ಸಂಪುಟ ೮, ಪುಟ ೮೯೧೪, ಪಂಙ್ತಿ ೨೭–೩೦) ಎಂಬ ಅರ್ಥಗಳನ್ನು ನೀಡುತ್ತದೆ. ಹಾಗೂ, ಈ ಎರಡೂ ಪದಗಳ ಪ್ರಯೋಗಕ್ಕೆ ಉದಾಹರಣೆಯಾಗಿ ಇದೇ ವೃತ್ತಪದ್ಯದ ಇದೇ ಸಾಲುಗಳನ್ನು ಎರಡೂ ಕಡೆಗಳಲ್ಲಿಯೂ ಉದ್ಧರಿಸಿರುತ್ತಾರೆ. ಅಲ್ಲದೆ, ನಿಘಂಟುವಿನಲ್ಲಿ **'ಸಂಕರ'** ಪದಕ್ಕೆ ಮೊದಲಿಗೆ **'೧. ಕಲಬೆರಕೆ; ಮಿಶ್ರಣ'** ಎಂಬ ಅರ್ಥವನ್ನೂ ನೀಡಿರುತ್ತಾರೆ. ಮರದಿಂದ ಹೂಗಳು ಉದುರುವಾಗ ಚೆನ್ನಾಗಿ ಅರಳಿ ಪಕ್ವವಾಗಿರುತ್ತವೆಯೇ ಹೊರತು, ಬಾಡಿ ಕಳಲಾಗಿರುವುದಿಲ್ಲ. ಅವು ಉದುರಿ ಬಹಳ ಹೊತ್ತಿನ ನಂತರ ಬಾಡುತ್ತವೆ. ಬಾಡಿದ ನಂತರವಷ್ಟೇ ಅವು ಗುಡಿಸಿಹಾಕುವಂತಹ ಕಸವಾಗುತ್ತದೆ. ಹೂಗಳ ಈ ಲಕ್ಷಣವನ್ನು ಗಮನಿಸಿ, ಮೇಲಿನ ಅರ್ಥ ವಿಭಾಗದಲ್ಲಿ **'ಕಳಿವೂಗಳ್'** ಮತ್ತು **'ಸಂಕರಂಗಳಂ'** ಪದಗಳನ್ನು, **'[ಪೂರ್ತಿ ಅರಳಿ] ಪಕ್ವವಾದ [ವಿವಿಧ ಜಾತಿಯ] ಹೂಗಳ ಕಲಬೆರಕೆಯ ರಾಶಿ'** ಎಂದು ಅರ್ಥೈಸಲಾಗಿದೆ. ಏಕೆಂದರೆ, ನಿಘಂಟುಕಾರರು ದಾಖಲಿಸಿರುವಂತೆ, ಮರದಿಂದ ಉದುರಿದ ಹೂವನ್ನು **'ಬಾಡಿದ ಹೂ'** ಅಥವಾ **'ಬಾಡಿ ಕಳಲಾದ ಹೂ'** ಎಂದು ಅರ್ಥೈಸಿದರೆ, ಅಂತಹ ಹೂಗಳು ಸ್ವಾಭಾವಿಕವಾಗಿ **'ಗುಡಿಸಿಹಾಕುವಂಥದು; ಕಸ'**ವೇ ಆಗಿರುತ್ತದೆ. ಈ ಅರ್ಥವು ಪದ್ಯದ ಸಂದರ್ಭಕ್ಕೆ ಸಾಧುವೆನಿಸದು. ಆದುದರಿಂದ, ಈ ಲೇಖಕನು, ತಾನು, ವೃತ್ತಪದ್ಯದ ಸಂದರ್ಭೋಚಿತವಾದ ತಾತ್ಪರ್ಯವನ್ನು ಗ್ರಹಿಸಿದಂತೆ, ಆ ವಾಕ್ಯಕ್ಕೆ ಈ ರೀತಿಯ ಅರ್ಥವನ್ನು ನೀಡಿರುತ್ತಾನೆ: ಊರ್ಮಿಮಾಳಿನಿ ನದಿಯ ತೀರದಲ್ಲಿದ್ದ ಹೂಮರಗಳು ವಿವಿಧಜಾತಿಗೆ ಸೇರಿದ ಹೂಮರಗಳಾಗಿದ್ದವು (ಹಾಗೆಂದು ಕವಿಯು ಪದ್ಯದಲ್ಲೇನೂ ಸೂಚಿಸಿರುವುದಿಲ್ಲ, ಆದರೆ ಹಾಗೆ ಧ್ವನಿತವಾಗಿದೆ). ಅವುಗಳಿಂದ ಅರಳಿ ಪಕ್ವವಾಗಿ ನದಿಗೆ ಉದುರಿದ **'ಕಳಿವೂ'**ಗಳ, **'ಸಂಕರಂಗಳಂ'** ಎಂದರೆ ವಿವಿಧಜಾತಿಗೆ ಸೇರಿದ **'ಕಲಬೆರಕೆಯಾದ'** ಹೂಗಳು ಅಥವಾ ಮಿಶ್ರ ಜಾತಿಯ ಹೂಗಳಾಗಿರುತ್ತವೆ ಎಂದು ಈ ಮೇಲಿನ **ಅನ್ವಯಾರ್ಥ** ವಿಭಾಗದಲ್ಲಿ ಸೂಕ್ತವಾಗಿ ಅರ್ಥೈಸಲಾಗಿದೆ.

ಚಂಪಕಮಾಲೆ **ಬಳಸಿದ ಪೊನ್ನಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್**
ಬಳಸಿದ ಪೊನ್ನ ಕಾಂಡಪಟದಂತಿರೆ[1] **ರುಂದ್ರನರೇಂದ್ರಗೇಹಮಾ**
ಲಳಿತೆಯ ವಕ್ತ್ರಪಂಕಜವಿಳಾಸಮನಾಂತಿರೆ ರಮ್ಯರಾಜತಾ
ಚಳತಿಳಕೋಪಮಾನಮೆನೆ ಸಂದಳಕಾಪುರವೊಪ್ಪಿ ತೋಱುಗುಂ ॥ ೧–೭೧

ಬಳಸಿದ ಪೊನ್ನಕಾಂಡಪಟದಂತಿರೆ: ಇಲ್ಲಿ 'ಕಾಂಡಪಟ' ಎಂಬುದಕ್ಕೆ 'ಕನ್ನವಡ' ಎಂಬ ಪಾಠಾಂತರವಿರುವುದನ್ನು ವೃತ್ತಪದ್ಯದ ಅಡಿಟಿಪ್ಪಣಿಯಲ್ಲಿ ಸೂಚಿಸಿರುವುದು ಸರಿಯಷ್ಟೆ. ಡಾ. ಡಿ.ಎಲ್. ನರಸಿಂಹಾಚಾರ್ಯರು ಈ ಪಾಠಾಂತರವೇ ಕವಿಯ ಮೂಲಪಾಠವೆಂಬಂತೆ ತಮ್ಮ **'ಕನ್ನಡ ಗ್ರಂಥಸಂಪಾದನೆ'** ಗ್ರಂಥದ **'೪. ಹಸ್ತ ಪ್ರತಿಗಳ ಸ್ವರೂಪ ಮತ್ತು ವಿಂಗಡಣೆ'** ಎಂಬ ನಾಲ್ಕನೆಯ ಅಧ್ಯಾಯದ **'೪. ಪರಂಪರಾಗತ ಪ್ರತಿಗಳು'** ಎಂಬ ಮುಖ್ಯವಿಷಯದಡಿಯಲ್ಲಿ (ಐದನೆಯ ಮುದ್ರಣ ೨೦೧೫, ಪುಟ ೬೪) ಸಮರ್ಥಿಸಿ ಬರೆಯುತ್ತಾರೆ. ಗ್ರಂಥದ ಆ ಪಠ್ಯಭಾಗವನ್ನು ಇಲ್ಲಿ ಯಥಾವತ್ತಾಗಿ ನೀಡಲಾಗಿದೆ:

[1] ಮೂಲಪಾಠ ಮತ್ತು ಕೆಜಿ ಯವರ ಪಾಠ–'ಕಾಂಡಪಟದಂತಿರೆ', ಈ ಇಬ್ಬರೂ ಸಂಪಾದಕರು ಬಳಸಿಕೊಂಡಿರುವ ಖ ಮತ್ತು ಗ ಹಸ್ತಪ್ರತಿಗ ಳಲ್ಲಿ 'ಕನ್ನವಡದಂತಿರುವ' ಎಂಬ ಪಾಠಾಂತರವಿರುವುದನ್ನು ಸೂಚಿಸಿರುತ್ತಾರೆ.

"(ii) ಪುರಕ್ಷ್ಮಿಯು ಸಿಂಗರಿಸಿಕೊಳ್ಳುವ ಎಡೆಯಲ್ಲಿ ಸುತ್ತಲೂ ಬಳಸಿಕೊಂಡಿರುವ ತೆರೆಯಂತೆ ಕೋಟೆಯಿತ್ತು ಎಂದು ವರ್ಣಿಸುವಾಗ ಪಂಪ ತನ್ನ 'ಆದಿಪುರಾಣ'ದಲ್ಲಿ (೧–೭೧):

ಬಳಸಿದ ಪೊನ್ನಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್
ಬಳಸಿದ ಪೊನ್ನ ಕಾಂಡಪಟದಂತಿರೆ . . .

ಎಂದು ಬರೆದಿದ್ದಾನೆ. ಇಲ್ಲಿ **'ಕಾಂಡಪಟ'** ಎಂಬುದಕ್ಕೆ **'ಕನ್ನವಡ'** ಎಂಬ ಪಾಠಾಂತರವಿದೆ. **ಕನ್ನವಡ** ಎಂದರೆ **ಕನ್ನಡಿ ಕಟ್ಟಿದ ಗೋಡೆ.** ಕೋಣೆಯ ನಾಲ್ಕು ಗೋಡೆಗಳಿಗೂ ಕನ್ನಡಿಗಟ್ಟಿದ್ದರೆ ಸಿಂಗರಿಸಿಕೊಳ್ಳುವ ಹೆಣ್ಣು ತನ್ನ ತಲೆಯ ಯಾವ ಭಾಗವನ್ನಾದರೂ ಪ್ರತಿಬಿಂಬದಲ್ಲಿ ಕಾಣಬಹುದು; ಇದರಿಂದ ಸಿಂಗರಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಪ್ರತಿಯಾಗಿ ಕಾಂಡಪಟ ಎಂದರೆ ತೆರೆಯನ್ನು ಸುತ್ತಲೂ ಕಟ್ಟುವುದರಿಂದ ಉಪಯೋಗವೇನೂ ಇಲ್ಲ. 'ಆದಿಪುರಾಣ'ವನ್ನು ಬರೆದು ಮುಗಿಸಿದ ಮೇಲೆ ಪಂಪ ಕೂಡಲೇ ತನ್ನ ಭಾರತದ ರಚನೆಗೆ ತೊಡಗಿರಬೇಕು. ಅದರ ಆರಂಭ ಭಾಗದಲ್ಲಿ (೧–೭೦) ಪರಾಶರ ಮುನೀಂದ್ರನು ಮತ್ಸ್ಯಗಂಧಿಯೊಡನೆ ದೋಣಿಯಲ್ಲಿ ಕುಳಿತು ಯಮುನೆಯನ್ನು ದಾಟುತ್ತಿರುವಾಗ ಆ ಋಷಿ ಅವಳಲ್ಲಿ ಮೋಹಗೊಂಡ ಕಥೆ ಬರುತ್ತದೆ. ಹಾಗೆ ಮೋಹವಶನಾದ ಅವನು ಅವಳಿಗೆ ಯೋಜನಗಂಧಿತ್ವವನ್ನು ಕೊಟ್ಟು 'ಕಾಂಡಪಟದಂತಿರ್ಪನ್ನೆಗಂ ಮಾಡಿ ಮಂಜನ್' ಅವಳೊಡನೆ ಕೂಡಿದನೆಂದು ಉಕ್ತಿ. ಇದನ್ನು ಬರೆಯುವಾಗ ಪಂಪನಿಗೆ ತಾನು 'ಆದಿಪುರಾಣ'ದಲ್ಲಿ 'ಕಾಂಡಪಟದಂತಿರೆ' ಎಂದು ಬರೆದಿದ್ದದ್ದು ನೆನಪಿಗೆ ಬಂದಿರಬೇಕು. ಆಗ ಅವನಿಗೆ ಹೊಳೆಯಿತು, ಆ ಪದಪ್ರಯೋಗ ಅಲ್ಲಿ ಉಚಿತವಲ್ಲವೆಂದು; ಅದನ್ನು 'ಕನ್ನವಡ' ಎಂದು ಮಾರ್ಪಡಿಸಿರಬೇಕು, ಆಮೇಲೆ ಅವನು. ಇಂಥ ವ್ಯತ್ಯಾಸವನ್ನು ಪಂಡಿತನಾಗಲಿ ಲಿಪಿಕಾರನಾಗಲಿ ಮಾಡುವುದು ಶಕ್ಯವಲ್ಲ. ಕವಿಯೇ ಕಾರಣವಾಗಿ ಇಲ್ಲಿ ಎರಡು ಪಾಠಗಳುಂಟಾಗುವುದು ಹೆಚ್ಚು ಸಂಭವನೀಯ. ..."

ಕಾವ್ಯಧರ್ಮ (ಕಾವ್ಯಗುಣ):

ಕಂದ **ಧಿಷಣರ ಕೃತಿಗಳೊಳೆಸೆವಭಿ**
ಲಷಿತಗುಣಂಗಳನೆ ಬಿಸುಟು ಮಾತ್ಸರ್ಯಮಹಾ
ವಿಷಮಮತಿಯಿಂದೆ ದೋಷಾ
ಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್ ॥ ೧–೨೨

ಕಂದ **ಇದುವೆ ಸುಕವಿಪ್ರಮೋದ**
ಪ್ರದಮಿದುವೆ ಸಮಸ್ತಭವ್ಯಲೋಕಪ್ರಮದ
ಪ್ರದಮೆನೆ ನೆಗಟ್ದಾದಿಪುರಾ
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ॥ ೧–೩೮

ಅಭಿಲಷಿತ ಗುಣಂ [೧–೨೨]: ಕಾವ್ಯಗುಣವೇ ಕಾವ್ಯಧರ್ಮವೆನಿಸುವುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕಾವ್ಯದ '**ಗುಣ**'ವನ್ನು ವಾಮನನು ತನ್ನ **ಕಾವ್ಯಾಲಂಕಾರ ಸೂತ್ರವೃತ್ತಿ**ಯ ಮೂರನೆಯ ಅಧಿಕಾರವಾದ **ಗುಣವಿವೇಚನಂ** ಅಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾನೆ:

ಕಾವ್ಯಶೋಭಾಯಾಃ ಕರ್ತಾರೋ ಧರ್ಮಾ ಗುಣಾಃ ॥೩–೧॥

ಅರ್ಥ: ಕಾವ್ಯಸೌಂದರ್ಯವನ್ನು ಉಂಟುಮಾಡತಕ್ಕ ಧರ್ಮಗಳು ಗುಣಗಳು.

ತದತಿಶಯ ಹೇತುವಸ್ತು ಅಲಂಕಾರಾಃ ॥೩–೨॥

ಅರ್ಥ: ಅದನ್ನು ಹೆಚ್ಚಿಸತಕ್ಕವು ಮಾತ್ರ ಅಲಂಕಾರಗಳು.

ಪೂರ್ವೇ ನಿತ್ಯಾಃ ॥೩–೩॥

ಅರ್ಥ: ಮೊದಲಿನವು [ಅಂದರೆ ಗುಣಗಳು ಕಾವ್ಯದಲ್ಲಿ] ಇರಲೇಬೇಕಾದವು.

ದಂಡಿಯ ಪ್ರಕಾರ ಈ ಗುಣಗಳು ಹತ್ತು ಸಂಖ್ಯೆಯಲ್ಲಿವೆ. ಅವು ಯಾವುವೆಂದರೆ: ಶ್ಲೇಷ, ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು ಕಾಂತಿ, ಸಮಾಧಿ; ಭಾಮಹನು ಮಾಧುರ್ಯ, ಓಜಸ್ಸು, ಪ್ರಸಾದ–ಈ ಮೂರರ ಬಗ್ಗೆ ಮಾತ್ರ ವಿವರಿಸಿದ್ದಾನೆ.

ನೆಗಟ್ದಾದಿಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ [೧–೩೮]: ಈ ಕಂದಪದ್ಯವು ಕಾವ್ಯ ವಿಮರ್ಶೆಯ ದೃಷ್ಟಿಯಿಂದ ಬಹಳ ಪ್ರಮುಖವಾದ ಪದ್ಯವೆನ್ನಬಹುದು. ಸುಕವಿಗಳಿಗೆ ರಸಾನುಭವವನ್ನೂ, ಸಮಸ್ತ ಭವ್ಯಲೋಕಕ್ಕೆ ಅಲೌಕಿಕ ಸುಖವನ್ನೂ ಕೊಡುವುದೆಂದು ಖ್ಯಾತಿಪಡೆದ ಈ **ಆದಿಪುರಾಣ** ಕಾವ್ಯದಲ್ಲಿ ಪ್ರಮುಖವಾಗಿ ತಿಳಿಯುವ ಎರಡು ಅಂಶಗಳಿವೆ ಎಂದು ಕವಿಯೇ ಹೇಳಿದ್ದಾನೆ. ಅವುಗಳಲ್ಲಿ ಒಂದನೆಯದು '**ಕಾವ್ಯಧರ್ಮ**' ಹಾಗೂ ಎರಡನೆಯದು '**ಧರ್ಮ**'. ಪಂಪನು ಹೇಳುವ ಕಾವ್ಯಧರ್ಮವೆಂದರೇನು? ಕವಿಯು ನೀಡುವ ಕೆಲವು ಸುಳಿವುಸೂಚನೆಗಳಿಂದಲೂ ಹಾಗೂ **ಪೂರ್ವಪುರಾಣ**ದಲ್ಲಿ ಶ್ರೀ ಜಿನಸೇನಾಚಾರ್ಯರು ನೀಡುವ ವಿವರಣೆಗಳಿಂದಲೂ ಸರಳವಾಗಿ ಮತ್ತು ಕಾವ್ಯಸಂದರ್ಭಕ್ಕನುಸಾರವಾಗಿ **ಕಾವ್ಯಧರ್ಮ**ದ ಅರ್ಥವನ್ನು ತಿಳಿಯಲು ಪ್ರಯತ್ನಿಸೋಣ.

ಹಾಗಾದರೆ ಕಾವ್ಯಗುಣಗಳೆಂದರೆ ಯಾವುವು? ಅದನ್ನು ಪಂಪನೇ ೧–೨೬ ನೆಯ ವೃತ್ತಪದ್ಯದಲ್ಲಿ ವಿವರಿಸಿರುವನು. ಯಾವ ಕಾವ್ಯವು, (೧) ವಿದಿತವೂ, (೨) ಪ್ರಾತೀತಿಕವೂ, (೩) ಕೋಮಳವೂ, (೪) ಅತಿ ಸುಭಗವೂ, (೫) ಸುಂದರವೂ, (೬) ಸೂಕ್ತಿಗರ್ಭವೂ, (೭) ಮೃದುಸಂದರ್ಭವುಳ್ಳುದೂ, (೮) ವಿಚಾರಕ್ಷಮತ್ವವುಳ್ಳುದೂ, (೯) ಉಚಿತಪದಗಳಿಂದ ಕೂಡಿದುದೂ, (೧೦) ಶ್ರವ್ಯವಾದುದೂ, (೧೧) ಅವ್ಯಾಕುಳವಾದುದೂ, (೧೨) ದಿಗಂತದವರೆಗೆ ವ್ಯಾಪಿಸಿರುವುದೂ ಆಗಿರುವಂತಹ ಗುಣಗಳನ್ನು ಹೊಂದಿರುವುದೋ ಅದು ಶ್ರೇಷ್ಠಕಾವ್ಯವೆನಿಸುತ್ತದೆ. ಇಂತಹ ಶ್ರೇಷ್ಠವಾದ ಕಾವ್ಯಗುಣಗಳನ್ನು ವಿವರಿಸುವ ವಿಷಯವಾದ **ವಾಙ್ಮಯ**ವನ್ನು ವೃಷಭನಾಥರು ಆ ತೃತೀಯಕಾಲದಲ್ಲೇ ತಮ್ಮ ಹೆಣ್ಣುಮಕ್ಕಳಾದ ಬ್ರಾಹ್ಮೀ ಮತ್ತು ಸುಂದರಿಯರಿಗೆ ಉಪದೇಶಿಸಿದರು ಎಂದು **ಪೂರ್ವಪುರಾಣ**ದಲ್ಲಿ ಹೇಳಿದೆ. ವಚನಕ್ಕೆ ಶೋಭೆಯನ್ನುಂಟುಮಾಡುವ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ ಈ ಮೂರರ ಸಮೂಹಕ್ಕೆ ವಿದ್ವಾಂಸರು **ವಾಙ್ಮಯ**ವೆಂದು ಹೇಳುತ್ತಾರೆಂದು **ಪೂರ್ವಪುರಾಣ**ದಲ್ಲಿ ಶ್ರೀ ಜಿನಸೇನಾಚಾರ್ಯರು ಹೇಳುತ್ತಾರೆ. ಹಾಗೆ ವೃಷಭನಾಥರು ತಮ್ಮ ಹೆಣ್ಣುಮಕ್ಕಳಿಗೆ ಉಪದೇಶಿಸಿದ ವ್ಯಾಕರಣದಿಂದ **ಸ್ವಾಯಂಭುವ** ಎಂಬ ವ್ಯಾಕರಣಶಾಸ್ತ್ರ ಗ್ರಂಥ ಹುಟ್ಟಿತು. ಹಾಗೆಯೇ ವೃಷಭನಾಥರು ತಮ್ಮ ಪುತ್ರಿಯರಿಗೆ ಛಂದಸ್ಸಿನ, ಉಕ್ತೆ, ಅತ್ಯುಕ್ತೆ, ಮಧ್ಯೆ, ಪ್ರತಿಷ್ಠೆ, ಸುಪ್ರತಿಷ್ಠೆ, ಗಾಯತ್ರಿ, ಉಷ್ಣಿಕ್ಕು, ಅನುಷ್ಟುಪ್ಪು, ಬೃಹತಿ, ಪಂಙ್ಕ್ತಿ, ತ್ರಿಷ್ಟುಪ್ಪು, ಜಗತಿ, ಅತಿಜಗತಿ, ಶಕ್ವರಿ, ಅತಿಶಕ್ವರಿ, ಅಷ್ಟಿ, ಅತ್ಯಷ್ಟಿ, ಧೃತಿ, ಅತಿಧೃತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅತಿಕೃತಿ, ಉತ್ಕೃತಿ ಎಂಬ ೨೬ ಭೇದಗಳನ್ನೂ ಹಾಗೂ ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವಿತ್ರಯಾದಿಲಗಕ್ರಿಯಾ, ಸಂಖ್ಯಾ, ಅಧ್ವಯೋಗಗಳೆಂಬ ಛಂದಸ್ಸಿನ ೬ ಪ್ರತ್ಯಯಗಳನ್ನೂ ಉಪದೇಶಿಸಿದರು. ಅಲ್ಲದೇ **ಅಲಂಕಾರ ಸಂಗ್ರಹ**ದ ಮಾರ್ಗದ್ವಯಗಳಾದ **ಗೌಡ** ಮತ್ತು **ವೈದರ್ಭ**ಗಳನ್ನೂ, ಹಾಗೂ **ವೈದರ್ಭ ಮಾರ್ಗ**ದ **ಪ್ರಾಣ**ಗಳೆಂದು ತಿಳಿಯುವ, (೧) ಶ್ಲೇಷ, (೨) ಪ್ರಸಾದ, (೩) ಸಮತೆ, (೪) ಮಾದುರ್ಯ, (೫) ಸುಕುಮಾರತೆ, (೬) ಅರ್ಥವ್ಯಕ್ತಿ, (೭)

ಉದಾರತ್ವ, (೮) ಓಜಸ್ಸು, (೯) ಕಾಂತಿ, (೧೦) ಸಮಾದಿ ಎಂಬ ಹತ್ತು ಕಾವ್ಯಗುಣಗಳನ್ನು ಅಥವಾ ಕಾವ್ಯಧರ್ಮವನ್ನು ಉಪದೇಶಿಸಿದರು. ಇವುಗಳಿಗೆ ಸಂಬಂಧಿಸಿದ **ಪೂರ್ವಪುರಾಣದ** ಶ್ಲೋಕಗಳು ಹೀಗಿವೆ:

ನ ವಿನಾ ವಾಙ್ಮಯಾತ್ಕಿಂಚಿದಸ್ತಿ ಶಾಸ್ತ್ರಂ ಕಲಾಪಿ ವಾ ।
ತತೋ ವಾಙ್ಮಯಮೇವಾದೌ ವೇಧಾಸ್ತಾಭ್ಯಾಮುಪಾದಿಶತ್ ॥ಪೂ.ಪು., ೧೬-೧೦೯॥

ಅರ್ಥ: ವಾಙ್ಮಯವನ್ನು ಬಿಟ್ಟು ಶಾಸ್ತ್ರವಾಗಲಿ ಕಲೆಯಾಗಲಿ ಯಾವುದೂ ಇಲ್ಲದಿವುದರಿಂದ ಆದಿಬ್ರಹ್ಮರು ಮೊದಲು ಆ ಪುತ್ರಿಯರಿಗೆ ವಾಙ್ಮಯ (ವ್ಯಾಕರಣ ಛಂದಸ್ಸು ಅಲಂಕಾರ) ವನ್ನೇ ಉಪದೇಶಮಾಡಿದರು.

ಸುಮೇಧಸಾ ವಸಮ್ಮೋಹಾದಧ್ಯೇಷಾತಾಂ ಗುರೋರ್ಮುಖಾತ್ ।
ವಾಗ್ದೇವ್ಯಾವಿವ ನಿಃಶೇಷಂ ವಾಙ್ಮಯಂ ಗ್ರಂಥತೋರ್ಥತಃ ॥ಪೂ.ಪು., ೧೬-೧೧೦॥

ಅರ್ಥ: ಸರಸ್ವತಿಯಂತಿರುವವರೂ ಬುದ್ಧಿಮತಿಯರೂ ಆದ ಬ್ರಾಹ್ಮೀಸುಂದರಿಯರು ಗುರು (ಸ್ವಾಮಿ) ಮುಖದಿಂದ ಕ್ರಮವಾಗಿ ಗ್ರಂಥವನ್ನೂ ಅರ್ಥವನ್ನೂ ತಿಳಿಯುತ್ತ ಸಮಸ್ತ ಶಾಸ್ತ್ರವನ್ನೂ ಅಧ್ಯಯನ ಮಾಡಿದರು.

ಪದವಿದ್ಯಾಮಥಚ್ಛಂದೋವಿಚಿತಿಂ ವಾಗಲಂಕೃತಿಮ್ ।
ತ್ರಯೀಂ ಸಮುದಿತಾ ಮೇತಾಂ ತದ್ವಿದೋ ವಾಙ್ಮಯಂ ವಿದುಃ ॥ಪೂ.ಪು., ೧೬-೧೧೧॥

ಅರ್ಥ: ವಚನಕ್ಕೆ ಶೋಭೆಯನ್ನುಂಟುಮಾಡುವ ವ್ಯಾಕರಣವಿದ್ಯಾ ಛಂದಶ್ಯಾಸ್ತ್ರ ಅಲಂಕಾರವಿದ್ಯಾ ಈ ಮೂರರ ಸಮುದಾಯಕ್ಕೆ ವಿದ್ವಾಂಸರು ವಾಙ್ಮಯವೆಂದು ಹೇಳುತ್ತಾರೆ.

ತದಾ ಸ್ವಾಯಂಭುವಂ ನಾಮ ಪದಶಾಸ್ತ್ರಮಭೂನ್ಮಹತ್ ।
ಯತ್ತತ್ಪರಃಶತಾಧ್ಯಾಯೈರತಿಗಂಭೀರಮಬ್ಧಿವತ್ ॥ಪೂ.ಪು., ೧೬-೧೧೨॥

ಅರ್ಥ: ಆಗ ನೂರಕ್ಕಿಂತ ಹೆಚ್ಚಾದ ಅಧ್ಯಾಯಗಳಿಂದ ಸಮುದ್ರದಂತೆ ಅತ್ಯಂತ ಗಂಭೀರವಾದ "ಸ್ವಾಯಂಭುವ"ವೆಂದು ಹೆಸರುಳ್ಳ ದೊಡ್ಡ ವ್ಯಾಕರಣಶಾಸ್ತ್ರವುಂಟಾಯಿತು.

ಛಂದೋವಿಚಿತಿಮುಖ್ಯೇವಂ ನಾನಾಧ್ಯಾಯೈರುಪಾದಿಶತ್ ।
ಉಕ್ತಾತ್ಯುಕ್ತಾದಿಭೇದಾಂಶ್ಚ ಷಡ್ವಿಂಶತಿ ಮದೀದೃಶತ್ ॥ಪೂ.ಪು., ೧೬-೧೧೩॥

ಅರ್ಥ: ಹೀಗೇ ಛಂದಶ್ಯಾಸ್ತ್ರವನ್ನೂ ಅಲಂಕಾರಶಾಸ್ತ್ರವನ್ನೂ ಅನೇಕ ಅಧ್ಯಾಯಗಳಿಂದ ಉಪದೇಶ ಮಾಡಿದರು. ಉಕ್ತಾ ಅತ್ಯುಕ್ತಾ ಮಧ್ಯಾ ಪ್ರತಿಷ್ಠಾ ಮೊದಲಾದ ಛಂದಶ್ಯಾಸ್ತ್ರದ ಇಪ್ಪತ್ತಾರು ಭೇದಗಳನ್ನೂ ಉಪದೇಶ ಮಾಡಿದರು.

ಪ್ರಸ್ತಾರಂ ನಷ್ಟಮುದ್ದಿಷ್ಟಮೇಕದ್ವಿತ್ರಿಲಗಕ್ರಿಯಾಮ್ ।
ಸಂಖ್ಯಾಮಥಾಧ್ವಯೋಗಂ ಚ ವ್ಯಾಜಹಾರ ಗಿರಾಂಪತಿಃ ॥ಪೂ.ಪು., ೧೬-೧೧೪॥

ಅರ್ಥ: ಸ್ವಾಮಿಯು ಪ್ರಸ್ತಾರ ನಷ್ಟ ಉದ್ದಿಷ್ಟ ಏಕದ್ವಿತ್ರಿಲಗಕ್ರಿಯಾ ಸಂಖ್ಯಾ ಅಧ್ವಯೋಗ ಈ ಆರು ಛಂದಶ್ಯಾಸ್ತ್ರದ ಭೇದ (ಅಂಗ) ಗಳನ್ನೂ ಹೇಳಿದರು.

ಉಪಮಾದೀನಲಂಕಾರಾಂಸ್ತನ್ಮಾರ್ಗದ್ವಯವಿಸ್ತರಮ್ ।
ದಶಪ್ರಾಣಾನಲಂಕಾರಸಂಗ್ರಹೇ ವಿಭುರಭ್ಯಧಾತ್ ॥ಪೂ.ಪು., ೧೬-೧೧೫॥

ಅರ್ಥ: ಸ್ವಾಮಿಯು ಉಪಮಾ ಮೊದಲಾದ ಅಲಂಕಾರಗಳನ್ನೂ ಆ ಅಲಂಕಾರಗಳ ಗೌಡವೈದರ್ಭಗಳೆಂಬೆರಡು ರೀತಿಗಳನ್ನೂ ಹತ್ತುಪ್ರಾಣ (ಔದಾರ್ಯಾದಿಗುಣ) ಗಳನ್ನೂ ಅಲಂಕಾರಸಂಗ್ರಹದಲ್ಲಿ ಹೇಳಿದರು.

ಕೇದಾರಭಟ್ಟ ವಿರಚಿತ ವೃತ್ತರತ್ನಾಕರದಲ್ಲಿ ಛಂದಸ್ಸಿನ ಇಪ್ಪತ್ತಾರು ಭೇದಗಳನ್ನು ತಿಳಿಸುವ ಶ್ಲೋಕಗಳು ಹೀಗಿವೆ:

ಉಕ್ತಾऽತ್ಯುಕ್ತಾ ತಥಾ ಮಧ್ಯಾ ಪ್ರತಿಷ್ಠಾऽನ್ಯಾ ಸುಪೂರ್ವಿಕಾ ।
ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಙ್ಕ್ತಿರೇವ ಚ ॥ (ವೃತ್ತರತ್ನಾಕರ, ೧-೧೯)

ತ್ರಿಷ್ಟುಪ್ ಚ ಜಗತೀ ಚೈವ ತಥಾऽತಿಜಗತೀ ಮತಾ ।
ಶಕ್ವರೀ ಸಾऽತಿಪೂರ್ವಾ ಸ್ಯಾದಷ್ಟ್ಯತ್ಯಷ್ಟೀ ತಥಾ ಸ್ಮೃತೇ ॥ (ವೃತ್ತರತ್ನಾಕರ, ೧-೨೦)

ಧೃತಿಶ್ಚಾತಿಧೃತಿಶ್ಚೈವ ಕೃತಿಃ ಪ್ರಕೃತಿರಾಕೃತಿಃ ।
ವಿಕೃತಿಃ ಸಂಕೃತಿಶ್ಚೈವ ತಥಾऽತಿಕೃತಿರುತ್ಕೃತಿಃ ॥ (ವೃತ್ತರತ್ನಾಕರ, ೧-೨೧)

ಭಾವಾರ್ಥ: ಉಕ್ತಾ, ಅತ್ಯುಕ್ತಾ, ಮಧ್ಯಾ, ಪ್ರತಿಷ್ಠಾ, ಸುಪ್ರತಿಷ್ಠಾ, ಗಾಯತ್ರಿ, ಉಷ್ಣಿಕ್, ಅನುಷ್ಟುಪ್, ಬೃಹತಿ, ಪಂಜ್ಕ್ತಿ, ತ್ರಿಷ್ಟುಪ್, ಜಗತೀ, ಅತಿಜಗತೀ, ಶಕ್ವರಿ, ಅತಿಶಕ್ವರಿ, ಅಷ್ಟಿ, ಅತ್ಯಷ್ಟಿ, ಧೃತಿ, ಅತಿಧೃತಿ, ಕೃತಿ, ಪ್ರಕೃತಿ, ಆಕೃತಿ, ವಿಕೃತಿ, ಸಂಕೃತಿ, ಅತಿಕೃತಿ, ಉತ್ಕೃತಿ. ಈ ಛಂದಸ್ಸಿನಲ್ಲಿ ನಾಲ್ಕುನಾಲ್ಕು ಅಕ್ಷರ ಹೆಚ್ಚಾಗುತ್ತಾ ಹೋಗುತ್ತದೆ.

ಹಾಗೆಯೇ ಛಂಸ್ಸಿನ ಆರು ಪ್ರತ್ಯಯಗಳನ್ನು ತಿಳಿಸುವ **ವೃತ್ತರತ್ನಾಕರದಲ್ಲಿನ** ಶ್ಲೋಕವು ಹೀಗಿದೆ:

ಪ್ರಸ್ತಾರೋ ನಷ್ಟಮುದ್ದಿಷ್ಟಮೇಕದ್ವ್ಯಾದಿಲಗಕ್ರಿಯಾ ।
ಸಂಖ್ಯಾ ಚೈವಾಧ್ವಯೋಗಶ್ಚ ಷಡೇತೇ ಪ್ರತ್ಯಯಾಃ ಸ್ಮೃತಾಃ ॥ (ವೃತ್ತರತ್ನಾಕರ, ೬–೧)

ಭಾವಾರ್ಥ: ಪ್ರಸ್ತಾರ, ನಷ್ಟ, ಉದ್ದಿಷ್ಟ, ಏಕದ್ವ್ಯಾದಿಲಗಕ್ರಿಯಾ, ಸಂಖ್ಯೆ, ಮತ್ತು ಅಧ್ವಯೋಗ ಇವು ಆರನ್ನು ಪ್ರತ್ಯಯ ಎಂದು ಹೇಳುತ್ತಾರೆ.

ದಂಡಿಯ **ಕಾವ್ಯಾದರ್ಶ**ದ ಕಾವ್ಯಮಾರ್ಗಗಳ ವಿಭೇದದಲ್ಲಿ ಮೊದಲನೆಯದಾದ ವೈದರ್ಭಮಾರ್ಗದಲ್ಲಿ ಕಾವ್ಯಗುಣ (ಧರ್ಮ) ಗಳನ್ನು ಹೀಗೆ ಹೇಳಿದೆ:

ಅಸ್ತ್ಯನೇಕೋ ಗಿರಾಂ ಮಾರ್ಗಃ ಸೂಕ್ಷ್ಮಭೇದಃ ಪರಸ್ಪರಮ್ ।
ತತ್ರ ವೈದರ್ಭಗೌಡೀಯಾ ವರ್ಣ್ಯೇತೇ ಪ್ರಸ್ಫುಟಾಂತರೌ ॥ (ಕಾವ್ಯಾದರ್ಶ, ೧–೪೦)

ಅರ್ಥ: ಮಾತುಗಳ ಮಾರ್ಗ ಅನೇಕವಾಗಿವೆ; ಒಂದೊಂದಕ್ಕೂ ಇರುವ ಭೇದಗಳು ಬಹಳ ಸೂಕ್ಷ್ಮ. ಆದ್ದರಿಂದ (ಅವೆಲ್ಲವನ್ನೂ ಹೇಳಲು ಹೊರಡದೆ) ಭೇದಗಳು ಸ್ಪಷ್ಟವಾಗಿರುವ 'ವೈದರ್ಭ' ಮತ್ತು 'ಗೌಡೀಯ' ಎಂಬ ಎರಡು ಮಾರ್ಗಗಳನ್ನು ಮಾತ್ರ ವಿವರಿಸುತ್ತೇವೆ.

ಶ್ಲೇಷಃ ಪ್ರಸಾದಃ ಸಮತಾ ಮಾಧುರ್ಯಂ ಸುಕುಮಾರತಾ ।
ಅರ್ಥವ್ಯಕ್ತಿರುದಾರತ್ವಮೋಜಃ ಕಾಂತಿಸಮಾಧಯಃ ॥ (ಕಾವ್ಯಾದರ್ಶ, ೧–೪೧)

ಅರ್ಥ: (೧) ಶ್ಲೇಷ, (೨) ಪ್ರಸಾದ, (೩) ಸಮತೆ, (೪) ಮಾದುರ್ಯ, (೫) ಸುಕುಮಾರತೆ, (೬) ಅರ್ಥವ್ಯಕ್ತಿ, (೭) ಉದಾರತ್ವ, (೮) ಓಜಸ್ಸು, (೯) ಕಾಂತಿ, (೧೦) ಸಮಾಧಿ [ಎಂಬ ಕಾವ್ಯದ ಹತ್ತು ಗುಣಗಳನ್ನು ಅಥವಾ ಧರ್ಮಗಳನ್ನು ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಹೇಳಿದ್ದಾನೆ.]

ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶ ಗುಣಾಃ ಸ್ಮೃತಾಃ ॥
ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ ॥ (ಕಾವ್ಯಾದರ್ಶ, ೧–೪೨)

ಅರ್ಥ: ಈ ಹತ್ತು ಗುಣಗಳೂ ವೈದರ್ಭಮಾರ್ಗದ ಪ್ರಾಣಗಳೆಂದು ತಿಳಿಯುತ್ತಾರೆ. ಪ್ರಾಯಃ ಇವುಗಳ ವಿಪರ್ಯಾಸವೇ ಗೌಡಮಾರ್ಗದಲ್ಲಿ ಕಾಣಬರುತ್ತದೆ.

ದಂಡಿ, ಕೇದಾರಭಟ್ಟ ಇತ್ಯಾದಿ ೬–೮ ನೆಯ ಶತಮಾನದಿಂದೀಚೆಗೆ ಬಂದಿರುವ ಕಾವ್ಯಮೀಮಾಂಸಕರೂ, ವ್ಯಾಕರಣಕಾರರೂ, ಆಲಂಕಾರಿಕರೂ, ಅವರ ಗ್ರಂಥಗಳಲ್ಲಿರುವ, ಅವರಿಗಿಂತ ಪ್ರಾಚೀನ ಗ್ರಂಥಗಳಲ್ಲಿ ಕಾಣದಿರುವ ಮತ್ತು ಇವರೇ ಪ್ರಥಮಭಾರಿಗೆ ಪ್ರತಿಪಾದಿಸಿರುವುದೆಂದು ಹೇಳಲಾಗುವ, ಅನೇಕ ವಿಷಯಗಳನ್ನು ವೃಷಭನಾಥರು **ಸುಷಮ–ದುಷ್ಷಮ**ವೆಂಬ ತೃತೀಯ ಕಾಲದಲ್ಲೇ ಬ್ರಾಹ್ಮೀ ಮತ್ತು ಸುಂದರಿ ಎಂಬ ತನ್ನ ಇಬ್ಬರು ಪುತ್ರಿಯರಿಗೆ ಉಪದೇಶಿಸಿದ್ದರು ಎನ್ನುವುದು ಇಲ್ಲಿ ಉಲ್ಲೇಖಾರ್ಹ ವಿಷಯವಾಗಿದೆ.

ಈಗ ನಾವು ಸಂಕೀರ್ಣವಾದ ಕಾವ್ಯಮೀಮಾಂಸೆಯ ಗೊಡವೆಗೆ ಹೋಗದೆ, ಈ ಮೇಲೆ ಸಂಗ್ರಹಿಸಿರುವ ವಿಷಯಗಳಿಂದ ಸ್ಥೂಲವಾಗಿ **ಕಾವ್ಯಧರ್ಮ**ದ ಒಟ್ಟಾರೆ ಸಾರಾಂಶವನ್ನು ಹೀಗೆ ಗ್ರಹಿಸಬಹುದು: ಕಾವ್ಯಧರ್ಮವೆಂದರೆ, ಮಹಾಕಾವ್ಯದ ಲಕ್ಷಣಗಳಾದ ಕಥಾನಿರೂಪಣೆ, ಅಷ್ಟಾದಶ ವರ್ಣನೆ, ವ್ಯಾಕರಣ, ಛಂದಸ್ಸು, ಅಲಂಕಾರ, ವಕ್ರೋಕ್ತಿ, ಧ್ವನಿ, ಶೃಂಗಾರವೀರಕರುಣಾದಿ ರಸಪುಷ್ಟಿ, ಸಂವಾದ, ಲಾಲಿತ್ಯ, ಓಜಸ್ಸು, ವಾಗ್ವಿಳಾಸ ಇತ್ಯಾದಿಗಳನ್ನುಳ್ಳದ್ದು ಎನ್ನಬಹುದು. ಕಾವ್ಯದಲ್ಲಿ ವಾಕ್ ಅಥವಾ ಭಾಷೆಯದು ಪ್ರಮುಖಪಾತ್ರ ಎನ್ನುವುದು ಸರ್ವವಿದಿತವೇ ಆಗಿದೆ. ಈ **ಆದಿಪುರಾಣ** ಮಹಾಕಾವ್ಯವು, ಹಳಗನ್ನಡದಲ್ಲಿ ರಚಿತವಾಗಿದೆ. ಇದು ಕನ್ನಡ ಭಾಷೆಯಲ್ಲಿ ರಚಿತವಾದ ಕಾವ್ಯವೇ ಹೌದಾದರೂ, ಇದು ಸಂಸ್ಕೃತ ಭೂಯಿಷ್ಠವಾದದ್ದು. ಅಷ್ಟೇ ಅಲ್ಲದೇ ಇದರಲ್ಲಿ ವ್ಯಾಪಕವಾಗಿ ಪ್ರಾಕೃತ ಭಾಷೆಯ ಪದಗಳನ್ನು ಪಂಪನು ಸಂದರ್ಭಾನುಸಾರ ಸಹಜವಾಗಿ ಬಳಸಿರುವನು. ಕಾವ್ಯದಲ್ಲಿ ಸಾಂದರ್ಭಿಕವಾಗಿ ಕವಿಯ ಕಾಲಘಟ್ಟದ ಕನ್ನಡದ ದೇಸಿ ಶಬ್ದ (ಆಡುಮಾತು) ಗಳನ್ನು ಪ್ರಯೋಗಿಸಿ ಕಾವ್ಯದ ಭಾಷೆಯ ಸೊಗಡನ್ನು ಹೆಚ್ಚಿಸಿದ್ದಾನೆ. ಈ ಭಾಗವೇ ಸುಕವಿಗಳಿಗೆ ಹರ್ಷವನ್ನುಂಟುಮಾಡುವ ಭಾಗ. ಹೀಗೆ ವೃಷಭನಾಥರು ತಮ್ಮ ಹೆಣ್ಣುಮಕ್ಕಳಿಗೆ ಉಪದೇಶಿಸಿದ ಕಾವ್ಯಧರ್ಮದ ವಿಷಯಕಗಳಾದ ವ್ಯಾಕರಣ, ಛಂದಸ್ಸು, ಅಲಂಕಾರಗಳು ಮತ್ತು ಅವುಗಳ ಎಲ್ಲ ಒಳಭೇದಗಳನ್ನು ಪಂಪನ ಆದಿಪುರಾಣ ಕಾವ್ಯವು ಮೈಗೂಡಿಸಿಕೊಂಡಿದೆ.

ಇನ್ನು ಕವಿಯು ಹೇಳುವಂತೆ ಈ ಕಾವ್ಯದಲ್ಲಿ ಅರಿಯಬೇಕಾಗಿರುವ ಎರಡನೆಯ ಅಂಶ, ಬಹಳ ಮುಖ್ಯವಾದದ್ದು '**ಧರ್ಮ**'. **ಧರ್ಮ**ದ ವಿಚಾರವಂತೂ ಈ ಕಾವ್ಯದ ತುಂಬೆಲ್ಲಾ ಹಾಸುಹೊಕ್ಕಾಗಿದೆ. ಅದಕ್ಕಾಗಿಯೇ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತಮ್ಮ '**ನಾಡೋಜ ಪಂಪ**' ಗ್ರಂಥದಲ್ಲಿ ಪಂಪನ ಆದಿಪುರಾಣದಲ್ಲಿ '**ಧರ್ಮವೇ ಕಾವ್ಯಧರ್ಮವಾಗಿ ಹರಿಯುವುದು**' ಎಂದಿದ್ದಾರೆ. ಇಲ್ಲಿ **ಧರ್ಮ**ವೆಂದರೆ ಯಾವ ಧರ್ಮ? ಸಂದರ್ಭೋಚಿತವಾಗಿ ಇಲ್ಲಿ **ಧರ್ಮ** ಎಂದರೆ '**ಜಿನಧರ್ಮ**' ಎಂದೇ ಭಾವಿಸಬೇಕು. (**ಧರ್ಮ** ಶಬ್ದದ ಹೆಚ್ಚಿನ ವಿವರಣೆಗಳಿಗೆ ಎರಡನೆಯ ಆಶ್ವಾಸದ ೫ನೆಯ ವೃತ್ತಪದ್ಯದ ನಂತರ ಬರುವ ವಚನಕ್ಕೆ (೨–೫ (ವ)) ನೀಡಿರುವ **ವಿಶೇಷ ವಿವರಣೆ**ಯಲ್ಲಿ **ಸದ್ಧರ್ಮ**

ಶಬ್ದಕ್ಕೆ ನೀಡಿರುವ ವಿವರಣೆಯನ್ನು ನೋಡಿರಿ.) ಇದು ಭವ್ಯಲೋಕಕ್ಕೆ ಅಲೌಕಿಕ ಆನಂದವನ್ನುಂಟುಮಾಡುತ್ತದೆ. ಮುಂದಿನ ೧–೪೧ ನೆಯ ವೃತ್ತಪದ್ಯದಲ್ಲಿ ಕವಿಯೇ ಹೇಳುವಂತೆ ವೃಷಭಸೇನ ಗಣಧರರಾದಿಯಾಗಿ ಗೌತಮ ಗಣಧರರವರಗೆ (ವೃಷಭಸೇನರು ವೃಷಭತೀರ್ಥಂಕರರ ಗಣಧರರು ಹಾಗೂ ಗೌತಮರು ಮಹಾವೀರ ತೀರ್ಥಂಕರರ ಗಣಧರರು), ನಂತರ ಗೌತಮ ಗಣಧರರಾದಿಯಾಗಿ ವೀರಸೇನ, ಜಿನಸೇನಾಚಾರ್ಯ ಪರ್ಯಂತ ಬಂದಿರುವ ಶ್ರುತಸ್ಕಂಧವನ್ನೂ, ಆದಿ ತೀರ್ಥಂಕರರಾದ ವೃಷಭದೇವನ ಭವಾವಳಿಯನ್ನೂ ಈ ಕಥಾನಕದಲ್ಲಿ ಅಳವಡಿಸಿರುವುದಾಗಿ ಹೇಳಿದ್ದಾನೆ. ಅಂದರೆ, ಶ್ರೀ ಜಿನಸೇನಾಚಾರ್ಯರ **ಪೂರ್ವಪುರಾಣ**ವನ್ನು ಆಧರಿಸಿ ಹಾಗೂ ಅದನ್ನು ಅನುಸರಿಸಿಯೇ ಈ ಕಾವ್ಯವನ್ನು ಕನ್ನಡದಲ್ಲಿ ರಚಿಸಿರುವನು. ಅದಲ್ಲದೆ, ಶ್ರೀ ವೀರಸೇನಾಚಾರ್ಯರ **ಧವಳ ಗ್ರಂಥ**ಗಳು, ಶ್ರೀ ಅಕಳಂಕಾಚಾರ್ಯರ **ನ್ಯಾಯ ಗ್ರಂಥ**ಗಳು, ಶ್ರೀ ಉಮಾಸ್ವಾಮಿ ಆಚಾರ್ಯರ **ತತ್ತ್ವಾರ್ಥ ಸೂತ್ರ,** ಶ್ರೀ ಸಮಂತಭದ್ರಾಚಾರ್ಯರ **ರತ್ನಕರಂಡಕ ಶ್ರಾವಕಾಚಾರ,** ಶ್ರೀ ಯತಿವೃಷಭಾಚಾರ್ಯರ **ತಿಲೋಯಪಣ್ಣತ್ತೀ,** ಶ್ರೀ ಪೂಜ್ಯಪಾದಾಚಾರ್ಯರ **ಸರ್ವಾರ್ಥಸಿದ್ಧಿ,** ಶ್ರೀ ಭಟ್ಟ ಅಕಲಂಕರ **ರಾಜವಾರ್ತಿಕ,** ಶ್ರೀ ಶಿವಕೋಟಿ ಆಚಾರ್ಯರ **ಮೂಲಾರಾಧನಾ (ಭಗವತೀ ಆರಾಧನಾ),** ಶ್ರೀ ವಟ್ಟಕೇರಾಚಾರ್ಯರ **ಮೂಲಾಚಾರ,** ಇಂತಹ ಜೈನಸಿದ್ಧಾಂತ ಗ್ರಂಥಗಳಿಂದಲೂ, ಶ್ರೀ ಕುಂದುಕುಂದಾಚಾರ್ಯರ **ಸಮಯಸಾರ, ನಿಯಮಸಾರಾದಿ ಗ್ರಂಥಗಳು, ದಶಭಕ್ತಿ** ಇಂತಹ ಜೈನ ಆಧ್ಯಾತ್ಮ ಗ್ರಂಥಗಳಿಂದಲೂ ಮತ್ತು ಇನ್ನೂ ಅನೇಕ ಜೈನಶಾಸ್ತ್ರಗಳಿಂದ ಆಗಮವನ್ನು ಸಂಗ್ರಹಿಸಿ ಏಕದೇಶೀಯವಾಗಿ, ಆದರೆ ಬಹಳ ಸಮರ್ಥವಾಗಿ ಪಂಪನು ಈ ಆದಿಪುರಾಣದಲ್ಲಿ ಅಳವಡಿಸಿರುತ್ತಾನೆ. ಹತ್ತನೇ ಆಶ್ವಾಸ **'ಕೇವಲಜ್ಞಾನೋತ್ಪತ್ತಿ ವರ್ಣನಂ'** ಇದರಲ್ಲಿನ ೧೦–೧೪ (ವ) ಮತ್ತು ಹದಿನಾರನೇ ಆಶ್ವಾಸದ **'ಪರಿನಿರ್ವಾಣ ಕಲ್ಯಾಣವರ್ಣನಂ'** ಇದರಲ್ಲಿನ ೧೬–೪೯ (ವ) ಇದಕ್ಕೆ ಒಳ್ಳೆಯ ಉದಾಹರಣೆಗಳು. ಶ್ರುತಸ್ಕಂಧದ ನಾಲ್ಕು ಅನುಯೋಗಗಳೂ ಸಾಂದ್ರವಾಗಿ ಈ ಕಾವ್ಯದ ತುಂಬಾ ಪಸರಿಸಿಕೊಂಡಿವೆ.

ಡಾ. ಡಿ.ವಿ.ಜಿ. ಯವರು ಕಾವ್ಯ ಕ್ರಿಯೆಗಳ ಬಗ್ಗೆ ಹೀಗೆ ಹೇಳುತ್ತಾರೆ: 'ಕಾವ್ಯ ಕ್ರಿಯೆ ಎರಡು ಘಟ್ಟಗಳಲ್ಲಿ ನಡೆಯಬಹುದಾಗಿದೆ: (೧) ಮನೋರಂಜನೆ, (೨) ಜೀವೋತ್ಕರ್ಷ. ಯಾವ ಕಾವ್ಯವು ಮೊದಲನೆಯ ಕ್ರಿಯೆಯಿಂದ ಮುಗಿಯದೆ ಎರಡನೆಯ ಕ್ರಿಯೆಗೂ ತೊಡಗುತ್ತದೆಯೋ ಅದು ಮಹಾಕಾವ್ಯವಾಗುತ್ತದೆ.' ಈ ಆದಿಪುರಾಣದಲ್ಲಿ ಕಾವ್ಯ ಕ್ರಿಯೆಯ ಮೊದಲನೆಯ ಘಟ್ಟವಾದ ಮನೋರಂಜನೆ ಎನ್ನುವುದು ಪಂಪನು ಹೇಳುವ **'ಕಾವ್ಯ ಧರ್ಮ'**. ಎರಡನೆಯ ಘಟ್ಟವಾದ ಜೀವೋತ್ಕರ್ಷ ಎನ್ನುವುದು ಪಂಪನು ಹೇಳುವ **'ಧರ್ಮ'**. ಕವಿಯು ಈ ಕಾವ್ಯದ ಬಹ್ವಂಶದಲ್ಲಿ ಧರ್ಮವನ್ನು ಕಾವ್ಯಧರ್ಮವನ್ನಾಗಿ ಹರಿಸಿ, ಕಾವ್ಯಧರ್ಮವನ್ನೂ, ಧರ್ಮವನ್ನೂ ಸಮನ್ವಯಗೊಳಿಸಿರುತ್ತಾನೆ. ಪಂಪನ ಆದಿಪುರಾಣದಲ್ಲಿ **ಕಾವ್ಯಧರ್ಮ** ಮತ್ತು **ಧರ್ಮ** ಈ ಎರಡೂ ಒಂದರೊಳಗೊಂದು ಮೇಳೈಸಿದ್ದು, **ಆದಿಪುರಾಣ**ವು ಕನ್ನಡ ಭಾಷೆಯ ಅತ್ಯಂತ ಶ್ರೇಷ್ಠವಾದ ಆದಿಕಾವ್ಯವೂ ಹಾಗೂ ಮಹಾಕಾವ್ಯವೂ ಆಗಿದೆ.

ಇತರೆ ಕಾವ್ಯ/ಶಾಸ್ತ್ರಗ್ರಂಥ/ಶಾಸನಗಳ ಉಲ್ಲೇಖಗಳು:

ಎಮಗೆ ಮಲಧಾರಿಸಿದ್ಧಾಂ
ತಮುನೀಶ್ವರಚರಣಸರಸಿಜಾತಂ ದೇವೇಂ
ದ್ರಮುನಿಪದಾಬ್ಜಂ ಜಯನಂ
ದಿಮುನಿಕ್ರಮಕಮಳಮೀಗೆ ಬೋಧೋದಯಮಂ ॥ ೧-೧೩

ಈ ಪದ್ಯವನ್ನು ಒಮ್ಮೆ ಓದಿದರೆ, ಇದನ್ನು ಈ ಕೆಳಗಿರುವಂತೆ ಸರಳವಾಗಿ ಅರ್ಥೈಸ ಬಹುದಾಗಿದೆ:

'ಮಲಧಾರಿ ಸಿದ್ಧಾಂತ ಮುನೀಶ್ವರರ ಪಾದಕಮಲಗಳು, ದೇವೇಂದ್ರ ಮುನಿಗಳ ಪಾದಕಮಲಗಳು ಮತ್ತು ಜಯನಂದಿ ಮುನಿಗಳ ಪಾದಕಮಲಗಳು ನಮಗೆ ಸಮ್ಯಗ್ಜ್ಞಾನ ಉಂಟಾಗುವಂತೆ ಅನುಗ್ರಹಿಸಲಿ'

ಆದರೆ, ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದ, ಆಂಧ್ರಪ್ರದೇಶ (ಈಗಿನ ತೆಲಂಗಾಣ) ರಾಜ್ಯದ ಕರೀಂನಗರ ಜಿಲ್ಲೆಯ ಕರೀಂನಗರ ತಾಲ್ಲೂಕಿನ ಗಂಗಾಧರಂ ಮಂಡಲದ ಕುರ್ಕ್ಯಾಲ ಗ್ರಾಮದ ಸಮೀಪದಲ್ಲಿರುವ ಬೊಮ್ಮಲಮ್ಮಗುಟ್ಟದ (ಇದು ಸಿದ್ದುಲಗುಟ್ಟ, ಬೊಮ್ಮಲಮ್ಮ ತಲ್ಲಿ ಗುಟ್ಟ, ವೃಷಭಾದ್ರಿ ಬೆಟ್ಟ ಎಂದೂ ಕರೆಯಲ್ಪಡುತ್ತದೆ) ಮೇಲಿನ ಒಂದು ಬಂಡೆಯ ಮೇಲೆ ದೊರಕಿರುವ ಕನ್ನಡದ ಆದಿಕವಿ ಪಂಪನಿಗೆ ಸಂಬಂಧಿಸಿದ ಶಾಸನವು, ಈ ಪದ್ಯದ ಒಟ್ಟಾರೆ ಭಾವಾರ್ಥವನ್ನು ಬದಲಿಸುತ್ತದೆ ಎಂದರೆ ಸೋಜಿಗವೆನಿಸದೆ ಇರದು. ಈ ಶಾಸನವನ್ನು ಮಾಡಿಸಿರುವವನು ಪಂಪನ ತಮ್ಮನಾದ **'ಜಿನವಲ್ಲಭ'**. ಆದುದರಿಂದ ಈ ಶಾಸನವು **'ಜಿನವಲ್ಲಭನ ಶಾಸನ'**ವೆಂದೂ, ಗಂಗಾಧರಂ ಮಂಡಲದಲ್ಲಿರುವುದರಿಂದ **'ಗಂಗಾಧರಂ ಶಾಸನ'**ವೆಂದೂ, ಕುರ್ಕ್ಯಾಲ ಹಳ್ಳಿಯ ಹತ್ತಿರವಿರುವುದರಿಂದ **'ಕುರ್ಕ್ಯಾಲ ಶಾಸನ'**ವೆಂದೂ, ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿದೆ. ಈ ಪದ್ಯಕ್ಕೆ ಸಂಬಂಧಿಸಿದಂತೆ, ಮತ್ತು ಪಂಪನು ಮುಂದಿನ ೧-೧೪ನೆಯ ಪದ್ಯದಲ್ಲಿ ತಾನು **'ಕೊಂಡಕುಂದಾನ್ವಯ ನಂದನವನದ ಶುಕ'** ಎಂದು ಹೇಳಿಕೊಳ್ಳುವ ಆ **'ಕೊಂಡಕುಂದಾನ್ವಯದ'** ಗುರುಪರಂಪರೆಯನ್ನು, ಆ ಶಾಸನವು ಖಚಿತಪಡಿಸುತ್ತದೆ. ಅಲ್ಲದೆ, ಪಂಪನು ತಾನು ತನ್ನ ಕಾವ್ಯಗಳಲ್ಲಿ ಹೇಳಿಕೊಳ್ಳುವ ತನ್ನ ವಂಶಾವಳಿ, ಗೋತ್ರ, ಬಿರುದುಗಳು, ಇತ್ಯಾದಿಗಳು, ಜಿನವಲ್ಲಭನು ತನ್ನ ಶಾಸನದಲ್ಲಿ ಹೊಗಳಿರುವ ತನ್ನ ವಂಶಾವಳಿ, ಗೋತ್ರ, ಇತ್ಯಾದಿಗಳಿಗೆ ಸರಿಹೊಂದುತ್ತದೆ. ಅಲ್ಲದೆ ಜಿನವಲ್ಲಭನು ತಾನು ಪಂಪನ ತಮ್ಮ ಎಂದು ಶಾಸನದಲ್ಲಿ ಹೇಳಿಕೊಂಡಿದ್ದಾನೆ. ಈ ಶಾಸನವು ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿರುತ್ತದೆ. ಶಾಸನವು ಮೊದಲಿಗೆ, ಕನ್ನಡ ಭಾಷೆಯಲ್ಲಿ ವಚನದಿಂದ ಪ್ರಾರಂಭವಾಗುತ್ತದೆ. ನಂತರದ ಮೂರು ವೃತ್ತಗಳು ಸಂಸ್ಕೃತದಲ್ಲಿವೆ. ನಂತರದ ಆರು ವೃತ್ತಗಳು ಕನ್ನಡದಲ್ಲಿವೆ. ಕೊನೆಯ ಮೂರು ಕಂದ ಪದ್ಯಗಳು ತೆಲುಗಿನಲ್ಲಿವೆ. ಶಾಸನದ ಕೊನೆಯಲ್ಲಿ **'ಎನ್ದು ಲೋಕಮೆಲ್ಲಂ ಪೊಗೞೆ ನೆಗೞ್ದ ಜಿನವಲ್ಲಭನ ಸುಧರ್ಮ್ಮಸನ್ತತಿಯೊಳ್ಪೊಟ್ಟ ಗುಣಾವಳಿಯನೀ ವೃಷಭಗಿರಿಯ ಸಿದ್ಧಶಿಲೆಯೊಳೞಿಯಮ್ಮಂ ಟಂಕೋತ್ಕೀರ್ಣ್ಣಮ್ಮಾಡಿದಂ ॥'** ಎಂಬ ಕನ್ನಡದಲ್ಲಿರುವ ಒಂದು ಸಾಲಿನ ಕಂಡರಣೆಕಾರನ ಪ್ರಶಸ್ತಿಯಿಂದ ಶಾಸನವು ಕೊನೆಗೊಳ್ಳುತ್ತದೆ. ಆದರೆ ಇಲ್ಲಿ, ಈ ಪದ್ಯಕ್ಕೆ ಸಂಬಂಧಿಸಿದ ಅಂಶವನ್ನೊಳಗೊಂಡ, ಶಾಸನದ ಪ್ರಾರಂಭಿಕ ಭಾಗವಾದ ವಚನ (ಗದ್ಯ) ವನ್ನು ಮಾತ್ರ, ಅದರ ಪದವಿಭಾಗ, ವಚನದ ಪದಗಳ ಅರ್ಥ ಹಾಗೂ ಅನ್ವಯದೊಂದಿಗೆ, ವಾಚಕರ ಕುತೂಹಲಕ್ಕಾಗಿ ಈ ಕೆಳಗೆ ಕೊಡಲಾಗಿದೆ:

ಜಿನವಲ್ಲಭನ ಶಾಸನದಲ್ಲಿನ ಪ್ರಾರಂಭದ ವಚನ (ಗದ್ಯ) ಭಾಗ

ಆಂಧ್ರಪ್ರದೇಶ (ಈಗಿನ ತೆಲಂಗಾಣ) ರಾಜ್ಯದ ಕರೀಂನಗರ ಜಿಲ್ಲೆಯ ಕರೀಂನಗರ ತಾಲ್ಲೂಕಿನ ಗಂಗಾಧರಂ ಮಂಡಲದ ಕುರ್ಕ್ಯಾಲ ಗ್ರಾಮದ ಸಮೀಪದಲ್ಲಿರುವ ಬೊಮ್ಮಲಮ್ಮಗುಟ್ಟದ (ಸಿದ್ದುಲಗುಟ್ಟ, ಬೊಮ್ಮಲಮ್ಮ ತಲ್ಲಿ ಗುಟ್ಟ, ವೃಷಭಾದ್ರಿ ಬೆಟ್ಟ ಎಂದೂ ಕರೆಯಲ್ಪಡುತ್ತದೆ) ಮೇಲಿನ ಒಂದು ಬಂಡೆಯ ಮೇಲೆ ದೊರಕಿರುವ ಕ್ರಿ.ಶ. ಹತ್ತನೆಯ ಶತಮಾನಕ್ಕೆ ಸೇರಿದ ಶಾಸನ.

॥ ಓಂ ನಮಃ ಸಿದ್ಧೇಭ್ಯಃ ॥

ಸ್ವಸ್ತಿ ಸಮಸ್ತ ಸಕಳ ಕಳಾಳಾಪ ಪ್ರವೀಣಂ ಭವ್ಯರತ್ನಾಕರ[ಂ] ಗುಣಪಕ್ಷಪಾತಿ ಬೆಂಗಿನಾಡ ಸಪ್ತಗ್ರಾಮಗಳೊಳಗಣ ವಂಗಿಪಜ್ಜು ಕಮ್ಮೆಬ್ರಾಹ್ಮಣಂ ಜಮದಗ್ನಿ ಪಂಚಾರ್ಷೇಯಂ ಶ್ರೀವತ್ಸಗೋತ್ರಂ ಗುಂಡಿಕಜ್ಜು ನಿಡುಂಗೊಣ್ಡೆಯ ಭಿಮಾನಚನ್ದ್ರನ ಮರ್ಮ್ಮಂ ಭೀಮಪಯ್ಯನ ಬೆಳ್ವೊಲದಣ್ಣಿಗೆರೆಯ ಜೋಯಿಸಸಿಂಘನ ಮರ್ಮ್ಮಳಬ್ಬಣಬ್ಬೆಯ ಮಗಂ ಕೊಣ್ಡಕುನ್ದೆಯ ದೇಸಿಗಗಣದ ಪೊತ್ಥಗೆಯ ಬೞಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತಭಟಾರರ ಗುಡ್ಡಂ ಜಿನವಲ್ಲಭಂ ಸಬ್ಬಿನಾಡ ನಟ್ಟನಡುವಣ ಧರ್ಮ್ಮವುರದುತ್ತರ ದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ತ್ಥದ ದಕ್ಷಿಣದಿಶಾಭಾಗದೀ ಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯನ್ತ ಜಿನಬಿಂಬಂಗಳುಮಂ ಚಕ್ರೇಶ್ವರಿ ಯುಮಂ ಪೆಱವು ಜಿನಪ್ರತಿಮೆಗಳುಮಂ ತ್ರಿಭುವನತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣ್ನವಮೆಂಬ ಕೆಱೆಯುಮಂ ಮದನವಿಳಾಸಮೆಂಬ ಬನಮುಮಂ ಮಾಡಿಸಿದಂ ।

ಪದ ವಿಭಾಗ: ಸ್ವಸ್ತಿ-ಸಮಸ್ತ-ಸಕಳ-ಕಳಾಳಾಪ-ಪ್ರವೀಣಂ-ಭವ್ಯರತ್ನಾಕರ[ಂ]-ಗುಣಪಕ್ಷಪಾತಿ-ಬೆಂಗಿನಾಡ-ಸಪ್ತಗ್ರಾಮಗಳೊಳಗಣ-ವಂಗಿಪಜ್ಜು-ಕಮ್ಮೆಬ್ರಾಹ್ಮಣಂ-ಜಮದಗ್ನಿ-ಪಂಚಾರ್ಷೇಯಂ-ಶ್ರೀವತ್ಸಗೋತ್ರಂ-ಗುಂಡಿಕಜ್ಜು-ನಿಡುಗೊಣ್ಡೆಯ+ಅಭಿಮಾನಚನ್ದ್ರನ-ಮರ್ಮ್ಮಂ-ಭೀಮಪಯ್ಯನ-ಬೆಳ್ವೊಲದ+ಅಣ್ಣಿಗೆರೆಯ-ಜೋಯಿಸಸಿಂಘನ-ಮರ್ಮ್ಮಳ್+ಅಬ್ಬಣಬ್ಬೆಯ-ಮಗಂ-ಕೊಣ್ಡಕುನ್ದೆಯ ದೇಸಿಗ-ಗಣದ-ಪೊತ್ಥಗೆಯ-ಬೞಿಯ-ಪಣ್ಡರಂಗವಲ್ಲಿಯ-ಜಯಣನ್ದಿಸಿದ್ಧಾನ್ತ-ಭಟಾರರ-ಗುಡ್ಡಂ-ಜಿನವಲ್ಲಭಂ-ಸಬ್ಬಿನಾಡ-ನಟ್ಟನಡುವಣ-ಧರ್ಮ್ಮವುರದ+ಉತ್ತರ-ದಿಗ್ಭಾಗದ-ವೃಷಭಗಿರಿಯೆಂಬ+ಅನಾದಿ-ಸಂಸಿದ್ಧ-ತೀರ್ತ್ಥದ-ದಕ್ಷಿಣ-ದಿಶಾಭಾಗದ+ಈ-ಸಿದ್ಧಶಿಲೆಯೊಳ್+

ತಮ್ಮ–ಕುಲದೈವಂ+ಆದ್ಯನ್ತ–ಜಿನಬಿಂಬಂಗಳುಮಂ–ಚಕ್ರೇಶ್ವರಿಯುಮಂ–ಪೆಱವು–ಜಿನಪ್ರತಿಮೆಗಳುಮಂ–ತ್ರಿಭುವನತಿಲಕಂ+ಎಂಬ–ಬಸದಿಯುಮಂ–ಕವಿತಾಗುಣಾರ್ಣ್ನವಂ+ಎಂಬ–ಕೆಱೆಯುಮಂ–ಮದನವಿಳಾಸಂ+ಎಂಬ–ಬನಮುಮಂ–ಮಾಡಿಸಿದಂ ।

ಅನ್ವಯಾರ್ಥ: **(ಸ್ವಸ್ತಿ ಸಮಸ್ತ)** ಸರ್ವರಿಗೂ ಅವಿನಾಶಿಯಾದ ಕಲ್ಯಾಣವಾಗಲಿ, **(ಸಕಳ)** ಸಕಲ [ಸಮಸ್ತ] **(ಕಳಾಳಾಪ)** ವಿದ್ಯೆಗಳ ಸಮೂಹದಲ್ಲಿ(?) **(ಪ್ರವೀಣಂ)** ಪರಿಣತನು, **(ಭವ್ಯ)** ಮೋಕ್ಷಮಾರ್ಗದಲ್ಲಿರುವ ಜೀವನಿಗೆ ಅವಶ್ಯವಾದ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರಗಳೆಂಬ ರತ್ನತ್ರಯಗಳಿಗೆ **(ರತ್ನಾಕರಂ)** ಸಮುದ್ರದಂತಿರುವವನು [ಆಕರದಂತಿರುವವನು], **(ಗುಣಪಕ್ಷಪಾತಿ)** ಗುಣವಂತರಲ್ಲಿ ಪ್ರೀತಿಯನ್ನುಳ್ಳವನು, **(ವೆಂಗಿನಾಡ)** ವೆಂಗಿನಾಡಿನ **(ಸಪ್ತಗ್ರಾಮಗಳೊಳಗಣ)** ಏಳುಗ್ರಾಮಗಳಲ್ಲಿ ಒಂದಾದ **(ವಂಗಿಪಱ್ಱು)** ವಂಗಿಪರ್ರ [ಗ್ರಾಮದ] **(ಕಮ್ಮೆಬ್ರಾಹ್ಮಣಂ)** ಕಮ್ಮೆ ಬ್ರಾಹ್ಮಣನು, **(ಜಮದಗ್ನಿ)** ಜಮದಗ್ನಿ **(ಪಂಚಾರ್ಷೇಯಂ)** ಪಂಚಾರ್ಷೇಯ [ಪ್ರವರದ] **(ಶ್ರೀವತ್ಸಗೋತ್ರಂ)** ಶ್ರೀವತ್ಸಗೋತ್ರದವನು, **(ಗುಂಡಿಕಱ್ಱು)** ಗುಂಡಿಕರ್ರ [ಸೀಮೆಯ] **(ನಿಡುಗೊಣ್ಡೆಯ)** ನಿಡುಗೊಂಡೆಯ **(ಅಭಿಮಾನಚನ್ದ್ರನ)** ಅಭಿಮಾನಚಂದ್ರನ **(ಮರ್ಮ್ಮಂ)** ಮೊಮ್ಮಗ **(ಭೀಮಪಯ್ಯನ)** ಭೀಮಪಯ್ಯನ [ಮತ್ತು] **(ಬೆಳ್ವೊಲದ)** ಬೆಳ್ವೊಲದ [ಈಗಿನ ಧಾರವಾಡ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶವನ್ನೊಳಗೊಂಡುದು] **(ಅಣ್ಣಿಗೆರೆಯ)** ಅಣ್ಣಿಗೆರೆಯ **(ಜೋಯಿಸಸಿಂಘನ)** ಜೋಯಿಸ ಸಿಂಘ ಎಂಬುವನ **(ಮರ್ಮ್ಮಳ್)** ಮೊಮ್ಮಗಳು **(ಅಬ್ಬಣಬ್ಬೆಯ)** ಅಬ್ಬಣಬ್ಬೆಯ **(ಮಗಂ)** ಮಗನೂ, **(ಕೊಣ್ಡಕುನ್ದೆಯ)** ಕೊಂಡಕುಂದಾನ್ವಯದ **(ದೇಸಿಗಗಣದ)** ದೇಸಿಗಮುನಿಗಣದ **(ಪೊತ್ಥಗೆಯ ಬಱಿಯ)** ಪುಸ್ತಕಗಚ್ಛದ **(ಪಣ್ಡರಂಗವಲ್ಲಿಯ)** ಪಂಡರಂಗವಲ್ಲಿಯ **(ಜಯಣನ್ದಿಸಿದ್ಧಾನ್ತಭಟಾರರ)** ಜಯಣಂದಿ ಸಿದ್ಧಾಂತ ಭಟ್ಟಾರಕರ **(ಗುಡ್ಡಂ)** ಶಿಷ್ಯನೂ [ಆದ] **(ಜಿನವಲ್ಲಭಂ)** ಜಿನವಲ್ಲಭನು **(ಸಬ್ಬಿನಾಡ)** ಸಬ್ಬಿನಾಡಿನ **(ನಟ್ಟನಡುವಣ)** ನಟ್ಟನಡುವೆ ಇರುವ **(ಧರ್ಮ್ಮಪುರದ)** ಧರ್ಮಪುರದ **(ಉತ್ತರದಿಗ್ಭಾಗದ)** ಉತ್ತರ ದಿಕ್ಕಿನ ಕಡೆಗಿರುವ **(ವೃಷಭಗಿರಿಯೆಂಬ)** ವೃಷಭಗಿರಿ ಎನ್ನುವ, **(ಅನಾದಿ)** ಅನಾದಿ ಕಾಲದಿಂದಲೂ **(ಸಂಸಿದ್ಧ)** ಪ್ರಸಿದ್ಧಿಯನ್ನು ಪಡೆದ **(ತೀರ್ತ್ಥದ)** ಪವಿತ್ರವಾದ ಕ್ಷೇತ್ರದ **(ದಕ್ಷಿಣ ದಿಶಾಭಾಗದ)** ದಕ್ಷಿಣ ದಿಕ್ಕಿನ ಕಡೆಗಿರುವ **(ಈ)** ಈ **(ಸಿದ್ಧಶಿಲೆಯೊಳ್)** ಸಿದ್ಧಶಿಲೆಯಲ್ಲಿ [ಪವಿತ್ರ ಹೆಬ್ಬಂಡೆಯ ಮೇಲೆ] **(ತಮ್ಮ)** ತಮ್ಮ **(ಕುಲದೈವಂ)** ಕುಲದೈವ ಅಂದರೆ ತೀರ್ಥಂಕರರಾದ **(ಆದ್ಯನ್ತ)** ವೃಷಭದೇವಾದಿ ಮಹಾವೀರರವರೆಗಿನ [ಇಪ್ಪತ್ತನಾಲ್ಕು ತೀರ್ಥಂಕರರ] **(ಜಿನಬಿಂಬಂಗಳುಮಂ)** ಜಿನಬಿಂಬಗಳನ್ನೂ, **(ಚಕ್ರೇಶ್ವರಿಯುಮಂ)** ಚಕ್ರೇಶ್ವರಿಯನ್ನೂ [ಚಕ್ರೇಶ್ವರಿ ಯಕ್ಷಿಯ ಶಿಲ್ಪವನ್ನೂ], **(ಪೆಱವು)** ಹಲವು **(ಜಿನಪ್ರತಿಮೆಗಳುಮಂ)** ಜಿನಪ್ರತಿಮೆಗಳನ್ನೂ, **(ತ್ರಿಭುವನತಿಲಕಮೆಂಬ)** ತ್ರಿಭುವನತಿಲಕಂ ಎಂಬ **(ಬಸದಿಯುಮಂ)** ಬಸದಿಯನ್ನೂ, **(ಕವಿತಾಗುಣಾರ್ಣ್ನವಮೆಂಬ)** ಕವಿತಾಗುಣಾರ್ಣವಂ ಎಂಬ **(ಕೆಱೆಯುಮಂ)** ಕೆರೆಯನ್ನೂ, **(ಮದನವಿಳಾಸಮೆಂಬ)** ಮದನವಿಳಾಸಂ ಎಂಬ **(ಬನಮುಮಂ)** ತೋಟವನ್ನೂ **(ಮಾಡಿಸಿದಂ)** ನಿರ್ಮಾಣ ಮಾಡಿಸಿದನು.

ಈ ಮೇಲಿನ ಶಾಸನದ ವಚನದಲ್ಲಿ '**ಕೊಣ್ಡಕುನ್ದೆಯ ದೇಸಿಗಗಣದ ಪೊತ್ಥಗೆಯ ಬಱಿಯ ಪಣ್ಡರಂಗವಲ್ಲಿಯ ಜಯಣನ್ದಿಸಿದ್ಧಾನ್ತ ಭಟಾರರ ಗುಡ್ಡಂ ಜಿನವಲ್ಲಭಂ**' ವಾಕ್ಯವು, ಈ ಮೇಲೆ ಹೇಳಿದಂತೆ, ಕಂದಪದ್ಯದ ಸಾಮಾನ್ಯ ಅರ್ಥವನ್ನು ಬದಲಿಸುವ ವಾಕ್ಯವಾಗಿರುತ್ತದೆ. ಈ ಶಾಸನದಲ್ಲಿ ಹೇಳುವ '**ಜಯಣನ್ದಿಸಿದ್ಧಾನ್ತಭಟಾರ**'ರೇ ಪಂಪ ಕವಿಯು ಪದ್ಯದಲ್ಲಿ ಹೇಳಿರುವ '**ಜಯನಂದಿಮುನಿ**'ಗಳು. ಈ '**ಜಯನಂದಿಮುನಿ**'ಗಳ ಗುರುಗಳೇ, ಪಂಪನು ೧–೨೫ ನೆಯ ಪದ್ಯದಲ್ಲಿ ಹೇಳುವ '**ಗುರು ದೇವೇಂದ್ರ ಮುನೀಂದ್ರ**'. '**ದೇವೇಂದ್ರ ಮುನೀಂದ್ರರ**' ಗುರುಗಳೇ ಈ ಪದ್ಯದ ಮೊದಲ ಪಾದದಲ್ಲಿ ಕವಿಯು ಹೇಳುವ '**ಮಲಧಾರಿ ಸಿದ್ಧಾಂತ ಮುನೀಶ್ವರರು**'. ಈ ಗುರು–ಶಿಷ್ಯ ಪರಂಪರೆಯ ಬಗ್ಗೆ ಬೇರೆ ಶಾಸನಗಳಲ್ಲೂ ಉಲ್ಲೇಖವಿರುವುದನ್ನು ವಿದ್ವಾಂಸರುಗಳು ಗುರುತಿಸಿದ್ದಾರೆ. ಆದುದರಿಂದ ಪಂಪನು, ಈ ಹಿಂದಿನ ಪದ್ಯಗಳಲ್ಲಿ ಬೇರೆ ಬೇರೆ ಆಚಾರ್ಯರು/ಮುನಿಗಳನ್ನು ಸ್ತುತಿಸಿರುವಂತೆ, ಈ ಪದ್ಯದಲ್ಲಿಯೂ ಬೇರೆ ಬೇರೆಯವರಾದ ಮೂವರು ಮುನಿಗಳನ್ನು ಸ್ವಾಭಾವಿಕ ರೀತಿಯಿಂದ ಸ್ತುತಿಸಿರದೆ, ತನ್ನ ಗುರುಗಳನ್ನು ಅವರ '**ಶಿಷ್ಯ–ಪ್ರಶಿಷ್ಯ**' ಪರಂಪರೆಯನ್ನು ಸೂಚಿಸಿ ಸ್ತುತಿಸುತ್ತಿದ್ದಾನೆ ಎಂದು ತಿಳಿಯಬೇಕಾಗುತ್ತದೆ.

ಹೀಗೆ, ಪಂಪನು ಕೊಂಡಕುಂದಾನ್ವಯದ ಶಿಷ್ಯ–ಪ್ರಶಿಷ್ಯ ಪರಂಪರೆಯನ್ನು ಈ ಪದ್ಯದಲ್ಲಿ ಸೂಚಿಸಿ, ಆ ಗುರು–ಶಿಷ್ಯ ಪರಂಪರೆಯನ್ನು ಕುರಿತು ಸ್ತುತಿ ಪದ್ಯವನ್ನು ರಚಿಸಿರುತ್ತಾನೆ.

ಮತ್ತೇಭ ವಿಕ್ರೀಡಿತ

ಪದನಂ ಕಾಣಿಸಿ ಕೊಳ್ವುವಲ್ಲಿ ಮಱಿಗಳ್ ಷಡ್ಭಾಗಮಂ ಕೊಂಡು ತ
ಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ಶ್ರೀಜೈನಧರ್ಮಂ ಪೊದ
ಱ್ದೊದವುತ್ತಿರ್ಪುದು ಮತ್ತಿನನ್ಯಸಮಯಕ್ಕುತ್ಪತ್ತಿಯಿಲ್ಲೊಂದಱೊಳ್
ಪದಿನಾಱಾಗಿ ನಿರಂತರಂ ಸೊಗಯಿಕುಂ ಮೂವತ್ತೆರಟ್ನಾಡುಗಳ್ ॥ ೧–೫೧

ಷಡ್ಭಾಗಮಂ ಕೊಂಡು ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ: ಈ ವಾಕ್ಯಕ್ಕೆ ಸಂವಾದಿಯಾದ **ಪೂರ್ವಪುರಾಣ**ದ ಶ್ಲೋಕವು ಹೀಗಿದೆ:

ನಸ್ಪೃಶಂತಿ ಕರಾಬಾಧಾ ಯತ್ರ ರಾಜನ್ವತೀಃ ಪ್ರಜಾಃ ।
ಸದಾ ಸುಕಾಲಸಾನ್ನಿಧ್ಯಾನ್ನೇತಯೋ ನಾಪ್ಯನೀತಯಃ ॥ಪೂ.ಪು., ೪–೮೦॥

ಅರ್ಥ: ಆ ದೇಶದ ರಾಜನು ನೀತಿಪರಾಯಣನಾಗಿದ್ದುದರಿಂದ ಅಲ್ಲಿಯ ಪ್ರಜೆಗಳಿಗೆ ಕಂದಾಯದ ಬಾಧೆಯಿರಲಿಲ್ಲ. ಯಾವಾಗಲೂ ಕಾಲ–ಋತುಪರಿವರ್ತನೆಯು ಸರಿಯಾಗಿ ಆಗುತ್ತಿದ್ದುದರಿಂದ ಅತಿವೃಷ್ಟಿ ಮುಂತಾದ ಈತಿಬಾಧೆಗಳಾಗಲಿ, ಅನೀತಿ–ಅನ್ಯಾಯಗಳಾಗಲಿ

ನಡೆಯುತ್ತಿರಲಿಲ್ಲ.

ಶ್ರೀ ಜಿನಸೇನಾಚಾರ್ಯರು ಮೇಲಿನ ಶ್ಲೋಕದಲ್ಲಿ **'ನಸ್ಪೃಶಂತಿ ಕರಾಬಾಧಾ ಯತ್ರರಾಜನ್ವತೀಃ ಪ್ರಜಾಃ'** ಎಂದು ಮಾತ್ರ ಹೇಳುತ್ತಾರೆ. ಆ ದೇಶದ ರಾಜನು ಪ್ರಜೆಗಳಿಗೆ ವಿಧಿಸುತ್ತಿದ್ದ ತೆರಿಗೆಯ ಪ್ರಮಾಣವನ್ನು ಆಚಾರ್ಯರು ಹೇಳಿರುವುದಿಲ್ಲ. ಅಥವಾ ಅಲ್ಲಿಯ ರಾಜನು ಪ್ರಜೆಗಳಿಗೆ ತೆರಿಗೆಯನ್ನು ವಿಧಿಸುತ್ತಿರಲಿಲ್ಲವೇ? ಕಾಳಿದಾಸನೂ **ರಘುವಂಶ**ದಲ್ಲಿ ರಾಜನು ಪ್ರಜೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯ ದರವನ್ನು ತಿಳಿಸದೆ, ಶ್ರೀ ಜಿನಸೇನಾಚಾರ್ಯರು ಹೇಳಿರುವಂತೆಯೇ ಸಾಮಾನ್ಯ ಭಾಷೆಯಲ್ಲಿ ಈ ಕೆಳಗಿನ ಶ್ಲೋಕದಲ್ಲಿರುವಂತೆ ಹೇಳಿರುವನು:

ಪ್ರಜಾನಾಮೇವ ಭೂತ್ಯರ್ಥಂ ಸ ತಾಭ್ಯೋ ಬಲಿಮಗ್ರಹೀತ್ ।
ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ ॥ರಘುವಂಶ, ೭-೧೮॥

ಅರ್ಥ: ಸೂರ್ಯನು ನೀರನ್ನು ಹೀರಿಕೊಂಡು ಆಮೇಲೆ ಅದರ ಸಾವಿರದಷ್ಟು ಮಳೆಯನ್ನು ಕರೆಯುವಹಾಗೆ ಆತನು (ರಾಜನು) ಪ್ರಜೆಗಳಿಂದ ಸ್ವಲ್ಪ ಕಂದಾಯವನ್ನು ಸ್ವೀಕರಿಸಿ ಅವರಿಗೆ ಬಹುವಾಗಿ ಅನುಕೂಲ್ಯಗಳನ್ನು ಮಾಡಿಕೊಡುತ್ತಿದ್ದನು.

ಪಂಪನು ತೆರಿಗೆಯ ಪ್ರಮಾಣವನ್ನು **'ಷಡ್ಭಾಗಮಂ'** (ಆರನೆಯ ಒಂದು ಭಾಗ) ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಪಂಪನು ಹೇಳುವ ಆರನೆಯ ಒಂದು ಭಾಗದ ತೆರಿಗೆಯು ಕೃಷಿಕರು ಬೆಳೆಯುವ ಧಾನ್ಯಗಳ ಆರನೆಯ ಒಂದು ಭಾಗವಾಗಿರುತ್ತದೆ. **ಮನುಸ್ಮೃತಿ**ಯ ಏಳನೆಯ ಅಧ್ಯಾಯದ ೧೩೦ ನೆಯ ಶ್ಲೋಕದಲ್ಲಿ ಹೀಗೆ ಹೇಳಿದೆ:

ಪಂಚಾಶತ್ ಭಾಗ ಆದೇಯೋ ರಾಜ್ಞಾ ಪಶುಹಿರಣ್ಯಯೋಃ ।
ಧಾನ್ಯಾನಾಮಷ್ಟಮೋ ಭಾಗಃ ಷಷ್ಠೋ ದ್ವಾದಶ ಏವ ವಾ ॥ಮನುಸ್ಮೃತಿ, ೭-೧೩೦॥

ಅರ್ಥ: ಪಶು ಮತ್ತು ಸುವರ್ಣ ಇವುಗಳಿಂದ ಲಾಭದ ಐವತ್ತನೆಯ ಭಾಗವನ್ನು ರಾಜನು ತೆಗೆದುಕೊಳ್ಳಬೇಕು. ಧಾನ್ಯದ ಆರನೆಯ, ಎಂಟನೆಯ ಅಥವಾ ಹನ್ನೆರಡನೆಯ ಭಾಗವನ್ನು ತೆಗೆದುಕೊಳ್ಳಬೇಕು.
[ತಾತ್ಪರ್ಯ: ಪಶು ಮತ್ತು ಸುವರ್ಣ ವ್ಯಾಪಾರಿಗಳು ತಮ್ಮ ಲಾಭದಲ್ಲಿ ೫೦ ನೆಯ ಒಂದಂಶವನ್ನು ತೆರಿಗೆಯಾಗಿ ಪಾವತಿಸಬೇಕು. ಆದರೆ ಕೃಷಿಕರು ತಮ್ಮ ಕೃಷಿ ಉತ್ಪನ್ನದ ಆರನೆಯ ಒಂದು ಭಾಗ ಅಥವಾ ಎಂಟನೆಯ ಒಂದು ಭಾಗ ಅಥವಾ ಹನ್ನೆರಡನೆಯ ಒಂದು ಭಾಗವನ್ನು ಅವರವರ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ತೆರಿಗೆಯನ್ನು ಪಾವತಿಸಬೇಕು]

ರಾಜರು ಪ್ರಜೆಗಳಿಂದ ತೆರಿಗೆಯನ್ನು ತೆಗೆದುಕೊಳ್ಳಲು, ಶ್ರೀ ಜಿನಸೇನಾಚಾರ್ಯರು ಮತ್ತು ಕಾಳಿದಾಸ ಇವರು ನೀಡುವ ಕಾರಣಗಳು ಮತ್ತು ಉದ್ದೇಶಗಳು, ಮನು ತೋರಿಸುವ ಕಾರಣಗಳು ಮತ್ತು ಉದ್ದೇಶಗಳಿಗಿಂತ ಭಿನ್ನವಾಗಿರುತ್ತವೆ. ಹಾಗೆಯೇ ರಾಜರು ತೆರಿಗೆ ಸಂಗ್ರಹಣೆ ಮಾಡಲು ಮನುವು ತೋರಿಸುವ ಕಾರಣಗಳು ಮತ್ತು ಉದ್ದೇಶಗಳಿಗಿಂತ, ಕೌಟಿಲ್ಯನು ನೀಡುವ ಕಾರಣಗಳು ಮತ್ತು ಉದ್ದೇಶಗಳು ಮತ್ತೂ ಭಿನ್ನವಾಗಿರುತ್ತವೆ. ಈ ವಿಷಯದಲ್ಲಿ ಪಂಪನು ಕೌಟಿಲ್ಯನನ್ನು ಅನುಮೋದಿಸಿದಂತೆ ಕಾಣುತ್ತದೆ. ಹೇಗೆಂದರೆ, ಪಂಪನು, ರಾಜರು ತೆಗೆದುಕೊಳ್ಳುವ ತೆರಿಗೆಯ ಪ್ರಮಾಣವಾದ **'ಷಡ್ಭಾಗಮಂ ಕೊಂಡು'** ಎಂದು ಮಾತ್ರ ಹೇಳದೆ, ಅದನ್ನು ರಾಜನು ಏಕೆ ಪಡೆದುಕೊಳ್ಳುತ್ತಾನೆ ಎನ್ನುವುದಕ್ಕೆ **'ತಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ'** ಎಂಬ ಕಾರಣ ಅಥವಾ ಉದ್ದೇಶವನ್ನೂ ಹೇಳುತ್ತಾನೆ. ಬಹುಶಃ ಪಂಪನು **ಕೌಟಿಲ್ಯನ ಅರ್ಥಶಾಸ್ತ್ರ**ದಿಂದ ನೇರವಾಗಿ ಪ್ರಭಾವಿತನಾಗಿ ಈ ಮಾತನ್ನು ಹೇಳಿರಬಹುದು. **ಕೌಟಿಲ್ಯನ ಅರ್ಥಶಾಸ್ತ್ರ**ದಲ್ಲಿ, ಕೃಷಿಕರಿಂದ ರಾಜರು ತೆರಿಗೆಯ ಸಂಗ್ರಹಣೆ ಮಾಡುವ ಬಗೆಯನ್ನು ಹೀಗೆ ವಿವರಿಸಿದೆ:

ತತ್ರ ಯೇಽನುಪ್ರಶಂಸೆಯುತ್ಸಾನಿತರಸ್ತಂ ಚ ಪ್ರತಿಷೇಧಯೇತ್ । "ಮಾತ್ಸ್ಯನ್ಯಾಯಾಭಿಭೂತಃ ಪ್ರಜಾ ಮನುಂ ವೈವಸ್ವತಂ ರಾಜಾನಂ ಚಕ್ರಿರೆ । ಧಾನ್ಯಷಡ್ಭಾಗಂ ಪಣ್ಯದಶಭಾಗಂ ಹಿರಣ್ಯಂ ಚಾಸ್ತ್ಯ ಭಾಗಧೇಯಂ ಪ್ರಕಲ್ಪಯಾಮಾಸುಃ । ..."
(ಕೌಟಿಲ್ಯನ ಅರ್ಥಶಾಸ್ತ್ರ, ಪ್ರಥಮಾಧಿಕರಣ-ವಿನಯಾಧಿಕರಣಮ್, ೯ನೆಯ ಪ್ರಕರಣ-ಸ್ವವಿಷಯೇ ಕೃತ್ಯಾಕೃತ್ಯಪಕ್ಷರಕ್ಷಣಮ್, ೫ ಮತ್ತು ೬ ನೆಯ ವಾಕ್ಯ)

ಅರ್ಥ: ಆಗ ಆ ರಾಜನಿಂದೆಯನ್ನು ಅನುಮೋದಿಸಿ ಪ್ರೋತ್ಸಾಹಿಸಿದವನನ್ನೂ, ನಿಂದಕನನ್ನೂ ಇನ್ನೊಬ್ಬ ಸತ್ರಿಯು, "ಸಣ್ಣ ಮೀನನ್ನು ದೊಡ್ಡ ಮೀನು ನುಂಗಿಬಿಡುವಂತೆ (ಮಾತ್ಸ್ಯನ್ಯಾಯದಿಂದ) ಪ್ರಬಲರು ದುರ್ಬಲರನ್ನು ನುಂಗತೊಡಗಿದರು. ಅದರ ಕಷ್ಟಕ್ಕೊಳಗಾಗಿ ಸೋತುಹೋದ ಪ್ರಜೆಗಳು ಸೂರ್ಯವಂಶೋತ್ಪನ್ನನಾದ ಮನುವನ್ನು ರಾಜನನ್ನಾಗಿ ಮಾಡಿಕೊಂಡರು. ಅವನಿಗೆ ತಾವು ಬೆಳೆದ ಧಾನ್ಯಗಳಲ್ಲಿ ಆರನೆಯ ಒಂದು ಭಾಗ ಮತ್ತು ವಿಕ್ರೇಯ ದ್ರವ್ಯಗಳಲ್ಲಿ ಹತ್ತನೆಯ ಒಂದು ಭಾಗ ಚಿನ್ನವನ್ನು ರಾಜಭಾಗವನ್ನಾಗಿತ್ತರು."...

ವ ॥ ಮತ್ತಿತ್ತಮಹಾಬಳಖಚರಪತಿಯುಮಾತ್ಮೀಯಗುರುನಿರೂಪಿತಗಗನಚರರಾಜ್ಯಭಾರಮನಾಶೈಶವಪ್ರಭೃತಿಪ್ರರೂಢನಿರ್ಭರ ಪ್ರೇಮರಸರುಮನೇಕಾರ್ಥಶಾಸ್ತ್ರಪ್ರಯೋಗಕುಶಲರುಂಸಕಳಕಳಾವಗಾಹನಸಮಾಹಿತಮತಿಗಳುಮಾಗಿ ನಾಲ್ಕುಮುಪಧೆ[1]ಗಳೊಳಂ ಶುದ್ಧರಾಗಿ ನಾಲ್ಕುಮುಪಾಯಂಗಳಿರ್ಪಂತಿರ್ದಜಗತ್ಪ್ರಸಿದ್ಧ ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿಗಳೆಂಬ

[1] 'ಉಪಧೆ'-ವುಪಧಾ ಧರ್ಮಾದ್ಯೈರ್ಯತ್ಪರೀಕ್ಷಣಮ್ ।೪೪। (ಧಮ, ಅರ್ಥ, ಕಾಮ, ಧೈರ್ಯಗಳ ನೆವದಿಂದ ಅರಸು ತನ್ನ ಮಂತ್ರಿ ಮುಂತಾದವರ ಗುಣಗಳನ್ನು ಪರೀಕ್ಷಿಸುವುದು)_ ಅಮರಕೋಶ, ದ್ವಿತೀಯಕಾಂಡ, ೮. ಕ್ಷತ್ರಿಯವರ್ಗ, ಶ್ಲೋ.ಸಂ. ೪೪.

ನಾಲ್ವರುಮಮಾತ್ಯರ ಮೆಯ್ಯೊಳ್ಳೆಱಸಿನಿರಾಕುಳಸ್ವಾಂತನಪಗತರಾಜ್ಯಚಿಂತನಮರಸೌಂದರೀವಿಳಾಸೋಪಹಾಸಿಗಗನಚರಸೌಂದರೀ ಮನೋನಯನಸೌಂದರನಾಗಿ ವಿದ್ಯಾಧರಶ್ರೀಯನನುಭವಿಸಿ, ೧–೮೧ (ವ)

ಆಶೈಶವ ಪ್ರಭೃತಿ ಪ್ರರೂಢ . . . . . ನಾಲ್ಕು ಉಪಧೆಗಳೊಳಂ ಶುದ್ಧರಾಗಿ: ನಾಲ್ಕೂ ಜನ ಅಮಾತ್ಯರು ಮಹಾಬಳನಿಗೆ ಬಾಲ್ಯದಿಂದಲೂ ಸಹಪಾಠಿಗಳಾಗಿದ್ದವರು. ಆದರೂ ಈ ನಾಲ್ವರೂ ನಾಲ್ಕು ಉಪಧೆಗಳಿಂದ ಶೌಚಾಶೌಚ ಪರೀಕ್ಷೆಯಲ್ಲಿ **ಶುದ್ಧ**ರೆನಿಸಿಕೊಂಡವರು. ಆದರೆ **ಪೂರ್ವಪುರಾಣ**ದಲ್ಲಿ ಈ ಅಮಾತ್ಯರ ಬಾಲ್ಯ ಮತ್ತು ಉಪಧೆಗಳ ಬಗ್ಗೆ ಉಲ್ಲೇಖವಿರುವುದಿಲ್ಲ ಅಲ್ಲದೆ ಅವರ ಅರ್ಹತೆ/ಸಾಮರ್ಥ್ಯಗಳ ಬಗ್ಗೆ, ಪಂಪನು ವರ್ಣಿಸಿರುವಂತೆ, ವಿಶೇಷವಾದ ವಿವರಣೆಗಳಿರುವುದಿಲ್ಲ. **ಪೂರ್ವಪುರಾಣ**ದಲ್ಲಿ ಇದಕ್ಕೆ ಸಂವಾದಿಯಾದ ಸರಳವಾದ ಎರಡು ಶ್ಲೋಕಗಳು ಹೀಗಿವೆ:

ತಸ್ಯಾಭೂವನ್ಮಹಾಪ್ರಜ್ಞಾಶ್ಚತ್ವಾರೋ ಮಂತ್ರಿಪುಂಗವಾಃ ।
ಬಹಿಶ್ಚರಾ ಇವ ಪ್ರಾಣಾಃ ಸುಸ್ನಿಗ್ಧಾ ದೀರ್ಘದರ್ಶಿನಃ ॥ಪೂ.ಪು., ೪–೧೯೦॥

ಅರ್ಥ: ಆ ಮಹಾಬಲನಿಗೆ ಹೊರಗಿನ ಪ್ರಾಣಗಳಂತಿರುವವರೂ ಬಹಳ ಬುದ್ಧಿಶಾಲಿಗಳೂ ಪ್ರೀತಿಪಾತ್ರರೂ ವಿದ್ವಾಂಸರೂ ಆದ ನಾಲ್ಕು ಜನ ಮಂತ್ರಿಶ್ರೇಷ್ಠರಿದ್ದರು.

ಮಹಾಮತಿ ಸಂಭಿನ್ನಮತಿಃ ಶತಮತಿಸ್ತಥಾ ।
ಸ್ವಯಂಬುದ್ಧಶ್ಚ ರಾಜ್ಯಸ್ಯ ಮೂಲಸ್ತಂಭಾ ಇವ ಸ್ಥಿರಾಃ ॥ಪೂ.ಪು., ೪–೧೯೧॥

ಅರ್ಥ: ಮಹಾಮತಿ, ಸಂಭಿನ್ನಮತಿ, ಶತಮತಿ, ಸ್ವಯಂಬುದ್ಧ ಈ ನಾಲ್ಕುಜನ ಮಂತ್ರಿಗಳು ರಾಜ್ಯಕ್ಕೆ ಮೂಲಸ್ತಂಭಗಳಂತೆ, ದೃಢರಾಗಿದ್ದರು.

ಆದರೆ ಪಂಪನು ಅಮಾತ್ಯರ ಬಾಲ್ಯದ ಬಗ್ಗೆಯೂ, ಉಪಧೆಗಳ ಬಗ್ಗೆಯೂ ಹೇಳುತ್ತಾನೆ. ಕವಿಯು ಏಕೆ ಈ ಎರಡು ವಿಷಯಗಳನ್ನು ಕಾವ್ಯದಲ್ಲಿ ಉಲ್ಲೇಖಿಸಿದ? ಕವಿಯು ಅರಿಕೇಸರಿಯ ಆಸ್ಥಾನದಲ್ಲಿದ್ದುದರಿಂದ ಅವನು ಗಳಿಸಿಕೊಂಡಿದ್ದ ರಾಜ್ಯಶಾಸ್ತ್ರದ ಜ್ಞಾನದಿಂದಾಗಿಯೂ ಹಾಗೂ ತನ್ನ ಕಾಲದಲ್ಲಿ ಪ್ರಚಲಿತವಿದ್ದ ವಿಷಯಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸುವ ಸಲುವಾಗಿಯೂ ಇವುಗಳನ್ನು ಇಲ್ಲಿ ಉಲ್ಲೇಖಿಸಿರಬಹುದು. ಹೀಗೆ ತನ್ನ ಸಮಕಾಲೀನ ವಿದ್ಯಮಾನಗಳನ್ನು ಸಮರ್ಥವಾಗಿ ಕಾವ್ಯಗಳೊಳಗೆ ಅಳವಡಿಸುವುದು ಒಬ್ಬ ಶ್ರೇಷ್ಠಕವಿಯ ಲಕ್ಷಣಗಳಲ್ಲೊಂದಾಗಿದೆ. ಕವಿಯು ಈ ಎರಡೂ ವಿಷಯಗಳನ್ನು '**ಕೌಟಿಲ್ಯನ ಅರ್ಥಶಾಸ್ತ್ರ**'ದಿಂದ ಎರವಲು ಪಡೆದಿದ್ದಾನೆ. ಕೌಟಿಲ್ಯನು, ರಾಜನು ತನ್ನ ಸಹಾಧ್ಯಾಯಿಗಳನ್ನು/ಸಹಪಾಠಿಗಳನ್ನು ಅಮಾತ್ಯರನ್ನಾಗಿ ನೇಮಕ ಮಾಡಿಕೊಳ್ಳಬಹುದೇ ಅಥವಾ ಮಾಡಿಕೊಳ್ಳಬಾರದೇ? ಎಂಬುದರ ಬಗ್ಗೆ ಪೂರ್ವಾಚಾರ್ಯರು/ಸ್ಮೃತಿಕಾರರುಗಳಾದ, (೧) ಭಾರದ್ವಾಜ, (೨) ವಿಶಾಲಾಕ್ಷ, (೩) ಪರಾಶರ, (೪) ಪಿಶುನ, (೫) ಕೌಣಪದಂತ, (೬) ವಾತವ್ಯಾಧಿ ಮತ್ತು (೭) ಬಾಹುದಂತೀ ಪುತ್ರ (ಇಂದ್ರ) ಇವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಸ್ವಮತದೊಂದಿಗೆ, ತನ್ನ '**ಅರ್ಥಶಾಸ್ತ್ರ**' ಗ್ರಂಥದ **ಒಂದನೆಯ ಭಾಗ: ತಂತ್ರ (ಸ್ವದೇಶ ಹಿತಚಿಂತನ)**, ಇದರ **ಮೊದಲನೆಯ ಅಧಿಕರಣ: ವಿನಯ ನಿರೂಪಣಾಧಿಕರಣ**ದ '**ನಾಲ್ಕನೆಯ ಪ್ರಕರಣ: ಅಮಾತ್ಯರ ಉತ್ಪತ್ತಿ**' ಇದರಲ್ಲಿ ಬರುವ **ಎಂಟನೆಯ ಅಧ್ಯಾಯ**ದಲ್ಲಿ ಚರ್ಚಿಸಿದ್ದಾನೆ. ಈ ಪ್ರಕರಣದ ಪೂರ್ಣಪಾಠವನ್ನು ಮತ್ತು ಭಾಗಶಃ ಭಾವಾರ್ಥವನ್ನು ವಾಚಕರ ಕುತೂಹಲಕ್ಕಾಗಿ ಇಲ್ಲಿ ಕೊಡಲಾಗಿದೆ:

ಅರ್ಥಶಾಸ್ತ್ರೇ ಸವ್ಯಾಖೌ ವಿನಯಾಧಿಕಾರಿಕೇ ಪ್ರಥಮಾಧಿಕರಣೇ [೮. ಅಧ್ಯಾಯಃ
೪. ಪ್ರಕರಣ:– ಅಮಾತ್ಯೋತ್ಪತ್ತಿಃ

'ಸಹಾಧ್ಯಾಯಿನೋಽಮಾತ್ಯಾನ್ ಕುರ್ವೀತ ದೃಷ್ಟಶೌಚಸಾಮರ್ಥ್ಯತ್ವಾತ್' ಇತಿ ಭಾರದ್ವಾಜಃ । ತೇ ಹ್ಯಸ್ಯ ವಿಶ್ವಾಸ್ಯಾಃ ಭವಂತೀತಿ ॥

ಭಾವಾರ್ಥ: '[ರಾಜನು ತನ್ನ] **(ಸಹ ಅಧ್ಯಾಯಿನ್)** ಸಹಪಾಠಿಯನ್ನು ಅಮಾತ್ಯನನ್ನಾಗಿ **(ಕುರ್ವೀತ)** ಮಾಡಿಕೊಳ್ಳಬೇಕು [ಏಕೆಂದರೆ, ರಾಜನು ಅಂತಹ ಸಹಪಾಠಿಯ] **(ದೃಷ್ಟಶೌಚಸಾಮರ್ಥ್ಯತ್ವಾತ್)** ಗುಣನೈರ್ಮಲ್ಯವನ್ನು ಮತ್ತು ಯೋಗ್ಯತೆಯನ್ನು ಪ್ರತ್ಯಕ್ಷ ಕಂಡಿರುತ್ತಾನೆ' **(ಇತಿ ಭಾರದ್ವಾಜಃ)** ಹೀಗೆಂದು ಭಾರದ್ವಾಜನು [ದ್ರೋಣಾಚಾರ್ಯನು] ಹೇಳುತ್ತಾನೆ. [ಅಲ್ಲದೆ], ಅವರು [ಸಹಪಾಠಿಗಳು] ರಾಜನ **(ವಿಶ್ವಾಸ್ಯಾಃ ಭವಂತೀತಿ)** ನಂಬಿಕೆಗೆ ಪಾತ್ರರಾಗಿರುತ್ತಾರೆ.

ನೇತಿ ವಿಶಾಲಾಕ್ಷಃ ॥ ಸಹಕ್ರೀಡಿತತ್ವಾತ್ ಪರಿಭವಂತ್ಯೇನಂ । ಯೇ ಹ್ಯಸ್ಯ ಗುಹ್ಯಸಧರ್ಮಾಣಃ ತಾನಮಾತ್ಯಾನ್ ಕುರ್ವೀತ–– ಸಮಾನಶೀಲವ್ಯಸನತ್ವಾತ್; ತೇಹ್ಯಸ್ಯ ಮರ್ಮಜ್ಞಭಯಾನ್ನಾಪರಾಧ್ಯಂತೀತಿ ॥

ಭಾವಾರ್ಥ: 'ಅದು ಕೂಡದು **(ನೇತಿ=ನ+ಇತಿ)**' ಎಂದು **ವಿಶಾಲಾಕ್ಷ**ನು ಹೇಳುತ್ತಾನೆ. [ಏಕೆಂದರೆ, ಸಹಪಾಠಿಗಳು] ಆಟೋಟಗಳಲ್ಲಿ ಜೊತೆಯಾಗಿದ್ದುದರ ಸಲಿಗೆಯಿಂದ ಅಂತಹವರು ರಾಜನನ್ನು ಅವಜ್ಞೆಗೆ ಗುರಿಯಾಗಿಸಹುದು..........

'ಸಾಧಾರಣ ಏಷ ದೋಷಃ' ಇತಿ ಪರಾಶರಃ––ತೇಷಾಮಪಿ ಮರ್ಮಜ್ಞಭಯಾತ್ಕೃತಾಕೃತಾನ್ಯನುವರ್ತೇತ ॥

ಯಾವದ್ಭ್ಯೋ ಗುಹ್ಯಮಾಚಷ್ಟೇ ಜನೇಭ್ಯಃ ಪುರುಷಾಧಿಪಃ ।
ಅವಶಃ ಕರ್ಮಣಾ ತೇನ ವಶ್ಯೋ ಭವತಿ ತಾವತಾಂ ॥

ಯ ಏನಮಾಪತ್ಸು ಪ್ರಾಣಾಬಾಧಯುಕ್ತಾಸ್ವನುಗೃಹ್ಣೀಯುಸ್ತಾನಮಾತ್ಯಾನ್ ಕುರ್ವೀತ । ದೃಷ್ಟಾನುರಾಗತ್ವಾದಿತಿ ॥

ಭಾವಾರ್ಥ: '[ರಾಜನಲ್ಲಿರುವ] ಸಾಮಾನ್ಯ ದೋಷವು ತಿಳಿದಿರುವುದೆಂಬ ಭಯ' ಎಂದು **ಪರಾಶರ**ನು ಹೇಳುತ್ತಾನೆ. ಅಮಾತ್ಯನು ತನ್ನ ಗುಟ್ಟನ್ನು ತಿಳಿದಿರುವನೆಂಬ ಭಯದಿಂದ ರಾಜನು ಅವನ ಎಲ್ಲ ತಪ್ಪುಗಳನ್ನು ಒಪ್ಪಬೇಕಾಗಬಹುದು.....

ನೇತಿ ಪಿಶುನಃ––ಭಕ್ತಿರೇಷಾ ನ ಬುದ್ಧಿಗುಣಃ । ಸಂಖ್ಯಾತಾರ್ಥೇಷು ಕರ್ಮಸು ನಿಯುಕ್ತಾ ಯೇ ಯಥಾಽದಿಷ್ಟಮರ್ಥಂ ಸವಿಶೇಷಂ ವಾ ಕುರ್ಯುಸ್ತಾನಮಾತ್ಯಾನ್ ಕುರ್ವೀತ । ದೃಷ್ಟಗುಣತ್ವಾದಿತಿ ॥

ಭಾವಾರ್ಥ: 'ಅದು ಕೂಡದು **(ನೇತಿ)**' ಎಂದು **ಪಿಶುನನು [ನಾರದನು]** ಹೇಳುತ್ತಾನೆ. ಏಕೆಂದರೆ, ಅಮಾತ್ಯನಾಗುವವನಿಗೆ ಇರಬೇಕಾದುದು ರಾಜಭಕ್ತಿಯೇ ಹೊರತು ಬುದ್ಧಿಗುಣವಲ್ಲ.........

ನೇತಿ ಕೌಣಪದಂತಃ––ಅನ್ಯೈರಮಾತ್ಯಗುಣ್ಯೈರಯುಕ್ತಾಹ್ಯೇತೇ । ಪಿತೃಪೈತಾಮಹಾನಮಾತ್ಯಾನ್ ಕುರ್ವೀತ, ದೃಷ್ಟಾಪದಾ ನತ್ವಾತ್ ತೇ ಹ್ಯೇನಮುಪಚರಂತಮಪಿ ನ ತ್ಯಜಂತಿ ಸಗಂಧತ್ವಾತ್ । ಅಮಾನುಷೇಷ್ವಪಿ ಚೈತತ್ ದೃಶ್ಯತೇ––ಗಾವೋ ಹ್ಯಸಗಂಧಂ ಗೋಗಣಮತಿಕ್ರಮ್ಯ ಸಗಂಧೇಷ್ವೇ–ವಾವತಿಷ್ಠಂತೇ ಇತಿ ॥

ಭಾವಾರ್ಥ: 'ಅದು ಕೂಡದು **(ನೇತಿ)**' ಎಂದು **ಕೌಣಪದಂತನು** [**ಭೀಷ್ಮನು**] ಹೇಳುತ್ತಾನೆ. ಏಕೆಂದರೆ ಅಮಾತ್ಯರಲ್ಲಿ ಇರಬೇಕಾದ ಇತರೆ ಗುಣಗಳು ಇರುವುದಿಲ್ಲ. ತಂದೆ, ತಾತ ಹೀಗೆ ವಂಶ ಪರಂಪರೆಯಿಂದ ಬಂದವರನ್ನು ಅಮಾತ್ಯರನ್ನಾಗಿ ಮಾಡಬೇಕು.......

ನೇತಿ ವಾತವ್ಯಾಧಿಃ । ತೇ ಹ್ಯಸ್ಯ ಸರ್ವಮವಗೃಹ್ಯ ಸ್ವಾಮಿವತ್ಪ್ರಚರನ್ತೀತಿ । ತಸ್ಮಾನ್ನೀತಿವಿದೋ ನವಾನಮಾತ್ಯಾನ್ ಕುರ್ವೀತ; ನವಾಸ್ತು ಯಮಸ್ಥಾನೇ ದಂಡಧರಂ ಮನ್ಯಮಾನಾ ನಾಪರಾಧ್ಯಂತೀತಿ ॥

ಭಾವಾರ್ಥ: 'ಅದು ಕೂಡದು **(ನೇತಿ)**' ಎಂದು **ವಾತವ್ಯಾಧಿ [ಉದ್ಧವನು]** ಹೇಳುತ್ತಾನೆ. ಏಕೆಂದರೆ ಅಂತಹ ಅಮಾತ್ಯರು ರಾಜನ ಅಧಿಕಾರವನ್ನೆಲ್ಲ ತಾವೇ ತೆಗೆದುಕೊಂಡು ರಾಜನಂತೆ ವರ್ತಿಸತೊಡಗುತ್ತಾರೆ.........

ನೇತಿ ಬಾಹುದಂತೀಪುತ್ರಃ––ಶಾಸ್ತ್ರವಿದದೃಷ್ಟ[1] ಕರ್ಮಾಕರ್ಮಸು ವಿಪಾದಂಗಚ್ಛೇತ್ । ಅಭಿಜನಪ್ರಜ್ಞಾಶೌಚಶೌರ್ಯಾನು ರಾಗಯುಕ್ತಾನಮಾತ್ಯಾಂಕುರ್ವೀತ । ಗುಣಪ್ರಾಧಾನ್ಯಾದಿತಿ ।

ಭಾವಾರ್ಥ: 'ಅದು ಕೂಡದು **(ನೇತಿ)**' ಎಂದು **ಬಾಹುದಂತಿ ಎಂಬುವಳ ಮಗನು [ಇಂದ್ರನು]** ಹೇಳುತ್ತಾನೆ. ಏಕೆಂದರೆ, ಅನುಭವವಿಲ್ಲದೆ, ಕೇವಲ ಶಾಸ್ತ್ರಜ್ಞಾನ ಹೊಂದಿರುವವನನ್ನು ಅಮಾತ್ಯನನ್ನಾಗಿ ಮಾಡಿದರೆ, ರಾಜನನ್ನು ಕಷ್ಟಕ್ಕೆ ಸಿಲುಕಿಸುವನು ....

ಸರ್ವಮುಪಪನ್ನಮಿತಿ ಕೌಟಿಲ್ಯಃ––ಕಾರ್ಯಸಾಮರ್ಥ್ಯಾದ್ಧಿ ಪುರುಷಸಾಮರ್ಥ್ಯ ಕಲ್ಪ್ಯತೇ । ಸಾಮರ್ಥ್ಯತಶ್ಚ––

ವಿಭಜ್ಯಾಮಾತ್ಯವಿಭವಂ ದೇಶಕಾಲೌ ಚ ಕರ್ಮ ಚ ।
ಅಮಾತ್ಯಾಃಸರ್ವ ಏವೈತೇ ಕಾರ್ಯಾಃಸ್ಯುರ್ನ ತು ಮಂತ್ರಿಣಃ ॥

ಭಾವಾರ್ಥ: ಇಲ್ಲಿ ವ್ಯಕ್ತಪಡಿಸಿರುವ ಎಲ್ಲ ಅಭಿಪ್ರಾಯಗಳೂ ಯುಕ್ತವಾದುವುಗಳೇ. ಮನುಷ್ಯನ ಸಾಮರ್ಥ್ಯವು ಅವನ ಕಾರ್ಯಸಾಮರ್ಥ್ಯ ದಿಂದ ಪರಿಗಣಿಸಲ್ಪಡಬೇಕು ಎಂದು ಕೌಟಿಲ್ಯನು ಹೇಳುತ್ತಾನೆ.

ಅವರವರ ಸಾಮರ್ಥ್ಯದ ಆಧಾರದ ಮೇಲೆ ಅಮಾತ್ಯರನ್ನು ವಿಭಜಿಸಿ, ದೇಶ, ಕಾಲ ಮತ್ತು ಕರ್ತವ್ಯವನ್ನು ಪರಿಗಣಿಸಿ, ಎಲ್ಲರನ್ನು ಮಂತ್ರಿಗಳನ್ನಾಗಿ ಮಾಡದೆ ಅಮಾತ್ಯರನ್ನಾಗಿ ನೇಮಕ ಮಾಡಬೇಕು.

ಇತಿ ವಿನಯಾಧಿಕರಿಕೇ ಅಮಾತ್ಯೋತ್ಪತ್ತಿಃ ಅಷ್ಟಮೋಽಧ್ಯಾಯಃ

ರಾಜನು ಅಮಾತ್ಯರನ್ನು ನೇಮಕ ಮಾಡಿಕೊಳ್ಳುವ ನಿಯಮಗಳಿಗೆ ಸಂಬಂಧಿಸಿದಂತೆ ಪಂಪನು, ತಾನು ಭಾರದ್ವಾಜಮತಕ್ಕೆ ಸೇರಿದವನಾಗಿದ್ದೇನೆಂದು ತೋರಿಸಿಕೊಂಡಿದ್ದಾನೆ, ಅಂದರೆ, **'ರಾಜನು ತನ್ನ ಸಹಾಧ್ಯಾಯಿಗಳನ್ನು ಅಮಾತ್ಯರನ್ನಾಗಿ ಮಾಡಿಕೊಳ್ಳಬೇಕು'** ಎನ್ನುವ ಭಾರದ್ವಾಜರ ಅಭಿಪ್ರಾಯವನ್ನೇ ಪುಷ್ಟೀಕರಿಸುವಂತೆ, **'ಆಶೈಶವ ಪ್ರಭೃತಿಪ್ರರೂಢ'** ಎಂಬ ಮಾತುಗಳನ್ನು ಈ ವಚನದಲ್ಲಿ ಸೇರಿಸುವ ಮೂಲಕ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

ಮುಂದೆ, ಕವಿಯು **ಉಪಧೆ**ಗಳ ಬಗ್ಗೆ ಹೇಳುತ್ತಾನೆ. ಕಾವ್ಯದಲ್ಲಿ ಮಹಾಬಳನು, ತನ್ನ ಬಾಲ್ಯ ಸ್ನೇಹಿತರಾದ ನಾಲ್ವರು ಸಹಾಧ್ಯಾಯಿಗಳನ್ನೇ ಅಮಾತ್ಯರನ್ನಾಗಿ ಮಾಡಿಕೊಂಡರೂ, ಅವರಿಗೆ ನಾಲ್ಕು ಉಪಧೆಗಳಿಂದೇನು ವಿನಾಯಿಸುವುದಿಲ್ಲ. ಅವರಿಗೂ ನಾಲ್ಕು ಉಪಧಾಗಳಿಂದ ಶೌಚಾಶೌಚ ಪರೀಕ್ಷೆಗಳನ್ನು ನಡೆಸಿ ಅವರು **ಉಪಧಾಶುದ್ಧ**ರೆಂಬುದನ್ನು ಖಚಿಪಡಿಸಿಕೊಳ್ಳುತ್ತಾನೆ. **ಕೌಟಿಲ್ಯ**ನು, ತನ್ನ **'ಅರ್ಥಶಾಸ್ತ್ರ'** ಗ್ರಂಥದ **ಒಂದನೆಯ ಭಾಗ: ತಂತ್ರ (ಸ್ವದೇಶ ಹಿತಚಿಂತನ)**, ಇದರ **ಮೊದಲನೆಯ ಅಧಿಕರಣ:** ವಿನಯ ನಿರೂಪಣಾಧಿಕರಣದ **'ಆರನೆಯ ಪ್ರಕರಣ: ಉಪಧಾಭಿಃ ಶೌಚಾಶೌಚಜ್ಞಾನಮಮಾತ್ಯಾನಾಮ್'** ಇದರಲ್ಲಿ ಬರುವ **ಹತ್ತನೆಯ ಅಧ್ಯಾಯ**ದಲ್ಲಿ **ಉಪಧೆ**ಗಳ ಬಗ್ಗೆ ಬಹಳ ವಿಶದವಾಗಿ ಚರ್ಚಿಸಿದ್ದಾನೆ. ಕಾವ್ಯ ಸಂದರ್ಭಕ್ಕೆ ಸಂಬಧಿಸಿದ, **'ಕೌಟಿಲ್ಯನ ಅರ್ಥಶಾಸ್ತ್ರ'**ದ ಆರನೆಯ ಪ್ರಕರಣದ ಭಾಗಗಳನ್ನು ಭಾವಾರ್ಥದೊಂದಿಗೆ ವಾಚಕರ ಲಾಭಕ್ಕಾಗಿ ಯಥಾವತ್ತಾಗಿ ಇಲ್ಲಿ ನೀಡಲಾಗಿದೆ:

---

[1] ಮಾತೃಕಾಕೋಶೇ 'ಶಾಸ್ತ್ರವಿದ್ದೃಷ್ಟ' ಇತ್ಯಪಿ ಪಠಿತು ಶಕ್ಯತೇ ।

ಅರ್ಥಶಾಸ್ತ್ರೇ ಸವ್ಯಾಖೌ ವಿನಯಾಧಿಕಾರಿಕೇ ಪ್ರಥಮಾಧಿಕರಣೇ [ಅಧ್ಯಾಯಃ ೧೦

೬. ಪ್ರಕರಣ:– ಉಪಧಾಭಿಃ ಶೌಚಾಶೌಚಜ್ಞಾನಮಮಾತ್ಯಾನಾಂ ।

ಮಂತ್ರಿ ಪುರೋಹಿತಸಖಃ ಸಾಮಾನ್ಯೇಷ್ವಧಿಕರಣೇಷು ಸ್ಥಾಪಯಿತ್ವಾಽಮಾತ್ಯಾನುಪಧಾಭಿಃ ಶೌಚಯೇತ್ ।

ಭಾವಾರ್ಥ: [ರಾಜನು ತನ್ನ ಆಪ್ತವಲಯದ] ಮಂತ್ರಿ ಮತ್ತು ಪುರೋಹಿತರ ಸಹಾಯದಿಂದ, ಸಾಮಾನ್ಯ ಸ್ಥಾನಗಳಿಗೆ ನೇಮಕ ಮಾಡುವ ಅಮಾತ್ಯರುಗಳ ಗುಣನೈರ್ಮಲ್ಯಗಳನ್ನು ಪರೀಕ್ಷಿಸಬೇಕು.

[೧. **ಧರ್ಮೋಪಧೆ:** ಮೊದಲು ರಾಜನು ತನ್ನ ಆಪ್ತ ವಲಯದಲ್ಲಿರುವ ಪುರೋಹಿತನೊಬ್ಬನನ್ನು ತನ್ನ ಅಧರ್ಮಯುತ ಆಜ್ಞೆಯನ್ನು ಪಾಲಿಸದೆ, ಅವಿಧೇಯತೆ ತೋರಿದ ಕಾರಣಕ್ಕಾಗಿ ಆತನನ್ನು ಅನ್ಯಾಯವಾಗಿ ದಂಡಿಸುವಂತೆ ಆ ಸ್ಥಾನದಿಂದ ಪ್ರಕಟವಾಗಿ ಕಿತ್ತೊಗೆಯಬೇಕು. ಅದಕ್ಕೆ ರಚಿತವಾದ ಕಪಟ ನಾಟಕ ಹೀಗಿರಬೇಕೆಂದು ಕೌಟಿಲ್ಯನು ಹೇಳುತ್ತಾನೆ.]

ಪುರೋಹಿತಮಯಾಜ್ಯಯಾಜನಾಧ್ಯಾಪನೇ ನಿಯುಕ್ತಮಮೃಷ್ಯಮಾಣಂ ರಾಜಾ ಅವಕ್ಷಿಪೇತ್ । ಸ ಸತ್ರಿಭಿಃ ಶಪಥ ಪೂರ್ವ ಮೇಕೈಕಮಮಾತ್ಯಮುಪಜಾಪಯೇತ್––ಅಧಾರ್ಮಿಕೋಽಯಂ ರಾಜಾ, ಸಾಧು ಧಾರ್ಮಿಕಮನ್ಯಮಸ್ಯ ತತ್ಕುಲೀನಮವ ರುದ್ಧಂ ಕುಲ್ಯಮೇಕಪ್ರಗ್ರಹಂ ಸಾಮಂತಮಾಟವಿಕಮೌಪಪಾದಿಕಂ ವಾ ಪ್ರತಿಪಾದಯಾಮಃ । ಸರ್ವೇಷಾಮೇತದ್ರೋಚತೇ, ಕಥಂ ವಾ ತವೇತಿ । ಪ್ರತ್ಯಾಖ್ಯಾನೇ ಶುಚಿರಿತಿ ಧರ್ಮೋಪಧಾ ।

ಭಾವಾರ್ಥ: (ಅಯಾಜ್ಯ) ಯಾಗ ಮಾಡಿಸಲು ಅನರ್ಹನಾದವನ [ಪತಿತನ] ಕೈಯಲ್ಲಿ ಯಾಗ ಮಾಡಿಸುವಂತೆಯೂ ಮತ್ತು ಆತನಿಗೆ **(ಅಧ್ಯಾಪನಾ)** ವೇದಾಧ್ಯಯನ ಮಾಡಿಸುವಂತೆಯೂ ಮಾಡಿದ ರಾಜಾಜ್ಞೆಯನ್ನು ತಿರಸ್ಕರಿಸಿದ ಪುರೋಹಿತನನ್ನು, ರಾಜನು ಅವನನ್ನು ಆ ಸ್ಥಾನದಿಂದ **(ಅವಕ್ಷಿಪೇತ್)** ಕಿತ್ತೊಗೆಯಬೇಕು. ಕಿತ್ತೊಗೆಯಲ್ಪಟ್ಟ ಪುರೋಹಿತನು [ರಾಜನ ವಿರುದ್ಧ ಷಡ್ಯಂತ್ರ ಮಾಡುತ್ತಿರುವವನಂತೆ ತೋರ್ಪಡಿಸಿಕೊಳ್ಳುತ್ತಾ] ಗೂಢಚಾರರ ಮೂಲಕ, ಆ ಗೂಢಾಚಾರರು ಪುರೋಹಿತನ **(ಸತ್ರಿ<ಸತ್ರಾ)** ಸಹಪಾಠಿಗಳ ವೇಶದಲ್ಲಿ, ಪ್ರತಿಯೊಬ್ಬ ಅಮಾತ್ಯನ ಹತ್ತಿರ ಹೋಗಿ ಪ್ರಮಾಣಪೂರ್ವಕವಾಗಿ ಹೀಗೆ ಹೇಳಬೇಕು: 'ಈ ರಾಜನು ಅಧರ್ಮಿಯಾಗಿದ್ದಾನೆ. ಸಾಧುವೂ ಧಾರ್ಮಿಕನೂ ಆದವನನ್ನು ಅಥವಾ [ರಾಜನ] ವಂಶಜನೊಬ್ಬನನ್ನು ಅಥವಾ ಸೆರೆಯಲ್ಲಿಟ್ಟಿರುವವನನ್ನು ಅಥವಾ [ರಾಜನ] ವಂಶಜರಲ್ಲಿ ಗೌರವಿಸಲು ಯೋಗ್ಯನಾದವನನ್ನು ಅಥವಾ ಇಂದ್ರಿಯ ನಿಗ್ರಹಿಯೂ, ಸ್ವಾವಲಂಬಿಯೂ ಆದ ಸಾಮಂತನನ್ನು ಅಥವಾ ಕಾಡುಜನರ ಮುಖ್ಯನನ್ನು ಅಥವಾ ಯುಕ್ತಾಯುಕ್ತಿಯಿಂದ ನಾವೇ ನಿರ್ಣಯಿಸಲ್ಪಡುವವನನ್ನು ರಾಜಪದವಿಯಲ್ಲಿ ಸ್ಥಿತಗೊಳಿಸೋಣ. ಇದು ನಮಗೆಲ್ಲರಿಗೂ ಒಪ್ಪಿತವಾಗಿದೆ. ನಿನ್ನ ಅಭಿಪ್ರಾಯವೇನು?' ಎಂದು ಒಬ್ಬರನಂತರ ಒಬ್ಬರಂತೆ ಪ್ರತಿಯೊಬ್ಬರನ್ನು ಕೇಳಬೇಕು. ಯಾರಾದರೊಬ್ಬ ಅಥವಾ ಎಲ್ಲಾ ಅಮಾತ್ಯರು ತನಗೆ ಅಥವಾ ತಮಗೆ ಇಂತಹ ಕುಕೃತ್ಯವೆಸಗುವುದಕ್ಕೆ ಯಾವ ರೀತಿಯಿಂದಲೂ ಸಮ್ಮತಿಯಿಲ್ಲ ಎಂದು ತಿರಸ್ಕರಿಸಿದರೆ, ಆ ಒಬ್ಬ ಅಮಾತ್ಯ ಅಥವಾ ಎಲ್ಲಾ ಅಮಾತ್ಯರು '**ಶುದ್ಧ**'ರೆಂದು ಪರಿಗಣಿತರಾಗುವರು. ಇದು **ಧರ್ಮೋಪಧೆ** ಎನಿಸುತ್ತದೆ.

[೨. **ಅರ್ಥೋಪಧೆ:** ರಾಜನು ತನ್ನ ಆಪ್ತ ವಲಯದಲ್ಲಿರುವ ಸೇನಾಪತಿಯನ್ನು ಭ್ರಷ್ಟಾಚಾರದ ಆರೋಪದ ಮೇಲೆ ಸ್ಥಾನದಿಂದ ಹೊರಹಾಕಬೇಕು. ಸ್ಥಾನಮಾನ ಕಳೆದುಕೊಂಡ ಸೇನಾಪತಿಯು, ಅಮಾತ್ಯರಿಗೆ ಬಹು ದೊಡ್ಡ ಮೊತ್ತದ ಲಂಚದ ಆಮಿಷತೋರಿಸಿ, ರಾಜನನ್ನು ಮುಗಿಸುವಂತೆ ಪ್ರೇರೇಪಿಸುವ ರೀತಿಯಲ್ಲಿ, ಹೀಗೊಂದು ಕಪಟ ನಾಟಕ ರಚಿಸಬೇಕು ಎಂದು ಕೌಟಿಲ್ಯನು ಹೇಳುತ್ತಾನೆ.]

ಸೇನಾಪತಿರಸತ್ಪ್ರಗ್ರಹೇಣಾವಕ್ಷಿಪ್ತಃ ಸತ್ರಿಭಿರೇಕೈಕಮಮಾತ್ಯಮುಪಜಾಪಯೇಲ್ಲೋಭನೀಯೇನಾರ್ಥೇನ ರಾಜವಿನಾಶಾಯ –– ಸರ್ವೇಷಾಮೇತದ್ ರೋಚತೇ, ಕಥಂ ವಾ ತವೇತಿ । ಪ್ರತ್ಯಾಖ್ಯಾನೇ ಶುಚಿರಿತ್ಯರ್ಥೋಪಧಾ ॥

ಭಾವಾರ್ಥ: (ಅಸತ್ಪ್ರಗ್ರಹಣಾ) ಲಂಚವನ್ನು ಸ್ವೀಕರಿಸಿದ ಆಪಾದನೆಯಮೇಲೆ ರಾಜನು ಸೇನಾಪತಿಯೊಬ್ಬನನ್ನು **(ಅವಕ್ಷಿಪ್ತಃ)** ಆ ಸ್ಥಾನದಿಂದ ಬಿಸಾಡಬೇಕು. ಬಿಸಾಡಲ್ಪಟ್ಟ ಸೇನಾಪತಿಯು [ರಾಜನ ವಿರುದ್ಧ ಷಡ್ಯಂತ್ರ ಮಾಡುತ್ತಿರುವವನಂತೆ ತೋರ್ಪಡಿಸಿಕೊಳ್ಳುತ್ತಾ] ಗೂಢಚಾರರ ಮೂಲಕ, ಆ ಗೂಢಾಚಾರರು ಸೇನಾಪತಿಯ **(ಸತ್ರಿ<ಸತ್ರಾ)** ಸಹಪಾಠಿಗಳ ವೇಶದಲ್ಲಿ ಹೋಗಿ, ಪ್ರತಿಯೊಬ್ಬ ಅಮಾತ್ಯನಿಗೂ ರಾಜನನ್ನು ವಿನಾಶಗೊಳಿಸಿದರೆ ಬಹುದೊಡ್ಡ ಮೊತ್ತದ ಸಂಪತ್ತನ್ನು ಕೊಡುವುದಾಗಿ ಪ್ರಚೋದಿಸಬೇಕು. ಇದು ನಮಗೆಲ್ಲರಿಗೂ ಒಪ್ಪಿತವಾಗಿದೆ. ನಿನ್ನ ಅಭಿಪ್ರಾಯವೇನು?' ಎಂದು ಒಬ್ಬರನಂತರ ಒಬ್ಬರಂತೆ ಪ್ರತಿಯೊಬ್ಬರನ್ನು ಕೇಳಬೇಕು. ಅಮಾತ್ಯನು ತನಗೆ ಇಂತಹ ಕುಕೃತ್ಯವೆಸಗುವುದಕ್ಕೆ ಯಾವ ರೀತಿಯಿಂದಲೂ ಸಮ್ಮತಿಯಿಲ್ಲ ಎಂದು ತಿರಸ್ಕರಿಸಿದರೆ, ಆ ಒಬ್ಬ ಅಮಾತ್ಯ ಅಥವಾ ಎಲ್ಲಾ ಅಮಾತ್ಯರು '**ಶುದ್ಧ**'ರೆಂದು ಪರಿಗಣಿತರಾಗುವರು. ಇದು **ಅರ್ಥೋಪಧೆ** ಎನಿಸುತ್ತದೆ.

[೩. **ಕಾಮೋಪಧೆ:** ಅಂತಃಪುರದ ವಿಶ್ವಾಸವನ್ನು ಗಳಿಸಿಕೊಂಡಿರುವ ಪರಿವ್ರಾಜಿಕೆಯನ್ನು ಅಮಾತ್ಯರ ಹತ್ತಿರ ಕಳುಹಿಸಿ, ರಾಣಿಯು ನಿನ್ನನ್ನು ಕಾಮಿಸಿದ್ದಾಳೆ ಎಂದು ಅಮಾತ್ಯರನ್ನು ಉತ್ತೇಜಿಸುವ ರೀತಿ, ಈ ಕೆಳಗಿನಂತೆ ಕಪಟ ನಾಟಕ ರಚಿಸಬೇಕೆಂದು ಕೌಟಿಲ್ಯನು ಹೇಳುತ್ತಾನೆ.]

ಪರಿವ್ರಾಜಿಕಾ ಲಬ್ಧವಿಶ್ವಾಸಾಂತಃಪುರೇ ಕೃತಸತ್ಕಾರಾ ಮಹಾಮಾತ್ರಮೇಕೈಕಮುಪಜಪೇತ್––ರಾಜಮಹಿಷೀ ತ್ವಾಂ ಕಾಮಯತೇ ಕೃತಸಮಾಗಮೋಪಾಯಾ । ಮಹಾನರ್ಥಶ್ಚ ಭವಿಷ್ಯತೀತಿ । ಪ್ರತ್ಯಾಖ್ಯಾನೇ ಶುಚಿರಿತಿ ಕಾಮೋಪಧಾ ॥

ಭಾವಾರ್ಥ: ಅಂತಃಪುರದ ವಿಶ್ವಾಸವನ್ನು ಗಳಿಸಿಕೊಂಡಿರುವ ಪರಿವ್ರಾಜಿಕೆಯನ್ನು **(ಉಪಜಪೇತ್)** ಗೂಢಚಾರಿಣಿಯಂತೆ ಅಮಾತ್ಯರ ಹತ್ತಿರ ಕಳುಹಿಸಿ, ರಾಣಿಯು ನಿನ್ನನ್ನು ಕಾಮಿಸಿದ್ದಾಳೆ. ನಿನ್ನೊಂದಿಗಿನ ಸಮಾಗಮಕ್ಕಾಗಿ ಸೂಕ್ತ ಉಪಾಯ ಮಾಡಿದ್ದಾಳೆ. ಇದಕ್ಕಾಗಿ **(ಮಹಾನರ್ಥಶ್ಚ)**

ದೊಡ್ಡ ಮೊತ್ತದ ಸಂಪತ್ತು ಭವಿಷ್ಯದಲ್ಲಿ ನಿನ್ನದಾಗುವುದು ಎಂದು ಒಬ್ಬರನಂತರ ಒಬ್ಬರಂತೆ ಪ್ರತಿಯೊಬ್ಬ ಅಮಾತ್ಯರನ್ನು ಉತ್ತೇಜಿಸಬೇಕು. ಅಮಾತ್ಯನು ಈ ಪ್ರಸ್ತಾಪವನ್ನು ತಿರಸ್ಕರಿಸಿದರೆ, ಆತನು **'ಶುದ್ಧ'**ನೆಂದು ಪರಿಗಣಿತನಾಗುವನು. ಇದು **ಕಾಮೋಪಧೆ** ಎನಿಸುತ್ತದೆ.

[**೪. ಭಯೋಪಧೆ:**]

ಪ್ರವಹಣನಿಮಿತ್ತಮೇಕೋಽಮಾತ್ಯಃ ಸರ್ವಾನಮಾತ್ಯಾನಾವಾಹಯೇತ್ । ತೇನೋದ್ವೇಗೇನ ರಾಜಾ ತಾನವರುಂಧ್ಯಾತ್ । ಕಾಪಟಿಕ[1]ಚ್ಛಾತ್ರಃ ಪೂರ್ವಾವರುದ್ಧಸ್ತೇಷಾಮರ್ಥಮಾನಾವಕ್ಷಿಪ್ತಮೇಕೈಕಮಮಾತ್ಯಮುಪಜಪೇತ್--ಅಸತ್ಪ್ರವೃತ್ತೋಽಯಂ ರಾಜಾ, ಸಾಧ್ವೇನಂ ಹತ್ವಾ ಅನ್ಯಂ ಪ್ರತಿಪಾದಯಿಷ್ಯಾಮಃ । ಸರ್ವೇಷಾಮೇ- ತದ್‌ರೋಚತೇ । ಕಥಂ ವಾ ತವೇತಿ । ಪ್ರತ್ಯಾಖ್ಯಾನೇ ಶುಚಿರಿತಿ ಭಯೋಪಧಾ ।

ಭಾವಾರ್ಥ: (ಪ್ರವಹಣನಿಮಿತ್ತಂ) ಹೊರಸಂಚಾರಹೋಗುವ [ಮೋಜಿನ ಗೋಷ್ಠಿ ನಡೆಸುವ(?)] ಉದ್ದೇಶದಿಂದ **(ಏಕೋಽಮಾತ್ಯಃ)** ಅಮಾತ್ಯನೊಬ್ಬನು **(ಸರ್ವಾನಮಾತ್ಯಾನಾವಾಹಯೇತ್)** ಎಲ್ಲಾ ಅಮಾತ್ಯರನ್ನು ತನ್ನೊಂದಿಗೆ ಕರೆದುಕೊಂಡು ಹೋಗಬೇಕು. **(ತೇನೋದ್ವೇಗೇನ ರಾಜಾ)** ಇದನ್ನು ನೋಡಿದ ರಾಜನು, [ಅಮಾತ್ಯರೆಲ್ಲರೂ ತನ್ನ ವಿರುದ್ಧ ಒಳಸಂಚು ನಡೆಸುತ್ತಿರಬಹುದೆಂಬ] ಭಯದಿಂದ **(ತಾನವರುಂಧ್ಯಾತ್)** ಅವರನ್ನು ಬಂಧಿಸಿ [ನಂತರ ಬಿಡುಗಡೆಗೊಳಿಸಿ, ಅವರಲ್ಲಿರುವ ಹಣ, ಸ್ಥಾನಮಾನಗಳನ್ನು ಅಪಹರಿಸಿ] ಅಪಮಾನಗೊಳಿಸಬೇಕು. ಕಾಪಟಿಕನಾದ ಗೂಢಚಾರನು, ಈ ಹಿಂದೆ ಕಪಟವ್ಯವಹಾರದಲ್ಲಿ ನಿರತನಾಗಿದ್ದು ರಾಜನಿಂದ ಬಂಧನದ ಶಿಕ್ಷೆಗೆ ಒಳಗಾಗಿ ಅಪಮಾನಿತನಾಗಿದ್ದು, [ಈಗ ರಾಜನಿಂದ ಮನ್ನಣೆ ಪಡೆದು] ಕಾಪಟಿಕ ಗೂಢಚಾರನಾಗಿರುವವನು, ಕಾಪಟಿಕನ ಶಿಷ್ಯನಂತೆ ವೇಷಧರಿಸಿ, ಅಪಮಾನಿತರಾದ ಅಮಾತ್ಯರ ಹತ್ತಿರ ಹೋಗಿ ಅವರಿಗೆ ಹೀಗೆ ಹೇಳಬೇಕು: ರಾಜನು ದುರಾಚಾರಿಯಾಗಿದ್ದಾನೆಂಬ ಭಯವುಂಟಾಗಿರು ವುದರಿಂದ, ಇವನನ್ನು ಕೊಂದು ಬೇರೊಬ್ಬನನ್ನು ಸ್ಥಿತಗೊಳಿಸೋಣ. ಇದು ನಮಗೆಲ್ಲರಿಗೂ ಒಪ್ಪಿತವಾಗಿದೆ. ನಿನ್ನ ಅಭಿಪ್ರಾಯವೇನು?' ಎಂದು ಒಬ್ಬರನಂತರ ಒಬ್ಬರಂತೆ ಪ್ರತಿಯೊಬ್ಬರನ್ನು ಕೇಳಬೇಕು. ಅಮಾತ್ಯನು/ರು ಇಂತಹ ಕುಕೃತ್ಯವೆಸಗುವುದಕ್ಕೆ ನನ್ನ ಸಮ್ಮತಿಯಿಲ್ಲ ಎಂದು ತಿರಸ್ಕರಿಸಿದರೆ, ಆ ಒಬ್ಬ ಅಮಾತ್ಯ ಅಥವಾ ಎಲ್ಲಾ ಅಮಾತ್ಯರು **'ಶುದ್ಧ'**ರೆಂದು ಪರಿಗಣಿತರಾಗುವರು. ಇದು **ಭಯೋಪಧೆ** ಎನಿಸುತ್ತದೆ.

ತತ್ರ ಧರ್ಮೋಪಧಾಶುದ್ಧಾನ್ ಧರ್ಮಸ್ಥೀಯಕಂಟಕಶೋಧನೇಷು ಸ್ಥಾಪಯೇತ್ ।

ಭಾವಾರ್ಥ: ಧರ್ಮೋಪಧೆಯಲ್ಲಿ ಶುದ್ಧನಾಗಿರುವವನನ್ನು **(ಧರ್ಮಸ್ಥೀಯ)** ನ್ಯಾಯಾಲಯದಲ್ಲಿ [ಮತ್ತು] **(ಕಂಟಕ-ಶೋಧನೇಷು)** [ಜನ] ಪೀಡಕ [ಪಾತಕ/ಅಪರಾಧಿಕ] ಶೋಧನ ಕಾರ್ಯಾಧಿಕಾರಿಯನ್ನಾಗಿ ನೇಮಕ ಮಾಡಬೇಕು.

ಅರ್ಥೋಪಧಾಶುದ್ಧಾನ್ ಸಮಾಹರ್ತೃಸನ್ನಿಧಾತೃನಿಚಯಕರ್ಮಸು ।

ಭಾವಾರ್ಥ: ಅರ್ಥೋಪಧೆಯಲ್ಲಿ ಶುದ್ಧನಾಗಿರುವವನನ್ನು **(ಸಮಾಹರ್ತೃ)** [ತೆರಿಗೆ] ಸಂಗ್ರಹಕಾರನಾಗಿ [ಮತ್ತು] **(ಸನ್ನಿಧಾತೃ)** ಕೋಶಾಧಿಕಾರಿಯನ್ನಾಗಿ [ಅರಮನೆಯ ಆಡಳಿತಾಧಿಕಾರಿಯನ್ನಾಗಿ(?)] ನೇಮಕ ಮಾಡಬೇಕು.

ಕಾಮೋಪಧಾಶುದ್ಧಾನ್ ಬಾಹ್ಯಾಭ್ಯಂತರವಿಹಾರರಕ್ಷಾಸು।

ಭಾವಾರ್ಥ: ಕಾಮೋಪಧೆಯಲ್ಲಿ ಶುದ್ಧನಾಗಿರುವವನನ್ನು ಒಳಹೊರಗಿನ **(ವಿಹಾರರಕ್ಷಾಸು)** [ಸ್ತ್ರೀಯರು ಓಡಾಡುವ] ವಿಹಾರಕ್ಷೇತ್ರಗಳ ರಕ್ಷಣಾಧಿಕಾರಿಯನ್ನಾಗಿ ನೇಮಕ ಮಾಡಬೇಕು.

ಭಯೋಪಧಾಶುದ್ಧಾನಾಸನ್ನಕಾರ್ಯೇಷು ರಾಜ್ಞಃ ।

ಭಾವಾರ್ಥ: ಭಯೋಪಧೆಯಲ್ಲಿ ಶುದ್ಧನಾಗಿರುವವನನ್ನು **(ಅಸನ್ನ ಕಾರ್ಯೇಷು)** [ರಾಜನಿಗೆ] ಸಮೀಪದಲ್ಲಿದ್ದುಕೊಂಡು ನಿರ್ವಹಿಸುವ ಕಾರ್ಯಾಧಿಕಾರಿಯನ್ನಾಗಿ ನೇಮಕ ಮಾಡಬೇಕು.

ಸರ್ವೋಪಧಾಶುದ್ಧಾನ್ ಮಂತ್ರಿಣಃ ಕುರ್ಯಾತ್ ।

ಭಾವಾರ್ಥ: ನಾಲ್ಕೂ ಉಪಧೆಗಳಲ್ಲಿ ಶುದ್ಧನಾಗಿರುವವನನ್ನು **(ಮಂತ್ರಿಣಃ ಕುರ್ಯಾತ್)** ಮಂತ್ರಿಯನ್ನಾಗಿ ಮಾಡಬೇಕು.

ಸರ್ವತ್ರಾಶುಚೀನ್ ಖನಿದ್ರವ್ಯಹಸ್ತಿವನಕರ್ಮಾಂತೇಷೂಪಯೋಜಯೇತ್ ।

ಭಾವಾರ್ಥ: ನಾಲ್ಕೂ ಉಪಧೆಗಳಲ್ಲಿ **ಅಶುದ್ಧ**ನಾಗಿರುವವನನ್ನು **(ಖನಿ)** ಗಣಿ, **(ದ್ರವ್ಯ)** ಮರ ಸಂಬಂಧಿಗಳು **(ಹಸ್ತಿವನ)** ಆನೆಗಳಿರುವ ಕಾಡು, **(ಕರ್ಮಾಂತೇಷು)** ಕೈಗಾರಿಕೆಗಳು ಇಂತಹ [ದೇಹಶ್ರಮವನ್ನಪೇಕ್ಷಿಸುವ] ಸ್ಥಳಗಳಲ್ಲಿ ನಿಯೋಜಿಸ ಬೇಕು .....

---

[1] ರಾಜನ ಐದು ಗೂಢಚಾರರಲ್ಲೊಬ್ಬ. ಕಪಟ ವ್ಯವಹಾರದಿಂದ ಜೀವಿಸುವವನು ಕಾಪಟಿಕ. ಪರರ ಮರ್ಮವನ್ನು ತಿಳಿದಿರುವ ಮತ್ತು ಕಪಟ ವ್ಯವಹಾರದಿಂದ ವರ್ತಿಸುವ ಇವನನ್ನು ಗೌರವಿಸಿ ಇವನಿಗೆ ಸಾಕಾದಷ್ಟು ದ್ರವ್ಯ ಸಹಾಯಮಾಡಿ ಯಾವಾದರೊಬ್ಬನ ದುರ್ನಡತೆಯನ್ನು ಕಂಡಕೂಡಲೆ ತನಗೆ ತಿಳಿಸಬೇಕೆಂದು ರಾಜನು ನಿಯಮಿಸುವನು. ಐದು ವಿಧ ಗೂಢಚಾರರು: (೧) ಕಾಪಟಿಕ, (೨) ಉದಾಸ್ಥಿತ, (೩) ಗೃಹಪತಿ, (೪) ವೈದೇಹಿಕ ಮತ್ತು (೫) ತಾಪಸ.

ಧರ್ಮ, ಅರ್ಥ, ಕಾಮ, ಭಯ ಈ ನಾಲ್ಕೂ ವಿಧವಾದ ಪರೀಕ್ಷೆಗಳಿಂದ ಶುದ್ಧನೆಂದ ನಿರ್ಣಯಿಸಲ್ಪಟ್ಟವನನ್ನು ರಾಜಸೇವೆಗೆ ನಿಯುಕ್ತಿಗೊಳಿಸಿಕೊಳ್ಳಬಹುದೆಂಬುದು ರಾಜನೀತಿ. **'ಧರ್ಮ'** ಪರೀಕ್ಷೆಯಿಂದ ರಾಜಭಕ್ತಿಯೂ, **'ಅರ್ಥ'** ಪರೀಕ್ಷೆಯಿಂದ ಸ್ವಾರ್ಥರಾಹಿತ್ಯವೂ, **'ಕಾಮ'** ಪರೀಕ್ಷೆಯಿಂದ ಇಂದ್ರಿಯಜಯ ಸಾಮರ್ಥ್ಯವೂ, **'ಭಯ'** ಪರೀಕ್ಷೆಯಿಂದ ರಾಜನಿಷ್ಠೆಯೂ ಪ್ರಕಟಗೊಳ್ಳುತ್ತದೆ. ಹೀಗೆ ಕವಿಯು **'ಕೌಟಿಲ್ಯನ ಅರ್ಥಶಾಸ್ತ್ರ'**ದ, (೧) **ಅಮಾತ್ಯೋತ್ಪತ್ತಿಃ** ಮತ್ತು (೨) **ಉಪಧಾಭಿಃ ಶೌಚಾಶೌಚಜ್ಞಾನಮಮಾತ್ಯಾನಾಂ,** ಈ ಎರಡೂ ಪ್ರಕರಣಗಳನ್ನು ಅತ್ಯಂತ ಸಮರ್ಥವಾಗಿ ಮತ್ತು ಸಂದರ್ಭೋಚಿತವಾಗಿ ಕಾವ್ಯದೊಳಗೆ ಅಳವಡಿಸಿದ್ದಾನೆ. ಹಾಗೆಯೇ ಹಿಂದಿನ ೧–೫೧ ನೆಯ ವೃತ್ತಪದ್ಯದಲ್ಲಿ **ಷಡ್ಭಾಗಮಂ ಕೊಂಡು** ಎಂಬ ಪದಗಳನ್ನು ಪ್ರಯೋಗಿಸಿ, ಕೌಟಿಲ್ಯನ **ತೆರಿಗೆನೀತಿ**ಯನ್ನೇ ಅನುಮೋದಿಸಿರುವನು. ಆದರೆ, ಮುಂದೆ ನಾಲ್ಕನೆಯ ಆಶ್ವಾಸದ ೪–೫೪ ನೆಯ ವೃತ್ತಪದ್ಯದ ನಂತರದ ವಚನದಲ್ಲಿ (೪–೫೪ (ವ)) **'ಕೌಟಿಲ್ಯನ ಅರ್ಥಶಾಸ್ತ್ರ'**ದ **ಎಂಟನೆಯ ಪ್ರಕರಣ: ಗೂಢಪುರುಷಪ್ರಣಿಧಿಃ (ಅಧ್ಯಾಯ: ೧೨)** ಇದರ ಭಾಗಗಳನ್ನು ಕವಿಯು ಕಾವ್ಯದೊಳಗೆ ಅನುಚಿತವಾಗಿ ತುರುಕುವ ಪ್ರಯತ್ನ ಮಾಡಿದ್ದಾನೆ ಎನಿಸುತ್ತದೆ. ವಿವರಗಳಿಗೆ, ೪–೫೪ (ವ) ಇದಕ್ಕೆ ನೀಡಿರುವ **ವಿಶೇಷ ವಿವರಣೆ**ಯನ್ನು ನೋಡಿರಿ.

ಶ್ರೀ

ಪಂಪ ಮಹಾಕವಿ ವಿರಚಿತಂ

ಆದಿಪುರಾಣಂ

ಪ್ರಥಮಾಶ್ವಾಸದಲ್ಲಿರುವ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯ ಪರಿವಿಡಿ

ಶ್ರೀ

ಪಂಪ ಮಹಾಕವಿ ವಿರಚಿತಂ

ಆದಿಪುರಾಣಂ

ಪ್ರಥಮಾಶ್ವಾಸದಲ್ಲಿರುವ ಸಂಖ್ಯಾವಿಶಿಷ್ಟ ಪದಗಳ ಪಟ್ಟಿ

ಎರಡು (೨)–ಕಾಲದ ಎರಡು ಭೇದಗಳು

ಕಾಲದ ಸ್ವರೂಪ: ಸ್ಪರ್ಶ, ರಸ, ಗಂಧ ಹಾಗೂ ವರ್ಣರಹಿತವೂ, ಅಗುರುಲಘುಗುಣ ಸಹಿತವೂ ಮತ್ತು ವರ್ತನಾ ಲಕ್ಷಣವುಳ್ಳದ್ದು ಆಗಿರುತ್ತದೆ. (ತಿಲೋಯಪಣ್ಣತ್ತೀ ೪–೨೮೧)
(ತತ್ತ್ವಾರ್ಥ ಸೂತ್ರ: ಸೂತ್ರ ಸಂ. ೫–೨೨, ೩೯, ೪೦) (ತಿಲೋಯಪಣ್ಣತ್ತೀ ಗಾಹೆ ಸಂಖ್ಯೆ ೪–೨೮೦ ರಿಂದ ೩೪೫ ರ ವರೆಗೆ)
(ಪೂರ್ವಪುರಾಣ, ತೃತೀಯ ಪರ್ವ)

ಕಾಲದ ಎರಡು ವಿಧ: (ಪದ್ಯ/ವಚನ ಸಂ. ೬–೪೮ (ವ)) (ತಿಲೋಯಪಣ್ಣತ್ತೀ ೪–೨೮೨)
ಕಾಲದಲ್ಲಿ, (೧) **ಮುಖ್ಯಕಾಲ (ನಿಶ್ಚಯಕಾಲ)** ಹಾಗೂ (೨) **ಅಮುಖ್ಯಕಾಲ (ವ್ಯವಹಾರಕಾಲ)** –ಹೀಗೆ ಎರಡು ಭೇದಗಳಿವೆ. ಇವುಗಳಲ್ಲಿ ಮುಖ್ಯಕಾಲದ (ನಿಶ್ಚಯಕಾಲದ) ಆಶ್ರಯದಿಂದ ಅಮುಖ್ಯಕಾಲದ (ವ್ಯವಹಾರಕಾಲದ) ಪ್ರವೃತ್ತಿಯಾಗುತ್ತದೆ (ಕಾಲ ಪ್ರವರ್ತಿಸುತ್ತದೆ).

೧. ಮುಖ್ಯ ಕಾಲ (ನಿಶ್ಚಯ ಕಾಲ): (ತಿಲೋಯಪಣ್ಣತ್ತೀ ಗಾಹೆ ಸಂಖ್ಯೆ ೪–೨೮೩ ರಿಂದ ೨೮೬ ರ ವರೆಗೆ)
ಮುಖ್ಯ ಕಾಲದ ಲಕ್ಷಣಗಳು
(೧) ಆದಿ, ಮಧ್ಯ ಮತ್ತು ಅವಸಾನ ವಿರಹಿತಮುಂ (ಅಂತ್ಯಗಳಿಲ್ಲದ್ದು);
(೨) ವರ್ತನಾ ಲಕ್ಷಣ;– ಎಲ್ಲಾ ದ್ರವ್ಯಗಳು ತಮ್ಮ–ತಮ್ಮ ಉಪಾದಾನ ಕಾರಣದಿಂದ ತನ್ನ ಪರ್ಯಾಯದ ಉತ್ಪಾದರೂಪದಿಂದ ವರ್ತಿಸುತ್ತವೆ. ಅವುಗಳ ವರ್ತನೆಯ ಬಾಹ್ಯ ನಿಮಿತ್ತ ಕಾರಣವು ಕಾಲದ್ರವ್ಯವಾಗಿದೆ. ಆದ್ದರಿಂದ 'ವರ್ತನಾ' ಇದು ಕಾಲದ ಲಕ್ಷಣ ಅಥವಾ ಉಪಕಾರ ವೆಂದು ಹೇಳಲಾಗುತ್ತದೆ.
(೩) ಪರಿಣಾಮ ದ್ರವ್ಯ ಪರಿವರ್ತನ ಕಾರಣಮುಂ;– ಕಾಲವು ಸ್ವಯಂ ಪರಿವರ್ತನಶೀಲವಾಗಿದೆ ಮತ್ತು ಅನ್ಯ ದ್ರವ್ಯಗಳ ಪರಿಣಾಮಗಳ ಪರಿವರ್ತನೆಗೆ ಸಹಾಯಕವಾಗಿದೆ.
(೪) ಲೋಕಾಕಾಶ ಪ್ರದೇಶ ಪ್ರಮಾಣ ಪರಿಮಾಣಮುಂ;– ಲೋಕಾಕಾಶದ ಪ್ರತಿಯೊಂದು ಪ್ರದೇಶದಲ್ಲಿ ರತ್ನಗಳ ರಾಶಿಯಂತೆ ಒಂದೊಂದಾಗಿ ಕಾಲಾಣುಗಳು ಸ್ಥಿತವಾಗಿರುತ್ತವೆ. ಕಾಲಾಣು ಎಂಬ ದ್ರವ್ಯಗಳ ಸಂಖ್ಯೆಯು ಅಸಂಖ್ಯಾತವಾಗಿದೆ.
('ದ್ರವ್ಯಸಂಗ್ರಹ' ದ ೨೨ನೆಯ ಗಾಹೆ)
(೫) ಅಸ್ಮದಾದಿ ಅನುಮೇಯಮುಂ;– ನಮ್ಮಂತಹ ಸಾಮಾನ್ಯರಿಗೆ ಊಹೆಯಿಂದ ಅಥವಾ ತರ್ಕದಿಂದ ತಿಳಿಯ ತಕ್ಕದ್ದು.
(೬) ಸರ್ವಜ್ಞ ಪ್ರತ್ಯಕ್ಷ ಗೋಚರಂ;– ಸರ್ವಜ್ಞರಾದ ಜಿನೇಂದ್ರರಿಗೆ ಪ್ರತ್ಯಕ್ಷ ಗೋಚರಿಸುವಂತಹದ್ದು.

ಮೇಲಿನ ಲಕ್ಷಣ ಅಥವಾ ಉಪಯೋಗವನ್ನು ಹೊಂದಿರುವ ದ್ರವ್ಯಕ್ಕೆ '**ಕಾಲ ದ್ರವ್ಯ**' ಎನ್ನುವರು.

೨. ವ್ಯವಹಾರ ಕಾಲ: (ತಿಲೋಯಪಣ್ಣತ್ತೀ ಗಾಹೆ ಸಂಖ್ಯೆ ೪–೨೮೭)

ಮುಖ್ಯ ಕಾಲದ ನಿರ್ವರ್ತಿತ ('ವರ್ತನಾ' ಉಪಯೋಗವನ್ನು ಆಗಮಾಡಿಸುವ ಅಥವಾ ನೆರವೇರಿಸುವ) ಕ್ರಿಯಾರೂಪವೇ **'ವ್ಯವಹಾರ ಕಾಲ'**. ಅಂದರೆ ಮುಖ್ಯ ಕಾಲವು **'ತತ್ತ್ವರೂಪ'**ದ್ದಾಗಿದ್ದರೆ, ವ್ಯವಹಾರ ಕಾಲವು ಅದರ **'ಕ್ರಿಯಾರೂಪ'** ವಾಗಿರುತ್ತದೆ.

(ವ್ಯವಹಾರ ಕಾಲದ ಭೇದಗಳಿಗೆ ಸಂಖ್ಯಾ ವಿಶಿಷ್ಟಪದ ಸಂಖ್ಯೆ **ಎರಡು (೨)–ವ್ಯವಹಾರಕಾಲದ ಎರಡು ಬಗೆ** ವಿಭಾಗವನ್ನು ನೋಡಿ)

ಗಣನೆಯ ಅನುಕ್ರಮದಿಂದ ಏರಿಕೆಯಎಣಿಕೆ ಕ್ರಮದಲ್ಲಿ (ಪೆರ್ಚಿದೆಣಿಕೆಯೊಳ್) ವ್ಯವಹಾರಕಾಲವನ್ನು ಹೀಗೆ ಎಣಿಸಲಾಗುತ್ತದೆ: (ತಿಲೋಯಪಣ್ಣತ್ತೀ ಗಾಹೆ ಸಂಖ್ಯೆ ೪–೨೮೭ ರಿಂದ ೪–೩೧೩ ರ ವರೆಗೆ)

(೧) **ಸಮಯ**–ಒಂದು ಪುದ್ಗಲ ಪರಮಾಣುವು ಅದರ ಹತ್ತಿರ ಇರುವ ಇನ್ನೊಂದು ಆಕಾಶ ಪ್ರದೇಶಕ್ಕೆ ಹೋಗುವುದಕ್ಕೆ ತಗಲುವ ಅವಿಭಾಗಿ ಕಾಲಕ್ಕೆ 'ಸಮಯ' ಎಂದು ಹೆಸರು.

(೨) **ಆವಳಿಕಾ**–ಅಸಂಖ್ಯಾತ ಸಮಯಕ್ಕೆ ಒಂದು 'ಆವಲಿ' ಅಥವಾ 'ಆವಳಿಕಾ'ಎಂದು ಹೆಸರು.

(೩) **ಉಚ್ಛ್ವಾಸ**–ಅಸಂಖ್ಯಾತ ಆವಲಿಗಳ ಸಮೂಹ ರೂಪಕ್ಕೆ ಒಂದು 'ಉಚ್ಛ್ವಾಸ' ಎಂದು ಹೆಸರು. ಇದು **'ಪ್ರಾಣ'** ಎಂಬ ಹೆಸರಿನಿಂದಲೂ ಪ್ರಸಿದ್ಧವಾಗಿದೆ.

(೪) **ಸ್ತೋಕ**–ಏಳು ಉಚ್ಛ್ವಾಸಗಳಿಗೆ ಒಂದು 'ಸ್ತೋಕ' ಎಂದು ಹೆಸರು.

(೫) **ಲವ**–ಏಳು ಸ್ತೋಕಗಳಿಗೆ ಒಂದು 'ಲವ' ಎಂದು ಹೆಸರು.

(೬) **ನಾಳಿಕಾ**–ಮೂವತ್ತೆಂಟೂವರೆ ($38\frac{1}{2}$) ಲವಗಳಿಗೆ ಒಂದು 'ನಾಲಿ' ಅಥವಾ 'ನಾಳಿಕಾ' ಎಂದು ಹೆಸರು. (ಇದು ೨೪ ನಿಮಿಷಗಳಿಗೆ ಸಮ)

(೭) **ಮುಹೂರ್ತ**–ಎರಡು ನಾಲಿಗಳಿಗೆ ಒಂದು 'ಮುಹೂರ್ತ' ಎಂದು ಹೆಸರು. (ಎಪ್ಪತ್ತೇಳು ಲವಗಳಿಗೆ ಒಂದು 'ಮುಹೂರ್ತ' ಎಂದೂ ಹೇಳಬಹುದು. ಇದು ೪೮ ನಿಮಿಷಗಳಿಗೆ ಸಮ ಅಥವಾ ಒಂದೂಕಾಲು ಮುಹೂರ್ತಕ್ಕೆ ಒಂದು ಗಂಟೆಯಾಗುತ್ತದೆ)

(೮) **ಭಿನ್ನ ಮುಹೂರ್ತ**–ಒಂದು ಸಮಯ ಕಡಿಮೆ ಒಂದು ಮುಹೂರ್ತಕ್ಕೆ 'ಭಿನ್ನ ಮುಹೂರ್ತ' ಎನ್ನುತ್ತಾರೆ.

(೯) **ದಿವಸ**–ಮುವತ್ತು ಮುಹೂರ್ತಗಳಿಗೆ ಒಂದು 'ದಿನ' ಎನ್ನುತ್ತಾರೆ. (ಇದು ಇಪ್ಪತ್ತನಾಲ್ಕು ಗಂಟೆಗಳಿಗೆ ಸಮ)

(೧೦) **ಪಕ್ಷ**–ಹದಿನೈದು ದಿನಗಳಿಗೆ ಒಂದು 'ಪಕ್ಷ' ವಾಗುತ್ತದೆ.

(೧೧) **ಮಾಸ**–ಎರಡು ಪಕ್ಷಗಳಿಗೆ ಒಂದು 'ಮಾಸ' ಎನ್ನುತ್ತಾರೆ.

(೧೨) **ಋತು**–ಎರಡು ಮಾಸಗಳಿಗೆ ಒಂದು 'ಋತು' ಎನ್ನುತ್ತಾರೆ.

(೧೩) **ಅಯನ**–ಮೂರು ಋತುಗಳಿಗೆ ಒಂದು 'ಅಯನ' ಎಂದು ಹೇಳುತ್ತಾರೆ.

(೧೪) **ವರ್ಷ**–ಎರಡು ಅಯನಗಳಿಗೆ ಒಂದು 'ವರ್ಷ' ಎನ್ನುತ್ತಾರೆ.

(೧೫) **ಯುಗ**–ಐದು ವರ್ಷಗಳಿಗೆ ಒಂದು 'ಯುಗ' ಎನ್ನುತ್ತಾರೆ.

(೧೬) **ದಶವರ್ಷ**–ಎರಡು ಯುಗಗಳಿಗೆ 'ದಶವರ್ಷ' ಗಳಾಗುತ್ತವೆ.

(೧೭) **ಶತವರ್ಷ**–ಹತ್ತುವರ್ಷಗಳನ್ನು ಹತ್ತರಿಂದ ಗುಣಿಸಿದರೆ 'ಶತವರ್ಷ'ಗಳಾಗುತ್ತವೆ.

(೧೮) **ಸಹಸ್ರವರ್ಷ**–ಶತವರ್ಷಗಳನ್ನು ಹತ್ತರಿಂದ ಗುಣಿಸಿದರೆ 'ಸಹಸ್ರವರ್ಷ'ಗಳಾಗುತ್ತವೆ.

(೧೯) **ದಶ ಸಹಸ್ರವರ್ಷ**–ಸಹಸ್ರವರ್ಷಗಳನ್ನು ಹತ್ತರಿಂದ ಗುಣಿಸಿದರೆ 'ದಶಸಹಸ್ರವರ್ಷ'ಗಳಾಗುತ್ತವೆ.

(೨೦) **ಒಂದು ಲಕ್ಷವರ್ಷ**–ಹತ್ತು ಸಹಸ್ರವರ್ಷಗಳನ್ನು ಹತ್ತರಿಂದ ಗುಣಿಸಿದರೆ 'ಒಂದು ಲಕ್ಷವರ್ಷ'ಗಳಾಗುತ್ತವೆ.

(೨೧) **ಪೂರ್ವಾಂಗ**–ಒಂದು ಲಕ್ಷವರ್ಷಗಳನ್ನು ೮೪ ರಿಂದ ಗುಣಿಸಿದರೆ ಒಂದು 'ಪೂರ್ವಾಂಗ'ವಾಗುತ್ತದೆ.

(೨೨) **ಪೂರ್ವ**–ಪೂರ್ವಾಂಗದ ವರ್ಗ ಪರಿಮಾಣಕ್ಕೆ 'ಪೂರ್ವ' ಎಂದು ತಿಳಿಯಬೇಕು.

(೮೪,೦೦,೦೦೦ ವರ್ಷ X ೮೪,೦೦,೦೦೦ ವರ್ಷ=ಪೂರ್ವ (ಪುಬ್ಬ)=೭೦ಲಕ್ಷ ೫೬ಸಾವಿರ ಕೋಟಿ ವರ್ಷಗಳು)

(೨೩) **ಪರ್ವಾಂಗ**–ಒಂದು ಪೂರ್ವವನ್ನು ೮೪ ರಿಂದ ಗುಣಿಸಿದರೆ ಒಂದು 'ಪರ್ವಾಂಗ'ವಾಗುತ್ತದೆ.

(೨೪) **ಪರ್ವ**–ಒಂದು ಪರ್ವಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಪರ್ವ'ವಾಗುತ್ತದೆ.

(೨೫) **ನಯುತಾಂಗ**–ಒಂದು ಪರ್ವವನ್ನು ೮೪ ರಿಂದ ಗುಣಿಸಿದರೆ ಒಂದು 'ನಯುತಾಂಗ'ವಾಗುತ್ತದೆ.

(೨೬) **ನಯುತ**–ಒಂದು ನಯುತಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ನಯುತ'ವಾಗುತ್ತದೆ.

(೨೭) **ಕುಮುದಾಂಗ**–ಒಂದು ನಯುತವನ್ನು ೮೪ ರಿಂದ ಗುಣಿಸಿದರೆ ಒಂದು 'ಕುಮುದಾಂಗ'ವಾಗುತ್ತದೆ.

(೨೮) **ಕುಮುದ**–ಒಂದು ಕುಮುದಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಕುಮುದ'ವಾಗುತ್ತದೆ.

(೨೭) **ಪದ್ಮಾಂಗ**–ಒಂದು ಕುಮುದವನ್ನು ೮೪ ರಿಂದ ಗುಣಿಸಿದರೆ ಒಂದು 'ಪದ್ಮಾಂಗ'ವಾಗುತ್ತದೆ.

(೨೮) **ಪದ್ಮ**–ಒಂದು ಪದ್ಮಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಪದ್ಮ'ವಾಗುತ್ತದೆ.

(೨೯) **ನಲಿನಾಂಗ**–ಒಂದು ಪದ್ಮವನ್ನು ೮೪ ರಿಂದ ಗುಣಿಸಿದರೆ ಒಂದು 'ನಲಿನಾಂಗ'ವಾಗುತ್ತದೆ.

(೩೦) **ನಲಿನ**–ಒಂದು ನಲಿನಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ನಲಿನ'ವಾಗುತ್ತದೆ.
(೩೧) **ಕಮಲಾಂಗ**–ಒಂದು ನಲಿನವನ್ನು ೮೪ ರಿಂದ ಗುಣಿಸಿದರೆ ಒಂದು 'ಕಮಲಾಂಗ'ವಾಗುತ್ತದೆ.
(೩೨) **ಕಮಲ**–ಒಂದು ಕಮಲಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಕಮಲ'ವಾಗುತ್ತದೆ.
(೩೩) **ತ್ರುಟಿತಾಂಗ**–ಒಂದು ಕಮಲವನ್ನು ೮೪ ರಿಂದ ಗುಣಿಸಿದರೆ ಒಂದು 'ತ್ರುಟಿತಾಂಗ'ವಾಗುತ್ತದೆ.
(೩೪) **ತ್ರುಟಿತ**–ಒಂದು ತ್ರುಟಿತಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ತ್ರುಟಿತ'ವಾಗುತ್ತದೆ.
(೩೫) **ಅಟಟಾಂಗ**–ಒಂದು ತೃಟಿತವನ್ನು ೮೪ ರಿಂದ ಗುಣಿಸಿದರೆ ಒಂದು 'ಅಟಟಾಂಗ'ವಾಗುತ್ತದೆ.
(೩೬) **ಅಟಟ**–ಒಂದು ಅಟಟಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಅಟಟ'ವಾಗುತ್ತದೆ.
(೩೭) **ಅಮಮಾಂಗ**–ಒಂದು ಅಟಟವನ್ನು ೮೪ ರಿಂದ ಗುಣಿಸಿದರೆ ಒಂದು 'ಅಮಮಾಂಗ'ವಾಗುತ್ತದೆ.
(೩೮) **ಅಮಮ**–ಒಂದು ಅಮಮಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಅಮಮ'ವಾಗುತ್ತದೆ.
(೩೯) **ಹಾಹಾಂಗ**–ಒಂದು ಅಮಮವನ್ನು ೮೪ ರಿಂದ ಗುಣಿಸಿದರೆ ಒಂದು 'ಹಾಹಾಂಗ'ವಾಗುತ್ತದೆ.
(೪೦) **ಹಾಹಾ**–ಒಂದು ಹಾಹಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಹಾಹಾ'ವಾಗುತ್ತದೆ.
(೪೧) **ಹೂಹಾಂಗ**–ಒಂದು ಹಾಹಾವನ್ನು ೮೪ ರಿಂದ ಗುಣಿಸಿದರೆ ಒಂದು 'ಹೂಹಾಂಗ'ವಾಗುತ್ತದೆ.
(೪೨) **ಹೂಹೂ**–ಒಂದು ಹೂಹಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಹೂಹೂ'ಆಗುತ್ತದೆ.
(೪೩) **ಲತಾಂಗ**–ಒಂದು ಹೂಹೂವನ್ನು ೮೪ ರಿಂದ ಗುಣಿಸಿದರೆ ಒಂದು 'ಲತಾಂಗವಾಗುತ್ತದೆ'.
(೪೪) **ಲತಾ**–ಒಂದು ಲತಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಲತಾ'ವಾಗುತ್ತದೆ.
(೪೫) **ಮಹಾಲತಾಂಗ**–ಒಂದು ಲತಾವನ್ನು ೮೪ ರಿಂದ ಗುಣಿಸಿದರೆ ಒಂದು 'ಮಹಾಲತಾಂಗ'ವಾಗುತ್ತದೆ.
(೪೬) **ಮಹಾಲತಾ**–ಒಂದು ಮಹಾಲತಾಂಗವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಮಹಾಲತಾ'ವಾಗುತ್ತದೆ.
(೪೭) **ಶ್ರೀಕಲ್ಪ**–ಒಂದು ಮಹಾಲತಾವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಶ್ರೀಕಲ್ಪ'ವಾಗುತ್ತದೆ.
(೪೮) **ಹಸ್ತ ಪ್ರಹೇಲಿತ**–ಒಂದು ಶ್ರೀಕಲ್ಪವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಹಸ್ತ ಪ್ರಹೇಲಿತ'ವಾಗುತ್ತದೆ.
(೪೯) **ಅಚಲಾತ್ಮ**–ಒಂದು ಹಸ್ತಪ್ರಹೇಲಿತವನ್ನು ೮೪,೦೦,೦೦೦ ದಿಂದ ಗುಣಿಸಿದರೆ ಒಂದು 'ಅಚಲಾತ್ಮ'ವಾಗುತ್ತದೆ.

ಮೂರು (೩)–ರತ್ನತ್ರಯಗಳು

ರತ್ನತ್ರಯಗಳು: (ಪದ್ಯ/ವಚನ ಸಂ. ೧–೪, ೬–೨೪ (ವ))
ಸಮ್ಯಗ್ದರ್ಶನ, ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ಚಾರಿತ್ರ ಇವುಗಳ ಏಕತ್ವಕ್ಕೆ ಅಂದರೆ ಸಮೂಹಕ್ಕೆ ರತ್ನತ್ರಯ ಎನ್ನುವರು. (ತತ್ತ್ವಾರ್ಥ ಸೂತ್ರ ೧–೧, ೨) (ರತ್ನಕರಂಡಕ ಶ್ರಾವಕಾಚಾರ ಸೂತ್ರ ಸಂ. ೧–೪)

೧. ಸಮ್ಯಗ್ದರ್ಶನ–ಸಪ್ತ ತತ್ತ್ವಗಳಲ್ಲಿ ಶ್ರದ್ಧೆಯಿಡುವುದು 'ಸಮ್ಯಗ್ದರ್ಶನ' ಎನಿಸುವುದು. ನಿಜವಾದ ದೇವ, ಶಾಸ್ತ್ರ, ಗುರುಗಳಲ್ಲಿ, (೧) ಮೂರು ಪ್ರಕಾರದ ಮೂಢತೆಗಳಿಲ್ಲದಂತೆ, (೩) ಎಂಟು ಅಂಗಗಳಿಂದ ಕೂಡಿದ, ಮತ್ತು (೪) ಮದ ರಹಿತ ಶ್ರದ್ಧೆಯನ್ನು ಇಡುವುದಕ್ಕೆ [ವ್ಯವಹಾರ] 'ಸಮ್ಯಗ್ದರ್ಶನ' ವೆನ್ನುತ್ತಾರೆ.

೨. ಸಮ್ಯಕ್ ಜ್ಞಾನ–ಯಾವ ಜ್ಞಾನವು ತೀರ್ಥಂಕರ ಪ್ರಣೀತವಾದ ಪರ ಪದಾರ್ಥಗಳ ಸ್ವರೂಪವನ್ನು ಮತ್ತು ಆತ್ಮ ತತ್ತ್ವವನ್ನು ಅವುಗಳ ಯಥಾರ್ಥ ಸ್ವರೂಪ ಹೇಗಿದೆಯೋ ಹಾಗೆಯೇ, ಸಂಶಯ, ವಿಪರೀತತೆ ಮತ್ತು ನ್ಯೂನಾಧಿಕತೆಯಿಂದ ರಹಿತವಾಗಿ ತಿಳಿಯುತ್ತದೆಯೋ, ಅದನ್ನು [ವ್ಯವಹಾರ] 'ಸಮ್ಯಕ್ಜ್ಞಾನ' ಎನ್ನುತ್ತಾರೆ.

೩. ಸಮ್ಯಕ್ ಚಾರಿತ್ರ–ಪಂಚ ಪಾಪಗಳು (೧. ಹಿಂಸೆ, ೨. ಅಸತ್ಯ, ೩. ಕಳವು, ೪. ಮೈಥುನ ಸೇವನೆ, ೫. ಪರಿಗ್ರಹ) ಮೊದಲಾದ ಅಶುಭಕಾರ್ಯಗಳಿಂದ ನಿವೃತ್ತನಾಗಿ, ಧಾರ್ಮಿಕ ಶುಭಕಾರ್ಯಗಳಲ್ಲಿ ಪ್ರವೃತ್ತನಾಗುವುದು [ವ್ಯವಹಾರ] 'ಸಮ್ಯಕ್ ಚಾರಿತ್ರ' ಎನಿಸುತ್ತದೆ.

ಯಾವ ರತ್ನತ್ರಯವು ಅಭೇಧ ರೂಪದಲ್ಲಿ ಶುದ್ಧ ಆತ್ಮನ ಸ್ವರೂಪದಲ್ಲಿ ಸ್ಥಿರವಿರುತ್ತದೆಯೋ ಅದು ನಿಶ್ಚಯ ರತ್ನತ್ರಯವಾಗಿರುತ್ತದೆ.

ಮೂರು (೩)–ಲಿಂಗದ ಮೂರು ಭೇದಗಳು

ಲಿಂಗದ ಮೂರು ಭೇದಗಳು: (ಇದು **ಗೃಹ ವಿರತ ತ್ಯಾಗಿಗಳ** ಮೂರು ಭೇದಗಳಿಗೆ ಸಂಬಂಧಿಸಿದ ವಿಷಯ. ಇದು ಸಂಖ್ಯಾವಿಶಿಷ್ಟ ಪದ ಸಂಖ್ಯೆ **ಐದು (೫)–ಜೀವತತ್ತ್ವದ ಐದು ಸ್ವತತ್ತ್ವಗಳು (ಜೀವದ ಅಸಾಧಾರಣ ಭಾವಗಳು)** ಇದರಲ್ಲಿ **೪. ಔದಾಯಿಕ ಭಾವ (೯) ಮೂರು ಲಿಂಗಗಳು** ಅಂದರೆ **ವೇದಗಳು** ಈ ವಿಭಾಗದಲ್ಲಿ ವಿವರಿಸಿರುವ ವಿಷಯಕ್ಕಿಂತ ಬೇರೆಯಾದದ್ದು)

('ಕುಂದುಕುಂದ' ರ 'ಅಷ್ಟಪಾಹುಡ' ದ ೭ ನೆಯ ಅಧ್ಯಾಯ 'ಲಿಂಗಪಾಹುಡ' ದ ಗಾಹೆಗಳು. 'ಲಿಂಗ' ಎಂದರೆ 'ಚಿಹ್ನೆ' ಎಂದು ಅರ್ಥ)

ಜೈನಾಗಮದಲ್ಲಿ '**ಲಿಂಗ**'ವೆಂದರೆ ಮೋಕ್ಷಮಾರ್ಗದಲ್ಲಿರುವ '**ಗೃಹ ವಿರತ ತ್ಯಾಗಿಗಳು**'. ಕರ್ಮ ನಿರ್ಜರೆಗಾಗಿ ಮತ್ತು ಮೋಕ್ಷ ಸಿದ್ಧಿಗಾಗಿ ಆ ಯಾವ ಬಾಹ್ಯ ಮತ್ತು ಅಂತರಂಗದ ಆಚರಣೆಯನ್ನು ಆಚರಿಸುತ್ತಾರೋ ಆ ಆಚರಣೆಗೆ 'ಲಿಂಗ' ವೆಂದು ಹೇಳುತ್ತಾರೆ. (ಪದ್ಯ/ವಚನ ಸಂ. ೧–೫)

ಗೃಹತ್ಯಾಗಿಗಳ ವೇಷವುಳ್ಳ ಲಿಂಗಕ್ಕೆ ಜೈನಧರ್ಮದಲ್ಲಿ ಮೂರು ಭೇದಗಳನ್ನು ಹೇಳಿದ್ದಾರೆ:

೧. ಮುನಿ ಲಿಂಗ

೨. ಆರ್ಯಿಕಾ ಲಿಂಗ

೩. ಉತ್ಕೃಷ್ಟ ಶ್ರಾವಕ ಲಿಂಗ (ಕ್ಷುಲ್ಲಕ, ಐಲಕ)

ಬಾಹ್ಯ ಮತ್ತು ಅಂತರಂಗದ ಆಚರಣೆಯ ಅಪೇಕ್ಷೆ (ದೃಷ್ಟಿ) ಯಿಂದ ಲಿಂಗಕ್ಕೆ ಎರಡು ಭೇದಗಳಿರುತ್ತವೆ:

೧. ದ್ರವ್ಯಲಿಂಗ–ಗೃಹ ವಿರತ ತ್ಯಾಗಿಗಳು ಹತ್ತು ಬಾಹ್ಯಪರಿಗ್ರಹಗಳನ್ನು ತ್ಯಾಗ ಮಾಡುವುದರಿಂದ ಉಂಟಾದ ವ್ರತಾಚರಣೆಯು 'ದ್ರವ್ಯಲಿಂಗ'ವೆನಿಸುತ್ತದೆ.

೨. ಭಾವಲಿಂಗ–ಬಾಹ್ಯಪರಿಗ್ರಹ ತ್ಯಾಗದ ವ್ರತವನ್ನಾಶ್ರಯಿಸಿ ಅಂತರಂಗ ಕಷಾಯದ ಅಭಾವದಿಂದ ಉಂಟಾದ ಗುಣಸ್ಥಾನ ಜನಿತ ಅಂತರಂಗದ ಆತ್ಮ ವಿಶುದ್ಧಿಯ ಆಚರಣೆಯನ್ನು 'ಭಾವಲಿಂಗ'ವೆಂದು ಹೇಳುತ್ತಾರೆ.

ಹೀಗೆ ದ್ರವ್ಯಲಿಂಗ ಮತ್ತು ಭಾವಲಿಂಗವನ್ನು ಧರಿಸುವ ಮುನಿಗಳನ್ನು ಈ ಕೆಳಗಿನಂತೆ ಹೆಸರಿಸುತ್ತಾರೆ:

೧ ದ್ರವ್ಯಲಿಂಗಿ ಮುನಿ (ದ್ರವ್ಯರ್ಷಿ) (ಪದ್ಯ/ವಚನ ಸಂ. ೯–೮೨)

೨. ಭಾವಲಿಂಗಿ ಮುನಿ

೧. ದ್ರವ್ಯಲಿಂಗಿ ಮುನಿಯ ಲಕ್ಷಣಗಳು: (ಪದ್ಯ/ವಚನ ಸಂ. ೯–೮೨)

(೧) ಇವರು ಪರಮಾಣುನಿನಷ್ಟೂ ಸಹ ಬಾಹ್ಯಪರಿಗ್ರವನ್ನು ಹೊಂದಿರುವುದಿಲ್ಲ.

(೨) ಸಂಸಾರ ಸುಖವನ್ನು ಕೊಡುವ ಸಾಧನಗಳೆನಿಸಿದ ಮಂತ್ರ, ತಂತ್ರಾದಿಗಳನ್ನು ಮಾಡಿಕೊಡುವುದಿಲ್ಲ.

(೩) ವೀತರಾಗಿ ಅವಸ್ಥೆಯಿಂದ ಬೇರೆಯಾಗಿ ಸರಾಗಿ (ರಾಗವುಳ್ಳ) ದೇವಿ–ದೇವತೆಗಳ ಸಂಪೋಷಣೆಯನ್ನು ಮಾಡುವುದಿಲ್ಲ.

(೪) ಬಾಹ್ಯದ ಇಪ್ಪತ್ತೆಂಟು ಮೂಲ ಗುಣಗಳನ್ನು ಪಾಲಿಸುತ್ತಾರೆ; ಆದರೆ_

(೫) ಅಂತರಂಗದಲ್ಲಿ ತಮ್ಮ ಖ್ಯಾತಿ, ಲಾಭ, ಪೂಜೆ ಮೊದಲಾದ ಭಾವಗಳನ್ನು ಇಟ್ಟುಕೊಂಡಿದ್ದು, ಆತ್ಮಜ್ಞಾನ ರಹಿತರಾಗಿರುತ್ತಾರೆ.

(೬) ಭಾವಿ ಸ್ವರ್ಗ ಸಂಪತ್ತಿಯೇ ಮೊದಲಾದ 'ಇಂದ್ರಿಯ ವಿಷಯಗಳನ್ನು' ಇಚ್ಛಿಸುವವರಾಗಿದ್ದು, ಕೇವಲ ಮುನಿವೇಷಧಾರಿಗಳಾಗಿರುತ್ತಾರೆ.

(೭) ಹತ್ತು ಬಾಹ್ಯಪರಿಗ್ರಹಗಳಿಂದ ಮುಕ್ತರಾಗಿರುವ ಕಾರಣ ಇವರು 'ಬಾಹ್ಯ ನಿರ್ಗ್ರಂಥ'ರೆಂದು ಎನಿಸಿಕೊಳ್ಳುತ್ತಾರೆ. ಆದುದರಿಂದ_

(೧) 'ದ್ರವ್ಯಲಿಂಗಿ ಮುನಿ'ಗಳು ಬಾಹ್ಯದಿಂದ ನಗ್ನರಾಗಿದ್ದರೂ ಬಾಹ್ಯಪರಿಗ್ರಹವೇ ಮೊದಲಾದವುಗಳಲ್ಲಿ ಇಚ್ಛೆ ಹೊಂದಿರುವುದರಿಂದ 'ಭಾವಲಿಂಗ' ದಿಂದ ರಹಿತವಾಗಿರುತ್ತಾರೆ.

(೨) 'ದ್ರವ್ಯಲಿಂಗಿ ಮುನಿ'ಗಳು 'ಅಸಂಯಮಿ'ಗಳಾಗಿರುತ್ತಾದ್ದರಿಂದ ಅವರು ವಂದನೀಯರೂ, ಪೂಜನೀಯರೂ ಆಗಿರುವುದಿಲ್ಲ.

(೩) ಕೇವಲ ದ್ರವ್ಯಲಿಂಗವನ್ನು ಹೊಂದಿದ ದ್ರವ್ಯಲಿಂಗಿ ಮುನಿಗಳಿಗೆ ಶುದ್ಧೋಪಯೋಗ ಹಾಗು ಕೇವಲಜ್ಞಾನ ಇವೆರಡೂ ಪ್ರಾಪ್ತವಾಗುವುದಿಲ್ಲ. ಏಕೆಂದರೆ ಇವರು ಪರಮಾರ್ಥದಿಂದ ದೂರವಿರುತ್ತಾರೆ.

೨. ಭಾವಲಿಂಗಿ ಮುನಿಯ ಲಕ್ಷಣಗಳು:

(೧) ಇವರು ಪರಮಾಣುನಿನಷ್ಟೂ ಸಹ ಬಾಹ್ಯಪರಿಗ್ರವನ್ನು ಹೊಂದಿರುವುದಿಲ್ಲ.

(೨) ಸಂಸಾರ ಸುಖವನ್ನು ಕೊಡುವ ಸಾಧನಗಳೆನಿಸಿದ ಮಂತ್ರ, ತಂತ್ರಾದಿಗಳನ್ನು ಮಾಡಿಕೊಡುವುದಿಲ್ಲ.

(೩) ವೀತರಾಗಿ ಅವಸ್ಥೆಯಿಂದ ಬೇರೆಯಾಗಿ ಸರಾಗಿ (ರಾಗವುಳ್ಳ) ದೇವಿ–ದೇವತೆಗಳ ಸಂಪೋಷಣೆಯನ್ನು ಮಾಡುವುದಿಲ್ಲ.

(೪) ಬಾಹ್ಯದ ಇಪ್ಪತ್ತೆಂಟು ಮೂಲ ಗುಣಗಳನ್ನು ಪಾಲಿಸುತ್ತಾರೆ; ಮತ್ತು–

(೫) ಅಂತರಂಗದಲ್ಲಿ ಖ್ಯಾತಿ, ಲಾಭ, ಪೂಜಾದಿ ಭಾವಗಳಿಂದ ರಹಿತರಾಗಿರುತ್ತಾರೆ ಹಾಗೂ ಆತ್ಮಜ್ಞಾನವನ್ನು ಹೊಂದಿದವರಾಗಿರುತ್ತಾರೆ.

(೬) ಭಾವಿ ಸ್ವರ್ಗದ ಸುಖಸಂಪತ್ತಿನ ಬಗ್ಗೆ ಆಕಾಂಕ್ಷಾ ರಹಿತರೂ, ಇಂದ್ರಿಯ ಸುಖದಲ್ಲಿ ಅನಾಸಕ್ತರೂ, ಇಂದ್ರಿಯ ವಿಷಯಗಳಾದ ಪರಿಗ್ರಹಗಳಲ್ಲಿ ಇಚ್ಛಾರಹಿತರೂ ಆಗಿರುತ್ತಾರೆ.

(೭) ಈ ಮೇಲಿನ ಆರು ಲಕ್ಷಣಗಳನ್ನು ಹೊಂದಿರುವ ಮುನಿಗಳಿಗೆ 'ಭಾವಲಿಂಗಿ ಮುನಿ'ಗಳೆಂದು ಹೇಳುತ್ತಾರೆ. ಆದುದರಿಂದ–

(೧) 'ಭಾವಲಿಂಗಿ ಮುನಿ' ಗಳು ನಿಯಮದಿಂದ 'ದ್ರವ್ಯಲಿಂಗ' ಹಾಗೂ 'ಭಾವಲಿಂಗ' ಈ ಎರಡೂ ಲಿಂಗಗಳನ್ನು ಹೊಂದಿದವರಾಗಿರುತ್ತಾರೆ.

(೨) 'ಭಾವಲಿಂಗಿ ಮುನಿ'ಗಳು ನಿಯಮದಿಂದ 'ಸಂಯಮಿ'ಗಳಾಗಿರುತ್ತಾರೆ. ಆದುದರಿಂದ ಇವರು ವಂದನೀಯರೂ ಮತ್ತು ಪೂಜನೀಯರೂ ಆಗಿರುತ್ತಾರೆ.

(೩) 'ಉತ್ಕೃಷ್ಟ ಶುದ್ಧೋಪಯೋಗ'ವನ್ನು ಹೊಂದಿದ 'ಭಾವಲಿಂಗಿ ಮುನಿ'ಗಳು 'ಘಾತಿಕರ್ಮ'ಗಳನ್ನು ನಾಶಪಡಿಸಿ ೧೩ ನೆಯ ಗುಣಸ್ಥಾನವನ್ನು ಹೊಂದಿ 'ಅರಿಹಂತ' ಅವಸ್ಥೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ನಾಲ್ಕು (೪)–ಅನುಯೋಗಗಳು (ಶ್ರುತಸ್ಕಂಧ)

ಶ್ರುತಸ್ಕಂಧ–ನಾಲ್ಕು ಅನುಯೋಗಗಳು: (ಪದ್ಯ/ವಚನ ಸಂ. ೧–೧೦, ೧–೩೯)

(ಜೈನಾಗಮವು ದ್ವಾದಶಾಂಗ [೧೨ ಅಂಗ] ಮತ್ತು ಚತುರ್ದಶ ಪೂರ್ವ [೧೪ ಪೂರ್ವಗಳು] ಗಳಿಂದ ಕೂಡಿದ್ದು ಇದನ್ನು ಶ್ರುತಸ್ಕಂಧವೆನ್ನುವರು. ನಾಲ್ಕು ಬಗೆಯ ವಿಷಯಗಳನ್ನು ಅನುಸರಿಸಿ ಸಂಗ್ರಹಿಸಿದ ಶ್ರುತಕ್ಕೆ ಅನುಯೋಗವೆಂದು ಹೆಸರು. ಎಂದರೆ ಸೂತ್ರದಲ್ಲಿ ಹೇಳಿದ ಸಿದ್ಧಾಂತ ಹಾಗೂ ನಿಯಮಗಳನ್ನು ಅನುಕೂಲ, ದೃಷ್ಟಾಂತ ಮತ್ತು ಉದಾಹಣೆಗಳೊಂದಿಗೆ ವರ್ಣಿಸುವುದೇ ಅನುಯೋಗವೆನಿಸುವುದು. ಸೂತ್ರಗಳ ಮುಖಾಂತರ ಪ್ರತಿಪಾದಿಸಿದ ಅರ್ಥಕ್ಕೆ–ಅನುಕೂಲವಾಗಿರುವ ಸಂಬಂಧಕ್ಕೆ ಅನುಯೋಗವೆಂದು ಹೆಸರು)

(ರತ್ನಕರಂಡಕ ಶ್ರಾವಕಾಚಾರ, ಜ್ಞಾನಾಧಿಕಾರ, ೨–೪೩, ೪೪, ೪೫, ೪೬)

೧. ಪ್ರಥಮಾನುಯೋಗ–ಇದು ಪುರುಷಾರ್ಥಗಳು, ತ್ರಿಷಷ್ಠಿಶಲಾಕಾಪುರುಷರ ಪುರಾಣವನ್ನು ಹೇಳುತ್ತದೆ. ಇದನ್ನು 'ಧರ್ಮಕಥಾನುಯೋಗ' ಎಂದೂ ಕರೆಯುತ್ತಾರೆ. ಇದು ರಾಗದಿಂದ ವೀತರಾಗದ ಕಡೆಗೆ ಕೊಂಡೊಯ್ಯುವ ವಸ್ತುಗಳ ಕಥೆಗಳನ್ನೊಳಗೊಂಡಿರುತ್ತದೆ. ಇದು (೧) ಪುರಾಣಗಳನ್ನು ಮತ್ತು (೨) ಚರಿತ್ರ ಗ್ರಂಥಗಳನ್ನು ಒಳಗೊಂಡಿರುತ್ತದೆ.

ಉದಾಹರಣೆ: ಮಹಾಪುರಾಣ, ಹರಿವಂಶಪುರಾಣ, ಆದಿಪುರಾಣ, ಪದ್ಮಪುರಾಣ, ಶಾಂತಿಪುರಾಣ, ಯಶೋಧರ ಚರಿತ್ರೆ, ಅಜಿತನಾಥಪುರಾಣ, ಇತ್ಯಾದಿ.

೨. ಕರಣಾನುಯೋಗ–ಕರಣ ಎಂದರೆ ಭಾವ, ಪರಿಣಾಮ, ಗಣಿತ ಎಂಬ ಅರ್ಥಗಳು ಇವೆ. ಇದರಲ್ಲಿ ಜೀವಿಗಳಲ್ಲಿ ಆಗುವ ಪರಿಣಾಮಗಳ ಬಗ್ಗೆ ವಿವರಿಸುವ ವಿಷಯಗಳು, ಮತ್ತು ಲೋಕ–ಅಲೋಕಗಳ ವಿಭಾಗ, ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಕಾಲಗಳ ಭೇದ ಮೊದಲಾದ ವಿಚಾರಗಳು ಬರುತ್ತವೆ. ಕರಣಾನುಯೋಗದಲ್ಲಿ (೧) ಲೋಕಾಲೋಕ ವಿಭಜನೆ, (೨) ಯುಗಪರಿವರ್ತನೆ, (೩) ಚತುರ್ಗತಿಗಳ ವಿಭಾಗ–ಎಂದು ಮೂರು ಭೇದಗಳಿರುತ್ತವೆ. ಇದರಲ್ಲಿ ಗಣಿತಕ್ಕೆ ಸಂಬಂಧಿಸಿದ ವಿಚಾರಗಳು ಹೆಚ್ಚು ಬರುವುದರಿಂದ ಇದನ್ನು 'ಗಣಿತಾನುಯೋಗ' ಎಂದೂ ಕರೆಯುತ್ತಾರೆ.

ಉದಾ.: ಷಟ್ಖಂಡಾಗಮ, ಧವಳ ಗ್ರಂಥಗಳು, ಗೊಮ್ಮಟಸಾರ, ಲಬ್ಧಿಸಾರ, ಕ್ಷಪಣಸಾರ, ತ್ರಿಲೋಕಸಾರ, ತಿಲೋಯ ಪಣ್ಣತ್ತಿ, ಜಂಬೂದ್ವೀಪ ಪಣ್ಣತ್ತಿ, ಇತ್ಯಾದಿ.

೩. ಚರಣಾನುಯೋಗ–ಮುನಿಗಳ ಮತ್ತು ಶ್ರಾವಕರ ಪರಿಶುದ್ಧವಾದ ಆಚರಣೆಯ ವಿಷಯ ಬರುತ್ತದೆ.
ಉದಾ: ರತ್ನಕರಂಡಕ ಶ್ರಾವಕಚಾರ, ಅಮಿತಗತಿ ಶ್ರಾವಕಾಚಾರ, ಜ್ಞಾನಾನಂದ ಶ್ರಾವಕಾಚಾರ, ಸಾಗಾರಧರ್ಮಾಮೃತ, ಪುರುಷಾರ್ಥಸಿದ್ಧ್ಯುಪಾಯ, ಮೂಲಾಚಾರ, ಸಾವಯಧಮ್ಮದೋಹ, ಮತ್ತು ಎಲ್ಲಾ ಶ್ರಾವಕಾಚಾರ ಮತ್ತು ಮುನಿಗಳ ಆಚಾರ ಗ್ರಂಥಗಳು.

೪. ದ್ರವ್ಯಾನುಯೋಗ–ಇದರಲ್ಲಿ ಷಡ್ ದ್ರವ್ಯಗಳ ವಿಚಾರ, ಸಪ್ತ ತತ್ತ್ವಗಳು, ನವಪದಾರ್ಥಗಳು, ಜೀವ ಅಜೀವಾದಿ ಭೇದ ವಿಜ್ಞಾನ ಇತ್ಯಾದಿ ವಿಚಾರಗಳು ಬರುತ್ತವೆ.
ಉದಾ.: ತತ್ತ್ವಾರ್ಥಸೂತ್ರ, ಸಮಯಸಾರ, ಪರಮಾತ್ಮ ಪ್ರಕಾಶ, ಯೋಗಸಾರ, ನಿಯಮಸಾರ, ಅಷ್ಟಪಾಹುಡ, ಇಷ್ಟೋಪದೇಶ, ಸಮಾಧಿತಂತ್ರ, ಇತ್ಯಾದಿ.

ದ್ರವ್ಯಾನುಯೋಗದ ವಿಷಯವನ್ನು ಸ್ಪಷ್ಟವಾಗಿ ತಿಳಿಯಲು ಈ ಕೆಳಗಿನಂತೆ ಉಪವಿಭಾಗಗಳಾಗಿ ವಿಂಗಡಿಸುತ್ತಾರೆ:

೧) ಆಗಮ–ಇದನ್ನು ಮತ್ತೆ ಎರಡು ಉಪವಿಭಾಗಗಳನ್ನಾಗಿ ವಿಂಗಡಿಸುತ್ತಾರೆ:
- **(೧) ಸಿದ್ಧಾಂತ**–ಇದರಲ್ಲಿ ಷಟ್‌ಖಂಡಾಗಮ, ಕಷಾಯ ಪ್ರಾಭೃತ, ಇತ್ಯಾದಿ.
- **(೨) ನ್ಯಾಯ**–ಅಷ್ಟಸಹಸ್ರೀ, ಪ್ರಮೇಯ ಕಮಲ ಮಾರ್ತಂಡ, ಇತ್ಯಾದಿ.

೨) ಅಧ್ಯಾತ್ಮ–ಇದನ್ನು ಮತ್ತೆ ಎರಡು ಉಪವಿಭಾಗಗಳನ್ನಾಗಿ ವಿಂಗಡಿಸುತ್ತಾರೆ:
- **(೧) ಭಾವನಾ**–ಸಮಯಸಾರ, ಪ್ರವಚನಸಾರ, ಇತ್ಯಾದಿ.
- **(೨) ಧ್ಯಾನ**–ಜ್ಞಾನಾರ್ಣವ, ತತ್ತ್ವಾನುಶಾಸನ, ಇತ್ಯಾದಿ.

ವಿ.ಸೂ.: ''ನಾಲ್ಕು ಅನುಯೋಗಗಳ ವಿಷಯದ ಸಂಬಂಧದಲ್ಲಿ ಅನೇಕ ಪ್ರಕಾರದ ಭ್ರಾಂತ ಧಾರಣೆಗಳು ಉಂಟಾಗಿವೆ. ಅದರಲ್ಲಿಯೂ ಸಹ ವಿಶೇಷವಾಗಿ 'ಕರಣಾನುಯೋಗ' ಮತ್ತು 'ದ್ರವ್ಯಾನುಯೋಗ'ದ ವಿಷಯವಾಗಿ ಪ್ರಾಯಶಃ ಎಲ್ಲಾ ವಿದ್ವಾಂಸರು 'ಕರ್ಮಸಿದ್ಧಾಂತ'ವನ್ನು ಕರಣಾನುಯೋಗದ ವಿಷಯವನ್ನಾಗಿ ತಿಳಿಯುತ್ತಾರೆ, ಆದರೆ ಅದು ದ್ರವ್ಯಾನುಯೋಗದ ಪ್ರತಿಪಾದ್ಯವಾಗಿದೆ.'' ಎಂದು ಮುನಿಶ್ರೀ ಪ್ರಮಾಣಸಾಗರರು ಅಭಿಪ್ರಾಯ ಪಡುತ್ತಾರೆ.

ನಾಲ್ಕು (೪)–ಕಷಾಯಗಳು

ಕಷಾಯಗಳು ಮೋಹನೀಯ ಕರ್ಮದ ೨ ನೆಯ ಭೇದವಾದ **ಚಾರಿತ್ರಮೋಹನೀಯ ಕರ್ಮ**ದ ಉಪಭೇದಗಳು.
ಕಷಾಯಗಳು ಮತ್ತು ಅದರ ೪ ಹಂತಗಳು/ರೂಪಗಳು: (ಪದ್ಯ/ವಚನ ಸಂ. ೧–೪, ೧೦–೧೪ (ವ))
(ತತ್ತ್ವಾರ್ಥ ಸೂತ್ರ: ಸೂತ್ರ ಸಂ. ೨–೬, ೬–೪, ೮–೯)

'ಕರ್ಮಕ್ಷೇತ್ರಂ ಕಷಂತೀತಿ ಕಷಾಯಾಃ' ಎಂಬೀ ನ್ಯಾಯದಿಂ ಕರ್ಮಫಲಮಂ ಬೆಳಸಿಕೊಡುವುದಂ ಕಷಾಯಮೆಂಬುದು. (ಶ್ರೀ ಮಾಘಣಂದಿಕೃತ ಪದಾರ್ಥಸಾರ, ಹನ್ನೊಂದನೆಯ ಪರಿಚ್ಛೇದ, ಕಷಾಯ ಮಾರ್ಗಣೆ).

ಅಂದರೆ ಯಾವುದು ಆತ್ಮನನ್ನು ದುಃಖಕ್ಕೀಡುಮಾಡುವುದೋ, ಸಂಕ್ಲೇಶ ಪರಿಣಾಮಗಳಿಗೆ ಒಳಪಡಿಸುವುದೋ ಅದನ್ನು ಕಷಾಯವೆಂದು ಹೇಳುತ್ತಾರೆ. ಅಥವಾ ಯಾವುದು ಆತ್ಮನ ಚಾರಿತ್ರಗುಣವನ್ನು ಅಂದರೆ ನೈಜ ಪರಿಣತಿಯನ್ನು ಘಾತಿಸುವುದೋ ಅದನ್ನು ಕಷಾಯವೆಂದು ಹೇಳುತ್ತಾರೆ. ಕಷಾಯಗಳಲ್ಲಿ ಸಾಮಾನ್ಯದಿಂದ ನಾಲ್ಕು ಭೇದಗಳಿವೆ:

೧. ಕ್ರೋಧ ಕಷಾಯ–ಕೋಪಗೊಳ್ಳುವುದಕ್ಕೆ ಕ್ರೋಧ ಕಷಾಯವೆನ್ನುತ್ತಾರೆ. ಇದರ ಉದಯದಿಂದ ಕ್ಷಮಾ ಧರ್ಮವು ಘಾತಿಸಲ್ಪಡುತ್ತದೆ. ಅಂದರೆ ಆತ್ಮನಲ್ಲಿ ಕ್ಷಮಾಗುಣವು ಪ್ರಕಟವಾಗುವುದಿಲ್ಲ.

೨. ಮಾನ ಕಷಾಯ–ಅಹಂಕಾರ ಪಡುವುದಕ್ಕೆ ಮಾನ ಕಷಾಯವೆನ್ನುತ್ತಾರೆ. ಇದರ ಉದಯದಿಂದ ಮಾರ್ದವ ಧರ್ಮವು ಘಾತಿಸಲ್ಪಡುತ್ತದೆ. ಅಂದರೆ ಆತ್ಮನಲ್ಲಿ ಮಾರ್ದವ ಗುಣವು ಪ್ರಕಟವಾಗುವುದಿಲ್ಲ.

೩. ಮಾಯಾ ಕಷಾಯ–ಕುಟಿಲತೆಗೆ (ವಕ್ರತೆಗೆ) ಮಾಯಾ ಕಷಾಯವೆನ್ನುತ್ತಾರೆ. ಇದರ ಉದಯದಿಂದ ಆರ್ಜವ ಧರ್ಮವು ಘಾತಿಸಲ್ಪಡುತ್ತದೆ. ಅಂದರೆ ಆತ್ಮನಲ್ಲಿ ಆರ್ಜವ ಗುಣವು ಪ್ರಕಟವಾಗುವುದಿಲ್ಲ.

೪. ಲೋಭ ಕಷಾಯ–ಆಸೆಗೆ ಲೋಭ ಕಷಾಯವೆನ್ನುತ್ತಾರೆ. ಇದರ ಉದಯದಿಂದ ಶೌಚ ಧರ್ಮವು ಘಾತಿಸಲ್ಪಡುತ್ತದೆ. ಅಂದರೆ ಆತ್ಮನಲ್ಲಿ ಶೌಚ ಗುಣವು ಪ್ರಕಟವಾಗುವುದಿಲ್ಲ.

ನೋಕಷಾಯಗಳು (ಅಕಷಾಯಗಳು)–'ಈಶತ್ ಕಷಾಯಃ ಅಕಷಾಯಃ' ಅಂದರೆ ಅಲ್ಪ ಕಷಾಯಕ್ಕೆ ಅಕಷಾಯ ಅಥವಾ ನೋಕಷಾಯವೆನ್ನುತ್ತಾರೆ. ಇವು ಚತುಃಕಷಾಯದಲ್ಲಿ ಸಹಾಯಕವಾಗಿ ರುತ್ತವೆ. ಇವು ಉಪಕಷಾಯವೆನಿಸುತ್ತವೆ. (ಪದ್ಯ/ವಚನ ಸಂ. ೧೦–೧೪ (ವ))

(೧) ಹಾಸ್ಯ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಅಸಂಯಮ ಜನಿತ ನಗುವಿನ ಭಾವ ಉಂಟಾಗುವುದೋ ಅದಕ್ಕೆ ಹಾಸ್ಯ ಅಕಾಷಯವೆಂದು ಹೇಳುತ್ತಾರೆ.

(೨) ರತಿ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಪರದ್ರವ್ಯಗಳಲ್ಲಿ ಅಸಂಯಮ ಜನಿತ ರಾಗ/ರುಚಿ/ಪ್ರೀತಿ ಭಾವ ಉಂಟಾಗುವುದೋ ಅದಕ್ಕೆ ರತಿ ಅಕಾಷಯವೆಂದು ಹೇಳುತ್ತಾರೆ.

(೩) ಅರತಿ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಪರದ್ರವ್ಯಗಳಲ್ಲಿ ಅಸಂಯಮ ಜನಿತ ದ್ವೇಷ ಭಾವ, ಅಪ್ರೀತಿ ಅಥವಾ ಅರುಚಿ ಭಾವ ಉಂಟಾಗುವುದೋ ಅದಕ್ಕೆ ಅರತಿ ಅಕಾಷಯವೆಂದು ಹೇಳುತ್ತಾರೆ.

(೪) ಶೋಕ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಇಷ್ಟ ವಿಯೋಗದಿಂದ ಅಥವಾ ಅನಿಷ್ಟ ಸಂಯೋಗದಿಂದ ಅಸಂಯಮ ಜನಿತ ಅಳುವಿನ (ನೋವಿನ) ಭಾವ ಉಂಟಾಗುವುದೋ ಅದಕ್ಕೆ ಶೋಕ ಅಕಾಷಯವೆಂದು ಹೇಳುತ್ತಾರೆ.

(೫) ಭಯ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಅಸಂಯಮ ಜನಿತ ಸಪ್ತ ಭಯ ಅಥವಾ ಭೀತಿ ಭಾವ ಉಂಟಾಗುವುದೋ ಅದನ್ನು ಭಯ ಅಕಾಷಯವೆಂದು ಹೇಳುತ್ತಾರೆ.

(೬) ಜುಗುಪ್ಸೆ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಜೀವಿಗೆ ಚೇತನ ಹಾಗೂ ಅಚೇತನವೆನಿಸಿದ ಪರಪದಾರ್ಥ/ದ್ರವ್ಯಗಳಲ್ಲಿ ಅಸಂಯಮ ಜನಿತ ಹೇಸಿಕೆಯ ಭಾವ ಉಂಟಾಗುವುದೋ ಅದಕ್ಕೆ ಜುಗುಪ್ಸಾ ಅಕಾಷಯವೆಂದು ಹೇಳುತ್ತಾರೆ.

(೭) ಸ್ತ್ರೀವೇದ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಸ್ತ್ರೀಗೆ ಪುರುಷನನ್ನು ಕುರಿತು ವಿಷಯೇಚ್ಛೆಯು ಉಂಟಾಗುವುದೋ ಅದಕ್ಕೆ ಸ್ತ್ರೀ ವೇದ ಅಕಾಷಯವೆಂದು ಹೇಳುತ್ತಾರೆ.

(೮) ಪುರುಷವೇದ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ಪುರುಷನಿಗೆ ಸ್ತ್ರೀಯನ್ನು ಕುರಿತು ವಿಷಯೇಚ್ಛೆಯು ಉಂಟಾಗುವುದೋ ಅದಕ್ಕೆ ಪುರುಷವೇದ ಅಕಾಷಯವೆಂದು ಹೇಳುತ್ತಾರೆ.

(೯) ನಪುಂಸಕವೇದ–ಯಾವ ನೋಕಷಾಯ ಕರ್ಮಪ್ರಕೃತಿಯ ಉದಯದಿಂದ ನಪುಂಸಕ ಜೀವಿಗೆ ಸ್ತ್ರೀ ಮತ್ತು ಪುರುಷ ಈ ಎರಡರಲ್ಲೂ ವಿಷಯೇಚ್ಛೆಯು ಉಂಟಾಗುವುದೋ ಅದಕ್ಕೆ ನಂಪುಸಕ ವೇದ ಅಕಾಷಯವೆಂದು ಹೇಳುತ್ತಾರೆ.

ಕಷಾಯಗಳಲ್ಲಿ ವಿಶೇಷದಿಂದ ಹದಿನಾರು ಭೇದಗಳಿವೆ (೪ ರೂಪಗಳು x ೪ ಭೇದಗಳು):
(ಪದ್ಯ/ವಚನ ಸಂ. ೧೦–೧೪ (ವ))

೧. ಅನಂತಾನುಬಂಧಿ ಕ್ರೋಧ, ಮಾನ, ಮಾಯ, ಲೋಭ (೪)

ಹೋಲಿಕೆ **'ಶಿಲಾರೇಖೆಯಂತೆ'**–ಯಾವ ಕಷಾಯದ ಉದಯದಿಂದ ಆತ್ಮನ ರತ್ನತ್ರಯ ಗುಣಗಳು ನಾಶವನ್ನು ಹೊಂದಿ ಅನಂತ ಸಂಸಾರಕ್ಕೆ ಕಾರಣವಾಗುತ್ತದೋ, ಅದನ್ನು **ಅನಂತಾನುಬಂಧಿ** ಎನ್ನುತ್ತಾರೆ.

೨. ಅಪ್ರತ್ಯಾಖ್ಯಾನ ಕ್ರೋಧ, ಮಾನ, ಮಾಯ, ಲೋಭ (೪)

ಹೋಲಿಕೆ **'ಭೂರೇಖೆಯಂತೆ'** ನೇಗಿಲ ರೇಖೆ–ಯಾವ ಕಷಾಯದ ಉದಯದಿಂದ ಆತ್ಮನ ಏಕದೇಶವ್ರತದ ಚಾರಿತ್ರ ಗುಣ ನಾಶ ಹೊಂದಿ, ತ್ಯಾಗ ಪ್ರತಿಜ್ಞೆಯನ್ನು ಮಾಡಲು ತಡೆ ಮಾಡುವುದೋ, ಅಂತಹ ಕಷಾಯಕ್ಕೆ **ಅಪ್ರತ್ಯಾಖ್ಯಾನ** ಎನ್ನುವರು.

೩. ಪ್ರತ್ಯಾಖ್ಯಾನ ಕ್ರೋಧ, ಮಾನ, ಮಾಯ, ಲೋಭ (೪)

ಹೋಲಿಕೆ **'ಧೂಳೀರೇಖೆಯಂತೆ'** ಮರಳಿನ ಮೇಲಿನ ರೇಖೆ–ಯಾವ ಕಷಾಯದ ಉದಯದಿಂದ ಏಕದೇಶವ್ರತ ಪ್ರತಿಜ್ಞೆ ಮಾಡಲು ಅವಕಾಶ ವಿದ್ದು, ಆತ್ಮನ ಸಕಲ ಚಾರಿತ್ರ ಗುಣ ಪ್ರಕಟವಾಗದಿರುವುದಕ್ಕೆ **ಪ್ರತ್ಯಾಖ್ಯಾನ** ಕಷಾಯ ಎನ್ನುತ್ತಾರೆ.

೪. ಸಂಜ್ವಲನ ಕ್ರೋಧ, ಮಾನ, ಮಾಯ, ಲೋಭ (೪)
ಹೋಲಿಕೆ '**ಜಲರೇಖೆಯಂತೆ**' ನೀರಿನ ಮೇಲೆ ಮೂಡಿಸಿದ ರೇಖೆ–ಯಾವ ಕಷಾಯದ ಉದಯದಿಂದ ಸಕಲ ಚಾರಿತ್ರಕ್ಕೆ ಅವಕಾಶವಿದ್ದು, ಯಥಾಖ್ಯಾತ ಚಾರಿತ್ರ ಗುಣವನ್ನು ನಾಶಗೊಳಿಸುತ್ತದೆಯೋ ಅದನ್ನು **ಸಂಜ್ವಲನ** ಕಷಾಯ ಎನ್ನುವರು.

ಕಷಾಯಗಳ ಕಾಲಮಿತಿ:

೧. ಅನಂತಾನುಬಂಧಿ ಕಷಾಯದ ಕಾಲಮಿತಿ–ಅನಂತ ಕಾಲಮಿತಿ.

೨. ಅಪ್ರತ್ಯಾಖ್ಯಾನ ಕಷಾಯದ ಕಾಲಮಿತಿ–ಕಷಾಯ ಭಾವವು ೬ ತಿಂಗಳು.

೩. ಪ್ರತ್ಯಾಖ್ಯಾನ ಕಷಾಯದ ಕಾಲಮಿತಿ–೧೫ ದಿವಸಗಳು.

೪. ಸಂಜ್ವಲನ ಕಷಾಯದ ಕಾಲಮಿತಿ–ಇದರ ಕಾಲಾವಧಿ ಕೇವಲ ಜಲರೇಖೆಯಂತೆ ಮೂಡಿ ಮಾಯವಾಗುವಂತೆ.

ನಾಲ್ಕು (೪)–ದೇವ ನಿಕಾಯ (ದೇವತೆಗಳ ಭೇದಗಳು)

ದೇವ ನಿಕಾಯ: (ತತ್ತ್ವಾರ್ಥಸೂತ್ರ, ೪–೧; ಸರ್ವಾರ್ಥಸಿದ್ಧಿ ಟೀಕಾ ಸಂ. ೪೪೩)
(ಪದ್ಯ/ವಚನ ಸಂ. ೧–೬೩ (ವ), ೭–೪೨ (ವ))
ದೇವತೆಗಳಲ್ಲಿ ಮುಖ್ಯವಾಗಿ ನಾಲ್ಕು ನಿಕಾಯಗಳಿವೆ:
೧. ಭವನವಾಸಿ ದೇವತೆಗಳು (ಇವರು ೧೦ ಪ್ರಕಾರವಾಗಿದ್ದಾರೆ) (ತತ್ತ್ವಾರ್ಥಸೂತ್ರ, ೪–೧೦)
೨. ವ್ಯಂತರ ದೇವತೆಗಳು (ಇವರು ೮ ಬಗೆಯಾಗಿದ್ದಾರೆ) (ತತ್ತ್ವಾರ್ಥಸೂತ್ರ, ೪–೧೧)
೩. ಜ್ಯೋತಿಷ್ಕ ದೇವತೆಗಳು (ಇವರು ೫ ಬಗೆಯಾಗಿದ್ದಾರೆ) (ತತ್ತ್ವಾರ್ಥಸೂತ್ರ, ೪–೧೨)
೪. ವೈಮಾನಿಕ ದೇವತೆಗಳು (ಇವರು ೨ ಬಗೆಯಾಗಿದ್ದಾರೆ) (ತತ್ತ್ವಾರ್ಥಸೂತ್ರ, ೪–೧೭)
ಮೇಲಿನ ನಾಲ್ಕೂ ಬಗೆಯ ದೇವತೆಗಳ ಹತ್ತು ಪ್ರಕಾರದ ಸಾಮಾನ್ಯ ಭೇದಗಳು ಕೆಳಗಿನಂತಿವೆ:
(ತತ್ತ್ವಾರ್ಥಸೂತ್ರ, ೪–೩, ೪–೪, ೪–೫; ಸರ್ವಾರ್ಥಸಿದ್ಧಿ ಟೀಕಾ ಸಂ. ೪೪೭, ೪೪೯)
(ಪದ್ಯ/ವಚನ ಸಂ. ೬–೧೩ (ವ), ೭–೪೨ (ವ))

(೧) ಇಂದ್ರ–ಇತರೆ ದೇವಗಳಿಗಿಂತ ಅಸಾಧಾರಣ ಅಣಿಮಾದಿ ಗುಣಗಳಿಂದ ಶೋಭಿಸತಕ್ಕವರನ್ನು **ಇಂದ್ರ** ಎಂದು ಹೇಳುತ್ತಾರೆ.

(೨) ಸಾಮಾನಿಕ–ಆಜ್ಞಾ ಮತ್ತು ಐಶ್ವರ್ಯಗಳ ಹೊರತಾಗಿ, ಉಳಿದ ಸ್ಥಾನ, ಆಯುಷ್ಯ, ವೀರ್ಯ, ಪರಿವಾರ, ಭೋಗ ಮತ್ತು ಉಪಭೋಗಗಳನ್ನು ಹೊಂದಿರತಕ್ಕವರನ್ನು '**ಸಮಾನ**' ಎಂದು ಹೇಳುತ್ತಾರೆ. ಆ '**ಸಮಾನ**' ದಲ್ಲಿರುವವರನ್ನು '**ಸಾಮಾನಿಕ**'ರೆಂದು ಹೇಳುತ್ತಾರೆ. ಇವರು ತಂದೆ, ಗುರು ಮತ್ತು ಉಪಾಧ್ಯಾಯ ರಂತೆ ಎಲ್ಲರಿಗಿಂತ ದೊಡ್ಡವರಾಗಿರುತ್ತಾರೆ.

(೩) ತ್ರಾಯಸ್ತ್ರಿಂಶ–ಮಂತ್ರಿ ಮತ್ತು ಪುರೋಹಿತರಿಗೆ ಸಮಾನರಾಗಿರುವವರು **ತ್ರಾಯಸ್ತ್ರಿಂಶ**ರೆನಿಸಿಕೊಳ್ಳುತ್ತಾರೆ. ಇವರು ಮೂವತ್ತಮೂರೇ ಇರುವುದರಿಂದ ಇವರು '**ತ್ರಾಯಸ್ತ್ರಿಂಶ**'ರೆನಿಸಿಕೊಳ್ಳುತ್ತಾರೆ. **ವ್ಯಂತರ** ಮತ್ತು **ಜ್ಯೋತಿಷ್ಕ** ದೇವರಲ್ಲಿ **ತ್ರಾಯಸ್ತ್ರಿಂಶ** ಭೇದವಿರುವುದಿಲ್ಲ.

(೪) ಪಾರಿಷದ–ಸಭೆಯಲ್ಲಿ ಮಿತ್ರ ಮತ್ತು ಪ್ರೇಮಿಜನರಂತೆ ಇರತಕ್ಕವರು '**ಪಾರಿಷದ**'ರೆನಿಸಿಕೊಳ್ಳುತ್ತಾರೆ.

(೫) ಆತ್ಮರಕ್ಷಕ–ಅಂಗರಕ್ಷಕರಂತೆ ಇರುತ್ತಾರೆ ಅವರು '**ಆತ್ಮರಕ್ಷಕ**'ರೆನಿಸಿಕೊಳ್ಳುತ್ತಾರೆ.

(೬) ಲೋಕಪಾಲ–ಅರ್ಥಚರ ರಕ್ಷಕರನ್ನು '**ಲೋಕಪಾಲ**'ರೆನ್ನುತ್ತಾರೆ. ಅಂದರೆ ಯಾರು ಲೋಕವನ್ನು ಪಾಲಿಸುತ್ತಾರೆ ಅವರು '**ಲೋಕಪಾಲ**'ರೆನಿಸಿಕೊಳ್ಳುತ್ತಾರೆ. ಇವರಲ್ಲಿ ಸೋಮ, ಯಮ, ವರುಣ ಮತ್ತು ಕುಬೇರ ಎಂಬ ನಾಲ್ವರು ಪ್ರಮುಖ ಲೋಕಪಾಲರ ಸಮೂಹವಿರುತ್ತದೆ. **ವ್ಯಂತರ** ಮತ್ತು **ಜ್ಯೋತಿಷ್ಕ** ದೇವರಲ್ಲಿ **ಲೋಕಪಾಲ** ಭೇದವಿರುವುದಿಲ್ಲ.

(೭) ಅನೀಕ–ಸೈನ್ಯದಲ್ಲಿರುವಂತೆ, ವೃಷಭ, ರಥ, ಕುದುರೆ, ಆನೆ, ನರ್ತಕ, ಗಂಧರ್ವ ಮತ್ತು ಸೇವಕವರ್ಗ ಈ ಏಳು ಕಕ್ಷೆಗಳಿಂದ ಕೂಡಿದ ಏಳು ಸೈನ್ಯಗಳನ್ನು '**ಅನೀಕ**'ರೆಂದು ಹೇಳುತ್ತಾರೆ. (ಜಂಬೂದೀಪಪಣ್ಣತ್ತೀ, ೧೫೪, ೧೫೯; ಪೂರ್ವಪುರಾಣ, ೧೩–೧೬; ತಿಲೋಯಪಣ್ಣತ್ತೀ, ೩–೭೭; ತ್ರಿಲೋಕಸಾರ, ೨೮೦)
ಅನೀಕರೆಂದರೆ, ಸೇನೆಯ ರೂಪದಲ್ಲಿ ಪರಿವರ್ತಿಸುವ ದೇವತೆಗಳ ಪ್ರಕಾರ (ಜೈನೇಂದ್ರ ಸಿದ್ಧಾಂತ ಕೋಶ).

(೮) ಪ್ರಕೀರ್ಣಕ–ಹಳ್ಳಿ ಮತ್ತು ಪಟ್ಟಣಗಳಲ್ಲಿ ವಾಸ ಮಾಡುವವರನ್ನು '**ಪ್ರಕೀರ್ಣಕ**'ರೆಂದು ಹೇಳುತ್ತಾರೆ.

(೯) ಅಭಿಯೋಗ್ಯ–ದಾಸರಂತೆ ವಾಹನ ಮೊದಲಾದ ಕರ್ಮಗಳಲ್ಲಿ ತೊಡಗುವವರನ್ನು '**ಅಭಿಯೋಗ್ಯ**'ರೆಂದು ಹೇಳುತ್ತಾರೆ.

(೧೦) ಕಿಲ್ಬಿಷಿಕ–ಪಾಪವನ್ನು ಕಿಲ್ಬಿಷವೆಂದು ಹೇಳುತ್ತಾರೆ. ಕಿಲ್ಬಿಷವು ಹೆಚ್ಚಾಗಿ ಇರುವವರನ್ನು '**ಕಿಲ್ಬಿಷಿಕ**'ರೆಂದು ಹೇಳುತ್ತಾರೆ.

ಇವರು ನಾನಾ ದ್ವಿಪಗಳ, ವನಗಳ ಹಾಗೂ ಪರ್ವತದ ಶಿಖರಗಳಲ್ಲಿ ವಿಹಾರ ಮಾಡುತ್ತಾ ಇರುತ್ತಾರೆ. ದೇವತೆಗಳಿಗೆ ತಮ್ಮ ಶರೀರವನ್ನು ಚಿಕ್ಕದನ್ನಾಗಿಯೂ ದೊಡ್ಡದನ್ನಾಗಿಯೂ ಮಾಡಿಕೊಳ್ಳುವಂತಹ ವಿಶೇಷ ಕ್ಷಮತೆ ಇರುತ್ತದೆ. ಇದಕ್ಕೆ ವೈಕ್ರಿಯಿಕ ಶರೀರ ಎನ್ನುತ್ತಾರೆ. ದೊಡ್ಡದು ಚಿಕ್ಕದು ಮಾಡುವುದಕ್ಕೆ ಋದ್ಧಿ ಎನ್ನುತ್ತಾರೆ.

ದೇವ ನಿಕಾಯದ ನಾಲ್ಕು ಭೇದಗಳ ವಿವರಗಳು: (ತತ್ತ್ವಾರ್ಥಸೂತ್ರ, ೪–೧)

೧. ಭವನವಾಸಿ ದೇವತೆಗಳು–ಭವನದಲ್ಲಿ ನಿವಾಸ ಮಾಡುವ ದೇವತೆಗಳನ್ನು ಭವನವಾಸಿ ದೇವತೆಗಳೆಂದು ಕರೆಯುತ್ತಾರೆ. ಇವರಲ್ಲಿ ಹತ್ತು ಭೇದಗಳಿವೆ:

(ತತ್ತ್ವಾರ್ಥಸೂತ್ರ, ೪–೧೦) (ಸರ್ವಾರ್ಥಸಿದ್ಧಿ, ಟೀಕಾ ಸಂ. ೪೬೧)

ಅವರ ಹೆಸರಿನ ಮುಂದೆ ಅವರ ಮುಕುಟದ ಮೇಲೆ ಮುದ್ರಿತ (ಅಂಕಿತ) ವಾಗಿರುವ ಚಿಹ್ನೆಯ ಹೆಸರನ್ನು ಕೊಡಲಾಗಿದೆ.

ಭವನವಾಸಿ ದೇವತೆಗಳ ಭೇದಗಳು:	**ಚಿಹ್ನೆಗಳು:**	**ಇಂದ್ರರು:**
(೧) ಅಸುರ ಕುಮಾರ	ಚೂಡಾಮಣಿ	ಚಮರ ಮತ್ತು ವೈರೋಚನ
(೨) ನಾಗ ಕುಮಾರ	ಸರ್ಪ	ಧರಣ ಮತ್ತು ಭೂತಾನಂದ
(೩) ವಿದ್ಯುತ್ ಕುಮಾರ	ವರ್ಧಮಾನಕ (ಕೊಡ)	ಹರಿಸಿಂಹ ಮತ್ತು ಹರಿಕಾಂತ
(೪) ಸುಪರ್ಣ ಕುಮಾರ	ಗರುಡ	ವೇಣುದೇವ ಮತ್ತು ವೇಣುಧಾರಿ
(೫) ಅಗ್ನಿ ಕುಮಾರ	ಕಳಶ	ಅಗ್ನಿಶಿಖ ಮತ್ತು ಅಗ್ನಿಮಾಣವ
(೬) ವಾತ ಕುಮಾರ	ಕುದುರೆ	ವೈಲಂಬ ಮತ್ತು ಪ್ರಭಂಜನ
(೭) ಸ್ತನಿತ ಕುಮಾರ	ವಜ್ರ	ಸುಘೋಷ ಮತ್ತು ಮಹಾಘೋಷ
(೮) ಉದಧಿ ಕುಮಾರ	ಮೊಸಳೆ (ಮಕರ)	ಜಲಕಾಂತ ಮತ್ತು ಜಲಪ್ರಭ
(೯) ದ್ವೀಪ ಕುಮಾರ	ಆನೆ	ಪೂರ್ಣ ಮತ್ತು ವಶಿಷ್ಠ
(೧೦) ದಿಕ್ಕು ಕುಮಾರ	ಸಿಂಹ	ಅಮಿತಗತಿ ಮತ್ತು ಅಮಿತವಾಹನ

ಹತ್ತೂ ಪ್ರಕಾರದ ಭವನವಾಸಿ ದೇವತೆಗಳ ಹತ್ತೂ ಪ್ರಕಾರದ ಇಂದ್ರರಿಗೆ ಹತ್ತು ಪ್ರಕಾರದ ಪರಿವಾರ ದೇವತೆಗಳಿರುತ್ತಾರೆ: (೧) ಪ್ರತೀಂದ್ರ, (೨) ಸಾಮಾನಿಕ, (೩) ತ್ರಾಯಸ್ತ್ರಿಂಶ, (೪) ಪಾರಿಷದ್, (೫) ಆತ್ಮರಕ್ಷ, (೬) ಲೋಕಪಾಲ, (೭) ಅನೀಕ, (೮) ಪ್ರಕೀರ್ಣಕ, (೯) ಅಭಿಯೋಗ್ಯ, ಮತ್ತು (೧೦) ಕಿಲ್ವಿಷಿಕ. ಇಂದ್ರರು ಈ ಸಮಸ್ತ ಪರಿವಾರ ದೇವತೆಗಳ ಸ್ವಾಮಿಯಾಗಿರುತ್ತಾರೆ. **ಸಾಮಾನಿಕರು** ಆಜ್ಞೆ ಮತ್ತು ಐಶ್ವರ್ಯಗಳ ಹೊರತಾಗಿ ಉಳಿದ ಎಲ್ಲಾ ವಿಷಯಗಳಲ್ಲಿಯೂ ಇಂದ್ರರಿಗೆ ಸಮರಾಗಿರುತ್ತಾರೆ.

೨. ವ್ಯಂತರ ದೇವತೆಗಳು–ಇವರು ಅನೇಕ ದೇಶ–ದೇಶಾಂತರಗಳಲ್ಲಿ ವಿಹಾರ–ವಿಚರಣೆಯನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಇವರನ್ನು ವ್ಯಂತರರೆಂದು ಕರೆಯುತ್ತಾರೆ. ಇವರು ಜಂಬೂದ್ವೀಪದಿಂದ ಅಸಂಖ್ಯಾತ ದ್ವೀಪ ಮತ್ತು ಸಮುದ್ರಗಳನ್ನು ದಾಟಿ ಮೇಲಿನ ಖರಪೃಥ್ವೀಭಾಗದಲ್ಲಿ ಏಳುಬಗೆಯ ವ್ಯಂತರದೇವತೆಗಳು ನಿವಾಸಿಸುತ್ತಾರೆ. ರಾಕ್ಷಸರು ಪಂಕಬಹುಲಭಾಗದಲ್ಲಿ ವಾಸಿಸುತ್ತಾರೆ. ಇವರಲ್ಲಿ ಎಂಟು ಭೇದಗಳಿವೆ:

(ತತ್ತ್ವಾರ್ಥಸೂತ್ರ, ೪–೧೧) (ಸರ್ವಾರ್ಥಸಿದ್ಧಿ, ಟೀಕಾ ಸಂ. ೪೬೩)

ವ್ಯಂತರ ದೇವತೆಗಳ ಭೇದಗಳು:		**ಇಂದ್ರರು** (ಪ್ರತೀ ವ್ಯತಂರ ದೇವತೆಗಳಿಗೆ ಇಬ್ಬರು ಇಂದ್ರರಿರುತ್ತಾರೆ)
(೧) ಕಿನ್ನರ	–	ಕಿನ್ನರ ಮತ್ತು ಕಿಂಪುರುಷ
(೨) ಕಿಂಪುರುಷ	–	ಸತ್ಪುರುಷ ಮತ್ತು ಮಹಾಪುರುಷ
(೩) ಮಹೋರುಗ	–	ಅತಿಕಾಯ ಮತ್ತು ಮಹಾಕಾಯ
(೪) ಗಂಧರ್ವ	–	ಗೀತರತಿ ಮತ್ತು ಗೀತಯಶ

(೫) ಯಕ್ಷ – ಪೂರ್ಣಭದ್ರ ಮತ್ತು ಮಣಿಭದ್ರ
(೬) ರಾಕ್ಷಸ – ಭೀಮ ಮತ್ತು ಮಹಾಭೀಮ
(೭) ಭೂತ – ಪ್ರತಿರೂಪ ಮತ್ತು ಅಪ್ರತಿರೂಪ
(೮) ಪಿಶಾಚ – ಕಾಲ ಮತ್ತು ಮಹಾಕಾಲ

೩. **ಜ್ಯೋತಿಷ್ಕ ದೇವತೆಗಳು**–ಇವರಲ್ಲಿ ಐದು ಭೇದಗಳಿವೆ:
(ತತ್ತ್ವಾರ್ಥಸೂತ್ರ, ೪–೧೨) (ಸವಾರ್ಥಸಿದ್ಧಿ, ಟೀಕಾ ಸಂ. ೪೬೫)
(೧) ಸೂರ್ಯ
(೨) ಚಂದ್ರ
(೩) ಗ್ರಹ
(೪) ನಕ್ಷತ್ರ
(೫) ಪ್ರಕೀರ್ಣಕ ತಾರೆ

೪. **ವೈಮಾನಿಕ ದೇವತೆಗಳು**–ಯಾರು ವಿಮಾನಗಳಲ್ಲಿ ವಾಸಮಾಡುತ್ತಾರೆಯೋ ಅವರನ್ನು ವೈಮಾನಿಕರು ಎಂದು ಹೇಳುತ್ತಾರೆ. ಇವರಲ್ಲಿ ಎರಡು ಭೇದಗಳಿವೆ:
(ತತ್ತ್ವಾರ್ಥಸೂತ್ರ, ೪–೧೭, ೪–೧೯) (ಸವಾರ್ಥಸಿದ್ಧಿ, ಟೀಕಾ ಸಂ. ೪೭೫, ೪೭೯) (ಪದ್ಯ/ವಚನ ಸಂ. ೩–೭೩)

(೧) ಕಲ್ಪವಾಸೀ ವೈಮಾನಿಕ ದೇವತೆಗಳು–ಎಲ್ಲಿಯವರೆಗೆ ಇಂದ್ರ ಮುಂತಾದ ಹತ್ತು ಪ್ರಕಾರದ ದೇವರ ಕಲ್ಪನೆಯಿರುತ್ತದೆಯೋ, ಅವರನ್ನು ಕಲ್ಪವಾಸಿಗಳೆಂದು ಅಥವಾ ಕಲ್ಪೋಪಪನ್ನ ದೇವತೆಗಳೆಂದು ಕರೆಯುತ್ತಾರೆ. ಇವರು ಹದಿನಾರು ಸ್ವರ್ಗಗಳಲ್ಲಿ ಇರುತ್ತಾರೆ. ಆ ಸ್ವರ್ಗಗಳ ಹೆಸರು ಈ ರೀತಿ ಇವೆ:

ಕಲ್ಪ (ಸ್ವರ್ಗ) ದ ಹೆಸರು:		**ಇಂದ್ರರ ಹೆಸರು:**
೧) ಸೌಧರ್ಮ	–	ಸೌಧಮೇಂದ್ರ
೨) ಈಶಾನ್ಯ	–	ಈಶಾನೇಂದ್ರ
೩) ಸನತ್ ಕುಮಾರ	–	ಸನತ್ಕುಮಾರೇಂದ್ರ
೪) ಮಾಹೇಂದ್ರ	–	ಮಹೇಂದ್ರ
೫) ಬ್ರಹ್ಮ ೬) ಬ್ರಹ್ಮೋತ್ತರ	–	ಬ್ರಹ್ಮೇಂದ್ರ
೭) ಲಾಂತವ ೮) ಕಾಪಿಷ್ಠ	–	ಲಾಂತವೇಂದ್ರ
೯) ಶುಕ್ರ ೧೦) ಮಹಾಶುಕ್ರ	–	ಮಹಾಶುಕ್ರ ಇಂದ್ರ (ಶುಕ್ರ ಇಂದ್ರ [ಸರ್ವಾರ್ಥಸಿದ್ಧಿಯ ಪ್ರಕಾರ])
೧೧) ಶತಾರ ೧೨) ಸಹಸ್ರಾರ	–	ಸಹಸ್ರಾರ ಇಂದ್ರ (ಶತಾರ ಇಂದ್ರ [ಸರ್ವಾರ್ಥಸಿದ್ಧಿಯ ಪ್ರಕಾರ])
೧೩) ಆನತ	–	ಆನತೇಂದ್ರ
೧೪) ಪ್ರಾಣತ	–	ಪ್ರಾಣತೇಂದ್ರ
೧೫) ಆರಣ	–	ಆರಣೇಂದ್ರ
೧೬) ಅಚ್ಯುತ	–	ಅಚ್ಯುತೇಂದ್ರ (ಪದ್ಯ/ವಚನ ಸಂ. ೬–೧೩ (ವ))

(೨) ಕಲ್ಪಾತೀತ ವೈಮಾನಿಕ ದೇವತೆಗಳು–ಕಲ್ಪವಾಸಿ ದೇವತೆಗಳ ವಿಮಾನಕ್ಕಿಂತ ಮೇಲಿನ ವಿಮಾನಗಳಲ್ಲಿ ವಾಸಿಸುವ ದೇವತೆಗಳನ್ನು ಕಲ್ಪಾತೀತರೆಂದು ಹೇಳುತ್ತಾರೆ.

೧) ನವ ಗ್ರೈವೇಯಕ

(ಅ) ಅಧೋಗ್ರೈವೇಯಕ

(1) ಸುದರ್ಶನ

(2) ಅಮೋಘ

(3) ಸುಪ್ರಬುದ್ಧ

(ಆ) ಮಧ್ಯಮಗ್ರೈವೇಯಕ

(4) ಯಶೋಧರ

(5) ಸುಭದ್ರ

(6) ವಿಶಾಲ

(ಇ) ಊರ್ಧ್ವ (ಉಪರಿಮ) ಗ್ರೈವೇಯಕ

(7) ಸುಮನ

(8) ಸೌಮನ

(9) ಪ್ರೀತಿಂಕರ

೨) ನವ ಅನುದಿಶ

(1) ಆದಿತ್ಯ

(2) ಅರ್ಚಿ

(3) ಅರ್ಚಿಮಾಲೀ

(4) ವೈರೋಚನ

(5) ಪ್ರಭಾಸ

(6) ಅರ್ಚಿಪ್ರಭ

(7) ಅರ್ಚಿಮಧ್ಯ

(8) ಅರ್ಚಿರಾವರ್ತ

(9) ಅರ್ಚಿವಿಶಿಷ್ಠ

೩) ಪಂಚ ಅನುತ್ತರ

(1) ವಿಜಯ

(2) ವೈಜಯಂತ

(3) ಜಯಂತ

(4) ಅಪರಾಜಿತ

(5) ಸರ್ವಾರ್ಥಸಿದ್ಧಿ

ಐದು (೫)–ಪಂಚ ಣಮೋಕಾರ ಮಂತ್ರ

ಮಂಗಲಕರವಾದ ಪಂಚ ಣಮೋಕಾರ ಮಂತ್ರ:

(ಪಂಚ ಪದಂಗಳ್, ಅಕ್ಷಯ ಮಂತ್ರ, ಪಂಚನಮಸ್ಕೃತಿ, ಗುರುಪಂಚಕಮಂ)

(ಪದ್ಯ/ವಚನ ಸಂ. ೧–೬, ೨–೫೪, ೨–೫೭, ೨–೬೦, ೩–೧೭)

ಣಮೋ ಅರಹಂತಾಣಂ

ಣಮೋ ಸಿದ್ಧಾಣಂ

ಣಮೋ ಆಯಿರಿಯಾಣಂ

ಣಮೋ ಉವಜ್ಝಾಯಾಣಂ

ಣಮೋ ಲೋಏಸವ್ವಸಾಹೂಣಂ

ಪಂಚ ಣಮೋಕಾರ ಮಂತ್ರದ ಅರ್ಥ (‘**ಣಮೋ**’ ಎಂದರೆ ‘**ನಮಸ್ಕಾರ**’ ಎಂದು ಅರ್ಥ):

ಣಮೋ ಅರಹಂತಾಣಂ	**ಅರಹಂತರಿಗೆ ನಮಸ್ಕಾರ**
ಣಮೋ ಸಿದ್ಧಾಣಂ	**ಸಿದ್ಧರಿಗೆ ನಮಸ್ಕಾರ**

ಣಮೋ ಆಯಿರಿಯಾಣಂ	**ಆಚಾರ್ಯರಿಗೆ ನಮಸ್ಕಾರ**
ಣಮೋ ಉವಜ್ಝಾಯಾಣಂ	**ಉಪಾಧ್ಯಾಯರಿಗೆ ನಮಸ್ಕಾರ**
ಣಮೋ ಲೋಏ ಸವ್ವಸಾಹೂಣಂ	**ಲೋಕದ ಸರ್ವಸಾಧುಗಳಿಗೆ ನಮಸ್ಕಾರ**

ಈ **ಪಂಚನಮಸ್ಕಾರ ಮಂತ್ರ**ವು ಮಂಗಳಕರವಾದದ್ದೆಂದೂ, ಪರಮ ಶ್ರೇಷ್ಠವಾದದ್ದೆಂದು ಜೈನಧರ್ಮೀಯರು ಭಾವಿಸುತ್ತಾರೆ. ಇದನ್ನು **'ಮಹಾಮಂತ್ರ'**ವೆಂದೂ ಕರೆಯುತ್ತಾರೆ. ಮೇಲಿನ ಪಂಚಣಮೋಕಾರ ಮಂತ್ರವು **ಪ್ರಾಕೃತ–ಅರ್ಧಮಾಗಧೀ** ಭಾಷೆಯಲ್ಲಿ ರಚಿತವಾಗಿದ್ದು, **ಷಟ್ಖಂಡಾಗಮ** ಗ್ರಂಥದ ಮಂಗಲಾಚರಣೆಯಾಗಿರುತ್ತದೆ. ಅನಾದಿ ಕಾಲದಿಂದ ಇದು ಶ್ರುತರೂಪದಲ್ಲಿದ್ದು, ಮೊದಲಬಾರಿಗೆ ಇದು **ಶ್ರೀ ಪುಷ್ಪದಂತಾಚಾರ್ಯ**ರಿಂದ ಲಿಪಿಬದ್ಧವಾಗಿರುತ್ತದೆ. ಅದರೆ, ಕೆಲವು ವಿದ್ವಾಂಸರು ಪಂಚನಮಸ್ಕಾರ ಮಂತ್ರವು ಎಲ್ಲಕ್ಕೂ ಮೊದಲು **'ಣಮೋ ಅರಹಂತಾಣಂ, ಣಮೋ ಸವಸಿಧಾನಂ'** ಎಂಬ ಲಿಖಿತ ರೂಪದಲ್ಲಿ, ಕ್ರಿ.ಪೂ. ಎರಡನೆಯ ಶತಮಾನಕ್ಕೆ ಸೇರಿದ, ಕಳಿಂಗದ (ಒರಿಸ್ಸಾ) ಚಕ್ರವರ್ತಿ ಚೇದಿ ವಂಶದ **ಜೈನ ಸಾಮ್ರಾಟ್ ಖಾರವೇಲನ ಹಾಥಿಗುಂಫಾ ಶಾಸನ**ದಲ್ಲಿ ಪ್ರಾಪ್ತವಾಗುತ್ತದೆಂದು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಒಟ್ಟು **೩೫ ಅಕ್ಷರ**ಗಳಿದ್ದು, **೫೮ ಮಾತ್ರಾಕಾಲ**ದಲ್ಲಿ ಉಚ್ಚಾರ ಮಾಡಲಾಗುವ ಅಕ್ಷರಗಳಿಂದ ಕೂಡಿರುತ್ತದೆ. ಹೀಗೆ ಮಹಾಮಂತ್ರವು ೪ ಯತಿಸ್ಥಾನಗಳಿಂದಲೂ ಮತ್ತು ೪ ಚರಣಗಳಿಂದಲೂ ಕೂಡಿರುತ್ತದೆ. **ಯತಿ** ಸ್ಥಾನಗಳು ಈ ಕೆಳಗಿನಂತಿವೆ:

೧. ಣಮೋ ಅರಹಂತಾಣಂ । .. ೧ ನೆಯ ಯತಿ ಸ್ಥಾನ.
೨. ಣಮೋ ಸಿದ್ಧಾಣಂ ಣಮೋ ಆಯಿರಿಯಾಣಂ । .. ೨ ನೆಯ ಯತಿ ಸ್ಥಾನ.
೩. ಣಮೋ ಉವಜ್ಝಾಯಾಣಂ । .. ೩ ನೆಯ ಯತಿ ಸ್ಥಾನ.
೪. ಣಮೋ ಲೋಏ ಸವ್ವಸಾಹೂಣಂ । .. ೪ ನೆಯ ಯತಿ ಸ್ಥಾನ.

'ಅರಹಂತರು' ಎನ್ನುವ ಪದವು **'ಅರಿಹಂತರು'** ಹಾಗೂ **'ಅರುಹಂತರು'** ಎನ್ನುವ ರೂಪಗಳಲ್ಲಿಯೂ ಆಗಮಗಳಲ್ಲಿ ಕಾಣಬರುತ್ತದೆ. (ಪದ್ಯ/ವಚನ ಸಂ. ೨–೫೫)

ಕೊನೆಯ ಮಂತ್ರದಲ್ಲಿ ಣಮೋ **'ಲೋಏ ಸವ್ವ'** ಸಾಹೂಣಂ ಎಂದರೆ **'ಲೋಕದ ಸರ್ವ'** ಸಾಧುಗಳಿಗೆ ನಮಸ್ಕಾರ ಎಂದಿರುತ್ತದೆ. ಆದರೆ ಮೊದಲ ನಾಲ್ಕು ಪರಮೇಷ್ಠಿಗಳಿಗೆ ನಮಸ್ಕರಿಸುವಾಗ **'ಲೋಏ ಸವ್ವ'** ಪದಗಳು ಸೇರಿರುವುದಿಲ್ಲ. ಅಂದರೆ 'ಣಮೋ **ಲೋಏ ಸವ್ವ** ಅರಿಹಂತಾಣಂ', 'ಣಮೋ **ಲೋಏ ಸವ್ವ** ಸಿದ್ಧಾಣಂ', ...ಇತ್ಯಾದಿ. ಕಾರಣವೇನೆಂದರೆ, ಈ **'ಲೋಏ ಸವ್ವ'** ಪದಗಳು ಎಲ್ಲ ಪರಮೇಷ್ಠಿಗಳ ನಮಸ್ಕಾರದಲ್ಲೂ (ಆ ಪದಗಳನ್ನು ಪ್ರತಿಯೊಂದರಲ್ಲೂ ವ್ಯಕ್ತವಾಗಿ ಹೇಳಿರದಿದ್ದರೂ) ಅವು ಮೊದಲಿನ ನಾಲ್ಕು ನಮಸ್ಕಾರಗಳಲ್ಲೂ ಧ್ವನಿತವಾಗಿದ್ದು, ಅಧ್ಯಾಹೃತವಾಗಿರುತ್ತವೆ. ಆಂದರೆ ಅದನ್ನು ನಾವು ಹೇಳುವಾಗಾಗಲೀ, ಬರೆಯುವಾಗಾಗಲೀ ಸೇರಿಸುವುದಿಲ್ಲ. ಆದರೆ ಈ **'ಲೋಏ ಸವ್ವ'** ಪದಗಳನ್ನು ಕೊನೆಯ ಅಂದರೆ ಐದನೆಯ ಪರಮೇಷ್ಠಿಗಳಾದ ಸಾಧುಗಳಿಗೆ ನಮಸ್ಕರಿಸುವಾಗ ಮಾತ್ರ ಸೇರಿಸಿ ಹೇಳಲಾಗುತ್ತದೆ. ಇದಕ್ಕೆ **'ಅಂತ್ಯದೀಪಕ'** ಎಂದು ಕರೆಯುತ್ತಾರೆ.

ಐದು (೫)–ಪಂಚ ಪರಮೇಷ್ಠಿಗಳು (ಪಂಚಗುರುಗಳು)

ಪಂಚ ಪರಮೇಷ್ಠಿಗಳು: (ಪದ್ಯ/ವಚನ ಸಂ. ೧–೬, ೨–೫೧ (ವ))

೧. ಅರಹಂತರು (ಪದ್ಯ/ವಚನ ಸಂ. ೧–೧)
೨. ಸಿದ್ಧರು (ಪದ್ಯ/ವಚನ ಸಂ. ೧–೨)
೩. ಆಚಾರ್ಯರು (ಪದ್ಯ/ವಚನ ಸಂ. ೧–೩)
೪. ಉಪಾಧ್ಯಾಯರು (ಪದ್ಯ/ವಚನ ಸಂ. ೧–೪)
೫. ಸರ್ವಸಾಧುಗಳು (ಪದ್ಯ/ವಚನ ಸಂ. ೧–೫)

ಈ ಐವರು ಪಂಚಪರಮೇಷ್ಠಿಗಳು. ಇವರನ್ನು ಸ್ತುತಿಸುವ ಅತ್ಯಂತ ಪವಿತ್ರವಾದ ಮಂತ್ರವೇ **'ಪಂಚ ಣಮೋಕಾರ ಮಂತ್ರ'**.

ಸಪ್ತ (೭)–ಸಪ್ತತತ್ತ್ವಗಳು

ಸಪ್ತ ತತ್ತ್ವಗಳು: (ಪದ್ಯ/ವಚನ ಸಂ. ೧೦–೬೩ (ವ)) (ತತ್ತ್ವಾರ್ಥ ಸೂತ್ರ, ೧–೪)
ವಸ್ತುಗಳ ಸ್ವಭಾವಕ್ಕೆ ತತ್ತ್ವವೆನ್ನುತ್ತಾರೆ. ಜೀವದ ಸ್ವಭಾವ ಎರಡು ರೀತಿಯಿದೆ: (೧) ತ್ರೈಕಾಲಿಕ ಸ್ವಭಾವ, (೨) ತಾತ್ಕಾಲಿಕ ಸ್ವಭಾವ. ಯಾವುದರಲ್ಲಿ ಜ್ಞಾನೋಪಯೋಗ ಮತ್ತು ದರ್ಶನೋಪಯೋಗವಿದೆಯೋ ಅದು ಜೀವತತ್ತ್ವ ವಾಗಿದೆ. ಜ್ಞಾನ ಮತ್ತು ದರ್ಶನಗಳು ಜೀವತತ್ತ್ವದ ತ್ರೈಕಾಲಿಕ ಸ್ವಭಾವಗಳಾಗಿವೆ.

೧. ಜೀವ ತತ್ತ್ವ–ಯಾವುದು ಜ್ಞಾನ ದರ್ಶನ ರೂಪವಾಗಿ ಪರಿಣಮನೆ ಮಾಡುತ್ತದೆಯೋ ಅದು ಜೀವತತ್ತ್ವವಾಗಿದೆ. ಯಾವುದರಲ್ಲಿ ಜ್ಞಾನ ದರ್ಶನವಿದೆ, ಯಾವುದು ಸುಖ–ದುಃಖದ ಅನುಭವ ಮಾಡುತ್ತದೆ ಅದಕ್ಕೆ ಜೀವತತ್ತ್ವ ಎನ್ನುತ್ತಾರೆ. **ಜೀವದ್ರವ್ಯವು ಭಾವ**ದ ಅಪೇಕ್ಷೆಯಿಂದ **ಜೀವತತ್ತ್ವ**ವೆನಿಸುತ್ತದೆ. ಇದು ಎಲ್ಲಾ ಪದಾರ್ಥಗಳನ್ನು (ತಿಳಿಯುವ, ನೋಡುವ, ಶಕ್ತಿ (ಚೇತನಾ) ವುಳ್ಳದ್ದು) ಸೂಚಿಸುತ್ತದೆ.

೨. ಅಜೀವ ತತ್ತ್ವ–ಜೀವತತ್ತ್ವಕ್ಕೆ ವಿರುದ್ಧವಾದದ್ದು ಅಜೀವತತ್ತ್ವ. ಅಂದರೆ ಯಾವುದರಲ್ಲಿ ಜ್ಞಾನ ದರ್ಶನವಿರುವು ದಿಲ್ಲವೋ, ಯಾವುದು ಸುಖ–ದುಃಖದ ಅನುಭವವನ್ನು ಮಾಡುವುದಿಲ್ಲವೋ ಅದು ಅಜೀವತತ್ತ್ವವಾಗಿದೆ.

೩. ಆಸ್ರವ ತತ್ತ್ವ–ಜೀವ ಮತ್ತು ಅಜೀವಗಳ ಪರಸ್ಪರ ಸಂಬಂಧವನ್ನು (ಮನ, ವಚನ, ಕಾಯಗಳ ಪ್ರವೃತ್ತಿಯಿಂದ ಆತ್ಮನಲ್ಲಿ ಕರ್ಮಗಳ ಆಗಮನವಾಗುವುದು) ಸೂಚಿಸುತ್ತದೆ.

೪. ಬಂಧ ತತ್ತ್ವ–ಜೀವಾಜೀವಗಳು ಒಂದಕ್ಕೊಂದು ಮಿಶ್ರವಾಗಿ ಒಂದೇ ಆಗಿ ತೋರುವಂತೆ ಮಾಡಿರುವುದನ್ನು ಸೂಚಿಸುತ್ತದೆ.

೫. ಸಂವರ ತತ್ತ್ವ–ಜೀವ ಮತ್ತು ಅಜೀವಗಳ ಸಂಬಂಧವುಂಟಾಗದಂತೆ (ಆತ್ಮನಲ್ಲಿ ಕರ್ಮಗಳ ಒಳಹರಿಯುವಿಕೆ ಯನ್ನು) ತಡೆಯುವುದನ್ನು ಸೂಚಿಸುತ್ತದೆ.

೬. ನಿರ್ಜರಾ ತತ್ತ್ವ–ಜೀವ ಮತ್ತು ಅಜೀವಗಳ ಸಂಬಂಧವನ್ನು ಬಿಡಿಸುವುದನ್ನು (ಆತ್ಮನಲ್ಲಿ ಬಂಧವಾಗಿರುವ ಪೂರ್ವಾರ್ಜಿತ ಕರ್ಮಗಳು ಆತ್ಮನಿಂದ ಬಿಟ್ಟು ಹೋಗುವುದು) ಸೂಚಿಸುತ್ತದೆ.

೭. ಮೋಕ್ಷ ತತ್ತ್ವ–ಜೀವ ಮತ್ತು ಅಜೀವಗಳ ಸಂಬಂಧವನ್ನು ದೂರ ಮಾಡಿಸಿ (ಆತ್ಮನಿಗೆ ಅಂಟಿಕೊಂಡಿದ್ದ ಅಷ್ಟಕರ್ಮಗಳು ಕ್ಷಯವಾಗುವುದು) ಆತ್ಮನ (ಜೀವದ) ನಿಜಸ್ವರೂಪದ ಸ್ಥಿತಿಯನ್ನು ಸೂಚಿಸುತ್ತದೆ.

ಸಪ್ತ (೭)–ಸಪ್ತ ನಯಗಳು

ಸಪ್ತ ನಯಗಳು: (ಪದ್ಯ/ವಚನ ಸಂ. ೧–೧೦) (ತತ್ತ್ವಾರ್ಥ ಸೂತ್ರ, ೧–೩೩)
ತಿಳಿಯುವವನ (ಜ್ಞಾತೃವಿನ) ಅಭಿಪ್ರಾಯಕ್ಕೆ ವಿಷಯವಾದ ಏಕದೇಶ ಜ್ಞಾನಕ್ಕೆ 'ನಯ' ಎನ್ನುತ್ತಾರೆ.
ಈ ಸಪ್ತನಯಗಳನ್ನು ಮುಖ್ಯವಾಗಿ (೧) ದ್ರವ್ಯಾರ್ಥಿಕನಯ ಮತ್ತು (೨) ಪರ್ಯಾಯಾರ್ಥಿಕನಯವೆಂದು ಎರಡು ವಿಭಾಗ ಮಾಡಲಾಗಿದೆ.

೧. ದ್ರವ್ಯಾರ್ಥಿಕನಯ–ಸಾಮಾನ್ಯ, ಅನ್ವಯ, ಅಭೇದ, ಏಕತ್ವ ಇತ್ಯಾದಿ ಯಾವುದೇ ವಿಚಾರ ಮಾರ್ಗದಿಂದ ದ್ರವ್ಯದ ವಿಚಾರ ಮಾಡುವುದು ದ್ರವ್ಯಾರ್ಥಿಕನಯ ಎನಿಸುವುದು. ಈ ವಿಭಾಗಕ್ಕೆ ಮೊದಲಿನ ಮೂರು ನಯಗಳು ಸೇರುತ್ತವೆ.

(೧) ನೈಗಮನಯ–ಇನ್ನೂ ಹುಟ್ಟದಿರುವ, ಮುಂದೆ ಹುಟ್ಟುವ ಪದಾರ್ಥವನ್ನು ಸಂಕಲ್ಪಮಾತ್ರದಿಂದ ತಿಳಿಯುವುದು **'ನೈಗಮನಯ'** ವೆನಿಸುತ್ತದೆ.

(೨) ಸಂಗ್ರಹನಯ–ಭಿನ್ನ-ಭಿನ್ನವಾದ ಒಂದೇ ಜಾತಿಯ ವಸ್ತುಗಳನ್ನು ಭೇದ ಮಾಡದೆ ಒಟ್ಟಿಗೆ ಸಂಗ್ರಹಿಸಿ ತಿಳಿದುಕೊಳ್ಳುವುದಕ್ಕೆ **'ಸಂಗ್ರಹನಯ'** ವೆನಿಸುತ್ತದೆ.

(೩) ವ್ಯವಹಾರನಯ–ಸಂಗ್ರಹ ನಯದಲ್ಲಿ ಗ್ರಹಿಸಲ್ಪಟ್ಟ ಅಭೇದ ವಸ್ತುಗಳನ್ನೆಲ್ಲ ವಿಧಿಪೂರ್ವಕವಾಗಿ ಭೇದ ಮಾಡಿಕೊಳ್ಳುವುದಕ್ಕೆ **'ವ್ಯವಹಾರನಯ'**ವೆಂದು ಹೆಸರು.

೨. ಪರ್ಯಾಯಾರ್ಥಿಕನಯ–ವಿಶೇಷ, ಪರ್ಯಾಯ, ವ್ಯಾವೃತ್ತಿ ಇತ್ಯಾದಿ ಭೇದಗಳನ್ನೇ ಲಕ್ಷ್ಯವಾಗಿಟ್ಟುಕೊಂಡು ಪ್ರವೃತ್ತವಾಗುವ ವಿಚಾರಪಥವು ಪರ್ಯಾಯಾರ್ಥಿಕನಯವಾಗಿದೆ. ಈ ವಿಭಾಗಕ್ಕೆ ಕೆಳಗಿನ ಉಳಿದ ನಯಗಳು ಸೇರುತ್ತವೆ.

(೪) **ಋಜುಸೂತ್ರ ನಯ–**ಮೂರು ಕಾಲಗಳ ಪೂರ್ವಾಪರ ವಿಷಯಗಳನ್ನು ಬಿಟ್ಟು ಕೇವಲ ವರ್ತಮಾನ ಕಾಲದ ವಿಷಯವನ್ನು ತಿಳಿಸುವುದು **'ಋಜುಸೂತ್ರನಯ'**ವೆನಿಸುವುದು.

(೫) **ಶಬ್ದನಯ–**ಪದಾರ್ಥವನ್ನು ಹೇಳುವ ಮತ್ತು ಅದನ್ನು ನಿಶ್ಚಯಮಾಡುವ ನಯಕ್ಕೆ **'ಶಬ್ದನಯ'**ವೆಂದು ಹೆಸರು.

(೬) **ಸಮಭಿರೂಢನಯ–**ನಾನಾ ಅರ್ಥಗಳನ್ನು ಬಿಟ್ಟು ಒಂದೇ ಅರ್ಥವು ರೂಢವಾಗುವುದು **'ಸಮಭಿರೂಢ ನಯ'**ವೆನಿಸುವುದು.

(೭) **ಏವಾಂಭೂತನಯ–**ಯಾವ ದ್ರವ್ಯವು ಯಾವ ಪ್ರಕಾರವಾದ ಕ್ರಿಯೆಯಲ್ಲಿ ಪರಿಣತವಾಗುವುದೋ ಅದೇ ಪ್ರಕಾರದಲ್ಲಿ ನಿಶ್ಚಯವನ್ನು ತಿಳಿಸುವುದು **'ಏವಂಭೂತನಯ'** ವೆನಿಸುವುದು.

ಎಂಟು (೮)–ಅಷ್ಟಕರ್ಮಗಳು (ಜೀವಾತ್ಮನಿಗೆ ಅಂಟಿಕೊಂಡಿರುವ ಕರ್ಮ ಕಳಂಕಗಳು)

ಪೆಣ್ದೆಂಟುಂ ಕಿಲ್ಬಿಷಂಗಳ್ (ಕರ್ಮಗಳು) ಕಿಡೆ: (ಪದ್ಯ/ವಚನ ಸಂ. ೧–೨, ೩–೮೦)

ಸಿದ್ಧಪರಮೇಷ್ಠಿಗಳ ಲಕ್ಷಣ: ಈ ಕೆಳಗೆ ವಿವರಿಸಿರುವ ೮ ಕರ್ಮಗಳನ್ನು (೪ ಘಾತಿ ಕರ್ಮ ಮತ್ತು ೪ ಅಘಾತಿ ಕರ್ಮ) ನಾಶಪಡಿಸಿರುವವರು.

ಜೀವನಿಗೆ ಅಂಟಿಕೊಳ್ಳುವ ಎಂಟು ಕರ್ಮಗಳು (ಇವುಗಳಿಗೆ ಪ್ರಕೃತಿ ಬಂಧಗಳೆಂದು ಹೆಸರು)

(ತತ್ತ್ವಾರ್ಥ ಸೂತ್ರ ೮–೪) (ಗೊಮ್ಮಟಸಾರ, ಕರ್ಮಕಾಂಡ, ೧–೮)

ಇವುಗಳಲ್ಲಿ ೨ ಭೇದಗಳು (೧) ಘಾತಿಕರ್ಮಗಳು (೨) ಅಘಾತಿ ಕರ್ಮಗಳು.

ಮೊದಲನೆಯ ಭೇದವಾದ **ನಾಲ್ಕು ಘಾತಿಕರ್ಮಗಳೂ ಸಂಪೂರ್ಣವಾಗಿ ಅಶುಭ ಕರ್ಮಗಳಾಗಿವೆ** ಅಂದರೆ **ಪಾಪಕರ್ಮಗಳಾಗಿವೆ**. ಎರಡನೆಯ ಭೇದವಾದ **ಅಘಾತಿಕರ್ಮಗಳಲ್ಲಿ, ಕೆಲವು ಶುಭ ಮತ್ತು ಕೆಲವು ಅಶುಭ ಕರ್ಮಗಳಾಗಿವೆ** ಅಂದರೆ ಕೆಲವು **ಪುಣ್ಯಕರ್ಮಗಳಾಗಿಯೂ ಮತ್ತೆ ಕೆಲವು ಪಾಪಕರ್ಮಗಳಾಗಿಯೂ ವರ್ತಿಸುತ್ತವೆ.**

೧. ನಾಲ್ಕು ಘಾತಿ ಕರ್ಮಗಳು: (ಪದ್ಯ/ವಚನ ಸಂ. ೧–೪೦ (೨))

(೧) **ಜ್ಞಾನಾವರಣೀಯ ಕರ್ಮ**–ಆತ್ಮನ ಜ್ಞಾನಗುಣವನ್ನು ಘಾತಿಸುವುದು ಯಾವುದೋ, ಅದಕ್ಕೆ ಜ್ಞಾನಾವರಣ ಕರ್ಮ ಎನ್ನುವರು. ಇದರಲ್ಲಿ ೫ ಭೇದಗಳಿವೆ. (ತತ್ತ್ವಾರ್ಥ ಸೂತ್ರ ೮–೬)

೧) ಮತಿ ಜ್ಞಾನಾವರಣೀಯ

೨) ಶ್ರುತ ಜ್ಞಾನಾವರಣೀಯ

೩) ಅವಧಿ ಜ್ಞಾನಾವರಣೀಯ

೪) ಮನಃಪರ್ಯಯ ಜ್ಞಾನಾವರಣೀಯ

೫) ಕೇವಲ ಜ್ಞಾನಾವರಣೀಯ

ಇವುಗಳಿಗೆ ಜ್ಞಾನಾವರಣ ಪಂಚಕಗಳೆಂದು ಕರೆಯುತ್ತಾರೆ. ಇವುಗಳ ಅಭಾವದಲ್ಲಿ ಅನಂತ ಜ್ಞಾನ (ತಿಳಿದುಕೊಳ್ಳುವ ಶಕ್ತಿ) ಪ್ರಾಪ್ತಿಯಾಗುತ್ತದೆ

(೨) **ದರ್ಶನಾವರಣೀಯ ಕರ್ಮ**–ಆತ್ಮನ ದರ್ಶನಗುಣವನ್ನು ಘಾತಿಸುವುದು ಯಾವುದೋ, ಅದಕ್ಕೆ ದರ್ಶನಾವರಣ ಕರ್ಮ ಎನ್ನುವರು. ಇದರಲ್ಲಿ ೫ ಭೇದಗಳಿವೆ. ಇದರಲ್ಲಿ ೯ ಭೇದಗಳಿವೆ: (ತತ್ತ್ವಾರ್ಥ ಸೂತ್ರ ೮–೭) (ಸರ್ವಾರ್ಥಸಿದ್ಧಿ ಟೀಕೆ ಸಂ. ೭೪೪)

(ಅ) ೪ ಆವರಣಗಳು (ದರ್ಶನಾವರಣ ಚತುಷ್ಕಗಳು):

೧) **ಚಕ್ಷುದರ್ಶನಾವರಣೀಯ–**ಈ ಕರ್ಮದ ಉದಯದಿಂದ ಚಕ್ಷು ಇಂದ್ರಿಯದಿಂದ ಹುಟ್ಟುವ ಆಲೋಚನೆಗೆ ಅಡ್ಡಿಯಾಗುತ್ತದೆ. ಅಂದರೆ ಕಣ್ಣಿನ ಮೂಲಕ ಆಗುವಂತಹ ಸಾಮಾನ್ಯ ಅವಲೋಕನವು ಉಂಟಾಗದಂತೆ ಮಾಡುತ್ತದೆ.

೨) **ಅಚಕ್ಷುದರ್ಶನಾವರಣೀಯ–**ಈ ಕರ್ಮದ ಉದಯದಿಂದ ಚಕ್ಷು ಬಿಟ್ಟು ಉಳಿದ ಇಂದ್ರಿಯಗಳಿಂದ (ಸ್ಪರ್ಶ, ರಸ, ಘ್ರಾಣ, ವರ್ಣ) ಹುಟ್ಟುವ ಆಲೋಚನೆಗೆ ಅಡ್ಡಿಯಾಗುತ್ತದೆ. ಅಂದರೆ ಚಕ್ಷು ಇಂದ್ರಿಯ ಹೊರತುಪಡಿಸಿ ಉಳಿದ ಇಂದ್ರಿಯಗಳು ಮತ್ತು ಮನಸ್ಸಿನಿಂದಾಗುವ ಪದಾರ್ಥಗಳ ಸಾಮಾನ್ಯ ಅವಲೋಕನೆಯನ್ನು ಆಗಗೊಡದಂತೆ ತಡೆಗಟ್ಟುತ್ತದೆ.

೩) **ಅವಧಿದರ್ಶನಾವರಣೀಯ–**ಈ ಕರ್ಮದ ಉದಯದಿಂದ ಇಂದ್ರಿಯ ಮತ್ತು ಮನಸ್ಸನ್ನು ಹೊರತುಪಡಿಸಿ ಅವಧಿಜ್ಞಾನಕ್ಕಿಂತ ಮೊದಲು ವಸ್ತುಗಳ ಸ್ಪಷ್ಟ ಅವಲೋಕನೆಗೆ ತಡೆಯನ್ನುಂಟು ಮಾಡುತ್ತದೆ.

೪) **ಕೇವಲದರ್ಶನಾವರಣೀಯ–**ಈ ಕರ್ಮದ ಉದಯದಿಂದ ಲೋಕದಲ್ಲಿರುವ ಸಮಸ್ತ ವಸ್ತುಗಳ ಪ್ರತ್ಯಕ್ಷ ಸ್ಪಷ್ಟ ಅವಲೋಕನೆಗೆ ತಡೆಯನ್ನುಂಟು ಮಾಡುತ್ತದೆ.

ಈ ಮೇಲಿನ ನಾಲ್ಕಕ್ಕೆ ದರ್ಶನಾವರಣ ಚತುಷ್ಕಗಳೆಂದು ಕರೆಯುತ್ತಾರೆ. ಇವುಗಳ ಅಭಾವದಲ್ಲಿ ಅನಂತ ದರ್ಶನ (ನೋಡುವಂತಹ ಶಕ್ತಿ) ಪ್ರಾಪ್ತಿಯಾಗುತ್ತದೆ.

(ಆ) ೫ ನಿದ್ರಾದಿಕಗಳು:

೫) ನಿದ್ರಾ**ದರ್ಶನಾವರಣೀಯ–**ಈ ಕರ್ಮದ ಉದಯದಿಂದ ಮದ, ಖೇದ ಮತ್ತು ಪರಿಶ್ರಮಗಳಿಂದ ಹುಟ್ಟಿದ ಆಯಾಸವನ್ನು ಹೋಗಲಾಡಿಸಿಕೊಳ್ಳಲು ಮಲಗಿದಾಗ ನಿದ್ರೆಯನ್ನುಂಟುಮಾಡುವುದು. ಇದರಿಂದ ತಮೋ ಅವಸ್ಥೆ ಉಂಟಾಗುತ್ತದೆ.

೬) ನಿದ್ರಾನಿದ್ರಾ**ದರ್ಶನಾವರಣೀಯ–**ಈ ಕರ್ಮದ ಉದಯದಿಂದ ಈ ಹಿಂದಿನ ಉತ್ತರೋತ್ತರ ಪ್ರಕೃತಿಯನ್ನು ಅಂದರೆ ಇನ್ನೂ ಹೆಚ್ಚು ಸಮಯ ಗಾಢನಿದ್ರೆ ಉಂಟುಮಾಡುವುದನ್ನು ನಿದ್ರಾನಿದ್ರಾ ಎನ್ನುತ್ತಾರೆ.

೭) **ಪ್ರಚಲಾದರ್ಶನಾವರಣ–**ಈ ಕರ್ಮದ ಉದಯದಿಂದ ಶೋಕ, ಶ್ರಮ ಮತ್ತು ಮದಗಳಿಂದ ಹುಟ್ಟಿದುದು, ಕುಳಿತಲ್ಲಿಯೇ ನಿದ್ರೆ ಮಾಡುವುದು, ತೂಕಡಿಸಿ ಬೀಳುವುದು ಉಂಟಾಗುತ್ತದೆ. ಇದನ್ನು ಪ್ರಚಲಾ ಎನ್ನುತ್ತಾರೆ.

೮) **ಪ್ರಚಲಾಪ್ರಚಲಾದರ್ಶನಾವರಣ–**ಈ ಕರ್ಮದ ಉದಯದಿಂದ ಪ್ರಚಲಾವಸ್ಥೆ ಮತ್ತೆ ಮತ್ತೆ ಉಂಟಾಗುತ್ತದೆ. ನಿದ್ರೆಯಲ್ಲಿ ಮಾತನಾಡುವುದು, ಬಾಯಿಯಿಂದ ಜೊಲ್ಲು ಸುರಿಯುವುದು ಇತ್ಯಾದಿ ಉಂಟಾಗುತ್ತದೆ. ಇದಕ್ಕೆ ಪ್ರಚಲಾ ಪ್ರಚಲಾ ಎನ್ನುತ್ತಾರೆ.

೯) **ಸ್ತ್ಯಾನಗೃದ್ಧಿದರ್ಶನಾವರಣ–**ಈ ಕರ್ಮದ ಉದಯದಿಂದ ಆತ್ಮನು ರೌದ್ರಾದಿ ಕರ್ಮಗಳಲ್ಲಿ ತೊಡಗುವುದು, ನಿದ್ರಿಸುತ್ತಿರುವ ಅವಸ್ಥೆಯಲ್ಲಿ ಓಡಾಡುವುದು, ಎಚ್ಚರವಾಗಿದ್ದರೂ ಮರೆತು ಕುಳಿತಿರುವುದು, ತೂಕಡಿಸುವುದು ಈ ಕರ್ಮದ ಪ್ರಭಾವದಿಂದ ಉಂಟಾಗುತ್ತದೆ.

(೩) **ಮೋಹನೀಯಕರ್ಮ–**ಯಾವ ಕರ್ಮದ ಉದಯದಿಂದ ಆತ್ಮನ ಸಮ್ಯಕ್ತ್ವ ಮತ್ತು ಚಾರಿತ್ರ ಗುಣದ ಘಾತವಾಗುತ್ತದೆಯೋ ಅದಕ್ಕೆ **ಮೋಹನೀಯಕರ್ಮ** ಎನ್ನುವರು. ಅಂದರೆ ಯಾವುದರ ಉದಯದಿಂದ ಜೀವವು ತನ್ನ ಸ್ವರೂಪವನ್ನು ಮರೆತು, ಬೇರೆ ಇರುವುದನ್ನು ತನ್ನದೆಂದು ತಿಳಿಯುತ್ತದೆಯೋ ಅದಕ್ಕೆ **ಮೋಹನೀಯಕರ್ಮ** ಎನ್ನುತ್ತಾರೆ. (ತತ್ತ್ವಾರ್ಥ ಸೂತ್ರ, ೮–೯)

ಇದರಲ್ಲಿ ೨ ಮುಖ್ಯ ಭೇದಗಳಿವೆ–(೧ ನೆಯ ಮುಖ್ಯ ಭೇದದಲ್ಲಿ ೩ ಉಪಭೇದಗಳು ಮತ್ತು ೨ ನೆಯ ಮುಖ್ಯ ಭೇದದಲ್ಲಿ ೨೫ ಉಪಭೇದಗಳು, ಹೀಗೆ ಒಟ್ಟು ೨೮ ಭೇದಗಳಿವೆ.

(ಅ) ದರ್ಶನ ಮೋಹನೀಯ ಕರ್ಮ (ದೃಷ್ಟಿಮೋಹ) (ಪದ್ಯ/ವಚನ ಸಂ. ೫–೫೨)

ಆತ್ಮನ ಸಮ್ಯಕ್ತ್ವ ಗುಣವನ್ನು ಯಾವುದು ಘಾತಿಸುವುದೋ ಅದಕ್ಕೆ ದರ್ಶನ ಮೋಹನೀಯ ಕರ್ಮ ಎನ್ನುವರು. ಇದರಲ್ಲಿ ೩ ಭೇದಗಳು:

೧) **ಮಿಥ್ಯಾತ್ವ**–ಯಾವ ಕರ್ಮದ ಉದಯದಿಂದ ಅತತ್ತ್ವ ಶ್ರದ್ಧಾನವಾಗುತ್ತದೆಯೋ (ಕುದೇವ, ಕುಗುರು, ಕುಶಾಸ್ತ್ರಗಳಲ್ಲಿ ಶ್ರದ್ಧೆ ಇಡುವುದು) ಅದಕ್ಕೆ ಮಿಥ್ಯಾತ್ವ ಎನ್ನುವರು.

೨) **ಸಮ್ಯಗ್‌ಮಿಥ್ಯಾತ್ವ**–ಯಾವ ಕರ್ಮದ ಉದಯದಿಂದ ಉಭಯ ರೂಪವಾಗಿ ಕೂಡಿದ ಮಿಶ್ರ ಪರಿಣಾಮಗಳು ಆಗುತ್ತವೆಯೋ ಮತ್ತು ಯಾವುವುಗಳನ್ನು ಕೇವಲ ಸಮ್ಯಕ್ತ್ವ ರೂಪವೆಂದಾಗಲೀ ಅಥವಾ ಮಿಥ್ಯಾತ್ವ ರೂಪವೆಂದಾಗಲೀ ಹೇಳಲಾಗುವುದಿಲ್ಲವೋ ಅದಕ್ಕೆ ಸಮ್ಯಗ್ಮಿಥ್ಯಾತ್ವ ಪ್ರಕೃತಿ ಎನ್ನುವರು.

೩) **ಸಮ್ಯಗ್‌ಪ್ರಕೃತಿ**–ಯಾವ ಕರ್ಮದ ಉದಯದಿಂದ ಸಮ್ಯಕ್ತ್ವ ಗುಣದ ಸಮೂಲ ಘಾತವಾಗುವುದಿಲ್ಲವೋ, ಆದರೆ ಚಲದೋಷ, ಮಲದೋಷ ಮತ್ತು ಅಗಾಢ ದೋಷಗಳು ಉತ್ಪನ್ನವಾಗುತ್ತವೆಯೋ ಅದಕ್ಕೆ ಸಮ್ಯಕ್‌ಪ್ರಕೃತಿ ಎಂದು ಹೇಳುತ್ತಾರೆ.

ಇವುಗಳ ಅಭಾವದಲ್ಲಿ **ಕ್ಷಾಯಿಕ ಸಮ್ಯಕ್ತ್ವ** ಪ್ರಾಪ್ತಿಯಾಗುತ್ತದೆ

(ಆ) ಚಾರಿತ್ರ ಮೋಹನೀಯ ಕರ್ಮ:

೪) ರಿಂದ ೧೯) ಕಷಾಯಗಳು–೧೬;

೨೦) ರಿಂದ ೨೮) ನೋಕಷಾಯಗಳು–೯

(ವಿವರಗಳಿಗೆ ಸಂಖ್ಯಾ ವಿಶಿಷ್ಟ ಪದ ಸಂಖ್ಯೆ **ನಾಲ್ಕು (೪)–ಕಷಾಯಗಳು** ವಿಭಾಗದಲ್ಲಿ ನೋಡಿ)

ಇವುಗಳ ಅಭಾವದಲ್ಲಿ ಅನಂತ ಸುಖ (ಅಪರಿಮಿತ ಸುಖ) ಪ್ರಾಪ್ತಿಯಾಗುತ್ತದೆ.

(೪) ಅಂತರಾಯ ಕರ್ಮ–ಯಾವ ಕರ್ಮದ ಉದಯದಿಂದ ಆತ್ಮನ ವೀರ್ಯ ಗುಣ ಅಂದರೆ ಆತ್ಮನ ಬಲ ಗುಣ ಘಾತವಾಗುತ್ತದೆಯೋ ಅದಕ್ಕೆ **ಮೋಹನೀಯಕರ್ಮ** ಎನ್ನುವರು. ಇದರಲ್ಲಿ ೫ ಭೇದಗಳು (ತತ್ತ್ವಾರ್ಥಸೂತ್ರ ೮–೧೩)

೧) ದಾನಾಂತರಾಯ–ದಾನ ಕಾರ್ಯದಲ್ಲಿ ವಿಘ್ನ ಮಾಡುವಂತಹ ಕರ್ಮ

೨) ಲಾಭಾಂತರಾಯ–ಲಾಭ ಕಾರ್ಯದಲ್ಲಿ ವಿಘ್ನ ಮಾಡುವಂತಹ ಕರ್ಮ

೩) ಭೋಗಾಂತರಾಯ–ಭೋಗ ಕಾರ್ಯದಲ್ಲಿ ವಿಘ್ನ ಮಾಡುವಂತಹ ಕರ್ಮ

೪) ಉಪಭೋಗಾಂತರಾಯ–ಉಪಭೋಗ ಕಾರ್ಯದಲ್ಲಿ ವಿಘ್ನ ಮಾಡುವಂತಹ ಕರ್ಮ

೫) ವೀರ್ಯಾಂತರಾಯ–ವೀರ್ಯ (ಶಕ್ತಿ) ಯ ಕಾರ್ಯದಲ್ಲಿ ವಿಘ್ನ ಮಾಡುವಂತಹ ಕರ್ಮ

ಇವುಗಳಿಗೆ ಅಂತರಾಯ ಪಂಚಕಗಳೆಂದೂ ಕರೆಯುತ್ತಾರೆ. ಇವುಗಳ ಅಭಾವದಲ್ಲಿ ಅನಂತ ದಾನ, ಲಾಭ, ಭೋಗ, ಉಪಭೋಗ ಮತ್ತು ವೀರ್ಯ (ಅಪರಿಮಿತ ಶಕ್ತಿ) ಪ್ರಾಪ್ತಿಯಾಗುತ್ತವೆ.

೨. ನಾಲ್ಕು ಅಘಾತಿ ಕರ್ಮಗಳು:

(೧) ವೇದನೀಯ ಕರ್ಮ–ಜೀವನಿಗೆ ಸುಖ–ದುಃಖ ಉಂಟಾಗುವಲ್ಲಿ ಯಾವುದು ಕಾರಣವಿದೆಯೋ ಅದಕ್ಕೆ ವೇದನೀಯಕರ್ಮವೆನ್ನುವರು. ಇದು ಅವ್ಯಾಬಾಧ (ಬಾಧಾ ರಹಿತ) ಗುಣದ ಘಾತಕ. ಇದರ ಅಭಾವದಲ್ಲಿ **ಅವ್ಯಾಬಾಧಗುಣ** ಪ್ರಾಪ್ತಿಯಾಗುತ್ತದೆ. ಇದರಲ್ಲಿ ೨ ಭೇದಗಳಿವೆ: (ತತ್ತ್ವಾರ್ಥಸೂತ್ರ, ೮–೮)

೧) **ಸಾತಾವೇದನೀಯ ಕರ್ಮ**–ಈ ಕರ್ಮದ ಉದಯದಿಂದ ದೇವ ಮುಂತಾದ ಗತಿಗಳಲ್ಲಿ ಶಾರೀರಿಕ ಹಾಗೂ ಮಾನಸಿಕ ಸುಖಪ್ರಾಪ್ತಿ ಉಂಟಾಗುವುದು.

೨) ಅಸಾತಾವೇದನೀಯ ಕರ್ಮ–ಈ ಕರ್ಮದ ಉದಯದಿಂದ ನರಕ ಮುಂತಾದ ಗತಿಗಳಲ್ಲಿ ಅನೇಕ ತರಹದ ದುಃಖಗಳು ಉಂಟಾಗುತ್ತವೆ.

(೨) ಆಯುಕರ್ಮ–ಜೀವನನ್ನು ನರಕ, ತಿರ್ಯಂಚ, ದೇವ ಮತ್ತು ಮನುಷ್ಯರ ಯಾವುದೇ ಶರೀರಗಳಲ್ಲಿ ತಡೆದು ನಿಲ್ಲಿಸುವುದಕ್ಕೆ ಆಯುಕರ್ಮವೆನ್ನುತ್ತಾರೆ. ಈ ಕರ್ಮದಿಂದ ಶರೀರಗಳಲ್ಲಿ ಆತ್ಮನಿರುವ ಕಾಲಾವಧಿಯು ನಿಶ್ಚಿತಗೊಳ್ಳುವುದು. ಇದರ ಅಭಾವದಲ್ಲಿ **ಅವಗಾಹನತ್ವಗುಣ** (ಅಂದರೆ ಸತ್ವದಲ್ಲಿ ಅನ್ಯ ಅನಂತ ಗುಣಗಳಿಗೆ ಸ್ಥಾನ ಕೊಡುವ ಶಕ್ತಿ) ಪ್ರಾಪ್ತಿಯಾಗುತ್ತದೆ. ಇದರಲ್ಲಿ ೪ ಭೇದಗಳಿವೆ:

೧) ನರಕಾಯು ಕರ್ಮ

೨) ತಿರ್ಯಂಚಾಯು ಕರ್ಮ

೩) ಮನುಷ್ಯಾಯು ಕರ್ಮ

(೩) ನಾಮಕರ್ಮ–ಯಾವುದರ ಉದಯದಿಂದ ಶರೀರಾದಿಗಳ ರಚನೆಯಾಗಿದೆಯೋ ಅದಕ್ಕೆ ನಾಮಕರ್ಮ ಎನ್ನುವರು. ಇದರ ಅಭಾವದಲ್ಲಿ **ಸೂಕ್ಷ್ಮತ್ವಗುಣ** ಪ್ರಾಪ್ತಿಯಾಗುತ್ತದೆ. (ನಾಮಕರ್ಮದಲ್ಲಿ ೯೩ ಭೇದಗಳಿದ್ದು, ವಿವರಗಳಿಗೆ ಸಂಖ್ಯಾ ವಿಶಿಷ್ಟಪದ ಸಂಖ್ಯೆ **ತೊಂಬತ್ತಮೂರು (೯೩)–ನಾಮಕರ್ಮಗಳು** ವಿಭಾಗದಲ್ಲಿ ನೋಡಿ) (ತತ್ತ್ವಾರ್ಥಸೂತ್ರ, ೮–೧೧)

(೪) ಗೋತ್ರಕರ್ಮ–ಜೀವವು ಯಾವುದರ ಉದಯದಿಂದ ಉಚ್ಚ ಮತ್ತು ನೀಚ ಕುಲಗಳಲ್ಲಿ ಜನ್ಮ ತಾಳುವುದೋ ಅದಕ್ಕೆ ಗೋತ್ರಕರ್ಮ ಎನ್ನುವರು. ಇದರ ಅಭಾವದಲ್ಲಿ **ಅಗುರುಲಘುತ್ವಗುಣ** ಪ್ರಾಪ್ತಿಯಾಗುತ್ತದೆ. ಇದರಲ್ಲಿ ೨ ಭೇದಗಳಿವೆ: (ತತ್ತ್ವಾರ್ಥಸೂತ್ರ, ೮–೧೨)

೧) ಉಚ್ಚಗೋತ್ರ–ಈ ಕರ್ಮದ ಉದಯದಿಂದ ಉಚ್ಚಕುಲ ಉಂಟಾಗುತ್ತದೆ.

೨) ನೀಚಗೋತ್ರ–ಈ ಕರ್ಮದ ಉದಯದಿಂದ ನೀಚಕುಲ ಉಂಟಾಗುತ್ತದೆ.

೪) ದೇವಾಯು ಕರ್ಮ

ಕ್ರಮವಾಗಿ **ಘಾತಿ** ಮತ್ತು **ಅಘಾತಿ** ಕರ್ಮಗಳೆರಡೂ **ಜೀವದ ಅನುಜೀವಿ ಗುಣ** ಮತ್ತು **ಪ್ರತಿಜೀವಿ ಗುಣ**ದ ಘಾತ ಮಾಡುತ್ತವೆ.

ಎಂಟು (೮)–ಸಿದ್ಧಪರಮೇಷ್ಠಿಗಳ (ನಿಕಲ ಪರಮಾತ್ಮರ) ಮೂಲಗುಣಗಳು:

ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ: (ಪದ್ಯ/ವಚನ ಸಂ. ೧–೨ (೧), ೧೦–೧೪ (ವ))

ಎಂಟು ಕರ್ಮ ಕಳಂಕ (ಕಿಲ್ಬಿಷ) ಗಳನ್ನು ನಾಶಪಡಿಸಿದ ನಂತರ ಸಿದ್ಧ ಪರಮೇಷ್ಠಿಗಳಿಗೆ (ಆತ್ಮನಿಗೆ) ಈ ಎಂಟು ಗುಣಗಳು ಪ್ರಾಪ್ತವಾಗುತ್ತವೆ.

ಸಮ್ಮತ್ತಣಾಣ ದಂಸಣ ವೀರಿಯ ಸುಹುಮಂ ತಹೇವ (ಮತ್ತು) ಅವಗಹಣಂ । ಅಗುರುಲಹುಮವ್ವಾವಾಹಂ (ಅಗುರುಲಹುಂ+ಅವ್ವಾವಾಹಂ) ಅಠ್ಠಗುಣಾ ಹೋಂತಿ ಸಿದ್ಧಾಣಂ ॥ (ಪ್ರಾಕೃತ ಲಘುಸಿದ್ಧ ಭಕ್ತಿ)

೧. ಅನಂತ ಚತುಷ್ಟಯಗಳು–ನಾಲ್ಕು ಘಾತಿ ಕರ್ಮಗಳ ಅಭಾವದಿಂದ ಪ್ರಾಪ್ತಿ:

(ಅಭಾವದ ವಿರುದ್ಧ ಪದ ಸದ್ಭಾವ)

(೧) ಸಮ್ಯಕ್ತ್ವ (ಸಮ್ಮತ್ತ)–ಅನಂತ ಸುಖ–ಸಮ್ಯಕ್ತ್ವ ಎಂದರೆ ಆತ್ಮನ ಯಾಥಾರ್ಥವಾದ ಶ್ರದ್ಧೆ–ಪ್ರತೀತಿ.

(೨) ಜ್ಞಾನ (ಣಾಣ)–ಅನಂತ ಜ್ಞಾನ

(೩) ದರ್ಶನ (ದಂಸಣ)–ಅನಂತ ದರ್ಶನ (ಅನಂತ ದೃಷ್ಟಿಶಕ್ತಿ)

(೪) ವೀರ್ಯ (ವೀರಿಯ)–ಅನಂತ ವೀರ್ಯ (ಅನಂತ ಶಕ್ತಿ)–ಇದು ತನ್ನ ಅನಂತ ಶಕ್ತಿಯೊಂದಿಗೆ ಉಳಿದ ಏಳೂ ಗುಣಗಳಿಗೆ ಅನಂತ ಶಕ್ತಿಯನ್ನು ಒದಗಿಸುತ್ತದೆ.

೨. ನಾಲ್ಕು ಅಘಾತಿ ಕರ್ಮಗಳ ಅಭಾವದಿಂದ ಪ್ರಾಪ್ತಿ:

(೫) ಸೂಕ್ಷ್ಮತ್ವ (ಸುಹುಮಂ)–ಜೀವಾತ್ಮನಿಗೆ ಪರವಸ್ತುವಿನಿಂದ ಅಡೆತಡೆಯಿಲ್ಲದೆ ಗಮನಮಾಡುವ ಶಕ್ತಿ ಇರುವುದೇ ಸೂಕ್ಷ್ಮತ್ವ.

(೬) ಅಗುರುಲಘುತ್ವ (ಅಗುರುಲಹುಂ)–ಅಗುರು ಮತ್ತು ಅಲಘು ಎಂದರೆ ಭಾರವೂ ಇರದ ಹಗುರವೂ ಇರದ ಗುಣಕ್ಕೆ ಅಗುರುಲಘುತ್ವ ಎನ್ನುವರು.

(೭) ಅವಗಾಹನತ್ವ (ಅವಗಹಣಂ)–ಅನೇಕ ಸಿದ್ಧಾತ್ಮಗಳು ಹಾಲು–ನೀರಿನಂತೆ ಸೇರಿಕೊಂಡರೂ ಅವು ಸ್ವತಂತ್ರವಾಗಿರುತ್ತವೆ.

(೮) ಅವ್ಯಾಬಾಧಂ (ಅವ್ವಾವಾಹಂ)–ಅವ್ಯಾಹತವಾಗಿ ಬಾಧಾರಹಿತವಾದ ಸುಖಗುಣ ಪ್ರಾಪ್ತಿಗೆ ಅವ್ಯಾಬಾಧಂ ಎನ್ನುವರು.

ಹದಿನಾಲ್ಕು (೧೪)–ಗುಣಸ್ಥಾನಗಳು

ಹದಿನಾಲ್ಕು (೧೪) ಗುಣಸ್ಥಾನಗಳು: (ಪದ್ಯ/ವಚನ ಸಂ. ೧–೮೦ (ವ), ೧೦–೧೪ (ವ), ೧೫–೧೯)
ಮೋಹ ಮತ್ತು ಯೋಗ (ಮನ, ವಚನ, ಕಾಯ) ಗಳ ಪ್ರವೃತ್ತಿಯಿಂದ ಜೀವಾತ್ಮನ ಅಂತರಂಗ ಪರಿಣಾಮಗಳಲ್ಲಿ ಆಗುವ ಏರಿಳಿತಗಳಿಗೆ ಅಥವಾ ತಾರತಮ್ಯ ರೂಪವಾದ ಅವಸ್ಥೆಗೆ ಗುಣಸ್ಥಾನವೆನ್ನುವರು.
ಜೀವಾತ್ಮಗಳ ಪರಿಣಾಮ ಅನಂತವಾಗಿವೆ. ಜೀವಗಳ ಉತ್ಕೃಷ್ಟ ಪರಿಣಾಮಗಳಿಂದ ಹಿಡಿದು ಉತ್ಕೃಷ್ಟ ವಿಶುದ್ಧ ಪರಿಣಾಮಗಳವರೆಗೆ ಹಾಗು ಅದಕ್ಕೂ ಮೇಲೆ ಜಘನ್ಯ ವೀತರಾಗ ಪರಿಣಾಮಗಳಿಂದ ಉತ್ಕೃಷ್ಟ ವೀತರಾಗ ಪರಿಣಾಮಗಳವರೆಗಿನ ಅನಂತ ವೃದ್ಧಿಸ್ಥಾನಗಳ ಕ್ರಮವನ್ನು ಸಂಕ್ಷಿಪ್ತವಾಗಿ ಹೇಳಲು ಯೋಗ್ಯವಾಗುವಂತೆ ಅವುಗಳನ್ನು ೧೪ ಶ್ರೇಣಿಗಳಲ್ಲಿ ವಿಭಜನೆ ಮಾಡಲಾಗಿದೆ. ಆ ಶ್ರೇಣಿಗಳೇ ಇಲ್ಲಿ '**ಹದಿನಾಲ್ಕು ಗುಣಸ್ಥಾನ**'ಗಳೆಂದು ಹೆಸರು ಪಡೆದಿವೆ.
ಜೀವಾತ್ಮನು ಯಾವಾಗ ತನ್ನ ಅಂತರಂಗ ಪುರುಷಾರ್ಥದ ಮೂಲಕ ತನ್ನ ವಿಶುದ್ಧ ಪರಿಣಾಮಗಳನ್ನು ಹೆಚ್ಚಿಸುತ್ತಾ ಸಾಗಿದಂತೆ, ಅದು ಕರ್ಮಗಳ ಉಪಶಮ, ಕ್ಷಯೋಪಶಮ ಹಾಗೂ ಕ್ಷಯ ಮಾಡುತ್ತಾ ಕೊನೆಯಲ್ಲಿ ಸಂಪೂರ್ಣ ಕರ್ಮಗಳ ಕ್ಷಯ ಮಾಡಿದಾಗ ಅದಕ್ಕೆ ಮೋಕ್ಷ ಪ್ರಾಪ್ತವಾಗುತ್ತದೆ.

೧. ಮಿಥ್ಯಾತ್ವ–ಮೋಹನೀಯ ಕರ್ಮದ ಭೇದವೆನಿಸಿರುವ ಮಿಥ್ಯಾತ್ವ ಪ್ರಕೃತಿಯ ಉದಯದಿಂದ ಜೀವಾತ್ಮನಲ್ಲುಂಟಾಗುವ ಅತತ್ತ್ವ ಶ್ರದ್ಧಾನರೂಪವಾದ ಭಾವಕ್ಕೆ ಮಿಥ್ಯಾತ್ವ ಎನ್ನುವರು. ಜೀವಾತ್ಮನ ಇಂತಹ ಮಿಥ್ಯಾ ಭಾವಗಳ ಅವಸ್ಥೆಗೆ ಮಿಥ್ಯಾತ್ವ ಗುಣಸ್ಥಾನವೆಂದು ಹೇಳುವರು.

೨. ಸಾಸಾದನ–ಸಮ್ಯಕ್ತ್ವದ ಬಗ್ಗೆ ಅನಾದರ ಹೊಂದಿರುವುದು (ಸಮ್ಯಕ್ತ್ವದಿಂದ ಪತನವಾಗಿ ಮಿಥ್ಯಾತ್ವದತ್ತ ಸಾಗುವುದು)

೩. ಮಿಶ್ರ–ಸಮ್ಯಕ್ತ್ವ ಮತ್ತು ಮಿಥ್ಯಾತ್ವದ ಮಿಶ್ರಾವಸ್ಥೆ

೪. ಅವಿರತ ಸಮ್ಯಗ್‌ದೃಷ್ಟಿ (ಸಪ್ತತತ್ತ್ವ, ದೇವ–ಗುರು–ಶಾಸ್ತ್ರಗಳ ಯಥಾರ್ಥವಾದ ಶ್ರದ್ಧೆಯನ್ನು ಹೊಂದು–ವುದು, ಸ್ವ–ಪರ ಭೇದಜ್ಞಾನವನ್ನು ಹೊಂದುವುದು)–ವ್ರತ ರಹಿತನಾಗಿರುವುದು

೫. ದೇಶ ವಿರತ–ಅಣುವ್ರತ ಧಾರಣೆ ಮಾಡಿರುವ ಅವಸ್ಥೆ. ಇದಕ್ಕೆ ಏಕದೇಶ ವಿರತಿ, ಸಂಯತಾಸಂಯತ, ವಿರತಾವಿರತ ಎಂಬ ಪರ್ಯಾಯನಾಮಗಳು ಇವೆ.

೬. ಪ್ರಮತ್ತ ವಿರತ (ಸಕಲ ವಿರತಿ)–ಪ್ರಮಾದ ಸಹಿತ ಅವಸ್ಥೆ

೭. ಅಪ್ರಮತ್ತ ವಿರತ–ಪ್ರಮಾದ ರಹಿತ ಅವಸ್ಥೆ (ಅಧಃಪ್ರವೃತ್ತಿಕರಣ ಪರಿಣಾಮ)
ಇದರಲ್ಲಿ ಎರಡು ವಿಭಾಗಗಳಿರುತ್ತವೆ:

(೧) ನಿರತಿಶಯ (ಸ್ವಸ್ಥಾನ) ಅಪ್ರಮತ್ತ ವಿರತ–ಧರ್ಮಧ್ಯಾನ ನಿರತಿಶಯ ಉಳ್ಳದ್ದು. ನಿರತಿಶಯ ಅಪ್ರಮತ್ತ ವಿರತ ಎಂದರೆ ಸಾಧಾರಣ ಧರ್ಮಧ್ಯಾನ.

(೨) ಸಾತಿಶಯ ಅಪ್ರಮತ್ತ ವಿರತ–ಶುಕ್ಲಧ್ಯಾನ ಸಾತಿಶಯ ಉಳ್ಳದ್ದು

(ಅ) ಉಪಶಮ ಶ್ರೇಣಿ ಅವಸ್ಥೆ–'ಉಪಶಮ' ಎಂದರೆ 'ಕರ್ಮಗಳನ್ನು ಉಪಶಾಂತ'ಗೊಳಿಸುವುದು. ಇಲ್ಲಿ ಕರ್ಮಗಳು ನಾಶ ಹೊಂದುವುದಿಲ್ಲ.

(ಆ) ಕ್ಷಪಕ ಶ್ರೇಣಿ ಅವಸ್ಥೆ–ಕ್ಷಪಕ ಎಂದರೆ 'ಕರ್ಮಗಳನ್ನು ನಾಶ ಮಾಡುವವ' ಎಂದು ಅರ್ಥ

೮. ಅಪೂರ್ವ ಕರಣ–ಪೂರ್ವದಲ್ಲಿ (ಈ ಹಿಂದೆ) ಆಗದೇ ಇರುವ ನವೀನ ಪರಿಣಾಮ.

೯. ಅನಿವೃತ್ತಿ ಕರಣ–ಕರ್ಮನಾಶ ಮಾಡುವ ಪರಿಣಾಮಗಳಿಂದ ನಿವೃತ್ತಿಯನ್ನು ಹೊಂದದೇ ಇರುವ ಅವಸ್ಥೆ

೧೦. ಸೂಕ್ಷ್ಮ ಸಾಂಪರಾಯ–ಸೂಕ್ಷ್ಮ ಲೋಭವನ್ನು ನಾಶಮಾಡುವ ಅವಸ್ಥೆ.

೧೧. ಉಪಶಾಂತ ಮೋಹ–ಕರ್ಮಗಳ ಉಪಶಮವಾದ ಅವಸ್ಥೆ.

೧೨. ಕ್ಷೀಣ ಮೋಹ–ಮೋಹವನ್ನು ಸಂಪೂರ್ಣವಾಗಿ ನಾಶಗೊಳಿಸಿರುವ ಅವಸ್ಥೆ.

೧೩. ಸಯೋಗ ಕೇವಲೀ–ಯೋಗ ಸಹಿತ (ಮನೋಯೋಗ, ವಚನಯೋಗ ಮತ್ತು ಕಾಯಯೋಗ) ಕೇವಲಿ. (ಅರಹಂತ ಅವಸ್ಥೆ)

೧೪. ಅಯೋಗ ಕೇವಲೀ–ಮುಕ್ತಿಯನ್ನು ಹೊಂದುವ ಪೂರ್ವ ಅವಸ್ಥೆ (ಯೋಗ ನಿಗ್ರಹ ಸ್ಥಿತಿ).

೧೪ ನೆಯ ಗುಣಸ್ಥಾನವನ್ನು ದಾಟಿದ ನಂತರ ಆತ್ಮನು ಮುಕ್ತಿಯನ್ನು ಹೊಂದಿ ಸಿದ್ಧಾವಸ್ಥೆಯಲ್ಲಿರುತ್ತಾನೆ.

೪ ನೆಯ ಗುಣಸ್ಥಾನದಲ್ಲಿರುವ **ಉತ್ತಮಆತ್ಮಗಳು** ಮೋಹನೀಯ ಕರ್ಮಗಳನ್ನು ನಷ್ಟಮಾಡುವ ಗುರಿ ಹೊಂದಿರುವುದರಿಂದ ೫ ಮತ್ತು ೬ನೆಯ ಗುಣಸ್ಥಾನಗಳಿಗೆ ಹೋಗದೆ ನೇರವಾಗಿ ೭ ನೆಯ ಗುಣಸ್ಥಾನಕ್ಕೆ ನೆಗೆಯುತ್ತವೆ. ೪ ನೆಯ ಗುಣಸ್ಥಾನದಲ್ಲಿರುವ **ಜಘನ್ಯ** ಮತ್ತು **ಮಧ್ಯಮಆತ್ಮ**ಗಳಲ್ಲಿ ಅಪ್ರತ್ಯಾಖ್ಯಾನ ಕಷಾಯಗಳು ಪ್ರತ್ಯಾಖ್ಯಾನ ರೂಪವಾದರೆ ಆಗ ಜೀವಾತ್ಮನು ೫ ನೆಯ ಗುಣಸ್ಥಾನಕ್ಕೆ ಏರುತ್ತಾನೆ. ಹಾಗಲ್ಲದೇ ಮೋಹನೀಯ ಕರ್ಮಗಳನ್ನು ನಷ್ಟಗೊಳಿಸುವ ಗುರಿ ಹೊಂದಿರುವುದರಿಂದ ೫ ಮತ್ತು ೬ ನೆಯ ಗುಣಸ್ಥಾನಗಳನ್ನು ಬಿಟ್ಟು ೭ ನೆಯ ಗುಣಸ್ಥಾನಕ್ಕೆ ನೆಗೆಯುತ್ತಾನೆ.

ಹದಿನೆಂಟು (೧೮)–ಅಷ್ಟಾದಶ ದೋಷಗಳು/ಆಪ್ತನ ಲಕ್ಷಣಗಳು

ಪೆಣೆದೆಂಟುಂ ಕಿಲ್ಬಿಷಂಗಳ್ ಕಿಡೆ: (ಪದ್ಯ/ವಚನ ಸಂ. ೧–೨)

ಪಂಪನು ೧ ನೆಯ ಆಶ್ವಾಸದ ಎರಡನೆಯ ಪದ್ಯದಲ್ಲಿ ಸಿದ್ಧಪರಮೇಷ್ಠಿಗಳನ್ನು ಸ್ತುತಿಸಿರುವನು. ಜೀವಾತ್ಮರು ಮೋಕ್ಷ ಹೊಂದುವ ಸಮಯದಲ್ಲಿ ಅವರಿಗೆ ಅಂಟಿಕೊಂಡಿರುವ ೮ ಕರ್ಮಮಲಗಳನ್ನು [೪ ಘಾತಿಕರ್ಮಗಳು ಮತ್ತು ೪ ಅಘಾತಿ ಕರ್ಮಗಳು] (**ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ**) ನಿರ್ಜರೆಗೊಳಿಸಿ, ಎಂಟು ಮೂಲಗುಣಗಳನ್ನು ಹೊಂದಿ (**ಕಿಡದಗುಣಂ ಪೊರ್ದೆ**) ಸಿದ್ಧಪದವಿಯನ್ನು ಪಡೆಯುವರು. ಒಂದು ಸಂಪಾದಿತ ಕೃತಿಯಲ್ಲಿ **'ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ'** ಪದಕ್ಕೆ ಬದಲಾಗಿ **'ಪದಿನೆಂಟುಂ ಕಿಲ್ಬಿಷಂಗಳ್ಕಿಡೆ'** ಎಂದಿರುತ್ತದೆ. ಇದು ದೋಷಯುಕ್ತ ಪಾಠ. ಮೂಲ ಕೃತಿಯಲ್ಲಿರುವ **'ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ'** ಎನ್ನುವುದೇ ಶಾಸ್ತ್ರೋಕ್ತವಾದದ್ದು. '**ಕಿಲ್ಬಿಷಂಗಳ್**' ಎಂದರೆ '**ಕರ್ಮಮಲಗಳು**' ಎಂದರ್ಥ. **ಹದಿನೆಂಟು** ಎನ್ನುವುದು '**ದೋಷ**'ಗಳಿಗೆ ಸಂಬಂಧಿತವಾಗಿದ್ದು, '**ಹದಿನೆಂಟು ದೋಷಗಳಿಂದ ರಹಿತರು**' ಎಂದರೆ '**ಅರಿಹಂತರು**' ಎಂದು ಅರ್ಥ. ಇದು ಮೊದಲನೆಯ ಪದ್ಯದಲ್ಲಿ ಸ್ತುತಿಸಿರುವ ಅರಿಹಂತರ ಲಕ್ಷಣಗಳಿಗೆ ಸಂಬಂಧಿಸಿದುದಾಗಿದೆ.

ಅರಿಹಂತಪರಮೇಷ್ಠಿಗಳ ಲಕ್ಷಣ: ಈ ಕೆಳಗೆ ವಿವರಿಸಿರುವ ೧೮ ದೋಷಗಳಿಂದ ರಹಿತರು.

(ರತ್ನಕರಂಡಕ ಶ್ರಾವಕಾಚಾರ–ದರ್ಶನಾಧಿಕಾರ, ೧–೬ ನೆಯ ಶ್ಲೋಕ) (ನಿಯಮಸಾರ, ಜೀವ ಅಧಿಕಾರ, ೧–೬)
(ಪದ್ಯ/ವಚನ ಸಂ. ೧–೧, ೩–೩೬, ೫–೫೪)

೧. ಕ್ಷುಧಾ–ಹಸಿವು

೨. ತೃಷಾ (ಪಿಪಾಸಾ)–ನೀರಡಿಕೆ

೩. ಜರಾ–ಮುಪ್ಪು

೪. ಆತಂಕ–ಬೇನೆ

೫. ಜನ್ಮ–ಕರ್ಮೋದಯದಿಂದ ಚತುರ್ಗತಿಗಳಲ್ಲಿ ಜನಿಸುವುದು

೬. ಅಂತಕ–ಸಾವು

೭. ಭಯ–ಅಂಜಿಕೆ

ಭಯವು ೭ ಪ್ರಕಾರವಾಗಿವೆ:

(೧) ಇಹಲೋಕದ ಭೀತಿ

(೨) ಪರಲೋಕದ ಭೀತಿ

(೩) ಮೃತ್ಯು ಭೀತಿ

(೪) ವೇದನೆಯ ಭೀತಿ

(೫) ಅರಕ್ಷಾ ಭೀತಿ
(೬) ಅಗುಪ್ತಿ ಭೀತಿ
(೭) ಅಕಸ್ಮಾತ್ ಭೀತಿ

೮. ಸ್ಮಯ (ಮದ)–ಸ್ಮಯಗಳು ೮ ವಿಧ**:** (ರತ್ನಕರಂಡಕ ಶ್ರಾವಕಾಚಾರ, ೧–೨೫)

(೧) ಜ್ಞಾನಮದ
(೨) ಪೂಜಾಮದ
(೩) ಜಾತಿಮದ
(೪) ಕುಲಮದ
(೫) ಬಲಮದ
(೬) ಐಶ್ವರ್ಯಮದ
(೭) ತಪೋಮದ
(೮) ಶರೀರಮದ

೯. ರಾಗ
೧೦. ದ್ವೇಷ
೧೧. ಮೋಹ
೧೨. ಚಿಂತೆ
೧೩. ರತಿ
೧೪. ನಿದ್ರೆ
೧೫. ವಿಸ್ಮಯ
೧೬. ವಿಷಾದ
೧೭. ಸ್ವೇದ–ಬೆವರು
೧೮. ಖೇದ–ವ್ಯಾಕುಲತೆ

ಇಪ್ಪತ್ತನಾಲ್ಕು (೨೪) ತೀರ್ಥಂಕರರ ಮತ್ತು ಗಣಧರರ ಶುಭನಾಮಾವಳಿಗಳು

ಪರಮಜಿನಮಾಲೆ ವರಗಣಧರಮಾಲೆ: (ಪದ್ಯ/ವಚನ ಸಂ. ೧–೧೫)
ವಿವರಗಳಿಗೆ ಸಂಖ್ಯಾ ವಿಶಿಷ್ಟಪದ ಸಂಖ್ಯೆ **ಅರವತ್ತಮೂರು (೬೩)–ತ್ರಿಷಷ್ಟಿ ಶಲಾಕಾಪುರುಷರು ಮತ್ತು ಅವರ ಶುಭನಾಮಾವಳಿಗಳು** ನೋಡಿ

ಇಪ್ಪತ್ತೈದು (೨೫)–ಉಪಾಧ್ಯಾಯ ಪರಮೇಷ್ಠಿಗಳ ಮೂಲಗುಣಗಳು

ಉಪಾಧ್ಯಾಯ ಪರಮೇಷ್ಠಿಗಳ ೨೫ ಮೂಲಗುಣಗಳು: (ಪದ್ಯ/ವಚನ ಸಂ. ೧–೪)
ಸಾಧು ಪರಮೇಷ್ಠಿಗಳ (ಮುನಿಗಳ) ೨೮ ಮೂಲಗುಣಗಳ ನಿರ್ದೋಷ ಪಾಲನೆಯೊಂದಿಗೆ **ದ್ವಾದಶಾಂಗ** ಮತ್ತು **ಚತುರ್ದಶ ಪೂರ್ವ**ಗಳ ಜ್ಞಾನ ಹೊಂದಿರುವವರು.
ಜೈನಾಗಮವನ್ನು '**ದ್ವಾದಶಾಂಗ ಶ್ರುತ**'ವೆಂದು ಕರೆಯುವುದು ರೂಢಿ. ಹನ್ನೆರಡನೆಯ ಅಂಗವಾದ '**ದೃಷ್ಟಿವಾದಾಂಗ**'ದಲ್ಲಿ ೫ ಭೇದಗಳಿರುತ್ತವೆ, ಅಂದರೆ ಅದು ಐದು ಪ್ರಕಾರದ ಅರ್ಥಾಧಿಕಾರಗಳನ್ನು ಹೊಂದಿರುತ್ತದೆ. ಅದರಲ್ಲಿ ಬಹಳ ಮುಖ್ಯವಾದದ್ದು, ನಾಲ್ಕನೆಯ ಭೇದ ಅಥವಾ ಅರ್ಥಾಧಿಕಾರವಾದ '**ಪೂರ್ವಗತ**' ಅಥವಾ '**ಚತುರ್ದಶಪೂರ್ವ**'ಗಳಾಗಿರುತ್ತವೆ. ಆದುದರಿಂದ ಪ್ರಾಯೋಗಿಕವಾಗಿ '**ದೃಷ್ಟಿವಾದಾಂಗ**'ವನ್ನು ಹೊರತುಪಡಿಸಿ, '**ಹನ್ನೊಂದು ಅಂಗ**'ಗಳೆಂದು ಹೇಳುತ್ತಾರೆ. ಅದರಂತೆ ಪಂಪನೂ ಹನ್ನೊಂದು ಅಂಗಗಳೆಂದು ಹೇಳುತ್ತಾನೆ. **ಶ್ರುತಜ್ಞಾನ**ವು ಎರಡು ಪ್ರಕಾರವಾಗಿದೆ.
ಶ್ರುತಜ್ಞಾನದ ಭೇದಗಳು: (ಪದ್ಯ/ವಚನ ಸಂ. ೧–೩೯)

೧. ಅಂಗ ಪ್ರವಿಷ್ಟ ಅಥವಾ ಅಂಗಶ್ರುತ–ಗಣಧರರಿಂದ ರಚಿತವಾದ ಆಚಾರಾಂಗಾದಿ ಭೇದದಿಂದ ೧೧ ಅಂಗ ಮತ್ತು ೧೪ ಪೂರ್ವಗಳ ಶ್ರುತ.

೨. ಅಂಗ ಬಾಹ್ಯ–ಸಾಮಾಯಿಕಾದಿ ಭೇದದಿಂದ ಹದಿನಾಲ್ಕು ಪ್ರಕಾರವಾಗಿದೆ ಅಥವಾ ಅನೇಕ ಭೇದವಾಗಿದೆ

೧. ಪನ್ನೊಂದು ಅಂಗಮಂ (ಅಂಗ ಪ್ರವಿಷ್ಟ, ಅಂಗಶ್ರುತ) (ಪದ್ಯ/ವಚನ ಸಂ. ೩–೪೦ (ವ), ೧೪–೧೫(ವ))
(ಶ್ರುತಭಕ್ತಿ ೭, ಮತ್ತು ೮ ನೆಯ ಶ್ಲೋಕಗಳು; ಪ್ರಾಕೃತ ಶ್ರುತಭಕ್ತಿ ೨, ಮತ್ತು ೩ ನೆಯ ಗಾಥೆಗಳು)

(೧) ಆಚಾರಾಂಗ

(೨) ಸೂತ್ರಕೃತಾಂಗ

(೩) ಸ್ಥಾನಾಂಗ

(೪) ಸಮವಾಯಾಂಗ

(೫) ವ್ಯಾಖ್ಯಾಪ್ರಜ್ಞಪ್ತ್ಯಂಗ

(೬) ಜ್ಞಾತೃಧರ್ಮ ಕಥಾಂಗ

(೭) ಉಪಾಸಕಾಧ್ಯಯನಾಂಗ

(೮) ಅಂತಕೃದ್ದಶಾಂಗ

(೯) ಅನುತ್ತರೋಪಾದಿಕ ದಶಾಂಗ

(೧೦) ಪ್ರಶ್ನವ್ಯಾಕರಣಾಂಗ

(೧೧) ವಿಪಾಕ ಸೂತ್ರಾಂಗ

ಇವು ಹನ್ನೊಂದು ಅಂಗಗಳು

(೧೨) ದೃಷ್ಟಿವಾದಾಂಗ

ಪಂಪನು ದೃಷ್ಟಿವಾದಾಂಗದ ಹೆಸರನ್ನು ತನ್ನ ವಚನ (ಗದ್ಯ) ದಲ್ಲಿ ಉಲ್ಲೇಖಿಸಿರುವುದಿಲ್ಲ. ಆದರೆ ಅದರ ಐದು ವಿಧಗಳನ್ನು ಹೆಸರಿಸಿರುತ್ತಾನೆ.

ದೃಷ್ಟಿವಾದಾಂಗದ ೫ ವಿಧಗಳು (ಪ್ರಾಕೃತ ಶ್ರುತಭಕ್ತಿ ೪ ನೆಯ ಗಾಥೆ)

೧) ಎರಡು ಪರಿಕರ್ಮಂ (ಪದ್ಯ/ವಚನ ಸಂ. ೩–೪೦ (ವ))

ಗಣಿತ ಸೂತ್ರಗಳನ್ನು ಪ್ರತಿಪಾದಿಸುವ ಭಾಗಕ್ಕೆ **ಪರಿಕರ್ಮ** ಎನ್ನುವರು.

(ಪಂಪನು 'ಎರಡು ಪರಿಕರ್ಮಂ' ಎಂದು ಹೇಳುತ್ತಾನೆ. ಅದರಂತೆ ಕ.ಸಾ.ಪ. ನಿಘಂಟುವಿನಲ್ಲಿ ಈ ಕೆಳಗಿನ ಎರಡು ಭೇದಗಳನ್ನು ನೀಡಿರುತ್ತದೆ.

(೧) ಲಿಪಿ ವಿಜ್ಞಾನ

(೨) ಗಣಿತ

ಆದರೆ ಜೈನಾಚಾರ್ಯರುಗಳು ಹೆಸರಿಸಿರುವ 'ಪರಿಕರ್ಮ'ದ ಐದು ಉಪಭೇದಗಳು:

(೧) ಚಂದ್ರ ಪ್ರಜ್ಞಪ್ತಿ

(೨) ಸೂರ್ಯ ಪ್ರಜ್ಞಪ್ತಿ

(೩) ಜಂಬೂದ್ವೀಪ ಪ್ರಜ್ಞಪ್ತಿ

(೪) ಸಾಗರ ಪ್ರಜ್ಞಪ್ತಿ

(೫) ವ್ಯಾಖ್ಯಾ ಪ್ರಜ್ಞಪ್ತಿ

೨) ಎಂಬತ್ತೆಂಟು ಸೂತ್ರಂಗಳುಮಂ (ಪದ್ಯ/ವಚನ ಸಂ. ೩–೪೦ (ವ))

'**ಸೂತ್ರ**'ವೆಂಬುದು ಎಂಬತ್ತೆಂಟು ಲಕ್ಷ (೮೮,೦೦,೦೦೦) ಪದಗಳಿಂದ ಆದ ಎಂಬತ್ತೆಂಟು ಅಧಿಕಾರ (ವಿಷಯಗಳ ಆಧ್ಯಾಯ) ಗಳಿಂದ ಜೀವನು ಅಬಂಧಕನೂ, ಅಲೇಪಕನೂ, ಅಕರ್ತನೂ, ಭೋಕ್ತನೂ, ನಿರ್ಗುಣನೂ, ಸರ್ವಗತನೂ, ಅಣುಮಾತ್ರನೂ, ಕ್ಷಣಿಕನೂ, ಅಕ್ಷಣಿಕನೂ, ಶೂನ್ಯನೂ, ಭೂತಾತ್ಮನೂ ಎಂದು ಹೇಳುವ ದರ್ಶನಗಳನ್ನು ಹೇಳುತ್ತದೆ. ಈ ಸೂತ್ರಗಳು ೮೮ ಅಧಿಕಾರಗಳಿಂದ ಕೂಡಿರುವುದ ರಿಂದ, ಇವನ್ನು ಪಂಪನು '**ಎಂಬತ್ತೆಂಟು ಸೂತ್ರಂಗಳುಮಂ**' ಎಂದು ನಿರ್ದೇಶಿಸಿರುತ್ತಾನೆ.

೩) ಪ್ರಥಮಾನುಯೋಗಂಗಳು (ಪದ್ಯ/ವಚನ ಸಂ. ೩–೪೦ (ವ)) (ರತ್ನಕರಂಡಕ ಶ್ರಾವಕಾಚಾರ, ೨–೪೩)

ಇದು ತ್ರಿಷಷ್ಠಿಶಲಾಕಾಪುರುಷರ ಪುರಾಣವನ್ನು ಹೇಳುತ್ತದೆ.

ಜಿನೋಕ್ತ ಪುರಾಣವು ಹನ್ನೆರಡು (೧೨) ವಿಧವಾಗಿವೆ:

(೧) ತೀರ್ಥಂಕರ ಪುರಾಣ

(೨) ಚಕ್ರವರ್ತಿ ಚರಿತ್ರೆ

(೩) ವಿದ್ಯಾಧರ ವರ್ಣನೆ

(೪) ವಾಸುದೇವಾಖ್ಯಾನ

(೫) ಚಾರಣ ಕೀರ್ತನೆ

(೬) ಪ್ರಜ್ಞಾಶ್ರಮಣ ನಿರೂಪಣೆ

(೭) ಕುರುವಂಶ ಪ್ರಸಂಸೆ

(೮) ಹರಿವಂಶೋದಾಹರಣೆ

(೯) ಇಕ್ಷ್ವಾಕುವಂಶ ಪ್ರಕಟಣೆ

(೧೦) ಕಾಶ್ಯಪವಂಶ ಪ್ರಕಾಶನ

(೧೧) ವಾದಿಭೇದನ ಪ್ರತಿಪಾದನ

(೧೨) ನಾಥವಂಶ ಪ್ರರೂಪಣೆ

ಉದಾಹರಣೆಗೆ:

(೧) ಶ್ರೀ ಜಿನಸೇನಾಚಾರ್ಯ ವಿರಚಿತ 'ಮಹಾಪುರಾಣ'

(೨) ಶ್ರೀ ಚಾವುಂಡರಾಯ ವಿರಚಿತ 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' (ಚಾವುಂಡರಾಯ ಪುರಾಣ)

(೩) ಮಹಾಕವಿ ಪಂಪ ವಿರಚಿತ 'ಆದಿಪುರಾಣ'

(೪) ಶಿವಕೋಟ್ಯಾಚಾರ್ಯ ವಿರಚಿತ 'ವಡ್ಡಾರಾಧನೆ', ಇತ್ಯಾದಿ

(ಮೇಲೆ ತಿಳಿಸಿರುವ ಗ್ರಂಥಗಳು '**ಪ್ರಥಮಾನುಯೋಗ**'ಕ್ಕೆ ಉದಾಹಣೆಗಳು ಮಾತ್ರ. ಅವು ಉಪಭೇದಗಳಾಗಿರುವುದಿಲ್ಲ)

೪) ಪದಿನಾಲ್ಕು ಪೂರ್ವಂಗಳು (ಪೂರ್ವಗತ) (ಪದ್ಯ/ವಚನ ಸಂ. ೩–೪೦ (ವ), ೧೪–೧೫೯ (ವ))

(ಇವು ಉತ್ಪಾದ, ವ್ಯಯ, ಧ್ರುವತ್ವ ಮೊದಲಾದವುಗಳನ್ನು ವರ್ಣಿಸುತ್ತದೆ)

(ಶ್ರುತಭಕ್ತಿ ೧೦, ೧೧, ೧೨, ೧೩ ಮತ್ತು ೧೪ ನೆಯ ಶ್ಲೋಕಗಳು)

(೧) ಉತ್ಪಾದ ಪೂರ್ವ

(೨) ಅಗ್ರಾಯಣೀಯ ಪೂರ್ವ

(೩) ವೀರ್ಯಾನು(ಪ್ರ)ವಾದ ಪೂರ್ವ

(೪) ಆಸ್ತಿನಾಸ್ತಿ ಪ್ರವಾದ ಪೂರ್ವ

(೫) ಜ್ಞಾನಪ್ರವಾದ ಪೂರ್ವ

(೬) ಸತ್ಯಪ್ರವಾದ ಪೂರ್ವ

(೭) ಆತ್ಮಪ್ರವಾದ ಪೂರ್ವ

(೮) ಕರ್ಮಪ್ರವಾದ ಪೂರ್ವ

(೯) ಪ್ರತ್ಯಾಖ್ಯಾನವಾದ ಪೂರ್ವ

(೧೦) ವಿದ್ಯಾನುವಾದ ಪೂರ್ವ

(೧೧) ಕಲ್ಯಾಣವಾದ ಪೂರ್ವ

(೧೨) ಪ್ರಾಣಾವಾಯ ಪೂರ್ವ

(೧೩) ಕ್ರಿಯಾವಿಶಾಲ ಪೂರ್ವ

(೧೪) ತ್ರಿಲೋಕಬಿಂದುಸಾರ ಪೂರ್ವ

೫) ಐದು (ಅಯ್ದು) ಚೂಳಿಕೆಯೊಂ (ಪದ್ಯ/ವಚನ ಸಂ. ೩–೪೦ (ವ))

ವಿಶೇಷ ವ್ಯಾಖ್ಯಾನ ಅಥವಾ ಉಕ್ತಾನುಕ್ತ ವ್ಯಾಖ್ಯಾನ ಅಥವಾ ಉಕ್ತಾನುಕ್ತ ಸಂಕೀರ್ಣ ವ್ಯಾಖ್ಯಾನಕ್ಕೆ ಚೂಲಿಕೆ ಎಂದು ಹೆಸರು.

(೧) ಜಲಗತಾ ಚೂಳಿಕಾ–ಇದರಲ್ಲಿ ಜಲಗಮನ, ಅಗ್ನಿಸ್ತಂಭನ, ಅಗ್ನಿಭಕ್ಷಣ, ಅಗ್ನಿಯ ಆಸನ, ಅಗ್ನಿ ಪ್ರವೇಶ ಆದಿಯ ಮಂತ್ರ, ತಂತ್ರ, ತಪಶ್ಚರ್ಯಾದಿಯ ವರ್ಣನೆ ಇದೆ.

(೨) ಸ್ಥಲಗತಾ ಚೂಳಿಕಾ–ಇದರಲ್ಲಿ ಮೇರುಪರ್ವತ, ಕುಲಾಚಲ ಪರ್ವತಗಳು, ಭೂಮಿ ಇತ್ಯಾದಿಗಳಲ್ಲಿ ಪ್ರವೇಶಮಾಡುವುದು, ಶೀಘ್ರಗಮನಾದಿಯ ಕಾರಣವಾದ ಮಂತ್ರ, ತಂತ್ರ ಮೊದಲಾದವುಗಳ ವರ್ಣನೆ ಇದೆ.

(೩) ಮಾಯಾಗತಾ ಚೂಳಿಕಾ–ಇದರಲ್ಲಿ ಇಂದ್ರಜಾಲವಿದ್ಯಾಸಂಬಂಧಿಯ ಮಂತ್ರವಾದಿಯ ವರ್ಣನೆಯು ಇದೆ.

(೪) ಆಕಾಶಗತಾ ಚೂಳಿಕಾ–ಇದರಲ್ಲಿ ಆಕಾಶಗಮನಕ್ಕೆ ಕಾರಣವಾದ ಮಂತ್ರ, ತಂತ್ರ ಇತ್ಯಾದಿಗಳ ವರ್ಣನೆ ಇದೆ.

(೫) ರೂಪಗತಾ ಚೂಳಿಕಾ–ಇದರಲ್ಲಿ ಸಿಂಹ ಮೊದಲಾದ ಅನೇಕ ಪ್ರಕಾರದ ರೂಪಧಾರಣೆ ಮಾಡಲು ಕಾರಣಭೂತವಾದ ಮಂತ್ರಾದಿಯ ವರ್ಣನೆಯು ಇದೆ.

ಹನ್ನೆರಡು ಅಂಗಗಳು ಮತ್ತು ಹದಿನಾಲ್ಕು ಪೂರ್ವಗಳ ಒಟ್ಟು ಸಂಖ್ಯೆ ೨೬ ಆಗುವುದರಿಂದ, ಇವುಗಳ ಜ್ಞಾನ ಹೊಂದಿರುವ ಉಪಾಧ್ಯಾಯರ ಗುಣಗಳು ೨೬ ಆಗುತ್ತದೆ.

ಕೆಲವು ಗ್ರಂಥಗಳಲ್ಲಿ ಅಂಗಗಳ ಸಂಖ್ಯೆಯನ್ನು ೧೧ ಎಂದು ಪರಿಗಣಿಸಿ ಉಪಾಧ್ಯಾಯರ ಗುಣಗಳನ್ನು ೨೫ ಎಂದೂ ಹೇಳುವುದಿದೆ. ಈ ೨೫ ಗುಣಗಳು ಉಪಾಧ್ಯಾಯರಿಗೆ ಮುಖ್ಯವಾಗಿವೆ.

ಇವುಗಳೊಂದಿಗೆ ಮುನಿಗಳ ೨೮ ಮೂಲಗುಣಗಳ ನಿರ್ದೂಷ ಪಾಲನೆ ಮಾಡುವವರಾಗಿರುತ್ತಾರೆ. ಇವು ಉಪಾಧ್ಯಾಯರಿಗೆ ಗೌಣಗುಣಗಳಾಗಿರುತ್ತವೆ.

(ವಿವರಗಳಿಗೆ ಸಂಖ್ಯಾವಿಶಿಷ್ಟ ಪದಗಳ ಪಟ್ಟಿಯಲ್ಲಿ ವಿಶಿಷ್ಟ ಸಂಖ್ಯೆ '**ಇಪ್ಪತ್ತೆಂಟು (೨೮)–ಸಾಧುಪರಮೇಷ್ಠಿಗಳ ಮೂಲಗುಣ ಗಳು**' ಅನ್ನು ನೋಡಿರಿ.)

೨. ಅಂಗ ಬಾಹ್ಯ ಶ್ರುತಗಳು: ಸಾಮಾಯಿಕಾದಿ ಭೇದದಿಂದ ಹದಿನಾಲ್ಕು ಪ್ರಕಾರವಾಗಿದೆ ಅಥವಾ ಅನೇಕ ಭೇದವಾಗಿದೆ. ಇವುಗಳನ್ನು **ಪ್ರಕೀರ್ಣಕ**ಗಳೆಂದು ಕರೆಯುತ್ತಾರೆ.

(ಅಂಗಬಾಹ್ಯವೆಂದರೆ ಗಣಧರ ಶಿಷ್ಯ–ಪ್ರಶಿಷ್ಯರ ಜ್ಞಾನ ಅಂಗಗಳ ಆಧಾರದಿಂದ ರಚಿತವಾದುವು)

(೧) ಸಾಮಾಯಿಕ–ಸರ್ವ ಪ್ರಾಣಿಗಳಲ್ಲಿ ಸಮಭಾವನೆ, ಇಂದ್ರಿಯಸಂಯಮ, ಪ್ರಾಣಿಸಂಯಮ, ಶುಭಭಾವನೆಗಳು ಮತ್ತು ಆರ್ತ–ರೌದ್ರಧ್ಯಾನಗಳ ಪರಿತ್ಯಾಗ ಮಾಡಿ ಆತ್ಮ ಸ್ವರೂಪದಲ್ಲಿ ತಲ್ಲೀನನಾಗುವುದು ಸಾಮಾಯಿಕವು.

(೨) ಚತುರ್ವಿಂಶತಿಸ್ತವ (ಸ್ತುತಿ)–ವೃಷಭಾದಿ ಜಿನೇಂದ್ರರ ಮತ್ತು ಅವರ ಕೃತ್ರಿಮ ಮತ್ತು ಅಕೃತ್ರಿಮ ಪ್ರತಿಮೆಗಳ ಹಾಗೂ ಚೈತ್ಯಾಲಯಗಳ ದ್ರವ್ಯ, ಕ್ಷೇತ್ರ, ಕಾಲ, ಭಾವ ಮತ್ತು ಪ್ರಮಾಣಾದಿಯ ವರ್ಣನೆಯನ್ನು ಮಾಡುತ್ತದೆ.

(೩) ವಂದನಾ–ದ್ರವ್ಯಾರ್ಥಿಕ ನಯವನ್ನು ಅವಲಂಬಿಸಿ ತೀರ್ಥಂಕರರ ವಂದನೆಯ ವಿಧಿಯನ್ನು ಪ್ರರೂಪಣೆ ಮಾಡುತ್ತದೆ. ಅಥವಾ ಏಕತೀರ್ಥಂಕರರ ಅವಲಂಬನೆಯಿಂದ ಚೈತ್ಯ–ಚೈತ್ಯಾಲಯಾದಿಯ ಸ್ತುತಿಯು ವಂದನೆಯು.

(೪) ಪ್ರತಿಕ್ರಮಣ–ದೈವಸಿಕ, ರಾತ್ರಿಕ, ಐರಿಯಾಪಥಿಕ, ಪಾಕ್ಷಿಕ, ಚಾತುರ್ಮಾಸಿಕ, ಸಾಂವತ್ಸರಿಕ ಮತ್ತು ಉತ್ತಮಾರ್ಥ ಪ್ರತಿಕ್ರಮಣ ಈ ಪ್ರಕಾರವಾಗಿ ಏಳು ಪ್ರತಿಕ್ರಮಣಗಳ ಭರತಾದಿ ಕ್ಷೇತ್ರಗಳು, ದುಃಷಮಾದಿ ಕಾಲಗಳು ಮತ್ತು ಆರು ಸಂಹನನಗಳು ಇವುಗಳಿಂದ ಕೂಡಿದ ಪುರುಷರನ್ನು ವಿವಕ್ಷೆಮಾಡಿ ಪ್ರರೂಪಣೆ ಮಾಡುತ್ತದೆ.

(೫) ವೈನಯಿಕ–ಭರತ, ಐರಾವತ ಮತ್ತು ವಿದೇಹದಲ್ಲಿ ಸಾಧಿಸಲು ಯೋಗ್ಯವಾದ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಗಳನ್ನು ಆಶ್ರಯಿಸಿ ಜ್ಞಾನವಿನಯ, ದರ್ಶನವಿನಯ, ಚಾರಿತ್ರವಿನಯ, ತಪೋವಿನಯ ಏವಂ ಔಪಚಾರಿಕ ವಿನಯ ಇವುಗಳ ವರ್ಣನೆಯನ್ನು ಮಾಡುತ್ತದೆ.

(೬) ಕೃತಿಕರ್ಮ–ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಗಣಚಿಂತಕ (ಸಾಧುಸಂಘದ ಕಾರ್ಯಗಳನ್ನು ವಿಚಾರಿಸುವವರು) ಮತ್ತು ಗಣವೃಷಭ ಮೊದಲಾದವರು ಮಾಡಲ್ಪಡುವ ಪೂಜಾವಿಧಾನವನ್ನು ವರ್ಣಿಸುತ್ತದೆ. ದೀಕ್ಷೆಯನ್ನು ತೆಗೆದುಕೊಳ್ಳುವ ಕ್ರಿಯಾವಿಧಾನ ಮೊದಲಾದುವುಗಳನ್ನು ವರ್ಣಿಸುವ ಪ್ರಕೀರ್ಣಕಕ್ಕೆ ಕೃತಿಕರ್ಮವೆಂದು ಹೆಸರು.

(೭) ದಶವೈಕಾಲಿಕ–ಇದು ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವ ಇವುಗಳನ್ನು ಆಶ್ರಯಿಸಿ ಮುನಿಗಳ ಆಚಾರ ವಿಷಯಕವಾದ ವಿಧಿಯನ್ನೂ, ಗೋಚಾರವಿಧಿಯನ್ನೂ ವರ್ಣಿಸುತ್ತದೆ.

(೮) ಉತ್ತರಾಧ್ಯಯನ–ಉದ್ಗಮದೋಷ, ಉತ್ಪಾದನದೋಷ ಮತ್ತು ಏಷಣಾದೋಷ ಇವುಗಳ ಪ್ರಾಯಶ್ಚಿತ್ತದ ವಿಧಿಯನ್ನು ಕಾಲಾದಿಯಿಂದ ವಿಶೇಷಿತವಾಗಿ ಪ್ರರೂಪಣೆಮಾಡುವ ಅನಂಗಶ್ರುತವು ಉತ್ತರಾಧ್ಯಯನವು. ಅಥವಾ ನಾನಾ ಪ್ರಕಾರವಾದ ಉಪಸರ್ಗಗಳನ್ನೂ, ಪರೀಷಹಗಳನ್ನು ಸಹಿಸುವ ವಿಧಾನಗಳನ್ನೂ ಅವುಗಳನ್ನು ಸಹಿಸುವುದರಿಂದಾಗುವ ಫಲಗಳನ್ನೂ ವರ್ಣಿಸುವ ಪ್ರಕೀರ್ಣಕಕ್ಕೆ ಉತ್ತರಾಧ್ಯಯನವೆಂದೂ ಹೆಸರು.

(೯) ಕಲ್ಪ್ಯವ್ಯವಹಾರ–ಸಾಧುಗಳ ಪಿಂಛಿ, ಕಮಂಡಲು, ಕವಲಿ (ಜ್ಞಾನೋಪಕರಣವಿಶೇಷವು) ಮತ್ತು ಪುಸ್ತಕಾದಿಗಳು ಯಾವ ಕಾಲದಲ್ಲಿ ಗ್ರಹಣಮಾಡಲು ಯೋಗ್ಯವಾಗಿವೆಯೋ ಅವುಗಳ ಪ್ರರೂಪಣೆ ಮಾಡುತ್ತದೆ. ಯತಿಗಳ ಯೋಗ್ಯವಾದ ಕಲ್ಪ್ಯ ಆಚರಣೆಯನ್ನೂ, ಅದನ್ನು ಮಾಡಲು ತಪ್ಪಿದರೆ ಪ್ರಾಯಶ್ಚಿತ್ತವನ್ನೂ ವರ್ಣಿಸುವ ಪ್ರಕೀರ್ಣಕಕ್ಕೆ ಕಲ್ಪ್ಯ ವ್ಯವಹಾರವೆಂದು ಹೆಸರು.

(೧೦) ಕಲ್ಪ್ಯಾಕಲ್ಪ್ಯ–ದ್ರವ್ಯ, ಕ್ಷೇತ್ರ, ಕಾಲ, ಭಾವಗಳನ್ನನುಸರಿಸಿ ಗೃಹಸ್ಥರ ಮತ್ತು ಯತಿಗಳ ಯೋಗ್ಯವಾದ ಆಚರಣೆಯನ್ನೂ, ಅಯೋಗ್ಯವಾದ ಆಚರಣೆಯನ್ನೂ ವರ್ಣಿಸುವ ಪ್ರಕೀರ್ಣಕಕ್ಕೆ ಕಲ್ಪ್ಯಾಕಲ್ಪ್ಯವೆಂದು ಹೆಸರು

(೧೧) ಮಹಾಕಲ್ಪ್ಯ–ದೀಕ್ಷಾ, ಶಿಕ್ಷಾ, ಗಣಪೋಷಣೆ, ಆತ್ಮಸಂಸ್ಕಾರ, ಭಾವನಾ, ಉತ್ತಮಾರ್ಥಗಳೆಂಬ ಈ ಆರು ಕಾಲನಿಯಮವುಳ್ಳದ್ದಾದ ಮುನಿಗಳ ಆಚರಣೆಯನ್ನು ವರ್ಣಿಸುವ ಪ್ರಕೀರ್ಣಕಕ್ಕೆ ಮಹಾಕಲ್ಪ್ಯವೆಂದು ಹೆಸರು.

(೧೨) ಪುಂಡರೀಕ–ಭವನವಾಸಿ, ವ್ಯಂತರಿಕ ಮೊದಲಾದ ದೇವತೆಗಳಾಗಿ ಹುಟ್ಟುವುದಕ್ಕೆ ಕಾರಣಗಳಾದ ತಪಸ್ಸು ಮೊದಲಾದವುಗಳನ್ನು ವರ್ಣಿಸುವ ಪ್ರಕೀರ್ಣಕಕ್ಕೆ ಪುಂಡರೀಕವೆಂದು ಹೆಸರು.

(೧೩) ಮಹಾಪುಂಡರೀಕ–ಮಹರ್ದ್ಧಿಕ ದೇವತೆಗಳೂ, ದೇವಿಯರೂ, ಅಪ್ಸರ ಸ್ತ್ರೀಯರೂ ಆಗಿ ಹುಟ್ಟುವುದಕ್ಕೆ ಯಾವ ಕಾರಣಗಳಿರುತ್ತವೆಯೋ ಅವುಗಳನ್ನು ವರ್ಣಿಸುವ ಪ್ರಕೀರ್ಣಕಕ್ಕೆ ಮಹಾಪುಂಡರೀಕವೆಂದು ಹೆಸರು.

(೧೪) ಆಶೀತಿಕ (ನಿಷಿದ್ಧಿಕಾ)–ಮನುಷ್ಯರ ವಯಸ್ಸು, ಶಕ್ತಿ ಮೊದಲಾದುವುಗಳನ್ನು ಅನುಸರಿಸಿ ಸೂಕ್ಷ್ಮ, ಸ್ಥೂಲ ದೋಷಗಳಿಗೆ ಪ್ರಾಯಶ್ಚಿತ್ತವನ್ನು ವರ್ಣಿಸುವ ಪ್ರಕೀರ್ಣಕಕ್ಕೆ ಆಶೀತಿಕವೆಂದು ಹೆಸರು. ಇದರಲ್ಲಿ ಕಾಲವನ್ನು ಆಶ್ರಯಿಸಿ ಪ್ರಾಯಶ್ಚಿತ್ತವಿಧಿಯನ್ನು ಬೇರೆ ಆಚರಣ ವಿಧಿಯನ್ನು ಕೂಡಾ ಪ್ರರೂಪಣೆ ಮಾಡುತ್ತದೆ.

ಇಪ್ಪತ್ತೆಂಟು (೨೮)–ಸಾಧು ಪರಮೇಷ್ಠಿಗಳ ಮೂಲಗುಣಗಳು

ಸಾಧು ಪರಮೇಷ್ಠಿಗಳ ೨೮ ಮೂಲಗುಣಗಳು:

(ಪದ್ಯ/ವಚನ ಸಂ. ೧–೫, ೬–೨೮ (ವ)) (ಮೂಲಾಚಾರ, ಮೂಲಗುಣಾಧಿಕಾರ, ೧–೨, ೩)

(ಐದು ಇಂದ್ರಿಯಗಳ ವಿಷಯ ತ್ಯಾಗಿಗಳಾಗಿ, ಆರಂಭ ಹಾಗು ಪರಿಗ್ರಹ ರಹಿತರಾಗಿ, ಜ್ಞಾನ, ಧ್ಯಾನ ಮತ್ತು ತಪಸ್ಸಿನಲ್ಲಿ ನಿರಂತರ ಉದ್ಯೋಗದಲ್ಲಿ ತೊಡಗಿರುವವರು)

೧. ಪಂಚ ಮಹಾವ್ರತಗಳು: ಯಾವುದು ಮಹಾನ್ ವ್ರತವಿದೆಯೋ ಅದಕ್ಕೆ ಮಹಾವ್ರತವೆನ್ನುತ್ತಾರೆ. ಇಲ್ಲಿ ಮಹಾನ್ ಶಬ್ದದ ಮಹತ್ವದ ಅರ್ಥವನ್ನು ಪ್ರಾಧಾನ್ಯ ಅರ್ಥದಲ್ಲಿ ತೆಗೆದುಕೊಳ್ಳಲಾಗಿದೆ. ವ್ರತ ಶಬ್ದವೂ ಸಹ ಸಾವದ್ಯದಿಂದ ನಿವೃತ್ತಿರೂಪ ಅರ್ಥದಲ್ಲಿ ಮತ್ತು ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುವುದರ ನಿಮಿತ್ತಭೂತ ಆಚರಣದ ಅರ್ಥದಲ್ಲಿದೆ. ಏಕೆಂದರೆ ಇಂತಹ ಆಚರಣೆಯು ಮಹಾನ್ ಪುರುಷರಿಂದ ಅನುಷ್ಠಾನ ಮಾಡಲ್ಪಡುತ್ತದೆ. ಅಥವಾ ಸ್ವತಃ ಮೋಕ್ಷವನ್ನು ಪ್ರಾಪ್ತಮಾಡಿಸುವಂತಹದ್ದಾಗಿರುವುದರಿಂದ ಈ ಮಹಾವ್ರತಗಳು ಮಹಾನ್ ವ್ರತಗಳೆನಿಸುತ್ತವೆ. ಈ ಮಹಾನ್ ವ್ರತಗಳು ಪ್ರಾಣಿಗಳ ಹಿಂಸೆಯ ನಿವೃತ್ತಿಯಲ್ಲಿ ಕಾರಣಭೂತವಾಗಿವೆ. (ಪದ್ಯ/ವಚನ ಸಂ. ೩–೭೬, ೬–೨೭ (ವ))

(೧) ಅಹಿಂಸಾ ಮಹಾವ್ರತ–ಏಕೇಂದ್ರಿಯದಿಂದ ಹಿಡಿದು ಪಂಚೇಂದ್ರಿಯದವರೆಗಿನ (ತ್ರಸ–ಸ್ಥಾವರ–ಷಟ್ಕಾಯ) ಜೀವಿಗಳಿಗೆ ದ್ರವ್ಯಹಿಂಸೆಯನ್ನಾಗಲೀ ಅಥವಾ ಭಾವ ಹಿಂಸೆಯನ್ನಾಗಲೀ ಮಾಡದಿರುವುದು.

(೨) ಸತ್ಯ ಮಹಾವ್ರತ–ಯಾವ ರೀತಿಯ ಸುಳ್ಳನ್ನೂ ಹೇಳದಿರುವುದು

(೩) ಅಚೌರ್ಯ ಮಹಾವ್ರತ–ಪರರ ವಸ್ತುಗಳನ್ನು ತೆಗೆದುಕೊಳ್ಳದಿರುವುದು. ಮನಸ್ಸಿನಲ್ಲಿ ಅನ್ಯರ ವಸ್ತುಗಳನ್ನು ತನ್ನದಾಗಿಸಿಕೊಳ್ಳಬೇಕೆಂಬ ಭಾವನೆ ಸ್ವಲ್ಪವಾದರೂ ಇಲ್ಲದಿರುವುದು.

(೪) ಬ್ರಹ್ಮಚರ್ಯ ಮಹಾವ್ರತ–ಮನ–ವಚನ–ಕಾಯ ಮತ್ತು ಕೃತ, ಕಾರಿತ ಹಾಗೂ ಅನುಮೋದನೆಗಳಿಂದ ಸ್ತ್ರೀಯರ ಅಪೇಕ್ಷೆಯನ್ನು ಮಾಡದಿರುವುದು. ಯಾವಾಗಲೂ ಸ್ತ್ರೀಯರು ಓಡಾಡುವ ಸ್ಥಾನದಿಂದ ದೂರವಿರುವುದು.

(೫) ಅಪರಿಗ್ರಹ ಮಹಾವ್ರತ–ಸಮಸ್ತ ಪರಿಗ್ರಹಗಳಿಂದಲೂ ಸಂಪೂರ್ಣವಾಗಿ ಬಿಡುಗಡೆ ಹೊಂದುವುದು.

(ಈ ಐದು ವ್ರತಗಳನ್ನೂ ಮುನಿಗಳು ಮಹಾವ್ರತದ ರೂಪದಲ್ಲಿ ಆಚರಿಸುತ್ತಾರೆ)

೨. ಪಂಚ ಇಂದ್ರಿಯ ನಿಗ್ರಹ: ಇಂದ್ರ ಅಂದರೆ ಆತ್ಮಲಿಂಗಕ್ಕೆ ಇಂದ್ರಿಯವೆನ್ನುತ್ತಾರೆ. ಅಥವಾ ಇಂದ್ರ ಅಂದರೆ ನಾಮಕರ್ಮದಿಂದ ಉಂಟಾದುದು ಇಂದ್ರಿಯ. ಇದರಲ್ಲಿ ದ್ರವ್ಯೇಂದ್ರಿಯ ಮತ್ತು ಭಾವೇಂದ್ರಿಯವೆಂದು ಎರಡು ವಿಧಗಳಿವೆ. ಚಕ್ಷು ಇಂದ್ರಿಯಾದಿ ಇಂದ್ರಿಯಾವರಣದ ಕ್ಷಯೋಪಶಮದಿಂದ ಉತ್ಪನ್ನವಾದಂತಹ ಶಕ್ತಿಗೆ ಭಾವೇಂದ್ರಿಯವೆಂದೂ, ಮತ್ತು ಅದರ ಉಪಕರಣಕ್ಕೆ ದ್ರವ್ಯೇಂದ್ರಿಯವೆಂದು ಕರೆಯುತ್ತಾರೆ. ಏಕೆಂದರೆ ಲಬ್ಧಿ ಮತ್ತು ಉಪಯೋಗ ಇವು ಭಾವೇಂದ್ರಿಯಗಳಾಗಿವೆ. ಹಾಗೂ ನಿವೃತ್ತಿ ಮತ್ತು ಉಪಕರಣ ಇವು ದ್ರವ್ಯೇಂದ್ರಿಯಗಳಾಗಿವೆ. ಈ ಇಂದ್ರಿಯಗಳ ಅಂದರೆ ಕರ್ಣಾದಿ ಇಂದ್ರಿಯಗಳ ವಿಷಯದಲ್ಲಿ ಪ್ರವೃತ್ತಿ ಮಾಡದಿರುವುದಕ್ಕೆ ರೋಧವೆನ್ನುತ್ತಾರೆ. ಸಮ್ಯಕ್ ಧ್ಯಾನದ ಪ್ರವೇಶದಲ್ಲಿ ಪ್ರವೃತ್ತಿ ಮಾಡುವುದು ಅರ್ಥಾತ್ ಧರ್ಮ–ಶುಕ್ಲಧ್ಯಾನದಲ್ಲಿ ಇಂದ್ರಿಯಗಳನ್ನು ಪ್ರವಿಷ್ಟ ಮಾಡುವುದು ಇದು ಇಂದ್ರಿಯ ನಿರೋಧವಾಗಿದೆ. ಇಂದ್ರಿಯಗಳೂ ಸಹ ಐದೇ ಇವೆ.

(೧) ಸ್ಪರ್ಶನೇಂದ್ರಿಯ ಜಯ–ಸ್ಪರ್ಶದಿಂದುಂಟಾಗುವ ಸುಖವನ್ನು ತ್ಯಾಗಮಾಡುವುದು.

(೨) ರಸನೇಂದ್ರಿಯ ಜಯ–ಆಹಾರ ಸ್ವಾದವನ್ನು ಬಯಸದೇ ನೀರಸ ಆಹಾರವನ್ನು ಶಾಸ್ತ್ರೋಕ್ತ ವಿಧಿಯಿಂದ ಸ್ವೀಕರಿಸುವುದು.

(೩) ಘ್ರಾಣೇಂದ್ರಿಯ ಜಯ–ಸುಗಂಧ, ಪರಿಮಳ ಮೊದಲಾದ ಸುವಾಸನೆಗಳನ್ನು ಅಪೇಕ್ಷಿಸದಿರುವುದು ಮತ್ತು ದುರ್ಗಂಧಗಳಿಗೆ ಜಿಗುಪ್ಸೆ ಪಡದಿರುವುದು.

(೪) ಚಕ್ಷುರಿಂದ್ರಿಯ ಜಯ–ನೋಡುವುದರಲ್ಲಿ ಯಾವುದೇ ವಿಕಾರವನ್ನೂ ಹೊಂದದಿರುವುದು.

(೫) ಶ್ರೋತ್ರೇಂದ್ರಿಯ ಜಯ (ಕರ್ಣೇಂದ್ರಿಯ ಜಯ)–ಕೆಟ್ಟ ಮಾತುಗಳನ್ನೂ, ದೇವ, ಗುರು ಮತ್ತು ಶಾಸ್ತ್ರಗಳ ನಿಂದಾವಚನವನ್ನು ಕೇಳದಿರುವುದು. ಕಿವಿಗಳಿಗೆ ಇಂಪಾದ ಮಧುರವಾದ ಗೀತ–ಮಾತುಗಳನ್ನು ಕೇಳುವ ಇಚ್ಛೆಯನ್ನು ಹೊಂದದಿರುವುದು.

(ಮೇಲಿನ ಐದು **'ಇಂದ್ರಿಯದಮನ'**ಗಳೆನಿಸಿಕೊಳ್ಳುತ್ತವೆ. ಅಂದರೆ ಪಂಚೇದ್ರಿಯಗಳನ್ನು ಗೆದ್ದು ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವುದು)

೩. ಪಂಚ ಸಮಿತಿಗಳು: ಸಮ್ಯಕ್ ಅಯನ ಅರ್ಥಾತ್ ಪ್ರವೃತ್ತಿಗೆ ಸಮಿತಿ ಎನ್ನುತ್ತಾರೆ. **ಸಮ್ಯಕ್** ಅಂದರೆ ಶಾಸ್ತ್ರದಲ್ಲಿ ನಿರೂಪಣ ಮಾಡಿದ ಕ್ರಮದಿಂದ ಗಮನಾದಿ ಕ್ರಿಯೆಗಳಲ್ಲಿ ಪ್ರವೃತ್ತಿ ಮಾಡುವುದು ಸಮಿತಿಯಾಗಿದೆ. ಈ ಸಮಿತಿಗಳು ವ್ರತದ ರಕ್ಷಣೆಗೋಸ್ಕರ ಬೇಲಿಯ ಸ್ವರೂಪವಾಗಿವೆ. (ಪದ್ಯ/ವಚನ ಸಂ. ೬–೨೮)

(೧) **ಈರ್ಯಾ ಸಮಿತಿ**–ಹಗಲಿನಲ್ಲಿ ಗಮನವಿಟ್ಟು ಯಾವ ಜೀವಜಂತುಗಳಿಗೂ ಹಿಂಸೆಯಾಗದಂತೆ ಮುಂದಿನ ನಾಲ್ಕು ಮೊಳ ದಾರಿಯನ್ನು ನೋಡುತ್ತ ನಡೆಯುವುದು.

(೨) **ಭಾಷಾ ಸಮಿತಿ**–ಯಾವ ಜೀವಿಗೂ ಬಾಧೆಯಾಗದಂತೆ ಹಿತಕರವೂ, ಮಿತವೂ, ಪ್ರಿಯವೂ ಮತ್ತು ಪ್ರಾಮಾಣಿಕವೂ ಆದ ಮಾತುಗಳನ್ನಾಡುವುದು.

(೩) **ಏಷಣಾ ಸಮಿತಿ**–ದಿನಕ್ಕೊಮ್ಮೆ ಹಗಲಿನಲ್ಲಿ, ೪೬ ದೋಷಗಳಿಂದ ರಹಿತವಾದ, ೧೪ ಮಲ ಮತ್ತು ೩೨ ಅಂತರಾಯಗಳನ್ನು ದೂರಗೊಳಿಸಿದ ಶುದ್ಧವಾದ ಆಹಾರವನ್ನು ಸ್ವೀಕರಿಸುವುದು.

(೪) **ಆದಾನ ನಿಕ್ಷೇಪಣಾ ಸಮಿತಿ**–ಉಪಕರಣಗಳನ್ನು ತೆಗೆದುಕೊಳ್ಳವಾಗ ಮತ್ತು ಇಡುವಾಗ ಯಾವುದೇ ಜೀವ ಹಿಂಸೆಯಾಗದಂತೆ ಎಚ್ಚರಿಕೆ ವಹಿಸುವುದು.

(೫) **ಉತ್ಸರ್ಗ ಸಮಿತಿ** (ಪ್ರತಿಷ್ಠಾಪನ ಸಮಿತಿ)–ಜೀವಜಂತು ರಹಿತ ಹಾಗೂ ಸ್ವಚ್ಛವಾದ ಭೂಮಿಯಲ್ಲಿ ಮಲ, ಮೂತ್ರ ಹಾಗೂ ಕಫ ಮೊದಲಾದವುಗಳನ್ನು ವಿಸರ್ಜಿಸುವುದು.

(ಮೇಲಿನ ಐದು '**ಪಂಚಸಮಿತಿ**'ಗಳಾಗಿವೆ. ಸಮೀಚೀನವಾದ ಪ್ರವೃತ್ತಿಗೆ ಅಂದರೆ '**ಪಾಪರಹಿತ ಪ್ರವೃತ್ತಿಗೆ ಸಮಿತಿ**' ಗಳೆಂದು ಕರೆಯುತ್ತಾರೆ)

೪. ಷಟ್ ಅವಶ್ಯಕ (ನಿಶ್ಚಯ) ಕ್ರಿಯೆಗಳು: ಅವಶ್ಯಕವಾಗಿ ಮಾಡುವ ಯೋಗ್ಯ ಕ್ರಿಯೆಗಳಿಗೆ ಅವಶ್ಯಕವೆನ್ನುತ್ತಾರೆ. ಇವುಗಳಿಗೆ ನಿಶ್ಚಯ ಕ್ರಿಯೆಗಳೆಂದೂ ಕರೆಯುತ್ತಾರೆ. ಅರ್ಥಾತ್ ಸರ್ವಕರ್ಮಗಳ ನಿರ್ಮೂಲನ ಮಾಡುವುದರಲ್ಲಿ ಸಮರ್ಥ ನಿಯಮ ವಿಶೇಷಕ್ಕೆ **ಅವಶ್ಯಕ**ವೆನ್ನುತ್ತಾರೆ. ಈ ಅವಶ್ಯಕಗಳು ಆರು ಮಾತ್ರವೇ ಇವೆ.

(೧) **ಸಾಮಾಯಿಕ ಕ್ರಿಯೆ**–ಸಮತ್ವದ ಸಾಧನೆ–ಸಮಭಾವದಲ್ಲಿರುವುದು 'ಸಾಮಾಯಿಕ ಕ್ರಿಯೆ' ಎನಿಸುತ್ತದೆ.

(೨) **ಚತುರ್ವಿಂಶತಿ ಸ್ತವನ ಕ್ರಿಯೆ (ಸ್ತುತಿ)**–ಇಪ್ಪತ್ತನಾಲ್ಕು ತೀರ್ಥಂಕರರ ಪ್ರತ್ಯೇಕವಾದ ಗುಣಸ್ತುತಿಯನ್ನು ಮಾಡುವುದು ಸ್ತವನವೆನಿಸುತ್ತದೆ.

(೩) **ವಂದನಾ ಕ್ರಿಯೆ**–ಒಬ್ಬರು ತೀರ್ಥಂಕರರನ್ನು ಸ್ತುತಿಸಿ ನಮಸ್ಕರಿಸುವುದು ವಂದನಾಕ್ರಿಯೆ ಎನಿಸುತ್ತದೆ.

(೪) **ಪ್ರತಿಕ್ರಮಣ ಕ್ರಿಯೆ**–ತನ್ನಿಂದಾದ ದೋಷಗಳನ್ನು ಆತ್ಮಾವಲೋಕನ ಮಾಡಿ ಅವಲೋಕಿಸಿ, 'ನನ್ನ ದೋಷವು ಮಿಥ್ಯೆಯಾಗಲಿ' ಎಂದು ನಿವೇದಿಸಿಕೊಂಡು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಕ್ಕೆ 'ಪ್ರತಿಕ್ರಮಣ'ವೆಂದು ಹೆಸರು.

(೫) **ಪ್ರತ್ಯಾಖ್ಯಾನ ಕ್ರಿಯೆ**–'ಪ್ರತ್ಯಾಖ್ಯಾನ' ಎಂದರೆ 'ತ್ಯಾಗ'ವೆಂದು ಅರ್ಥ. ಸಂಯಮವನ್ನು ನಾಶಗೊಳಿಸುವ ದ್ರವ್ಯ, ಕ್ಷೇತ್ರ ಅಥವ ವಸ್ತುಗಳನ್ನು ಪರಿಮಿತ ಕಾಲದವರೆಗೆ ತ್ಯಜಿಸುವುದಕ್ಕೆ ಪ್ರತ್ಯಾಖ್ಯಾನ ಎಂದು ಹೆಸರು.

(೬) **ಕಾಯೋತ್ಸರ್ಗ ಕ್ರಿಯೆ**–ಶ್ವಾಸೋಚ್ಛ್ವಾಸದ ಮೂಲಕ ಒಂಬತ್ತು ಬಾರಿ ಣಮೋಕಾರವನ್ನು ಸ್ಮರಿಸುವುದು. ಹೀಗೆ ಸ್ಮರಿಸುವಾಗ ಕಾಯದ ಏಕತ್ವ ಮಮತ್ವವನ್ನು ಪೂರ್ಣವಾಗಿ ತ್ಯಜಿಸಿ, ದೇಹವನ್ನು ವಿಸ್ಮರಣೆಗೊಳಿಸುವುದು. ಅಂದರೆ ದೇಹ ಇಲ್ಲದಿರುವ ಸ್ಥಿತಿಯನ್ನು ಅನುಭವಿಸುವುದು.

೫. ಉಳಿದ ಏಳು ಗುಣಗಳು:

(೧) **ಕೇಶಲೋಚನ**–ಕೈಗಳಿಂದಲೇ ತಲೆ, ಗಡ್ಡ ಮತ್ತು ಮೀಸೆಯ ಕೂದಲುಗಳನ್ನು ಕಿತ್ತೊಗೆಯುವುದು.

(೨) **ಅಚೇಲತ್ವ (ನಗ್ನತ್ವ)**–ಯಾರಿಗೆ ವಸ್ತ್ರವಿರುವುದಿಲ್ಲವೋ ಅವರು ಅಚೇಲಕರಾಗಿರುತ್ತಾರೆ. ಅಚೇಲಕರ ಭಾವ ಅಚೇಲಕತ್ವವಾಗಿದೆ ಅಂದರೆ ವಸ್ತ್ರ ಆಭರಣಾದಿಗಳ ಪರಿತ್ಯಾಗವು ಅಚೇಲಕ ವ್ರತವಾಗಿದೆ.

(೩) **ಅಸ್ನಾನ**–ದೇಹದ ಮೇಲೆ ಜಲಸೇಚನ (ನೀರನ್ನು ಸಿಂಪಡಿಸುವಿಕೆ), ಉದ್ವರ್ತನ (ಸುಗಂಧದ್ರವ್ಯ ಲೇಪನ) ಮತ್ತು ಅಭ್ಯಂಗನ (ಎಣ್ಣೆ ಮಜ್ಜನ) ಇವುಗಳನ್ನು ತ್ಯಜಿಸುವುದು ಅಸ್ನಾನವೆನಿಸುತ್ತದೆ.

(೪) **ಕ್ಷಿತಿಶಯನ**–ಜೀವಬಾಧಾ ರಹಿತ, ಅಲ್ಪ ಸಂಸ್ತರ ರಹಿತ (ಅಥವಾ ಅಲ್ಪ ಸಂಸ್ತರಯುಕ್ತ), ಅಸಂಯಮಿಯು ಬಾರದೆ ಇರುವಂತಹ ಪ್ರಚ್ಛನ ಭೂಮಿ, ತೃಣ (ಹುಲ್ಲು), ಫಲಕ (ಮಣೆ), ಪಾಷಾಣ (ಬಂಡೆಗಲ್ಲು) ಇವುಗಳ ಮೇಲೆ ಕಟ್ಟಿಗೆಯಂತೆ ಇಲ್ಲವೆ ಬಿಲ್ಲಿಗೆ ಸಮಾನವಾಗಿ ಒಂದು ಮಗ್ಗುಲಿನ ಮೇಲೆ ಮಾತ್ರ ಮಲಗುವುದು. ಇದು ಕ್ಷಿತಿಶಯನ ಮೂಲಗುಣವಾಗಿದೆ.

(೫) ಅದಂತಧಾವನ–ದಂತಘರ್ಷಣ ಅಥವಾ ಹಲ್ಲುಜ್ಜುವುದು ಎಂದರೆ ಹಲ್ಲಿನ ಮಲವನ್ನು ದೂರಮಾಡುವುದು. ಹಲ್ಲುಗಳನ್ನು ಉಜ್ಜದಿರುವುದು ಅದಂತಘರ್ಷಣ ಅಥವಾ ಅದಂತಧಾವನ ಎನಿಸುತ್ತದೆ. ತಾಂಬೂಲ (ಎಲೆ ಅಡಿಕೆ ಇತ್ಯಾದಿ) ಮತ್ತು ದಂತಕಾಷ್ಠ ಅಂದರೆ ಹಲ್ಲನ್ನು ಉಜ್ಜಲು ಉಪಯೋಗಿಸುವ ಬೇವು ಮೊದಲಾದ ಮರಗಳ ಕಡ್ಡಿ ಅಥವಾ ಬ್ರೆಷ್ ಇತ್ಯಾದಿಗಳನ್ನು ತ್ಯಜಿಸುವುದು ಅದಂತಧಾವನವೆನಿಸುತ್ತದೆ.

(೬) ಸ್ಥಿತಿ ಭೋಜನ (ಪಾಣಿಪಾತ್ರ ಭೋಜನ)–ಪಾದಗಳ ಮಧ್ಯದಲ್ಲಿ ನಾಲ್ಕು ಬೆರಳು ಅಂತರದಿಂದ ನಿಂತು ಕೊಂಡೇ ಕೈಗಳ ಬೊಗಸೆಯಲ್ಲಿ ಆಹಾರವನ್ನು ಸ್ವೀಕರಿಸುವುದು.

(೭) ಏಕ ಭುಕ್ತ–ದಿನಕ್ಕೊಮ್ಮೆ ಮಾತ್ರ ಹಗಲಿನಲ್ಲಿ ಶುದ್ಧವಾದ ಆಹಾರ ಸೇವನೆ ಮಾಡುವುದು.

ಮೂವತ್ತೆರಡು (೩೨)–ಮಧ್ಯಲೋಕದ ಅಸಂಖ್ಯಾತ ದ್ವೀಪ–ಸಮುದ್ರಗಳಲ್ಲಿ, ಮಧ್ಯದಿಂದ ಪ್ರಾರಂಭವಾಗುವ ೧೬ ದ್ವೀಪ–ಸಮುದ್ರಗಳ ಮತ್ತು ಕೊನೆಯ ೧೬ ದ್ವೀಪ–ಸಮುದ್ರಗಳ ಹೆಸರುಗಳು

ಮಧ್ಯಲೋಕದ ಅಸಂಖ್ಯಾತ ದ್ವೀಪ–ಸಮುದ್ರಗಳಲ್ಲಿ ೩೨ ದ್ವೀಪ–ಸಮುದ್ರಗಳ ಹೆಸರುಗಳು:
ಮಧ್ಯಲೋಕದ ನಾಭಿಭಾಗದಿಂದ ಪ್ರಾರಂಭವಾಗುವ ೧೬ ದ್ವೀಪ–ಸಮುದ್ರಗಳ ಹೆಸರುಗಳು:
(ತತ್ತ್ವಾರ್ಥಸೂತ್ರ ೩–೭ ಈ ಸೂತ್ರಕ್ಕೆ ಸರ್ವಾರ್ಥಸಿದ್ಧಿ ಟೀಕೆ ಸಂ. ೩೭೯) (ಪದ್ಯ/ವಚನ ಸಂ. ೧–೪೮, ೭–೮೩)

೧. **ಜಂಬೂ ದ್ವೀಪ**–ಈ ದ್ವೀಪವನ್ನು ಲವಣ ಸಮುದ್ರ ಸುತ್ತುವರಿದಿದೆ
೨. **ಧಾತಕೀಷಂಡ ದ್ವೀಪ**–ಈ ದ್ವೀಪವನ್ನು ಕಾಲೋದ ಸಮುದ್ರ ಸುತ್ತುವರಿದಿದೆ
೩. **ಪುಷ್ಕರವರ ದ್ವೀಪ**–ಈ ದ್ವೀಪವನ್ನು ಪುಷ್ಕರವರ ಸಮುದ್ರ ಸುತ್ತುವರಿದಿದೆ
೪. **ವಾರುಣೀವರ ದ್ವೀಪ**–ಈ ದ್ವೀಪವನ್ನು ವಾರುಣೀವರ ಸಮುದ್ರ ಸುತ್ತುವರಿದಿದೆ
೫. **ಕ್ಷೀರವರ ದ್ವೀಪ**–ಈ ದ್ವೀಪವನ್ನು ಕ್ಷೀರವರ ಸಮುದ್ರ ಸುತ್ತುವರಿದಿದೆ
೬. **ಘೃತವರ ದ್ವೀಪ**–ಈ ದ್ವೀಪವನ್ನು ಘೃತವರ ಸಮುದ್ರ ಸುತ್ತುವರಿದಿದೆ
೭. **ಇಕ್ಷುವರ ದ್ವೀಪ**–ಈ ದ್ವೀಪವನ್ನು ಇಕ್ಷುವರ ಸಮುದ್ರ ಸುತ್ತುವರಿದಿದೆ
೮. **ನಂದೀಶ್ವರ ದ್ವೀಪ**–ಈ ದ್ವೀಪವನ್ನು ನಂದೀಶ್ವರ ಸಮುದ್ರ ಸುತ್ತುವರಿದಿದೆ
೯. **ಆರುಣವರ ದ್ವೀಪ**–ಈ ದ್ವೀಪವನ್ನು ಅರುಣವರ ಸುಮದ್ರ ಸುತ್ತುವರಿದಿದೆ
೧೦. **ಅರುಣಭಾಸವರ ದ್ವೀಪ**–ಈ ದ್ವೀಪವನ್ನು ಅರುಣಭಾಸವರ ಸಮುದ್ರ ಸುತ್ತುವರಿದಿದೆ
೧೧. **ಕುಂಡಲವರ ದ್ವೀಪ**–ಈ ದ್ವೀಪವನ್ನು ಕುಂಡಲವರ ಸಮುದ್ರ ಸುತ್ತುವರಿದಿದೆ
೧೨. **ಶಂಖವರ ದ್ವೀಪ**–ಈ ದ್ವೀಪವನ್ನು ಶಂಖವರ ಸಮುದ್ರ ಸುತ್ತುವರಿದಿದೆ
೧೩. **ರುಚಕವರ ದ್ವೀಪ**–ಈ ದ್ವೀಪವನ್ನು ರುಚಕವರ ಸಮುದ್ರ ಸುತ್ತುವರಿದಿದೆ
೧೪. **ಭುಜಗವರ ದ್ವೀಪ**–ಈ ದ್ವೀಪವನ್ನು ಭುಜಗವರ ಸಮುದ್ರ ಸುತ್ತುವರಿದಿದೆ
೧೫. **ಕುಶವರ ದ್ವೀಪ**–ಈ ದ್ವೀಪವನ್ನು ಕುಶವರ ಸಮುದ್ರ ಸುತ್ತುವರಿದಿದೆ
೧೬. **ಕ್ರೌಂಚವರ ದ್ವೀಪ**–ಈ ದ್ವೀಪವನ್ನು ಕ್ರೌಂಚವರ ಸಮುದ್ರ ಸುತ್ತುವರಿದಿದೆ

ಮೊದಲ ಈ ಮೇಲಿನ ೧೬ ದ್ವೀಪ–ಸಮುದ್ರಗಳ ನಂತರ ಅಸಂಖ್ಯಾತ ದ್ವೀಪ–ಸಮುದ್ರಗಳಿದ್ದು, ಸ್ವಯಂಭೂರಮಣ ಸಮುದ್ರದವರೆಗಿನ ಕೊನೆಯ ೧೬ ದ್ವೀಪ–ಸಮುದ್ರಗಳ ಹೆಸರುಗಳು ಕೆಳಗಿನಂತಿವೆ:

೧. **ಮನಃಶೀಲ ದ್ವೀಪ**–ಈ ದ್ವೀಪವನ್ನು ಮನಃಶೀಲ ಸಮುದ್ರ ಸುತ್ತುವರಿದಿದೆ
೨. **ಹರಿತಾಲ ದ್ವೀಪ**–ಈ ದ್ವೀಪವನ್ನು ಹರಿತಾಲ ಸಮುದ್ರ ಸುತ್ತುವರಿದಿದೆ
೩. **ಸಿಂಧೂರ ದ್ವೀಪ**–ಈ ದ್ವೀಪವನ್ನು ಸಿಂಧೂರ ಸಮುದ್ರ ಸುತ್ತುವರಿದಿದೆ
೪. **ಶ್ಯಾಮಕ ದ್ವೀಪ**–ಈ ದ್ವೀಪವನ್ನು ಶ್ಯಾಮಕ ಸಮುದ್ರ ಸುತ್ತುವರಿದಿದೆ
೫. **ಅಂಜನ ದ್ವೀಪ**–ಈ ದ್ವೀಪವನ್ನು ಅಂಜನ ಸಮುದ್ರ ಸುತ್ತುವರಿದಿದೆ

೬. **ಹಿಂಗುಲ ದ್ವೀಪ**–ಈ ದ್ವೀಪವನ್ನು ಹಿಂಗುಲ ಸಮುದ್ರ ಸುತ್ತುವರಿದಿದೆ
೭. **ರೂಪವರ ದ್ವೀಪ**–ಈ ದ್ವೀಪವನ್ನು ರೂಪವರ ಸಮುದ್ರ ಸುತ್ತುವರಿದಿದೆ
೮. **ಸುವರ್ಣವರ ದ್ವೀಪ**–ಈ ದ್ವೀಪವನ್ನು ಸುವರ್ಣವರ ಸಮುದ್ರ ಸುತ್ತುವರಿದಿದೆ
೯. **ವಜ್ರವರ ದ್ವೀಪ**–ಈ ದ್ವೀಪವನ್ನು ವಜ್ರವರ ಸಮುದ್ರ ಸುತ್ತುವರಿದಿದೆ
೧೦. **ವೈಡೂರ್ಯವರ ದ್ವೀಪ**–ಈ ದ್ವೀಪವನ್ನು ವೈಡೂರ್ಯವರ ಸಮುದ್ರ ಸುತ್ತುವರಿದಿದೆ
೧೧. **ನಾಗವರ ದ್ವೀಪ**–ಈ ದ್ವೀಪವನ್ನು ನಾಗವರ ಸಮುದ್ರ ಸುತ್ತುವರಿದಿದೆ
೧೨. **ಭೂತವರ ದ್ವೀಪ**–ಈ ದ್ವೀಪವನ್ನು ಭೂತವರ ಸಮುದ್ರ ಸುತ್ತುವರಿದಿದೆ
೧೩. **ಯಕ್ಷವರ ದ್ವೀಪ**–ಈ ದ್ವೀಪವನ್ನು ಯಕ್ಷವರ ಸಮುದ್ರ ಸುತ್ತುವರಿದಿದೆ
೧೪. **ದೇವವರ ದ್ವೀಪ**–ಈ ದ್ವೀಪವನ್ನು ದೇವವರ ದ್ವೀಪ ಸುತ್ತುವರಿದಿದೆ
೧೫. **ಇಂದುವರ ದ್ವೀಪ**–ಈ ದ್ವೀಪವನ್ನು ಇಂದುವರ ಸಮುದ್ರ ಸುತ್ತುವರಿದಿದೆ
೧೬. **ಸ್ವಯಂಭೂರಮಣ ದ್ವೀಪ**–ಈ ದ್ವೀಪವನ್ನು ಸ್ವಯಂಭೂರಮಣ ಸಮುದ್ರ ಸುತ್ತುವರಿದಿದ್ದು,

ಹೀಗೆ ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪ–ಸಮುದ್ರಗಳಿದ್ದು, ಇವು ತಿರ್ಯಕ್ ಆಕಾರದಲ್ಲಿವೆ ಅಂದರೆ ವೃತ್ತಾಕಾರವಾಗಿವೆ ಎಂದು ಜೈನಾಗಮ ಗ್ರಂಥಗಳಲ್ಲಿ ವರ್ಣಿತವಾಗಿವೆ.

ಪುಷ್ಕರವರ ದ್ವೀಪದಿಂದ ಹಿಡಿದು ಮುಂದಿನ ಎಲ್ಲಾ ದ್ವೀಪ–ಸಮುದ್ರಗಳ ಹೆಸರು ಸಮಾನವಾಗಿದೆ. (ಜೈನ ತತ್ತ್ವವಿದ್ಯಾ, ಮಧ್ಯಲೋಕ, ಪುಟ ೯೦)

ಮೂವತ್ತಾರು (೩೬)–ಆಚಾರ್ಯ ಪರಮೇಷ್ಠಿಗಳ ಮೂಲಗುಣಗಳು

ಮೂವತ್ತಾಱುಂ ಗುಣಂಗಳ್ತಮಗಮರ್ದಿರೆ: (ಪದ್ಯ/ವಚನ ಸಂ. ೧–೩ (೧))

೧. ಹನ್ನೆರಡು (೧೨) ತಪಗಳು: (ಪದ್ಯ/ವಚನ ಸಂ. ೬–೩೩ (ವ))

'ಇಚ್ಛಾ ನಿರೋಧಃ ತಪಃ' ಎಂದು ಹೇಳುತ್ತಾರೆ. 'ಪ್ರಮಾದ ಮೊದಲಾದವುಗಳನ್ನು ನಷ್ಟಗೊಳಿಸುವುದಕ್ಕೂ, ಅವಶ್ಯಕ ಆತ್ಮಬಲವನ್ನು ಸಂಪಾದಿಸುವುದಕ್ಕೂ, ಅವಶ್ಯವಾದ ಶರೀರ–ಇಂದ್ರಿಯ–ಮನಸ್ಸುಗಳ ನಿಗ್ರಹಕ್ಕೆ ತಪವೆನ್ನಲಾಗುವುದು'.

ತಪದಲ್ಲಿ ಬಾಹ್ಯ ಮತ್ತು ಅಭ್ಯಂತರ ತಪವೆಂದು ಎರಡು ಭೇದಗಳಿವೆ:

೧) ಆರು (೬) ಬಾಹ್ಯ ತಪಗಳು (ಪದ್ಯ/ವಚನ ಸಂ. ೬–೩೦ (ವ), ೬–೩೧ ರಿಂದ ೬–೩೩)

(ತತ್ತ್ವಾರ್ಥ ಸೂತ್ರ, ೯–೧೯) (ಮೂಲಾರಾಧನಾ (ಭಗವತೀ ಆರಾಧನಾ), ೨೧೦–೨೪೦)

ದೇಹದಮನ ಮಾಡುವುದು ಬಾಹ್ಯತಪವೆನಿಸುತ್ತದೆ. 'ಆಧ್ಯಾತ್ಮಿಕ ತಪದ ಪೋಷಣೆಗಾಗಿ ಪರಮ ದುಶ್ಚರವಾದ ಬಾಹ್ಯತಪವನ್ನಾಚರಿಸಲಾಗುತ್ತದೆ' ಎಂದು ಸ್ವಾಮಿ ಸಮಂತಭದ್ರರು ಹೇಳುತ್ತಾರೆ.

(ಸ್ವಯಂಭೂಸ್ತೋತ್ರ–ಶ್ರೀ ಕುಂಥುಜಿನ ಸ್ತವನಮ್–೨)

(೧) ಅನಶನ–ಸಮ್ಯಗ್ದೃಷ್ಟಿ ಜೀವಿಗೆ ಆಹಾರ ತ್ಯಾಗದ ಭಾವವಾದ ಮೇಲೆ ವಿಷಯ–ಕಷಾಯಗಳ ಭಾವವು ದೂರವಾಗಿ ಅಂತರಂಗ ಪರಿಣಾಮಗಳ ಯಾವ ಶುದ್ಧತೆಯಾಗುತ್ತದೆಯೋ, ಅದಕ್ಕೆ ಸಮ್ಯಕ್ ಅನಶನ ತಪವೆನ್ನುತ್ತಾರೆ. ಇದರಲ್ಲಿ ಎರಡು ಪ್ರಕಾರಗಳಿವೆ:

೧) ಸಾಕಾಂಕ್ಷ ಅನಶನತಪ
೨) ನಿರಾಕಾಂಕ್ಷ ಅನಶನತಪ

(೨) ಅವಮೌದರ್ಯ–ಸಮ್ಯಗ್ದೃಷ್ಟಿ ಜೀವಿಯು ರಾಗಭಾವ ದೂರ ಮಾಡುವುದಕ್ಕಾಗಿ ಎಷ್ಟು ಹಸಿವೆಯಾಗುವುದೋ ಅದಕ್ಕಿಂತ ಕಡಿಮೆ ಊಟ ಮಾಡುವುದರ ಭಾವವಾದ ಮೇಲೆ ಯಾವ ಅಂತರಂಗ ಪರಿಣಾಮಗಳ ಶುದ್ಧತೆಯಾಗುತ್ತದೆಯೋ, ಅದನ್ನು ಸಮ್ಯಕ್ ಅವಮೌದರ್ಯ ತಪವೆಂದು ಹೇಳುತ್ತಾರೆ.

(೩) ವೃತ್ತಿಪರಿಸಂಖ್ಯಾನ–ಸಮ್ಯಗ್ದೃಷ್ಟಿ ಜೀವಿಯು ಸಂಯಮದ ಪಾಲನೆಗಾಗಿ ನಿರ್ದೋಷ ಭಿಕ್ಷಾವೃತ್ತಿಗಾಗಿ ಹೋಗುವ ಸಮಯದಲ್ಲಿ ಭೋಜನದ ಪದಾರ್ಥಗಳಲ್ಲಿ ಸಂಖ್ಯಾ ನಿಯಮವನ್ನು

ಮಾಡಿದ ಮೇಲೆ ಯಾವ ಅಂತರಂಗ ಭಾವಶುದ್ಧಿಯಾಗುತ್ತದೋ, ಅದನ್ನು ಸಮ್ಯಕ್ ವೃತ್ತಿಪರಿಸಂಖ್ಯಾನ ತಪವೆಂದು ಹೇಳುತ್ತಾರೆ.

(೪) ರಸಪರಿತ್ಯಾಗ–ಸಮ್ಯಗ್ದೃಷ್ಟಿ ಜೀವಿಯು ಇಂದ್ರಿಯಗಳ ಸಂಬಂಧದ ರಾಗವನ್ನು ನಿಗ್ರಹ ಮಾಡುವುದಕ್ಕಾಗಿ ಸಿಹಿ, ಹುಳಿ, ಉಪ್ಪು, ಕಾರ, ಒಗರು ಮತ್ತು ಕಹಿಗಳುಳ್ಳ ಹಾಲು, ಮೊಸರು, ತುಪ್ಪ, ಎಣ್ಣೆ, ಉಪ್ಪು, ಹುಳಿ ಮೊದಲಾದ ರಸಗಳನ್ನು ಯೋಗ್ಯತಾನುಸಾರ ತ್ಯಾಗ ಮಾಡುವ ಭಾವವಾಗುವುದರಿಂದ ಅಂತರಂಗ ಪರಿಣಾಮಗಳ ಯಾವ ಶುದ್ಧತೆಯಾಗುತ್ತದೆಯೋ ಅದನ್ನು ಸಮ್ಯಕ್ ರಸಪರಿತ್ಯಾಗ ತಪವೆಂದು ಹೇಳುತ್ತಾರೆ.

(೫) ವಿವಿಕ್ತಶಯನಾಸನ–ಸಮ್ಯಗ್ದೃಷ್ಟಿ ಜೀವಿಯು ಸ್ವಾಧ್ಯಾಯ, ಧ್ಯಾನ ಮೊದಲಾದವುಗಳ ಪ್ರಾಪ್ತಿಗಾಗಿ ಯಾವುದೇ ಒಂದು ಏಕಾಂತ ನಿರ್ದೋಷ ಸ್ಥಾನದಲ್ಲಿ (ಸ್ತ್ರೀ, ಪಶು, ನಪುಂಸಕ ಮುಂತಾದವರು ಇಲ್ಲದಿರುವ ಸ್ಥಾನ) ಪ್ರಮಾದರಹಿತವಾಗಿ ಮಲಗುವ, ಕುಳಿತುಕೊಳ್ಳುವ, ಯಾವ ಶುದ್ಧ ಕ್ರಿಯೆ ಇದೆಯೋ ಅದನ್ನು ಸಮ್ಯಕ್ ವಿವಿಕ್ತಶಯ್ಯಾಸನ ತಪವೆಂದು ಹೇಳುತ್ತಾರೆ.

(೬) ಕಾಯಕ್ಲೇಶ–ಸಮ್ಯಗ್ದೃಷ್ಟಿ ಜೀವಿಯು ಶಾರೀರಿಕ ಮಮಕಾರವನ್ನು ಕುಗ್ಗಿಸುವುದಕ್ಕಾಗಿ ಗ್ರೀಷ್ಮ ಋತುವಿನಲ್ಲಿ ಗಿರಿಶಿಖರದ ತುದಿಯಲ್ಲಿ, ವರ್ಷಾಋತುವಿನಲ್ಲಿ ವೃಕ್ಷಮೂಲದಲ್ಲಿ, ಶಿಶಿರ ಋತುವಿನಲ್ಲಿ ಬಯಲು ಪ್ರದೇಶದಲ್ಲಿ ಯೋಗ ಸಾಧನೆ ಮಾಡುವ ಸಮಯದಲ್ಲಿ ಯಾವ ಅಂತರಂಗ ಭಾವಶುದ್ಧಿಯಾಗುತ್ತದೆಯೋ ಅದನ್ನು ಸಮ್ಯಕ್ ಕಾಯಕ್ಲೇಶ ತಪವೆಂದು ಹೇಳುತ್ತಾರೆ. (ಪದ್ಯ/ವಚನ ಸಂ. ೬–೩೦ (ವ), ೬–೩೧ ರಿಂದ ೩೩)

೨) ಆರು (೬) ಅಂತರಂಗ ತಪಗಳು (ಪದ್ಯ/ವಚನ ಸಂ. ೬–೩೩ (ವ)) (ತತ್ತ್ವಾರ್ಥ ಸೂತ್ರ, ೯–೨೦)

ಅಂತರಂಗ ತಪವು ಆತ್ಮ ಶುದ್ಧಿಗೆ ಸಂಬಂಧಿಸಿರುತ್ತದೆ. ಅದು ಜ್ಞಾನ–ಧ್ಯಾನಗಳಿಂದ ಕೂಡಿರುತ್ತದೆ. ಯಾವ ತಪಗಳಿಂದ ಅಂತರಂಗ ಪರಿಣಾಮಗಳ ಶುದ್ಧತೆಯಾಗುತ್ತದೆಯೋ ಅವುಗಳಿಗೆ ಅಂತರಂಗ ತಪಗಳು ಎಂದು ಕರೆಯುತ್ತಾರೆ.

(೭) ಪ್ರಾಯಶ್ಚಿತ್ತ–ಪ್ರಮಾದ ಅಥವಾ ಅಜ್ಞಾನದದಿಂದ ತಗುಲಿದ ದೋಷಗಳ ಶುದ್ಧತೆ ಮಾಡುವುದಕ್ಕಾಗಿ ಪಶ್ಚಾತ್ತಾಪದೊಂದಿಗೆ ದಂಡವನ್ನು ಸ್ವೀಕರಿಸುವುದಕ್ಕೆ ಸಮ್ಯಕ್ ಪ್ರಾಯಶ್ಚಿತ್ತ ತಪವೆಂದು ಹೇಳುತ್ತಾರೆ. ಇದರಲ್ಲಿ ಹತ್ತು ಭೇದಗಳಿವೆ: (ಮೂಲಾಚಾರ, ಪಂಚಾಚಾರ, ೫–೩೬೨)

೧) ಆಲೋಚನಾ
೨) ಪ್ರತಿಕ್ರಮಣ
೩) ತದುಭಯ
೪) ವಿವೇಕ
೫) ವ್ಯುತ್ಸರ್ಗ
೬) ತಪ
೭) ಛೇದ
೮) ಮೂಲ
೯) ಪರಿಹಾರ
೧೦) ಶ್ರದ್ಧಾನ

(೮) ವಿನಯ–ಪೂಜ್ಯ ಪುರುಷರ, ಗುರು, ಹಿರಿಯರ ಯಥಾಯೋಗ್ಯ ಆದರ–ಸನ್ಮಾನ ಮಾಡುವುದನ್ನು ಸಮ್ಯಕ್ ವಿನಯ ತಪವೆಂದು ಹೇಳುತ್ತಾರೆ. ಇದರಲ್ಲಿ ಐದು ಪ್ರಕಾರಗಳಿವೆ:

(ಮೂಲಾಚಾರ, ಪಂಚಾಚಾರ, ೫–೩೬೪)

೧) ದರ್ಶನ ವಿನಯ
೨) ಜ್ಞಾನ ವಿನಯ
೩) ಚಾರಿತ್ರ ವಿನಯ
೪) ತಪೋ ವಿನಯ

೫) ಔಪಚಾರಿಕ

(೯) ವೈಯಾವೃತ್ತ್ಯ–ಪೂಜ್ಯ ಪುರುಷರ, ಗುರು, ಹಿರಿಯರ ಯಥಾಯೋಗ್ಯ ಸೇವೆ ಮಾಡುವುದನ್ನು ಸಮ್ಯಕ್ ವೈಯಾವೃತ್ತ್ಯ ತಪವೆಂದು ಹೇಳುತ್ತಾರೆ. ಇದರಲ್ಲಿ ಐದು ಪ್ರಕಾರಗಳಿವೆ:

(ಮೂಲಾಚಾರ, ಪಂಚಾಚಾರ, ೫–೩೯೩)

೧) ಪರಿವರ್ತನ

೨) ವಾಚನಾ

೩) ಪೃಚ್ಛನಾ

೪) ಅನುಪ್ರೇಕ್ಷಾ

೫) ಧರ್ಮಕಥೆ ಮತ್ತು ಸ್ತುತಿ ಮಂಗಲ ಶ್ರವಣ

(೧೦) ಸ್ವಾಧ್ಯಾಯ–ಸಮ್ಯಕ್ ಜ್ಞಾನ ಪ್ರಾಪ್ತಿಗಾಗಿ, ಆತ್ಮ ಕಲ್ಯಾಣದ ಭಾವನೆಯಿಂದ ನಾಲ್ಕು ಅನುಯೋಗಗಳನ್ನು ಪೂರ್ವಾಪರ ವಿರೋಧವಿಲ್ಲದೆ ಅಧ್ಯಯನ ಮಾಡುವುದು ಸಮ್ಯಗ್ ಸ್ವಾಧ್ಯಾಯ ತಪವೆನಿಸುತ್ತದೆ.

(೧೧) ವ್ಯುತ್ಸರ್ಗ–ಬಾಹ್ಯ ಮತ್ತು ಅಭ್ಯಂತರ ಪರಿಗ್ರಹವಾದ ದೇಹ ಮತ್ತು ಕಷಾಯಗಳನ್ನು ದೂರ ಮಾಡುವ ಪ್ರಯತ್ನ ಮಾಡುವುದು ಸಮ್ಯಕ್ ವ್ಯುತ್ಸರ್ಗ ತಪವೆನಿಸುತ್ತದೆ. ಇದರಲ್ಲಿ ಎರಡು ಪ್ರಕಾರಗಲಿವೆ:

(ಮೂಲಾಚಾರ, ಪಂಚಾಚಾರ, ೫–೪೦೬)

೧) ಬಾಹ್ಯ ಪರಿಗ್ರಹ

೨) ಅಭ್ಯಂತರ ಪರಿಗ್ರಹ

(೧೨) ಧ್ಯಾನ–ಆತ್ಮ ಹಿತದ ಕಾರ್ಯದಲ್ಲಿ, ಚಿತ್ತದ ಚಂಚಲತೆಯನ್ನು ತಡೆದು ಅಥವಾ ತತ್ತ್ವದ ಚಿಂತನೆಯಲ್ಲಿ ತೊಡಗುವುದು. ಇದನ್ನು ಸಮ್ಯಕ್ ಧ್ಯಾನ ತಪವೆಂದ ಹೇಳುತ್ತಾರೆ. ಇದರಲ್ಲಿ ನಾಲ್ಕು ಪ್ರಕಾರಗಳಿವೆ:

(ಮೂಲಾಚಾರ, ಪಂಚಾಚಾರ, ೫–೩೯೪)

೧) ಆರ್ತಧ್ಯಾನ

೨) ರೌದ್ರಧ್ಯಾನ

೩) ಧರ್ಮಧ್ಯಾನ

೪) ಶುಕ್ಲಧ್ಯಾನ

೨. ಆರು (೬) ಅವಶ್ಯಕ ಕ್ರಿಯೆಗಳು:

(೧) ಸಾಮಾಯಿಕ ಕ್ರಿಯೆ–ಸಮತ್ವದ ಸಾಧನೆ–ಸಮಭಾವದಲ್ಲಿರುವುದು **'ಸಾಮಾಯಿಕ ಕ್ರಿಯೆ'** ಎನಿಸುತ್ತದೆ.

(೨) ಚತುರ್ವಿಂಶತಿ ಸ್ತವನ ಕ್ರಿಯೆ (ಸ್ತುತಿ)–ಇಪ್ಪತ್ತನಾಲ್ಕು ತೀರ್ಥಂಕರರ ಪ್ರತ್ಯೇಕವಾಗಿ ಗುಣಸ್ತುತಿಯನ್ನು ಮಾಡುವುದು **'ಸ್ತವನ'** ಎನಿಸುತ್ತದೆ.

(೩) ವಂದನಾ ಕ್ರಿಯೆ–ಒಬ್ಬರು ತೀರ್ಥಂಕರರನ್ನು ಸ್ತುತಿಸಿ ನಮಸ್ಕರಿಸುವುದು **'ವಂದನಾಕ್ರಿಯೆ'** ಎನಿಸುತ್ತದೆ.

(೪) ಪ್ರತಿಕ್ರಮಣ ಕ್ರಿಯೆ–ತನ್ನಿಂದಾದ ದೋಷಗಳನ್ನು ಆತ್ಮಾವಲೋಕನ ಮಾಡಿ ಅವಲೋಕಿಸಿ, **'ನನ್ನ ದೋಷವು ಮಿಥ್ಯೆಯಾಗಲಿ'** ಎಂದು ನಿವೇದಿಸಿಕೊಂಡು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಕ್ಕೆ **'ಪ್ರತಿಕ್ರಮಣ'**ವೆಂದು ಹೆಸರು.

(೫) ಪ್ರತ್ಯಾಖ್ಯಾನ ಕ್ರಿಯೆ–'ಪ್ರತ್ಯಾಖ್ಯಾನ' ಎಂದರೆ **'ತ್ಯಾಗ'**ವೆಂದು ಅರ್ಥ. ಸಂಯಮವನ್ನು ನಾಶಗೊಳಿಸುವ ದ್ರವ್ಯ, ಕ್ಷೇತ್ರ ಅಥವಾ ವಸ್ತುಗಳನ್ನು ಪರಿಮಿತ ಕಾಲದವರೆಗೆ ತ್ಯಜಿಸುವುದಕ್ಕೆ ಪ್ರತ್ಯಾಖ್ಯಾನ ಎಂದು ಹೆಸರು.

(೬) ಕಾಯೋತ್ಸರ್ಗ ಕ್ರಿಯೆ–ಶ್ವಾಸೋಚ್ಛ್ವಾಸದ ಮೂಲಕ ಒಂಬತ್ತು ಬಾರಿ ಣಮೋಕಾರವನ್ನು ಸ್ಮರಿಸುವುದು. ಹೀಗೆ ಸ್ಮರಿಸುವಾಗ ದೇಹವನ್ನು ವಿಸ್ಮರಣೆಗೊಳಿಸುವುದು. ಅಂದರೆ ದೇಹ ಇಲ್ಲದಿರುವ ಸ್ಥಿತಿಯನ್ನು ಅನುಭವಿಸುವುದು.

೩. ಐದು (೫) ಆಚಾರಗಳು: (ಪದ್ಯ/ವಚನ ಸಂ. ೧–೩ (೧)) (ಮೂಲಾಚಾರ, ಪಂಚಾಚಾರ, ೫–೧೯೯)

(೧) **ಜ್ಞಾನಾಚಾರ**–ಜ್ಞಾನಾಭ್ಯಾಸವನ್ನು ನಿತ್ಯ ಆಚರಿಸುವುದಕ್ಕೆ 'ಜ್ಞಾನಾಚಾರ' ಎಂದು ಕರೆಯುತ್ತಾರೆ.

(೨) **ದರ್ಶನಾಚಾರ**–ಶುದ್ಧ ಸಮ್ಯಕ್ತ್ವದ ಆಚರಣೆಗೆ '**ದರ್ಶನಾಚಾರ**' ಎಂದು ಹೆಸರು.

(೩) **ಚಾರಿತ್ರಾಚಾರ**–ಶುದ್ಧ ಸಮ್ಯಕ್ ಚಾರಿತ್ರವನ್ನು ಅಥವಾ ವ್ಯವಹಾರ ನಿಶ್ಚಯ ಚಾರಿತ್ರವನ್ನು ಆಚರಿಸುವುದಕ್ಕೆ '**ಚಾರಿತ್ರಾಚಾರ**' ಎಂದು ಹೆಸರು.

(೪) **ತಪಾಚಾರ**–ಮನವಚನಕಾಯಗಳ ಏಕಾಗ್ರತೆಯನ್ನು ಆಚರಿಸುವುದಕ್ಕೆ 'ತಪಾಚಾರ' ಎಂದು ಹೆಸರು.

(೫) **ವೀರ್ಯಾಚಾರ**–ತನ್ನ ಪೂರ್ಣಶಕ್ತಿಯನ್ನು ಮೋಕ್ಷ ಪುರುಷಾರ್ಥದಲ್ಲಿ ತೊಡಗಿಸುವುದಕ್ಕೆ '**ವೀರ್ಯಾಚಾರ**' ಎಂದು ಹೆಸರು.

೪. ದಶ (೧೦) ಧರ್ಮಗಳು: (ಪದ್ಯ/ವಚನ ಸಂ. ೬–೩೦ (ವ)) (ತತ್ತ್ವಾರ್ಥ ಸೂತ್ರ, ೯–೬)

(೧) **ಉತ್ತಮ ಕ್ಷಮಾ**–ಶಾರೀರಿಕ ಮತ್ತು ಮಾನಸಿಕ ಘಾತ ಮಾಡಿದರೂ ಭಾವದಲ್ಲಿ ಕ್ರೋಧದ ಮಲಿನತೆಯಾಗದಿರುವುದು.

(೨) **ಉತ್ತಮ ಮಾರ್ದವ**–ಗರ್ವಪಡುವ ಸಂದರ್ಭಗಳೊದಗಿದರೂ ಅಂಹಕಾರಪಡದಿರುವುದು.

(೩) **ಉತ್ತಮ ಆರ್ಜವ**–ವಂಚನೆ, ಕುಟಿಲತೆಗಳನ್ನು ಮಾಡದೆ ಸರಳವಾಗಿರುವುದು.

(೪) **ಉತ್ತಮ ಶೌಚ**–ಲೋಭವನ್ನು ಮಾಡದಿರುವುದು ಹಾಗು ದುರಾಶೆಯನ್ನು ಹೊಂದದಿರುವುದು.

(೫) **ಉತ್ತಮ ಸತ್ಯ**–ಧರ್ಮದ ಸತ್ಯತೆಯನ್ನು ಕಂಡು ಹಿಡಿಯುವುದು ಮತ್ತು ಸತ್ಯವಾದ ನಡೆ–ನುಡಿಗಳನ್ನು ಹೊಂದಿರುವುದು.

(೬) **ಉತ್ತಮ ಸಂಯಮ**–ಜೀವದಯೆ ಮತ್ತು ಜೀವರಕ್ಷಣಾ ಭಾವಗಳನ್ನು ಹೊಂದುವುದು ಮತ್ತು ಇಂದ್ರಿಯಗಳ ಇಚ್ಛೆಯನ್ನು ಮಿತಿಯಲ್ಲಿಟ್ಟುಕೊಳ್ಳುವುದು.

(೭) **ಉತ್ತಮ ತಪ**–ಬಾಹ್ಯ–ಅಭ್ಯಂತರ ಹನ್ನೆರಡು ತಪಗಳನ್ನು ಮಾಡುವುದು.

(೮) **ಉತ್ತಮ ತ್ಯಾಗ**–ಸಂಯಮಕ್ಕೆ ಯೋಗ್ಯವಾದ ಜ್ಞಾನಾದಿಗಳ ದಾನ ಮಾಡುವುದು.

(೯) **ಉತ್ತಮ ಆಕಿಂಚನ್ಯ**–'ಇದು ನನ್ನದಲ್ಲ' ಎಂಬ ರೀತಿಯ ಶರೀರಾದಿ ಸಂಸ್ಕಾರಗಳಲ್ಲಿನ ಮಮಕಾರವನ್ನು ಬಿಡುವುದು.

(೧೦) **ಉತ್ತಮ ಬಹ್ಮಚರ್ಯ**–ಬ್ರಹ್ಮವೆಂದರೆ ಆತ್ಮ. ಚರ್ಯವೆಂದರೆ ಆತ್ಮನ ಶುದ್ಧ ಸ್ವಾಭಾವದಲ್ಲಿ ಚರಿಸುವುದು. ಇದು ಉತ್ತಮ ಬ್ರಹ್ಮಚರ್ಯ.

೫. ಮೂರು (೩) ಗುಪ್ತಿಗಳು: (ಪದ್ಯ/ವಚನ ಸಂ. ೬–೨೪ (ವ), ೬–೨೯)

(೧) **ಮನೋಗುಪ್ತಿ**–ಅಶುಭ ಮನೋವ್ಯಾಪಾರವನ್ನು ತಡೆಯುವುದು, ವಸ್ತು ಸ್ವರೂಪವನ್ನು ಚಿಂತಿಸುವುದು.

(೨) **ವಚನಗುಪ್ತಿ**–ಅಶುಭ ವಚನ ವ್ಯಾಪಾರವನ್ನು ತಡೆದು, ಹಿತಮಿತವಾದ ಮಧುರವಾದ ಮಾತನಾಡುವುದು.

(೩) **ಕಾಯಗುಪ್ತಿ**–ಅಶುಭ ಕಾಯ ವ್ಯಾಪಾರವನ್ನು ತಡೆಯುವುದು, ವ್ರತ, ನಿಯಮ, ತ್ಯಾಗ, ತಪಸ್ಸಿನಲ್ಲಿ ಪ್ರವರ್ತಿಸುವುದು.

ನಲವತ್ತಾರು (೪೬)–ತೀರ್ಥಂಕರ ಅರಿಹಂತರ ಮೂಲಗುಣಗಳು

ಗುಣವ್ರಾತಂ–ಅರಿಹಂತರ (ಪರಮ ಜಿನೇಂದ್ರರ, ತೀರ್ಥಂಕರರ, ಸಕಲ ಪರಮಾತ್ಮರ) ಚತುಸ್ತ್ರಿಂಶತ್ ಅತಿಶಯಗಳು (ಗುಣಗಳು): (ಪದ್ಯ/ವಚನ ಸಂಖ್ಯೆ ೧–೧, ೩–೪೦ (ವ), ೬–೨೪ (ವ), ೮–೪ (ವ))

೧. ಜನ್ಮಾತಿಶಯ ಗುಣಗಳು–೧೦ (ತಿಲೋಯಪಣ್ಣತ್ತೀ, ೪–೯೦೫, ೯೦೬, ೯೦೭) (ನಂದೀಶ್ವರಭಕ್ತಿಃ, ೩೮, ೩೯)

(೧) **ಸೌರೂಪ್ಯ**–ಅತ್ಯಂತ ಸುಂದರ ರೂಪ ಇರುತ್ತದೆ.

(೨) **ಸೌರಭ**–ಅತ್ಯಂತ ಸುಗಂಧ ಶರೀರ ಇರುತ್ತದೆ.

(೩) **ನಿಃಸ್ವೇದತ್ವ**–ಬೆವರು ರಹಿತ ಶರೀರ ಇರುತ್ತದೆ.

(೪) **ನಿರ್ಮಲತ್ವ**–ಮಲ–ಮೂತ್ರ ರಹಿತ ಶರೀರ ಇರುತ್ತದೆ.

(೫) **ಪ್ರಿಯಹಿತವಾದಿತ್ವ**–ಹಿತ, ಮಿತ ಮತ್ತು ಮಧುರ ಮಾತುಗಳನ್ನಾಡುವ ಸ್ವಭಾವ ಇರುತ್ತದೆ.

(೬) ಅಪ್ರಮಿತ ವೀರ್ಯತ್ವ–ಅನಂತ ವೀರ್ಯತ್ವ (ಶಕ್ತಿ/ಬಲ) ಇರುತ್ತದೆ.

(೭) ಕ್ಷೀರಗೌರ ರುಧಿರತ್ವ–ದೇಹದಲ್ಲಿರುವ ರಕ್ತ ಹಾಲಿನಂತೆ ಬಿಳಿಯಾಗಿ ಇರುತ್ತದೆ.

(೮) ಸೌಲಕ್ಷಣ್ಯ–ದೇಹವು ೧೦೦೮ ಶುಭ ಲಕ್ಷಣಗಳಿಂದ ಕೂಡಿರುತ್ತದೆ (ಪದ್ಯ/ವಚನ ಸಂ. ೮–೪ (ವ))

(ಅ) ಮಹಾಲಕ್ಷಣಗಳು–೧೦೮ (ಸ್ವಸ್ತಿಕ, ನಂದ್ಯಾವರ್ತಾದಿ ಅಷ್ಟೋತ್ತರಶತ ಮಹಾಲಕ್ಷಣಗಳು–ಇವು ಜಿನಶಿಶು ವಿನ ಎರಡೂ ಚರಣಗಳ ಪದತಲದಲ್ಲಿ ಅಂದರೆ ಅಂಗಾಲಿನಲ್ಲಿ ಇರುತ್ತವೆ.)

(ಆ) ವ್ಯಂಜನ ರಂಜಿತ ಲಕ್ಷಣಗಳು–೯೦೦ (ತಿಲಕ, ಮಸೂರಿಕಾ, ಪ್ರಭೃತಿ ಇತ್ಯಾದಿ ನವಶತ ವ್ಯಂಜನ ರಂಜಿತ ಲಕ್ಷಣಗಳು–ಇವು ಪದತಲದ ಮೇಲಿನ ಸಂಪೂರ್ಣ ದೇಹವನ್ನನುಸರಿಸಿ ಒಂಬೈನೂರು ಲಕ್ಷಣಗಳಿರುತ್ತವೆ.) [ಹುಟ್ಟಿನಿಂದಲೇ ದೇಹದ ಮೇಲೆ ಮೂಡಿರುವ ಕಪ್ಪು, ಬಿಳಿ ಬಣ್ಣದ ಚುಕ್ಕಿಗಳು, ಸುಳಿಗಳು, ಕಾರೆಳ್ಳು ಇತ್ಯಾದಿ **ಮಚ್ಚೆ**ಗಳನ್ನು ವ್ಯಂಜನ ರಂಜಿತ ಲಕ್ಷಣವೆನ್ನುತ್ತಾರೆ.]

(೯) ಸಮಚತುರಸ್ರಸಂಸ್ಥಾನ–ಶರೀರದ ಆಕಾರ ಎಲ್ಲಾ ರೀತಿಯಲ್ಲೂ ಪ್ರಮಾಣಬದ್ಧವಾಗಿ ಮತ್ತು ಸುಂದರವಾಗಿ ಇರುತ್ತದೆ.

(೧೦) ವಜ್ರವೃಷಭ ನಾರಾಚ ಸಂಹನನ–ಶರೀರದ ಅಸ್ಥಿಗಳ ರಚನೆಯು ವಜ್ರದಂತೆ ಶಕ್ತಿಶಾಲಿಯಾಗಿ ಇರುತ್ತದೆ.

೨. ಕೇವಲಜ್ಞಾನಾತಿಶಯ ಗುಣಗಳು–೧೦ (ತಿಲೋಯಪಣ್ಣತ್ತೀ, ೪–೯೦೮ ರಿಂದ ೯೧೫) (ನಂದೀಶ್ವರಭಕ್ತಿಃ, ೪೦, ೪೧)

(೧) ಸುಭಿಕ್ಷತೆ–೧೦೦ ಗಾವುದ (ಸುಮಾರು ೬೦೦ ಮೈಲಿಗಳ) ವರೆಗೆ ಸುಭಿಕ್ಷತೆ ಇರುತ್ತದೆ.

(೨) ಗಗನ ಗಮನ–ಆಕಾಶದಲ್ಲೇ ಸಂಚಾರ ಇರುತ್ತದೆ.

(೩) ಅಪ್ರಾಣಿ ವಧೆ–ಯಾವುದೇ ಜೀವಹಿಂಸೆ ಇರುವುದಿಲ್ಲ.

(೪) ಭುಕ್ತಿ ಅಭಾವ–ಕವಲಾಹಾರ (ಗ್ರಾಸ ರೂಪವಾದ) ಅಹಾರ ಇರುವುದಿಲ್ಲ.

(೫) ಉಪಸರ್ಗ ಅಭಾವ–ದೇವ, ಮನುಷ್ಯ, ತಿರ್ಯಂಚ ಮತ್ತು ಪ್ರಕೃತಿ ಕೃತ ಉಪಸರ್ಗ ಇರುವುದಿಲ್ಲ.

(೬) ಚತುರಾಸ್ಯತ್ವ–ನಾಲ್ಕೂ ದಿಕ್ಕಿನಲ್ಲಿ ಮುಖ ದರ್ಶನವಾಗುತ್ತದೆ.

(೭) ಸರ್ವವಿದ್ಯಾಧಿಪತಿತ್ವ–ಸಮಸ್ತ ವಿದ್ಯೆಗಳ ಸ್ವಾಮಿತ್ವ ಪ್ರಾಪ್ತವಿರುತ್ತದೆ.

(೮) ಅಛಾಯತ್ವ–ನೆರಳು ಇಲ್ಲದ ಶರೀರ ಇರುತ್ತದೆ.

(೯) ಅಪಕ್ಷ್ಮಸ್ಪಂದತ್ವ–ಕಣ್ಣುಗಳ ರೆಪ್ಪೆ ಅಲುಗಾಡದಂತೆ ಇರುತ್ತದೆ. (ಕಣ್ಣುಗಳ ಚಲನೆ ಇಲ್ಲದಿರುವುದು)

(೧೦) ಸಮಪ್ರಸಿದ್ಧ ನಖ ಕೇಶತ್ವ–ಉಗುರು ಮತ್ತು ಕೂದಲು ಬೆಳೆಯದಿರುವುದು ಮತ್ತು ಸವೆದು ಕಡಿಮೆಯಾಗ ದಿರುವುದು.

೩. ದೇವಕೃತಾತಿಶಯ ಗುಣಗಳು–೧೪ (ತಿಲೋಯಪಣ್ಣತ್ತೀ, ೪–೯೧೬ ರಿಂದ ೯೨೩) (ನಂದೀಶ್ವರಭಕ್ತಿಃ, ೪೨, ೪೩)

(೧) ಸರ್ವಾರ್ಧಮಾಗಧಿಯಾ ಭಾಷಾತಿಶಯ–ಸರ್ವ ಭಾಷಾಮಯವಾದ ದಿವ್ಯಧ್ವನಿ (೧೮ ಮಹಾಭಾಷೆಗಳು, ೭೦೦ ಲಘುಭಾಷೆಗಳು) ವ್ಯವಸ್ಥೆ.

(೨) ಸರ್ವಮೈತ್ರಿ ಗುಣಾತಿಶಯ–ಎಲ್ಲಾ ಜೀವಿಗಳಲ್ಲಿಯೂ ಪರಸ್ಪರ ಮೈತ್ರಿಭಾವ ಇರುವುದು.

(೩) ಸರ್ವಋತು ಫಲಪುಷ್ಪ ಶೋಭಿತ ವೃಕ್ಷಾತಿಶಯ–ಸರ್ವ ಋತುಗಳಲ್ಲಾಗುವ ಫಲ, ಗುಚ್ಛ, ಪ್ರವಾಲ ಮತ್ತು ಪುಷ್ಪ ಇವುಗಳಿಂದ ಶೋಭಿಸುತ್ತಿರುವ ಗಿಡಮರಬಳ್ಳಿಗಳ ಇರುವಿಕೆ.

(೪) ದರ್ಪಣ ಸಮ ನಿರ್ಮಲ ಭೂಮ್ಯತಿಶಯ–ಭೂಮಿಯು ದರ್ಪಣತಲದಂತೆಯೂ, ರತ್ನಮಯವೂ, ಮನೋಜ್ಞ ವಾಗಿಯೂ ಇರುವುದು.

(೫) ಮಂದ ಸುಗಂಧಿತ ಪವನ ಸಂಚಾರಾತಿಶಯ–ಗಾಳಿಯು ಭಗವಂತನ ವಿಹಾರವನ್ನು ಅನುಸರಿಸಿ ಹಿಂದಿನಿಂದ ಶೀತಲವೂ, ಮಂದವೂ, ಸುಗಂಧವೂ ಆಗಿ ಬೀಸುವುದು.

(೬) ಸರ್ವಜೀವ ಪರಮಾನಂದೋತ್ಪಾದಕ ಅತಿಶಯ–ಭಗವಂತನ ಸನ್ನಿಧಾನದಲ್ಲಿ ಸರ್ವಜೀವಿಗಳಿಗೆ ಪರಮಾ ನಂದ ಉಂಟಾಗುವುದು.

(೭) ನಿಷ್ಕಂಟಕ ಯೋಜನ ಭೂಭಾಗಾತಿಶಯ–ಪವನಕುಮಾರನು ಒಂದು ಯೋಜನದವರೆಗೆ ಭೂಭಾಗವನ್ನು ಕಲ್ಲು, ಮುಳ್ಳು, ತೃಣ, ಕೀಟ, ಹರಳುಗಳು ಇಲ್ಲದಂತೆ ಸ್ವಚ್ಛ ಮಾಡುವುದು.

(೮) ಗಂಧೋದಕ ವೃಷ್ಟಿ ಅತಿಶಯ–ದೇವೇಂದ್ರನ ಆಜ್ಞೆಯಂತೆ ಸ್ತನಿತ (ಮೇಘ) ಕುಮಾರರು ಪರಿಮಳವಾದ ಗಂಧೋದಕ ವೃಷ್ಟಿಯನ್ನು ಸುರಿಸುವುದು.

(೯) ಪದತಲ ಸ್ವರ್ಣಕಮಲದ ರಚನಾತಿಶಯ–ತೀರ್ಥಂಕರರು ವಿಹಾರ ಮಾಡುವಾಗ ಅವರ ಚರಣಗಳ ಸುತ್ತಮುತ್ತ ೨೨೫ ಕಮಲಗಳ ರಚನೆ ಇರುತ್ತದೆ.

(೧೦) ಫಲಭಾರನಮ್ರ ಸಮಸ್ತ ಧಾನ್ಯಾತಿಶಯ–ಭಗವಂತನು ವಿಹಾರ ಮಾಡಿದೆಡೆಯಲ್ಲೆಲ್ಲಾ ಭೂತಲವು ಧಾನ್ಯ, ಫಲಭರಿತವಾಗಿ ಅದರ ಭಾರಕ್ಕೆ ಗಿಡ–ಮರ–ಸಸ್ಯಗಳು ಕೆಳಗೆ ಬಾಗುತ್ತಿರುತ್ತವೆ.

(೧೧) ನಿರ್ಮಲಾಕಾಶ ಅತಿಶಯ–ವಿಹಾರ ಸಮಯದಲ್ಲಿ ಶರತ್ಕಾಲದ ಸರೋವರದಂತೆ ಆಕಾಶವು ನಿರ್ಮಲವಾಗಿರುವುದು.

(೧೨) ದೇವಾಗಮನಾತಿಶಯ–ದೇವೇಂದ್ರನ ಆಜ್ಞೆಯಂತೆ ಭವನವಾಸಿದೇವತೆಗಳೂ, ಜ್ಯೋತಿಷ್ಕ ದೇವತೆಗಳೂ, ವ್ಯಂತರದೇವತೆಗಳೂ ಮತ್ತು ಕಲ್ಪವಾಸಿದೇವತೆಗಳು ಭಗವಂತನ ಮಹಾ ಪೂಜೆಗೋಸ್ಕರ ಬೇಗನೆ ಬನ್ನಿರಿ ಎಂದು ಆಹ್ವಾನ ನೀಡುತ್ತಾರೆ.

(೧೩) ಸುರಕೃತ ಧರ್ಮಚಕ್ರಾತಿಶಯ–ಸಾವಿರ ಅರಗಳುಳ್ಳದ್ದೂ, ರತ್ನಮಯವೂ, ಸೂರ್ಯನ ತೇಜಸ್ಸನ್ನು ಮೀರುವ ತೇಜಸ್ಸುಳ್ಳದ್ದೂ, ಸರ್ವಾಹ್ಣ ಯಕ್ಷನಿಂದ ಧರಿಸಲ್ಪಟ್ಟದ್ದೂ ಆದ ಧರ್ಮಚಕ್ರವು ಜಿನೇಂದ್ರರ ಮುಂದೆ ಗಗನದಲ್ಲಿ ನಿರಾಧಾರವಾಗಿ ಸಾಗುವುದು.

(೧೪) ಅಷ್ಟಮಂಗಲ ದ್ರವ್ಯಾತಿಶಯ–ಅರಹಂತರ ಮುಂದೆ (೧) ಆತಪತ್ರ (ಛತ್ರ), (೨) ಧ್ವಜ, (೩) ದರ್ಪಣ, (೪) ಕಳಶ, (೫) ಚಾಮರ, (೬) ಭೃಂಗಾರ (ಝಾರಿ), (೭) ತಾಲ (ಬೀಸಣಿಗೆ), ಮತ್ತು (೮) ಸುಪ್ರತಿಷ್ಠಕ ಈ ಎಂಟೂ ಮಂಗಳ ದ್ರವ್ಯಗಳು ಸುಶೋಭಿತವಾಗಿರುವುದು.

೪. ಪ್ರಾಪ್ತಿ ರೂಪದ ಗುಣಗಳು: (ಅನಂತ ಚತುಷ್ಟಯಗಳು, ಅಷ್ಟಮಹಾಪ್ರಾತಿಹಾರ್ಯಂಗಳು, ಪಂಚ ಕಲ್ಯಾಣಗಳು)

(ಅ) ಅನಂತ ಚತುಷ್ಟಯಗಳು (ಪ್ರಾಪ್ತಿ ರೂಪದ ಗುಣಗಳು)–ನಾಲ್ಕು ಘಾತಿ ಕರ್ಮಗಳ ಅಭಾವದಿಂದ ಪ್ರಾಪ್ತಿ:

(ಅಭಾವದ ವಿರುದ್ಧ ಪದ ಸದ್ಭಾವ)

(೧) ಸಮ್ಯಕ್ತ್ವ (ಸಮ್ಮತ್ತ)–ಅನಂತ ಸುಖ–ಸಮ್ಯಕ್ತ್ವ ಎಂದರೆ ಆತ್ಮನ ಯಾಥಾರ್ಥವಾದ ಶ್ರದ್ಧೆ–ಪ್ರತೀತಿ.

(೨) ಜ್ಞಾನ (ಣಾಣ)–ಅನಂತ ಜ್ಞಾನ

(೩) ದರ್ಶನ (ದಂಸಣ)–ಅನಂತ ದರ್ಶನ (ಅನಂತ ದೃಷ್ಟಿಶಕ್ತಿ)

(೪) ವೀರ್ಯ (ವೀರಿಯ)–ಅನಂತ ವೀರ್ಯ (ಅನಂತ ಶಕ್ತಿ)–ಇದು ತನ್ನ ಅನಂತ ಶಕ್ತಿಯೊಂದಿಗೆ ಉಳಿದ ಏಳೂ ಗುಣಗಳಿಗೆ ಅನಂತ ಶಕ್ತಿಯನ್ನು ಒದಗಿಸುತ್ತದೆ.

(ಆ) ಅಷ್ಟಮಹಾಪ್ರಾತಿಹಾರ್ಯಂಗಳು (ಪ್ರಾಪ್ತಿ ರೂಪದ ಗುಣಗಳು) (ಪದ್ಯ/ವಚನ ಸಂ. ೩–೪೦ (ವ))

(ನಂದೀಶ್ವರಭಕ್ತಿ ೫೨ ನೆಯ ಶ್ಲೋಕದಿಂದ ೫೯ ನೆಯ ಶ್ಲೋಕದವರೆಗೆ) (ತಿಲೋಯಪಣ್ಣತ್ತೀ, ೪–೯೨೪ ರಿಂದ ೯೩೬)

(೧) ಅಶೋಕವೃಕ್ಷ

(೨) ಸುರ ಪುಷ್ಪವೃಷ್ಟಿ

(೩) ಅರವತ್ತನಾಲ್ಕು ಚಾಮರಗಳು

(೪) ಪ್ರಭಾಮಂಡಲ

(೫) ದೇವ ದುಂದುಭಿ

(೬) ಛತ್ರತ್ರಯ (ಮುಕ್ಕೊಡೆ)

(೭) ದಿವ್ಯಧ್ವನಿ–೧೮ ಮಹಾಭಾಷೆಗಳು, ೭೦೦ ಲಘುಭಾಷೆಗಳು ಒಳಪಟ್ಟಿರುತ್ತವೆ.

(೮) ರತ್ನ ಖಚಿತ ಸಿಂಹಪೀಠ (ಸಿಂಹಾಸನ)

ಹೀಗೆ ತೀರ್ಥಂಕರರ ಒಟ್ಟು ಗುಣಗಳು ೩೪+೧೨=೪೬ ಆಗುತ್ತವೆ.

ಪಂಚಮಹಾಕಲ್ಯಾಣಂಗಳು (ಪದ್ಯ/ವಚನ ಸಂ. ೩–೪೦ (ವ))

ತೀರ್ಥಂಕರ ನಾಮಕರ್ಮದ ಪ್ರಭಾವದಿಂದ ದೇವೇಂದ್ರನು ೫ ಕಲ್ಯಾಣಗಳನ್ನು ನಡೆಸುತ್ತಾನೆ (ಈ ಕಲ್ಯಾಣಕಗಳು ಸಾಮಾನ್ಯ ಕೇವಲಿಗಳಿಗೆ ಇರುವುದಿಲ್ಲ.)

(೧) ಗರ್ಭಾವತರಣ ಕಲ್ಯಾಣ
(೨) ಜನ್ಮಾಭಿಷೇಕ ಕಲ್ಯಾಣ
(೩) ಪರಿನಿಷ್ಕ್ರಮಣ ಕಲ್ಯಾಣ
(೪) ಕೇವಲಜ್ಞಾನ ಕಲ್ಯಾಣ
(೫) ಪರಿನಿರ್ವಾಣ (ಮೋಕ್ಷ) ಕಲ್ಯಾಣ

ಅರವತ್ತಮೂರು (೬೩)–ತ್ರಿಷಷ್ಟಿ ಶಲಾಕಾಪುರುಷರು ಮತ್ತು ಅವರ ಶುಭನಾಮಾವಳಿಗಳು

ಪರಮಜಿನಮಾಲೆ–ವರಗಣಧರಮಾಲೆ: (ಪದ್ಯ/ವಚನ ಸಂ. ೧–೧೫)

೧. ತೀರ್ಥಂಕರರ ಹೆಸರು–೨೪		**ಮುಖ್ಯ ಗಣಧರರ ಹೆಸರು ಮತ್ತು ಒಟ್ಟು ಗಣಧರರ ಸಂಖ್ಯೆ**
(೧) ವೃಷಭನಾಥ	–	ವೃಷಭಸೇನ ಆದಿಯಾಗಿ ೮೪ ಮಂದಿ
(೨) ಅಜಿತನಾಥ	–	ಸಿಂಹಸೇನ ಆದಿಯಾಗಿ ೯೦ ಮಂದಿ
(೩) ಶಂಭವನಾಥ	–	ಚಾರುಷೇಣ ಆದಿಯಾಗಿ ೧೦೫ ಮಂದಿ
(೪) ಅಭಿನಂದನ	–	ವಜ್ರನಾಭಿ ಆದಿಯಾಗಿ ೧೦೩ ಮಂದಿ
(೫) ಸುಮತಿನಾಥ	–	ಚಮರ ಆದಿಯಾಗಿ ೧೧೬ ಮಂದಿ
(೬) ಪದ್ಮಪ್ರಭ	–	ವಜ್ರಚಾಮರ ಆದಿಯಾಗಿ ೧೧೦ ಮಂದಿ
(೭) ಸುಪಾರ್ಶ್ವನಾಥ	–	ಬಲ ಆದಿಯಾಗಿ ೯೫ ಮಂದಿ
(೮) ಚಂದ್ರಪ್ರಭನಾಥ	–	ದತ್ತ ಆದಿಯಾಗಿ ೯೩ ಮಂದಿ
(೯) ಪುಷ್ಪದಂತ	–	ವಿದರ್ಭ ಆದಿಯಾಗಿ ೮೮ ಮಂದಿ
(೧೦) ಶೀತಲನಾಥ	–	ಅನಗಾರ ಆದಿಯಾಗಿ ೮೧ ಮಂದಿ
(೧೧) ಶ್ರೇಯಾಂಸ	–	ಕುಂಥು ಆದಿಯಾಗಿ ೭೭ ಮಂದಿ
(೧೨) ವಾಸುಪೂಜ್ಯ	–	ಧರ್ಮ ಆದಿಯಾಗಿ ೬೬ ಮಂದಿ
(೧೩) ವಿಮಲನಾಥ	–	ಮಂದಿರ ಆದಿಯಾಗಿ ೫೫ ಮಂದಿ
(೧೪) ಅನಂತನಾಥ	–	ಜಯ ಆದಿಯಾಗಿ ೫೦ ಮಂದಿ
(೧೫) ಧರ್ಮ	–	ಅರಿಷ್ಟಸೇನ ಆದಿಯಾಗಿ ೪೩ ಮಂದಿ
(೧೬) ಶಾಂತಿನಾಥ	–	ಚಕ್ರಾಯುಧ ಆದಿಯಾಗಿ ೩೬ ಮಂದಿ
(೧೭) ಕುಂಥುನಾಥ	–	ಸ್ವಯಂಭು ಆದಿಯಾಗಿ ೩೫ ಮಂದಿ
(೧೮) ಅರ	–	ಕುಂಭಾರ್ಯ ಆದಿಯಾಗಿ ೩೦ ಮಂದಿ
(೧೯) ಮಲ್ಲಿನಾಥ	–	ವಿಶಾಖಾ ಆದಿಯಾಗಿ ೨೮ ಮಂದಿ
(೨೦) ಮುನಿಸುವ್ರತ	–	ಮಲ್ಲಿಮುನಿ ಆದಿಯಾಗಿ ೧೮ ಮಂದಿ
(೨೧) ನಮಿನಾಥ	–	ಸುಪ್ರಭಾರ್ಯ ಆದಿಯಾಗಿ ೧೭ ಮಂದಿ
(೨೨) ನೇಮಿನಾಥ	–	ವರದತ್ತ ಆದಿಯಾಗಿ ೧೧ ಮಂದಿ
(೨೩) ಪಾರ್ಶ್ವನಾಥ	–	ಸ್ವಯಂಭೂ ಆದಿಯಾಗಿ ೧೦ ಮಂದಿ
(೨೪) ವರ್ಧಮಾನ	–	ಗೌತಮ ಆದಿಯಾಗಿ ೧೧ ಮಂದಿ

೨. ಚಕ್ರವರ್ತಿಗಳು–೧೨

(೧) ಭರತ
(೨) ಸಗರ
(೩) ಮಘವಾ
(೪) ಸನತ್ಕುಮಾರ
(೫) ಶಾಂತಿನಾಥ
(೬) ಕುಂಥುನಾಥ
(೭) ಅರನಾಥ

ಶಲಾಕಾಪುರುಷರು:

೧.	**ತೀರ್ಥಂಕರರು**	**೨೪**
೨.	**ಚಕ್ರವರ್ತಿಗಳು**	**೧೨**
೩.	**ಬಲಭದ್ರರು**	**೯**
೪.	**ವಾಸುದೇವರು**	**೯**
೫.	**ಪ್ರತಿವಾಸುದೇವರು**	**೯**
	ಒಟ್ಟು	**೬೩**

(೮) ಸುಭೌಮ

(೯) ಪದ್ಮನಾಭ

(೧೦) ಹರಿಷೇಣ

(೧೧) ಜಯಸೇನ

(೧೨) ಬ್ರಹ್ಮದತ್ತ

೩. ಬಲಭದ್ರರು–೯

(೧) ವಿಜಯ

(೨) ಅಚಲ

(೩) ಧರ್ಮಪ್ರಭ

(೪) ಸುಪ್ರಭ

(೫) ಸುದರ್ಶನ

(೬) ನಂದಿ

(೭) ನಂದಿಮಿತ್ರ

(೮) ರಾಮಚಂದ್ರ (ಪದ್ಮ)

(೯) ಬಲಭದ್ರ

೪. ವಾಸುದೇವರು–೯

(೧) ತ್ರಿಪಿಷ್ಠ

(೨) ದ್ವಿಪಿಷ್ಠ

(೩) ಸ್ವಯಂಭೂ

(೪) ಪುರುಷೋತ್ತಮ

(೫) ನರಸಿಂಹ

(೬) ಪುಂಡರೀಕ

(೭) ದತ್ತದೇವ

(೮) ಲಕ್ಷ್ಮಣ

(೯) ಕೃಷ್ಣ

೫. ಪ್ರತಿವಾಸುದೇವರು–೯

(೧) ಅಶ್ವಗ್ರೀವ

(೨) ತಾರಕ

(೩) ಮೇರಕ

(೪) ನಿಷುಂಭ

(೫) ಮಧುಕೈಟಭ

(೬) ಪ್ರಹ್ಲಾದ

(೭) ಬಲಿ

(೮) ರಾವಣ

(೯) ಜರಾಸಂಧ

ತೊಂಬತ್ತಮೂರು (೯೩)–ತೊಂಬತ್ತಮೂರು ನಾಮಕರ್ಮ

ತೊಂಬತ್ತಮೂರು ನಾಮಕರ್ಮ:

(ತತ್ತ್ವಾರ್ಥ ಸೂತ್ರ, ೮–೧೧) (ಪದಾರ್ಥಸಾರ, ಪ್ರಥಮ ಪರಿಚ್ಛೇದ–ನಾಮಕರ್ಮ ನಾಲ್ವತ್ತೆರಡು ತೆಜಿನದೆಂತೆನೆ_)

ಯಾವ ಕರ್ಮದ ಉದಯದಿಂದ ಆತ್ಮನಿಗೆ ಶರೀರ, ಅವಯವ, ರೂಪ, ಇತ್ಯಾದಿಗಳ ರಚನೆಯಾಗುವುವೋ ಅದಕ್ಕೆ **ನಾಮಕರ್ಮ** ಎನ್ನುವರು.

ನಾಮಕರ್ಮದ ಪ್ರಕೃತಿಗಳಲ್ಲಿ ಎರಡು ವಿಧ:

(ಅ) ನಾಮಕರ್ಮ ಪಿಂಡ (ಭೇದಾವಳಿ) ಪ್ರಕೃತಿ (ಇವು ೧೪ ಇವೆ)

(ಆ) ನಾಮಕರ್ಮ ಅಪಿಂಡ (ಭೇದವಿಲ್ಲದ) ಪ್ರಕೃತಿ (ಇವು ೨೮ ಇವೆ), ಒಟ್ಟು ೪೨ ಭೇದಗಳಿವೆ.

ನಾಮಕರ್ಮ ಪ್ರಕೃತಿಗಳು ಮುಖ್ಯವಾಗಿ ೪೨ ಇರುತ್ತವೆ. ಅಂತರ್ಗತಭೇದಗಳು ಸೇರಿ ಒಟ್ಟು ೯೩ (೬೫+೨೮) ನಾಮಕರ್ಮ ಪ್ರಕೃತಿಗಳಾಗುತ್ತವೆ.

(ಅ) ನಾಮಕರ್ಮ ಪಿಂಡ (ಭೇದಾವಳಿ) ಪ್ರಕೃತಿ–ಇವು ೧೪ ಇವೆ. ಇವುಗಳಲ್ಲಿ ಅಂತರ್ಗತವಾಗಿರುವ ಭೇದಗಳು ಸೇರಿ ಒಟ್ಟು ೬೫ ನಾಮಕರ್ಮ ಪ್ರಕೃತಿಗಳಾಗುತ್ತವೆ.

೧. ಗತಿನಾಮಕರ್ಮಗಳು: (ಇವು ತಮ್ಮ ತಮ್ಮ ಉದಯ ಕಾಲದಲ್ಲಿ ಆಯಾ ಗತಿ ಪರ್ಯಾಯ ಪ್ರಾಪ್ತವಾಗುವುದಕ್ಕೆ ನಿಮಿತ್ತವಾಗಿವೆ)

(೧) ನರಕಗತಿ ನಾಮಕರ್ಮ

(೨) ತಿರ್ಯಕ್‌ಗತಿ ನಾಮಕರ್ಮ

(೩) ಮನುಷ್ಯಗತಿ ನಾಮಕರ್ಮ

(೪) ದೇವಗತಿ ನಾಮಕರ್ಮ

೨. ಜಾತಿನಾಮಕರ್ಮ: (ಇವು ತಮ್ಮ ತಮ್ಮ ಉದಯ ಕಾಲದಲ್ಲಿ ಏಕೇಂದ್ರಿಯ ಮೊದಲಾದ ಜಾತಿ ಪರ್ಯಾಯ ಪ್ರಾಪ್ತಿಗೆ ನಿಮಿತ್ತವಾಗಿವೆ)

(೧) ಏಕೇಂದ್ರಿಯಜಾತಿ ನಾಮಕರ್ಮ

(೨) ದ್ವೀಂದ್ರಿಯಜಾತಿ ನಾಮಕರ್ಮ

(೩) ತ್ರೀಂದ್ರಿಯಜಾತಿ ನಾಮಕರ್ಮ

(೪) ಚತುರಿಂದ್ರಿಯಜಾತಿ ನಾಮಕರ್ಮ

(೫) ಪಂಚೇಂದ್ರಿಯಜಾತಿ ನಾಮಕರ್ಮ

೩. ಶರೀರನಾಮಕರ್ಮ: (ಇವು ತಮ್ಮ ತಮ್ಮ ಉದಯ ಕಾಲದಲ್ಲಿ ಆಯಾ ಶರೀರ ಪ್ರಾಪ್ತವಾಗುವುದಕ್ಕೆ ನಿಮಿತ್ತವಾಗಿವೆ)

ಐದು ಶರೀರಗಳ ಸಂಯೋಗದ ಭೇದಗಳು:

(ಗೊಮ್ಮಟಸಾರ, ಕರ್ಮಕಾಂಡ ೧–೨೭) (ಸರ್ವಾರ್ಥ ಸಿದ್ಧಿ, ೮–೧೧ ಟೀಕೆ ಸಂ. ೭೫೫)

(೧) ಔದಾರಿಕಶರೀರ ನಾಮಕರ್ಮ

(ಅ) ಔದಾರಿಕ ಔದಾರಿಕ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯವು ಔದಾರಿಕ ವರ್ಗಣೆಯಿಂದ ಇನ್ನೊಂದು ಅಥವಾ ಅಗತ್ಯಕ್ಕೆ ಬೇಕಾದಷ್ಟು ಔದಾರಿಕ ಶರೀರವನ್ನುಂಟು ಮಾಡುತ್ತದೆ. ಹೀಗೆ ಉಂಟಾದ ಔದಾರಿಕ–ಔದಾರಿಕ ಶರೀರಗಳ ರೂಪಾದಿ ಅಳತೆಗಳು ಮೂಲ ಶರೀರದಂತೆಯೇ ಇರುತ್ತವೆ. ಆತ್ಮನು ಮೂಲ ಶರೀರವನ್ನು ಬಿಡದೆ, ಆ ಆತ್ಮನ ಪ್ರದೇಶವು, ಈ ನಾಮಕರ್ಮದಿಂದ ಉಂಟಾದ ಎಲ್ಲಾ ಔದಾರಿಕ–ಔದಾರಿಕ ಶರೀರಗಳಿಗೂ ವಿಸ್ತಾರಗೊಂಡಿರುತ್ತದೆ. ಈ ನಾಮಕರ್ಮವು ಚಕ್ರವರ್ತಿಗಳಿಗೆ ಇರುತ್ತದೆ. ದೃಷ್ಟಾಂತದ ಮೂಲಕ ವಿವರಿಸುವುದಾದರೆ, ಭರತ ಚಕ್ರವರ್ತಿಗೆ ೯೬೦೦೦ ಹೆಂಡತಿಯರಿರುತ್ತಾರೆ. ಅವನ ಶರೀರದ ಉಪಯೋಗವು ಮುಖ್ಯ ಹೆಂಡತಿಗೆ ಮೀಸಲಾಗಿರುತ್ತದೆ. ಉಳಿದ ೯೫೯೯೯ ಹೆಂಡತಿಯರಲ್ಲಿ ಚಕ್ರವರ್ತಿಯ ಮೂಲ ಶರೀರದ ಸಂಪರ್ಕವಿರುವುದಿಲ್ಲ. ಆದರೆ ಈ ನಾಮಕರ್ಮದ ಉದಯದಿಂದ ೯೫೯೯೯ ಔದಾರಿಕ–ಔದಾರಿಕ ಶರೀರಗಳು ತಯಾರಾಗಿ ಉಳಿದ ಎಲ್ಲಾ ೯೫೯೯೯ ಹೆಂಡತಿಯರಲ್ಲೂ ಒಂದೇ ಕಾಲದಲ್ಲಿ ಸಂಪರ್ಕವಿಟ್ಟುಕೊಳ್ಳುತ್ತವೆ. ಈ ಎಲ್ಲಾ ಶರೀರಗಳಲ್ಲಿರುವ ಆತ್ಮವು ಮೂಲ ಶರೀರದಲ್ಲಿರುವ ಆತ್ಮದ ವಿಸ್ತೃತ ರೂಪದ ಒಂದೇ ಆತ್ಮ ಆಗಿರುತ್ತದೆ.

(ಆ) ಔದಾರಿಕ ತೈಜಸ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಔದಾರಿಕ ಶರೀರದಿಂದ ಇನ್ನೊಂದು ತೈಜಸ ಶರೀರ ಉಂಟಾಗುತ್ತದೆ. ಅಂದರೆ ಔದಾರಿಕ ತೈಜಸವೆಂಬ ಹೊಸ ಸ್ಕಂಧದಿಂದಾದ ಶರೀರವಾಗಿರುತ್ತದೆ. ಇದು ಮಹಾಮುನಿಗಳಲ್ಲಿ ಉಂಟಾಗುತ್ತದೆ.

(ಇ) ಔದಾರಿಕ ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಔದಾರಿಕ ಶರೀರದಿಂದ ಇನ್ನೊಂದು ಕಾರ್ಮಣ ಶರೀರ ಉಂಟಾಗುತ್ತದೆ. ಆಯುಷ್ಯ ಸ್ಥಿತಿಯು ಒಂದು ಅಂತರ್ಮುಹೂರ್ತ ಬಾಕಿ ಉಳಿದಿರುವಾಗ ಕೆಲವು ಜೀವಿಗಳ ಆತ್ಮ ಪ್ರದೇಶವು ಶರೀರದಿಂದ ಹೊರಗೆ, ಒಂದು ಪ್ರದೇಶ ಮೊದಲ್ಗೊಂಡು ಮುಂದೆ ತಾನು ಹುಟ್ಟುವ ಸ್ಥಳದವರೆಗೆ ವ್ಯಾಪಿಸಿ ಪುನಃ ಮೂಲ ಶರೀರವನ್ನು ಸೇರುತ್ತದೆ. ಇದಕ್ಕೆ ಮಾರಣಾಂತಿಕ ಸಮುದ್ಘಾತವೆಂದು ಕರೆಯುತ್ತಾರೆ. ಇದನ್ನೇ ಔದಾರಿಕ ಕಾರ್ಮಣ ಶರೀರವೆನ್ನುತ್ತಾರೆ.

(ಉ) ಔದಾರಿಕ ತೈಜಸ ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಔದಾರಿಕ–ತೈಜಸ ಶರೀರದಿಂದ ಇನ್ನೊಂದು ಕಾರ್ಮಣ ಶರೀರ ಉಂಟಾಗುತ್ತದೆ. ಶುಭ ತೈಜಸ ಸಮುದ್ಘಾತದಲ್ಲಿ ಮರಣ ಸಮೀಪಿಸಿರುವ ಮುನಿಯಲ್ಲಿ ಬೇರೆ–ಬೇರೆ ಉದ್ದೇಶಗಳಿಗಾಗಿ ಉಂಟಾಗುವ ಈ ಕಾರ್ಮಣ ಶರೀರವು ಔದಾರಿಕ–ತೈಜಸ–ಕಾರ್ಮಣ ಶರೀರವಾಗಿದೆ.

(೨) ವೈಕ್ರಿಯಿಕಶರೀರ ನಾಮಕರ್ಮ

ಈ ಕೆಳಗಿನ ನಾಲ್ಕೂ ವಿಧ ನಾಮಕರ್ಮಗಳ ಉದಯದಿಂದ ಅದೇ ಹೆಸರಿನ ನಾಲ್ಕು ವಿಧ ಶರೀರಗಳು ರಚನೆಯಾಗುತ್ತವೆ. ಇವು ದೇವತೆಗಳಲ್ಲಿ ಮತ್ತು ನಾರಕಿಗಳಲ್ಲಿ ಮಾತ್ರ ಇರುತ್ತವೆ. ದೇವತೆಗಳು ಮೂಲ ಶರೀರದಿಂದ ಎಂದಿಗೂ ಹೊರಗೆ ಹೋಗುವುದಿಲ್ಲ. ಆದರೆ ಅವರು ಈ ನಾಲ್ಕೂ ವಿಧ ಶರೀರಗಳನ್ನು ಮಾತ್ರ ಹೊರಕ್ಕೆ ಕಳುಹಿಸುತ್ತಾರೆ. ನಾರಕಿಗಳು ಮಾತ್ರ ತಮ್ಮ ಶರೀರವನ್ನು ದೇವತೆಗಳಂತೆ ಬೇರೆ–ಬೇರೆ ವಿಧವಾಗಿ ಮಾರ್ಪಾಟು ಮಾಡಿಕೊಳ್ಳಬಹುದು. ಇದು ಅಪೃಥಕ್–ವೈಕ್ರಿಯಿಕವಾಗಿದೆ. ಆದರೆ ದೇವತೆಗಳಂತೆ ಪೃಥಕ್–ವೈಕ್ರಿಯಿಕ ಶರೀರವು ನಾರಕಿಗಳಿಗಿಲ್ಲ. ಅಂದರೆ ಬೇರೆ ಹೆಚ್ಚು ಶರೀರಗಳನ್ನು ಹೊಂದುವುದಕ್ಕಾಗುವುದಿಲ್ಲ. ವೈಕ್ರಿಯಿಕ–ತೇಜಸ ಶರೀರವು ನಾರಕಿಗಳಲ್ಲಿ ಕೋಪದಲ್ಲಿ ಉಂಟಾಗುತ್ತದೆ.

(ಅ) ವೈಕ್ರಿಯಿಕ–ವೈಕ್ರಿಯಿಕ ಮಿಶ್ರ ಶರೀರ ನಾಮಕರ್ಮ

(ಆ) ವೈಕ್ರಿಯಿಕ–ತೈಜಸ ಮಿಶ್ರ ಶರೀರ ನಾಮಕರ್ಮ

(ಇ) ವೈಕ್ರಿಯಿಕ–ಕಾರ್ಮಣ ಮಿಶ್ರ ಶರೀರ ನಾಮಕರ್ಮ

(ಉ) ವೈಕ್ರಿಯಿಕ–ತೈಜಸ–ಕಾರ್ಮಣ ಮಿಶ್ರ ಶರೀರ ನಾಮಕರ್ಮ

(೩) ಆಹಾರಕಶರೀರ ನಾಮಕರ್ಮ

(ಅ) ಆಹಾರಕ–ಆಹಾರಕ ಮಿಶ್ರ ಶರೀರ ನಾಮಕರ್ಮ–ಆಹಾರಕ ಶರೀರವು ಔದಾರಿಕ ಶರೀರದಿಂದುಂಟಾದರೆ ಆಹಾರಕ–ಆಹಾರಕ ಶರೀರವು ಆಹಾರಕ ಶರೀರದಿಂದುಂಟಾಗಿದೆ. ಹೇಗೆಂದರೆ ೬ ನೆಯ ಗುಣಸ್ಥಾನದ ಮುನಿಯಲ್ಲಿ ಆಹಾರಕ ಶರೀರವು ಉತ್ಪನ್ನವಾಗಿ ತೀರ್ಥಂಕರರ ಬಳಿಗಾಗಲೀ ಅಥವಾ ಶ್ರುತಕೇವಲಿಗಳ ಬಳಿಗಾಗಲೀ ಹೋಗಿ ನಿಯಮಿತ ಕಾಲದಲ್ಲಿ ಅಂದರೆ ಒಂದು ಅಂತರ್ಮುಹೂರ್ತದಲ್ಲಿ ವಾಪಸ್ ಬಂದಾಗ ತನ್ನ ಸಂಶಯವು ಪೂರ್ಣವಾಗಿ ನಿವಾರಣೆಯಾಗದೆ ಸಮಾಧಾನ ಸಿಗದಿದ್ದಲ್ಲಿ ಆ ಹಿಂದಿನ ಆಹಾರಕ ಶರೀರದಿಂದಲೇ ಇನ್ನೊಂದು ಆಹಾರಕ ಶರೀರವು ರಚನೆಯಾಗಿ ಹೊರಡುತ್ತದೆ. ಅದು ತನ್ನ ಕಾರ್ಯವನ್ನು ಸಾಧಿಸಿಕೊಂಡು ಮೂಲ ಶರೀರವನ್ನು ಸೇರುತ್ತದೆ. ಈ ಶರೀರದ ಉದಯವು ಆಹಾರಕ–ಆಹಾರಕ ಶರೀರ ನಾಮಕರ್ಮದ ಉದಯದಿಂದ ಉಂಟಾದುದಾಗಿದೆ.

(ಆ) ಆಹಾರಕ–ತೈಜಸ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಯಾರಾದರೂ ಬೇರೆ ಮುನಿಗಳು ಉಪಸರ್ಗಕ್ಕೆ ಒಳಗಾಗಿದ್ದಲ್ಲಿ ಅಥವಾ ಯಾವುದಾದರೂ ತೊಂದರೆಗೆ

ಒಳಗಾಗಿದ್ದಲ್ಲಿ ಆಹಾರಕ ಶರೀರದಿಂದಲೇ ತೈಜಸ ಶರೀರ ಹೊರಟು ಆ ಮುನಿಗಳನ್ನು ರಕ್ಷಿಸುತ್ತದೆ. ಈ ಶರೀರವೇ ಆಹಾರಕ–ತೈಜಸ ಶರೀರವಾಗಿದೆ. ಮೇಲಿನ ಔದಾರಿಕಶರೀರ ಸಂಯೋಗದ ಭೇದಗಳಲ್ಲಿ ಎರಡನೆಯದಾದ ಔದಾರಿಕ–ತೈಜಸ ಮಿಶ್ರ ಶರೀರ ನಾಮಕರ್ಮದಿಂದ ಉಂಟಾದುದು ತೇಜಸ್ಸಮುದ್ಘಾತ ಆಗಿದೆ. ಅದರಲ್ಲೂ ಶುಭ ತೇಜಸ್ಸಮುದ್ಘಾತದಿಂದುಂಟಾದ ಪುರುಷಾಕೃತಿ ಶರೀರವೂ ಕೂಡ ಮುನಿಗಳ ಉಪಸರ್ಗಾದಿ ತೊಂದರೆಗಳನ್ನು ನಿವಾರಿಸುತ್ತದೆ. ಅದು ಔದಾರಿಕ ಶರೀರದಿಂದುತ್ಪನ್ನ ವಾದರೆ ಈ ಮೇಲೆ ಹೇಳಿದ ತೈಜಸ ಶರೀರವು ಆಹಾರಕ ಶರೀರದಿಂದ ಉತ್ಪನ್ನವಾಗಿರುತ್ತದೆ.

(ಇ) ಆಹಾರಕ–ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ೬ ನೆಯ ಗುಣಸ್ಥಾನದ ಮುನಿಗೆ ಮರಣವು ಸಂಭವಿಸುವ ಕಾಲದಲ್ಲಿ ಮತ್ತು ಸಂಶಯವಿರುವ ಕಾಲದಲ್ಲಿ, ಆಹಾರಕ ಕಾರ್ಮಣ ಶರೀರವು ಉಂಟಾಗುತ್ತದೆ. ಆಹಾರಕ ಮಿಶ್ರಯೋಗ ಕಾಲ ಕಳೆದು ಆಹಾರಕ ಶರೀರದ ಪರ್ಯಾಪ್ತತೆ ಪೂರ್ಣ ಹೊಂದಿದ ಕಾಲದಲ್ಲಿ ಈ ಆಹಾರಕ ಕಾರ್ಮಣ ಶರೀರ ಉಂಟಾಗಿ ಕೂಡಲೇ ಆ ಮುನಿಯು ಮರಣ ಹೊಂದುವ ಸಂಭವ ಉಂಟು.

(ಉ) ಆಹಾರಕ–ತೈಜಸ–ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಅದೇ ಹೆಸರಿನ ಶರೀರ ಉತ್ಪನ್ನವಾಗುತ್ತದೆ. ಆಹಾರಕ–ತೈಜಸ ಶರೀರ ಮತ್ತು ಆಹಾರಕ–ಕಾರ್ಮಣ ಶರೀರ ಇವೆರಡೂ ಒಟ್ಟಿಗೆ ಒಂದೇ ಕಾಲದಲ್ಲಿ ಉಂಟಾಗುವ ಸಂದರ್ಭದಲ್ಲಿ ಈ ಆಹಾರಕ–ತೈಜಸ–ಕಾರ್ಮಣ ಶರೀರದ ರಚನೆಯಾಗುತ್ತದೆ.

(೪) ತೈಜಸಶರೀರ ನಾಮಕರ್ಮ

(ಅ) ತೈಜಸ–ತೈಜಸ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ತೈಜಸ–ತೈಜಸ ಮಿಶ್ರ ಶರೀರವು ಉಂಟಾಗುತ್ತದೆ. ಮೊದಲಿನ ತೈಜಸ ಶರೀರವು ತನ್ನ ಕಾರ್ಯವನ್ನು ನಿಯಮಿತ ವೇಳೆಯಲ್ಲಿ ಸಾಧಿಸದಿದ್ದಲ್ಲಿ ಎರಡನೆಯ ತೈಜಸ ಶರೀರವು ಮೊದಲಿನ ತೈಜಸ ಶರೀರದಿಂದ ಉತ್ಪನ್ನವಾಗಿ ಪುನಃ ಕಾರ್ಯ ಸಾಧನೆಗೆ ಹೊರಡುತ್ತದೆ. ಇದೇ ತೈಜಸ–ತೈಜಸ ಶರೀರ.

(ಆ) ತೈಜಸ–ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ತೈಜಸ ಶರೀರದಲ್ಲಿ ಉಂಟಾದ ಕಾರ್ಮಣ ಮಿಶ್ರ ಶರೀರವಾಗಿರುತ್ತದೆ.

(೫) ಕಾರ್ಮಣಶರೀರ ನಾಮಕರ್ಮ

(ಅ) ಕಾರ್ಮಣ–ಕಾರ್ಮಣ ಮಿಶ್ರ ಶರೀರ ನಾಮಕರ್ಮ–ಈ ನಾಮಕರ್ಮದಿಂದ ಉಂಟಾದ ಶರೀರವು ಇನ್ನೊಂದು ಕಾರ್ಮಣ ಶರೀರವಾಗಿರುತ್ತದೆ. ಇದೇ ಕಾರ್ಮಣ–ಕಾರ್ಮಣ ಶರೀರವಾಗಿದೆ.

೪. ಬಂಧನ (ಇವು ತಮ್ಮ–ತಮ್ಮ ಉದಯ ಕಾಲದಲ್ಲಿ ಆಯಾ ಶರೀರಕ್ಕೆ ತಕ್ಕ ಬಂಧನವನ್ನು ಉಂಟುಮಾಡಲು ನಿಮಿತ್ತವಾಗಿವೆ)

(೧) ಔದಾರಿಕ ಶರೀರ ಬಂಧನ ನಾಮಕರ್ಮ
(೨) ವೈಕ್ರಿಯಿಕಶರೀರ ಬಂಧನ ನಾಮಕರ್ಮ
(೩) ಆಹಾರಕಶರೀರ ಬಂಧನ ನಾಮಕರ್ಮ
(೪) ತೈಜಸಶರೀರ ಬಂಧನ ನಾಮಕರ್ಮ
(೫) ಕಾರ್ಮಣಶರೀರ ಬಂಧನ ನಾಮಕರ್ಮ

೫. ಸಂಘಾತ (ಇವು ತಮ್ಮ–ತಮ್ಮ ಉದಯ ಕಾಲದಲ್ಲಿ ಆಯಾ ಶರೀರಕ್ಕೆ ತಕ್ಕ ಸಾಮಂಜಸ್ಯವನ್ನು ಉಂಟುಮಾಡಲು ನಿಮಿತ್ತವಾಗಿವೆ)

(೧) ಔದಾರಿಕ ಶರೀರ ಸಂಘಾತ ನಾಮಕರ್ಮ
(೨) ವೈಕ್ರಿಯಿಕಶರೀರ ಸಂಘಾತ ನಾಮಕರ್ಮ

(೩) ಆಹಾರಕಶರೀರ ಸಂಘಾತ ನಾಮಕರ್ಮ

(೪) ತೈಜಸಶರೀರ ಸಂಘಾತ ನಾಮಕರ್ಮ

(೫) ಕಾರ್ಮಣಶರೀರ ಸಂಘಾತ ನಾಮಕರ್ಮ

೬. ಸಂಸ್ಥಾನ (ಶರೀರದ ಆಕಾರ ಉಂಟಾಗುವುದಕ್ಕೆ ಸಂಸ್ಥಾನ ಎನ್ನುವರು) (ಪದಾರ್ಥಸಾರ ಪುಟ ಸಂ. ೧೪, ೧೫)

(೧) ಸಮಚತುರಸ್ರ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಚೆಲುವಾದ (ಸಮಪ್ರಮಾಣ ಬದ್ಧವಾದ) ಶರೀರ ಉಂಟಾಗುವುದು.

(ಉದಯಮೆಂತು ನೋಳ್ಪಡಂ ಚೆಲುವನಪ್ಪ ಶರೀರಮಂ ಮಾಳ್ಪುದು)

(೨) ನ್ಯಗ್ರೋಧ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಆಲದ ಮರದಂತೆ ನಾಭಿಯ ಕೆಳಭಾಗ ಸಣ್ಣಗಿರುವ, ಮೇಲ್ಭಾಗದಲ್ಲಿ ದಪ್ಪವಾಗಿರುವ ಶರೀರ ಉಂಟಾಗುತ್ತದೆ.

(ಉದಯಮಾಲದ ಮರನಂತೆ ಕೆಳಗಸಿದಪ್ಪ ಶರೀರಮಂ ಮಾಳ್ಪುದು)

(೩) ಸ್ವಾತಿ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಹುತ್ತದಂತೆ ಮೇಲ್ಭಾಗದಲ್ಲಿ ತೆಳುವಾಗಿರುವ, ಕೆಳಭಾಗದಲ್ಲಿ ತೆಳುವಾಗಿರುವ ಶರೀರ ಉಂಟಾಗುತ್ತದೆ.

(ಉದಯಂ ಹುತ್ತಿನಂತೆ ಮೇಗಸಿದಪ್ಪ ಶರೀರಮಂ ಮಾಳ್ಪುದು)

(೪) ಕುಬ್ಜಕ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಸರ್ವಾಂಗವೂ ಕುಳ್ಳಗಿರುವ ಶರೀರ ಉಂಟಾಗುತ್ತದೆ.

(ಉದಯಂ ಸರ್ವಾಂಗಮಂ ಹ್ರಸ್ವಶರೀರಮಂ ಮಾಳ್ಪುದು)

(೫) ವಾಮನ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಕೈ–ಕಾಲುಗಳು ನೀಳವಾಗಿಯೂ, ದೇಹವು ದಪ್ಪವಾಗಿಯೂ ಇರುವ ಶರೀರ ಉಂಟಾಗುತ್ತದೆ.

(ಉದಯಂ ಕೈಕಾಲ್ಗಳು ನಿಡಿಯಮಪ್ಪುವಾಗಿ ಅಡ್ಡತಿರಿ ದಪ್ಪ ಶರೀರಮಂ ಮಾಳ್ಪುದು)

(೬) ಹುಂಡಕ ಸಂಸ್ಥಾನ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಗೋಣಿಚೀಲದೊಳಗೆ ದಪ್ಪ ಗುಂಡೊಂದನ್ನು ತುರುಕಿದಂತೆ ಇರುವ ಅಂದರೆ ಅಂಗಾಂಗಳ ಆಕಾರಗಳಲ್ಲಿ ಸಾಮರಸ್ಯವಿಲ್ಲದ (ಅತಿ ಕುರೂಪಗೊಂಡಿರುವ) ಶರೀರ ಉಂಟಾಗುತ್ತದೆ.

(ಉದಯಂ ಗೋಣಿಯೊಳು ಗುಂಡಂ ತೀವಿದಂತೆ ನೇರ್ಪಿಲ್ಲದ ಶರೀರಂ ಮಾಳ್ಪುದು)

೭. ಅಂಗೋಪಾಂಗ (ಪದ್ಯ/ವಚನ ಸಂ. ೧೬–೪೯ (ವ)) (ಗೊಮ್ಮಟಸಾರ, ಕರ್ಮಕಾಂಡ ೧–೨೮)

(ಎರಡು ತೊಡೆ, ಎರಡು ತೋಳು, ಕಟಿ (ಸೊಂಟ), ಉರಂ (ವಕ್ಷಸ್ಥಳ), ಬೆನ್ನು ಮತ್ತು ಶಿರ (ತಲೆ) ಇವು ಎಂಟು ಅಂಗಗಳು. ಉಳಿದವು (ಕಿವಿ, ಮೂಗು, ಕಣ್ಣು ಇತ್ಯಾದಿ) ಉಪಾಂಗಗಳು.)

(೧) ಔದಾರಿಕ ಶರೀರಾಂಗೋಪಾಂಗ

(೨) ವೈಕ್ರಿಯಿಕ ಶರೀರಾಂಗೋಪಾಂಗ

(೩) ಆಹಾರಕ ಶರೀರಾಂಗೋಪಂಗ

೮. ಸಂಹನನ ನಾಮಕರ್ಮ–ಸಂಹನನ ನಾಮಕರ್ಮ ಎಂದರೆ, ಯಾವ ನಾಮಕರ್ಮದ ಉದಯದಿಂದ ಶರೀರದೊಳಗಿನ ಅಸ್ಥಿಪಂಜರದ ರಚನೆಯಲ್ಲಿ ವಿಶೇಷತೆಯು ಉಂಟಾಗುವುದೋ ಅದು. ಇದರಲ್ಲಿ ಆರು ಪ್ರಕಾರಗಳಿವೆ:

(೧) **ವಜ್ರವೃಷಭನಾರಾಚ ಸಂಹನನ**–ಈ ನಾಮಕರ್ಮದ ಉದಯದಿಂದ ಶರೀರದೊಳಗಿನ ಎಲುಬು, ಕೀಲು, ಸ್ನಾಯುಗಳು ವಜ್ರದಂತೆ ಮಾಡಲ್ಪಟ್ಟಿರುವುದು.

(ವಜ್ರದಂತಪ್ಪೆಲುವುಂ ಕೀಲುಂ ಸುತ್ತುಮಂ ಮಾಳ್ಪವು) (ಪದಾರ್ಥಸಾರ ಪುಟ ಸಂ. ೧೫)

(೨) ವಜ್ರನಾರಾಚ ಸಂಹನನ–ಈ ನಾಮಕರ್ಮದ ಉದಯದಿಂದ ಶರೀರದೊಳಗಿನ ಎಲುಬು, ಕೀಲು ವಜ್ರದಂತೆಯೂ, ಸ್ನಾಯುಗಳು ಸಾಮಾನ್ಯವಾಗಿಯೂ ಮಾಡಲ್ಪಟ್ಟಿರುವುದು.

(ವಜ್ರದಂತಪ್ಪೆಲುವುಂ ಕೀಲುಂ ಸಾಮಾನ್ಯದ ಸುತ್ತುಮಂ ಮಾಳ್ಪುದು)

(೩) ನಾರಾಚ ಸಂಹನನ–ಈ ನಾಮಕರ್ಮದ ಉದಯದಿಂದ ಶರೀರದೊಳಗಿನ ಎಲುಬು ವಜ್ರದಂತೆಯೂ, ಕೀಲು ಮತ್ತು ಸ್ನಾಯುಗಳು ಸಾಮಾನ್ಯವಾಗಿಯೂ ಮಾಡಲ್ಪಟ್ಟಿರುವುದು.

(ವಜ್ರದಂತಪ್ಪೆಲುವುಂ ಸಾಮಾನ್ಯದ ಸುತ್ತುಮಂ ಕೀಲುಮಂ ಮಾಳ್ಪುದು)

(೪) ಅರ್ಧನಾರಾಚ ಸಂಹನನ–ಈ ನಾಮಕರ್ಮದ ಉದಯದಿಂದ ಶರೀರದೊಳಗಿನ ಎಲುಬು ಮತ್ತು ಕೀಲುಗಳು ಬಲಿಷ್ಠವಾಗಿ (ಗಟ್ಟಿಮುಟ್ಟಾಗಿ) ಮಾಡಲ್ಪಟ್ಟಿರುವುದು.

(ಬಲ್ಲಿತಪ್ಪೆಲುವುಂ ಕೀಲುವಂ ಮಾಳ್ಪುದು)

(೫) ಕೀಳಿತ ಸಂಹನನ–ಈ ನಾಮಕರ್ಮದ ಉದಯದಿಂದ ಗೊಟ್ಟದ ಒಳಗಿನ ರಂಧ್ರದಂತೆ ಇರುವ ಕೀಲುಗಳನ್ನುಳ್ಳ ಬಲಿಷ್ಠವಾದ ಎಲುಬಿನ ಜೋಡಣೆಯಿಂದ ಮಾಡಲ್ಪಟ್ಟ ಶರೀರ ಉಂಟಾಗುವುದು.

(ಕೀಲ್ಗೊಟ್ಟಂತೆ ಬಲ್ಲಿತಪ್ಪೆಲುಗಟ್ಟಂ ಮಾಳ್ಪುದು)

(೬) ಅಸಂಪ್ರಾಪ್ತಾಸೃಪಾಟಿಕಾ ಸಂಹನನ–ಈ ನಾಮಕರ್ಮದ ಉದಯದಿಂದ ಇಕ್ಕಳದಂತೆ ಜೋಡಣೆಯುಳ್ಳ ಎಲುಬಿನಿಂದ ಮಾಡಲ್ಪಟ್ಟ ಶರೀರ ಉಂಟಾಗುವುದು. 'ಅಸಂಪ್ರಾಪ್ತಾಸೃಪಾಟಿಕಾ' ಎಂದರೆ ಅಪೂರ್ಣವಾಗಿ ಬೆಳೆದ ಹಕ್ಕಿಯ ಕೊಕ್ಕು. **(ಒಂದೊಂದಂ ಮುಟ್ಟದೆಲುಗಟ್ಟಂ ಮಾಳ್ಪುದು)**

೯. ಸ್ಪರ್ಶ

(೧) ಮೃದು (ಕೋಮಲ)–ಈ ನಾಮಕರ್ಮದ ಉದಯದಿಂದ ಶರೀರದಲ್ಲಿ ಕೋಮಲತೆ ಉಂಟಾಗುತ್ತದೆ.

(೨) ಕರ್ಕಶ (ಕಠಿಣ)–ಈ ನಾಮಕರ್ಮದ ಉದಯದಿಂದ ಶರೀರದಲ್ಲಿ ಕಾಠಿಣ್ಯ ಉಂಟಾಗುತ್ತದೆ.

(೩) ಗುರು (ಭಾರ)–ಈ ನಾಮಕರ್ಮದ ಉದಯದಿಂದ ಭಾರದ ಶರೀರ ಉಂಟಾಗುತ್ತದೆ.

(೪) ಲಘು (ಹಗುರ)–ಈ ನಾಮಕರ್ಮದ ಉದಯದಿಂದ ಹಗುರ ಶರೀರ ಉಂಟಾಗುತ್ತದೆ.

(೫) ಶೀತ (ತಂಪು)–ಈ ನಾಮಕರ್ಮದ ಉದಯದಿಂದ ತಂಪು ಪ್ರಕೃತಿಯುಳ್ಳ ಶರೀರ ಉಂಟಾಗುತ್ತದೆ.

(೬) ಉಷ್ಣ (ಬಿಸಿ)–ಈ ನಾಮಕರ್ಮದ ಉದಯದಿಂದ ಉಷ್ಣ ಪ್ರಕೃತಿಯುಳ್ಳ ಶರೀರ ಉಂಟಾಗುತ್ತದೆ.

(೭) ಸ್ನಿಗ್ಧ (ಜಿಗುಟು)–ಈ ನಾಮಕರ್ಮದ ಉದಯದಿಂದ ಜಿಗುಟಾದ (ನುಣುಪಾದ) ಶರೀರ ಉಂಟಾಗುತ್ತದೆ.

(೮) ರುಕ್ಷ (ಒರಟು)–ಈ ನಾಮಕರ್ಮದ ಉದಯದಿಂದ ಒರಟಾದ ಶರೀರ ಉಂಟಾಗುತ್ತದೆ.

೧೦. ರಸಗಳು (ಇವು ತಮ್ಮ-ತಮ್ಮ ಉದಯ ಕಾಲದಲ್ಲಿ ಆಯಾ ರಸಗಳು ಉಂಟಾಗುವುದಕ್ಕೆ ನಿಮಿತ್ತವಾಗಿವೆ)

(೧) ಆಮ್ಲ (ಹುಳಿ)

(೨) ಮಧುರ (ಸಿಹಿ)

(೩) ತಿಕ್ತ (ಕಹಿ)

(೪) ಕಷಾಯ (ಒಗರು)

(೫) ಕಟು (ಖಾರ)

೧೧. ಗಂಧ

(೧) ಸುಗಂಧ–ಈ ನಾಮಕರ್ಮದ ಉದಯದಿಂದ ಶರೀರದಲ್ಲಿ ಸುಗಂಧ ಉಂಟಾಗುತ್ತದೆ.

(೨) ದುರ್ಗಂಧ–ಈ ನಾಮಕರ್ಮದ ಉದಯದಿಂದ ಶರೀರದಲ್ಲಿ ದುರ್ಗಂಧ ಉಂಟಾಗುತ್ತದೆ.

೧೨. ವರ್ಣ (ಇವು ತಮ್ಮ-ತಮ್ಮ ಉದಯ ಕಾಲದಲ್ಲಿ ಆಯಾ ವರ್ಣಗಳು ಶರೀರದಲ್ಲಿ ಉಂಟಾಗುವುದಕ್ಕೆ ನಿಮಿತ್ತವಾಗಿವೆ)

(೧) ಶುಕ್ಲ (ಬಿಳಿ)

(೨) ಪೀತ (ಹಳದಿ) ಅಥವಾ ನೀಲ (ನೀಲಿ)

(೩) ಹರಿತ (ಹಸಿರು)

(೪) ರಕ್ತ (ಕೆಂಪು)

(೫) ಕೃಷ್ಣ (ಕಪ್ಪು)

೧೩. ಆನುಪೂರ್ವಿ (ಇವು ತಮ್ಮ-ತಮ್ಮ ಉದಯ ಕಾಲದಲ್ಲಿ ಜೀವವು ನರಕಾದಿ ಗತಿಗಳಿಗೆ ಹೋಗುವಾಗ ವಿಗ್ರಹಗತಿಯಲ್ಲಿರುವ ಜೀವಕ್ಕೆ ವಿಶಿಷ್ಟ ಆಕಾರವು ಉಂಟಾಗುವುದಕ್ಕೆ ನಿಮಿತ್ತವಾಗಿವೆ)

(ಜೀವಂ ನರಕಾದಿಗಳಿಗೆ ಸಲುವ ವಿಗ್ರಹಗತಿಯೊಳು ವಿಶಿಷ್ಟಾಕಾರಮಂ ಮಾಳ್ಪುವು)

(೧) ನರಕಗತ್ಯಾನುಪೂರ್ವಿ

(೨) ತಿರ್ಯಂಚಗತ್ಯಾನುಪೂರ್ವಿ

(೩) ಮನುಷ್ಯಗತ್ಯಾನುಪೂರ್ವಿ

(೪) ದೇವಗತ್ಯಾನುಪೂರ್ವಿ

೧೪. ವಿಹಾಯೋಗತಿ: ಇದರಲ್ಲಿ ಎರಡು ಭೇದಗಳಿವೆ–

(೧) ಪ್ರಶಸ್ತ ವಿಹಾಯೋಗತಿ–ಈ ನಾಮಕರ್ಮದ ಉದಯದಿಂದ ಚೆಲುವಾದ (ಪ್ರಶಸ್ತ) ನಡಗೆಯು (ವಿಹಾಯೋಗತಿ=ಆಕಾಶ ಗಮನ ಶಕ್ತಿ?) ಶರೀರದಲ್ಲಿ ಉಂಟಾಗುತ್ತದೆ.

(ಚೆಲುವಪ್ಪನ ನಡೆಯಂ ಮಾಳ್ಪುದು)

(೨) ಅಪ್ರಶಸ್ತ ವಿಹಾಯೋಗತಿ–ಈ ನಾಮಕರ್ಮದ ಉದಯದಿಂದ ಚೆಲುವಲ್ಲದ (ಅಪ್ರಶಸ್ತ) ನಡಗೆಯು (ವಿಹಾಯೋಗತಿ=ಆಕಾಶ ಗಮನ ಶಕ್ತಿ?) ಶರೀರದಲ್ಲಿ ಉಂಟಾಗುತ್ತದೆ.

(ಚೆಲುವಲ್ಲದ ನಡೆಯಂ ಮಾಳ್ಪುದು)

(ಆ) ನಾಮಕರ್ಮ ಅಪಿಂಡ (ಭೇದವಿಲ್ಲದ) ಪ್ರಕೃತಿ–ಇವು ೨೮ ಇವೆ. ಇವುಗಳಲ್ಲಿ ಅಂತರ್ಗತವಾಗಿರುವ ಭೇದಗಳು ಸೇರಿ ಒಟ್ಟು ೬೫ ನಾಮಕರ್ಮ ಪ್ರಕೃತಿಗಳಾಗುತ್ತವೆ. ನಾಮಕರ್ಮ ಪಿಂಡ (ಭೇದಾವಳಿ) ಪ್ರಕೃತಿ–ಅಂತರ್ಗತವಾಗಿ ರುವ ಭೇದಗಳು ಒಟ್ಟು ೬೫. ಹೀಗೆ ಎರಡೂ ವಿಧಗಳಿಂದ ಒಟ್ಟು ೯೩ (೬೫+೨೮) ನಾಮಕರ್ಮ ಪ್ರಕೃತಿಗಳಾಗುತ್ತವೆ.

೧೫. ಅಗುರುಲಘುಕ–ಈ ನಾಮಕರ್ಮದ ಉದಯದಿಂದ ಭಾರವೂ ಅಲ್ಲದ, ಹಗುರವೂ ಅಲ್ಲದ ಶರೀರ ಉಂಟಾಗುತ್ತದೆ. **(ಬಿಣ್ಣಿತ್ತುಂ ನೊಚ್ಚಿತ್ತುಮಲ್ಲದ ಶರೀರಮಂ ಮಾಳ್ಪುದು)**

೧೬. ಉಪಘಾತ–ಈ ನಾಮಕರ್ಮದ ಉದಯದಿಂದ ದುಃಖವನ್ನುಂಟು ಮಾಡುವ ಬೊಜ್ಜು ಬೆಳೆದು ಜೋಲಾಡುವ, ಇತ್ಯಾದಿ ರೂಪದ ಶರೀರ ಉಂಟಾಗುತ್ತದೆ.

(ತನಗೆ ಪೀಡೆಯಂ ಮಾಳ್ಪ ದೊಳ್ಳು ಮೊದಲಾದುವಂ ಮಾಳ್ಪುದು)

೧೭. ಪರಘಾತ–ಈ ನಾಮಕರ್ಮದ ಉದಯದಿಂದ ಬೇರೆಯವರಿಗೆ ದುಃಖವನ್ನುಂಟುಮಾಡುವ (ಹಾವಿನ ಹಲ್ಲು, ಇತ್ಯಾದಿ) ಶರೀರ ಉಂಟಾಗುತ್ತದೆ.

(ಪೆರರ್ಗೆ ಪೀಡೆಯಂ ಪಾಳ್ಪ ಪಾವಿನಪಲ್ಲು ಮೊದಲಾದುವಂ ಪಾಳ್ಪುದು)

೧೮. ಉಚ್ಛ್ವಾಸ–ಈ ನಾಮಕರ್ಮದ ಉದಯದಿಂದ ಬುಸುಗುಟ್ಟುವ ಶರೀರ ಉಂಟಾಗುತ್ತದೆ.

(ಸುಯ್ಲಂ ಮಾಳ್ಪುದು)

೧೯. ಆತಪ–ಈ ನಾಮಕರ್ಮದ ಉದಯದಿಂದ ಸೂರ್ಯಬಿಂಬದಲ್ಲಿ ಹುಟ್ಟಿದ ಪೃಥ್ವಿಕಾಯಿಕ ಶರೀರಕ್ಕೆ ಬೆಂಕಿಯ ನ್ನುಳ್ಳ (ಉಷ್ಣದಿಂದ ಕೂಡಿದ) ಬೆಳಕು ಉಂಟಾಗುತ್ತದೆ.

(ಸೂರ್ಯಬಿಂಬದೊಳು ಪುಟ್ಟಿದ ಪೃಥಿವೀಕಾಯಿಕಂಗಳ ಶರೀರಕ್ಕೆ ಬೆಂಕಿಯನುಳ್ಳ ಬೆಳಗಂ ಮಾಳ್ಪುದು)
(ಗೊಮ್ಮಟಸಾರ, ಕರ್ಮಕಾಂಡ ೧–೩೩)

೨೦. ಉದ್ಯೋತ–ಈ ನಾಮಕರ್ಮದ ಉದಯದಿಂದ ಚಂದ್ರ–ತಾರೆಗಳಲ್ಲಿ, ತೇಜಕಾಯಿಕ, ವಾತಕಾಯಿಕ, ಸಾಧಾರಣ ವನಸ್ಪತಿ ಕಾಯಿಕಗಳಲ್ಲದ, ಬಾದರ ಪರ್ಯಾಪ್ತಕಗಳಲ್ಲಿ ಹುಟ್ಟಿದ ತಿರ್ಯಗ್ಜೀವಕ್ಕೆ ಬೆಂಕಿಯಿಲ್ಲದ (ಉಷ್ಣವಿಲ್ಲದ) ಬೆಳಕು (ದೇಹಕಾಂತಿ) ಶರೀರದಲ್ಲಿ ಉಂಟಾಗುತ್ತದೆ.

(ಚಂದ್ರತಾರಕಾದಿ ಬಿಂಬಂಗಳೊಳಂ ತೇಜಕಾಯಿಕ ವಾತಕಾಯಿಕಂಗಳಲ್ಲದ ಸಾಧಾರಣ ವನಸ್ಪತಿಕಾಯಿಕಂಗ ಳಲ್ಲದ ಬಾದರಪರ್ಯಾಪ್ತಕಂಗಳೊಳಂ ಪುಟ್ಟಿದ ತಿರ್ಯಗ್ಜೀವಕ್ಕೆ ಬೆಂಕಿಯಿಲ್ಲದ ಬೆಳಗಂ ಮಾಳ್ಪುದು)

೨೧. ತ್ರಸ–ಈ ನಾಮಕರ್ಮದ ಉದಯದಯವು ಶರೀರದ ಅವಯವಗಳಿಗೆ ಚಲನೆಯನ್ನು (ದ್ವೀಂದ್ರಿಯಾದಿ ಜೀವಿಗಳು) ಉಂಟುಮಾಡುತ್ತದೆ. **(ಶರೀರಾವಯುವಂಗಳ್ಗೆ ಚಲನೆಯಂ ಮಾಳ್ಪುದು)**

೨೨. ಸ್ಥಾವರ–ಈ ನಾಮಕರ್ಮದ ಉದಯದಿಂದ ಚಲನೆಯಿಲ್ಲದ (ಏಕೇಂದ್ರಿಯ ಜೀವ) ಶರೀರವು ಉಂಟಾಗುತ್ತದೆ. **(ಚಲನೆಯಿಲ್ಲದ ಶರೀರಂ ಮಾಳ್ಪುದು)**

೨೩. ಬಾದರ–ಈ ನಾಮಕರ್ಮದ ಉದಯದಿಂದ ಬೇರೆಯವರಿಂದ ಬಾಧೆಪಡುವ ಶರೀರ ಉಂಟಾಗುತ್ತದೆ.
(ಪೆಱವಱಿಂ ಬಾಧೆಪಡುವ ಶರೀರಮಂ ಮಾಳ್ಪುದು)

೨೪. ಸೂಕ್ಷ್ಮ–ಈ ನಾಮಕರ್ಮದ ಉದಯದಿಂದ ಬೇರೆಯವರಿಂದ ಬಾಧೆಗೆ ಒಳಗಾಗದ ಶರೀರ ಉಂಟಾಗುತ್ತದೆ.
(ಪೆಱರಿಂ ಬಾಧೆವಡೆಯದ ಶರೀರಮಂ ಮಾಳ್ಪುದು)

೨೫. ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಆಹಾರ ವರ್ಗಣಾ, ಭಾಷಾ ವರ್ಗಣಾ ಮತ್ತು ಮನೋ
(೫–೮೩ (ವ)) ವರ್ಗಣೆಯ ಪರಮಾಣುಗಳು ಆಹಾರ ಶರೀರಾದಿ ರೂಪವಾಗಿ ಪರಿಣಮಿಸಲ್ಪಡುವ ಆತ್ಮನ
(೬–೩೭ (ವ)) (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಪರ್ಯಾಪ್ತಿ ಎನ್ನುತ್ತಾರೆ. ಇದರಲ್ಲಿ ಆರು ಭೇದಗಳಿವೆ:

(ಅ) ಆಹಾರ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಆಹಾರ ವರ್ಗಣೆಯಿಂದ ಬಂದ ಪುದ್ಗಲಸ್ಕಂಧಗಳನ್ನು ಖಲ (ಹಿಂಡಿ) ಭಾಗ ಮತ್ತು ರಸ ಭಾಗ ಸ್ವರೂಪಕ್ಕೆ ಪರಿಣಮಿಸಲು ಕಾರಣೀಭೂತವಾದ ಆತ್ಮನ (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಆಹಾರ ಪರ್ಯಾಪ್ತಿ ಎನ್ನುತ್ತಾರೆ.
(ಆಹಾರವರ್ಗಣೆಯಿಂ ಬಂದ ಪುದ್ಗಲಸ್ಕಂಧಂಗಳಂ ಖಳ–ರಸಭಾಗಸ್ವರೂಪದಿಂ ಪರಿಣಮಿಸುವಂತಪ್ಪಾತ್ಮನ ಶಕ್ತಿಯ ನೆಱವಿ ಆಹಾರಪರ್ಯಾಪ್ತಿಯೆಂಬುದು)

(ಆ) ಶರೀರ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಹಿಂಡಿಯನ್ನು ಹೋಲುವ ಖಲ ಭಾಗವನ್ನು ಅಸ್ಥಿ (ಮೂಳೆ) ಮೊದಲಾದ ಕಠಿಣ ಅವಯವಗಳ ಸ್ವರೂಪಕ್ಕೆ, ಎಣ್ಣೆಯನ್ನು ಹೋಲುವ ರಸ ಭಾಗವನ್ನು ರಕ್ತ ಮೊದಲಾದ ದ್ರವ ಅವಯವ ಸ್ವರೂಪಕ್ಕೆ ಪರಿಣಮಿಸಲು ಕಾರಣೀಭೂತವಾದ ಆತ್ಮನ (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಶರೀರ ಪರ್ಯಾಪ್ತಿ ಎನ್ನುತ್ತಾರೆ.
(ಪಿಂಡಿಯಂ ಪೋಲ್ವ ಖಳಭಾಗಮನಸ್ಥಿ ಮೊದಲಾದ ಕಠಿಣಾವಯವ ಸ್ವರೂಪದಿಂ ಎಣ್ಣೆಯಂ ಪೋಲ್ವ ರಸಭಾಗಮಂ ರಕ್ತ ಮೊದಲಾದ ದ್ರವಾವಯವ ಸ್ವರೂಪದಿಂ ಪರಿಣಮಿಸುವಾತ್ಮನ ಶಕ್ತಿಯ ನೆಱವಿ ಶರೀರ ಪರ್ಯಾಪ್ತಿಯೆಂಬುದು)

(ಇ) ಇಂದ್ರಿಯ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ತನಗೆ ಸಂಬಂಧಿಸಿದ ಉಚಿತವಾದ [ಶರೀರದ] ಪ್ರದೇಶದಲ್ಲಿದ್ದು, ವರ್ಣಾದಿ ವಿಷಯಗಳನ್ನು (ಇಂದ್ರಿಯ ಗೋಚರವಾಗುವ ಜ್ಞಾನೇಂದ್ರಿಯಗಳು) ಕೈಗೊಳ್ಳುವ (ಗ್ರಹಿಸುವ) ವ್ಯಾಪಾರದ (ಕಾರಣೀಭೂತ) ವಿಶಿಷ್ಟವಾದ ಆತ್ಮನ (ಜೀವ) ಶಕ್ತಿಗೆ ಇಂದ್ರಿಯ ಪರ್ಯಾಪ್ತಿ ಎನ್ನುತ್ತಾರೆ.
(ಸ್ವಯೋಗ್ಯಪ್ರದೇಶದೊಳಿರ್ದ ವರ್ಣಾದಿವಿಷಯಂಗಳಂ ಕೈಕೊಳ್ವ ವ್ಯಾಪಾರ ವಿಶಿಷ್ಟಮಪ್ಪಾತ್ಮನಶಕ್ತಿ ಇಂದ್ರಿಯಪರ್ಯಾಪ್ತಿಯೆಂಬುದು)

(ಈ) ಉಚ್ಛ್ವಾಸ ನಿಃಶ್ವಾಸ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಆಹಾರ ವರ್ಗಣೆಯಿಂದ ಬಂದ ಪುದ್ಗಲಗಳನ್ನು ಉಚ್ಛ್ವಾಸ–ನಿಃಶ್ವಾಸ ಸ್ವರೂಪಕ್ಕೆ ಪರಿಣಮಿಸಲು ಕಾರಣೀಭೂತವಾದ ಆತ್ಮನ (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಉಚ್ಛ್ವಾಸ–ನಿಃಶ್ವಾಸ ಪರ್ಯಾಪ್ತಿ ಎನ್ನುತ್ತಾರೆ.
(ಆಹಾರವರ್ಗಣೆಯಿಂ ಬಂದ ಪುದ್ಗಲಂಗಳಂ ಉಚ್ಛ್ವಾಸನಿಶ್ವಾಸ ಸ್ವರೂಪದಿಂ ಪರಿಣಮಿಸುವಾತ್ಮನ ಶಕ್ತಿಯ ನೆಱವಿ ಉಚ್ಛ್ವಾಸ ನಿಶ್ವಾಸಪರ್ಯಾಪ್ತಿಯೆಂಬುದು)

(ಉ) ಭಾಷಾ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಯೋಗ್ಯ ಕಾಲದಲ್ಲಿ ಬಂದ ಭಾಷಾವರ್ಗಣೆಯ ಪುದ್ಗಲವನ್ನು ಚತುರ್ವಿಧ ಭಾಷಾರೂಪಕ್ಕೆ ಪರಿಣಮಿಸಲು ಕಾರಣೀಭೂತವಾದ ಆತ್ಮನ (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಭಾಷಾ ಪರ್ಯಾಪ್ತಿ ಎನ್ನುತ್ತಾರೆ.
(ಯೋಗ್ಯಕಾಲದೊಳು ಬಂದ ಭಾಷಾವರ್ಗಣೆಯ ಪುದ್ಗಲಮಂ ಚತುರ್ವಿಧ ಭಾಷಾಸ್ವರೂಪದಿಂ ಪರಿಣಮಿಸುವಾತ್ಮನ ಶಕ್ತಿಯ ನೆಱವಿ ಭಾಷಾಪರ್ಯಾಪ್ತಿಯೆಂಬುದು)

(ಊ) ಮನಃ ಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ [ಈ ಮೊದಲೇ] ನೋಡಿ ಕೇಳಿ ಅನುಭವಿಸಿದ ಅರ್ಥಗಳನ್ನು (ಅಂದರೆ, ವಿಷಯಗಳನ್ನು ಅಥವಾ ಶಬ್ದದ ಅಭಿಪ್ರಾಯಗಳನ್ನು) ನೆನೆದುಕೊಳ್ಳುವ (ಜ್ಞಾಪಿಸಿಕೊಳ್ಳುವ) ಆತ್ಮನ (ಜೀವ) ಶಕ್ತಿಯ ಪೂರ್ಣತಾ ವಿಶೇಷಕ್ಕೆ ಮನಃ ಪರ್ಯಾಪ್ತಿ ಎನ್ನುತ್ತಾರೆ.

(ದೃಷ್ಟಶ್ರುತಾನುಭೂತಂಗಳಪ್ಪರ್ಥಂಗಳಂ ನೆನೆವಾತ್ಮನ ಶಕ್ತಿಯ ನೆಱವಿ ಮನಃಪರ್ಯಾಪ್ತಿ ಯೆಂಬುದು)

೨೬. ಅಪರ್ಯಾಪ್ತಿ–ಈ ನಾಮಕರ್ಮದ ಉದಯದಿಂದ ಸ್ಕಂಧಗಳು ಪರಿಣಮಿಸಲು ಕಾರಣೀಭೂತವಾದ ವಿಶಿಷ್ಟವಾದ ಆತ್ಮನ (ಜೀವ) ಶಕ್ತಿಯ ಪೂರ್ಣತೆಯು ಉಂಟಾಗದಂತೆ ಮಾಡುವುದಕ್ಕೆ ಅಪರ್ಯಾಪ್ತಿ ಎನ್ನುತ್ತಾರೆ. ಅಂದರೆ ಆರು ಪರ್ಯಾಪ್ತಿ ನಾಮಕರ್ಮಗಳು ಇಲ್ಲದಂತಾಗಲು ಕಾರಣವಾಗುವುದು.

(ತಂತಮ್ಮ ಪರ್ಯಾಪ್ತಿಗಳ ನೆಱವಿಯನಾಗಲೀಯದು)

೨೭. ಪ್ರತ್ಯೇಕ ಶರೀರ–ಈ ನಾಮಕರ್ಮದ ಉದಯದಿಂದ ಒಂದು ಜೀವಕ್ಕೆ ಒಂದೇ ಶರೀರ ಉಂಟಾಗುತ್ತದೆ. **(ಒಂದೇ ಜೀವಕ್ಕವೊಂದೇ ಶರೀರಮಂ ಮಾಳ್ಪುದು)**

೨೮. ಸಾಧಾರಣ ಶರೀರ–ಈ ನಾಮಕರ್ಮದ ಉದಯದಿಂದ ಅನಂತ ಜೀವಿಗಳಿಗೆ ಒಂದು ಶರೀರ ಉಂಟಾಗುತ್ತದೆ. **(ಅನಂತ ಜೀವಂಗಳಿಗೊಂದು ಶರೀರಂ ಮಾಳ್ಪುದು)**

೨೯. ಸ್ಥಿರ–ಈ ನಾಮಕರ್ಮದ ಉದಯದಿಂದ ರಸ (ಕೀವು), ರುಧಿರ (ರಕ್ತ), ಮಾಂಸ, ಮೇದೋ (ಮೇದಸ್ಸು), ಅಸ್ಥಿ (ಮೂಳೆ), ಮಜ್ಜ (ಅಸ್ಥಿಸಾರ), ಶುಕ್ಲ (ವೀರ್ಯ) ಗಳೆಂಬ ಸಪ್ತಧಾತುಗಳು ತಮ್ಮ ತಮ್ಮ ಸ್ಥಾನದಲ್ಲಿ ಸ್ಥಿರತ್ವವನ್ನು ಪಡೆಯುವುದರಿಂದ ಸ್ಥಿರ ಶರೀರ ಉಂಟಾಗುತ್ತದೆ.

(ರಸ ರುಧಿರ ಮಾಂಸ ಮೇದೋಸ್ಥಿ ಮಜ್ಜ ಶುಕ್ಲಂಗಳೆಂಬ ಸಪ್ತಧಾತುಗಳಂ ಸ್ಥಿರಂ ಮಾಳ್ಪುದು)

೩೦. ಅಸ್ಥಿರ–ಈ ನಾಮಕರ್ಮದ ಉದಯದಿಂದ ಶರೀರದ ಧಾತುಗಳು ತಮ್ಮ-ತಮ್ಮ ಸ್ಥಾನದಲ್ಲಿ ಸ್ಥಿರ ಇರುವುದಿಲ್ಲ ವಾದ್ದರಿಂದ ಅಸ್ಥಿರ ಶರೀರ ಉಂಟಾಗುತ್ತದೆ.

(ವೋಅಸ್ಥಿರನಾಮಂ ಸಪ್ತಧಾತುಗಳವೊಂದೊಂದಕ್ಕೆ ಸಲಿಸುವುದು)

೩೧. ಶುಭ–ಈ ನಾಮಕರ್ಮದ ಉದಯದಿಂದ ಮುಖ ಇತ್ಯಾದಿಯಾಗಿ ಮಂಗಳಕರ (ಶ್ರೇಷ್ಠ) ಅವಯವಗಳ ಶರೀರ ಉಂಟಾಗುತ್ತದೆ. **(ಮಸ್ತಕಾದಿ ಪ್ರಶಸ್ತಾವಯವಂಗಳಂ ಮಾಳ್ಪುದು)**

೩೨. ಅಶುಭ–ಈ ನಾಮಕರ್ಮದ ಉದಯದಿಂದ ಗುದಪ್ರದೇಶದಾದಿಯಾಗಿ ಎಲ್ಲವೂ ಅಮಂಗಳಕರ (ಅಶುಭ) ಅವಯವಗಳುಳ್ಳ ಶರೀರ ಉಂಟಾಗುತ್ತದೆ. **(ಅಪಾನಾದ್ಯಪ್ರಶಸ್ತಾವಯವಂಗಳಂ ಮಾಳ್ಪುದು)**

೩೩. ಸುಭಗ–ಈ ನಾಮಕರ್ಮದ ಉದಯದಿಂದ ಬಹು ಮಂದಿ ಪ್ರೀತಿಸುವ (ಪೂಜಿಸುವ) ಶರೀರ ಉಂಟಾಗುತ್ತದೆ. **(ಪಲರ್ಕೂರ್ಪುದುಂ ಮಾಳ್ಪುದು)**

೩೪. ದುರ್ಭಗ–ಈ ನಾಮಕರ್ಮದ ಉದಯದಿಂದ ಬಹು ಮಂದಿ ದ್ವೇಷಿಸುವ ಶರೀರ ಉಂಟಾಗುತ್ತದೆ.

(ಪಲರ್ಮುನಿವುದಂ ಮಾಳ್ಪುದು)

೩೫. ಸುಸ್ವರ–ಈ ನಾಮಕರ್ಮದ ಉದಯದಿಂದ ಕಿವಿಗೆ ಇಂಪಾಗುವ ಧ್ವನಿ ಹೊರಡಿಸುವ ಕಂಠವುಳ್ಳ ಶರೀರ ಉಂಟಾಗುತ್ತದೆ. **(ಕಿವಿಗಿನಿದಪ್ಪ ಸ್ವರಮಂ ಮಾಳ್ಪುದು)**

೩೬. ದುಸ್ವರ–ಈ ನಾಮಕರ್ಮದ ಉದಯದಿಂದ ಕರ್ಕಶವಾಗಿ ಧ್ವನಿ ಹೊರಡಿಸುವ ಕಂಠವುಳ್ಳ ಶರೀರ ಉಂಟಾಗುತ್ತದೆ. **(ಕಿವಿಗುಱಿಿಸಿದ ಸ್ವರಮಂ ಮಾಳ್ಪುದು)**

೩೭. ಆದೇಯ–ಈ ನಾಮಕರ್ಮದ ಉದಯದಿಂದ ಹಲವು ಮಂದಿ ಆದರಿಸುವ (ದೇಹಕಾಂತಿಯುಳ್ಳ) ಶರೀರ ಉಂಟಾಗುತ್ತದೆ. **(ಪಲರ್ಮನ್ನಿಸುವುದಂ ಮಾಳ್ಪುದು)**

೩೮. ಅನಾದೇಯ–ಈ ನಾಮಕರ್ಮದ ಉದಯದಿಂದ ಹಲವು ಮಂದಿಯು ಅನಾದರಿಸುವ (ತಿರಸ್ಕರಿಸುವ) ಶರೀರ ಉಂಟಾಗುತ್ತದೆ. **(ಪಲರ್ಮನ್ನಿಸದುದಂ ಮಾಳ್ಪುದು)**

೩೯. ಯಶಃಕೀರ್ತಿ–ಈ ನಾಮಕರ್ಮದ ಉದಯದಿಂದ ಗುಣವಂತನೆಂದು ಪ್ರಸಿದ್ಧಿ ಹೊಂದುವ (ಹೊಗಳಿಸಿಕೊಳ್ಳುವ) ಶರೀರ ಉಂಟಾಗುತ್ತದೆ. **(ಗುಣವಳಿಸಂದು ಪೊಗಳ್ತೆಯಂ ಮಾಳ್ಪುದು)**

೪೦. ಅಯಶಃಕೀರ್ತಿ–ಈ ನಾಮಕರ್ಮದ ಉದಯದಿಂದ ಅನ್ಯಾಯವಾದ ಆರೋಪ, ನಿಂದೆಗಳಿಗೆ ಒಳಗಾಗುವ (ಅನ್ಯಾಯವಾಗಿ ಹೀಯಾಳಿಸಿಕೊಳ್ಳುವ) ಶರೀರ ಉಂಟಾಗುತ್ತದೆ. **(ಪಳಿಯಂ ಮಾಳ್ಪುದು)**

೪೧. ತೀರ್ಥಂಕರ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಪಂಚಕಲ್ಯಾಣವಿಭೂತಿಯನ್ನುಳ್ಳ ಅರ್ಹಂತಪದ ಉಂಟಾಗುತ್ತದೆ. **(ಪಂಚಕಲ್ಯಾಣವಿಭೂತಿಯನ್ನುಳ್ಳ ಅರ್ಹಂತ್ಯಪದಮಂ ಮಾಳ್ಪುದು)**

೪೨. ನಿರ್ಮಾಣ ನಾಮಕರ್ಮ–ಈ ನಾಮಕರ್ಮದ ಉದಯದಿಂದ ಶರೀರದಲ್ಲಿ ಅಂಗೋಪಾಂಗಗಳ ರಚನೆಯುಂಟಾಗುವುದು. ಇದರಲ್ಲಿ ಸ್ಥಾನನಿರ್ಮಾಣ ಮತ್ತು ಪ್ರಮಾಣನಿರ್ಮಾಣಗಳೆಂದು ಎರಡು ಬಗೆ. ಸ್ಥಾನನಿರ್ಮಾಣ ನಾಮಕರ್ಮವು ಕಣ್ಣು, ಕಿವಿ, ಮೂಗು, ಮೊದಲಾದ ಅಂಗಗಳು ನಿಯಮಿತ ಸ್ಥಳದಲ್ಲಿಯೇ ಇರುವಂತೆ ಮಾಡುತ್ತದೆ. ಪ್ರಮಾಣನಿರ್ಮಾಣ ನಾಮಕರ್ಮವು ಮೂಗು, ಕಣ್ಣು ಮೊದಲಾದ ಅಂಗಗಳು ನಿಯಮಿತ ಪ್ರಮಾಣದಲ್ಲಿ ಉದ್ದ, ಅಗಲ, ದಪ್ಪಗಳಿರುವಂತೆ ಮಾಡುತ್ತದೆ.

(ತಂತಮ್ಮಾಕಾರದೊಳಂ ಪ್ರಮಾಣದೊಳಂ ಕೂಡಿ ತಂತಮ್ಮ ಸ್ಥಾನದೊಳು ಮಾಳ್ಪುದು)

ನೂರಹತ್ತು (೧೧೦)–ವಿಜಯಾರ್ಧ ಪರ್ವತ ಶ್ರೇಣಿಯಲ್ಲಿರುವ ನಗರಗಳ ಹೆಸರುಗಳು

೧. ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿರುವ ೫೦ ನಗರಗಳ ಹೆಸರುಗಳ ಪಟ್ಟಿ:

(ಪದ್ಯ/ವಚನ ಸಂ. ೧–೬೨ (ವ)) (ತಿಲೋಯಪಣ್ಣತ್ತೀ ನಾಲ್ಕನೇ ಮಹಾಧಿಕಾರದ ಗಾಹೆ ಸಂಖ್ಯೆ ೧೧೪–೧೧೯)

(೧) ಕಿಂನಾಮಿತ, (೨) ಕಿನ್ನರಗೀತ, (೩) ನರಗೀತ, (೪) ಬಹುಕೇತು, (೫) ಪುಂಡರೀಕ, (೬) ಸಿಂಹಧ್ವಜ, (೭) ಶ್ವೇತಕೇತು, (೮) ಗರುಡಧ್ವಜ, (೯) ಶ್ರೀಪ್ರಭ, (೧೦) ಶ್ರೀಧರ, (೧೧) ಲೋಹಾರ್ಗಲ, (೧೨) ಅರಿಂಜಯ, (೧೩) ವಜ್ರಾರ್ಗಲ, (೧೪) ವಜ್ರಾಢ್ಯ, (೧೫) ವಿಮೋಚಿತಾ, (೧೬) ಜಯಪುರೀ, (೧೭) ಶಕಟಮುಖಿ, (೧೮) ಚತುರ್ಮುಖಿ, (೧೯) ಬಹುಮುಖಿ, (೨೦) ಅರಜಸ್ಕಾ, (೨೧) ವಿರಜಸ್ಕಾ, (೨೨) ರಥನೂಪುರ, (೨೩) ಮೇಖಲಾಪುರ, (೨೪) ಕ್ಷೇಮಪುರ, (೨೫) ಅಪರಾಜಿತ, (೨೬) ಕಾಮಪುಷ್ಪ, (೨೭) ಗಗನಚರಿ, (೨೮) ವಿಜಯಚರಿ, (೨೯) ಶುಕ್ರಪುರಿ, (೩೦) ಸಂಜಯಂತ ನಗರಿ, (೩೧) ಜಯಂತ, (೩೨) ವಿಜಯ, (೩೩) ವೈಜಯಂತ, (೩೪) ಕ್ಷೇಮಂಕರ, (೩೫) ಚಂದ್ರಾಭ, (೩೬) ಸೂರ್ಯಾಭ, (೩೭) ಪುರೋತ್ತಮ, (೩೮) ಚಿತ್ರಕೂಟ, (೩೯) ಮಹಾಕೂಟ, (೪೦) ಸುವರ್ಣಕೂಟ, (೪೧) ತ್ರಿಕೂಟ, (೪೨) ವಿಚಿತ್ರಕೂಟ, (೪೩) ಮೇಘಕೂಟ, (೪೪) ವೈಶ್ರವಣಕೂಟ, (೪೫) ಸೂರ್ಯಪುರ, (೪೬) ಚಂದ್ರ, (೪೭) ನಿತ್ಯೋದ್ಯೋತ, (೪೮) ವಿಮುಖಿ, (೪೯) ನಿತ್ಯವಾಹಿನಿ, ಮತ್ತು (೫೦) ಸುಮುಖಿ.

೨. ವಿಜಯಾರ್ಧ ಪರ್ವತದ ಉತ್ತರ ಶ್ರೇಣಿಯಲ್ಲಿರುವ ೬೦ ನಗರಗಳ ಹೆಸರುಗಳ ಪಟ್ಟಿ:

(ಪದ್ಯ/ವಚನ ಸಂ. ೧–೬೨ (ವ)) (ತಿಲೋಯಪಣ್ಣತ್ತೀ ನಾಲ್ಕನೇ ಮಹಾಧಿಕಾರದ ಗಾಹೆ ಸಂಖ್ಯೆ ೧೨೧–೧೨೮)

(೧) ಅರ್ಜುನಿ, (೨) ಅರುಣಿ, (೩) ಕೈಲಾಸ, (೪) ವಾರುಣಿ, (೫) ವಿದ್ಯುತ್ಪ್ರಭ, (೬) ಕಿಲಕಿಲ, (೭) ಚೂಡಾಮಣಿ, (೮) ಶಶಿಪ್ರಭ, (೯) ವಂಶಾಲ, (೧೦) ಪುಷ್ಪಚೂಲ, (೧೧) ಹಂಸಗರ್ಭ, (೧೨) ವಲಾಹಕ, (೧೩) ಶಿವಂಕರ, (೧೪) ಶ್ರೀಸೌಧ, (೧೫) ಚಮರ, (೧೬) ಶಿವಮಂದಿರ, (೧೭) ವಸುಮತ್ಕಾ, (೧೮) ವಸುಮತೀ, (೧೯) ಸಿದ್ಧಾರ್ಥಪುರ, (೨೦) ಶತ್ರುಂಜಯ, (೨೧) ಕೇತುಮಾಲ, (೨೨) ಸುರಪತಿಕಾಂತ, (೨೩) ಗಗನನಂದನ, (೨೪) ಅಶೋಕ, (೨೫) ವಿಶೋಕ, (೨೬) ವೀತಶೋಕ, (೨೭) ಅಲಕಾ, (೨೮) ತಿಲಕ, (೨೯) ಅಂಬರತಿಲಕ, (೩೦) ಮಂದರ, (೩೧) ಕುಮುದ, (೩೨) ಕುಂದ, (೩೩) ಗಗನವಲ್ಲಭ, (೩೪) ದಿವ್ಯ ತಿಲಕ, (೩೫) ಭೂಮಿತಿಲಕ, (೩೬) ಗಂಧರ್ವಪುರ, (೩೭) ಮುಕ್ತಾಹರ, (೩೮) ನೈಮಿಷ, (೩೯) ಅಗ್ನಿಜ್ವಾಲ, (೪೦) ಮಹಾಜ್ವಾಲ, (೪೧) ಶ್ರೀನಿಕೇತನ, (೪೨) ಜಯಾವಹ, (೪೩) ಶ್ರೀನಿವಾಸ, (೪೪) ಮಣಿವಜ್ರ, (೪೫) ಭದ್ರಾಶ್ವ, (೪೬) ಧನಂಜಯ, (೪೭) ಮಾಹೇಂದ್ರ, (೪೮) ವಿಜಯನಗರ, (೪೯) ಸುಗಂಧಿನಿ, (೫೦) ವಜ್ರಾರ್ದ್ಧತರ, (೫೧) ಗೋಕ್ಷೀರ ಫೇನ, (೫೨) ಅಕ್ಷೋಭ, (೫೩) ಗಿರಿಶಿಖರ, (೫೪) ಧರಣಿ, (೫೫) ಧಾರಿಣಿ, (೫೬) ದುರ್ಗ, (೫೭) ದುರ್ದ್ಧರ, (೫೮) ಸುದರ್ಶನ, (೫೯) ರತ್ನಾಕರ, ಮತ್ತು (೬೦) ರತ್ನಪುರ.

ಹೀಗೆ ಒಟ್ಟು ೧೧೦ ನಗರಗಳು ವಿಜಯಾರ್ಧ ಪರ್ವತದ ದಕ್ಷಿಣೋತ್ತರ ಶ್ರೇಣಿಗಳಲ್ಲಿ ಹರಡಿವೆ.

ಹದಿನೆಂಟುಸಾವಿರ (೧೮೦೦೦)–ಶೀಲಗಳು

ಹದಿನೆಂಟು ಸಾವಿರ ಶೀಲಗಳು: (ಪದ್ಯ/ವಚನ ಸಂ. ೧–೫, ೬–೨೯ (ವ), ೧೦–೯ (ವ), ೧೬–೪೯ (ವ))
(ಮೂಲಾಚಾರ, ಶೀಲಗುಣಾಧಿಕಾರ, ಗಾಥೆ ೧೦೧೮ ರ ಆಚಾರವೃತ್ತಿ ಮತ್ತು ಗಾಥೆ ೧೦೧೯) (ಅಷ್ಟಪಾಹುಡ, ಭಾವಪಾಹುಡ, ೧೨೦)

೧. ಯೋಗಗಳು:

(೧) ಮನೋಯೋಗ
(೨) ವಚನಯೋಗ
(೩) ಕಾಯಯೋಗ

೨. ಕರಣಗಳು:

(೧) ಅಶುಭಮನಃಪ್ರವೃತ್ತಿತ್ಯಾಗ
(೨) ಅಶುಭವಚನಪ್ರವೃತ್ತಿತ್ಯಾಗ
(೩) ಅಶುಭಕಾಯಪ್ರವೃತ್ತಿತ್ಯಾಗ

೩. ಸಂಜ್ಞೆಗಳು:

(೧) ಆಹಾರ
(೨) ಭಯ
(೩) ಮೈಥುನ
(೪) ಪರಿಗ್ರಹ

೪. ಇಂದ್ರಿಯಗಳು:

(೧) ಸ್ಪರ್ಷನೇಂದ್ರಿಯ
(೨) ರಸನೇಂದ್ರಿಯ
(೩) ಘ್ರಾಣೇಂದ್ರಿಯ
(೪) ಚಕ್ಷುರಿಂದ್ರಿಯ
(೫) ಕರ್ಣೇಂದ್ರಿಯ

೫. ದಶ ಧರ್ಮಗಳು:

(೧) ಉತ್ತಮ ಕ್ಷಮಾ
(೨) ಉತ್ತಮ ಮಾರ್ದವ
(೩) ಉತ್ತಮ ಆರ್ಜವ
(೪) ಉತ್ತಮ ಶೌಚ
(೫) ಉತ್ತಮ ಸತ್ಯ
(೬) ಉತ್ತಮ ಸಂಯಮ
(೭) ಉತ್ತಮ ತಪ
(೮) ಉತ್ತಮ ತ್ಯಾಗ
(೯) ಉತ್ತಮ ಆಂಕಿಚನ್ಯ
(೧೦) ಉತ್ತಮ ಬ್ರಹ್ಮಚರ್ಯ

೬. ಸಂಯಮ (ಜೀವ ಹಿಂಸಾತ್ಯಾಗ):

(೧) ಪೃಥ್ವಿಕಾಯಿಕಜೀವ ಹಿಂಸಾತ್ಯಾಗ
(೨) ಜಲಕಾಯಿಕಜೀವ ಹಿಂಸಾತ್ಯಾಗ
(೩) ಅಗ್ನಿಕಾಯಿಕಜೀವ ಹಿಂಸಾತ್ಯಾಗ
(೪) ವಾಯುಕಾಯಿಕಜೀವ ಹಿಂಸಾತ್ಯಾಗ
(೫) ಪ್ರತ್ಯೇಕವನಸ್ಪತಿಕಾಯಿಕಜೀವ ಹಿಂಸಾತ್ಯಾಗ
(೬) ಸಾಧಾರಣ ವನಸ್ಪತಿಕಾಯಿಕಜೀವ ಹಿಂಸಾತ್ಯಾಗ

(೭) ದ್ವೀಂದ್ರಿಯಜೀವ ಹಿಂಸಾತ್ಯಾಗ
(೮) ತ್ರೀಂದ್ರಿಯಜೀವ ಹಿಂಸಾತ್ಯಾಗ
(೯) ಚತುರಿಂದ್ರಿಯಜೀವ ಹಿಂಸಾತ್ಯಾಗ
(೧೦) ಪಂಚೇಂದ್ರಿಯಜೀವ ಹಿಂಸಾತ್ಯಾಗ

[ಈ ಮೇಲೆ ಹೇಳಿರುವ, ಮೂರು ಯೋಗಗಳು, ಮೂರು ಕರಣಗಳು, ನಾಲ್ಕು ಸಂಜ್ಞೆಗಳು, ಐದು ಇಂದ್ರಿಯಗಳು, ಹತ್ತು ಶ್ರಮಣಧರ್ಮಗಳು ಮತ್ತು ಪೃಥ್ವಿಕಾಯಾದಿ ಹತ್ತು ಜೀವಗಳ [೬ ಸ್ಥಾವರ, ೪ ತ್ರಸ] ಜೀವಹಿಂಸಾತ್ಯಾಗ (ಸಂಯಮ) ಇವುಗಳನ್ನು ಪರಸ್ಪರದಲ್ಲಿ ಗುಣಿಸಿದರೆ ಶೀಲದ ಹದಿನೆಂಟುಸಾವಿರ ಭೇದಗಳಾಗುತ್ತವೆ. (೩ X ೩ X ೪ X ೫ X ೧೦ X ೧೦ = ೧೮೦೦೦)]

ಎಂಬತ್ತನಾಲ್ಕುಲಕ್ಷ (೮೪೦೦೦೦೦)–ಗುಣಗಳು (ಸಾಧುಗಳ ಉತ್ತರಗುಣಂಗಳು)

ಎಂಬತ್ತನಾಲ್ಕುಲಕ್ಷ ಗುಣಗಳು: (ಪದ್ಯ/ವಚನ ಸಂ. ೬–೨೮ (ವ), ೬–೨೯ (ವ))
(ಮೂಲಾಚಾರ, ಶೀಲಗುಣಾಧಿಕಾರ, ೧೦೨೫) (ಅಷ್ಟಪಾಹುಡ, ಭಾವಪಾಹುಡ, ೧೨೦)

೧. ಹಿಂಸಾದಿ ಇಪ್ಪತ್ತೊಂದು ದೋಷಗಳು:

(೧) ಹಿಂಸೆ
(೨) ಅಸತ್ಯ
(೩) ಕಳವು
(೪) ಕುಶೀಲ
(೫) ಪರಿಗ್ರಹ
(೬) ಕ್ರೋಧ
(೭) ಮಾನ
(೮) ಮಾಯಾ
(೯) ಲೋಭ
(೧೦) ಭಯ
(೧೧) ಅರತಿ
(೧೨) ರತಿ
(೧೩) ಜುಗುಪ್ಸೆ
(೧೪) ಮನೋಮಂಗುಲ
(೧೫) ವಚನಮಂಗುಲ
(೧೬) ಕಾಯಮಂಗುಲ
(೧೭) ಮಿಥ್ಯಾದರ್ಶನ
(೧೮) ಪ್ರಮಾದ
(೧೯) ಪಿಶುನತಾ
(೨೦) ಅಜ್ಞಾನ
(೨೧) ಇಂದ್ರಿಯ ಅನಿಗ್ರಹ

೨. ವ್ರತಪಾಲನೆಯಲ್ಲಾಗುವ ಅತಿಕ್ರಮಾದಿ ನಾಲ್ಕು ದೋಷಗಳು:

(೧) ಅತಿಕ್ರಮ
(೨) ವ್ಯತಿಕ್ರಮ
(೩) ಅತಿಚಾರ
(೪) ಅನಾಚಾರ

೩. ಕಾಯದ (ಜೀವಸಮಾಸದ) ನೂರು ಭೇದಗಳು:

(೧) ಪೃಥ್ವೀಕಾಯಿಕ
(೨) ಜಲಕಾಯಿಕ
(೩) ಅಗ್ನಿಕಾಯಿಕ
(೪) ವಾಯುಕಾಯಿಕ
(೫) ಪ್ರತ್ಯೇಕವನಸ್ಪತಿಕಾಯಿಕ
(೬) ಅನಂತಕಾಯಿಕ
(೭) ದ್ವೀಂದ್ರಿಯ
(೮) ತ್ರೀಂದ್ರಿಯ
(೯) ಚತುರಿಂದ್ರಿಯ
(೧೦) ಪಂಚೇಂದ್ರಿಯ

[ಈ ಹತ್ತನ್ನು ಇದೇ ಹತ್ತರಿಂದ ಗುಣಕಾರಮಾಡುವುದರಿಂದ ನೂರು ಜೀವಸಮಾಸ ಆಗುತ್ತದೆ.]

೪. ಅಬ್ರಹ್ಮಕ್ಕೆ ಕಾರಣವಾದ ಹತ್ತು ಶೀಲದ ವಿರಾಧನೆಗಳು:

(೧) ಸ್ತ್ರೀಸಂಸರ್ಗ
(೨) ಪ್ರಣೀತರಸ ಭೋಜನ
(೩) ಗಂಧಮಾಲೆಯ ಗ್ರಹಣ
(೪) ಕೋಮಲ ಶಯನಾಸನ
(೫) ಭೂಷಣ
(೬) ಗೀತವಾದಿತ್ರ ಶ್ರಮಣ
(೭) ಅರ್ಥಪರಿಗ್ರಹ
(೮) ಕುಶೀಲಸಂಸರ್ಗ
(೯) ರಾಜಸೇವಾ
(೧೦) ರಾತ್ರಿಯಲ್ಲಿ ಸಂಚರಣ

೫. ಆಲೋಚನೆಯ ಹತ್ತು ದೋಷಗಳು:

(೧) ಆಕಂಪಿತ
(೨) ಅನುಮಾನಿತ
(೩) ದುಷ್ಟ
(೪) ಬಾದರ
(೫) ಛನ್ನ
(೬) ಸೂಕ್ಷ್ಮ
(೭) ಶಬ್ದಾಕುಲಿತ
(೮) ಬಹುಜನ
(೯) ಅವ್ಯಕ್ತ
(೧೦) ತತ್ಸೇವಿ

೬. ಶುದ್ಧಿಯ (ಪ್ರಾಯಶ್ಚಿತ್ತದ) ಹತ್ತು ಭೇದಗಳು:

(೧) ಆಲೋಚನಾ
(೨) ಪ್ರತಿಕ್ರಮಣ
(೩) ಉಭಯ
(೪) ವಿವೇಕ
(೫) ವ್ಯುತ್ಸರ್ಗ

(೬) ತಪ
(೭) ಛೇದ
(೮) ಮೂಲ
(೯) ಪರಿಹಾರ
(೧೦) ಶ್ರದ್ಧಾನ

ಈ ಮೇಲೆ ಹೇಳಿರುವ, ಹಿಂಸಾದಿ, ಅತಿಕ್ರಮ, ಕಾಯ, ವಿರಾಧನಾ, ಆಲೋಚನಾ ಮತ್ತು ಶುದ್ಧಿ ಇವು ಕ್ರಮದಿಂದ ೨೧, ೪, ೧೦೦, ೧೦, ೧೦ ಮತ್ತು ೧೦ ಆಗುತ್ತವೆ. ಇವುಗಳ ಪರಸ್ಪರ ಗುಣಿಸುವಿಕೆಯಿಂದ ೮೪೦೦೦೦೦ ಗುಣಗಳ ಭೇದಗಳು ಉಂಟಾಗುತ್ತವೆ. (೨೧ X ೪ X ೧೦೦ X ೧೦ X ೧೦ X ೧೦ = ೮೪೦೦೦೦೦)]

ಪಂಪಕವಿ ವಿರಚಿತಂ ಆದಿಪುರಾಣಂ ಪ್ರಥಮಾಶ್ವಾಸದ ಪದ್ಯಗಳ ಅನುಕ್ರಮಣಿಕೆ

ವ

ಶ

ಸ

ಹ

ಪಂಪಕವಿ ವಿರಚಿತಂ ಆದಿಪುರಾಣಂ ಪ್ರಥಮಾಶ್ವಾಸದ ಪದಸೂಚಿ

ಪದಗಳ ಆಕಾರಾದಿ ಆಶ್ವಾಸ ಸಂ.–ಪದ್ಯ/ವಚನ ಸಂ.

ಅ

ಅಂಕಿತ (ವ್ಯಂಜನಾಂಕಿತ) ೧–೪೯ (ವ)
ಅಂಗ ೧–೧೦, ೧–೬೨, ೧–೬೩
ಅಂಗಂ ೧–೪೩
ಅಂಚಿರಂ ೧–೬೬
ಅಂತಕಂ ೧–೭೯
ಅಂತರಾಂತರ ೧–೪೯ (ವ)
ಅಂತಸ್ಸ್ಥ ೧–೪೩
ಅಂತು (ಅಂತಿಂತುಂತು) ೧–೨೫, ೧–೩೭, ೧–೪೪,
೧–೬೨ (ವ), ೧–೬೯, ೧–೭೫ (ವ), ೧–೭೬ (ವ),
೧–೭೯ (ವ), ೧–೮೦ (ವ)
ಅಂತೆ ೧–೭೭
ಅಂದಂ ೧–೮೨
ಅಂದು ೧–೭೯
ಅಂಬರಚರಶ್ರೀಯಂ ೧–೬೯
ಅಂಬರಚರ ೧–೭೨, ೧–೭೪
ಅಂಬರಚರಶ್ರೀಯನಿತ್ತು ೧–೮೦ (ವ)
ಅಂಭೋರುಹ ೧–೬೭
ಅಂಭೋಜಂಗಳೊಳ್ (ನವಾಂಭೋಜಂಗಳೊಳ್) ೧–೮೪
ಅಕಳಂಕದೇವ ೧–೧೬
ಅಕೃತ್ರಿಮಂ ೧–೪೪
ಅಕ್ಕುಂ ೧–೪೨ (ವ), ೧–೮೧
ಅಕ್ಕುಮೇ ೧–೭೨, ೧–೮೧
ಅಕ್ಕೆ ೧–೧೦
ಅಕ್ಷಸೂತ್ರ ೧–೮
ಅಖಿಳ ೧–೭೧ (ವ)
ಅಗಾಧಬೋಧನಿಳಯಂ ೧–೧
ಅಗುಂದಲೆಯಾಗಿ ೧–೫೦
ಅಗುರ್ವು ೧–೭
ಅಗ್ಗಲದ ೧–೭೨
ಅಗ್ಗಳಂ ೧–೫೫
ಅಗ್ಗಳಿಸಿ ೧–೬೮
ಅಗ್ಗಳಿಕೆಯಿಂ ೧–೪೮
ಅಗ್ರೇಸರಂ ೧–೧
ಅಚ್ಚೋದಕ ೧–೫೮
ಅಚ್ಚ ೧–೮೩
ಅಚ್ಚಾಚ್ಚ ೧–೬೪
ಅಣುಗಿಂದಂ ೧–೩೪
ಅಣ್ಮೆ ೧–೮೧
ಅತಿ ೧–೨, ೧–೧೦, ೧–೨೬, ೧–೨೭, ೧–೨೮, ೧–೪೦,
೧–೮೧
ಅತಿಚತುರ ೧–೨೪
ಅತಿಬಳನೆಂಬಂ/ಅತಿಬಳಂ/ಗೆ ೧–೭೧ (ವ), ೧–೭೮, ೧–೮೦,
೧–೮೧
ಅತಿರಕ್ತಕಂಬಳ ೧–೪೯ (ವ)
ಅತಿವೃತ್ತದೆ ೧–೪೯
ಅತ್ತಂ ೧–೬೧
ಅತ್ಯಾಶ್ಚರ್ಯಂ ೧–೪೮
ಅತ್ಯುತ್ತಮ ೧–೫೩
ಅದಂ ೧–೨೭
ಅದರ್ಕೆ ೧–೯
ಅದರಿಂದಂ ೧–೨೭
ಅದರೊಳ್ ೧–೩೯
ಅದಱೊಳ್ ೧–೫೯
ಅದು ೧–೯, ೧–೧೯, ೧–೨೧, ೧–೨೩, ೧–೪೩, ೧–೪೪,
೧–೪೬, ೧–೪೭, ೧–೫೫
ಅದುವೆ ೧–೯, ೧–೭೯ (ವ)
ಅದು ೧–೨೩
ಅದನ್ ೧–೨೫, ೧–೭೧ (ವ)
ಅದುವುಂ ೧–೪೮
ಅದೆಂತುಟು ೧–೪೩
ಅದೇಂ ೧–೮೨
ಅಧಸ್ ೧–೪೬
ಅಧಸ್ಸ್ಥಳ ೧–೪೮ (ವ), ೧–೫೦
ಅಧಿಗತ ೧–೭೩ (ವ)
ಅಧೋ ೧–೬೨ (ವ)
ಅಧೋಲೋಕಂ ೧–೫೦
ಅಧ್ಯಾಸಿತಮುಂ ೧–೪೯ (ವ)
ಅನಂತರ್ ೧–೨
ಅನಂತಮಪ್ಪ ೧–೪೩
ಅನಳ ೧–೪
ಅನಾದ್ಯನಿಧನ ೧–೪೪
ಅನಿತೆ>ಅನಿತು>ಅನಿತ್ತು>ಅಷ್ಟೇ ೧–೪೮ (ವ)
ಅನಿಳಂ ೧–೬೨
ಅನುಕರಿಸಿ ೧–೬೨ (ವ)
ಅನುಕರಿಸುವ ೧–೭೯ (ವ)
ಅನುಕ್ರಮದೊಳ್ ೧–೪೭
ಅನುಗ್ರಹಂಗೆಯ್ಗೆ ೧–೧೪
ಅನುಭವಿಸಿ ೧–೮೧ (ವ)
ಅನುಯೋಗ ೧–೧೦, ೧–೩೯
ಅನುರೂಪ ೧–೭೦ (ವ)
ಅನುವದಿಪುದು ೧–೧೪
ಅನೇಕ ೧–೧೦, ೧–೪೩, ೧–೪೯ (ವ), ೧–೬೨ (ವ),
೧–೭೦ (ವ), ೧–೭೧ (ವ)
ಅನೇಕಾರ್ಥ ೧–೮೧ (ವ)
ಅನೇಡಮೂಕನ್ ೧–೨೦
ಅನ್ಯ ೧–೫೧
ಅನ್ವಯ ೧–೧೪
ಅನ್ವರ್ಥತೆಯಂ ೧–೫೩
ಅನ್ವಿತ ೧–೨೬

ಈ

ಉ

ಓ

ಕ

ಝ

ತ

ದ

ಧ

ನ

ಪ

ಪ

ಫ

ಬ

ಯ

ರ

ಲ

ಲ

ವ

ಹ

ಗ್ರಂಥ ಋಣ

ಪಂಪಮಹಾಕವಿ ವಿರಚಿತ ಆದಿಪುರಾಣದ ಪ್ರತಿಗಳು:

೧. **ಪಂಪಕವಿ ವಿರಚಿತಂ ಆದಿಪುರಾಣಂ**–ಸಂಪಾದಕರು ಎಸ್.ಜಿ. ನರಸಿಂಹಾಚಾರ್ (೧೯೦೦) [ಅಂತರ್ಜಾಲದಲ್ಲಿ ದೊರಕಿದ ಪಿಡಿಎಫ್ ಪ್ರತಿ]

೨. **ಪಂಪಕವಿ ವಿರಚಿತಂ ಆದಿಪುರಾಣಂ**–ಸಂಪಾದಕರು ಕೆ.ಜಿ. ಕುಂದಣಗಾರ ಮತ್ತು ಎ.ಪಿ. ಚೌಗಲೆ (೧೯೫೩) [ಅಂತರ್ಜಾಲದಲ್ಲಿ ದೊರಕಿದ ಪಿಡಿಎಫ್ ಪ್ರತಿ]

೩. **ಪಂಪನ ಆದಿಪುರಾಣ**–ಸಂಪಾದಕರು ಎಲ್. ಬಸವರಾಜು (೨೦೦೭)

೪. **ಪಂಪಮಹಾಕವಿ ವಿರಚಿತ ಆದಿಪುರಾಣಂ**–ಗದ್ಯಾನುವಾದ: ಕೆ.ಎಲ್. ನರಸಿಂಹಶಾಸ್ತ್ರಿ (೨೦೧೯)

೫. **ಆದಿಪುರಾಣ ದೀಪಿಕೆ**–ಲೇಖಕರು ತ.ಸು. ಶಾಮರಾಯ ಮತ್ತು ಪ. ನಾಗರಾಜಯ್ಯ

೬. **ಆದಿಪುರಾಣ**–ಲೇಖಕರು ಪಿ.ವಿ. ನಾರಾಯಣ

೭. **ಆದಿಪುರಾಣಂ (ಪಂಪ ಸಂಪುಟ)**–ಸಂಪಾದಕರು ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ

೮. **ಪಂಪನ ಸರಳ ಆದಿಪುರಾಣ**–ಲೇಖಕರು ಎಲ್. ಬಸವರಾಜು (ಪಿಡಿಎಫ್ ಪ್ರತಿ)

ಜೈನಾಗಮ ಗ್ರಂಥಗಳು:

೧. **ಶ್ರೀ ಭಗವಜ್ಜಿನಸೇನಾಚಾರ್ಯ–ಗುಣಭದ್ರಾಚಾರ್ಯ ವಿರಚಿತ ಮಹಾಪುರಾಣ (ಪೂರ್ವಪುರಾಣ)**–ಸಂಪಾದಕರು ಮತ್ತು ಅನುವಾದಕರು ಎರ್ತೂರು ಶಾಂತಿರಾಜಶಾಸ್ತ್ರಿಗಳವರು

೨. **ಶ್ರೀಮದ್ ಭಗವತ್ ಪುಷ್ಪದಂತ ಭೂತಬಲಿ ಆಚಾರ್ಯ ವಿರಚಿತಃ ಷಟ್ ಖಂಡಾಗಮಃ ಪ್ರಥಮ ಖಂಡೇ ಜೀವಸ್ಥಾನೇ ಸತ್ಪ್ರರೂಪಣಾ ೧**–ಅನುವಾದಕರು: ಸುಬ್ಬಯ್ಯ (ಸುವ್ರತ) ಶಾಸ್ತ್ರೀ (೧೯೬೭)

೩. **ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ವಿರಚಿತ ಅಷ್ಟಪಾಹುಡ**–ಕನ್ನಡ ಅನುವಾದಕರು: ಎಂ.ಬಿ. ಪಾಟೀಲ, ಸೇಡಬಾಳ

೪. **ಶ್ರೀ ಕುಂದಕುಂದ ಪೂಜ್ಯಪಾದ ಕೃತ ದಶಭಕ್ತಿಃ**–ಲೇಖಕರು ಎರ್ತೂರು ಶಾಂತಿರಾಜ ಶಾಸ್ತ್ರಿ

೫. **ಯತಿವೃಷಭ ಆಚಾರ್ಯ ವಿರಚಿತ ತಿಲೋಯಪಣ್ಣತ್ತೀ (ಎರಡು ಸಂಪುಟಗಳು)**–ಮೂಲ ಸಂಪಾದಕರು ಚೇತನ್ ಪ್ರಕಾಶ್ ಪಾಟನಿ, ಹಿಂದೀ ಟೀಕೆ–ಆರ್ಯಿಕಾ ೧೦೫ ಶ್ರೀವಿಶುದ್ಧಮತಿ ಮಾತಾಜಿ, ಕನ್ನಡ ಅನುವಾದ: ಬಾಹುಬಲಿ ಭೋಸಗೆ ಶಾಸ್ತ್ರೀ

೬. **ದಿಗಂಬರ ಜೈನಾಚಾರ್ಯ ಗೃದ್ಧಪಿಚ್ಛ ಶ್ರೀಮದ್ ಉಮಾಸ್ವಾಮಿ ವಿರಚಿತ ಮೋಕ್ಷಶಾಸ್ತ್ರ (ತತ್ತ್ವಾರ್ಥ ಸೂತ್ರ)**–ಭಾವಾನುವಾದ: ಮುನಿಶ್ರೀ ೧೦೮ ಶಂಭವನಂದಿ ಮುನಿ ಮಹಾರಾಜರು

೭. **ಶ್ರೀ ಪೂಜ್ಯಪಾದಾಚಾರ್ಯ ವಿರಚಿತ ಸರ್ವಾರ್ಥಸಿದ್ಧಿಃ**–ಸಂಪಾದಕರು ಡಿ. ಪದ್ಮನಾಭಶರ್ಮ, ಭುವನಹಳ್ಳಿ

೮. **ಶ್ರೀ ಪೂಜ್ಯಪಾದಾಚಾರ್ಯ ವಿರಚಿತ ಸರ್ವಾರ್ಥಸಿದ್ಧಿಃ**–ಸಂಪಾದಕರು ಹಿಂದೀ ಮೂಲ ಪಂ. ಫೂಲಚಂದ್ರ ಶಾಸ್ತ್ರಿ, ಕನ್ನಡ ಅನುವಾದ: ಧವಲಶ್ರೀ ಅಣ್ಣಾಸಾಹೇಬ ಪಾಟೀಲ

೯. **ಸಮಂತಭದ್ರ ವಿರಚಿತ ರತ್ನಕರಂಡಕ ಶ್ರಾವಕಾಚಾರ**–ಹಿಂದೀ ಮೂಲ ಪಂ. ಸದಾಸುಖಜೀ, ಕನ್ನಡ ಅನುವಾದಕರು: ಅಣ್ಣಾರಾಯ ಅಪ್ಪಣ್ಣ ಮಿರ್ಜಿ, ಸೇಡಬಾಳ

೧೦. **ಶ್ರೀಮದ್ ನೇಮಿಚಂದ್ರಸಿದ್ಧಾಂತ ಚಕ್ರವರ್ತಿ ವಿರಚಿತ ಬೃಹತ್ ದ್ರವ್ಯಸಂಗ್ರಹ**–ಅನುವಾದಕರು: ಶ್ರೀ ೧೦೮ ಚೇತನಸಾಗರ ಮುನಿ ಮಹಾರಾಜರು

೧೧. **ಶ್ರೀಮದ್ ನೇಮಿಚಂದ್ರಸಿದ್ಧಾಂತಿದೇವ ವಿರಚಿತ ಬೃಹದ್ದ್ರವ್ಯಸಂಗ್ರಹ**–ಗುಜರಾತಿ ಅನುವಾದ: ಬ್ರ. ಬೃಜಲಾಲ ಗಿರಿಧರಲಾಲ ಶಹ, ಕನ್ನಡ ಅನುವಾದ: ಎಂ.ಬಿ. ಪಾಟೀಲ, ಸೇಡಬಾಳ

೧೨. **ಶ್ರೀಮನ್ನೇಮಿಚಂದ್ರಾಚಾರ್ಯ ಸಿದ್ಧಾಂತ ಚಕ್ರವರ್ತಿ ವಿರಚಿತ ಗೊಮ್ಮಟಸಾರ (ಕರ್ಮಕಾಂಡ)**–ಆಂಗ್ಲ ಭಾಷಾನುವಾದ: ರಾಯ್ ಬಹದ್ದೂರ್ ಶ್ರೀ ಜೆ.ಎಲ್. ಜೈನಿ, ಕನ್ನಡ ಭಾವಾನುವಾದಕರು: ಟಿ.ಸಿ. ಬ್ರಹ್ಮಸೂರಯ್ಯ

೧೩. **ಶ್ರೀಮನ್ನೇಮಿಚಂದ್ರಾಚಾರ್ಯ ಸಿದ್ಧಾಂತ ಚಕ್ರವರ್ತಿ ವಿರಚಿತ ಗೊಮ್ಮಟಸಾರ (ಜೀವಕಾಂಡ)**–ಆಂಗ್ಲ ಭಾಷಾನುವಾದ: ರಾಯ್ ಬಹದ್ದೂರ್ ಶ್ರೀ ಜೆ.ಎಲ್. ಜೈನಿ, ಕನ್ನಡ ಭಾವಾನುವಾದಕರು: ಟಿ.ಸಿ. ಬ್ರಹ್ಮಸೂರಯ್ಯ

೧೪. **ಸಿರಿ ವಸುಣಂದಿ ಆಇರಿಯವಿರಿಯಂ ಉವಾಸಯಜ್ಝಯಣಂ (ವಸುನಂದಿ ಶ್ರಾವಕಾಚಾರ)**–ಹಿಂದೀ ಮೂಲ: ಪಂ. ಹೀರಾಲಾಲ್ ಜೈನ್, ಕನ್ನಡ ಅನುವಾದಕರು: ಪಂ. ಬಾಹುಬಲಿ ಭೋಸಗೆ ಶಾಸ್ತ್ರೀ

೧೫. **ಶ್ರೀ ಶಿವಕೋಟಿ ಆಚಾರ್ಯ ಕೃತ ಮೂಲಾರಾಧನಾ (ಭಗವತೀ ಆರಾಧನಾ)**–ಸಂಪಾದಕರು ಮತ್ತು ಅನುವಾದಕರು: ಸ್ವಸ್ತಿಶ್ರೀ ೧೦೮ ನಿಯಮ ಸಾಗರ ಮುನಿ ಮಹಾರಾಜರು

೧೬. **ಶ್ರೀ ಮಾಘಣಂದಿ ಕೃತ ಪದಾರ್ಥಸಾರ**–ಸಂಪಾದಕರು ಎಂ.ಸಿ. ಪದ್ಮನಾಭ ಶರ್ಮ
೧೭. **ಶ್ರೀ ಶುಭಚಂದ್ರಾಚಾರ್ಯ ವಿರಚಿತ ಶ್ರೀ ಜ್ಞಾನಾರ್ಣವ (ಯೋಗಪ್ರದೀಪಾಧಿಕಾರ)**–ಹಿಂದೀ ಮೂಲ: ಪಂ. ಜಯಚಂದ್ರ, ಕನ್ನಡ ಅನುವಾದಕರು: ಪಂ. ಬಾಹುಬಲಿ ಭೋಸಗೆ ಶಾಸ್ತ್ರೀ
೧೮. **ಶ್ರೀ ಅಮಿತಗತಿ ಆಚಾರ್ಯದೇವ ವಿರಚಿತ ಸಾಮಾಯಿಕ–ಪಾಠ**–ಸಂ. ರಾಮಜಿ ಮಾಣೇಕಚಂದ ದೋಸಿ, ಕನ್ನಡ ಅನುವಾದ: ಸೌ. ಧವಲಶ್ರೀ ಅಣ್ಣಾಸಾಹೇಬ ಪಾಟೀಲ
೧೯. **ತತ್ತ್ವಜ್ಞಾನ ದೀಪ (ತತ್ತ್ವಾರ್ಥ ಸೂತ್ರ)**–ಅನುವಾದ ಮತ್ತು ಸಂಪಾದಕರು ಬ್ರ॥ ಆದಿಸಾಗರವರ್ಣಿ
೨೦. **ತತ್ತ್ವಾರ್ಥಸೂತ್ರ ದೀಪಿಕೆ**–ಅನುವಾದ ಮತ್ತು ಸಂಪಾದಕರು ರತನಚಂದ. ನೇ. ಕೋಟಿ
೨೧. **ಆತ್ಮಸಿದ್ಧಿ ದೀಪಿಕಾ**–ಲೇಖಕರು ಶ್ರೀ ೧೦೮ ಶ್ರೀವಿಶ್ವನಂದಿ ಮುನಿ ಮಹಾರಾಜರು
೨೨. **ಜೈನಾಗಮ ಸಂಸ್ಕಾರ ಪ್ರಶ್ನೋತ್ತರ ಮಾಲಿಕಾ**–ಹಿಂದೀ ಮೂಲ ಮುನಿಶ್ರೀ ೧೦೮ ಆರ್ಜವಸಾಗರಜೀ ಮುನಿ ಮಹಾರಾಜ್, ಕನ್ನಡ ಅನುವಾದ: ಜೀವಂಧರ್ ಕುಮಾರ್ ಹೋತಪೇಟೆ
೨೩. **ಜೀವದ ೨೪ ಸ್ಥಾನಗಳು**–ಪ್ರಕಾಶಕರು ಶ್ರೀ ಶಾಂತಿನಾಥ ಸಮ್ಮೇದ ಶಿಖರ್ಜಿ ಯಾತ್ರಾ ಸಂಘ, ಬೆಂಗಳೂರು
೨೪. **ಜೈನಧರ್ಮ ಬೋಧೆ ಭಾಗ–೧ ಮತ್ತು ೨**–ಲೇಖಕರು ಡಿ. ಪದ್ಮನಾಭ ಶರ್ಮ ಭುವನಹಳ್ಳಿ
೨೫. **ಸಮ್ಯಗ್‌ಜ್ಞಾನ ಸಂಸ್ಕಾರ ಭಾಗ ೧**–ಪ್ರ. ಶ್ರೀ ೧೦೦೮ ಭ. ಶಾಂತಿನಾಥ ದಿಗಂಬರ ಜೈನ ಮಂದಿರ, ಸದಲಗಾ
೨೬. **ಧರ್ಮ ಪ್ರವೇಶಿಕಾ ಭಾಗ ೩**
೨೭. **ಜೈನ ತತ್ತ್ವವಿದ್ಯಾ**–ಹಿಂದೀ ಮೂಲ: ಮುನಿಶ್ರೀ ಪ್ರಮಾಣಸಾಗರ ಮುನಿ ಮಹಾರಾಜರು, ಕನ್ನಡ ಅನುವಾದ: ಶ್ರೀಮತಿ ಕೌಸಲ್ಯಾ ಧರಣೇಂದ್ರಯ್ಯ
೨೮. **ಜೈನಧರ್ಮ**–ಲೇಖಕರು: ಮಿರ್ಜಿ ಅಣ್ಣಾರಾಯ
೨೯. **(೧) ಶ್ರೀ ೧೦೮ ನಿಯಮಸಾಗರ ಮುನಿ ಮಹಾರಾಜರ ಪ್ರವಚನಗಳು, (೨) ಶ್ರೀ ಅಮೋಘಕೀರ್ತಿ ಮಹಾರಾಜರ ABCD of Jainism ಪ್ರವಚನಗಳು.**

ನಿಘಂಟುಗಳು ಮತ್ತು ಕೋಶಗಳು:

೧. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು (ಎಂಟು ಸಂಪುಟಗಳು)
೨. ಜೈನೇಂದ್ರ ಸಿದ್ಧಾಂತ ಕೋಶ (ನಾಲ್ಕು ಸಂಪುಟಗಳು)–(ಹಿಂದಿ ಮೂಲ ಪೂಜ್ಯ ಜಿನೇಂದ್ರ ವರ್ಣೀ) ಕನ್ನಡ ಅನುವಾದ ಮತ್ತು ಸಂಪಾದನೆ: ವಿದುಷಿ. ಕೌಸಲ್ಯ ಧರಣೇಂದ್ರಯ್ಯ ಮತ್ತು ಡಾ. ಸರಸ್ವತಿ ವಿಜಯಕುಮಾರ್
೩. ನಾಗವರ್ಮ ವಿರಚಿತಮಪ್ಪ ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ (ಸಂಸ್ಕೃತ ಮೂಲ ಭಟ್ಟ ಹಲಾಯುಧ)–ಸಂಪಾದಕರು ಎ. ವೆಂಕಟರಾವ್ ಮತ್ತು ಹೆಚ್. ಶೇಷಯ್ಯಂಗಾರ್
೪. ಪ್ರಾಕೃತ–ಕನ್ನಡ ಬೃಹತ್ ನಿಘಂಟು–ಕನ್ನಡಕ್ಕೆ ಅಳವಡಿಸಿದವರು: ಡಾ. ಆರ್. ಲಕ್ಷ್ಮೀನಾರಾಯಣ
೫. (ಅ) ಅಮರಸಿಂಹನ ಅಮರಕೋಶ ಎಂಬ ನಾಮಲಿಂಗಾನುಶಾಸನ–ಸಂಪಾದಕರು ಲೂಯಿ ರೈಸ್
೬. ಅಮರಸಿಂಹನ ನಾಮಲಿಂಗಾನುಶಾಸನ ಅಥವಾ ಅಮರಕೋಶ–ಸಂಪಾದಕರು ವಿದ್ವಾನ್ ಎನ್. ರಂಗನಾಥ ಶರ್ಮಾ (ಪಿ.ಡಿ.ಎಫ್. ಪ್ರತಿ)
೭. ಶ್ರೀವತ್ಸ ನಿಘಂಟು–ಲೇಖಕರು ಟಿ.ವಿ. ವೆಂಕಟಾಚಲ ಶಾಸ್ತ್ರೀ
೮. ಶಬ್ದಾರ್ಥ ಕೌಸ್ತುಭ, ಸಂಸ್ಕೃತ–ಕನ್ನಡ ಶಬ್ದಕೋಶ–ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ [ಅಂತರ್ಜಾಲದಲ್ಲಿ ದೊರಕಿದ ಪಿಡಿಎಫ್ ಪ್ರತಿ]

ವ್ಯಾಕರಣ ಮತ್ತು ಅಲಂಕಾರ ಗ್ರಂಥಗಳು:

೧. ಶ್ರೀ ವಿಜಯಕೃತ ಕವಿರಾಜಮಾರ್ಗಂ, ಸಂಪಾದಕ ಎಂ.ವಿ. ಸೀತಾರಾಮಯ್ಯ
೨. ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ–ಸಂ. (೧) ಡಾ. ಡಿ.ಎಲ್. ನರಸಿಂಹಾಚಾರ್; ಸಂ. (೨) ಕರ್ಣಾಟಕ ಸಾಹಿತ್ಯ ಪರಿಷತ್ತು (೧೯೨೦); ಸಂ. (೩) Kesiraja's Jewel Mirror of Grammar-F. Kittel; ಸಂ. (೩) ಲಿಂಗಣಾರಾಧ್ಯ ವೃತ್ತಿಸಹಿತಂ–ಸಂ. ಎ. ವೆಂಕಟರಾವ್ ಮತ್ತು ಪಂಡಿತ ಎಚ್. ಶೇಷ ಅಯ್ಯಂಗಾರ್
೩. ನಾಗವರ್ಮ ವಿರಚಿತಂ ಕಾವ್ಯಾವಲೋಕನಂ–ಸಂ. ಹೆಚ್.ಆರ್. ರಂಗಸ್ವಾಮಿ ಅಯ್ಯಂಗಾರ್
೪. ಕನ್ನಡ ಕೈಪಿಡಿ (ಪರಿಷ್ಕೃತ ಆವೃತ್ತಿ), ಪ್ರಕಾಶಕರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ (ಮುದ್ರಣ ೨೦೧೬)

ಪಂಪನ ಕುರಿತು ವಿದ್ವಾಂಸರುಗಳಿಂದ ರಚಿತವಾದ ಇತರೆ ಗ್ರಂಥಗಳು:

೧. ಶ್ರೀಕವಿ ಪಂಪ [ಕವಿ, ಕಾವ್ಯಗಳ ಪರಿಚಯ]–ಜಿ.ಪಿ. ರಾಜರತ್ನಂ
೨. ಪಂಪ–ತಿ.ನಂ. ಶ್ರೀಕಂಠಯ್ಯ
೩. ನಾಡೋಜ ಪಂಪ–ಮುಳಿಯ ತಿಮ್ಮಪ್ಪಯ್ಯ, ಪ್ರಕಟಣೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಮುದ್ರಣ ೨೦೦೬.

ಇತರೆ ಶಾಸ್ತ್ರ ಗ್ರಂಥಗಳು ಮತ್ತು ಬಿಡಿ ಲೇಖನಗಳು:

೧. ಕನ್ನಡ ಗ್ರಂಥಸಂಪಾದನೆ–ಡಾ. ಡಿ.ಎಲ್. ನರಸಿಂಹಾಚಾರ್, (ಐದನೆಯ ಮುದ್ರಣ: ೨೦೧೫)
೨. ಪಂಪ ಭಾರತ ದೀಪಿಕೆ–ಡಾ. ಡಿ.ಎಲ್. ನರಸಿಂಹಾಚಾರ್, ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮುದ್ರಣ ೧೯೭೬.
೩. ಕೌಟಿಲೀಯಂ ಅರ್ಥಶಾಸ್ತ್ರಮ್, ಸಂಪಾದಕರು: ಡಾ. ಆರ್. ಶಾಮಾ ಶಾಸ್ತ್ರೀ
೪. Kautilya's Arthashastra, Translated into English by R. Shamasastry
೫. The Kautilya Arthashastra, By J. Jolly
೬. Arthasastra of Kautilya, Commentary by G. Ganapathi Sastri
೭. ಕೌಟಿಲೀಯ ಅರ್ಥಶಾಸ್ತ್ರ, ಕನ್ನಡ ಅನುವಾದ: ಶ್ರೀ ಕೊಡಲೀ–ಶೃಂಗೇರಿ ಜಗದ್ಗುರು ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳು
೮. ಮನುಸ್ಮೃತಿ
೯. ಪಿಪ್ಪಲಾದನ ಗರ್ಭೋಪನಿಷತ್
೧೦. ವ್ಯವಹಾರಗಣಿತಂ–ರಾಜಾದಿತ್ಯ ವಿರಚಿತಂ, ಸಂಪಾದಕರು: ಎಂ. ಮರಿಯಪ್ಪ ಭಟ್
೧೧. ಭರತಮುನಿ ವಿರಚಿತ ನಾಟ್ಯಶಾಸ್ತ್ರ, ಕನ್ನಡ ಅನುವಾದ: ಆದ್ಯ ರಂಗಾಚಾರ್ಯ
೧೨. ಶ್ರೀ ಭರತಮುನಿ ಪ್ರಣೀತಂ ಸಚಿತ್ರಂ ನಾಟ್ಯಶಾಸ್ತ್ರಮ್, ಸಂಪಾದಕರು: ಶ್ರೀ ಬಾಬೂಲಾಲ್ ಶುಕ್ಲ, ಶಾಸ್ತ್ರೀ
೧೩. ಭರತಮುನಿ ವಿರಚಿತ ನಾಟ್ಯಶಾಸ್ತ್ರ–ಕನ್ನಡ ಅನುವಾದ ಆದ್ಯ ರಂಗಾಚಾರ್ಯ
೧೪. ಭರತಮುನಿ ವಿರಚಿತಂ ನಾಟ್ಯಶಾಸ್ತ್ರಮ್ ಅಭಿನವಗುಪ್ತಪರಣೀತಾಭಿನವಭಾರತೀಸಹಿತಮ್ ತಸ್ಯ ಪ್ರಥಮೋ ಭಾಗಃ–ಮಧುಸೂದನ ಶಾಸ್ತ್ರಿ (ಸಂಸ್ಕೃತ)
೧೫. ಭರತನಾಟ್ಯ ದಿಗ್ದರ್ಶನ–ಲೇಖಕರು: ವಿ.ಎಸ್. ಕೌಶಿಕ್
೧೬. ಸಂಸ್ಕೃತ ನಾಟಕ–ಲೇಖಕರು: ಎ.ಆರ್. ಕೃಷ್ಣಶಾಸ್ತ್ರೀ
೧೭. Manasara Silpasastra, Edited by: Prasanna Kumar Acharya, I.E.S.
೧೮. ಕನ್ನಡ ವಿಕಿಪೀಡಿಯ, ಇತ್ಯಾದಿ ಅಂತರ್ಜಾಲ ತಾಣಗಳು.
೧೯. ಪ್ರಬುದ್ಧ ಕರ್ನಾಟಕ, ಲೋಚನ, ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಇತ್ಯಾದಿಗಳಲ್ಲಿ ಪ್ರಕಟವಾಗಿರುವ ಲೇಖನಗಳು.
೨೦. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:೫, ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ–೨, ಸಂಪಾದಕರು: ಡಾ. ಕೆ.ಆರ್. ಗಣೇಶ ಮತ್ತು ಡಾ. ಆರ್. ಶೇಷಶಾಸ್ತ್ರಿ. ಪ್ರಕಾಶಕರು: ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

******